
ಕರ್ನಾಟಕ ಸರ್ಕಾರ

ಪುರಾತತ್ತ್ವ ಪಿತಾಮಹ
ಬಿ.ಎಲ್.ರೈಸ್
ಜೀವನ-ಸಾಧನೆ



ಡಾ|| ಎಸ್. ಎಲ್. ಶ್ರೀನಿವಾಸ ಮೂರ್ತಿ

ಕನ್ನಡ ಪುಸ್ತಕ ಪ್ರಾಧಿಕಾರ

ಪುರಾತತ್ತ್ವ ಪಿತಾಮಹ

ಬಿ.ಎಲ್.ರೈಸ್ ಜೀವನ-ಸಾಧನೆ

ಡಾ|| ಎಸ್.ಎಲ್. ಶ್ರೀನಿವಾಸ ಮೂರ್ತಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

Puraatathva Pitamaha B.L. Rice:
Life & Achievements of Benjamin Lewis Rice by Dr. S.L. Srinivasa Murthy, Published by B.H. Mallikarjuna, Administrative Officer, Kannada Pustaka Pradhikara, Kannada Bhavana, J.C. Road, Bangalore-560 002

First Impression : 2011

Pages: 388

Copies : 1000

Price : 150/-

ಮೊದಲನೆಯ ಮುದ್ರಣ : ೨೦೧೧

ಪುಟಗಳು: ೩೮೮

ಪ್ರತಿಗಳು: ೧೦೦೦

ಬೆಲೆ : ೧೫೦/–

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು

ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು–೫೬೦ ೦೦೨

ಮುದ್ರಕರು

ಶ್ರೀ ಸಿದ್ಧಲಿಂಗೇಶ್ವರ ಗ್ರಾಫಿಕ್ಸ್

ನಂ. ೯೧೪/೧/೨, ೪ನೇ ಕ್ರಾಸ್, ೧೩ನೇ ಎ ಮುಖ್ಯರಸ್ತೆ

ಗಣೇಶ ದೇವಸ್ಥಾನದ ಹತ್ತಿರ, ಮಾರುತಿ ವೃತ್ತ

ಹನುಮಂತನಗರ, ಬೆಂಗಳೂರು–೫೬೦ ೦೧೯

.ದೂ: ೦೮೦–೨೬೬೨೨೩೧೭/೧೮/೧೯/೨೦

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿಯೇ ಸ್ಥಾಪಿತವಾದ ಸರ್ಕಾರದ ಅಂಗಸಂಸ್ಥೆಯಾಗಿದೆ. ಕನ್ನಡದ ಅಪರೂಪದ, ಮೌಲಿಕ, ಗಂಭೀರ ಸ್ವರೂಪದ ಪುಸ್ತಕಗಳನ್ನು ಪ್ರಕಟಿಸುವುದು ಪ್ರಾಧಿಕಾರದ ಹಲವು ಯೋಜನೆಗಳಲ್ಲಿ ಒಂದಾಗಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯದ ಪ್ರಕಟಣಾ ಕಾರ್ಯವನ್ನು ಕೈಗೆತ್ತಿಕೊಳ್ಳುವುದಾದರೂ ವಿಶೇಷವಾಗಿ ಜನಪ್ರಿಯ ಸಾಹಿತ್ಯ ಪ್ರಕಾರಕ್ಕೆ ಸೇರದ ಕೃತಿಗಳನ್ನೇ ಅಂದರೆ, ಶಾಸ್ತ್ರ, ವಿಜ್ಞಾನ, ಜೀವನ ಚರಿತ್ರೆ, ಸಾಮಾಜಿಕ ಅಧ್ಯಯನ ಮುಂತಾದ ಪ್ರಕಾರಗಳಿಗೆ ಸೇರಿದ ಕೃತಿಗಳನ್ನೇ ಪ್ರಕಟಿಸುತ್ತಾ ಬಂದಿದೆ.

ಯುವ ಸಂಶೋಧಕ ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ಅವರ ಮಹಾಪ್ರಬಂಧ 'ಪುರಾತತ್ತ್ವ ಪಿತಾಮಹ' ಬಿ.ಎಲ್.ರೈಸ್. ಜೀವನ-ಸಾಧನೆ' ಒಂದು ಅಪೂರ್ವ ಕೃತಿಯಾಗಿದೆ. ಕನ್ನಡ ನಾಡಿನ ಶಾಸನ ಕ್ಷೇತ್ರದ ಪಿತಾಮಹರೆಂದೇ ಪ್ರಸಿದ್ಧರಾದ ಬಿ.ಎಲ್.ರೈಸ್‌ರವರು ಕನ್ನಡಿಗರಿಗೆ ಪ್ರಾತಃಸ್ಮರಣೀಯರಾಗಿದ್ದಾರೆ. ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಬಿ.ಎಲ್.ರೈಸ್‌ರವರು ನೀಡಿರುವ ಕೊಡುಗೆಯನ್ನು ಲೇಖಕರು ಬಹಳ ಗಂಭೀರವಾಗಿ ಚರ್ಚಿಸಿದ್ದಾರೆ. ಅವರ ಜೀವನದ ಮೇಲ್ಪದರಗಳನ್ನಷ್ಟೇ ಚಿತ್ರಿಸದೆ, ಪ್ರಕಟಿತ ಅಪ್ರಕಟಿತ ದಾಖಲೆಗಳನ್ನು ಸಂಗ್ರಹಿಸಿ ತಮ್ಮ ಕೃತಿಯಲ್ಲಿ ಸಮರ್ಥವಾಗಿ ಬಳಸಿಕೊಂಡಿರುವುದು ಅಭಿನಂದನಾರ್ಹ. ಈ ಕೃತಿಯನ್ನು ರಚಿಸುವ ಸಂದರ್ಭದಲ್ಲಿ ಬಹಳ ಕಷ್ಟಪಟ್ಟು ಅಪ್ರಕಟಿತ ಮೂಲ ಆಕರಗಳನ್ನು ಪರಿಶೀಲಿಸಿದ್ದಾರೆ. ಇಂಗ್ಲೆಂಡ್‌ಗೆ ಹೋಗಿ ರೈಸ್‌ರವರ ವಂಶಜರನ್ನು ಭೇಟಿಯಾಗಿ ಅವರಿಂದ ಅನೇಕ ಮಾಹಿತಿ, ಫೋಟೋಗಳನ್ನು ಪಡೆದುಕೊಂಡು ಸಮರ್ಥವಾಗಿ ಬಳಸಿರುವುದು ಕೃತಿಯ ಅಧಿಕೃತತೆಯನ್ನು ಹೆಚ್ಚು ಮಾಡಿದೆ.

ಕನ್ನಡದ ಅರುಣೋದಯ ಕಾಲದಲ್ಲಿ ಅನೇಕ ವಿದೇಶಿ ಮಹನಿಯರು ಕನ್ನಡಕ್ಕಾಗಿ ತಮ್ಮ ಸರ್ವಸ್ವವನ್ನು ಧಾರೆಯೆರೆದಿದ್ದಾರೆ. ಇಂತಹ ಮಹನಿಯರುಗಳ ಜೀವನ-ಸಾಧನೆ ಪ್ರತಿಯೊಬ್ಬ ಕನ್ನಡಿಗನಿಗೂ ತಲುಪಬೇಕಾಗಿದೆ. ಈ ನಿಟ್ಟಿನಲ್ಲಿ

ಪ್ರಾಧಿಕಾರ ಪ್ರಕಟಿಸುತ್ತಿರುವ ಈ ಕೃತಿ ಒಂದು ಮೈಲಿಗಲ್ಲು ಎಂದೇ ಭಾವಿಸಬಹುದಾಗಿದೆ. ಪ್ರಾಧಿಕಾರ ಇಂತಹ ಅಮೂಲ್ಯ ಕೃತಿಯನ್ನು ಪ್ರಕಟಿಸಲು ಸಮ್ಮತಿ ನೀಡಿದ ಲೇಖಕ ಡಾ. ಎಸ್.ಎಲ್. ಶ್ರೀನಿವಾಸಮೂರ್ತಿಯವರಿಗೆ ಕೃತಜ್ಞತೆಗಳು.

ಈ ಕೃತಿಯ ಪ್ರಕಟಣೆಯಲ್ಲಿ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ, ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಕನ್ನಡ ವಾಚಕ ಲೋಕ ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತದೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಕೃತಜ್ಞತೆ

ಖ್ಯಾತ ಶಾಸನತಜ್ಞರಾದ ಬೆಂಜಮಿನ್ ಲೂಯಿ ರೈಸರನ್ನು ಕುರಿತಾದ ಅಧ್ಯಯನವನ್ನು ಕೈಗೊಳ್ಳುವ ಅವಕಾಶ ದೊರೆತದ್ದು ನನ್ನ ಬಾಳಿನ ದೊಡ್ಡ ಭಾಗ್ಯಗಳಲ್ಲಿ ಒಂದು. ಸುಮಾರು ಹತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ರೈಸರ ನಾಮದಬಲ ನನಗೆ ವಿಶ್ವದಾದ್ಯಂತ ನೂರಾರು ಹಿತೈಷಿಗಳನ್ನು ಸಂಪಾದಿಸಿ ಕೊಟ್ಟಿದೆ, ವಿದ್ವದ್ವಲಯದಲ್ಲಿ ಮಾನ–ಮಾನ್ಯತೆಯನ್ನು ದೊರಕಿಸಿದೆ. ಕನಸು–ಮನಸಿನಲ್ಲಿಯೂ ಎಣಿಸಿರದಿದ್ದ ವಿದೇಶ ಅಧ್ಯಯನಕ್ಕೆ ಎಡೆಮಾಡಿಕೊಟ್ಟಿದೆ. ಎಲ್ಲಕ್ಕಿಂತ ಹೆಚ್ಚಾಗಿ ಸಾರ್ಥಕ್ಯದ ಭಾವವನ್ನು ನನ್ನಲ್ಲಿ ಮೂಡಿಸಿದೆ. ಹಾಗಾಗಿ ಆ ಮಹಾಪುರುಷರಿಗೆ ನನ್ನ ಮೊದಲ ನಮನ. ಪ್ರಸ್ತುತ ಕೃತಿ ಪಿ.ಎಚ್.ಡಿ. ಪದವಿಗಾಗಿ ನಾನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾ ಪ್ರಬಂಧದ ಸಂಪೂರ್ಣ ಪರಿಷ್ಕೃತ ರೂಪ.

ಇಂತಹುದೊಂದು ಅಧ್ಯಯನದ ಆಸೆಯ ಬೀಜವನ್ನು ನನ್ನಲ್ಲಿ ಬಿತ್ತಿದವರು ಪ್ರಾತಃ ಸ್ಮರಣೀಯರಾದ ಡಾ॥ ಶ್ರೀನಿವಾಸ ಹಾವನೂರರು. ಹದಿನೈದು ವರ್ಷಗಳ ಅವರ ಸಾನ್ನಿಧ್ಯದಲ್ಲಿ ಪ್ರತಿಕ್ಷಣದಲ್ಲಿಯೂ ಅವರಿಂದ ನಾನು ಕಲಿತದ್ದು ಅಪಾರ. ವಿಷಯದ ಆಯ್ಕೆಯಿಂದ ಹಿಡಿದು ಅದರ ಪುಸ್ತಕರೂಪದ ವಿನ್ಯಾಸದವರೆಗೆ ಪ್ರತಿಹೆಜ್ಜೆಯಲ್ಲಿಯೂ ನನ್ನ ಕೈಹಿಡಿದು ಮುನ್ನಡೆಸಿದ್ದಾರೆ. ಅವರು ಜೀವಂತರಾಗಿರುವಾಗಲೇ ಕೃತಿಯನ್ನು ಅವರ ಕೈಗಳಲ್ಲಿ ಇರಿಸಲಾಗಲಿಲ್ಲವೆಂಬ ಖೇದ ಸದಾ ನನ್ನನ್ನು ಕಾಡುತ್ತಲೇ ಇರುತ್ತದೆ. ಪರೋಕ್ಷವಿನಯವಾಗಿ ಇದನ್ನು ಅವರಿಗೆ ಅರ್ಪಿಸುವುದಷ್ಟೇ ಈಗ ನನ್ನ ಪಾಲಿಗೆ ಉಳಿದಿರುವ ಪಂಚಾಮೃತ.

ಹಾವನೂರರು ಬಿತ್ತಿದ ಬೀಜವನ್ನು ಪೋಷಿಸಿ ಹೆಮ್ಮರವನ್ನಾಗಿಸಿದವರು ಗುರುಗಳಾದ ಡಾ॥ ಸಿ.ಯು. ಮಂಜುನಾಥ್‌ರವರು. ಅವರ ಕಣ್ಕಾಪಿನ ಆರೈಕೆಯಿಂದ ನನ್ನಂತಹ ಕೊರಡೂ ಕೊನರಿದೆ. ಸಂಶೋಧನೆಯ ಶಿಸ್ತಿನ ಪ್ರತಿ ಸೂಕ್ಷ್ಮ ಅಂಶವನ್ನೂ ಅವರು ನಗುಮೊಗದಿಂದ ಕಲಿಸಿ ಕೊಟ್ಟಿದ್ದಾರೆ. ವಿದ್ವತ್ತು ಮತ್ತು ಸಜ್ಜನಿಕೆಯ ಸಾಕಾರ ಸ್ವರೂಪರೇ ಆಗಿರುವ ಅವರ ಶಿಷ್ಯನೆನಿಸಿಕೊಳ್ಳುವುದಕ್ಕಿಂತ ಭಾಗ್ಯ ನನಗೆ ಬೇರೆ ಇಲ್ಲ. ಅವರಿಗೆ ನನ್ನ ಪ್ರಣಾಮಗಳು.

ಬೆಂಗಳೂರಿನ ಮಾಸ್ತಿ ಅಧ್ಯಯನ ಪೀಠ ಹಾಗೂ ಯು.ಕೆ.ಯ ಶ್ರೀಮತಿ ಪಂಕಜಮ್ಮ ಮಾಸ್ತಿ ವಿದ್ಯಾನಿಧಿ ಟ್ರಸ್ಟ್‌ಗಳ ಆರ್ಥಿಕ ನೆರವಿನಿಂದಾಗಿ ಎರಡು ತಿಂಗಳುಗಳ ಕಾಲ ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಲಂಡನ್ ಮುಂತಾದೆಡೆಗಳಲ್ಲಿ ನಾನು ಮಾಹಿತಿ ಸಂಗ್ರಹಣೆಯನ್ನು ನಡೆಸಲು ಸಾಧ್ಯವಾಯಿತು. ಇದಕ್ಕೆ ಕಾರಣರಾದ ಎಲ್ಲರಿಗೆ ಹಾಗೂ ನನ್ನನ್ನು ತಮ್ಮ ಮನೆಮಗನಂತೆ ಕಾಣುತ್ತಿರುವ ಡಾ॥ ವಸಂತಶ್ರೀಯವರ ವಿಶ್ವಾಸಕ್ಕೆ ಪ್ರತಿಯಾಗಿ ನಾನೇನು ಕೊಡಬಲ್ಲೆ?

ಅಧ್ಯಯನದ ವಿವಿಧ ಹಂತಗಳಲ್ಲಿ ನೆರವಾದ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ, ಶ್ರೀ ಥಾಮಸ್, ಶ್ರೀ ಪ. ನಾಗರಾಜಯ್ಯ, ಡಾ॥ ರಾ. ಗಣೇಶ್, ಡಾ॥ ಪಿ.ವಿ. ಕೃಷ್ಣಮೂರ್ತಿ, ಡಾ॥ ಕೆ.ಆರ್. ಗಣೇಶ್, ಡಾ॥ ಎಚ್.ಎಸ್. ಗೋಪಾಲರಾವ್, ಡಾ॥ ನಂಜುಂಡಸ್ವಾಮಿ, ಶ್ರೀ ಸ. ಕಾರ್ತಿಕ್, ಡಾ॥ ಅ.ಲ. ನರಸಿಂಹನ್, ಡಾ॥ ಎಸ್.ಕೆ.ಅರುಣಿ, ಡಾ॥ ವಿ. ವಸಂತರಾಂ, ಪ್ರೊ॥ ಬರ್ಗರ್, ಡಾ॥ ಫಿಲಿಪ್ ವ್ಯಾಗನರ್, ಶ್ರೀ ಡಗ್ಲಸ್ ರೈಸ್, ಡಾ॥ ಶ್ರೀರಾಮಭಟ್, ಡಾ॥ ಬಿ. ಲೀಲಾ ಮುಂತಾದ ಹಲವರಿಗೆ ಧನ್ಯವಾದಗಳು. ಕೃತಿಯನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಶ್ರೀ ಬಿ.ಎಸ್. ಅರುಣ್, ಶ್ರೀ ಟಿ. ರಾಘವೇಂದ್ರ ರಾವ್ ಹಾಗೂ ಗೆಳೆಯ ಶ್ರೀ ಅಶೋಕ್ ಕಾಮತ್‌ರನ್ನು ಎಷ್ಟು ಸ್ಮರಿಸಿದರೂ ಸಾಲದು.

ಇಂಗ್ಲೆಂಡಿನ ವಾಸ್ತವ್ಯವನ್ನು ಸ್ಮರಣೀಯವಾಗಿಸಿದ ಡಾ॥ ಮತ್ತೂರು ನಂದಕುಮಾರ, ಶ್ರೀ ಪ್ರಕಾಶ್ ಎಡಗುಡ್ಡೆ, ಶ್ರೀ ವೆಂಕಟೇಶ್, ಶ್ರೀ ರಾಮಮೂರ್ತಿ, ಡಾ॥ ಜಾನ್ ಮಾರ್ ಮುಂತಾದ ಎಲ್ಲ ಹಿರಿಯರಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಧನ್ಯವಾದಗಳು.

ನನ್ನ ಬೆನ್ನುತಟ್ಟಿ ಪ್ರೋತ್ಸಾಹಿಸಿ ಕೃತಿ ಹೊರಬರುವ ಮುನ್ನವೇ ಕೀರ್ತಿಶೇಷರಾದ ಶ್ರೀ ಕೆ.ಜಿ. ನಾಗರಾಜನ್, ಡಾ॥ ಎಚ್.ಎಸ್. ರಘುನಾಥಭಟ್, ಶ್ರೀ ಸುಬ್ಬರಾಯರು ಹಾಗೂ ಶ್ರೀಮತಿ ಸರೋಜಾ ಕೃಷ್ಣಮೂರ್ತಿಯವರಿಗೆ ನನ್ನ ಅಶ್ರುತರ್ಪಣ.

ನನ್ನ ಮಾತಾಪಿತೃಗಳು; ಡಾ॥ ಎಂ. ಚಿದಾನಂದಮೂರ್ತಿ, ಡಾ॥ ಎಂ.ಎಂ. ಕಲಬುರ್ಗಿ, ಡಾ॥ ಕೆ.ಜಿ. ನಾರಾಯಣ ಪ್ರಸಾದ್, ಡಾ॥ ಡಿ.ವಿ. ಪರಮಶಿವಮೂರ್ತಿ, ಪ್ರೊ॥ ಕೆ.ಆರ್. ನರಸಿಂಹನ್ ಮುಂತಾದ ಗುರುಹಿರಿಯರು ; ಬಾಳಗೆಳತಿ ಸೌ॥ ಸುರೇಖಾ, ಮಗಳು ಟಿ. ಅನನ್ಯ ಮುಂತಾದವರೆಲ್ಲರ ಶುಭಹಾರೈಕೆಗಳು ನನ್ನ ಪಾಲಿಗಿರುವುದನ್ನು ಮರೆಯಲಾರೆ. ಈ ಅಧ್ಯಯನದ ಬಗ್ಗೆ ಮೊದಲಿನಿಂದಲೂ ವಿಶೇಷವಾದ ಆಸಕ್ತಿಯನ್ನು ವಹಿಸಿದ್ದ ಡಾ॥ ಸಿದ್ಧಲಿಂಗಯ್ಯನವರೇ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಇದರ ಪ್ರಕಟಣೆಗೂ ಕಾರಣರಾಗಿದ್ದಾರೆ. ಅವರಿಗೆ ಹೃತ್ಪೂರ್ವಕ ವಂದನೆಗಳು.

ಆಕರ್ಷಕ ಮುಖಪುಟವನ್ನು ಸಿದ್ಧಪಡಿಸಿದ ಕಲಾವಿದ ಶ್ರೀ ಮುರಳೀಧರ ವಿ. ರಾಥೋಡ್ ರಿಗೆ ಹಾಗೂ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಶ್ರೀ ಸಿದ್ಧಲಿಂಗೇಶ್ವರ ಗ್ರಾಫಿಕ್ಸ್‌ನ ಸಿಬ್ಬಂದಿವರ್ಗಕ್ಕೆ ನಾನು ಆಭಾರಿ.


ಡಾ॥ ಎಸ್.ಎಲ್. ಶ್ರೀನಿವಾಸ ಮೂರ್ತಿ

ಪರಿವಿಡಿ

ಸಂಕೇತಾಕ್ಷರ ಸೂಚಿ

ARAD	Annual Reports of the Archeological Department (1865-1905)
ARPI	Annual Reports of Public Instruction.
E.C.	Epigraphia Carniatica.
E.I.	Epigraphia Indica.
G.M.	General & Miscellaneous.
Ind. Ant.	Indian Antiquary.
JARS	Journal of Royal Asiatic Society.
K.S.A	Karnataka State Archives.
RPEM	Review of the Progress in Education in Mysore. 1901-1916.
S & A	Salary and Allowance.
ಕೀ.ಶೇ. ರೈಸ್. ವೃ	ಕೀರ್ತಿಶೇಷರಾದ ರೈಸ್‌ರವರ ವೃತ್ತಾಂತ
ಕ.ಶಾ.ಸಾಂ.ಅ.	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.
ಪಾ.ವಿ.ಕ.ಸೇ.	೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ.
ಸಿ.ಗ್ರಂ.ಚ.ಕೋ.	ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ.
ಶಾ.ಪಿ.ರೈಸ್,	ಶಾಸನಪಿತಾಮಹ ಬಿ.ಎಲ್.ರೈಸ್.
ಪ್ರ.ಕ.	ಪ್ರಬುದ್ಧ ಕರ್ನಾಟಕ.

ಅರ್ಪಣೆ



ದಣಿವರಿಯದ ದುಡಿಮೆಗಾರ, ಸಾರ್ಥಕ ಸಂಶೋಧಕ,
ಸದಾ ಶಿಷ್ಯವತ್ಸಲರಾದ

ಡಾ|| ಶ್ರೀನಿವಾಸ ಹಾವನೂರ

ಅವರಿಗೆ

ಪರೋಕ್ಷ ವಿನಯವಾಗಿ

ಸಮರ್ಪಿತ.

1. ಪ್ರವೇಶ

ಕನ್ನಡ ಸಂಶೋಧನೆಯ* ಕ್ಷೇತ್ರಕ್ಕೆ ಬೆಂಜಮಿನ್ ಲೂಯಿ ರೈಸ್ (೧೮೩೭-೧೯೨೭)ರವರ ಕೊಡುಗೆ ಗಮನಾರ್ಹವಾದದ್ದು. ಜನ್ಮತಃ ಕನ್ನಡಿಗರೇ ಆದರೂ ಪಾಶ್ಚಾತ್ಯ ಮೂಲದವರಾದ ರೈಸರು ಶಾಸನ ವ್ಯಾಸಂಗ, ಪುರಾತತ್ತ್ವ ಶೋಧನೆ, ಜನಾಂಗೀಯ ಅಧ್ಯಯನ, ಹಸ್ತಪ್ರತಿ ಸಂಗ್ರಹಣ, ಗ್ರಂಥಸಂಪಾದನೆ ಮುಂತಾದ ಸಾಂಸ್ಕೃತಿಕ ಸಂಶೋಧನೆಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೈಸೂರು ಸಂಸ್ಥಾನದ ಐತಿಹಾಸಿಕ ಮತ್ತು ಪ್ರಾಚ್ಯವಸ್ತು ಸಂಶೋಧನೆಯ ಕಾರ್ಯಗಳಿಗೆ ಭದ್ರವಾದ ಅಡಿಪಾಯವನ್ನು ಹಾಕಿದರಲ್ಲದೆ ಆ ಪರಂಪರೆ ಇಂದಿಗೂ ಮುಂದುವರೆಯುವುದಕ್ಕೆ ಕಾರಣರಾಗಿದ್ದಾರೆ. ೧೯ನೇ ಶತಮಾನದಲ್ಲಿ ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದ ಪಾಶ್ಚಾತ್ಯವಿದ್ವಾಂಸರ ಸಾಲಿನಲ್ಲಿ ಮೊದಲಿಗರಾದ ಲೂಯಿರೈಸರವರ ಜೀವನ ಮತ್ತು ಅವರ ಬಹುಮುಖ ಪ್ರತಿಭೆಯ ಫಲವಾಗಿ ರಚಿತವಾಗಿರುವ ಅವರ ಸಮಗ್ರ ಸಾಹಿತ್ಯವನ್ನು ಅಭ್ಯಸಿಸುವುದು ಮತ್ತು ಆ ಮೂಲಕ ಕನ್ನಡ ಸಂಶೋಧನೆಯ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆಗಳನ್ನು ಗುರುತಿಸುವುದು ಪ್ರಸ್ತುತ ಕೃತಿಯ ಪ್ರಧಾನ ಉದ್ದೇಶವಾಗಿದೆ.

ಅಗತ್ಯ :

ಇಂದಿನ ಕರ್ನಾಟಕದ ಅರ್ಧದಷ್ಟು ಭಾಗವಾದ ಹಿಂದಿನ ಮೈಸೂರು ಸಂಸ್ಥಾನದೊಂದಿಗೆ ಪಾಶ್ಚಾತ್ಯರ ಸಂಬಂಧ ೧೬ನೇ ಶತಮಾನದಿಂದಲೇ ಆರಂಭವಾಯಿತು. ಆಗಿನಿಂದ ಅನೇಕ ಪಾಶ್ಚಾತ್ಯ ಕುಟುಂಬಗಳು ಈ ಪ್ರಾಂತ್ಯದಲ್ಲಿ ನೆಲೆಸಿದ್ದಿದೆ. ಕ್ರಿ.ಶ. ೧೭೯೯ರಲ್ಲಿ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನವಾದ ಮೇಲೆ ಮೈಸೂರು ನೇರವಾಗಿ ಬ್ರಿಟಿಷರ ಕೈಗೆ ಬಂದಿತು. ಈ ಹಂತದಲ್ಲಿ ಸೈನ್ಯಾಧಿಕಾರಿಗಳಾಗಿ, ವ್ಯಾಪಾರಿಗಳಾಗಿ ಅಥವಾ ಧರ್ಮಪ್ರಚಾರಕರಾಗಿ ಭಾರತಕ್ಕೆ ಬಂದ ಅನೇಕ ಮಂದಿ ಆಂಗ್ಲರು ಇಲ್ಲಿಯೇ ಶಾಶ್ವತವಾಗಿ ನೆಲೆಸಿದರು. ವ್ಯಾವಹಾರಿಕವಾಗಿ ಇಲ್ಲಿ ನೆಲೆಸುವುದು ಅವರಿಗೆ ಉಪಯುಕ್ತವಾಗಿತ್ತಾದರೂ ಇಲ್ಲಿಯ ಸಂಸ್ಕೃತಿಯನ್ನು ತಮ್ಮದಾಗಿಸಿಕೊಳ್ಳಬೇಕು, ಸ್ಥಳೀಯರನ್ನೂ ತಮ್ಮವರಂತೆಯೇ ಪರಿಗಣಿಸಬೇಕು ಎಂಬ ಮನೋಧರ್ಮ ಅವರಲ್ಲಿ ಬಹುತೇಕರಿಗಿರಲಿಲ್ಲ.

ಆದರೆ ಇಂತಹ ಮನೋವೃತ್ತಿಗೆ ವಿರುದ್ಧವಾಗಿದ್ದವರು ಕೆಲವರಾದರೂ ಆ ಸಮುದಾಯದಲ್ಲಿ ಇದ್ದರು. ಅಂತಹವರಲ್ಲಿ ಬೆಂಜಮಿನ್ ಲೂಯಿರೈಸರೂ ಒಬ್ಬರು. ಅವರು

* ಇಲ್ಲಿ 'ಕನ್ನಡ' ಎಂಬ ಶಬ್ದವನ್ನು ಕೇವಲ ಭಾಷಾವಾಚಿಯಾಗಿ ಮಾತ್ರ ಬಳಸದೆ ಸ್ಥಳ ಮತ್ತು ಜನಾಂಗವಾಚಿಯಾಗಿಯೂ ಗ್ರಹಿಸಲಾಗಿದೆ. ಕನ್ನಡ ನಾಡಿನ ನೆಲ, ಜಲ, ಜನ, ಭಾಷೆ, ಸಾಹಿತ್ಯ, ಸಂಸ್ಕೃತಿ ಮುಂತಾದ ಎಲ್ಲ ವಿಷಯಗಳನು ಕುರಿತಾದ ಸಂಶೋದನೆಯನು 'ಕನಡ ಸಂಶೋದನೆ' ಎಂಬ ಶಬವು ಪ್ರತಿನಿಧಿಸುತದೆ.

ಆಂಗ್ಲಮೂಲದವರಾದರೂ ಜನ್ಮತಃ ಕನ್ನಡಿಗರು. ಬಾಲ್ಯ ಮತ್ತು ವೃದ್ಧಾಪ್ಯದ ಕೆಲವು ವರ್ಷಗಳನ್ನು ಇಂಗ್ಲೆಂಡಿನಲ್ಲಿ ಕಳೆದಿದ್ದನ್ನು ಬಿಟ್ಟರೆ ಅವರು ತಮ್ಮ ಜೀವನದ ಬಹುಭಾಗವನ್ನು ಕಳೆದದ್ದು ಕನ್ನಡನಾಡಿನಲ್ಲಿಯೇ. ತಾವು ಆಳುವ ವರ್ಗದ ಜನ ಎಂಬ ಯಾವ ಅಹಂಭಾವವೂ ಇಲ್ಲದೆ 'ಎಲ್ಲರೊಳಗೊಂದಾಗಿ' ಬದುಕುವ ಮನಸ್ಸತ್ವದ ಆ ಕಾಲದ ಪಾಶ್ಚಾತ್ಯರ ಪ್ರತಿನಿಧಿ ಯಾಗಿ ರೈಸರ ಜೀವನ ಹಾಗೂ ಸಾಧನೆಗಳನ್ನು ಅಭ್ಯಸಿಸಬೇಕಾದ ಅವಶ್ಯಕತೆ ಇದೆ.

ಲೂಯಿರೈಸರು ತಮ್ಮ ವೃತ್ತಿಜೀವನವನ್ನು ಶಾಲಾಶಿಕ್ಷಕರಾಗಿ ಆರಂಭಿಸಿದರು. ಅನಂತರ ಶಾಲಾಪರಿವೀಕ್ಷಣಾಧಿಕಾರಿಯಾಗಿ ಮತ್ತು ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿ ಮತ್ತು ಬಳಿಕ ಮೈಸೂರು ಸರ್ಕಾರದ ಶಿಕ್ಷಣಕಾರ್ಯದರ್ಶಿಯಾಗಿ ಬಡ್ತಿ ಹೊಂದಿದರು. ಆದರೆ ಶಾಸನ ಸಂಗ್ರಹ, ಪುರಾತತ್ತ್ವ ಶೋಧನೆ, ಜನಾಂಗೀಯ ಅಧ್ಯಯನ, ಹಸ್ತಪ್ರತಿ ಸಂಗ್ರಹ ಹಾಗೂ ಗ್ರಂಥಸಂಪಾದನೆ ಮುಂತಾದ ಸಾಂಸ್ಕೃತಿಕ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡುದುದರಿಂದ ಮೈಸೂರು ಸಂಸ್ಥಾನದಲ್ಲಿ ಪುರಾತತ್ತ್ವ ಇಲಾಖೆಯ ಆರಂಭಕ್ಕೆ ಕಾರಣವಾದರು. ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹುಟ್ಟಿದ ಒಬ್ಬ ವ್ಯಕ್ತಿ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಇಷ್ಟೊಂದು ಗಣನೀಯ ವಾದ ಸಾಧನೆಗಳನ್ನು ಮಾಡಲು ಹೇಗೆ ಸಾಧ್ಯವಾಯಿತು ಎನ್ನುವುದು ಅಧ್ಯಯನಾರ್ಹ. ಫ್ಲೀಟ್, ಕೀಲ್‌ಹಾರ್ನ್, ಹುಲ್ಷ್, ಬಾರ್ನೆಟ್ ಮುಂತಾದ ಅನೇಕ ಪಾಶ್ಚಾತ್ಯ ವಿದ್ವಾಂಸರು ಇದೇ ರೀತಿಯಲ್ಲಿ ಸೇವೆ ಸಲ್ಲಿಸಿದವರಾಗಿದ್ದಾರೆ. ರೈಸರ ಜೀವನ ಮತ್ತು ಸಾಧನೆಗಳನ್ನು ವಿಶದವಾಗಿ ಅಭ್ಯಸಿಸುವ ಮೂಲಕ ಪ್ರಾತಿನಿಧಿಕವಾಗಿ ಇಂತಹ ವಿದ್ವಾಂಸರ ಮನೋ ಧರ್ಮವನ್ನು ಅರಿಯಬಹುದಾಗಿದೆ.

ಈವರೆಗಿನ ಅಧ್ಯಯನಗಳು :

ರೈಸರ ಜೀವನ ಮತ್ತು ಸಾಧನೆಗಳನ್ನು ಕುರಿತಂತೆ ನಾಲ್ಕಾರು ಸಣ್ಣ ಕೃತಿಗಳು ಮತ್ತು ಕೆಲವು ಲೇಖನಗಳು ಈವರೆಗೆ ಪ್ರಕಟವಾಗಿವೆ. ಅವುಗಳಲ್ಲಿ ಪ್ರಮುಖವಾದವು ಗಳನ್ನು ಮಾತ್ರ ಹೆಸರಿಸಬಹುದಾದರೆ ರೈಸರು ಜೀವಂತವಿದ್ದಾಗ ಪದ್ಮರಾಜ ಪಂಡಿತ ಎಂಬ ದೇಶೀಯ ವಿದ್ವಾಂಸರು ೧೯೦೫ರಲ್ಲಿ ಪ್ರಕಟಿಸಿದ **'ಶ್ರೀ ರೈಸಾರ್ಯ್ಯಚರಿತಂ'** ಎಂಬ ಸಂಸ್ಕೃತ ಕಾವ್ಯ, ಅವರು ತೀರಿಕೊಂಡ ನಂತರ (೧೯೨೭) ನಂಜನಗೂಡಿನ ಕಾದಂಬರೀ ಸಂಗ್ರಹ ಗ್ರಂಥಮಾಲೆಯ ೭೫ನೇ ಕೃತಿಯಾಗಿ ಪ್ರಕಟವಾದ ಸೋಸಲೆ ಕೃಷ್ಣಸ್ವಾಮಿಗಳ **'ಕೀರ್ತಿಶೇಷರಾದ ಬಿ.ಎಲ್. ರೈಸ್, ಸಿ.ಐ.ಇ.ರವರ ವೃತ್ತಾಂತ'** ಮತ್ತು ಶ್ರೀನಿವಾಸ ಹಾವನೂರ ಅವರು ರಚಿಸಿ ಬೆಂಗಳೂರಿನ ಐ.ಬಿ.ಎಚ್. ಪ್ರಕಾಶನವು ಪ್ರಕಟಿಸಿರುವ **'ಶಾಸನ ಪಿತಾಮಹ ಬಿ.ಎಲ್. ರೈಸ್'** (೧೯೭೮) ಎಂಬ ಕೃತಿಗಳು ಮುಖ್ಯವಾದವು. ಇವುಗಳಲ್ಲಿ ಮೊದಲ ಎರಡು ರೈಸರ ಬಗೆಗಿನ ಅತಿಶಯವಾದ ಅಭಿಮಾನದಿಂದ ರಚಿತವಾದವು. ಜೊತೆಗೆ ಇವುಗಳ ಗಾತ್ರ ಬಹಳ ಹ್ರಸ್ವ. ಹಾಗಾಗಿ ವಿಸ್ತಾರವಾದ ವಿಷಯ

ಮಂಡನೆ, ಚಿಕಿತ್ಸಕ ಬುದ್ಧಿಯ ವಿಷಯ ವಿಶ್ಲೇಷಣೆ, ತೌಲನಿಕ ಪರಿಶೀಲನೆ ಯಾವುವೂ ಇಲ್ಲಿಲ್ಲ. ಮೂರನೆಯದಾದ ಹಾವನೂರರ ಕೃತಿಯ ರಚನೆಯ ಹಿಂದೆ ಚಿಕಿತ್ಸಕ ಬುದ್ಧಿ ಸಾಕಷ್ಟು ಕೆಲಸ ಮಾಡಿದೆಯಾದರೂ ಇದೂ ಗಾತ್ರದಲ್ಲಿ ಬಹಳ ಕಿರಿದು. ಹಾವನೂರರ 'ಹೊಸಗನ್ನಡದ ಅರುಣೋದಯ' ಕೃತಿಯಲ್ಲಿ ಅನೇಕ ಮಹತ್ವದ ವಿವರಗಳಿವೆ.

ಆಕರ ಸಾಮಗ್ರಿ :

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿರುವ ಆಕರ ಸಾಮಗ್ರಿಯನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು :

(೧) ಅಪ್ರಕಟಿತ ಆಕರಗಳು

(೨) ಪ್ರಕಟಿತ ಆಕರಗಳು: ಇದರಲ್ಲಿ ಪ್ರಾಥಮಿಕ ಆಕರಗಳು ಮತ್ತು ದ್ವಿತೀಯ ಆಕರಗಳೆಂಬ ಎರಡು ಉಪವಿಭಾಗಗಳಿವೆ.

೧. ಅಪ್ರಕಟಿತ ಆಕರಗಳು :

ಲೂಯಿ ರೈಸರು ಹಿಂದಿನ ಮೈಸೂರು ಸರ್ಕಾರದ ಸೇವೆಯಲ್ಲಿ ಇದ್ದುದರಿಂದ ಅವರ ವೃತ್ತಿ ಜೀವನಕ್ಕೆ ಸಂಬಂಧಿಸಿದ ಅನೇಕ ಸರ್ಕಾರಿ ದಾಖಲೆಗಳು ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ಸಂಗ್ರಹಗೊಂಡಿವೆ. ವಿದ್ಯಾ ಇಲಾಖೆ, ಸಾಮಾನ್ಯ ಮತ್ತು ಆಡಳಿತ ವಿಭಾಗ, ಹಣಕಾಸು ಮುಂತಾದ ವಿಭಾಗಗಳಲ್ಲಿ ಹರಡಿ ಹಂಚಿಹೋಗಿರುವ ರೈಸ್ ಸಂಬಂಧಿ ಕಾಗದ ಪತ್ರಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ರೈಸರು ನಿವೃತ್ತಿಯ ನಂತರ ತಮ್ಮ ಸ್ವದೇಶವಾದ ಇಂಗ್ಲೆಂಡಿಗೆ ಹೋಗಿ ನೆಲೆಸಿದರು. ಅನಂತರ ಅವರ ಮುಂದಿನ ಪೀಳಿಗೆಯವರನೇಕರು ಅಲ್ಲಿಯೇ ವಾಸವಾಗಿದ್ದಾರೆ. ಅವರಲ್ಲಿ ಒಬ್ಬರಾದ ರೊನಾಲ್ಡ್‌ರೈಸರು ತಮ್ಮ ಸಂಗ್ರಹದಲ್ಲಿದ್ದ ಲೂಯಿರೈಸರಿಗೆ ಸಂಬಂಧಿಸಿದ ಅನೇಕ ದಾಖಲೆ ಮತ್ತು ಛಾಯಾಚಿತ್ರಗಳನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಒಂದು ಅಂಗಸಂಸ್ಥೆಯಾದ ಸೆಂಟರ್ ಆಫ್ ಸೌತ್ ಏಷ್ಯನ್ ಸ್ಟಡೀಸ್‌ನ ಪತ್ರಾಗಾರಕ್ಕೆ ನೀಡಿದ್ದಾರೆ. Rice papers ಎಂಬ ಶೀರ್ಷಿಕೆಯ ಈ ಸಂಗ್ರಹದಲ್ಲಿ ರೈಸ್ ಕುಟುಂಬದ ವಂಶಾವಳಿ, ಖಾಸಗಿ ಪ್ರಸಾರಕ್ಕೆಂದು ಪ್ರಕಟಿಸಲಾದ ಕುಟುಂಬದ ಸದಸ್ಯರ ಆತ್ಮಕಥೆಯ ಭಾಗಗಳು, ಅಪರೂಪದ ಛಾಯಾಚಿತ್ರಗಳು, ಲೂಯಿರೈಸರೇ ಬರೆದುಕೊಂಡಿರುವ ಅವರ ಜೀವನ ಸ್ಮೃತಿ, ಪದ್ಮರಾಜ ಪಂಡಿತರ ರೈಸಾರ್ಯ್ಯ ಚರಿತಂ ಎಂಬ ಸಂಸ್ಕೃತ ಕಾವ್ಯ ಮುಂತಾದ ಅನೇಕ ದಾಖಲೆಗಳಿವೆ. ಇದರೊಂದಿಗೆ ರೊನಾಲ್ಡ್ ರೈಸರ ಸೋದರ ಸಂಬಂಧಿಯಾದ ಬೆವನ್ ಎಂಬುವರೂ ಕೆಲವು ದಾಖಲೆಗಳನ್ನು ಈ ಸಂಗ್ರಹಕ್ಕೆ ಸೇರಿಸಿದ್ದು ಅವನ್ನು Bevan papers ಎಂದು ಹೆಸರಿಸಲಾಗಿದೆ. ಇದರೊಂದಿಗೆ ಲೂಯಿರೈಸರ ಮೊಮ್ಮಗನ ಹೆಂಡತಿ

ಯಾದ ಬೆಡ್‌ಫೋರ್ಡ್‌ನಲ್ಲಿರುವ ಜ಼ಿಲ್ಲಾ ವಾಲ್ಡ್‌ರೈಸ್ ಹಾಗೂ ಡೆವೋನ್‌ನಲ್ಲಿರುವ ಆಕೆಯ ಮಗ ಡಗ್ಲಸ್ ರೈಸರು ಅನೇಕ ಮಾಹಿತಿಗಳನ್ನು ಮತ್ತು ಛಾಯಾಚಿತ್ರಗಳನ್ನು ವೈಯಕ್ತಿಕವಾಗಿ ಒದಗಿಸಿದ್ದಾರೆ.

ಲಂಡನ್ನಿನ General Register Office ನಲ್ಲಿ ಇಂಗ್ಲೆಂಡ್ ವಾಸಿಗಳ ಜನನ, ಮದುವೆ ಮತ್ತು ನಿಧನಗಳ ದಾಖಲೆಗಳನ್ನು ಕಾಯ್ದಿರಿಸಲಾಗಿದ್ದು ಕೋರಿಕೆಯ ಮೇರೆಗೆ ಇವುಗಳ ಪ್ರಮಾಣ ಪತ್ರಗಳನ್ನು ಕೊಡುವ ವ್ಯವಸ್ಥೆಯಿದೆ. ಅದೇ ರೀತಿ ಅಲ್ಲಿಯ ಸಾಮರ್ ಸೆಟ್ ಹೌಸ್‌ನಲ್ಲಿರುವ Principal Registery of the Family Divisions ನಿಂದ ಕೌಟುಂಬಿಕ ವಿವರಗಳು, ಉಯಿಲಿನ ದೃಢೀಕೃತ ಪ್ರತಿ ಮುಂತಾದುವನ್ನು ಪಡೆದು ಕೊಳ್ಳಲಾಗಿದೆ. ಲಂಡನ್ನಿನ ಬ್ರಿಟಿಷ್ ಲೈಬ್ರರಿಯ ಇಂಡಿಯಾ ಆಫೀಸ್ ವಿಭಾಗದಲ್ಲಿ ಹಳೇಬೀಡಿನ ದೇವಾಲಯಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ರೈಸರು ನಡೆಸಿರುವ ಪತ್ರ ವ್ಯವಹಾರದ ದಾಖಲೆಗಳು ಮತ್ತು ಮೈಸೂರು ಸಂಸ್ಥಾನದ ಕಮೀಷನರುಗಳಲ್ಲಿ ಒಬ್ಬ ನಾಗಿದ್ದ ಬೌರಿಂಗನಿಂದ ಕೊಡಲ್ಪಟ್ಟಿರುವ ಸಂಗ್ರಹದಲ್ಲಿ ರೈಸರ ಅಪರೂಪದ ಛಾಯಾಚಿತ್ರ ವೊಂದಿದೆ. ಅಂತೆಯೇ ಅದೇ ಊರಿನ School of Oriental and African Studies ನ ಪತ್ರಾಗಾರದಲ್ಲಿ ಲಂಡನ್ ಮಿಷನ್ ಸೊಸೈಟಿ ಎಂಬ ಕ್ರೈಸ್ತ ಸಂಸ್ಥೆಗೆ ಸಂಬಂಧಿಸಿದ ದಾಖಲೆಗಳು ಮತ್ತು ವರದಿಗಳಿದ್ದು ಇದರಲ್ಲಿಯ ಕೆಲವು ದಾಖಲೆಗಳು ಲೂಯಿರೈಸರ ತಂದೆ ಮತ್ತು ತಮ್ಮನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ. ಈ ಎಲ್ಲ ದಾಖಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

❊ ❊ ❊

2. ಜೀವನ ವೃತ್ತಾಂತ

ಪೂರ್ವಜರು

ಬಿ.ಎಲ್. ರೈಸ್ ಎಂದೇ ಪ್ರಖ್ಯಾತರಾಗಿರುವ ಬೆಂಜಮಿನ್ ಲೂಯಿ ರೈಸರು ಇಂಗ್ಲೆಂಡ್ ಮೂಲದವರು. 'ರೈಸ್' ಎಂಬುದು ಅವರ ಕುಟುಂಬ ನಾಮ. ಲೂಯಿ ರೈಸರ ತಮ್ಮ ಹಾಗೂ The History of Kanarese Literature ಕೃತಿಯ ಲೇಖಕ ರಾದ ಇ.ಪಿ. ರೈಸರು ತಮ್ಮ ತಂದೆಯ ಜೀವನಚರಿತ್ರೆಯಾದ "Benjamin Rice or Fifty Years in the Master's Service" ಎಂಬ ಕೃತಿಯಲ್ಲಿ ರೈಸ್ ಕುಟುಂಬದ ಹಿರಿಯರ ವಿವರಗಳನ್ನೂ ಕ್ವಚಿತ್ತಾಗಿ ದಾಖಲಿಸಿದ್ದಾರೆ. ಅದರಂತೆ ಇಂಗ್ಲೆಂಡಿನ ವೇಲ್ಸ್ ಪ್ರಾಂತ್ಯದಲ್ಲಿರುವ ಮಾನ್‌ಮತ್ ಪ್ರದೇಶ ರೈಸ್ ಕುಟುಂಬದ ಮೂಲಸ್ಥಾನ. ಆದರೆ ಅನೇಕ ತಲೆಮಾರುಗಳಿಂದ ಈ ಕುಟುಂಬವರ್ಗ ಗ್ಲಾಸ್ಟರ್‌ಶೈರ್ ಪ್ರಾಂತ್ಯದಲ್ಲಿರುವ ಕಾಟ್‌ಸೋರ್ಡ್ ಬೆಟ್ಟದ ತಪ್ಪಲಿನ ಪುಟ್ಟ ಊರಾದ ಸ್ಟ್ರಾಡ್ ಎಂಬಲ್ಲಿ ನೆಲೆನಿಂತಿತ್ತು. ಈ ಪ್ರದೇಶದ ಬಹುಪಾಲು ಜನರಂತೆ ರೈಸ್ ಮನೆತನದವರೂ ತಲೆತಲಾಂತರದಿಂದ ಉಣ್ಣೆಯ ಬಟ್ಟೆಯನ್ನು ಸಿದ್ಧಪಡಿಸುವ ಉದ್ಯೋಗದಲ್ಲಿ ತೊಡಗಿದ್ದವರು, ಧರ್ಮಭೀರುಗಳು.

ಈ ಪರಂಪರೆಯಲ್ಲಿ ಬಂದಾತ ಬಿ.ಎಲ್. ರೈಸರ ಮುತ್ತಾತ ಥಾಮಸ್ ರೈಸ್ (೧೭೬೧-೧೮೨೨). ಇ.ಪಿ. ರೈಸರು ಈ ಕೃತಿಯನ್ನು ಬರೆಯುವ ಕಾಲಕ್ಕೆ ಅವರಿಗೆ ಥಾಮಸ್ ರೈಸರಿಗಿಂತ ಮುಂಚಿನವರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದಿರಲಿಲ್ಲವೆಂದು ತೋರುತ್ತದೆ. ಆದರೆ ಕೇಂಬ್ರಿಡ್ಜ್‌ನ Centre for South Asian Studiesನ ಪತ್ರಾಗಾರದಲ್ಲಿ ನಡೆಸಿದ ಹುಡುಕಾಟದಲ್ಲಿ ಹೆಚ್ಚಿನ ವಿವರಗಳು ದೊರೆತಿದ್ದು ಬಿ.ಎಲ್. ರೈಸರು ಭಾರತದಿಂದ ಹ್ಯಾರೋಗೆ ಹಿಂದಿರುಗಿದನಂತರ ತಮ್ಮ ಕುಟುಂಬದ ಚರಿತ್ರೆಯನ್ನು ಅರಿಯುವ ಪ್ರಯತ್ನ ನಡೆಸಿದಾಗ ಸಂಗ್ರಹಿಸಿದವು ಎಂಬುದು ಸ್ಪಷ್ಟವಾಗಿದೆ. ಸ್ಟ್ರಾಡ್‌ನ ರಾಡ್‌ಬರ್ಗ್ ಆರಾಧನಾ ಕುಟೀರದ ರೆವರೆಂಡ್ ಸಿ.ಇ. ವಾಟ್ಸನ್ ಎಂಬಾತ ಲೂಯಿರೈಸರ ಪತ್ರವೊಂದಕ್ಕೆ ದಿನಾಂಕ ೧೩-೧೨- ೧೯೧೧ರಂದು ಉತ್ತರಿಸುತ್ತಾ ಗ್ಲಾಸ್ಟರ್‌ನಲ್ಲಿರುವ ಉಯಿಲು ದಾಖಲೆ ಕಚೇರಿಯ ಕಾಗದಪತ್ರಗಳ ಆಧಾರದ ಮೇಲೆ ೧೬೮೨ರಿಂದ ದಾಖಲಾಗಿರುವ ಅನೇಕ ಮಂದಿ ರೈಸರ ಪಟ್ಟಿಯನ್ನು ನೀಡಿದ್ದಾರೆ. ಇದರ ಪ್ರಕಾರ ಥಾಮಸ್ ರೈಸರ ತಂದೆ ಎಬ್ಲಿಯ ಜಾನ್ ರೈಸ್. (ನಿಧನ ೧೭೩೭)[1] ಥಾಮಸ್ ರೈಸ್ ಊರಿನ ಎದುರಿನ ಬೆಟ್ಟದ ಬುಡದಲ್ಲಿದ್ದ ರಾಡ್‌ಬರ್ಗ್ ಆರಾಧನಾ ಕುಟೀರದ ಅಧಿಕಾರಿ ವರ್ಗದಲ್ಲಿದ್ದ ಹಾಗೂ ಪಾದ್ರಿಯ ಕೆಲಸವನ್ನೂ ನಿರ್ವಹಿಸುತ್ತಿದ್ದ. "ತನ್ನ ಎಂಟು ಜನ

1 Rice Papers, Sl. No. 78.

ಗಂಡುಮಕ್ಕಳಲ್ಲಿ ಏಳು ಜನರಿಗೆ ಆತ ಅಪೋಸ್ತಲರ ಹೆಸರಿಟ್ಟಿದ್ದದ್ದೇ ಕ್ರೈಸ್ತಚರಿತ್ರೆಯಲ್ಲಿ ಆತನಿಗಿದ್ದ ಆಸಕ್ತಿಯನ್ನು ತೋರುತ್ತದೆ."[1] ಥಾಮಸ್ ರೈಸ್ ಕೆಲಕಾಲ ಈಸ್ಟ್ ಇಂಡಿಯ ಕಂಪನಿಗಾಗಿ ಉಣ್ಣೆಯ ವಸ್ತುಗಳನ್ನು ಸಿದ್ಧಪಡಿಸಿಕೊಡುತ್ತಿದ್ದ. ಆದರೆ ಸ್ವಲ್ಪ ಕಾಲದನಂತರ ಈ ಸರಬರಾಜನ್ನು ನಿಲ್ಲಿಸಬೇಕಾಗಿ ಬಂದುದರಿಂದ ಆತ ಬಡತನಕ್ಕೆ ಈಡಾಗಬೇಕಾಯಿತು.

ಥಾಮಸ್ ರೈಸನ ಎರಡನೆಯ ಮಗನಾದ ಸೈಮನ್ ಪೀಟರ್ ತನ್ನ ಸ್ವಂತಕ್ಕೆಂದು ಕೂಡಿಟ್ಟು ಕೊಂಡಿದ್ದ ೭೦ - ೮೦ ಪೌಂಡುಗಳಷ್ಟು ಹಣವನ್ನು ತನ್ನ ತಂದೆಗೆ ಬಿಟ್ಟುಕೊಟ್ಟು ಸೋದರರರಲ್ಲಿ ಒಬ್ಬನಾದ ಫಿಲಿಪ್‌ನೊಂದಿಗೆ ಉದ್ಯೋಗವನ್ನು ಅರಸುತ್ತಾ ಲಂಡನ್ನಿಗೆ ಬಂದ. ಆರಂಭದ ದಿನಗಳಲ್ಲಿ ಇವರಿಬ್ಬರ ಜೀವನ ದುರ್ಭರವಾಗಿತ್ತಾದರೂ ಹಲವಾರು ಉಣ್ಣೆಯ ಉದ್ಯಮಗಳಲ್ಲಿ ಕೆಲಸ ಮಾಡಿದನಂತರ ಅವರು ಆಲ್ಡರ್‌ಮನ್‌ಬರಿ ಪ್ರದೇಶದ ಆ್ಯಡೆಲ್ ರಸ್ತೆಯಲ್ಲಿದ್ದ ಉಣ್ಣೆಬಟ್ಟೆಗಳ ಮಾರಾಟಮಳಿಗೆಯೊಂದನ್ನು ಕೊಂಡು ಕೊಂಡು ಎಸ್.ಪಿ. ಅಂಡ್ ಪಿ. ರೈಸ್ ಎಂಬ ಹೆಸರಿನಲ್ಲಿ ನಡೆಸಲು ಆರಂಭಿಸಿದರು. ಮುಂದೆ ಅವರು ಬೋ ಬ್ರಿಡ್ಜ್ ಎಂಬಲ್ಲಿ ಉಣ್ಣೆಬಟ್ಟೆಗಳ ದೊಡ್ಡ ತಯಾರಿಕಾ ಘಟಕವೊಂದನ್ನು ಕೊಂಡ ರಲ್ಲದೇ ಇಂಗ್ಲೆಂಡಿನಲ್ಲೇ ಮೊತ್ತಮೊದಲ ಬಾರಿಗೆ ಉಗಿಇಂಜಿನ್ನನ್ನು ಅಲ್ಲಿ ಬಳಕೆಗೆ ತಂದರು.

ವಂಶವೃಕ್ಷ :


ಕೇಂಬ್ರಿಜ್‌ನ 'ರೈಸ್ ಪತ್ರಗಳ ಸಂಗ್ರಹ'ದಲ್ಲಿ ವಂಶವೃಕ್ಷದ ಎರಡು ಪ್ರತಿಗಳಿವೆ. ಮೊದಲನೆಯದು ಸಾಕಷ್ಟು ವಿವರವಾಗಿದ್ದು, ಬಹುಶಃ ಇ.ಪಿ. ರೈಸರು ಇದನ್ನು ಪ್ರತಿ ಮಾಡಿಕೊಂಡಂತೆ ತೋರುತ್ತದೆ. ಎರಡನೆಯದಕ್ಕೆ 'Simplified Family Tree of Rice Family' ಎಂಬ ಶೀರ್ಷಿಕೆಯಿದೆ. ಇದು ಮೊದಲನೆಯ ವಂಶವೃಕ್ಷದ ಪ್ರತಿಯಿಂದ ಆಯ್ದ ವಿವರಗಳನ್ನು ಒಳಗೊಂಡಿದೆ. ಈ ಎರಡರಿಂದ ಲಬ್ಧವಾಗುವ ಮಾಹಿತಿಯನ್ನು ಹೀಗೆ ಪುನರ್ರಚಿಸಬಹುದು. *[ಈ ವಂಶವೃಕ್ಷವನ್ನು ಮುಂದಿನ ಪುಟಗಳಲ್ಲಿ ಮುದ್ರಿಸಿದೆ]*


ಬೆಂಜಮಿನ್ ರೈಸ್ :

ಸೈಮನ್ ಪೀಟರ್‌ನ ಮೊದಲ ಮಗನಾಗಿ ಬೆಂಜಮಿನ್ ರೈಸ್ ೧೮೧೪ರ ಮೇ ೨೮ರಂದು ಲಂಡನ್ನಿನ ಆ್ಯಡೆಲ್ ರಸ್ತೆಯ ಮನೆಯಲ್ಲಿ ಹುಟ್ಟಿದರು. ಬೆಂಜಮಿನ್ ರೈಸರ ಪೂರ್ಣ ಹೆಸರು ಹಾಗೂ ಜನ್ಮಸ್ಥಳಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಶ್ರೀನಿವಾಸ ಹಾವನೂರರು ಈತನ ಪೂರ್ಣಹೆಸರನ್ನು "ಬೆಂಜಮಿನ್ ಹೋಲ್ಟ್ ರೈಸ್" ಎಂದು ಉಲ್ಲೇಖಿಸಿದ್ದಾರೆ.[2] ಬಾರ್ನೆಟ್‌ನ "ಬ್ರಿಟಿಷ್ ಲೈಬ್ರೆರಿಯಲ್ಲಿರುವ ಕನ್ನಡ ಪುಸ್ತಕಗಳ

1 Rice, E.P., **Benjamin Rice**, P 13.

2 **ಹೊ.ಅ.**, ೧೯೭೪, ಮೊ.ಮು., ಪು ೧೯, ೯೭, ೩೮೩, ೩೮೫, ಇತ್ಯಾದಿ; **ಶಾ.ಪಿ. ರೈಸ್**, ಪು. ೧೦, ಮುಂತಾದ ಕಡೆಗಳಲ್ಲಿ.


ವಂಶವೃಕ್ಷ
ಜಾನ್ ರೈಸ್ (ಮ. ೧೭೩೭)
ಥಾಮಸ್ ರೈಸ್ (೧೭೬೧-೧೮೨೨)
ಥಾಮಸ್ (೧೭೮೪-೧೮೨೨)
ಸೈಮನ್‌ಪೀಟರ್ (೧೭೮೬-೧೮೬೬)
ಜಾನ್ (೧೭೮೮)
ಮಾರಿ (೧೭೮೯) ೧೮೨೫)
ಜೇಮ್ಸ್ (೧೭೯೧-೧೮೩೭)
ಫಿಲಿಪ್A (೧೭೯೩-೧೮೬?)
ಮ್ಯಾಥ್ಯೂ (೧೭೯೩-೧೮೧೫)
ಸ್ಯಾಮುಯೆಲ್ (೧೭೯೮-೧೮೧೮)
ಆ್ಯನಾ (೧೮೦೦-
ಆ್ಯಂಡ್ರೂ (೧೮೦೦)
ಸ್ಯಾಮುಯೆಲ್ ಜಾರ್ಜ್
?
?
?
ಬೆಂಜಮಿನ್B (೧೮೧೪-೧೮೮೭)
ಎಲೀಸಾ (೧೮೧೫-೧೮೧೮)
ಮಾರಿಯಾ (೧೮೧೮)
ಸ್ಯಾಮುಯೆಲ್C (೧೮೨೦-?)
ವಿಲಿಯಮ್ (೧೮೨೧-?)
ಪೀಟರ್ (೧೮೨೩-೧೮೨೪)
ಪೀಟರ್ (ಸೆಫಾಸ್)D (೧೮೨೫-?)
ಜಾನ್ (೧೮೨೭-?)
ಥಾಮಸ್E (೧೮೨೯-?)
ಮುಂದಿನ ಪುಟಕ್ಕೆ
A ಹೋಟೆಲ್ ಮಾಲಿಕ
B ಧರ್ಮಪ್ರಚಾರಕ
C ಬೀಗತಯಾರಕ
D ಕಿರಾಣಿ ವ್ಯಾಪಾರಿ
E ಮುದ್ರಕ



F ಶಿಕ್ಷಣತಜ್ಞ, ಪುರಾತತ್ತ್ವ ಶಾಸ್ತ್ರಜ್ಞ
G ಇಂಜಿನಿಯರ್
H ಧರ್ಮಪ್ರಚಾರಕ

ಸೂಚಿ''ಯಲ್ಲಿನ ನಮೂದೊಂದನ್ನು ಗಮನಿಸಿ ಅವರು ಈ ನಿರ್ಧಾರಕ್ಕೆ ಬಂದಿದ್ದಾರೆಂದು ತೋರುತ್ತದೆ. ಆದರೆ ಇ.ಪಿ. ರೈಸರು ಬರೆದಿರುವ ಬೆಂಜಮಿನ್ ರೈಸರ ಜೀವನ ಚರಿತ್ರೆ, ಕೇಂಬ್ರಿಡ್ಜ್, ಲಂಡನ್ ಮಿಷನ್ನಿನ ದಾಖಲೆಗಳು ಹಾಗೂ ಬೆಂಜಮಿನ್ ರೈಸರೇ ಬರೆದಿರುವ 'ಕನ್ನಡ ಸಂಗೀತಗಳು' (೧೮೯೮ರ ಮುದ್ರಣ) ಕೃತಿಯ ಮುಖಪುಟ - ಈ ಎಲ್ಲ ಕಡೆ ಬೆಂಜಮಿನ್ ರೈಸ್ ಎಂಬ ಹೆಸರಿದೆಯೆ ವಿನಾ ಬೆಂಜಮಿನ್ ಹೋಲ್ಟ್ ರೈಸ್ ಎಂದಲ್ಲ. ಬಿ.ಎಲ್. ರೈಸರ ಮೊಮ್ಮಗ ರೊನಾಲ್ಡ್ ರೈಸರು ತಮ್ಮ ಸೋದರ ಸಂಬಂಧಿಗಳಿಗೆ ಬರೆದಿರುವ ಪತ್ರವೊಂದರಲ್ಲಿ ಆಕ್ಸ್‌ಫರ್ಡ್‌ನ ಬಾಡ್ಲಿಯನ್ ಲೈಬ್ರರಿಯಲ್ಲಿ ದೊರಕುವ ರೈಸ್ ವಿರಚಿತ ಕೃತಿಗಳನ್ನು ಕುರಿತು ಬರೆಯುವಾಗ 'A little book in Canarese "Instructions for youth" 1850, by Benjamin Holt Rice. This must be our Benjamin, father of Lewis, but I have not seen the name Holt used elsewhere' ಎಂದಿದ್ದಾರೆ.[1] ಹಾಗಾಗಿ ಪ್ರಸ್ತುತ ನಿಬಂಧದಲ್ಲಿ 'ಬೆಂಜಮಿನ್ ರೈಸ್' ಎಂಬ ರೂಪವನ್ನೇ ಉಳಿಸಿಕೊಳ್ಳಲಾಗಿದೆ.

ಬೆಂಜಮಿನ್ ರೈಸರ ಜನ್ಮಸ್ಥಳದ ಬಗ್ಗೆಯೂ ಕೆಲವು ತಪ್ಪು ಅಭಿಪ್ರಾಯಗಳಿವೆ. ಬೆಂಜಮಿನ್ ರೈಸ್ ಜರ್ಮನಿಯವರು ಎಂಬ ಸಿದ್ಧಾಂತವನ್ನು ಬಹುಶಃ ಮೊತ್ತಮೊದಲ ಬಾರಿಗೆ ಐ.ಮಾ. ಮುತ್ತಣ್ಣ ಪ್ರತಿಪಾದಿಸಿದರು.[2] ಇದೇ ಮಾತನ್ನು ಚಂದ್ರಶೇಖರ ಧೂಲೇಕರರು ಪುನರುಚ್ಚರಿಸಿದ್ದಾರೆ.[3] ಧೂಲೇಕರರ ಲೇಖನಕ್ಕೆ ಪ್ರತಿಕ್ರಯಿಸುತ್ತಾ ಹಾವನೂರರು ಇ.ಪಿ. ರೈಸರು ಬರೆದಿರುವ ಬೆಂಜಮಿನ್ ರೈಸರ ಅಧಿಕೃತ ಜೀವನ ಚರಿತ್ರೆಯ ಪ್ರಕಾರ ರೆವರೆಂಡ್ ರೈಸ್ ಹುಟ್ಟಿದ್ದು ಜರ್ಮನಿಯಲ್ಲಿ ಎಂದು ಪುನರುಚ್ಚರಿಸಿದ್ದಾರೆ.[4] ಆದರೆ ಅವರೇ ಸೂಚಿಸಿರುವ ಇ.ಪಿ. ರೈಸರ ಕೃತಿಯಲ್ಲಿ ಬೆಂಜಮಿನ್ ರೈಸ್ ಲಂಡನ್ನಿನ ಆಡಲ್ ರಸ್ತೆಯ ಮನೆಯಲ್ಲಿ ಹುಟ್ಟಿದರೆಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.[5]

ಬೆಂಜಮಿನ್ ರೈಸ್ ತನ್ನ ನಾಲ್ಕನೇ ವರ್ಷದಲ್ಲಿ ತಾಯಿಯನ್ನು ಕಳೆದುಕೊಂಡು ಮಲತಾಯಿಯ ಪೋಷಣೆಯಲ್ಲಿ ಬೆಳೆದರು. ಕ್ರಿಪ್ಪಲ್ ಗೇಟ್‌ನಲ್ಲಿದ್ದ ಪ್ರಿಯರ್ ಎಂಬುವರ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದನಂತರ ವಾಟ್ಸನ್ ಅಂಡ್ ಬ್ರಾಟನ್ ಎಂಬ ವಕೀಲರ ಸಂಸ್ಥೆಯಲ್ಲಿ ತರಪೇತಿ ಪಡೆದರಾದರೂ ಓದುವ ಹವ್ಯಾಸವನ್ನು ಬಿಟ್ಟಿರಲಿಲ್ಲ. "ಸತತ ವ್ಯಾಸಂಗಶೀಲನಾಗಿದ್ದ ನಾನು ಮುಂಜಾನೆ ಬೇಗ ಎದ್ದು ಓದುವ ಹವ್ಯಾಸವನ್ನು

1 Ronald Rice, 1977, Rice Papers., Sl. No. 68

2 ಪಾ.ವಿ.ಕ.ಶೇ., ಪು. ೩೨೧, ೪೭೬, ಇತ್ಯಾದಿ

3 'ಕನ್ನಡ ಸಂಸ್ಕೃತಿಯ ವಿದೇಶಿ ಹರಿಕಾರ - ಬಿ.ಎಲ್. ರೈಸ್', ಕನ್ನಡಪ್ರಭ, ೧೧-೧-೧೯೮೭ ಹಾಗೂ ೧೫-೨-೧೯೮೭

4 ಪತ್ರವಿಹಾರ, ಕನ್ನಡಪ್ರಭ, ೧-೩-೧೯೮೭

5 ಪೂರ್ವೋಕ್ತ, ಪು. ೧೫

ಇಟ್ಟುಕೊಂಡಿದ್ದೆನಲ್ಲದೆ ಸದಾ ಜೇಬಿನಲ್ಲಿ ಪುಸ್ತಕಗಳನ್ನಿರಿಸಿಕೊಂಡು ಸಮಯ ಸಿಕ್ಕಾಗಲೆಲ್ಲ ಓದನ್ನು ಮುಂದುವರಿಸುತ್ತಿದ್ದೆ. ನಾನು ಓದುತ್ತಿದ್ದ ಬಹುಪಾಲು ಪುಸ್ತಕಗಳು ಧರ್ಮಕ್ಕೆ ಸಂಬಂಧಿಸಿರುತ್ತಿದ್ದವು. ಕಾವ್ಯ ರಚನೆಯಲ್ಲೂ ಆಸಕ್ತಿಹೊಂದಿದ್ದ ನಾನು ನನ್ನ ಕೆಲವು ರಚನೆಗಳನ್ನು Youth's Magazine, Teachers Offering ಮುಂತಾದ ಪತ್ರಿಕೆಗಳಿಗೆ "ಬಿ.ಆರ್." ಅಂಕಿತದೊಂದಿಗೆ ಕಳುಹಿಸುತ್ತಿದ್ದೆ. ಅವುಗಳಲ್ಲಿ ಅನೇಕವು ಪ್ರಕಟವಾದವು. ನನ್ನ ಒಂದು ಪ್ರಬಂಧವನ್ನು ನೋಡಿದ ಅಧ್ಯಾಪಕರಾಗಿದ್ದ ಡಾ॥ ಬೆನೆಟ್ಟರು ಕ್ರಿಸ್ತನ ಕೃಪೆ ನನ್ನ ಮೇಲಿದೆ ಎಂದು ನನ್ನ ತಂದೆಗೆ ಹೇಳಿದ್ದರಂತೆ" ಎಂದು ಬೆಂಜಮಿನ್ ರೈಸ್ ಜ್ಞಾಪಿಸಿಕೊಂಡಿದ್ದಾರೆ.[1]

ಧಾರ್ಮಿಕ ಮನೋಭಾವವಿದ್ದ ಬೆಂಜಮಿನ್ ರೈಸರನ್ನು ಆತನ ಹದಿನೈದನೆಯ ವರ್ಷದಲ್ಲಿ ಚರ್ಚೊಂದರ ಸದಸ್ಯನನ್ನಾಗಿ ದಾಖಲಿಸಲಾಯಿತು. ಇದಾದ ಸ್ವಲ್ಪ ದಿನಕ್ಕೆ ಮಕ್ಕಳಿಲ್ಲದಿದ್ದ ಆತನ ಚಿಕ್ಕಪ್ಪ ಫಿಲಿಪ್ ಬೆಂಜಮಿನ್ನರನ್ನು ದತ್ತು ತೆಗೆದುಕೊಳ್ಳಲು ಯೋಚಿಸಿದರು. ದತ್ತು ಕಾರ್ಯವೇನೂ ನಡೆಯಲಿಲ್ಲವಾದರೂ ಆತ ಕಾನೂನಿನ ವ್ಯಾಸಂಗವನ್ನು ನಿಲ್ಲಿಸಿ ಚಿಕ್ಕಪ್ಪನ ಹಣಕಾಸಿನ ವ್ಯವಹಾರದಲ್ಲಿ ನೆರವಾಗಬೇಕಾಯಿತು. ಈ ವೃತ್ತಿಯಲ್ಲಿ ಸಾಕಷ್ಟು ಬಿಡುವು ದೊರೆಯುತ್ತಿದ್ದುದರಿಂದ ಆ ಸಮಯದಲ್ಲಿ ಬೆಂಜಮಿನ್ ಕ್ರೈಸ್ತಧರ್ಮದ ಕೆಲಸದಲ್ಲಿ ಇನ್ನಷ್ಟು ಶ್ರದ್ಧೆ, ಆಸಕ್ತಿಗಳಿಂದ ತೊಡಗುವುದು ಸಾಧ್ಯವಾಯಿತು.

ಮನಸ್ಸಿನಲ್ಲಿ ಧರ್ಮಶ್ರದ್ಧೆ ಇದ್ದರೂ ಲೌಕಿಕದಲ್ಲಿಯೇ ವ್ಯವಹರಿಸುತ್ತಿದ್ದ ಬೆಂಜಮಿನ್ ರೈಸರನ್ನು ಬಡಿದೆಬ್ಬಿಸಿದ್ದು Evangelical Magazine ಎಂಬ ಪತ್ರಿಕೆಯಲ್ಲಿದ್ದ "Those who have enjoyed the advantages of a religious education, and not improved their privileges while young, are seldom known to do so when they grow older and often die in their sins" ಎಂಬ ಮಾತುಗಳು.[2] ಇದರೊಂದಿಗೆ, ಬಳ್ಳಾರಿಯಲ್ಲಿ ಧರ್ಮಪ್ರಚಾರಕನಾಗಿ ಕೆಲಸ ಮಾಡುತ್ತಿದ್ದ ಜಾನ್ ಹ್ಯಾಂಡ್ ಎಂಬಾತ ಲಂಡನ್ನಿಗೆ ಬಂದಿದ್ದಾಗ ನೀಡಿದ ಭಾಷಣ ಅವರ ಮೇಲೆ ಗಾಢಪರಿಣಾಮ ಬೀರಿ ಆತ ಕ್ರೈಸ್ತ ದೈವತಶಾಸ್ತ್ರವನ್ನೇ ಪ್ರಮುಖವಾಗಿ ಅಭ್ಯಸಿಸಲು ದಾರಿ ಮಾಡಿಕೊಟ್ಟಿತು.

ಕ್ರಿ.ಶ. ೧೮೩೪ರ ಜನವರಿಯಲ್ಲಿ ಬೆಂಜಮಿನ್‌ರೈಸರು ಪೈ ಸ್ಮಿತ್‌ರ ನೇತೃತ್ವದಲ್ಲಿ ನಡೆಯುತ್ತಿದ್ದ ಹೋಮರ್ಟನ್ ಕಾಲೇಜನ್ನು ಸೇರಿದರು. ಆ ವೇಳೆಗಾಗಲೇ ಹಿಬ್ರೂ ಹಾಗೂ ಗ್ರೀಕ್ ಭಾಷೆಗಳ ಅಭ್ಯಾಸವನ್ನು ಆರಂಭಿಸಿದ್ದ ಬೆಂಜಮಿನ್, ಪೈ ಸ್ಮಿತ್‌ರ ಪ್ರಭಾವಶಾಲಿಯಾದ ವ್ಯಕ್ತಿತ್ವದಿಂದ ಉದ್ದೀಪಿತರಾಗಿ ದೈವತಶಾಸ್ತ್ರದ ವ್ಯಾಸಂಗದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದರು. ಇದರ ಫಲವಾಗಿ ೧೮೩೬ರ ಜುಲೈ ತಿಂಗಳಿನಲ್ಲಿ ಲಂಡನ್ನಿನ ಸಿಲ್ವರ್

1 ಇ.ಪಿ. ರೈಸ್., ಪೂರ್ವೋಕ್ತ, ಪು. ೧೭

2 ಅದೇ, ಪು. ೧೮.

ಸ್ಟ್ರೀಟ್‌ನಲ್ಲಿರುವ ಚಾಪೆಲ್‌ನಲ್ಲಿ ಅವರಿಗೆ ಧರ್ಮಪ್ರಚಾರಕನ ದೀಕ್ಷೆಯನ್ನು ನೀಡಿ ದಕ್ಷಿಣ ಭಾರತದ ಪ್ರಮುಖ ನಗರಗಳಲ್ಲಿ ಒಂದಾಗಿದ್ದ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುವಂತೆ ಆದೇಶಿಸಲಾಯಿತು.[1]

ಇದಾದ ಒಂದು ವಾರದ ನಂತರ, ಆಗಸ್ಟ್ ೨ನೇ ತಾರೀಖಿನಂದು ಬೆಂಜಮಿನ್ ರೈಸರ ವಿವಾಹ ಈಲಿಂಗ್ಟನ್‌ನ ಯೂನಿಯನ್‌ಚಾಪೆಲ್ ಸದಸ್ಯೆಯಾಗಿದ್ದ ಜೇನ್‌ಪೀಚ್ ಸಿಂಗರ್ ಎಂಬಾಕೆಯೊಂದಿಗೆ ಈಲಿಂಗ್ಟನ್‌ನ ಸಂತ ಮೇರಿಯ ಚರ್ಚಿನಲ್ಲಿ ನೆರವೇರಿತು. ಧರ್ಮಪ್ರಚಾರಕಳಾಗಿ ಸೇವೆ ಸಲ್ಲಿಸಬೇಕೆಂಬ ಉತ್ಕಟ ಇಚ್ಛೆ ಹೊಂದಿದ್ದ ಆಕೆ ಚೀನಾ ಮತ್ತು ಇತರ ಪೌರಾತ್ಯ ರಾಷ್ಟ್ರಗಳಲ್ಲಿ ಕೆಲಸಮಾಡುತ್ತಿದ್ದ 'ಫೀಮೇಲ್ ಎಜುಕೇಶನ್ ಸೊಸೈಟಿ' ಯಲ್ಲಿ ಸೇವೆಸಲ್ಲಿಸಲು ಪ್ರಯತ್ನಿಸುತ್ತಿದ್ದಳು. ಸತಿ-ಪತಿಯರಿಬ್ಬರ ಮನೋಧರ್ಮವೂ ಒಂದೇ ಆಗಿದ್ದುದರಿಂದ ಕೂಡಲೇ ಅವರು ಕಾರ್ಯ ಪ್ರವೃತ್ತರಾಗುವುದು ಸಾಧ್ಯವಾಯಿತು.

೧೮೩೬ರ ಆಗಸ್ಟ್ ೩೧ರಂದು ಸಂಜೆ ೬.೩೦ಕ್ಕೆ ರೈಸ್ ದಂಪತಿಗಳು, ಟರ್ನ್‌ಬುಲ್ ದಂಪತಿಗಳು ಹಾಗೂ ಥಾಮ್ಸನ್ ಎಂಬ ಇನ್ನೊಬ್ಬ ಧರ್ಮಪ್ರಚಾರಕರೊಂದಿಗೆ ಭಾರತದತ್ತ ಪಯಣ ಬೆಳಸಿದರು. ಧರ್ಮಪ್ರಚಾರಕರ ಈ ಯಾನ ಲಂಡನ್ ಸೊಸೈಟಿಯ ನಿರ್ದೇಶಕ ವರ್ಗದಲ್ಲಿ ಸಂತಸವನ್ನು ತಂದಿತ್ತು.[2] ಸುಮಾರು ೧೨೦ ದಿನಗಳಷ್ಟು ದೀರ್ಘವಾದ ಈ ಪ್ರಯಾಣದಲ್ಲಿ ವಾರಾಂತ್ಯವನ್ನು ಬಿಟ್ಟರೆ ಉಳಿದೆಲ್ಲ ದಿನಗಳನ್ನು ಅವರು ಕನ್ನಡ ಭಾಷೆಯ ಮೂಲಭೂತ ಅಂಶಗಳನ್ನು ಕಲಿಯುವುದರಲ್ಲಿ ಕಳೆದರು. ೧೮೩೬ರ ಡಿಸೆಂಬರ್ ೨೯ರಂದು ಮದ್ರಾಸನ್ನು ತಲುಪಿದ ಧರ್ಮಪ್ರಚಾರಕರ ತಂಡ ಒಂದು ವಾರ ಅಲ್ಲೇ ಉಳಿಯಿತು. ೧೮೩೭ರ ಜನವರಿ ೬ರಂದು ರೈಸ್ ದಂಪತಿಗಳು ಮೇನೆಗಳಲ್ಲಿ ಕುಳಿತು ಬೆಂಗಳೂರಿನತ್ತ ಪ್ರಯಾಣ ಬೆಳಸಿದರು. ಜನವರಿ ೧೩ರಂದು ಶುಕ್ರವಾರ ಬೆಂಗಳೂರನ್ನು ತಲುಪಿ ಸೌತ್ ಪೆರೇಡ್ ರಸ್ತೆಯಲ್ಲಿರುವ (ಈಗಿನ ಎಂ.ಜಿ. ರಸ್ತೆ) ಸಂತ ಮಾರ್ಕ್ ದೇವಾಲಯದ ಮಿಷನ್ ಹೌಸ್‌ನಲ್ಲಿ ನೆಲೆಗೊಂಡರು. ಈ ಮನೆಯೇ ಲೂಯಿ ರೈಸರ ಜನ್ಮಸ್ಥಳ.

---

1 ಬೆಂಜಮಿನ್ ರೈಸರನ್ನು ಬೆಂಗಳೂರಿಗೇ ನೇಮಿಸಿದ್ದೇಕೆ ಎನ್ನುವ ವಿವರಗಳು L.M.S.ನ ೧೮೩೫ರ ವರದಿಯಲ್ಲಿ ದೊರೆಯುತ್ತದೆ. ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದ ರೀವ್ ಮತ್ತು ಕ್ಯಾಂಪ್‌ಬೆಲ್ ಇವರಲ್ಲಿ ರೀವ್ ದಂಪತಿಗಳು ಅನಾರೋಗ್ಯದ ಕಾರಣದಿಂದ ಲಂಡನ್ನಿಗೆ ವಾಪಸ್ಸಾಗಬೇಕಾಯಿತು. Mr. Campbell is alone in this important station, to which the Directors have resolved to send another Missionary as soon as the services of individual can be obtained. (The report of the Directors to the General meeting of the London Missionary Society, 1835, p. 58)

2 "We have pleasure to state that the Ship Mary Ann, having on board the Rev. Messrs. Rice and Turnbull and their wives, and the Rev. W. Thompton ...... arrived a few days since at Portsmouth" – Missionary Magazine and chronicle, Dec. 1836 (Butler M.L., **Centenary Booklet**, Mithralaya, 1942, p 1 ಇಲ್ಲಿ ಉದ್ಧೃತ).

ರೈಸ್ ಕುಟುಂಬದ ಈವರೆಗಿನ ಚರಿತ್ರೆಯನ್ನು ಗಮನಿಸಿದರೆ ಸ್ಪಷ್ಟವಾಗುವುದಿಷ್ಟು - ಇವರೆಲ್ಲ ಬಹುಶಃ ಕೆಳ ಮಧ್ಯಮ ಅಥವಾ ಮಧ್ಯಮ ವರ್ಗದವರು. ಉಣ್ಣೆಬಟ್ಟೆ ಉದ್ಯಮ, ಮುದ್ರಣ, ಟೈಲರಿಂಗ್, ಬೀಗ ತಯಾರಿಕೆ, ಹೋಟೆಲ್ ಮಾಲಿಕತ್ವ, ಕಿರಾಣಿ ಅಂಗಡಿ ಮುಂತಾದ ವಹಿವಾಟುಗಳಲ್ಲಿ ತೊಡಗಿದ್ದವರು. ಶ್ರಮ ಸಹಿಷ್ಣುಗಳು. ಕ್ರೈಸ್ತಧರ್ಮದಲ್ಲಿ ದೃಢವಾದ ನಂಬಿಕೆ, ಶ್ರದ್ಧೆಗಳನ್ನು ಹೊಂದಿದ್ದರಾದರೂ ಪೂರ್ಣಾವಧಿಯಾಗಿ ಅಧ್ಯಯನ, ಅಧ್ಯಾಪನ, ಪ್ರವಚನ, ಮುಂತಾದ ಬೌದ್ಧಿಕ ಕೆಲಸ ಕಾರ್ಯಗಳಲ್ಲಿ ತೊಡಗಿದವರಲ್ಲ. ಬೆಂಜಮಿನ್ ರೈಸರೊಬ್ಬರೇ ಈ ಮಾತಿಗೆ ಅಪವಾದ. ತನ್ನ ಜನ್ಮಭೂಮಿಯಿಂದ ಬಹು ದೂರ ಹೋಗಿ, ತನ್ನವರಲ್ಲದ ಜನರ ನಡುವೆ, ತನಗೆ ಸಂಪೂರ್ಣವಾಗಿ ಅಪರಿಚಿತವೇ ಆಗಿದ್ದ ಸಾಂಸ್ಕೃತಿಕ ವಲಯದಲ್ಲಿ ಆತ ಬದುಕಿ ಬಾಳಬೇಕಾಯಿತು. ಹಾಗಾಗಿ ಬೆಂಜಮಿನ್ ರೈಸ್ ದಂಪತಿಗಳಿಗೆ ತಮ್ಮ ಕಾರ್ಯಸ್ಥಾನವಾದ ಬೆಂಗಳೂರಿನ, ಅರ್ಥಾತ್ ಕನ್ನಡನಾಡಿನ ಜನರ ನಡೆ ನುಡಿ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಆವಶ್ಯಕವಾಯಿತು. ಇನ್ನಾವುದೇ ವೃತ್ತಿಯನ್ನು ಕೈಗೊಂಡಿದ್ದರೂ ಈ ಪರಿಚಯ ಕೇವಲ ಮೇಲ್ಮಟ್ಟದ್ದಾಗಿದ್ದಿದ್ದರೂ ಅಡ್ಡಿ ಇರುತ್ತಿರಲಿಲ್ಲ. ಆದರೆ ಮತಪ್ರಚಾರಕ್ಕೆಂದೇ ಬಂದ ಇವರು ಇಲ್ಲಿಯ ಜನರನ್ನು ತಮ್ಮ ಧರ್ಮದ ಕಡೆಗೆ ಸೆಳೆದುಕೊಳ್ಳುವ ಕಾರ್ಯದ ಅನಿವಾರ್ಯ ಅಂಗವಾಗಿ ಇಲ್ಲಿನವರ ಮತಧರ್ಮ ಗಳನ್ನು ಹಳಿಯಲೆಂದೇ ಭಾರತೀಯ ಸಂಪ್ರದಾಯ, ಕಾವ್ಯ, ಶಾಸ್ತ್ರ, ಪುರಾಣ, ಇತಿಹಾಸಗಳನ್ನು ಅಭ್ಯಸಿಸಬೇಕಾಯಿತು. "ಮಿಷನರಿಗಳು ಯಾವುದೇ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ ಕಾರ್ಯವನ್ನು ತೆಗೆದುಕೊಳ್ಳಲಿ, ಅದರ ಹಿಂದೆ ಕ್ರೈಸ್ತಧರ್ಮಪ್ರಚಾರ ಮತ್ತು ಮತಾಂತರ ಏಕಮೇವ ಪ್ರಚೋದನೆಯಾಗಿದ್ದಿತ್ತು" ಎಂಬ ಶ್ರೀನಿವಾಸ ಹಾವನೂರರ ಮಾತುಗಳು[1] ಬೆಂಜಮಿನ್ ರೈಸರ ವಿಷಯದಲ್ಲಿಯೂ ನಿಜ. ಅವರೇ ಉದ್ಧರಿಸಿರುವ[2] ಮೋಲ್ಸ್‌ವೆರ್ಥ್ ಎಂಬ ಮಿಷನರಿಯ "It was undertaken not from a thirst after honour or emolument, but from an humble desire of promoting the propogation of the glorious Gospel; and it was continued by the energy of this desire through sickness and weakness and against troubles and difficulties and grievous discouragement" ಎಂಬ ಮಾತು ಬೆಂಜಮಿನ್ ರೈಸರನ್ನೂ ಸೇರಿಸಿದಂತೆ ಆ ಕಾಲದ ಬಹುಪಾಲು ಮಿಷನರಿಗಳ ಮನೋಧರ್ಮವನ್ನು ಬಿಂಬಿಸುತ್ತದೆ. ಆದರೆ ತಂದೆ ತಾಯಿಯರ ಅಧ್ಯಯನಶೀಲತೆ ಲೂಯಿರೈಸರ ವಿಷಯದಲ್ಲಿ ಮತ-ಮತಾಂತರ ಗಳೆಂಬ ಸೀಮಿತ ಮಟ್ಟದಿಂದ ಬಹಳ ಎತ್ತರಕ್ಕೆ ಏರಿ ನಾಡು ನುಡಿಯ ಬಗ್ಗೆ ಅಭಿಮಾನ ವನ್ನು ಬೆಳೆಸಿತು ಎಂಬುದು ಗಮನಾರ್ಹ ಅಂಶವಾಗಿದೆ. ಈ ಹಿನ್ನಲೆಯಲ್ಲಿ ಬೆಂಜಮಿನ್ ರೈಸ್ ಧಂಪತಿಗಳ ಕಾರ್ಯಚಟುವಟಿಕೆಗಳನ್ನು ಸ್ಥೂಲವಾಗಿ ಪರಿಚಯಿಸಿಕೊಳ್ಳಬೇಕಿದೆ.

---

1 ಹ.ಶ್ರೀ.ಅ., ಪು. ೧೪

2 ಅಲ್ಲೇ.

ಬೆಂಜಮಿನ್ ರೈಸ್ ದಂಪತಿಗಳ ಕಾರ್ಯ ಚಟುವಟಿಕೆಗಳು

ಬೆಂಜಮಿನ್ ರೈಸ್ ದಂಪತಿಗಳ ಧರ್ಮಪ್ರಚಾರಕಾರ್ಯ ಮುಖ್ಯವಾಗಿ ಅಧ್ಯಯನ, ಬೋಧನೆ ಹಾಗೂ ಗ್ರಂಥಲೇಖನಗಳೆಂಬ ಅಂಶಗಳನ್ನು ಒಳಗೊಂಡಿದ್ದವು.

ಅಧ್ಯಯನ :

ವಿದೇಶೀಯರಾದ ಬೆಂಜಮಿನ್ನರಿಗೆ ಇಲ್ಲಿಯ ಭಾಷೆಯನ್ನು ಮೊದಲಿಗೆ ಕಲಿಯುವುದು ಅತ್ಯಂತ ಅಗತ್ಯವಾಗಿತ್ತು. ಹಡಗಿನಲ್ಲಿ ಪಯಣಿಸುವಾಗಲೇ ಈ ಬಗ್ಗೆ ಗಮನಹರಿಸಿದ್ದ ಆತ ಬಹುಬೇಗ ಕನ್ನಡದಲ್ಲಿ ಓದಿ, ಬರೆದು, ಸಂಭಾಷಿಸಲು ಕಲಿತರು ಎಂಬುದನ್ನು ಪೈ ಸ್ಮಿತ್‌ರಿಗೆ ೧೮೩೯ರ ಡಿಸೆಂಬರ್‌ನಲ್ಲಿ ಅವರೇ ಬರೆದ ಪತ್ರವೊಂದರಿಂದ ತಿಳಿದು ಬರುತ್ತದೆ.[1] ಈ ರೀತಿ ಕಲಿತಿದ್ದನ್ನು ಪ್ರಯೋಗಿಸುವ ಅವಕಾಶ ಕೂಡಾ ಅವರಿಗೆ ಕೂಡಲೇ ಒದಗಿತು. ಹೇಗೆಂದರೆ ೧೮೨೦ರಷ್ಟು ಹಿಂದಿನಿಂದಲೇ ಬೆಂಗಳೂರಿನಲ್ಲಿ ಲಂಡನ್ ಮಿಷನ್ ಕಾರ್ಯ ನಿರ್ವಹಿಸುತ್ತಿತ್ತಾದರೂ ಅದು ಈಗಿನ ದಂಡುಪ್ರದೇಶಕ್ಕಷ್ಟೇ ಸೀಮಿತವಾಗಿತ್ತು. ಇಂಗ್ಲಿಷ್ ಹಾಗೂ ತಮಿಳು ಭಾಷಿಕರೇ ಅಧಿಕವಾಗಿದ್ದ ಆ ಪ್ರದೇಶದಲ್ಲಿ ಆಯಾ ಭಾಷೆಗಳಲ್ಲಿ ಚರ್ಚುಗಳು ಕೆಲಸಮಾಡುತ್ತಿದ್ದವು. ಆದರೆ ಕನ್ನಡಿಗರೇ ಅಧಿಕವಾಗಿದ್ದ "ಪೇಟೆ"ಯಲ್ಲಿ (ಈಗಿನ ಅವೆನ್ಯೂರಸ್ತೆ, ಮಾರ್ಕೆಟ್, ಹಳೆತರಗುಪೇಟೆ ಮುಂತಾದವುಗಳನ್ನು ಒಳಗೊಂಡ ಪ್ರದೇಶ) ಸುಮಾರು ೧೮೩೭ರವರೆಗೆ ಚರ್ಚನ್ನು ಸ್ಥಾಪಿಸುವುದಿರಲಿ, ಆಸುಪಾಸಿನ ಹಳ್ಳಿಗಳಲ್ಲಿ ವಾಸಿಸಲೂ ಕ್ರೈಸ್ತಧರ್ಮ ಪ್ರಚಾರಕರಿಗೆ ಅವಕಾಶವಿರಲಿಲ್ಲ. ಬಹಳ ಪ್ರಯತ್ನದ ನಂತರ ರೆವರೆಂಡ್ ಕ್ಯಾಂಪ್‌ಬೆಲ್ ಎಂಬಾತ ಪೇಟೆ ಪ್ರದೇಶದಲ್ಲಿ ಕನ್ನಡ ಚರ್ಚೊಂದನ್ನು ೧೮೩೭ರ ವೇಳೆಗೆ ಆರಂಭಿಸಿದ್ದ. ಹಾಗಾಗಿ ಬೆಂಜಮಿನ್ ರೈಸ್ ಕನ್ನಡದಲ್ಲಿಯೇ ವ್ಯವಹರಿಸುವುದು ಸಾಧ್ಯವಾಯಿತು. "೧೮೩೯ರಲ್ಲಿ ಬೆಂಜಮಿನ್ ರೈಸ್ ದಂಪತಿಗಳು ತಮ್ಮ ವಾಸ್ತವ್ಯವನ್ನು ಸೈಂಟ್ ಮಾರ್ಕ್ಸ್ ರಸ್ತೆಯಲ್ಲಿದ್ದ ಮನೆಯಿಂದ ಕೋಟೆ ಪ್ರದೇಶದಲ್ಲಿನ ಮನೆಯೊಂದಕ್ಕೆ ಹಾಗೂ ೧೮೫೨ರಲ್ಲಿ ಮಿಷನ್ ರಸ್ತೆಯಲ್ಲಿದ್ದ ಮಿಷನ್‌ಹೌಸ್‌ಗೆ ಬದಲಾಯಿಸಿದರು."[2] ಇದರಿಂದಾಗಿ ಅವರು ಜನಸಾಮಾನ್ಯರೊಂದಿಗೆ ಹೆಚ್ಚಾಗಿ ಬೆರೆಯಲು ಸಾಧ್ಯವಾಯಿತು.

---

1 "On my arrival in the country, I determined to make the acquisition of the native language, the undivided object of attention until I had mastered it. In about seven months, I was able to converse a little and take part in Catechetical exercises with the native Christians; and in two or three months after, to commence regular preaching. From that time to the present, preaching and teaching in the Canarese language have been my daily employment." Rice. E.P., ಪೂರ್ವೋಕ್ತ, ಪು. ೩೮.

2 Rice, B.L., **Biographical Notes**, p 2.

ಬೋಧನೆ :

೧೮೪೨ರಲ್ಲಿ ಶ್ರೀಮತಿ ಜೇನ್ ರೈಸ್ 'ಮಿತ್ರಾಲಯ' ಎಂಬ ಹೆಣ್ಣುಮಕ್ಕಳ ವಸತಿ ಸಹಿತ ಕನ್ನಡ ಶಾಲೆಯನ್ನು ಆರಂಭಿಸಿದಾಗ ಕಲಿಕೆಯೊಂದಿಗೆ ಈ ದಂಪತಿಗಳ ಕನ್ನಡದ ಬೋಧನೆಯೂ ಆರಂಭವಾಯಿತು. ವಿದ್ಯಾರ್ಥಿಗಳ ಬೈಬಲ್ ಜ್ಞಾನವನ್ನು ಪರೀಕ್ಷಿಸುವುದರೊಂದಿಗೆ ತರಗತಿಗಳಲ್ಲಿ ಕನ್ನಡವನ್ನು ಬಳಸಲು ಆರಂಭಿಸಿದ ಬೆಂಜಮಿನ್ ರೈಸ್ ಮುಂದೆ ಕನ್ನಡದಲ್ಲಿಯೇ ಅನೇಕ ಪಠ್ಯಪುಸ್ತಕಗಳನ್ನು ರಚಿಸಿದರಲ್ಲದೇ ಇತರ ಶಾಲೆಗಳ ವಿದ್ಯಾರ್ಥಿಗಳ ಕನ್ನಡಜ್ಞಾನವನ್ನು ಪರೀಕ್ಷಿಸಲು ನಿಯುಕ್ತರಾದದ್ದೂ ಇದೆ. ಇದರೊಂದಿಗೆ ಕನ್ನಡದಲ್ಲಿ ಧರ್ಮಪ್ರಚಾರದ ಕಾರ್ಯವಂತೂ ನಡೆದೇ ಇತ್ತು. ೧೮೪೫ರ ವೇಳೆಗೇ ಬೆಂಗಳೂರಿನ ಸುತ್ತಮುತ್ತಲಿನ ಪ್ರಾಂತ್ಯಗಳಲ್ಲಿ ಮಾತ್ರವಲ್ಲದೆ ಹೊಸೂರು, ಬಳ್ಳಾರಿ ಮುಂತಾದ ಕಡೆಗಳಿಗೂ ಹೋಗಿ ಬೆಂಜಮಿನ್ ರೈಸರು ಧರ್ಮಪ್ರಚಾರ ಮಾಡುತ್ತಿದ್ದ ದಾಖಲೆಗಳಿವೆ.[1]

ಗ್ರಂಥರಚನೆ :

ಅಧ್ಯಯನ, ಅಧ್ಯಾಪನದ ಜೊತೆಜೊತೆಗೆ ಬೆಂಜಮಿನ್‌ರೈಸ್ ಗ್ರಂಥರಚನೆಯಲ್ಲಿಯೂ ತೊಡಗಿದರು. ಅವುಗಳಲ್ಲಿ

೧. ಬೈಬಲ್‌ನ ಸಂಪಾದನೆ (೧೮೪೦, ೧೮೬೫, ೧೮೭೭)
೨. ಬಾಲೋಪದೇಶ (೬ನೇ ಮು. ೨ ಭಾಗಗಳಲ್ಲಿ, ೧೮೫೦)
೩. ಚಿಕ್ಕವರು ಮೊದಲಾಗಿ ಪಾಠಮಾಡತಕ್ಕ ವೇದಬೋಧನೆ (೧೮೫೦)
೪. Paranjyothi and Krupe (೧೮೫೯)
೫. ಬುನ್ಯನ್‌ನ 'The Piligrim's progress' ನ ಅನುವಾದ (೧೮೬೧)
೬. Catechism (೧೮೬೧)
೭. ವೇದಸಾರ (೨ನೇ ಮು. ೧೮೬೫)
೮. ಹೊಸ ಒಡಂಬಡಿಕೆ (೧೮೮೧)
೯. ಕನ್ನಡ ಸಂಗೀತಗಳ ಸಂಪಾದನೆ (೧೯೦೦)

ಮುಂತಾದವು ಕ್ರೈಸ್ತಮತಕ್ಕೆ ಸಂಬಂಧಿಸಿದವಾದರೆ,

೧೦. ಲೋಕಚರಿತ್ರೆ (೧೮೪೬)
೧೧. ಭೂಗೋಳ ಶಾಸ್ತ್ರಸಾರ (೧೮೪೮)
೧೨. ಚಿಕ್ಕವರಿಗೆ ತಕ್ಕಂಥ ಪಾಠಗಳು (೨ ಭಾಗಗಳಲ್ಲಿ, ೧೮೫೫, ೧೮೫೭)

1 L.M.S. Report, 1845, p 74.

೧೩. Canarese Second Book (From Tamil, ೧೮೬೧)

೧೪. Canarese Third Book (From Tamil, ೧೮೬೧)

೧೫. ಕನ್ನಡ ಮೊದಲನೇ ಪುಸ್ತಕ (೭ನೇ ಮು. ೧೮೬೨)

೧೬. ಗಣಿತ ವೈದ್ಯವು (೪ನೇ ಮು. ೧೮೬೯)

ಎಂಬವು ಪಠ್ಯಪುಸ್ತಕಗಳು.[1]

ಬೆಂಗಳೂರು ಬೈಬಲ್ ಸೊಸೈಟಿ, ಬೆಂಗಳೂರು ಟ್ರ್ಯಾಕ್ಟ್ ಅಂಡ್ ಬುಕ್ ಸೊಸೈಟಿ, ಲಂಡನ್ ಮಿಷನ್ ಸೊಸೈಟಿಯ ದಕ್ಷಿಣಭಾರತ ಸಮಿತಿ ಮುಂತಾದ ಸಂಸ್ಥೆಗಳ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ ಅವರು ಬೈಬಲ್‌ನ ಕನ್ನಡ ಆವೃತ್ತಿಯನ್ನು (೧೮೫೮) ಹೊರತರುವಲ್ಲಿ ಬಹುವಾಗಿ ಶ್ರಮಿಸಿದರು.

'ದಿ ಟ್ರ್ಯಾಕ್ಟ್ ಅಂಡ್ ಸ್ಕೂಲ್‌ಬುಕ್ ಸೊಸೈಟಿ'ಯ ವತಿಯಿಂದ ಪ್ರಕಟವಾಗುತ್ತಿದ್ದ 'ಅರುಣೋದಯ' ಎಂಬ ದ್ವೈಭಾಷಿಕ (ಕನ್ನಡ, ಇಂಗ್ಲಿಷ್) ಸಚಿತ್ರ ಮಾಸಪತ್ರಿಕೆಯನ್ನು ೧೮೬೨ರಿಂದ ೧೮೬೭ರವರೆಗೆ ಬೆಂಜಮಿನ್ ರೈಸ್ ಸಂಪಾದಿಸುತ್ತಿದ್ದರು. 'ಅರುಣೋದಯ'ವು ಕ್ರೈಸ್ತಮತೀಯ ಸಂಗತಿಗಳನ್ನು ಪ್ರಚಾರಪಡಿಸಲೆಂದೇ ಆರಂಭವಾದ ಪತ್ರಿಕೆಯಾದರೂ ವೈದ್ಯಸೂಚನೆ, ಲೋಕಚರಿತ್ರೆ, ಸಮಾಚಾರಗಳು, ಸುಖ ಕಾಪಾಡುವ ರೀತಿ ಮುಂತಾದ ವಿಷಯಗಳೂ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇದೆಲ್ಲಕ್ಕಿಂತ ಮಹತ್ವದ್ದೆಂದರೆ ಈ ಪತ್ರಿಕೆಯಲ್ಲಿ ಹಿಂದೂಧರ್ಮದ ಸಂಗತಿಗಳಿಗೆ ದೊರಕಿರುವ ಪ್ರಮುಖತೆ. 'ಹಿಂದೂ ಧರ್ಮ ಮತಗಳ ಉತ್ಪತ್ತಿ, ಸ್ಥಿತಿ, ಲಯ'ವೆಂಬ ಶೀರ್ಷಿಕೆಯ ಲೇಖನ ಸರಣಿಯಲ್ಲಿ ವೇದಗಳ ಉತ್ಪತ್ತಿ ವೃತ್ತಾಂತ, ಆರ್ಯರು ಪ್ರಸರಿಸಿಕೊಂಡದ್ದು, ಅವರ ಪದ್ಧತಿಯ ವಿಕೃತಿ, ಕುಲಾಚಾರದ ಉತ್ಪತ್ತಿ ಇತ್ಯಾದಿ ವಿಷಯಗಳನ್ನು ಸವಿವರವಾಗಿ ಚರ್ಚಿಸಲಾಗಿದೆ.[2]

ಗಂಡನ ಈ ಎಲ್ಲಾ ಕಾರ್ಯಗಳಿಗೆ ಬೆಂಬಲವಾಗಿ ನಿಂತವರು ಶ್ರೀಮತಿ ರೈಸರು. ಕನ್ನಡ ಕಲಿಕೆಯ ಬಗ್ಗೆ ಆಕೆಗಿದ್ದ ವಿಶೇಷವಾದ ಆಸಕ್ತಿಯನ್ನು ಕುರಿತು ಬೆಂಜಮಿನ್ ರೈಸರೇ

1 Barnet L.D., **A Catalogue of the Kannada, Badaga and Kurg books in the library of the British Museum**. London, 1910, p 142-143 ಇಲ್ಲಿ ಉದ್ಧೃತ.

2 ಕ್ರೈಸ್ತ ಪತ್ರಿಕೆಗಳಲ್ಲಿಯೂ ಹಿಂದೂ ಮತದ ವಿಚಾರಗಳನ್ನು ಬರೆಯುತ್ತಿದ್ದುದು ಆ ಕಾಲದ ವಾಡಿಕೆ. ಉದಾಹರಣೆಗೆ ವೆಸ್ಲಿಯನ್ ಮಿಷನ್ನಿನಿಂದ ಪ್ರಕಟವಾಗುತ್ತಿದ್ದ Harvest Field ಎಂಬ ಪತ್ರಿಕೆಯಲ್ಲಿ Hindu Feasts ಎಂಬ ಅಂಕಣ ಪ್ರಕಟವಾಗುತ್ತಿತ್ತು. ಪತ್ರಿಕೆಯ ೧೮೬೫ರ ಮೇ ಸಂಚಿಕೆಯಲ್ಲಿ Ugadi Habba ಎಂಬ ಲೇಖನವನ್ನು J. Hutchon ಎಂಬಾತ ಬರೆದಿದ್ದು (ಪು. ೧೫೧-೧೫೪) ಅದರಲ್ಲಿ 'ಶತಾಯುರ್ವಜ್ರ ದೇಹಾಯ' 'ಅಕಾಲ ಮೃತ್ಯು ಹರಣಂ' ಮುಂತಾದ ಶ್ಲೋಕಗಳಿಗೆ ವ್ಯಾಖ್ಯಾನವನ್ನು ನೀಡಲಾಗಿದೆ. ಆದರೆ ಬರಹದ ಕಡೆಯಲ್ಲಿ ಹಿಂದೂ ಧರ್ಮವನ್ನು ತಿರಸ್ಕರಿಸಿ ಕ್ರೈಸ್ತ ಮತದ ಪಾರಮ್ಯವನ್ನು ಸಾರುವುದು ಈ ಬಗೆಯ ಲೇಖನಗಳ ಉದ್ದೇಶವಾಗಿತ್ತು!

"She had a very fair knowledge of the language, could read and write it without difficulty, could understand and profit by Canarese preaching which she regularly attended.... She was always able to examine the Canarese lessons in her school, and carry on conversation with females and others as occasion required" ಎಂದಿದ್ದಾರೆ.[1] ಸತತ ಅನಾರೋಗ್ಯದ ನಡುವೆಯೂ ಆಕೆ ಮಿತ್ರಾಲಯ ಶಾಲೆಯ ಏಳಿಗೆಗಾಗಿ ಎಡೆಬಿಡದೆ ದುಡಿದು ೧೮೬೪ರ ಮಾರ್ಚ್ ೧೧ರಂದು ನಿಧನರಾದರು. ಮುಂದೆ ಬೆಂಜಮಿನ್ನರ ಕೈಹಿಡಿದ ಶ್ರೀಮತಿ ಮುಲ್ಲರ್ ಎಂಬಾಕೆಯೂ ಇದೇ ಮನೋಧರ್ಮದವರು. ಐವತ್ತು ವರ್ಷಗಳಷ್ಟು ದೀರ್ಘಕಾಲ ಕ್ರೈಸ್ತಧರ್ಮ ಪ್ರಚಾರಕ್ಕೆಂದು ಸಲ್ಲಿಸಿದ ಸೇವೆಗಾಗಿ ೧೮೮೭ರಲ್ಲಿ ಬೆಂಜಮಿನ್ ರೈಸರನ್ನು ಸತ್ಕರಿಸಲಾಯಿತು. ಅದಾದ ಕೆಲವೇ ದಿನಗಳಲ್ಲಿ (ಫೆಬ್ರವರಿ ೯, ೧೮೮೭) ಆತ ತೀರಿಕೊಂಡರು. ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ ಚರ್ಚೊಂದು ರೈಸರ ಅಂಕಿತವನ್ನು ಹೊಂದಿದೆ.

ಕ್ರೈಸ್ತಧರ್ಮ ಪ್ರಚಾರವೇ ತಮ್ಮ ಜೀವನದ ಪ್ರಮುಖ ಧ್ಯೇಯವೆಂದು ಭಾವಿಸಿ ಬಾಳಿದವರು ಬೆಂಜಮಿನ್ ರೈಸ್ ದಂಪತಿಗಳು. ಗ್ರಂಥರಚನೆ, ಶಾಲೆಗಳ ಸ್ಥಾಪನೆ, ಅಧ್ಯಾಪನಗಳಲ್ಲಿ ಇವರ ಸಾಧನೆಯನ್ನು ಅಲ್ಲಗೆಳೆಯುವಂತಿಲ್ಲವಾದರೂ ಅವೆಲ್ಲ ಅವರ ಧರ್ಮಪ್ರಚಾರಕಾರ್ಯದ ಅಂಗಗಳೇ ಆಗಿದ್ದವೆಂಬುದನ್ನು ಮರೆಯುವಂತಿಲ್ಲ. ಇಂತಹ ಕೌಟುಂಬಿಕ ಮತ್ತು ಸಾಮಾಜಿಕ ವಾತಾವರಣದಲ್ಲಿ ಹುಟ್ಟಿದ ಈ ದಂಪತಿಗಳ ಮಕ್ಕಳೂ ಧರ್ಮಪ್ರಚಾರಕರಾಗಿದ್ದಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಬೆಂಜಮಿನ್ನರ ಬದುಕಿ ಉಳಿದ ನಾಲ್ವರು ಗಂಡುಮಕ್ಕಳಲ್ಲಿ ಇಬ್ಬರು (ಹೆನ್ರಿ, ಎಡ್ವರ್ಡ್‌ಪೀಟರ್) ಮುಂದೆ ಧರ್ಮ ಪ್ರಚಾರಕರಾದರು. ಜೇಮ್ಸ್ ಮಾತ್ರ ಇಂಜಿನಿಯರ್ ಆದ.

ಈ ಶುದ್ಧ ಧಾರ್ಮಿಕ ವಾತಾವರಣದಲ್ಲಿ ಹುಟ್ಟಿ ಅನೇಕ ವರ್ಷಗಳ ಕಾಲ ತಂದೆ ತಾಯಿಯರ ಪ್ರೇರಣೆ - ಪ್ರಭಾವಗಳ ಅಡಿಯಲ್ಲಿ ಬೆಳೆದರೂ ಲೂಯಿ ರೈಸರ ಮನಸ್ಸು ಧರ್ಮಪ್ರಚಾರದ ಕಡೆಗೆ ಒಲಿಯದೇ ಇದ್ದದ್ದು ಗಮನಾರ್ಹ. ರೈಸರಿಂದ ರಚಿತವಾದ ಸಮಗ್ರ ಸಾಹಿತ್ಯವನ್ನು ಅವಲೋಕಿಸಿದಾಗ ಧಾರ್ಮಿಕ ವಿಷಯಗಳ ಬಗೆಗೆ, ಅದರಲ್ಲೂ ವಿಶೇಷವಾಗಿ ಕ್ರೈಸ್ತ ಧರ್ಮವನ್ನು ಕುರಿತಾದ ವಿಷಯಗಳ ಬಗೆಗೆ ರೈಸ್ ಯಾವ ರೀತಿಯ ಬರವಣಿಗೆಯನ್ನೂ ಮಾಡಿರುವುದು ಕಂಡುಬರುವುದಿಲ್ಲ. ಜೈನ, ಬೌದ್ಧ, ವೈದಿಕ ಮುಂತಾದ ಧರ್ಮಗಳನ್ನು ಕುರಿತು ವಿಶ್ಲೇಷಿಸುವಾಗಲೂ ತೌಲನಿಕವಾಗಿಯಾದರೂ ಅವರು ಕ್ರೈಸ್ತ ಧರ್ಮದ ವಿವರಗಳನ್ನು ಪ್ರಸ್ತಾಪಿಸಿಲ್ಲ. ಅವರು ತಮ್ಮ ಜೀವನದಲ್ಲಿ ಎಂದಿಗೂ ಸ್ವಮತ ಪ್ರಚಾರ, ಪರಮತನಿಂದನೆಯಂತಹ ಮಿಷನರಿ ಉದ್ದೇಶದ ಕಾರ್ಯಗಳಿಗೆ ಕೈಹಾಕಿದಂತೆ ತೋರುವುದಿಲ್ಲ. ಬದಲಿಗೆ ಭಾರತೀಯ ಇತಿಹಾಸ, ಕಲೆ, ಶಿಲ್ಪ, ಚಿತ್ರ ಮುಂತಾದ

1 **The Missionary Magazine and Chronicle,** vol XXVIII, 1864.

ಸಾಂಸ್ಕೃತಿಕ ವಿಷಯಗಳ ಕಡೆಗೆ ಅವರ ಆಸಕ್ತಿ ಧನಾತ್ಮಕವಾಗಿ ಹರಿಯಿತು. ಅವರ ವ್ಯಕ್ತಿತ್ವ ಈ ರೀತಿ ರೂಪುಗೊಳ್ಳಲು ಇದ್ದ ಕಾರಣಗಳೇನೋ ಈಗ ಸ್ಪಷ್ಟವಾಗಿ ಹೇಳುವುದು ಕಷ್ಟ. ಆದರೆ ಸಾಮಾಜಿಕ ಪರಿಸರ, ಯುಗಧರ್ಮ, ಹಾಗೂ ಸ್ವಂತ ಅಭಿರುಚಿಗಳು ಲೂಯಿ ರೈಸರ ಬದುಕನ್ನು ರೂಪಿಸಿದವೆಂದು ಊಹಿಸಬಹುದು.

ಜನನ :

ಭಾರತದಲ್ಲಿ ಸೇವೆ ಸಲ್ಲಿಸಿದ ಅನೇಕ ಪಾಶ್ಚಾತ್ಯ ವಿದ್ವಾಂಸರಂತೆ ಬಿ.ಎಲ್. ರೈಸರೂ ವಿದೇಶದಲ್ಲಿ ಹುಟ್ಟಿ, ಶಿಕ್ಷಣ ಪಡೆದು ಅನಂತರ ಭಾರತಕ್ಕೆ ಬಂದವರು ಎಂಬ ಭಾವನೆಯನ್ನು ಅನೇಕ ವಿದ್ವಾಂಸರು ವ್ಯಕ್ತಪಡಿಸಿದ್ದಾರೆ. ನಿದರ್ಶನಕ್ಕೆ :

1. "..... ಬಿ.ಎಲ್. ರೈಸ್, ಸಿ.ಐ.ಇ.ಯವರು ೧೮೩೭ನೆಯ ಇಸವಿ ಜುಲೈ ೧೭ರಲ್ಲಿ ಇಂಗ್ಲೆಂಡ್ ದೇಶದಲ್ಲಿ ಜನಿಸಿದರು" - ಸೋಸಲೆ ಕೃಷ್ಣಸ್ವಾಮಿ ಶಾಸ್ತ್ರಿ.[1]
2. "Rev. Benjamin Lewis Rice, ಇವನು ಇತರ ಸಾಮಾನ್ಯ ಮತಪ್ರಚಾರಕರಂತೆ ಜರ್ಮನಿಯಿಂದ ಈ ದೇಶಕ್ಕೆ ಬಂದು ೧೮೪೩ರಲ್ಲಿ ಮದ್ರಾಸಿನಲ್ಲಿ ಬಂದಿಳಿದನು" - ಮುತ್ತಣ್ಣ ಐ.ಮಾ.[2]
3. "ಶಾಸನ ತಜ್ಞ ರೈಸ್ ಹುಟ್ಟಿದ್ದು ಜರ್ಮನಿಯಲ್ಲಿ" - ಚಂದ್ರಶೇಖರ ಧೂಲೇಕರ.[3]

ರೈಸರು ಪಾಶ್ಚಾತ್ಯ ಮೂಲದವರಾದರೂ ಅವರು ಹುಟ್ಟಿದ್ದು ಬೆಂಗಳೂರಿನಲ್ಲಿ ಎಂಬ ಅಂಶ ಖಚಿತವಾಗಿ ನಿರ್ಧಾರವಾದದ್ದು ಇತ್ತೀಚೆಗೆ. "ಲೂಯಿ ರೈಸರು ೧೯೨೭ರಲ್ಲಿ ತೀರಿಕೊಂಡಮೇಲೆ ಅವರನ್ನು ಕುರಿತು ಅಧಿಕೃತವಾದ ಲೇಖನಗಳು ಇಂಗ್ಲೆಂಡ್, ಭಾರತಗಳಲ್ಲಿ ಪ್ರಕಟವಾದವು. ಅವುಗಳಲ್ಲಿ, ಪ್ರಬುದ್ಧ ಕರ್ನಾಟಕದ ಸಂಚಿಕೆ ೩೪ರಲ್ಲಿ ಆಗಿನ ಸಂಪಾದಕ ಎ.ಆರ್. ಕೃಷ್ಣಶಾಸ್ತ್ರಿಗಳು ಬರೆದ ಲೇಖನದಲ್ಲಿ, ರೈಸ್ ಅವರ ಜನ್ಮಸ್ಥಳ ಬೆಂಗಳೂರು ಎಂದೇ ಇದೆ"[4] ಎಂದು ಹಾವನೂರರು ಅಭಿಪ್ರಾಯಪಟ್ಟಿದ್ದಾರಾದರೂ ಈ ಮಾತಿಗೆ ಆಧಾರ ಸಾಲದು. ಏಕೆಂದರೆ ಕೃಷ್ಣಶಾಸ್ತ್ರಿಗಳು "ಮಿ॥ ಲೂಯಿರೈಸ್‌ರವರು ಪಾಶ್ಚಾತ್ಯರಾದರೂ ನಮ್ಮವರು - ನಮ್ಮ ದೇಶದಲ್ಲಿ ಹುಟ್ಟಿದವರು"[5] ಎಂದಿದ್ದಾರೇ ವಿನಃ ಬೆಂಗಳೂರೇ ರೈಸರ ಜನ್ಮಸ್ಥಳ ಎಂದು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಇನ್ನು ಉಳಿದಂತೆ Q.J.M.S., J.R.A.S. ಮುಂತಾದ ವಿದ್ವತ್ ಪತ್ರಿಕೆಗಳಲ್ಲಿ, ಬೆಂಗಳೂರಿನಿಂದ

---

1 ಕೀ.ಶೇ. ರೈಸ್. ವ್ಯ. ಪು. ೧.

2 ಪಾ.ವಿ.ಕ.ಸೇ. ಪು. ೩೨೧.

3 ಪೂರ್ವೋಕ್ತ.,

4 ಪೂರ್ವೋಕ್ತ.,

5 ಪ್ರ.ಕ. ಸಂ. ೩೪, ವಸ್ತುಕೋಶ, ಪು. ೮. ೧೯೨೮

ಹೊರಡುತ್ತಿದ್ದ ವಿಶ್ವಕರ್ನಾಟಕ, ವೃತ್ತಾಂತಪತ್ರಿಕೆ, ಬೆಂಗಳೂರ್ ಡೈಲಿ ಪೋಸ್ಟ್, ಕಲ್ಕತ್ತೆಯ ಸ್ಟೇಟ್ಸ್‌ಮನ್, ಲಂಡನ್ನಿನ ಟೈಮ್ಸ್, ಈವನಿಂಗ್ ಹೆರಾಲ್ಡ್, ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಶ್ರದ್ಧಾಂಜಲಿ ಲೇಖನಗಳಲ್ಲಿ ಎಲ್ಲಿಯೂ ಬೆಂಗಳೂರಿನ ಪ್ರಸ್ತಾಪವಿಲ್ಲ. ಈ ಮಾತಿಗೆ ಅಪವಾದವೆಂದರೆ 'ಹ್ಯಾರೋ ಅಬ್ಸರ್ವರ್' ಎಂಬ ಪತ್ರಿಕೆಯಲ್ಲಿನ ಲೇಖನ ಮಾತ್ರ. ಇದರಲ್ಲಿ ರೈಸರು ಬೆಂಗಳೂರಿನಲ್ಲಿ ಜನಿಸಿದರೆಂದು ಸ್ಪಷ್ಟವಾಗಿ ಬಹುಶಃ ಮೊತ್ತ ಮೊದಲ ಬಾರಿಗೆ ದಾಖಲಾಗಿದೆ.[1]

ಕನ್ನಡದಲ್ಲಿ ಪ್ರಕಟವಾಗಿರುವ ಮಾಹಿತಿಯನ್ನು ಅನುಲಕ್ಷಿಸಿ ಹೇಳುವುದಾದರೆ ರೈಸರು ಬೆಂಗಳೂರಿನಲ್ಲಿ ಹುಟ್ಟಿರಬೇಕು ಎಂಬ ಸಂದೇಹವನ್ನು ಪ್ರಾಯಶಃ ಮೊತ್ತಮೊದಲು ವ್ಯಕ್ತಪಡಿಸಿದವರು ಆರ್.ಆರ್. ಆತಗೂರರವರು.[2] ಆದರೆ ಅವರು ಯಾವ ಆಧಾರದ ಮೇಲೆ ಹೀಗೆ ಬರೆದರು ಎಂಬುದು ಸ್ಪಷ್ಟವಿಲ್ಲ. ಮುಂದೆ ೧೯೭೪ರಲ್ಲಿ ಶ್ರೀನಿವಾಸ ಹಾವನೂರರು ತಮ್ಮ ಮಹಾಪ್ರಬಂಧದಲ್ಲಿ ರೈಸರ ಜನ್ಮಸ್ಥಳ ಬೆಂಗಳೂರೇ ಎಂದು ಖಚಿತವಾಗಿ ತೋರಿಸಿಕೊಟ್ಟರು. ಲಂಡನ್ ಮಿಷನ್ ಸೊಸೈಟಿಯ ಕಾಗದ ಪತ್ರಗಳು ಮತ್ತು ಸಾಂದರ್ಭಿಕ ವಿದ್ಯಮಾನಗಳನ್ನು ಪರಿಗಣಿಸಿ ಹಾವನೂರರು ನೀಡಿರುವ ತೀರ್ಮಾನ ಸರ್ವಮಾನ್ಯವಾಗಿದೆ. ಕೇಂಬ್ರಿಡ್ಜ್ ಸಂಗ್ರಹದಲ್ಲಿರುವ ಆತ್ಮಚರಿತ್ರೆಯಲ್ಲಿ ರೈಸರೇ ಸ್ಪಷ್ಟವಾಗಿ ತಾವು ೧೮೩೭ರ ಜುಲೈ ೧೭ರಂದು ಬೆಂಗಳೂರಿನ ಸೌತ್‌ಪರೇಡ್ ರಸ್ತೆ (ಈಗಿನ ಮಹಾತ್ಮಗಾಂಧಿ ರಸ್ತೆ)ಯಲ್ಲಿರುವ ಸಂತ ಮಾರ್ಕನ ದೇವಾಲಯದ ಮಿಷನ್ ಹೌಸ್‌ನಲ್ಲಿ ಜನಿಸಿದೆನೆಂದು ಹೇಳಿಕೊಂಡಿದ್ದಾರೆ.

ಪಾಶ್ಚಾತ್ಯ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಈ ಪ್ರದೇಶದಲ್ಲಿಯೇ ಬೆಳೆದಿದ್ದರೆ ಬಾಲಕ ಲೂಯಿಯ ಮೇಲೆ ಬಹುಶಃ ಪಾಶ್ಚಾತ್ಯ ಜೀವನಶೈಲಿ, ನಡೆನುಡಿಗಳೇ ಹೆಚ್ಚಿನ ಪರಿಣಾಮವನ್ನು ಬೀರುತ್ತಿತ್ತೇನೋ. ಆದರೆ ಈ ಮೊದಲೇ ಉಲ್ಲೇಖಿಸಿದಂತೆ ೧೮೩೯ರಲ್ಲಿ ಬೆಂಜಮಿನ್ ರೈಸ್ ದಂಪತಿಗಳು ಕೋಟೆ ಪ್ರದೇಶದ ಮನೆಯೊಂದಕ್ಕೆ ಹಾಗೂ ೧೮೪೨ರಲ್ಲಿ ಮಿಷನ್ ರಸ್ತೆಯಲ್ಲಿ ಹೊಸದಾಗಿ ನಿರ್ಮಿತವಾಗಿದ್ದ ಮಿಷನ್ ಹೌಸ್‌ಗೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದ್ದರಿಂದ ಚಿಕ್ಕವಯಸ್ಸಿನಲ್ಲಿಯೇ ಲೂಯಿಗೆ ಕನ್ನಡ ಜನರ ಭಾಷೆ, ಸಂಸ್ಕೃತಿಗಳ ಪರಿಚಯವಾಯಿತು. ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಹೋಗುವ ವೇಳೆಗಾಗಲೇ ತನಗೆ ಕೆಲವು ದೇಶೀಯ ಭಾಷೆಗಳ ಪರಿಚಯವಿತ್ತೆಂದೂ ತಮ್ಮ ಇಂಗ್ಲೀಷು ತಮ್ಮ ಸಹಪಾಠಿಯೊಬ್ಬನಷ್ಟು ಬಾಲಿಶವಾಗಿರಲಿಲ್ಲವೆಂದೂ ಬಿ.ಎಲ್. ರೈಸರು ಜ್ಞಾಪಿಸಿಕೊಂಡಿದ್ದಾರೆ.[3]

---

1 ಜುಲೈ ೧೫, ೧೯೨೭, ಪು. ೨

2 "ಅವರ (ರೈಸರ) ಹುಟ್ಟೂರು ಬೆಂಗಳೂರು ಎನ್ನಲಾಗಿದ್ದರೂ ಅದು ಖಚಿತವಾಗಿಲ್ಲ." ಗೆಜೆಟಿಯರ್‌ನ ತಂದೆ ಲೂಯಿರೈಸ್, **ಕಸ್ತೂರಿ**, ಜುಲೈ ೧೯೬೭, ಪು. ೧೭-೧೮.

3 "I was quite a young linguistic in the native languages and my English (though laughed at when I first got home) was perhaps not so idiomatically Indian as that of a companion...." Rice B.L., **Biographical Notes,** P-3.

ವಿದ್ಯಾಭ್ಯಾಸ :

ಕ್ರಿ.ಶ. ೧೮೪೮ರಲ್ಲಿ, ಎಂದರೆ ಲೂಯಿರೈಸರಿಗೆ ಹನ್ನೊಂದು ವರ್ಷವಾಗಿದ್ದಾಗ ಆ ಕಾಲದ ಬಹುತೇಕ ಆಂಗ್ಲರ ಅಭ್ಯಾಸದಂತೆ ಅವರನ್ನೂ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಕಳುಹಿಸಲಾಯಿತು. ಅದಕ್ಕೂ ಮುನ್ನ ಬೆಂಗಳೂರಿನಲ್ಲಿ ಶಾಲೆಗೆ ಸೇರಿಸಲಾಗಿತ್ತೇ ಎಂಬುದು ವಿಚಾರಾರ್ಹವಾಗಿದೆ. ಏಕೆಂದರೆ ರೈಸರ ಜೀವನವನ್ನು ಕುರಿತಾದ ಯಾವುದೇ ದಾಖಲೆಯಲ್ಲಿ ಈ ವಿಷಯ ಪ್ರಸ್ತಾಪವಾಗಿಲ್ಲ. ತತ್ಕಾಲೀನ ಪರಿಸ್ಥಿತಿಯನ್ನು ಪರಿಶೀಲಿಸಿ ಹೇಳುವುದಾದರೆ, ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವ ಪದ್ಧತಿ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಹೆಚ್ಚು ಚಾಲ್ತಿಯಲ್ಲಿರಲಿಲ್ಲ. ಬದಲಿಗೆ ಖಾಸಗಿಯಾಗಿ ಅಥವಾ ಮನೆಗಳಲ್ಲಿಯೇ ಆರಂಭಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು.[2] ತಂದೆ ತಾಯಿಗಳಿಬ್ಬರೂ ಅಕ್ಷರಸ್ಥರಾಗಿದ್ದುದರಿಂದ ಬಾಲಕ ಲೂಯಿರೈಸನೂ ಹೆಚ್ಚು ಶ್ರಮವಿಲ್ಲದೆ ಇದೇ ಪದ್ಧತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದಿರಬಹುದೆಂದು ಊಹಿಸಬಹುದು.

೧೮೪೮ರ ನವೆಂಬರ್ ತಿಂಗಳ ಸುಮಾರಿನಲ್ಲಿ ರೆವರೆಂಡ್ ಇ. ಕ್ರಿಸ್ಟ್ ಎಂಬ ಹಿರಿಯರ ಜೊತೆಯಲ್ಲಿ ಬಾಲಕ ಲೂಯಿರೈಸ್, ಆತನ ಹಿರಿಯ ಸೋದರಿ ಮತ್ತು ಒಬ್ಬ ದಾದಿ - ಇವರುಗಳು ಕ್ಯಾಪ್ಟನ್ ಆಗ್ನ್ಯೂ ಎಂಬಾತನ ನೇತೃತ್ವದಲ್ಲಿ ಚಲಿಸುತ್ತಿದ್ದ ವೆಲ್ಲೆಸ್ಲಿ ಎಂಬ ಹಡಗಿನಲ್ಲಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಗುಡ್‌ಹೋಪ್, ಸೈಂಟ್‌ಹೆಲೆನಾ ಮುಂತಾದ ಭೂಶಿರಗಳನ್ನು ಬಳಸಿಕೊಂಡು ಹಡಗು ಇಂಗ್ಲೆಂಡನ್ನು ತಲುಪಿತು. ಸಾಕಷ್ಟು ಸುದೀರ್ಘವಾಗಿದ್ದ ಈ ಸಾಗರಯಾನ ಲೂಯಿರೈಸರಲ್ಲಿ ಸಮುದ್ರದ ಬಗೆಗೆ ಬಹಳವಾದ ಆಸಕ್ತಿಯನ್ನು ಕೆರಳಿಸಿತಂತೆ. "ನನ್ನ ತಂದೆ ತಾಯಿಗಳು ಈತ ಮುಂದೆ ನಾವಿಕನಾದರೆ ಏನು ಗತಿ ಎಂದು ಭಯಪಡುವಷ್ಟು ಅದಮ್ಯವಾದ ಮೋಹ ಸಾಗರಯಾನದ ಬಗೆಗೆ ಆಗಲೇ ಬೆಳೆಯಿತು. ದೊಡ್ಡವನಾದ ಮೇಲೂ ನನಗೆ ಒಮ್ಮೊಮ್ಮೆ ನಾನೂ ನಾವಿಕನಾಗಿದ್ದಿದ್ದರೆ ಎಷ್ಟು ಚೆನ್ನ ಎನಿಸಿದ್ದಿದೆ" ಎಂದು ಲೂಯಿರೈಸರು ನೆನಪಿಸಿಕೊಂಡಿದ್ದಾರೆ.[3]

ಲಂಡನ್ನಿನ ಮೂರ್‌ಗೇಟ್ ರಸ್ತೆಯಲ್ಲಿ ವಾಸಿಸುತ್ತಿದ್ದ ತಮ್ಮ ಚಿಕ್ಕಮ್ಮ (ತಾಯಿಯ ತಂಗಿ) ಶ್ರೀಮತಿ ಗೂಡ್ಸರ ಮನೆ ರೈಸರ ವಾಸಸ್ಥಳವಾಯಿತು. "ನಮ್ಮ ಮಾತಿನ ಶೈಲಿ, ಉಚ್ಚಾರಣೆ, ಅಭಿವ್ಯಕ್ತಿ ಕ್ರಮ, ಪ್ರತಿಯೊಂದೂ ಮನೆಯವರಲ್ಲಿ ನಗೆಅಲೆಗಳನ್ನು ಎಬ್ಬಿಸುವಷ್ಟು ಭಾರತೀಯವಾಗಿತ್ತು" ಎಂಬ ರೈಸರ ಮಾತುಗಳಿಂದ ಪಾಶ್ಚಾತ್ಯ ಜೀವನ

---

1 ಸರ್ ಥಾಮಸ್ ಮನ್ರೋ ಎಂಬ ಆಂಗ್ಲ ಅಧಿಕಾರಿಯ ಪ್ರಕಾರ ೧೯ನೆಯ ಶತಮಾನದ ಆದಿಭಾಗದಲ್ಲಿ ಮದ್ರಾಸ್ ಪಟ್ಟಣದಲ್ಲಿ ಮನೆಮನೆಗಳಲ್ಲಿಯೇ ಶಿಕ್ಷಣ ಪಡೆಯುತ್ತಿದ್ದವರ ಸಂಖ್ಯೆ ೨೬೯೬೩. ಅಂದರೆ ಈ ಸಂಖ್ಯೆಯು ಶಾಲೆಗಳಲ್ಲಿ ಶಿಕ್ಷಣ ಪಡೆಯುವವರಿಗಿಂತ ಐದು ಪಟ್ಟು ಹೆಚ್ಚಾಗಿತ್ತು. Some aspects of Indian Education, P-72 (ಜೇಪೂರ, ಎಸ್.ಪಿ., ಕರ್ನಾಟಕದ ಶೈಕ್ಷಣಿಕ ಇತಿಹಾಸ, ಪು. ೨೨೫, ಬೆಂಗಳೂರು, ೧೯೭೧ ಇಲ್ಲಿ ಉದ್ಧೃತ).

2 ಪೂರ್ವೋಕ್ತ, ಪು. ೪

ಶೈಲಿಗಿಂತಲೂ ಭಾರತೀಯ ಜೀವನ ಪದ್ಧತಿಯೇ ಬಾಲಕ ರೈಸನ ಮೇಲೆ ಹೆಚ್ಚಿನ ಪರಿಣಾಮ ಬೀರಿತ್ತೆಂದು ಸ್ಪಷ್ಟವಾಗುತ್ತದೆ.

ಲೂಯಿರೈಸರನ್ನು ಮಿಲ್‌ಹಿಲ್‌ನಲ್ಲಿದ್ದ ಗ್ರಾಮರ್‌ಸ್ಕೂಲಿಗೆ* ಸೇರಿಸಬೇಕೆಂದು ಮೊದಲು ನಿಶ್ಚಯಿಸಲಾಗಿತ್ತಾದರೂ ಅದೇ ವೇಳೆಗೆ ಮಿಲ್‌ಹಿಲ್‌ನಲ್ಲಿ ಸಿಡುಬು ತಲೆದೋರಿದ್ದರಿಂದ ರೆವರೆಂಡ್ ಅಲೆಗ್ಸಾಂಡರ್ ಸ್ಟೀವರ್ಟ್ ಹಾಗೂ ಅವರ ಮಕ್ಕಳು ಬಾರ್ನೆಟ್‌ನಲ್ಲಿ ನಡೆಸುತ್ತಿದ್ದ ಗ್ರಾಮರ್ ಸ್ಕೂಲಿಗೆ ಸೇರಿಸಬೇಕಾಯಿತು (ಈ ಶಾಲೆ ಮುಂದೆ ಅಪ್ಪರ್ ಹಾಲೋವೇ ಎಂಬಲ್ಲಿಗೆ ಸ್ಥಳಾಂತರಗೊಂಡಿತು).

ಬಾರ್ನೆಟ್ ಶಾಲೆಯನ್ನು ನಡೆಸುತ್ತಿದ್ದ ಅಲೆಗ್ಸಾಂಡರ್ ಸ್ಟೀವರ್ಟ್ ಅಭಿಜಾತ ಸಾಹಿತ್ಯದ ಉದ್ದಾಮ ವಿದ್ವಾಂಸನಾಗಿದ್ದು, ನಿರರ್ಗಳವಾಗಿ ಫ್ರೆಂಚನ್ನು ಮಾತನಾಡಬಲ್ಲವನಾಗಿದ್ದ. ಮೂಲತಃ ನಾವಿಕನಾಗಿದ್ದ ಈತನನ್ನು ಫ್ರೆಂಚ್ ಸೈನ್ಯ ಒಮ್ಮೆ ಸೆರೆಹಿಡಿದಾಗ ಆತ ಕೋಟೆಯಿಂದ ಹೊರಹಾರಿ ಅರೆಬರೆ ಮಂಜುಗಟ್ಟಿದ್ದ ನದಿಯ ಮೇಲೆ ಓಡುತ್ತಾ ಸೈನಿಕರ ಗುಂಡಿನ ದಾಳಿಯಿಂದ ತಪ್ಪಿಸಿಕೊಂಡಿದ್ದ. ಮೃದು ಹೃದಯಿಯಾದರೂ ಮುಂಗೋಪಿಯಾಗಿದ್ದ ಸ್ಟೀವರ್ಟ್‌ನ ಶಾಲೆಯಲ್ಲಿ ತಪ್ಪು ಮಾಡಿದ ವಿದ್ಯಾರ್ಥಿಗಳ ಕಾಲಿಗೆ ಮರದ ಭಾರವಾದ ತುಂಡನ್ನು ಕಟ್ಟುವ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ಶಾಲೆಗೆ ಸೇರಿದ ಆರಂಭದ ದಿನಗಳಲ್ಲಿ ನಡೆಸಿದ ತುಂಟತನಗಳಿಂದಾಗಿ ಕೆಟ್ಟ ಹುಡುಗ ಎಂಬ ಅಪಖ್ಯಾತಿಯನ್ನು ಲೂಯಿರೈಸ್ ಹೊರಬೇಕಾದರೂ ಓದಿನಲ್ಲಿ ಚುರುಕಾಗಿದ್ದರಿಂದ ಬಹುಬೇಗ ಶಾಲೆಯ ಅತ್ಯುತ್ತಮ ವಿದ್ಯಾರ್ಥಿ ಎಂಬ ಮಟ್ಟವನ್ನು ಏರಿದರು. ಕೇವಲ ಓದಿನಲ್ಲಿ ಮಾತ್ರವಲ್ಲದೇ ಪಠ್ಯೇತರ ಚಟುವಟಿಕೆಗಳಿಗೂ ಈ ಶಾಲೆಯಲ್ಲಿ ಅವಕಾಶವಿತ್ತು. ಇಂಗ್ಲೆಂಡಿನ ಪಾರ್ಲಿಮೆಂಟಿಗೆ ಚುನಾವಣೆ ನಡೆದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಎರಡು ತಂಡಗಳನ್ನು ಕಟ್ಟಿಕೊಂಡು, ಒಬ್ಬೊಬ್ಬ ಸ್ಪರ್ಧಿಯ ಪರವಾಗಿ ವಾದಿಸುವ ಸ್ಪರ್ಧೆ ನಡೆದದ್ದನ್ನು, ಆ ಸ್ಪರ್ಧೆಯಲ್ಲಿ ಪಾಲ್ಮರ್‌ಸ್ಟೋನ್ ಎಂಬಾತನ ಪರವಾಗಿ ತಾವು ಮಂಡಿಸಿದ ವಾದಕ್ಕೆ ಮೊದಲ ಬಹುಮಾನ ದೊರೆತದ್ದನ್ನು ರೈಸ್ ನೆನಪಿಸಿಕೊಂಡಿದ್ದಾರೆ.[1]

ಸ್ಟೀವರ್ಟರ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದನಂತರ ರೈಸ್ ಒಂದೆರಡು ವರ್ಷಗಳ ಕಾಲ ಅದೇ ಶಾಲೆಯಲ್ಲಿ ಸಹಾಯಕ ಶಿಕ್ಷಕನಾಗಿ ಕೆಲಸಮಾಡುತ್ತಲೇ ವಿಶ್ವವಿದ್ಯಾಲಯವನ್ನು ಸೇರುವ ಸಿದ್ಧತೆಯಲ್ಲಿ ತೊಡಗಿದ್ದರು. ವಿದ್ಯಾಭ್ಯಾಸವನ್ನು ಮುಂದುವರೆಸುವಲ್ಲಿ ಮಗನಿಗಿದ್ದ ಆಸಕ್ತಿಯನ್ನು ಬೆಂಜಮಿನ್ ರೈಸ್ ಅರಿತಿದ್ದರಾದರೂ ಕುಟುಂಬದ ಉಳಿದ ಮಕ್ಕಳ ಶಿಕ್ಷಣದ ವ್ಯವಸ್ಥೆಗೂ ಹಣದ ಅವಶ್ಯಕತೆಯಿತ್ತು. ಹೀಗಾಗಿ ಲೂಯಿಯ ವಿದ್ಯಾಭ್ಯಾಸದ ಮೇಲೆಯೇ ಹೆಚ್ಚಿನ ಹಣವನ್ನು ಹೂಡುವುದು ಅವರಿಂದ ಸಾಧ್ಯವಿರಲಿಲ್ಲ.

---

* ದಾನಿಗಳಿಂದ ನೀಡಿದ ಹಣದಿಂದ ನಡೆಯುತ್ತಿದ್ದ, ವಿದ್ಯಾರ್ಥಿಗಳಲ್ಲಿ ಉಚಿತವಾಗಿ ಶಿಕ್ಷಣ ನೀಡುತ್ತಿದ್ದ ಶಾಲೆಗಳು.

1 ಪೂರ್ವೋಕ್ತ, ಪು. ೬

೧೮೫೩ರಲ್ಲಿ ಇಂಗ್ಲೆಂಡಿಗೆ ರಜೆಗೆಂದು ಹೋದಾಗ ಬೆಂಜಮಿನ್ ರೈಸ್ ದಂಪತಿಗಳು ಮಗನಲ್ಲಿ ತಮ್ಮ ಅಸಹಾಯಕತೆಯನ್ನು ವಿವರಿಸಿದರು. ವಿದ್ಯಾಭ್ಯಾಸದಲ್ಲಿ ಚುರುಕಾಗಿರುವ ಬಾಲಕನೊಬ್ಬ, ಪರದೇಶದಿಂದ ಬಂದರೂ ಇತರರೊಂದಿಗೆ ಪೈಪೋಟಿ ನಡೆಸಿ ಮೊದಲ ಸ್ಥಾನ ಗೆಲ್ಲಬಲ್ಲ ಬುದ್ಧಿಶಕ್ತಿಯುಳ್ಳವ, ಕೇವಲ ಹತ್ತನೇ ತರಗತಿಗೆ ತನ್ನ ಓದನ್ನು ನಿಲ್ಲಿಸುವಂತಹ ಸ್ಥಿತಿಗೆ ಬಂದಾಗ ಆತನಿಗೆ ಉಂಟಾಗಬಹುದಾದ ನಿರಾಶೆ ಎಷ್ಟು ದೊಡ್ಡದು ಎಂಬುದನ್ನು ಊಹಿಸಲು ಕಷ್ಟ. ಆದರೆ ಲೂಯಿರೈಸ್ ತಂದೆಗೆ ಹೊರೆಯಾಗಿ ತಾನು ಓದನ್ನು ಮುಂದುವರೆಸಲು ಪ್ರಯತ್ನಿಸಲಿಲ್ಲ. ಹೀಗೆ ಅವರ ಓದು ಹತ್ತನೇ ತರಗತಿಗೆ ಮುಗಿಯಿತು.

ರೈಸರು ವಿಶ್ವವಿದ್ಯಾನಿಲಯದ ಪದವೀಧರರು ಎಂದು ಅನೇಕ ಮಂದಿ ವಿದ್ವಾಂಸರು ಭಾವಿಸಿದ್ದಾರೆ. ಉದಾಹರಣೆಗೆ ಹಾವನೂರರು 'ರೈಸ್ ಹ್ಯಾರೋದಲ್ಲಿ ಬಿ.ಎ. ಮುಗಿಸಿಕೊಂಡು ೧೮೬೦ರಲ್ಲಿ ಬೆಂಗಳೂರಿಗೆ ಬಂದ' ಎನ್ನುತ್ತಾರೆ.[1] ಅ. ಸುಂದರ ಅವರೂ ಈ ಅಭಿಪ್ರಾಯವನ್ನು ಪುರಸ್ಕರಿಸಿದ್ದಾರೆ.[2] ವೆಂಕಟೇಶ ಸಾಂಗಲಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 'ರೈಸರು ೧೮೮೭ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಗೌರವವನ್ನು ಪಡೆದರು' ಎಂದು ದಾಖಲಿಸಿದ್ದಾರೆ.[3] ಈ ಮಾತನ್ನು ಕೆ.ಜಿ. ನಾಗರಾಜನ್ ಅನುಮೋದಿಸಿದ್ದಾರೆ.[4] ಆದರೆ ಈ ಯಾವ ಹೇಳಿಕೆಗೂ ಆಧಾರವಿಲ್ಲ. ಏಕೆಂದರೆ ಈವರೆಗೆ ಗಮನಿಸಿರುವಂತೆ ರೈಸ್ ಹ್ಯಾರೋ ಶಾಲೆಯಲ್ಲಿ ಕಲಿತವರೇ ಅಲ್ಲ ಮತ್ತು ಆ ಕಾಲದಲ್ಲಿ ಹ್ಯಾರೋ ಶಾಲೆಯಲ್ಲಿ ಪದವಿ ಮಟ್ಟದ ಶಿಕ್ಷಣವೇ ಇರಲಿಲ್ಲ. ೧೮೮೭ರಲ್ಲಿ ರೈಸರಿಗೆ ದೊರೆತದ್ದು ಮದ್ರಾಸು ವಿಶ್ವವಿದ್ಯಾಲಯದ ಫೆಲೋ ಪದವಿ ಮಾತ್ರ. ಡಾಕ್ಟರೇಟ್ ಅಲ್ಲ. **ಹಾಗಾಗಿ ಲಬ್ಧ ಆಧಾರಗಳಿಂದ ರೈಸ್ ಕೇವಲ ಹತ್ತನೆಯ ತರಗತಿಯವರೆಗೆ ಮಾತ್ರವೇ ವಿದ್ಯಾಭ್ಯಾಸವನ್ನು ಪಡಿದಿದ್ದರೆಂಬುದು ಸ್ಪಷ್ಟವಾಗಿದೆ.**

ಗ್ರಾಮರ್ ಸ್ಕೂಲ್‌ನಲ್ಲಿ ಶಿಕ್ಷಣ ಹೇಳಿಕೊಳ್ಳುವಂತಹ ಅತ್ಯುತ್ತಮ ಗುಣಮಟ್ಟದ್ದೇನೂ ಆಗಿರಲಿಲ್ಲ.

ಈ ಶಾಲೆಯಲ್ಲಿ ಪಡೆದ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯದ ಶಿಕ್ಷಣ ರೈಸರಲ್ಲಿ ಮುಂದೆ ಪ್ರಾಚೀನ ಕನ್ನಡ ಶಾಸನ, ಸಾಹಿತ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಉಂಟು ಮಾಡುವಲ್ಲಿ ನೆರವಾಗಿದ್ದಿರಬಹುದು ಎಂಬುದು ಬಹಳ ದುರ್ಬಲವಾದ, ಆದರೆ ಸಂಭವನೀಯವಾದ ಊಹೆ ಅಷ್ಟೇ.

---

1 **ಹೊ.ಅ.**, ಪು. ೧೪೮.

2 **Annual Reports of the Archaeological Department for the years 1885–1905**, Govt. of Karnataka, 1989, p-VI

3 **ಓ.ಗ್ರಂ.ಟಿ.ಕೋ.**, ಪು. - ೨೧

4 *'B.L. Rice Pioneered Archaeological Quest in State'*, **March of Karnataka**, March 1989, P–7

ವೃತ್ತಿಜೀವನ :

ಮೊದಲ ಉದ್ಯೋಗಗಳು :

ವಿದ್ಯಾಭ್ಯಾಸ ಮುಗಿದನಂತರ ಮೊದಲಿಗೆ ಲೂಯಿರೈಸರು ಫೆನ್‌ಚರ್ಚ್ ರಸ್ತೆಯಲ್ಲಿದ್ದ ಕಚ್ಚಾರೇಷ್ಮೆಯ ವ್ಯಾಪಾರದ ಮಳಿಗೆಯೊಂದರಲ್ಲಿ ಕೆಲಸಕ್ಕೆ ಸೇರಿದರು. ಈ ಮಳಿಗೆಯ ಮಾಲಿಕ ಜರ್ಮನ್ ಮೂಲದವನಾಗಿದ್ದು, ರೈಸ್ ಮತ್ತು ಇನ್ನೊಬ್ಬ ಸಹಾಯಕನನ್ನು ಬಿಟ್ಟರೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದವರೆಲ್ಲರೂ ಜರ್ಮನ್ ಅಥವಾ ಇಟಾಲಿಯನ್ನರೇ ಆಗಿದ್ದರು. ಆದರೂ ಕಛೇರಿಯಲ್ಲಿ ಎಲ್ಲರೂ ಕಡ್ಡಾಯವಾಗಿ ಇಂಗ್ಲೀಷಿನಲ್ಲಿಯೇ ವ್ಯವಹರಿಸಬೇಕಿತ್ತು. ಕೆಲಕಾಲದನಂತರ ಮಳಿಗೆಯ ಮಾಲಿಕ ತೀವ್ರ ಅಸ್ವಸ್ಥತೆಯ ಕಾರಣದಿಂದ ನಿಧನನಾದಾಗ ಸಂಸ್ಥೆ ದಿವಾಳಿಯಾಯಿತು.

ಜಾರ್ಜ್ ಪೀಬಡಿ ಎಂಬ ಅಮೇರಿಕನ್ ಶ್ರೀಮಂತ ನಡೆಸುತ್ತಿದ್ದ ಅಮೇರಿಕನ್ ಬ್ಯಾಂಕಿಂಗ್ ಹೌಸ್ ಲೂಯಿರೈಸರ ಎರಡನೆಯ ಕಾರ್ಯಸ್ಥಾನವಾಯಿತು. "ಹಿಂದೆ ಮಾಡುತ್ತಿದ್ದ ಕೆಲಸಕ್ಕೂ ಈಗಿನ ಕೆಲಸಕ್ಕೂ ಅರ್ಥಾರ್ಥ ಸಂಬಂಧವೇ ಇಲ್ಲದ್ದಿದ್ದುದರಿಂದ ಮೊದಮೊದಲು ನಾನು ಸ್ವಲ್ಪ ತಬ್ಬಿಬ್ಬಾದರೂ ಬಹುಬೇಗ ಯಶಸ್ವಿ ಕೆಲಸಗಾರನೆನಿಸಿಕೊಂಡೆ" ಎಂದು ರೈಸರು ಜ್ಞಾಪಿಸಿಕೊಂಡಿದ್ದಾರೆ. ಕಛೇರಿಯ ಕೆಲಸಕಾರ್ಯಗಳನ್ನು ಮಾತ್ರವಲ್ಲದೇ ಪೀಬಡಿಯನ್ನು ನೋಡಲು ಬರುತ್ತಿದ್ದ ಅಮೇರಿಕನ್ ಗಣ್ಯರ ಯೋಗಕ್ಷೇಮವನ್ನು ವಿಚಾರಿಸುವ ಜವಾಬ್ದಾರಿಯೂ ರೈಸರದಾಗಿತ್ತು.

ಪೀಬಡಿಯ ಸಂಸ್ಥೆಯಲ್ಲಿ ದುಡಿಯುತ್ತಿರುವಾಗಲೇ ಭಾರತದಲ್ಲಿ ಉದ್ಯೋಗವನ್ನು ಪಡೆಯಬೇಕೆಂಬ ಉದ್ದೇಶದಿಂದ ಬಿಡುವಿನ ವೇಳೆಯಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆಗೆಂದು ರೈಸ್ ಸಿದ್ಧರಾಗುತ್ತಿದ್ದರು. ಆದರೆ ಕೇವಲ ೧೯ ರಿಂದ ೨೧ ವರ್ಷ ವಯೋಮಿತಿಯಲ್ಲಿರುವ ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಕೂಡಬಹುದು ಎಂಬ ನಿಯಮ ಆ ವರ್ಷದಿಂದಲೇ ಜಾರಿಗೆ ಬಂದಿದ್ದರಿಂದ ಪರೀಕ್ಷೆಗೆ ಕೂಡುವ ಅವಕಾಶ ೨೨ ವರ್ಷ ವಯಸ್ಸಿನ ರೈಸರಿಗೆ ತಪ್ಪಿಹೋಯಿತು.

ಮರಳಿ ಭಾರತಕ್ಕೆ :

೧೯ನೆಯ ಶತಮಾನದ ಪೂರ್ವಾರ್ಧದ ಕಡೆಯ ದಶಕ ಮೈಸೂರಿನ ಇತಿಹಾಸದಲ್ಲಿ ಅನೇಕ ಬದಲಾವಣೆಗಳನ್ನು ಕಂಡ ಕಾಲ. ಆಗಿನ ಚೀಫ್ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಅನೇಕ ಹೊಸ ಇಲಾಖೆಗಳನ್ನು ಸ್ಥಾಪಿಸಿ ಆಡಳಿತ ವ್ಯವಸ್ಥೆಯನ್ನು ಅಚ್ಚುಕಟ್ಟುಗೊಳಿಸುತ್ತಿದ್ದ ಅವಧಿ ಅದು. ಈ ರೀತಿ ಆರಂಭಗೊಂಡ ಇಲಾಖೆಗಳಲ್ಲಿ ವಿದ್ಯಾಭ್ಯಾಸದ ಇಲಾಖೆಯೂ ಒಂದು. ೧೮೬೦ರಲ್ಲಿ ಆತ ಬೆಂಗಳೂರು ಹೈಸ್ಕೂಲಿನ (ಈಗಿನ ಸೆಂಟ್ರಲ್ ಕಾಲೇಜು) ಮುಖ್ಯೋಪಾಧ್ಯಾಯರಾಗಿದ್ದ ಜೆ. ಗ್ಯಾರೆಟ್‌ರನ್ನು ಅದರ ನಿರ್ದೇಶಕರನ್ನಾಗಿ ನೇಮಿಸಿದರು. ಹಾಗಾಗಿ ತೆರವಾದ ಮುಖ್ಯೋಪಾಧ್ಯಾಯರ ಹುದ್ದೆಗೆ ತಮ್ಮ ಕುಟುಂಬದ ಮಿತ್ರವರ್ಗಕ್ಕೆ ಸೇರಿದ್ದ ತರುಣ ಲೂಯಿಯನ್ನು ಗ್ಯಾರೆಟ್ ಆಹ್ವಾನಿಸಿದರು. ಐ.ಸಿ.ಎಸ್. ಅಧಿಕಾರಿಯಾಗದಿದ್ದರೂ ಭಾರತದಲ್ಲಿ ಸೇವೆಸಲ್ಲಿಸಲು ದೊರೆತ ಈ ಅವಕಾಶವನ್ನು ಒಪ್ಪಿಕೊಂಡ ರೈಸ್ ೧೨ ವರ್ಷಗಳ ಇಂಗ್ಲೆಂಡಿನ ವಾಸ್ತವ್ಯದನಂತರ ಮರಳಿ ಭಾರತಕ್ಕೆ ಹಿಂದಿರುಗಿ

ದರು. ೧೮೬೦ರ ಜನವರಿ ೨೦ ರಂದು ಸೌತ್ ಹ್ಯಾಂಪ್ಟನ್ ಬಂದರಿನಿಂದ ಹೊರಟ ಹಡಗಿನಲ್ಲಿ ಪ್ರಯಾಣ ಆರಂಭಿಸಿದ ಅವರು ಫೆಬ್ರವರಿ ೨೯ರಂದು ಮದ್ರಾಸನ್ನು ತಲುಪಿದರು. ಕೆಲವು ದಿನಗಳ ಕಾಲ ಮದ್ರಾಸ್ ಹಾಗೂ ವೆಲ್ಲೂರುಗಳಲ್ಲಿ ಉಳಿದು ಮಾರ್ಚ್ ತಿಂಗಳಿನಲ್ಲಿ ಉದ್ಯೋಗಕ್ಕೆ ಹಾಜರಾದರು. (ಆದರೆ ಸರ್ಕಾರೀ ದಾಖಲೆಗಳಲ್ಲಿ, History of Gazetted Officers ನಲ್ಲಿ ೨೯.೨.೧೮೬೦ರಂದೇ ಸೇವೆಗೆ ಹಾಜರಾದಂತೆ ನಮೂದಾಗಿದೆ.)

ವಿದ್ಯಾ ಇಲಾಖೆಯಲ್ಲಿ :

೧೮೬೦ರಲ್ಲಿ ರೈಸ್ ಬೆಂಗಳೂರು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಅಧಿಕಾರ ಸ್ವೀಕರಿಸಿದಾಗ ಶಾಲೆಯಲ್ಲಿ ಸುಮಾರು ಇನ್ನೂರು ಮಂದಿ ವಿದ್ಯಾರ್ಥಿಗಳು ಮತ್ತು ಆರು ಜನ ಸಹ ಅಧ್ಯಾಪಕರಿದ್ದರು. ಶಾಲೆ ಬೆಳಗ್ಗೆ ೭ ಘಂಟೆಗೆ ಆರಂಭವಾಗಿ ೧೧ ಘಂಟೆಗೆ ಮುಗಿದು ಹೋಗುತ್ತಿತ್ತು. (ಇದು ಮೂಲತಃ ಕ್ರಿಶ್ಚಿಯನ್ ಮಿಷನರಿಗಳು ನಡೆಸುತ್ತಿದ್ದ ಶಾಲೆಗಳ ಅನುಕರಣೆ. ಏಕೆಂದರೆ ಮಿಷನ್ ಶಾಲೆಗಳಲ್ಲಿ ಪಾದ್ರಿಗಳೇ ಅಧ್ಯಾಪಕರಾಗಿರುತ್ತಿದ್ದರಿಂದ ಅವರೆಲ್ಲ ಬಹುಶಃ ಬೆಳಗಿನ ವೇಳೆಯಲ್ಲಿ ಅಧ್ಯಾಪನದ ಕಾರ್ಯ ಮುಗಿಸಿ ಅನಂತರ ಚರ್ಚು, ಸಾರ್ವಜನಿಕ ಉಪನ್ಯಾಸ ಮುಂತಾದ ಕೆಲಸಗಳಲ್ಲಿ ತೊಡಗುತ್ತಿದ್ದರೆಂದು ತೋರುತ್ತದೆ. ಇದೇ ಪದ್ಧತಿಯನ್ನು ಈ ಸರ್ಕಾರೀ ಶಾಲೆಯೂ ಅನುಸರಿಸುತ್ತಿತ್ತು!) ಕೆಲವು ದೃಷ್ಟಿಯಿಂದ ನೋಡಿದರೆ ಈ ಪದ್ಧತಿ ಅನುಕೂಲವಾಗಿತ್ತಾದರೂ ಬೆಳಗಿನ ತಿಂಡಿಗೆ ಇದರಿಂದ ಬಹಳ ತಡವಾಗುತ್ತಿತ್ತು. "ಖಾಲಿ ಹೊಟ್ಟೆಯಲ್ಲಿ ಹೀಗೆ ಕೆಲಸಮಾಡುತ್ತಿದ್ದರಿಂದ ಒಮ್ಮೆ ನಾನು ಸುಸ್ತಾಗಿ ಮೂರ್ಛೆ ಹೋದೆ'' ಎಂದು ರೈಸರು ಸ್ಮರಿಸಿಕೊಂಡಿದ್ದಾರೆ.[1]

ಆದರೂ ಪ್ರಸ್ತುತ ಪದ್ಧತಿಯ ಲಾಭವನ್ನು ಲೂಯಿರೈಸರು ಚೆನ್ನಾಗಿಯೇ ಮಾಡಿಕೊಂಡರೆನ್ನಬಹುದು. ಕನ್ನಡ ಭಾಷೆಯ ಪರಿಚಯ ಅವರಿಗಿತ್ತಾದರೂ ಅಧ್ಯಾಪಕನಿಗೆ ಬೇಕಾಗಿದ್ದ ಭಾಷಾ ಸಂಪತ್ತಿಯನ್ನು ಗಳಿಸಿಕೊಳ್ಳಲೆಂದು ಅವರು ಮಧ್ಯಾಹ್ನದ ವೇಳೆಯಲ್ಲಿ ಮುನಿಶಿಯೊಬ್ಬರಿಂದ ಕನ್ನಡವನ್ನು ಹೇಳಿಸಿಕೊಳ್ಳಲು ಆರಂಭಿಸಿದರು. (ಆದರೆ ಪಾಠ ಕೇಳುವಾಗ ಕೆಲವೊಮ್ಮೆ ನಿದ್ದೆಗೆ ಶರಣಾಗುತ್ತಿದ್ದರಂತೆ!) ಅಷ್ಟೇ ಅಲ್ಲದೇ ೧೮೬೧ರ ಏಪ್ರಿಲ್ ಒಂದರಂದು ಉನ್ನತ ಮಟ್ಟದ ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕೆಲಕಾಲ ಅವರು ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪರೀಕ್ಷಕರಾಗಿದ್ದದ್ದೂ ಇದೆ. ಆ ಕಾಲದ ಆಡಳಿತದಲ್ಲಿ ಇಂಗ್ಲಿಷ್, ಕನ್ನಡಗಳ ಜೊತೆಗೆ ಹಿಂದೂಸ್ತಾನಿಯ ಬಳಕೆಯೂ ಹೆಚ್ಚಾಗಿ ಇದ್ದುದರಿಂದ ರೈಸರು ಹಿಂದೂಸ್ತಾನಿಯನ್ನು ಕಲಿಯಲು ನಿರ್ಧರಿಸಿದರು. ತಂದೆಯೊಂದಿಗೇ ವಾಸಿಸುತ್ತಿದ್ದ ಅವರು ೧೮೬೪ರಲ್ಲಿ ತಾಯಿಯ ನಿಧನಾನಂತರ ತಂದೆ ಕುಮಾರಿ ಮುಲ್ಲರ್‌ರನ್ನು ಮದುವೆಯಾದಾಗ ದಂಡುಪ್ರದೇಶದ ಇನ್‌ಫೆಂಟ್ರಿ ಲೈನ್ಸ್‌ನ ಮನೆಯೊಂದಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದರು. ಆ ಮನೆಯ ಮುಂದಿನ ಸಾಲಿನಲ್ಲಿದ್ದ ನಿವೃತ್ತ ಅಧಿಕಾರಿಯೊಬ್ಬರು ಹಿಂದೂಸ್ತಾನಿಯನ್ನು ಕಲಿಸಲು ಸ್ವಯಂ ಪ್ರೇರಿತರಾಗಿ ಮುಂದೆ ಬಂದುದರಿಂದ ೧೮೬೫ರ ಡಿಸೆಂಬರ್ ೧೫ರಂದು ಉನ್ನತ ಮಟ್ಟದ ಹಿಂದೂಸ್ತಾನಿ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗುವುದು ಸಾಧ್ಯವಾಯಿತು.

1 ಪೂರ್ವೋಕ್ತ, ಪು. ೧೫

ಶಾಲಾ ಪರಿವೀಕ್ಷಣಾಧಿಕಾರಿಯಾಗಿ :

ಕ್ರಿ.ಶ. ೧೮೬೫ರಲ್ಲಿ ರೈಸರಿಗೆ ಶಾಲಾಪರಿವೀಕ್ಷಣಾಧಿಕಾರಿಯಾಗಿ ಬಡ್ತಿ ಪಡೆಯಿತು. ವೈಯಕ್ತಿಕವಾಗಿ ರೈಸರಿಗೆ ಇದು ಸಂತಸದ ಸಂಗತಿಯಾದರೂ ವಿದ್ಯಾರ್ಥಿಗಳಿಗೆ ಅವರನ್ನು ಅಗಲುವುದು ದುಃಖದ ವಿಷಯವಾಗಿತ್ತು. ವಿದಾಯ ಸಮಾರಂಭದಲ್ಲಿ ವಿದ್ಯಾರ್ಥಿಗಳೆಲ್ಲ ಸೇರಿ ಚಿನ್ನದ ಗಡಿಯಾರವೊಂದನ್ನು ನೆನಪಿನ ಕಾಣಿಕೆಯಾಗಿ ಅವರಿಗೆ ನೀಡಿದರು. ಅದೇ ಗಡಿಯಾರವನ್ನು ರೈಸ್ ೧೯೨೭ರಲ್ಲೂ ಧರಿಸುತ್ತಿದ್ದರಂತೆ.

ಶಾಲಾ ಪರಿವೀಕ್ಷಣಾಧಿಕಾರಿಯಾಗಿ ಸಿರಾದ ಶಾಲೆಗೆ ರೈಸರು ಭೇಟಿಕೊಟ್ಟ ಸಂದರ್ಭದ ಒಂದು ಚಿತ್ರಣವನ್ನು 'Never to be Forgotten Empire' ಕೃತಿಯ ಲೇಖಕರಾದ ಬಿ. ಸೂರ್ಯನಾರಾಯಣ ರಾವ್ ಹೀಗೆ ನೀಡಿದ್ದಾರೆ :

> *"ರೈಸರು ಆಗಮಿಸಿದಾಗ ತನ್ನ ಮಾವ ಮತ್ತು ಸಿರಾದ ಇತರ ಗಣ್ಯರು ಅವರನ್ನು ವಿಜೃಂಭಣೆಯಿಂದ ಸ್ವಾಗತಿಸಿದರು. ನಾನು ತರಗತಿಯ ಹಿಂದಿನ ಬೆಂಚಿನಲ್ಲೂ, ನನ್ನ ಸೋದರ ಸಂಬಂಧಿಯಾದ ರಾಮರಾವ್ ಮೊದಲ ಸೀಟಿನಲ್ಲಿಯೂ ಕುಳಿತಿದ್ದೆವು. ನನ್ನ ಮಾವ ಮತ್ತು ಇತರ ಗಣ್ಯರ ಜೊತೆಗೆ ಕೆಲವು ನಿಮಿಷಗಳ ಕಾಲ ಲೋಕಾಭಿರಾಮವಾಗಿ ಮಾತನಾಡಿದ ನಂತರ ರೈಸರು ಕುರ್ಚಿಯನ್ನು ನಮ್ಮ ತರಗತಿಯ ಕಡೆಗೆ ಎಳೆದು ಕುಳಿತುಕೊಂಡು ಸರಳವಾದ ಪ್ರಶ್ನೆಗಳನ್ನು ಕನ್ನಡದಲ್ಲಿ ಕೇಳುತ್ತಾ ಹೋದರು. ಅಂದು ತರಗತಿಯಲ್ಲಿ ಇದ್ದವರು ಸುಮಾರು 25 ಜನ ವಿದ್ಯಾರ್ಥಿಗಳು. ಇತರರು ಹೇಳಲಾಗದ ಎಷ್ಟೋ ಪ್ರಶ್ನೆಗೆ ಉತ್ತರಿಸುವ ಮೂಲಕ ನಾನು ನಿಧಾನವಾಗಿ ಮೊದಲನೆಯ ದರ್ಜೆಗೆ ಏರಿದೆ. ಹಾಗಾಗಿ ಪರೀಕ್ಷೆ ಮುಗಿದ ನಂತರ ರೈಸರು ನನ್ನನ್ನು ಹತ್ತಿರಕ್ಕೆ ಕರೆದರಲ್ಲದೆ ಒಂದು ಪುಸ್ತಕವನ್ನು ಬಹುಮಾನವಾಗಿ ನೀಡುವುದಾಗಿ ಘೋಷಿಸಿದರು.*
>
> *ನನ್ನ ಮಾವನವರ ಕಣ್ಸನ್ನೆಯ ಮೇರೆಗೆ ಹೆಡ್‌ಮಾಸ್ಟರರು 'ರಾಮರಾವ್ ತರಗತಿಯ ಅತಿ ಬುದ್ಧಿವಂತ ವಿದ್ಯಾರ್ಥಿ, ಆತನ ಹಾಜರಾತಿ, ಸನ್ನಡತೆಗಳಿಗಾಗಿ ಅವನಿಗೂ ಒಂದು ಪುಸ್ತಕವನ್ನು ಬಹುಮಾನವನ್ನು ನೀಡಬೇಕು' ಎಂದು ಬಿನ್ನವಿಸಿದರಾದರೂ ರೈಸ್ ಆ ಕೋರಿಕೆಯನ್ನು ಮನ್ನಿಸಲಿಲ್ಲ. ಮಾಲಾರ್ಪಣೆಯ ಕಾರ್ಯಕ್ರಮ ಮುಗಿದ ನಂತರ ಅವರು ನನ್ನ ಬಳಿ ಬಂದು ಮುಂದೆ ನಾನು ಅವರ ಕೃತಿಗಳು ಮತ್ತು ಸಂಕಲನಗಳನ್ನು ತೀಕ್ಷ್ಣವಾಗಿ ವಿಮರ್ಶಿಸುತ್ತೇನೆ ಎಂಬುದರ ಅರಿವಿಲ್ಲದೆ ನನ್ನ ಬೆನ್ನನ್ನು ತಟ್ಟಿದರು. ಬೆಂಗಳೂರಿನಿಂದ ಒಂದು ಉತ್ತಮವಾದ ಪುಸ್ತಕವನ್ನು ಕಳುಹಿಸಿಕೊಡುವುದಾಗಿ ವಾಗ್ದಾನ ಮಾಡಿದರು..... ಬಾಲ್ಯದ ವಿಸ್ಮಯದ ಕಣ್ಣುಗಳಿಂದ ಅವರ ವಿಶಾಲವಾದ ಹಣೆಯನ್ನೂ, ಅವರ ಅಚ್ಚ ಬಿಳುಪಿನ ಚರ್ಮವನ್ನೂ ಗಮನಿಸಿ ನೋಡಿದ್ದು ಈಗಲೂ ನೆನಪಿನಲ್ಲಿದೆ".*[1]

---

1 **The Astrological Magazine**, July 1948 ರಲ್ಲಿಯ ಲೇಖನದ ಭಾಗದ ಅನುವಾದ. (ಲೇಖನದ ಜೆರಾಕ್ಸ್ ಪ್ರತಿ ಕೃಪೆ : ಟಿ.ವಿ. ವೆಂಕಟಾಚಲ ಶಾಸ್ತ್ರೀ ಮತ್ತು ಸೂರ್ಯಪ್ರಕಾಶ ಪಂಡಿತ್)

ರೈಸರು ಶಾಲಾಪರಿವೀಕ್ಷಣಾಧಿಕಾರಿಯಾಗಿದ್ದ ಸಮಯದಲ್ಲಿ, ಎಂದರೆ ೧೮೬೭-೬೮ನೇ ಸಾಲಿನಲ್ಲಿ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳೆರಡನ್ನೂ ಸೇರಿಸಿ ಕೇವಲ ೧೧೦ ಶಾಲೆಗಳಿದ್ದವು ಹಾಗೂ ಇದರಲ್ಲಿ ಒಟ್ಟು ೬೯೩೫ ಮಂದಿ ವಿದ್ಯಾರ್ಥಿಗಳು ವ್ಯಾಸಂಗವನ್ನು ನಡೆಸುತ್ತಿದ್ದರು. ಈ ಶಾಲೆಗಳು ಕೇವಲ ಪ್ರಮುಖವಾದ ಪಟ್ಟಣಗಳಲ್ಲಿ ಮಾತ್ರವೇ ಇದ್ದುದರಿಂದ ಗ್ರಾಮಾಂತರ ಪ್ರದೇಶದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ಗೋಜಿಗೇ ಹೋಗುತ್ತಿರಲಿಲ್ಲ. ವಿದ್ಯಾಭ್ಯಾಸಕ್ಕೆ, ಅದರಲ್ಲೂ ವಿಶೇಷವಾಗಿ ಬಾಲಕಿಯ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ನೀಡಬೇಕೆಂದು ಬ್ರಿಟೀಷ್ ಸರ್ಕಾರ ನೀಡಿದ ಸೂಚನೆಯ ಮೇರೆಗೆ ರೈಸರು ೧೮೬೮ರಲ್ಲಿ 'ಹೋಬಳಿ ಸ್ಕೂಲ್ ಪದ್ಧತಿ' ಎಂಬ ಹೊಸ ಶಾಲಾ ವ್ಯವಸ್ಥೆಯನ್ನು ರೂಪಿಸಿದರು. ಹೋಬಳಿ ಶಾಲೆಯನ್ನು ಆರಂಭಿಸುವ ಮತ್ತು ಅದಕ್ಕೆ ಶಿಕ್ಷಕರನ್ನು ನೇಮಿಸುವ 'ಇಸ್ತಿಹಾರ್ ನಾಮಾ'ದ ಮಾದರಿಯನ್ನು ಅನುಬಂಧದಲ್ಲಿ ಕೊಟ್ಟಿದೆ.

ಹೋಬಳಿ ಸ್ಕೂಲ್ ಪದ್ಧತಿ ರೈಸರಿಗೆ ಅಪಾರವಾದ ಕೀರ್ತಿಯನ್ನು ತಂದುಕೊಟ್ಟಿತು. ೧೮೬೮-೬೯ ರಲ್ಲಿ ಈ ವ್ಯವಸ್ಥೆ ಆರಂಭವಾದಾಗ ಮೈಸೂರು ಮತ್ತು ಕೊಡಗು ಎರಡೂ ಸೇರಿದಂತೆ ೧೪೬ ಶಾಲೆಗಳಿದ್ದದ್ದು ೧೮೭೯-೮೦ರ ವೇಳೆಗೆ ಇವುಗಳ ಸಂಖ್ಯೆ ೬೩೬ಕ್ಕೆ ಏರಿತು. ಮುಂದಿನ ಹತ್ತು ವರ್ಷಗಳಲ್ಲಿ ೧೩೭೬ ಶಾಲೆಗಳಲ್ಲಿ ೪೩,೩೧೪ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು.

ಶಾಲೆಗಳ ಪರಿವೀಕ್ಷಣೆಗೆಂದು ಕೊಡಗು ಮತ್ತು ಮೈಸೂರು ಸಂಸ್ಥಾನಗಳ ಆದ್ಯಂತ ಸಂಚರಿಸುವಂತಾದದ್ದು ರೈಸರ ಜೀವನದ ಗತಿಯನ್ನೇ ಬದಲಿಸಿತು. ಹೀಗೆ ನಾಡಿನ ಉದ್ದಗಲಕ್ಕೂ ಸಂಚರಿಸಿದ್ದರಿಂದ ಇಲ್ಲಿನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯಕ ಪರಂಪರೆಯ ನಿಕಟವಾದ ಪರಿಚಯ ಅವರಿಗಾಯಿತು. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ರೈಸರಿಗಿದ್ದ ಅಭಿರುಚಿಯನ್ನು ಗಮನಿಸಿದ ಆಗಿನ ಚೀಫ್ ಕಮಿಷನರ್ ಆಗಿದ್ದ ಎಲ್. ಬೌರಿಂಗರು ಮೇಜರ್ ಹೆನ್ರಿ ಡಿಕ್ಸನ್ ಎಂಬಾತ ೧೮೬೫ರಲ್ಲಿ ತೆಗೆದ ಸುಮಾರು ೧೫೦ ಶಾಸನಗಳ ಛಾಯಾಚಿತ್ರಗಳನ್ನು ರೈಸರ ಕೈಗೊಪ್ಪಿಸಿ ಅದನ್ನು ಓದಿ ಅರ್ಥೈಸುವಂತೆ ಆದೇಶಿಸಿದರು.## ಇದರ ಫಲವೇ ೧೮೭೯ರಲ್ಲಿ ಪ್ರಕಟವಾದ ಅವರ 'Mysore Inscriptions' ಸಂಪುಟ.

ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕ :

ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿದ್ದ ಜೆ. ಗ್ಯಾರೆಟ್‌ರು ಮೊದಲ ಬಾರಿ ೧೮೬೮ರಲ್ಲಿ, ಮತ್ತು ೧೮೭೩ರಲ್ಲಿ ಎರಡನೇ ಬಾರಿ ಫರ್ಲೋ ರಜೆಯ ಮೇಲೆ ಇಂಗ್ಲೆಂಡಿಗೆ

ಹೆನ್ರಿ ಡಿಕ್ಸನ್‌ರ ಕಾರ್ಯಚಟುವಟಿಕೆಗಳ ಬಗೆಗಿನ ಹೆಚ್ಚಿನ ವಿವರಗಳಿಗೆ ನೋಡಿ : ಮೂರ್ತಿ, ಶ್ರೀನಿವಾಸ ಎಸ್.ಎಲ್., ಹೆನ್ರಿ ಡಿಕ್ಸನ್ ಮತ್ತು ಕರ್ನಾಟಕದಲ್ಲಿ ಪುರಾತತ್ತ್ವ ಶೋಧನೆ, **ಇತಿಹಾಸ ದರ್ಶನ**, ಸಂ. ೧೬, ಪು. ೩೧೧-೩೧೩.

ಹೋದಾಗ ರೈಸರು ಶಾಲಾಪರಿವೀಕ್ಷಣಾಧಿಕಾರಿಯ ಜವಾಬ್ದಾರಿಯ ಜೊತೆಗೆ ಹಂಗಾಮಿಯಾಗಿ ನಿರ್ದೇಶಕರ ಸ್ಥಾನವನ್ನೂ ತುಂಬಬೇಕಾಯಿತು. ಗ್ಯಾರೆಟ್‌ರ ನಿವೃತ್ತಿಯ ನಂತರ ಅವರು ೧೮೭೪ರ ಜನವರಿ ೨೧ರಂದು ಇಲಾಖೆಯ ನಿರ್ದೇಶಕರಾಗಿ ನೇಮಕಗೊಂಡರು. ಆಗಿನಿಂದ ೧೮೮೮ರ ವರೆಗೆ, ಎಂದರೆ ಸುಮಾರು ೬ ವರ್ಷಗಳ ಅವಧಿಯಲ್ಲಿ ವಿಜ್ಞಾನ ವಿಷಯಗಳ ಬೋಧನೆ; ವೈದ್ಯಕೀಯ, ತಾಂತ್ರಿಕ ಶಿಕ್ಷಣಗಳ ಅಭಿವೃದ್ಧಿ; ಪಠ್ಯಪುಸ್ತಕಗಳ ರಚನೆ; ಹಂಟರ್ ನೇತೃತ್ವದ ಶಿಕ್ಷಣ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಣೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ರೈಸರು ಕೈಗೊಂಡ ಸುಧಾರಣಾ ಕ್ರಮಗಳ ಬಗ್ಗೆ ಪ್ರತ್ಯೇಕವಾದ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿದ್ದಾಗಲೇ ಅವರ ಮೊದಲ ಬಾರಿಗೆ ಮೈಸೂರು ಮತ್ತು ಕೊಡಗಿನ ಗೆಜ಼ೆಟಿಯರ್‌ಗಳನ್ನು ರಚಿಸಿದ್ದನ್ನು ಪ್ರತ್ಯೇಕ ಅಧ್ಯಾಯದಲ್ಲಿ ವಿವರಿಸಲಾಗಿದೆ.

ವೃತ್ತಿ ಜೀವನದ ಸಮಸ್ಯೆಗಳು :

ಕ್ರಿ.ಶ. ೧೮೮೧ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಅತ್ಯಂತ ಮಹತ್ವದ ವರ್ಷ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರನ್ನು ಪದಚ್ಯುತಗೊಳಿಸಿ ೧೮೩೧ ರಿಂದ ೫೦ ವರ್ಷಗಳ ಕಾಲ ಸಂಸ್ಥಾನವನ್ನು ಆಳಿದ ಬ್ರಿಟಿಷರು ೧೮೮೧ರ ಮಾರ್ಚ್ ೨೫ರಂದು ಅದನ್ನು ವಿಧ್ಯುಕ್ತವಾಗಿ ಚಾಮರಾಜ ಒಡೆಯರ್‌ರವರಿಗೆ ಹಸ್ತಾಂತರಿಸಿದರು. ರಾಜವಂಶೀಯರ ಪಾಲಿಗೆ ಅತ್ಯಂತ ಹರ್ಷದಾಯಕವಾಗಿದ್ದ ಈ ಸ್ಥಿತ್ಯಂತರ ಲೂಯಿರೈಸರ ಜೀವನದಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿತು. ರೈಸರ ಆತ್ಮಚರಿತ್ರೆಯಲ್ಲಾಗಲೀ, ಅವರನ್ನು ಕುರಿತಾದ ಇತರರ ಬರಹಗಳಲ್ಲಾಗಲೀ ಎಲ್ಲಿಯೂ ಕಿಂಚಿತ್ತೂ ಕಾಣಸಿಗದ ಈ ವಿವರಗಳು ಕರ್ನಾಟಕ ರಾಜ್ಯ ಪತ್ರಾಗಾರದ ಸೇವಾವಿವರದ ದಾಖಲೆಗಳಲ್ಲಿ ನಮೂದಾಗಿವೆ. ಈ ದಾಖಲೆಗಳ ಸವಿಸ್ತಾರವಾದ ಪರಿಶೀಲನೆಯಿಂದ ಎಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರೈಸರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರೆಂಬುದು ತಿಳಿದುಬರುತ್ತದೆ.

ಸಂಸ್ಥಾನದ ಹಸ್ತಾಂತರವಾದ ಕೂಡಲೇ ಆಡಳಿತದಲ್ಲಿನ ಅನಗತ್ಯವಾದ ಖರ್ಚು ವೆಚ್ಚಗಳನ್ನು ಕಡಿಮೆಮಾಡುವ ಸಲುವಾಗಿ ದಿವಾನರಾಗಿದ್ದ ರಂಗಾಚಾರ್ಲು ಅನೇಕ ಕ್ರಮ ಗಳನ್ನು ಕೈಗೊಂಡರು. ಅದರಲ್ಲಿ ಪ್ರಮುಖವಾದುದೆಂದರೆ ಆವರೆಗೆ ವಿವಿಧ ಇಲಾಖೆಗಳ ಮುಖ್ಯಸ್ಥರಾಗಿ ಕೆಲಸಮಾಡುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ಬದಲಿಗೆ ಕಡಿಮೆ ಸಂಬಳದ ದೇಶೀಯ ಅಧಿಕಾರಿಗಳನ್ನು ನೇಮಿಸುವುದು. ದೇಶೀಯರಿಗೆ ಹೆಚ್ಚಿನ ಉದ್ಯೋಗಾವಕಾಶ ಗಳನ್ನು ಕಲ್ಪಿಸಿಕೊಡುವ ಮೂಲಕ ಅವರ ಮನವನ್ನು ಗೆಲ್ಲಲು ಯತ್ನಿಸುತ್ತಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ನೀತಿ ಈ ನಿರ್ಧಾರಕ್ಕೆ ಮೂಲ ಕಾರಣವಾಗಿತ್ತು.

ಸಂಸ್ಥಾನದ ಹಸ್ತಾಂತರ ಪ್ರಕ್ರಿಯೆ ಇನ್ನೂ ಪೂರ್ಣಗೊಳ್ಳುವ ಮುಂಚೆಯೇ ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿದ್ದವು. ೧೮೭೯ರಲ್ಲಿ ವಿಸ್ಕೌಂಟ್ ಕ್ರಾನ್‌ಬ್ರೂಕ್ ಎಂಬ ಕಾರ್‍ಯದರ್ಶಿಯು ಗೌರ್ನರ್ ಜನರಲ್ ಇನ್ ಕೌನ್ಸಿಲ್‌ಗೆ ಬರೆದ ಪತ್ರವೊಂದರಲ್ಲಿ "..... that is in contemplation that several of the departments shall, for some time after the transfer (after the province from British to Native rule) be presided over by Europeans. This may at first be necessary but such an arrangement should, in the opinion of the Her Majesty's Government, be regarded as purely transitional and be terminated at the earliest date consistent with efficiency" ಎಂದು ಅಭಿಪ್ರಾಯ ಪಟ್ಟಿದ್ದಾನೆ.[1]

ಈ ಪತ್ರಕ್ಕೆ ".... reference is made to the proposed retention, for some time after the transfer, of Europeans at the head of several of the Departments of the Administration. We are fully alive to the desirableness of treating this arrangement has transitory: and we propose to restrict as much as possible from the commencement and to reduce speedily the number of Europeans in the higher ranks of the Mysore Administration" ಎಂಬ ಉತ್ತರ ಸಂದಿದೆ.[2]

೧೮೮೧ರಲ್ಲಿ ಸಂಸ್ಥಾನದ ಹಸ್ತಾಂತರವಾದ ಮೇಲೆ ಬ್ರಿಟಿಷ್ ಚಕ್ರಾಧಿಪತ್ಯದ ವಿದೇಶಾಂಗ ಖಾತೆಯ ಕಾರ್‍ಯದರ್ಶಿಯು ಮೈಸೂರಿನ ಚೀಫ್ ಕಮೀಷನರ್‌ರಿಗೆ ಪತ್ರವೊಂದನ್ನು ಬರೆದು "The other European officers enumerated in the 21st paragraph of your letter may also retain office for the next eighteen months: but it is understood to be the wish of the Government of India that after that period they should be replaced by Natives on the first opportunity" ಎಂದು ಆದೇಶಿಸಿದ್ದಾನೆ.[3] ಈ ರೀತಿಯಲ್ಲಿ ಮೈಸೂರು ಸರ್ಕಾರದ ಸೇವೆಗೆ ಒಂದೂವರೆ ವರ್ಷಗಳ ಕಾಲ ಎರವಲಾಗಿ ಬಂದವರಲ್ಲಿ ರೈಸರೂ ಒಬ್ಬರು. ಎರವಲು ಅವಧಿ ಮುಗಿದ ನಂತರ ಆ ಅಧಿಕಾರಿಗಳಿಗೆ ಬ್ರಿಟಿಷ್ ಅಧಿಪತ್ಯವು ಬೇರೆಲ್ಲಾದರೂ ಉದ್ಯೋಗವನ್ನು ಕಲ್ಪಿಸಿಕೊಡಲು ಚಿಂತಿಸುತ್ತಿತ್ತು.

---

1 *Mysore, Its Past and Present*, **The Madras Review**, Vol. III, No. 10, August 1897, P 229 ಇಲ್ಲಿ ಉದ್ಧೃತ.

2 ಅಲ್ಲೇ.

3 ಅಲ್ಲೇ.

ಈ ಹಿನ್ನೆಲೆಯಲ್ಲಿ ರೆಸಿಡೆಂಟನ ಸಹಾಯಕನಾಗಿದ್ದ ವಿಲಿಯಂ ಜಾನ್ ಕನ್ನಿಂಗ್ ಹ್ಯಾಂ ೧೮೮೨ರಲ್ಲಿ ರೈಸರಿಗೆ ಪತ್ರವೊಂದನ್ನು ಬರೆದು "ಬ್ರಿಟಿಷ್ ಚಕ್ರಾಧಿಪತ್ಯದಿಂದ ಮೈಸೂರು ಸರ್ಕಾರಕ್ಕೆ ಎರವಲಾಗಿ ನೀಡಿದ್ದ ನೀವು ಮತ್ತು ಇನ್ನೈದು ಮಂದಿ ಬ್ರಿಟಿಷ್ ಅಧಿಕಾರಿಗಳ ಸೇವಾವಧಿ ಇದೇ ವರ್ಷದ ಸೆಪ್ಟೆಂಬರ್ ೩೦ಕ್ಕೆ ಮುಕ್ತಾಯವಾಗುತ್ತದೆ. ಚಕ್ರಾಧಿಪತ್ಯವು ನಿಮಗೆ ಬೇರೆ ಉದ್ಯೋಗವನ್ನು ಕಲ್ಪಿಸಿಕೊಡಲು ಸಾಧ್ಯವಾಗದಿದ್ದರೆ ಮೈಸೂರು ಸರ್ಕಾರವು ಇನ್ನೂ ಮೂರೂವರೆ ವರ್ಷಗಳ ಕಾಲ, ಎಂದರೆ ಅಧಿಕಾರ ಹಸ್ತಾಂತರದ ಐದು ವರ್ಷಗಳ ವರೆಗೆ ನಿಮ್ಮನ್ನು ತನ್ನಲ್ಲಿಯೇ ಉಳಿಸಿಕೊಳ್ಳಲು ಸಿದ್ಧವಿದೆ. ಆದರೆ ಹಾಗೆ ಮಾಡಬೇಕಾದರೆ ನಿಮ್ಮ ಸೇವೆಯನ್ನು ಸಂಪೂರ್ಣವಾಗಿ ಮೈಸೂರು ಸರ್ಕಾರಕ್ಕೆ ವರ್ಗಾಯಿಸುವಂತೆ ಬ್ರಿಟಿಷ್ ಅಧಿಪತ್ಯವನ್ನು ಕೋರಲಾಗುವುದು. ಆಗ ನಿಮ್ಮ ಸೇವೆಯನ್ನು ತನಗೆ ಬೇಕಾದಂತೆ ಬಳಸಿಕೊಳ್ಳುವ ಅಧಿಕಾರ ಮೈಸೂರು ಸರ್ಕಾರದ್ದಾಗುತ್ತದೆ'' ಎಂದಿದ್ದಾನೆ.[1]

ಆ ವರ್ಷದ ಅಕ್ಟೋಬರ್‌ವರೆಗೂ ಬ್ರಿಟಿಷ್ ಅಧಿಪತ್ಯದಲ್ಲಿ ರೈಸರಿಗೆ ಸೂಕ್ತವಾದ ಯಾವುದೇ ಹುದ್ದೆ ಖಾಲಿ ಇರದಿದ್ದಾಗ ಅವರನ್ನು ಮೈಸೂರು ಸರ್ಕಾರವೇ ಬೇಕಾದರೆ ತನ್ನ ಸೇವೆಯಲ್ಲಿ ಉಳಿಸಿಕೊಳ್ಳಬಹುದೆಂದೂ, ಇಲ್ಲದಿದ್ದರೆ ಸಧ್ಯದಲ್ಲಿಯೇ ಪಂಜಾಬಿನಲ್ಲಿ ಖಾಲಿಯಾಗಲಿರುವ ನಾಲ್ಕನೇ ದರ್ಜೆಯ ಇನ್‌ಸ್ಪೆಕ್ಟರ್‌ನ ಹುದ್ದೆಗೆ ರೈಸರನ್ನು ನೇಮಿಸುವ ಉದ್ದೇಶವಿದೆಯೆಂದು ಬ್ರಿಟಿಷ್ ಸರ್ಕಾರದ ಕಾರ್ಯದರ್ಶಿಯಿಂದ ರೆಸಿಡೆಂಟರಿಗೆ ಸೂಚನೆ ಬಂದಿತು.[2] ರೈಸರಂತಹ ದಕ್ಷ ಅಧಿಕಾರಿಯ ಸೇವೆಯನ್ನು ಕಳೆದುಕೊಳ್ಳಲು ಇಚ್ಛಿಸದ ಮೈಸೂರು ಸರ್ಕಾರ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಪ್ರಸ್ತಾವನೆಯೊಂದನ್ನು ಕಳುಹಿಸಿ ರೈಸರಿಗೆ ಸೂಕ್ತವಾದ ಉದ್ಯೋಗದ ವ್ಯವಸ್ಥೆಯನ್ನು ಬ್ರಿಟಿಷ್ ಸರ್ಕಾರ ಮಾಡುವವರೆಗೆ ಮೈಸೂರು ಸಂಸ್ಥಾನವು ಅವರನ್ನು ವಿದ್ಯಾಭ್ಯಾಸದ ಮತ್ತು ಇತರ ಇಲಾಖೆಗಳ ಕಾರ್ಯದರ್ಶಿಯಾಗಿ ತಾತ್ಕಾಲಿಕವಾಗಿ ಉಳಿಸಿಕೊಳ್ಳಲು ಅನುಮತಿಯನ್ನು ಕೋರಿತು.[3] ನವೆಂಬರ್ ತಿಂಗಳಿನಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ದೊರಕಿತು.

ಶಾಲಾಪರಿವೀಕ್ಷಣಾಧಿಕಾರಿಯಾಗಿ ಮತ್ತು ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿ ಅನೇಕ ಮಹತ್ವದ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿದ್ದರೂ ರೈಸರ ಪಾಲಿಗೆ ವಿದ್ಯಾಭ್ಯಾಸದ ಇಲಾಖೆಯ ಕಾರ್ಯದರ್ಶಿಯ ಪಟ್ಟ ಸುಖಕರವೇನೂ ಆಗಿರಲಿಲ್ಲ. ಕಾರ್ಯದರ್ಶಿಯಾಗಿ ನೇಮಕವಾದ ಕೆಲವೇ ದಿನಗಳಲ್ಲಿ ಅವರು ಹಂಟರ್ ನೇತೃತ್ವದ ಶಿಕ್ಷಣ ಸುಧಾರಣಾ ಆಯೋಗದ ಕಾರ್ಯದರ್ಶಿಯಾಗಿ ಕಲ್ಕತ್ತೆಗೆ ತೆರಳಿದ್ದರಿಂದ

1 K.S.A., G.M. 8 of 1882, Sl. No. 3 dated 13-03-1882.

2 ಅದೇ., ದಾಖಲೆ ಸಂ. ೧೫೪೯/೩೧೦ ದಿ. ಅಕ್ಟೋಬರ್ ೫, ೧೮೮೨.

3 ಅದೇ., ದಾಖಲೆ ಸಂ. ೧೬೬೨/೩೧೫ ದಿ. ಅಕ್ಟೋಬರ್ ೧೭, ೧೮೮೨.

ಮತ್ತು ಆಗಲೇ ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿದ್ದರಿಂದ ಬಹುಶಃ ಇಲಾಖೆಯ ಕೆಲಸಗಳಿಗೆ ಹೆಚ್ಚಿನ ಗಮನವನ್ನು ನೀಡಲು ಸಾಧ್ಯವಾಗಲಿಲ್ಲ. ಹಾಗಾಗಿ ಆಡಳಿತದಲ್ಲಿ ಬಿಗಿ ತಪ್ಪಿತ್ತು. ಪತ್ರಿಕೆಗಳಲ್ಲಿ

> *"ವಿದ್ಯಾಭ್ಯಾಸದ ಯಿಲಾಖಾ ಡೈರೆಕ್ಟರ್ ಮೇ॥ ರೈಸ್ ಯಿವರು ನಂದಿ ಯಿಂದ ವಾಪಸ್ ಬಂದರೆಂತಲೂ ಅವರು ಈಚೆಗೆ ಸ್ವಲ್ಪ ಕಾಹಿಲೇಯಾಗಿರು ವಂತೆಯೂ ತಿಳಿಯಬರುತಿದೆ. ಇವರಿಗೆ ಕ್ಷಿಪ್ರದಲ್ಲಿ ನಿವೃತ್ತರಾಗಬೇಕೆಂಬ ತಾತ್ಪರ್ಯವುಂಟಾಗುವಂತೆವೊಂದು ಪ್ರಮಾದವುಂಟಾಗಿದೆ. ಇದೆಷ್ಟರ ಮಟ್ಟಿಗೆ ನಿಜವೋ ನಾವರಿಯೆವು"* ಮುಂತಾದ ವರದಿಗಳು ಪ್ರಕಟವಾದವು.[1]

ಪುರಾತತ್ತ್ವ ಇಲಾಖೆಯ ಆರಂಭ :

ಇಂತಹ ಕಠಿಣ ಪರಿಸ್ಥಿತಿಯಲ್ಲಿ ರೈಸರ ಬೆಂಬಲಕ್ಕೆ ನಿಂತವರು ಕೆ. ಶೇಷಾದ್ರಿ ಅಯ್ಯರ್ ಅವರು. ೧೮೮೩ರ ಫೆಬ್ರವರಿಯಲ್ಲಿ ರಂಗಾಚಾರ್ಲುರವರ ನಿಧನವಾದ ನಂತರ ದಿವಾನರಾಗಿ ನೇಮಕಗೊಂಡ ಅಯ್ಯರ್‌ರವರು ಕೇವಲ ಮಿತವ್ಯಯದ ಕಾರಣಕ್ಕೆ ರೈಸರಂತಹ ಅಧಿಕಾರಿ ಗಳನ್ನು ಕಳೆದುಕೊಳ್ಳಲು ಸಿದ್ಧರಿರಲಿಲ್ಲ. ಪುರಾತತ್ತ್ವ ಶೋಧನೆ ಮತ್ತು ಕನ್ನಡ ನಾಡು, ನುಡಿ, ಸಾಹಿತ್ಯಗಳಲ್ಲಿ ರೈಸರಿಗೆ ಆಳವಾದ ಪಾಂಡಿತ್ಯವಿದ್ದುದನ್ನು ಅರಿತಿದ್ದ ಅವರು ೧೮೮೪ರಲ್ಲಿ ಪುರಾತತ್ತ್ವ ಇಲಾಖೆಯನ್ನು ಹೊಸದಾಗಿ ಆರಂಭಿಸಿ ರೈಸರಿಗೆ ಅದರ ಜವಾಬ್ದಾರಿಯನ್ನು ವಹಿಸಿದರು. ತಮ್ಮ ಈ ನಿರ್ಧಾರದ ಹಿಂದಿನ ಉದ್ದೇಶ ಏನಿತ್ತೆಂಬುದನ್ನು ಶೇಷಾದ್ರಿ ಅಯ್ಯರ್ ರೈಸರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ವಿವರಿಸಿದ್ದಾರೆ :

> *"The Darbar were unwilling that an old officer of your standing should be sent out of the administration summarily and compelled to take up a much inferior appointment in a distant province.... You are doubtless aware that a small province like Mysore do not require a separate Educational Secretary or Director of Public Instruction. Such a separate appointment does not exist in other native states and it is not our intention to appoint a successor to you when you retire.*
>
> *Thus, you will see that the Darbar's consent to retain you temporarily as Secretary in Education and other Departments are based not upon public grounds, but wholly upon personal grounds having inference to you. You will also note that the Darbar never intended to employ you exclusively upon educational work. Indeed*

---

1 **ಕರ್ನಾಟಕ ಪ್ರಕಾಶಿಕಾ**, ಜುಲೈ ೯, ೧೮೮೩, ಪು. ೩.

> *that work, by itself would not have furnished any justification for your retention. Hence it was that I assigned to you, from time to time, in addition to Educational work, other works such as the supervision of the Police Office, the writing of the Census Report and recently the collection and deciphering of ancient inscriptions."*[1]

'ಸೂಕ್ತ ಸ್ಥಾನ ತೆರವಾದಲ್ಲಿ ಅಲ್ಲಿಗೆ ನಿಮ್ಮನ್ನು ನೇಮಿಸಲಾಗುವುದು' ಎಂಬ ಭರವಸೆಯನ್ನೇನೋ ಬ್ರಿಟಿಷ್ ಚಕ್ರಾಧಿಪತ್ಯ ನೀಡಿತ್ತಷ್ಟೇ. ಅಂತಹ ಒಂದು ಅವಕಾಶವು ೧೮೮೫ರಲ್ಲಿ ರೈಸರಿಗೆ ಒದಗಿತು. ಬ್ರಿಟಿಷ್ ಅಧಿಪತ್ಯದ ಅಧೀನದಲ್ಲಿದ್ದ ಪುರಾತತ್ತ್ವ ಇಲಾಖೆಯ ಮಹಾನಿರ್ದೇಶಕರಾಗಿದ್ದ ಅಲೆಕ್ಸಾಂಡರ್ ಕನ್ನಿಂಗ್‌ಹ್ಯಾಂ ಆಗ ನಿವೃತ್ತರಾಗಲಿದ್ದುದರಿಂದ ಆ ಸ್ಥಾನ ತೆರವಾಗುತ್ತಿತ್ತು. ಪುರಾತತ್ತ್ವ ಶೋಧನೆಯಲ್ಲಿ ಸಾಕಷ್ಟು ಪರಿಶ್ರಮವಿದ್ದ ತಮ್ಮನ್ನು ಆ ಹುದ್ದೆಗೆ ನೇಮಿಸಬೇಕೆಂದು ಕೋರಿ ರೈಸ್ ಅರ್ಜಿಯನ್ನು ಸಲ್ಲಿಸಿದರು.[2] ಅವರ ಪರವಾಗಿ ಮೈಸೂರಿನ ರೆಸಿಡೆಂಟರು ವರದಿಯನ್ನು ನೀಡಿದ್ದರಾದರೂ ಕಾರಣಾಂತರಗಳಿಂದ ಈ ಹುದ್ದೆಯ ನೇಮಕಾತಿಯನ್ನೇ ತಡೆಹಿಡಿಯಲಾಯಿತು. ಪರಿಣಾಮವಾಗಿ ರೈಸರಿಗೆ ಅಖಿಲ ಭಾರತಮಟ್ಟದಲ್ಲಿ ಪುರಾತತ್ತ್ವ ಸಂಶೋಧನೆಯನ್ನು ನಡೆಸುವ ಅವಕಾಶ ತಪ್ಪಿತು.

ನೇಮಕಾತಿಯ ವಿಷಯದಲ್ಲಿ ರೈಸರಿಗಾದ ನಿರಾಶೆ ಅವರ ಕ್ರಿಯಾಶೀಲತೆಯನ್ನು ಕುಗ್ಗಿಸಿದಂತೆ ಕಾಣುವುದಿಲ್ಲ. ಬದಲಿಗೆ ಅದು ಅವರ ಸಮಸ್ತ ಶಕ್ತಿಯು ಮೈಸೂರಿನ ಇತಿಹಾಸ ಸಂಶೋಧನೆಗೆ ಮುಡಿಪಾಗುವಂತೆ ಮಾಡಿತು. ಪುರಾತತ್ತ್ವ ಇಲಾಖೆಯ ಆರಂಭಕ್ಕೆ ಸಂಬಂಧಿಸಿದಂತೆ ದಿವಾನ್ ಶೇಷಾದ್ರಿ ಐಯ್ಯರ್‌ರವರು ವ್ಯಕ್ತಪಡಿಸಿದ

> *"..... Systematic Archaeological research began in Mysore in the beginning of the last year ..... We have entrusted this important work to Mr. L. Rice, C.I.E. who by his high scholarly attainments and varies researches in Indian antiquities is specially qualified to do full justice to it.... The Government feel confident that the researches now in progress will be means of throwing much new and valuable light upon the interesting ancient history of Mysore"*

ಎಂಬ ಅಭಿಪ್ರಾಯವನ್ನು[3] ಕಾರ್ಯರೂಪಕ್ಕೆ ತರಲು ಅವಶ್ಯಕವಾದ ರೀತಿಯಲ್ಲಿ ಇಲಾಖೆಯನ್ನು ರೈಸರು ಕಟ್ಟಿ ಬೆಳೆಸಿದರು.

---

1 ಅದೇ., ಕ್ರ.ಸಂ. ೯, ದಿ. ಏಪ್ರಿಲ್ ೨೨, ೧೮೮೫.

2 ಅದೇ., ಕ್ರ.ಸಂ. ೧, ದಿ. ಏಪ್ರಿಲ್ ೬, ೧೮೮೫.

3 Address of the Dewan of Mysore to the represenitive assembly of Mysore, 1896, P 13.

ಈ ಮೊದಲೇ ಪ್ರಸ್ತಾಪಿಸಿದಂತೆ ಇಲಾಖೆಯ ಸ್ಥಾಪನೆಯ ಹಿಂದಿನ ಪ್ರಮುಖವಾದ ಉದ್ದೇಶ 'ಸಂಸ್ಥಾನದ ಆದ್ಯಂತ ಹರಡಿಹೋಗಿರುವ ಶಾಸನಗಳನ್ನು ಅಭ್ಯಸಿಸುವುದರ ಮೂಲಕ ಮೈಸೂರಿನ ಪ್ರಾಚೀನ ಇತಿಹಾಸವನ್ನು ದಾಖಲಿಸುವುದು'. ಇದರೊಂದಿಗೆ ಕನ್ನಡ ಸಾಹಿತ್ಯಕೃತಿಗಳ ಬಗೆಗಿನ ಪ್ರೀತಿಯಿಂದ ರೈಸರು ಹಸ್ತಪ್ರತಿಗಳ ಸಂಗ್ರಹಣೆಯನ್ನು ಆರಂಭಿಸಿದರು. ಫ್ಲೀಟರಂತೆಯೇ ಅವರೂ ಅನೇಕ ಕನ್ನಡ ಲಾವಣಿ ಕಥನಕಾವ್ಯ ಮುಂತಾದವುಗಳನ್ನು ಇಲಾಖೆಯು ಆರಂಭವಾದ ವರ್ಷವೇ ಸಂಗ್ರಹಿಸಿದ್ದರು. ಆದರೆ ಸಮಯದ ಅಭಾವದಿಂದಾಗಿ ಜಾನಪದ ಅಧ್ಯಯನವನ್ನು ಮುಂದುವರೆಸಲು ಅವರಿಂದ ಸಾಧ್ಯವಾಗಲಿಲ್ಲ.[1] ಹೀಗಾಗಿ ಶಾಸನಾನ್ವೇಷಣೆ ಹಾಗೂ ಪ್ರಾಚೀನ ಸಾಹಿತ್ಯಕೃತಿಗಳ ಸಂಪಾದನೆ - ಈ ಎರಡೂ ಇಲಾಖೆಯ ಪ್ರಮುಖ ಕಾರ್ಯಕ್ರಮಗಳಾಗಿದ್ದವು. ಅಚ್ಚರಿಯ ಸಂಗತಿಯೆಂದರೆ ಆ ಕಾಲದಲ್ಲಿ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯ ಜವಾಬ್ದಾರಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿತ್ತೇ ವಿನಃ ಪುರಾತತ್ತ್ವ ಇಲಾಖೆಯದಾಗಿರಲಿಲ್ಲ. ಆದರೂ ರೈಸರು ಸ್ವಂತ ಆಸಕ್ತಿಯನ್ನು ವಹಿಸಿದ್ದರ ಫಲವಾಗಿ ಪ್ರಾಚೀನ ಸ್ಮಾರಕಗಳ ರಕ್ಷಣೆಯ ಹೊಣೆ ಮುಂದೆ ಪುರಾತತ್ತ್ವ ಇಲಾಖೆಯ ವ್ಯಾಪ್ತಿಗೆ ಸೇರಿತು.

ಕಛೇರಿಯ ಸಿಬ್ಬಂದಿ ವರ್ಗ

ಇಲಾಖೆಯು ಆರಂಭವಾದ ವರ್ಷದಲ್ಲಿ ರೈಸರ ನೆರವಿಗಿದ್ದ ಸಿಬ್ಬಂದಿ ಎಂದರೆ ಬಿ. ಶ್ರೀನಿವಾಸ ಅಯ್ಯಂಗಾರ್ ಎಂಬ ಮುನ್ಷಿ ಮಾತ್ರ. ಮೊದಲಿಗೆ ಆತನೂ ಇಲಾಖೆಯ ಕಾರ್ಯಗಳಲ್ಲಿ ಅಷ್ಟೇನೂ ಆಸಕ್ತಿಯನ್ನು ತೋರಿಸಲಿಲ್ಲವಾದರೂ ಕೆಲವೇ ದಿನಗಳಲ್ಲಿ ಸಂಸ್ಕೃತ ಮತ್ತು ಹಳೆಗನ್ನಡಗಳಲ್ಲಿ ರೈಸರಿಗೆ ಬೇಕಾದ ನೆರವನ್ನು ನೀಡುವಷ್ಟರ ಮಟ್ಟಿಗೆ ತಯಾರಾದ. 'ಹಳೆಯ ತಮಿಳನ್ನು ಚೆನ್ನಾಗಿ ಬಲ್ಲ ಒಬ್ಬ ಮತ್ತು ಒಬ್ಬ ಛಾಯಾಗ್ರಾಹಕನ ವ್ಯವಸ್ಥೆ ಕೂಡಲೇ ಆಗಬೇಕಿದೆ' ಎಂದು ರೈಸ್ ವರದಿ ಮಾಡಿದ್ದಾರೆ.[2] ಮರುವರ್ಷ ಗ್ರಂಥ ಮತ್ತು ತಮಿಳು ಲಿಪಿಯನ್ನು ಬಲ್ಲ ಮದ್ರಾಸಿನ ನಟೇಶ ಶಾಸ್ತ್ರಿ ಎಂಬುವರನ್ನು ಆರು ತಿಂಗಳ ಮಟ್ಟಿಗೆ ನೇಮಿಸಲಾಯಿತು. ಅನಂತರ ಕೆಲದಿನಗಳ ಮಟ್ಟಿಗೆ ಈ ಕೆಲಸವನ್ನು ನಿರ್ವಹಿಸಿದವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿಜ್ಞಾನದ ಪ್ರೊಫೆಸರ್ ಆಗಿದ್ದ ಪರಮಶಿವ ಅಯ್ಯರ್ ಎಂಬ ವಿದ್ವಾಂಸರು. ಅಲ್ಲದೆ ವೆಂಕಣ್ಣಾಚಾರಿ ಎಂಬ ಸಂಸ್ಕೃತ ವಿದ್ವಾಂಸ, ಛಾಯಾಚಿತ್ರಗಳನ್ನು ತೆಗೆಯಲು ಕ್ಯಾಪ್ಟನ್ ಟ್ರಿಪ್ ಎನ್ನುವವನ ಕೈಕೆಳಗೆ ನುರಿತ ಒಬ್ಬನನ್ನು ಇಲಾಖೆಯ ಮ್ಯಾನೇಜರ್ ಆಗಿ ನೇಮಿಸಲಾಯಿತು. ೧೮೮೮ರ ವೇಳೆಗೆ 'I have now a staff of select pandits and copyists who will be of great assistance' ಎಂದು ರೈಸರು ಉಲ್ಲೇಖಿಸುವಷ್ಟರ ಮಟ್ಟಿಗೆ[3] ಇಲಾಖೆ ಬೆಳೆದಿತ್ತು.

---

1 A.R., 1886.

2 ಅದೇ., ೧೮೮೬.

3 ಅದೇ.. ೧೮೮೮.

ಕರ್ನಾಟಕ ರಾಜ್ಯ ಪತ್ರಾಗಾರದ ಕಡತಗಳಲ್ಲಿರುವಂತೆ[1] ೧೮೯೬ರಲ್ಲಿ ಪುರಾತತ್ತ್ವ ಇಲಾಖೆಯಲ್ಲಿದ್ದ ಸಿಬ್ಬಂದಿವರ್ಗವೆಂದರೆ :

Manager :		ಕೆ. ರಾಮರಾವ್
Pandits and Proof Readers:	1.	ಶ್ರೀನಿವಾಸಯ್ಯಂಗಾರ್
	2.	ವೆಂಕಣ್ಣಾಚಾರಿ
	3.	ರಾಘವೇಂದ್ರಾಚಾರಿ
	4.	ವೆಂಕಟರಮಣಾಚಾರಿ
	5.	ಶಾಮಾಚಾರಿ
	6.	ಚೊಕ್ಕಣ್ಣ
	7.	ಪದ್ಮರಾಜ ಪಂಡಿತ
	8.	ನಾಗೇಶ ಶಾಸ್ತ್ರಿ
	9.	ವೆಂಕಟರಮಣ ಶಾಸ್ತ್ರಿ
	10.	ರಾಮಸ್ವಾಮಯ್ಯಂಗಾರ್
Writer :		ಮಾಧವರಾವ್
Drafts Man :		ನಮಶ್ಶಿವಾಯಂ ಪಿಳ್ಳೈ
Photographic Assistants :	1.	ನರಸಿಂಹಲು
	2.	ಅಬ್ದುಲ್ ರೆಹಮಾನ್
Daffedar :		ಮೊಹಿಯುದ್ದೀನ್
Head Peon :		ಮನ್ನಾಜಿ
Peons and Lasear :	1.	ದಸ್ತಗೀರ್
	2.	ಮೊಹಮ್ಮದ್ ಉಸ್ಮಾನ್
	3.	ಮೊಹಮ್ಮದ್ ಸಿಕಂದರ್
	4.	ಚನ್ನ
	5.	ಮುನಿಯಾಜಿ
	6.	ಸೈಯದ್ ಇಬ್ರಾಹಿಂ
	7.	ಸೋಮಾಜಿ

ಇವರಷ್ಟೇ ಅಲ್ಲದೇ ಕ್ಷೇತ್ರಕಾರ್ಯದ ಸಮಯದಲ್ಲಿ ನೆರವಾದ ಇತರ ಇಲಾಖೆಗಳ ಸ್ಥಳೀಯ ಅಧಿಕಾರಿಗಳನ್ನೂ ರೈಸರು ತಮ್ಮ ವರದಿಗಳಲ್ಲಿ ಹೆಸರಿಸಿದ್ದಾರೆ.

1 G.M. 118 of 1896.

ಇಲಾಖೆಯ ಕೆಲಸಕಾರ್ಯಗಳೆಂದರೆ ರೈಸರಿಗೆ ಅತ್ಯಂತ ಉತ್ಸಾಹ. ಸುಲಭವಾಗಿ ವಾಹನ ಸಂಚಾರದ ಸೌಲಭ್ಯವಿರದಿದ್ದ ಆ ಕಾಲದಲ್ಲಿ ಕುದುರೆಯನ್ನೇರಿ ಅವರು ಕಾಡು ಮೇಡುಗಳನ್ನು ಅಲೆದು ಶಾಸನಗಳನ್ನು ಹುಡುಕಿದ್ದಾರೆ. ರೈಸರ ಶಾಸನಾನ್ವೇಷಣೆಯ ನೈಜ ಚಿತ್ರಣವೊಂದನ್ನು ಮುಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಎಚ್.ವಿ. ಶ್ರೀರಂಗರಾಜು ಹೀಗೆ ನೀಡಿದ್ದಾರೆ :

> *"…. ಧರ್ಮಪುರ ಕಾಡಿನ ಮಧ್ಯದಲ್ಲಿದ್ದ ಒಂದು ಸಣ್ಣ ಗ್ರಾಮ. ಅದು ಹುಣಸೂರಿಗೆ ಏಳು ಮೈಲು ದೂರವಿದ್ದರೂ ಅಲ್ಲಿಗೆ ಹೋಗುವುದು ಕಷ್ಟವಾಗಿತ್ತು. ಆ ಕಾಡಿನಲ್ಲಿ ಹುಲಿ, ಆನೆ, ದಾಸರಹಾವು ಹೆಚ್ಚು ………….. ಹುಣಸೂರಿನಿಂದ ಧರ್ಮಪುರಕ್ಕೆ ನಾಲ್ಕು ಐದು ಜನ ಒಟ್ಟಾಗಿ ಎತ್ತಿನ ಗಾಡಿಯ ಮೇಲೋ, ನಡೆದೋ ಹೋಗುತ್ತಿದ್ದರು.*
>
> *ಆ ಊರಿನಲ್ಲಿ ಒಂದು ಗ್ರಾಂಟು ಸ್ಕೂಲು ಇತ್ತು. ನಾನು ಹುಣಸೂರಿಗೆ ಕೆಲಸಕ್ಕೆ ಸೇರಿದಾಗ ಅಲ್ಲಿ ಉಪಾಧ್ಯಾಯರು ಇರಲಿಲ್ಲ. ಅಲ್ಲಿ ಇಲ್ಲಿ ವಿಚಾರಿಸಿ ಆ ಊರಿನಲ್ಲಿ ಕೆಲಸ ಮಾಡಲು ಇಷ್ಟಪಟ್ಟವರೊಬ್ಬರನ್ನು ಅಲ್ಲಿಗೆ ನೇಮಿಸಿದೆ. ಶಾಲೆ ಹೇಗೆ ನಡೆಯುತ್ತದೆಂದು ಭೇಟಿ ಕೊಡಲು ಒಮ್ಮೆ ಎತ್ತಿನ ಗಾಡಿಯಲ್ಲಿ ಅಲ್ಲಿಗೆ ಹೋದೆ. ನನ್ನ ಜೊತೆಗೆ ಆಫೀಸಿನ ಗುಮಾಸ್ತರು ಮತ್ತು ಜವಾನ ಬಂದಿದ್ದರು.*
>
> *ಹೊಸ ಮೇಷ್ಟರು ಶಾಲೆ ಪ್ರಾರಂಭಿಸಿ ಇನ್ನೂ ಒಂದು ತಿಂಗಳೂ ಸಂದಿರ ಲಿಲ್ಲ. ನನ್ನ ಭೇಟಿಯೂ ಅವರಿಗೆ ಅಕಸ್ಮಾತ್ತಾಯಿತು. ಆದರೂ ಊರಿನವರನ್ನು ಕಲೆಹಾಕಿದರು. ಊರಿನವರ ಕ್ಷೇಮ ಸಮಾಚಾರವನ್ನೂ, ಶಾಲೆಯ ಬಗೆಗೆ ಅವರಿಗಿರುವ ಅಭಿಪ್ರಾಯವನ್ನೂ ಸಂಗ್ರಹಿಸುತ್ತಿದ್ದಾಗ ಒಬ್ಬ ವೃದ್ಧರು ಎದ್ದು ನಿಂತುಕೊಂಡರು. ಅವರು ಧರ್ಮಪುರದ ಕೇಶವ ದೇವಸ್ಥಾನದ ಅರ್ಚಕ ಮನೆತನಕ್ಕೆ ಸೇರಿದವರು. ಊರಿನವರಿಗೆಲ್ಲರಿಗಿಂತ ಹೆಚ್ಚು ತಿಳಿದವರು. ಕೇಶವ ದೇವಸ್ಥಾನ ಹೊಯ್ಸಳ ಶೈಲಿಯದು. ಎದ್ದು ನಿಂತ ಅವರು "ಸ್ವಾಮಿ ನಾನು ಒಂದು ಅರಿಕೆ ಮಾಡಿಕೊಳ್ಳಬೇಕು" ಎಂದರು.*
>
> *"ಏನು ಹೇಳಿ"*
>
> *"ನಮ್ಮ ಊರಿಗೆ ನೀವು ಬಂದಿದ್ದೀರಿ ಸ್ವಾಮಿ, ನಮಗೆ ತುಂಬಾ ಸಂತೋಷ. ನಾವಾರೂ ಪೋಲಿಸ್ ಕಾನ್‌ಸ್ಟೇಬಲ್‌ಗಿಂತ ಹಿರಿಯ ಅಧಿಕಾರಿ ನಮ್ಮೂರಿಗೆ ಭೇಟಿ ಕೊಟ್ಟಿದ್ದನ್ನು ಕಾಣೆವು! ನಮ್ಮ ಊರಿನ ಶಾನುಭೋಗರು ಮತ್ತು ಫಾರೆಸ್ಟ್ ಗಾರ್ಡ್‌ಗಳನ್ನು ಅಧಿಕಾರಿವರ್ಗಕ್ಕೆ ಸೇರಿಸಿಕೊಂಡಿಲ್ಲ."*

"ನಿಮ್ಮ ಊರಿಗೆ ಬರಲು ನನಗೂ ಸಂತೋಷವಾಗಿದೆ. ಕಾಡಿನ ಮಧ್ಯೆ ಇರುವ ನಿಮ್ಮ ಶಾಲೆ ಸರಿಯಾಗಿ ನಡೆಯುತ್ತಾ ಇದ್ದರೆ, ಇನ್ನು ಮುಂದೆ ಸಮರ್ಪಕ ವಾಗಿ ನಡೆಯುವಂತೆ ಸಹಕರಿಸಿದರೆ ನಾನು ಬಂದದ್ದಕ್ಕೆ ಸಾರ್ಥಕವಾಗುತ್ತದೆ."

"ಎಷ್ಟೋ ವರ್ಷಗಳಾದ ಮೇಲೆ ಒಬ್ಬ ಉಪಾಧ್ಯಾಯರು ಬಂದಿದ್ದಾರೆ; ಅವರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ ಶಾಲೆಯು ಸರಿಯಾಗಿ ನಡೆಯು ವಂತೆ ನೋಡಿಕೊಳ್ಳಲು ಪ್ರಯತ್ನಪಡುತ್ತೇವೆ. ಆದರೆ ಈ ಸಂದರ್ಭದಲ್ಲಿ ನನಗೆ ನೆನಪಿರುವ ಒಂದು ಸಂಗತಿಯನ್ನು ನಿವೇದಿಸಿಕೊಳ್ಳುತ್ತೇನೆ.

"ಆಗಲಿ ಹೇಳಿ".

"ಆಗ ನಾನಿನ್ನೂ ೧೨-೧೪ ವರ್ಷದ ಹುಡುಗ ಇರಬಹುದು. ನಮ್ಮ ಧರ್ಮಪುರಕ್ಕೆ ಈಗ ಜನರು ಬರಲು ಎಷ್ಟು ಕಷ್ಟವಾಗುತ್ತದೆ ತಮಗೆ ಗೊತ್ತು. ಆಗ ಸ್ಥಿತಿ ಹೇಗಿರಬಹುದೆಂಬುದನ್ನು ತಾವು ಊಹಿಸಿಕೊಳ್ಳಬಹುದು. ಆಗ ಒಬ್ಬ ಬಿಳಿ ಸಾಹೇಬರು ಕುದುರೆಯ ಮೇಲೆ ಊರಿಗೆ ಬಂದರು. ಅವರನ್ನು ನೋಡಿ ಊರಿನವರಿಗೆಲ್ಲ ಭಯ. ಮುಖ ತೋರಿಸದೆ ಮನೆಯಲ್ಲಿ ಅಡಗಿಕೊಂಡವರೇ ಹೆಚ್ಚು. ಅವರಿಗೆ ಕನ್ನಡ ಚೆನ್ನಾಗಿ ಬರುತ್ತಿತ್ತು. ಸ್ವಲ್ಪ ಧೈರ್ಯವಾಗಿ ಮಾತನಾಡಬಲ್ಲ ಯಾರನ್ನೋ ವಿಚಾರಿಸಿ ದೇವಸ್ಥಾನದ ಹತ್ತಿರಕ್ಕೆ ಬಂದರು.

ನಮ್ಮ ಹಿರಿಯರೇ ದೇವಸ್ಥಾನದ ಅರ್ಚಕರು. ದೇವಸ್ಥಾನದಲ್ಲಿ ಅವರಿಗೆ ಮುಖ್ಯವಾಗಿ ಬೇಕಾಗಿದ್ದುದು ಒಂದು ಶಾಸನ. ಆ ಶಾಸನವನ್ನು ಓದಿಕೊಂಡು ಹೊರಟುಹೋದರು. ಆ ಬಿಳಿ ಸಾಹೇಬರ ಧೈರ್ಯ, ಕೆಲಸದ ಮೇಲಿದ್ದ ಶ್ರದ್ಧೆ ಎಷ್ಟು ಸ್ವಾಮಿ! ಮೈಸೂರಿನಿಂದ ಈ ದಟ್ಟವಾದ ಕಾಡಿಗೆ ಕುದುರೆಯ ಮೇಲೆ ಬಂದಿದ್ದರಲ್ಲಾ ಕೇವಲ ಈ ಶಾಸನವನ್ನು ಓದಲು! ಅವರಾದ ಮೇಲೆ ನಮ್ಮೂರಿಗೆ ಭೇಟಿ ಕೊಟ್ಟ ದೊಡ್ಡ ಅಧಿಕಾರಿಗಳೆಂದರೆ ನೀವೇ."

"ಆ ಬಿಳಿಸಾಹೇಬರ ಹೆಸರು?"

"ರೈಸ್ ಸಾಹೇಬರು".

ಈ ಮಾತನ್ನು ಕೇಳಿ ನನಗೆ ರೋಮಾಂಚನವಾಯಿತು. ರೈಸ್ ಸಾಹೇಬರು ಶಿಕ್ಷಣ ಇಲಾಖೆಯ ಡೈರೆಕ್ಟರ್ ಆಗಿದ್ದರು. ಜೊತೆಗೆ ಶಾಸನ ಇಲಾಖೆಯೂ ಅವರಿಗೆ ಸೇರಿತ್ತು. ಶಾಲೆಗಳ ಸಂಖ್ಯೆ ಹೆಚ್ಚಾಗಿಲ್ಲದೆ ಆಡಳಿತ ಸಮಸ್ಯೆಗಳು ಕ್ಲಿಷ್ಟವಾಗಿಲ್ಲದ ಆ ಕಾಲದಲ್ಲಿ ಎರಡು ಇಲಾಖೆಗಳನ್ನು ನೋಡಿಕೊಳ್ಳುವುದು ಕಷ್ಟವಾಗಿಲ್ಲದಿರಬಹುದು. ಆದರೆ ರೈಸ್ ಸಾಹೇಬರಂತೆ ಶ್ರದ್ಧೆ, ಪಾಂಡಿತ್ಯಪ್ರೇಮ

ಇರುವ ಅಧಿಕಾರಿಗಳುಂಟೆ? ಯಾರೋ ಹಳ್ಳಿಗನಿಂದ ಕಾಡಿನ ಮಧ್ಯದ ದೇವಸ್ಥಾನದಲ್ಲಿ ಒಂದು ಶಾಸನವಿದೆ ಎಂಬ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಓದಲು ಏಕಾಕಿಯಾಗಿ ತಾವೇ ಹೋದ ಆ ಚೇತನಕ್ಕೆ ನಮೋ ನಮಃ! ನಾನು ಡಿ.ಪಿ.ಐ. ಆದಮೇಲೆ ಡಿ.ಪಿ.ಐ. ಕೋಣೆಗೆ ಹೋಗಿ ನನ್ನ ಆಸನದ ಮೇಲೆ ಕೂತುಕೊಳ್ಳುವುದಕ್ಕೆ ಮೊದಲು ಆ ಕೋಣೆಯಲ್ಲಿರುವ ಅನೇಕ ಡೈರೆಕ್ಟರ ಫೋಟೋಗಳಲ್ಲಿ ನಮಸ್ಕಾರ ಮಾಡುತ್ತಿದ್ದ ಕೆಲವು ಫೋಟೋಗಳಲ್ಲಿ ರೈಸರದೂ ಒಂದು." [1]

ತಾವು ಸ್ವತಃ ಆಸಕ್ತಿವಹಿಸಿ ಇಲಾಖೆಯ ಕಾರ್ಯಗಳನ್ನು ಮಾಡುವ ಉತ್ಸಾಹವಷ್ಟೇ ಅಲ್ಲದೆ ಇತರ ಇಲಾಖೆಗಳಲ್ಲಿದ್ದ ಯೋಗ್ಯರಾದ ಅಧಿಕಾರಿಗಳನ್ನು ಗುರುತಿಸಿ ಅವರನ್ನು ತಮ್ಮ ಇಲಾಖೆಗೆ ಎರವಲಾಗಿಯೇ ಅಥವಾ ಪೂರ್ಣಾವಧಿಗೋ ಆಯ್ದುಕೊಳ್ಳುವ ಜಾಣ್ಮೆಯೂ ರೈಸರಲ್ಲಿತ್ತು. ಬೆಳಗಾವಿಯ ಸರ್ದಾರ್ ಹೈಸ್ಕೂಲಿನಲ್ಲಿ ಪ್ರಥಮ ಸಹಾಯಕ ಉಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದ ಕೆ.ಬಿ. ಪಾಠಕ್ ಈ ರೀತಿಯಲ್ಲಿ ಮೈಸೂರಿನ ಪುರಾತತ್ತ್ವ ಇಲಾಖೆಗೆ ಎರವಲಾಗಿ ಬಂದವರಲ್ಲಿ ಮೊದಲಿಗರು. ಶಾಲಾ ಅಧ್ಯಾಪಕರಾಗಿದ್ದ ಕಾಲದಲ್ಲಿಯೇ ಜೈನಶಾಸ್ತ್ರದ ಬಗೆಗೆ ಹೆಚ್ಚಿನ ವ್ಯಾಸಂಗವನ್ನು ನಡೆಸಿ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದ ಪಾಠಕರ ಯೋಗ್ಯತೆಯನ್ನು ಗುರುತಿಸಿದ ಬೆಳಗಾವಿಯ ಜಿಲ್ಲಾಧಿಕಾರಿಯಾಗಿದ್ದ ಫ್ಲೀಟರು ಮುಂದೆ ತಾವು ಭಾರತ ಸರ್ಕಾರದ ಶಾಸನತಜ್ಞರಾಗಿ ನೇಮಕಗೊಂಡಾಗ ಸಂಬಳದ ಬಡ್ತಿಯೊಂದಿಗೆ ತಮ್ಮ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಕರೆ ಕಳುಹಿಸಿದರಾದರೂ ಪಾಠಕರು ಈ ಆಹ್ವಾನವನ್ನೂ ಮನ್ನಿಸಲಿಲ್ಲ. ಆದರೆ, ರೈಸರು ಮುಂದೆ ಪಾಠಕರ ಮನವೊಲಿಸಿ ಎರಡು ವರ್ಷಗಳ ಮಟ್ಟಿಗೆ ಅವರ ಸೇವೆಯನ್ನು ಬ್ರಿಟಿಷ್ ಸರ್ಕಾರದಿಂದ ಎರವಲು ಪಡೆದುಕೊಂಡರು. 'ಕವಿರಾಜಮಾರ್ಗ'ದ ಸಂಪಾದನಕಾರ್ಯವನ್ನು ಅವರಿಂದ ಮಾಡಿಸಿದರು.

ಅದೇ ರೀತಿಯಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸುತ್ತಿದ್ದ ಆರ್. ನರಸಿಂಹಾಚಾರ್ಯರನ್ನೂ ರೈಸ್ ತಮ್ಮ ಇಲಾಖೆಗೆ ಬರಮಾಡಿಕೊಂಡರು. ತೋಗೆರೆ ನಂಜುಂಡಶಾಸ್ತ್ರಿಗಳು, ಕಡಬದ ನಂಜುಂಡಶಾಸ್ತ್ರಿಗಳು ಮುಂತಾದವರು ರೈಸರ ಕೈಕೆಳಗೆ ದುಡಿದ ಇತರ ವಿದ್ವಾಂಸರಲ್ಲಿ ಕೆಲವರು.

ಇಲಾಖೆಯ ಕಾರ್ಯನಿರ್ವಹಣೆ :

ರೈಸರ ಮಾರ್ಗದರ್ಶನ ಹಾಗೂ ಸಮರ್ಥರಾದ ದೇಶೀಯ ಸಹಾಯಕರ ದುಡಿಮೆಯಿಂದಾಗಿ ಪುರಾತತ್ತ್ವ ಇಲಾಖೆಯ ಕಾರ್ಯ ಚಟುವಟಿಕೆಗಳು ತೀವ್ರಗೊಂಡವು. ಶಾಸನಗಳ ಅಧ್ಯಯನ ಹಾಗೂ ಪ್ರಾಚೀನ ಸಾಹಿತ್ಯ ಕೃತಿಗಳ ಪ್ರಕಟಣೆಯ ವಿವರಗಳು

1 ಶ್ರೀರಂಗರಾಜು, ಎಚ್.ವಿ., **ನಾನು ತುಳಿದ ಹಾದಿ**. ಪು. ೩೪-೩೭. ೧೯೭೮. ಬೆಂಗಳೂರು.

ಪ್ರತ್ಯೇಕ ಅಧ್ಯಾಯಗಳಲ್ಲಿ ಚರ್ಚಿತವಾಗಿರುವುದರಿಂದ ಅವೆರಡನ್ನು ಉಳಿದು ರೈಸರ ಕಾಲದಲ್ಲಿ ಆದ ಇತರ ಪ್ರಮುಖ ಪುರಾತತ್ತ್ವ ಶೋಧಗಳನ್ನು ಇಲ್ಲಿ ಗಮನಿಸಬಹುದಾಗಿದೆ.

ಅ. ಕತ್ತಲೆ ಬಸದಿಯ ಭಿತ್ತಿ ಶಿಲ್ಪಗಳ ಶೋಧ :

೧೮೮೭-೮೮ನೇ ಸಾಲಿನಲ್ಲಿ ರೈಸರು ಸಂಶೋಧಿಸಿದ ಪ್ರಮುಖ ಶಿಲ್ಪಗಳೆಂದರೆ ಶ್ರವಣಬೆಳಗೊಳದ ಕತ್ತಲೆ ಬಸದಿಯಲ್ಲಿನ ಜಾಲಂಧ್ರಗಳಲ್ಲಿನ ಶಿಲ್ಪಗಳದ್ದು. ಈ ಬಗ್ಗೆ ಇಲಾಖೆಯ ವಾರ್ಷಿಕ ವರದಿಯಲ್ಲಿ ಅವರು ನೀಡಿರುವ ವಿವರಗಳಿವು :

> *"The discovery was made in the Kattale basti or temple of darkness.... of a perforated screen containing nearly a hundred table and of minute sculptured representations of scenes in the lives of Chandragupta and Bhadrabahu. The interesting work of art probably never before seen by a European, forms the facade of the Chandragupta basadi, which there seems now no doubt is the oldest in the place. Several of the groups on the screen are unfortunately mutilated, and the whole was thickly coated with oil and black grease which vigorous scrubbing for two or three days served only partially to remove."*[1]

ಇಲ್ಲಿ ರೈಸರು ಚಂದ್ರಗುಪ್ತ ಬಸದಿಯನ್ನು ಶ್ರವಣಬೆಳಗೊಳದ ಅತ್ಯಂತ ಪ್ರಾಚೀನ ಬಸದಿ ಎಂದಿರುವುದನ್ನು ಅ. ಸುಂದರ ಅವರು ಒಪ್ಪಿದ್ದಾರೆ.[2] ಕತ್ತಲೆ ಬಸದಿಯೂ ಚಂದ್ರಗುಪ್ತ ಬಸದಿಯ ಒಂದು ಭಾಗ ಎಂಬ ಮಾತನ್ನು ರೈಸರು ಸ್ಪಷ್ಟವಾಗಿ ಹೇಳಿಲ್ಲವಾದರೂ ವರದಿಯ ಶೀರ್ಷಿಕೆ ಅದನ್ನೇ ಧ್ವನಿಸುತ್ತದೆ. ಹಾಗಾಗಿ ಕತ್ತಲೆಬಸದಿಯೂ ಚಂದ್ರಗುಪ್ತ ಬಸದಿಯಷ್ಟೇ ಪ್ರಾಚೀನ ಎಂದು ರೈಸ್ ಭಾವಿಸಿದ್ದಾರೆಂದು ತೋರುತ್ತದೆ. ಕತ್ತಲೆ ಬಸದಿಯ ವಾಸ್ತುಶಿಲ್ಪ ಲಕ್ಷಣಗಳನ್ನು ಆಧರಿಸಿ ಅ. ಸುಂದರ ಅವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[3] ಆದರೆ ಶೆಟ್ಟರ್ ಅವರು ಅಲ್ಲಿರುವ ಆದಿನಾಥನ ಮೂರ್ತಿಯ ಪೀಠದಲ್ಲಿನ ಶಾಸನದ ಆಧಾರದ ಮೇಲೆ ಇದರ ನಿರ್ಮಾಣ ಕಾಲವನ್ನು ಸುಮಾರು ಕ್ರಿ.ಶ. ೧೧೧೮ ಎಂದು ಪರಿಗಣಿಸಿದ್ದಾರೆ.[4]

---

1 A.R., 1887-88, P 6.

2 ಸುಂದರ, ಅ., *ಶ್ರವಣಬೆಳಗೊಳದಲ್ಲಿನ ಜೈನ ಬಸ್ತಿಗಳು : ಒಂದು ಸಮೀಕ್ಷೆ, ಶ್ರವಣಬೆಳಗೊಳ : ಒಂದು ಸಮೀಕ್ಷೆ,* (ಬೆಂ.ವಿ.ವಿ., ೧೯೮೩), ಪು. ೪೯.

3 ಅಲ್ಲೇ, ಪು. ೫೪.

4 Setter, S.S., Sravana Belagola, (Dharwad, 1981), P 17.

ರೈಸರು ಜಾಲಂಧ್ರದ ಪಟ್ಟಿಕೆಗಳನ್ನು ವಿವರಿಸುವಾಗ ಅದರ ಶಿಲ್ಪಿ ಯಾರೆಂಬುದನ್ನು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಶೆಟ್ಟರ್ ಅವರ ಪ್ರಕಾರ ಈ ಪಟ್ಟಿಕೆಗಳನ್ನು ಕೆತ್ತಿದವನು ದಾಸೋಜನೆಂಬ ಹೊಯ್ಸಳ ಶಿಲ್ಪಿ.[1] ಆದರೆ ಎ.ಕ.ದ ಪರಿಷ್ಕೃತ ಸಂಪುಟದಲ್ಲಿ ದಾಸೋಜನಿಗೆ ಸಂಬಂಧಿಸಿದಂತೆ ಕೇವಲ ಗಂಧವಾರಣ ಬಸದಿಯ ಸಮೀಪದ ಶಾಸನವನ್ನು ಮಾತ್ರ ಉಲ್ಲೇಖಿಸಲಾಗಿದೆ.[2]

ಆ. ನಾಣ್ಯಶಾಸ್ತ್ರ ಕ್ಷೇತ್ರ :

ನಾಣ್ಯಶಾಸ್ತ್ರದ ಅಧ್ಯಯನದಲ್ಲಿ ರೈಸರ ಮಹತ್ತ್ವ ಕೊಡುಗೆ ಎಂದರೆ ಬೆಂಗಳೂರಿನಲ್ಲಿ ದೊರೆತ ರೋಮನ್ ನಾಣ್ಯಗಳ ಬಗೆಗಿನ ಅವರ ಅಧ್ಯಯನ.[3]

'ವಿಜ್ಞಾನ ದೀಪಿಕೆ' ಎಂಬ ಪತ್ರಿಕೆಯು ಈ ರೋಮನ್ ನಾಣ್ಯಗಳ ಶೋಧವನ್ನು ಕುರಿತಾದ ಸವಿವರವಾದ ವರದಿಯನ್ನು ಪ್ರಕಟಿಸಿದ್ದು ಅದನ್ನು ಯಥಾವತ್ತಾಗಿ ಇಲ್ಲಿ ಕಾಣಬಹುದಾಗಿದೆ :

ಬೆಂಗಳೂರು ಸಮೀಪದಲ್ಲಿ ಸಿಕ್ಕಿದ ನಿಕ್ಷೇಪ

"ಸನ್ ೧೮೯೧ನೇ ಇಸವಿ ಏಪ್ರಿಲ್ ೧೭ನೇ ತಾರೀಖಿನ ದಿವಸ ಬೆಂಗಳೂರು-ಹಿಂದೂಪುರದ ರೈಲ್ವೆ ಮಾರ್ಗದ ಹತ್ತಿರ, ಬೆಂಗಳೂರು ರೈಲ್ ಸ್ಟೇಷನಿಗೆ ೩॥ ಮೈಲಿ ದೂರದಲ್ಲಿ, ರೈಲ್‌ರಸ್ತೆಗೂ, ಯಶವಂತಪುರ ಗ್ರಾಮಕ್ಕೂ ನಡುವೆ ರೈಲ್ವೆ ಸ್ಟೇಷನಿನ ಕಾಮಗಾರಿ ಮಾಡುತ್ತಿರುವಾಗ ನೆಲದಲ್ಲಿ ೧॥ ಅಡಿ ಆಳದಲ್ಲಿ ಒಂದು ಮಡಕೆಯಲ್ಲಿ ಒಂದು ನಿಕ್ಷೇಪವು ಸಿಕ್ಕಿತು. ಕೆಲಸ ಮಾಡುತ್ತಿದ್ದವನ ಪಿಕಾಸಿಪೆಟ್ಟಿನಿಂದ ಮಡಕೆ ಒಡೆದು ಹೋಯಿತು. ಈ ನಿಕ್ಷೇಪವನ್ನು ಸ್ಟೋರ್ ಕೀಪರ್ ಮೆ॥ ಮೆಯಿಲ್ ಸಾಹೇಬರು ಆರ್ಕಿಯೋಲಾಜಿಕಲ್ ಡೈರೆಕ್ಟರಾದ ಮೆ॥ ಎಲ್. ರೈಸ್, ಸಿ.ಐ.ಇ. ಸಾಹೇಬರ ಬಳಿಗೆ ಕಳುಹಿಸಿದರು. ಮೆ॥ ರೈಸ್ ಸಾಹೇಬರು ಇದನ್ನು ಚೆನ್ನಾಗಿ ಪರೀಕ್ಷಿಸಿ ತಮ್ಮ ತಾತ್ಪರ್ಯವನ್ನು ಸೂಚಿಸಿ ರಿಪೋರ್ಟು ಮಾಡಿದ್ದಾರೆ. ಆ ರಿಪೋರ್ಟಿನ ಸಾರಾಂಶವು ವಸ್ತು ಪಾಠಗಳನ್ನೂ; ಚಮತ್ಕಾರವಾದ ಕಥೆಗಳನ್ನೂ ಹೇಳುವ ಉಪಾಧ್ಯಾಯರಿಗೆ ಉಪಯೋಗನಾಗಿರುನುದಾದ ಕಾರಣ ಅದನ್ನು ಈ ಕೆಳಗೆ ಬರೆದಿದೇವೆ.

---

1 ಅಲ್ಲೇ. ಪು. ೧೫.

2 ಸಂ. ೨. ೧೯೭೩. ಪು. ೧೨೨.

3 ರೈಸರು ಈ ಬಗ್ಗೆ ಪ್ರತ್ಯೇಕವಾದ ವರದಿಯೊಂದನ್ನು ಪ್ರಕಟಿಸಿದ್ದಾರೆಂದು ತಿಳಿದುಬಂದಿದೆಯಾದರೂ ಅದು ನೋಡಲು ದೊರೆತಿಲ್ಲ.

ಈ ನಿಕ್ಷೇಪದಲ್ಲಿ ಸಿಕ್ಕಿದುದೆಲ್ಲ ೧೬೩ ಬೆಳ್ಳೀ ನಾಣ್ಯಗಳು. ಇದರ ಸಮೀಪದಲ್ಲೇ ಒಂದು ಕಬ್ಬಿಣದ ಭಾಲೆಯಮೊನೆಯೂ ಒಂದು ಸೌಟೂ ಸಿಕ್ಕಿದುವು. ಈ ನಾಣ್ಯಗಳನ್ನೂ ಪರೀಕ್ಷಿಸುವಲ್ಲಿ ಅವುಗಳೆಲ್ಲ ರೋಂ ಚಕ್ರಾಧಿಪತ್ಯದ ಅಗಸ್ಟಸ್, ಟೈಬೀರಿಯಸ್, ಕಾಲಿಗುಲ, ಕ್ಲಾಡಿಯನ್, ಆಂಟೊನಿಯೋ, ಈ ಚಕ್ರವರ್ತಿಗಳ ಕಾಲದ ನಾಣ್ಯಗಳಾಗಿ ಕಂಡು ಬಂದವು. ಆದ ಕಾರಣ ಇವು ಕ್ರಿ.ಪೂ. ೨೬ರಿಂದ ಕ್ರಿ.ಶ. ೫೧ರವರೆಗಿನ ಕಾಲದವುಗಳೆಂದೂ ಸುಮಾರು ೧೯೦೦ ವರ್ಷಗಳ ಹಿಂದಿನವೆಂದೂ ಗೊತ್ತಾಯಿತು. ಇವುಗಳಲ್ಲಿ ಪ್ರತಿಯೊಂದರ ಬೆಲೆಯು ೮ ೧/೨ ಪೆನ್ಸ್ ಎಂದರೆ (ಸೌರನ್ ೧ಕ್ಕೆ ೧೦ ರೂಪಾಯಿ ಮೇರೆ) ೧೭ ದುಡ್ಡು ಅಥವಾ ೫ ಆಣೆ ೮ ಪೈ.

ರೋಮನ್ ಚಕ್ರಾಧಿಪತ್ಯವು ಈ ದೇಶದವರೆಗೂ ವಿಸ್ತರಿಸಿರಲಿಲ್ಲ. ಈ ದೇಶದಲ್ಲಿ ರೋಮನ್ ನಾಣ್ಯಗಳು ಚಲಾವಣೆಯಲ್ಲಿರಲೂ ಇಲ್ಲ. ಹೀಗಿರುವಲ್ಲಿ ಆ ನಾಣ್ಯಗಳು ಬೆಂಗಳೂರಿನ ಸಮೀಪಕ್ಕೆ ಹೇಗೆ ಬಂದವು? ಅವುಗಳಲ್ಲಿ ಅಲ್ಲಿ ಯಾರು ಹೂತಿಟ್ಟಿರಬಹುದು? ಎಂಬುದನ್ನು ತಿಳಿಯ ಬೇಕೆಂಬ ಕುತೂಹಲವು ಸ್ವಾಭಾವಿಕವಾಗಿ ಹುಟ್ಟುವುದು. ಇವನ್ನು ಕೆಲವು ಗುರ್ತುಗಳಿಂದಲೂ, ಸಂದರ್ಭಗಳಿಂದಲೂ ಪೂರ್ವ ಚರಿತ್ರೆಯ ಜ್ಞಾನದಿಂದಲೂ ಮನುಷ್ಯಸ್ವಭಾವದ ಪರಿಚಿತೆಯಿಂದಲೂ ಊಹಿಸ ಬೇಕಾಗಿದೆ.

ರೋಮನ್ ಜನರು ಈ ದೇಶಕ್ಕೂ ನಮ್ಮವರು ರೋಮನ್ ಚಕ್ರಾಧಿಪತ್ಯದ ದೇಶಗಳಿಗೂ ಹೋಗಿಬರುವುದು ವಿಶೇಷವಾಗಿರಲಿಲ್ಲ. ಆದಾಗ್ಯೂ ಈ ದೇಶದಲ್ಲಿ ಉತ್ಪತ್ತಿಯಾಗುವ ಅನೇಕ ವಸ್ತುಗಳು ರೋಮ್ ದೇಶಕ್ಕೆ ರಫ್ತಾಗುತ್ತಿದ್ದುವು. ಇವುಗಳಲ್ಲಿ ಶ್ರೀಗಂಧ, ರೇಷ್ಮೆಬಟ್ಟೆಗಳು, ಜಾಯಿಪತ್ರೆಕಾಯಿ ಮುಂತಾದುವು; ನಾಗದಂತ, ಮುತ್ತು, ರತ್ನಗಳು, ವಜ್ರಗಳು, ಇವು ಮುಖ್ಯವಾದುವು. ಕೋಯಮುತ್ತೂರು ಜಿಲ್ಲೆಯಲ್ಲಿರುವ ಧಾರಾಪುರದ ಹತ್ತರ ಪಡಿಯಾರ್ ಎಂಬ ಸ್ಥಳದಲ್ಲಿ ರೋಮನ್ ನಾಣ್ಯಗಳು ಸಿಕ್ಕಿರುವುದುಂಟು. ಇದಕ್ಕೆ ಕಾರಣವೇನೆಂದರೆ ಅಲ್ಲಿ ಒಳ್ಳೇ ಪಚ್ಚೆಗಳು ಸಿಗುತ್ತವೆ. ಅವುಗಳನ್ನು ಕೊಳ್ಳುವುದಕ್ಕಾಗಿ ರೋಮನ್ ಜನರೋ ಅಥವಾ ಇತರ ವರ್ತಕರೋ ರೋಮನ್ ನಾಣ್ಯಗಳನ್ನು ಅಲ್ಲಿಗೆ ತಂದು ಕಾರಣಾಂತರ ಗಳಿಂದ ಅವನ್ನು ಅಲ್ಲೇ ಬಿಟ್ಟು ಹೋಗಿರಬಹುದು. ಆದರೆ ಬೆಂಗಳೂರು

ಸಮೀಪದಲ್ಲಿ ರೋಮ್ಯ ನಾಣ್ಯಗಳು ನೆಲದಲ್ಲಿ ಸಿಕ್ಕುವುದರ ಕಾರಣ ವೇನೋ ಇನ್ನೂ ವಿಚಾರಿಸಬೇಕಾಗಿದೆ.

ಮೆ॥ ರೈಸ್ ಸಾಹೇಬರು ಆ ನಾಣ್ಯಗಳಲ್ಲಿ ಪ್ರತಿಯೊಂದನ್ನೂ ಚೆನ್ನಾಗಿ ಪರೀಕ್ಷಿಸುವಲ್ಲಿ ಅವುಗಳಲ್ಲೊಂದರ ಮೇಲೆ ಇದ್ದ ಕುದುರೆಯ ಕೆಳಗೆ (ಕೂರಾದ ಮೊನೆಯಿಂದ ಬರೆದ) ಕರಃಖ್ ಎಂಬ ಫಾರಸೀ ಅಕ್ಷರಗಳು ಕಂಡುಬಂದವು. ಕರಃಖ್ ಎಂಬುದು ಫಾರಸೀದೇಶದಲ್ಲಿರುವ ಒಂದು ವೂರು. ಇದರಿಂದ ಸಾಹೇಬರು ಊಹಿಸುವುದೇನೆಂದರೆ : ಕುದುರೆಗಳ ವ್ಯಾಪಾರಕ್ಕೆ ಈ ಪ್ರಾಂತ್ಯಕ್ಕೆ ಬಂದಿದ್ದ ಫಾರಸಿಯವನು ಆ ನಾಣ್ಯಗಳನ್ನು ಸಂಗಡ ತಂದಿರಬಹುದು. ಅದರ ಸಮೀಪದಲ್ಲೇ ಸೌಟು ಸಿಕ್ಕಿರುವುದರಿಂದ ಅವನು ಅಲ್ಲಿ ಅಡಿಗೆ ಮಾಡಿಕೊಳ್ಳುವುದಕ್ಕಾಗಿ ತಂಗಿರಬಹುದು. ಭಾಲೆಯ ಮೊನೆಯೂ ಅಲ್ಲಿ ಸಿಕ್ಕಿರುವುದರಿಂದ ಅದು ಒಬ್ಬ ದಾರಿಗಳ್ಳನದಾಗಿರ ಬಹುದು. ಈ ಕಳ್ಳನು ಆ ವರ್ತಕನನ್ನು ಕೊಂದು ಆ ದ್ರವ್ಯವನ್ನು ಅಪಹರಿಸಿ ಅದನ್ನು ಹೊತ್ತುಕೊಂಡು ಹೋಗುವುದಕ್ಕೆ ಏನೋ ಅಸಂದರ್ಭವಾಗಿ ಅಲ್ಲೇ ಅದನ್ನು ಹೂತಿಟ್ಟಿರಬಹುದು. ಪುನಃ ಬಂದು ಅದನ್ನು ತೆಗೆದುಕೊಂಡು ಹೋಗುವುದಕ್ಕೂ ಅನುಕೂಲಿಸದೆ ಹಾಗೇ ಬಿಟ್ಟಿರಬಹುದು. ಆಗಿನಿಂದ ಇದುವರೆಗೂ ಆ ನಾಣ್ಯಗಳು ನೆಲದಲ್ಲಿ ಅಧಿವಾಸವಾಗಿದ್ದು ಈಗ ಸಿಕ್ಕಿದುವು.

ಈ ನಾಣ್ಯಗಳೂ, ಭಾಲೆಯಮೊನೆಯೂ, ಸೌಟೂ ಬೆಂಗಳೂರಿನ ಮ್ಯೂಜಿಯಂ ಎಂಬ ವಿವಿಧ ವಸ್ತು ಪ್ರದರ್ಶನ ಶಾಲೆಯಲ್ಲಿಡಲ್ಪಟ್ಟಿದ್ದು ನೋಡಬೇಕೆಂಬ ಕುತೂಹಲವಿರುವವರು ಅಲ್ಲಿ ಹೋಗಿ ನೋಡಿ ಸಂತೋಷಿಸಬಹುದು.[1]

ಪ್ರಮುಖವಾದ ಈ ಸಂಶೋಧನೆಯಲ್ಲದೆ ರಾಮಸ್ವಾಮಿ ಕಾಲುವೆಯ ಅಡಿಯಲ್ಲಿ ದೊರೆತ ವಿಜಯ ನಗರದ ಕಾಲದ ಚಿನ್ನದ ನಾಣ್ಯಗಳನ್ನು ಮತ್ತು ಚಿತ್ರದುರ್ಗ ಜಿಲ್ಲೆಯ ಕತ್ರಾಲ್ ಎಂಬಲ್ಲಿ ದೊರೆತ ಪರ್ಷಿ ಯನ್ ಮತ್ತು ಅರಾಬಿಕ್ ಲಿಪಿಗಳುಳ್ಳ ತಾಮ್ರದ ನಾಣ್ಯಗಳನ್ನು ರೈಸರು ಅಭ್ಯಸಿಸಿದ್ದಾರೆ. ರಾಘವೇಂದ್ರರಾವ್ ಎಂಬುವರ ಸಂಗ್ರಹದಲ್ಲಿದ್ದ ಅಪರೂಪದ ನಾಣ್ಯಗಳ ಯಾದಿಯೊಂದನ್ನು ಸಿದ್ಧಪಡಿಸಲು ಯತ್ನಿಸಿದರೂ ಅದಿನ್ನೂ ಸಾಧ್ಯವಾಗಿಲ್ಲವೆಂದು ಅವರು ೧೮೯೨-೯೩ರ ತಮ್ಮ ಇಲಾಖಾವರದಿಯಲ್ಲಿ ನಮೂದಿಸಿ ದ್ದಾರೆ.

1 ವಿಜ್ಞಾನ ದೀಪಿಕೆ. ೧೮೯೩ ಮೇ. ಪು: ೧೪೫ - ೧೪೭

೩. ಶಾಸನ ಹಾಗೂ ಹಸ್ತಪ್ರತಿಗಳ ಸಂಗ್ರಹಾಲಯದ ನಿರ್ಮಾಣ :

ಕನ್ನಡ ಭಾಷೆ ಹಾಗೂ ಲಿಪಿಯ ವಿಕಾಸವನ್ನು ಪ್ರತಿಬಿಂಬಿಸುವಂತಹ ಪ್ರಾತಿನಿಧಿಕವಾದ ಶಾಸನಗಳ ಸಂಗ್ರಹಾಲಯವೊಂದನ್ನು ಆರಂಭಿಸಲು ರೈಸ್ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಸಲ್ಲಿಸಿದ್ದರು.

ಇದರ ಮಹತ್ತ್ವವನ್ನು ಕುರಿತು ೧೮೮೭-೮೮ನೇ ವರ್ಷದ ಇಲಾಖಾ ವರದಿಯಲ್ಲಿ ಅವರು

i. In order that the results of the present survey should be exhibited in a more tangible form, I have suggested that a portion of the Victoria Jubilee (i.e. Oriental Research Institute) now under eraction at Mysore should be set apart as a Hall of Inscriptions. Here will be collected selected specimens, which will be built into the walls, systematically arranged with reference to their chrono-logical order. They will thus not only form permanent records but be available for reference and study original standard authorities for the forms and style of the language at the periods to which they respectively belong, an object of high educational value.

ii. In the same building, it is proposed to form a collection of manuscripts of Sanskrit and Kannada literature, which will be available for consultation by learned men ಎಂದಿದ್ದಾರೆ.

ಕಟ್ಟಡದ ನಿರ್ಮಾಣದ ಕಾರ್ಯ ಮುಗಿಯುತ್ತಲೇ ಸಂಗ್ರಹಾಲಯವನ್ನು ಆರಂಭಿಸಲು ಸರ್ಕಾರದ ಅನುಮೋದನೆ ದೊರೆಯಿತು.[1] ೧೮೯೦ ಮತ್ತು ೧೮೯೧ನೇ ವರ್ಷದ ವರದಿಗಳಲ್ಲಿ ಈ ಸಂಗ್ರಹಾಲಯಕ್ಕೆ ಬೇಕಾದ ಶಾಸನಗಳನ್ನು ಸಂಗ್ರಹಿಸಲಾಗುತ್ತಿದೆ ಎಂಬ ಸೂಚನೆ ಇದೆ.

ಸಂಗ್ರಹಾಲಯಕ್ಕೆ ಶಾಸನಗಳನ್ನು ಸಂಗ್ರಹಿಸುವಾಗ ರೈಸರು ಅತ್ಯಂತ ಹೆಚ್ಚಿನ ಎಚ್ಚರವನ್ನು ವಹಿಸುತ್ತಿದ್ದರು. ಸುಸ್ಥಿತಿಯಲ್ಲಿರುವ ಕಟ್ಟಡಗಳಲ್ಲಿನ ಶಾಸನಗಳನ್ನು ಹೊರತೆಗೆದು ಕಟ್ಟಡದ ಭದ್ರತೆ ಹಾಗೂ ಸೌಂದರ್ಯವನ್ನು ಹಾಳುಮಾಡುವುದು ಅವರ ಉದ್ದೇಶವಾಗಿರಲಿಲ್ಲ. ಬದಲಿಗೆ ಅನಾಥವಾಗಿ ಬಿದ್ದಿರುವ ಬಿಡಿಬಿಡಿಯಾದ ಶಾಸನಗಳನ್ನಷ್ಟೇ ಅವರು ಶೇಖರಿಸುತ್ತಿದ್ದರು ಎಂಬುದು 'several deserted and detached stones

1 ಮುಖ್ಯಕಾರ್ಯದರ್ಶಿಯವರ ಪತ್ರ, ನಂ. ೫೨೨೮-೫೦೧, ದಿ. ೭ ನವೆಂಬರ್, ೧೮೮೮.

bearing inscriptions were selected'[1]; '.... several cast away inscribed stones of special interest have been selected....'[2] ಮುಂತಾದ ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಈ ರೀತಿ ಸಂಗ್ರಹಿತವಾದ ಶಾಸನಗಳೆಂದರೆ :

೧. ತಲಕಾಡಿನ ಶಾಸನ (ಕ್ರಿ.ಶ. ೭೨೫)

೨. ಕುರುಬೂರು ಶಾಸನ (ಕ್ರಿ.ಶ. ೯೩೧)

೩. ಪುರಹಳ್ಳಿ ಶಾಸನ (ಕ್ರಿ.ಶ. ೧೦೩೫)

೪. ಬೆಳಗೆರೆ ಶಾಸನ (ಕ್ರಿ.ಶ. ೧೧೦೭)

೫. ಬೆಳಗೆರೆ ಶಾಸನ (ಕ್ರಿ.ಶ. ೧೧೩೦)

೬. ಸಮೇತನಹಳ್ಳಿ ಶಾಸನ (ಕ್ರಿ.ಶ. ೧೪೧೧)

೭. ಸೊಲದೇವನಹಳ್ಳಿ ಶಾಸನ (ಕ್ರಿ.ಶ. ೧೦೨೬)

೮. ಅವರಗೆರೆ ಶಾಸನ (ಕ್ರಿ.ಶ. ೧೦೪೯)

೯. ಕನತಿ (?) ಶಾಸನ (ಕ್ರಿ.ಶ. ೧೦೬೦)

೧೦. ಮಾದಾಪುರ ಶಾಸನ (ಕ್ರಿ.ಶ. ೧೨೧೮)

ಈ ಶಾಸನಗಳ ರೋಮನ ಲಿಪಿಯ ಪಾಠ ಮತ್ತು ಇಂಗ್ಲಿಷ್ ಅನುವಾದವನ್ನು ಒಳಗೊಂಡ 'The Inscriptions' ಎಂಬ ೩೦ ಪುಟಗಳ ಸಣ್ಣ ಪುಸ್ತಿಕೆಯನ್ನು ರೈಸ್ ೧೯೦೦ರಲ್ಲಿ ಹೊರತಂದಿದ್ದಾರೆ. ಆದರೆ ರೈಸರು ಸ್ವತಃ ಪ್ರಕಟಿಸಿರುವ ತಮ್ಮ ಕೃತಿಗಳ ಪಟ್ಟಿಯಲ್ಲಾಗಲಿ, ಅವರ ಬಗ್ಗೆ ಇತರರು ಬರೆದಿರುವ ಬರಹಗಳಲ್ಲಿಯಾಗಲೀ ಈ ಕೃತಿಯ ಉಲ್ಲೇಖವಿಲ್ಲ.*

ರೈಸರೇನೋ ಈ ಶಾಸನಗಳನ್ನು ವಿಕ್ಟೋರಿಯಾ ಜ್ಯುಬಿಲಿ ಹಾಲ್ (ಈಗಿನ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್)ನ ಒಳಭಾಗದಲ್ಲಿ ಜೋಡಿಸುವ ಯೋಜನೆಯನ್ನು ನೀಡಿದ್ದರಾದರೂ ಈಗ ಈ ಶಾಸನಗಳು ಕಟ್ಟಡದ ಹೊರಭಾಗದಲ್ಲಿ ಅಲ್ಲಲ್ಲಿ ಸ್ಥಾಪಿತವಾಗಿದೆ. ಈ ವ್ಯವಸ್ಥೆ ಯಾವಾಗ ಮತ್ತು ಏಕೆ ಆಯಿತು ಎಂಬುದರ ವಿವರಗಳು ಲಭ್ಯವಿಲ್ಲ. ಬಹುಶಃ ಹಸ್ತಪ್ರತಿಗಳ ಬಾಹುಳ್ಯದಿಂದಾಗಿ ಈ ಶಾಸನಗಳನ್ನು ಹೊರಗೆ ನಿಲ್ಲಿಸಲಾಗಿದೆ ಎಂದು ಊಹಿಸಬಹುದು.

1 A.R., 1889-90.

2 A.R., 1890-91.

* ಈ ಅಪರೂಪದ ಕೃತಿಯನ್ನು ಒದಗಿಸಿದವರು ಡಾ॥ ಶ್ರೀನಿವಾಸ ಹಾವನೂರ ಅವರು.

ಪ್ರದರ್ಶನಾಲಯಕ್ಕೆ ಶಾಸನಗಳನ್ನು ಸಂಗ್ರಹಿಸುವ ಕಾರ್ಯ ಅಷ್ಟೇನೂ ಸುಲಭ ವಾಗಿರಲಿಲ್ಲ. ಅನೇಕ ವೇಳೆ ಇವುಗಳನ್ನು ಹೊರತೆಗೆದು ಸಾಗಿಸಲು ಯತ್ನಿಸಿದಾಗ ಸ್ಥಳೀಯರು ವಿರೋಧಿಸಿದ ಸನ್ನಿವೇಶಗಳೂ ಇವೆ. ಉದಾಹರಣೆಗೆ ಮಂಡ್ಯ ತಾಲ್ಲೂಕಿನ ಆತಕೂರಿನಲ್ಲಿದ್ದ ಸುಪ್ರಸಿದ್ಧವಾದ ವೀರಗಲ್ಲನ್ನು ಪ್ರದರ್ಶನಾ ಲಯದಲ್ಲಿಡಲೆಂದು ಹೊರ ತೆಗೆದದ್ದು ಸ್ಥಳೀಯರನ್ನು ಕೆರಳಿಸಿತು. ಕಡೆಗೆ ಸರ್ಕಾರವು ಈ ಬಗ್ಗೆ ವಿಚಾರಣೆಯನ್ನು ನಡೆಸಿ ಆ ಒಂದು ಶಾಸನವನ್ನು ಮಾತ್ರ ಬೆಂಗಳೂರಿನ ವಸ್ತು ಸಂಗ್ರಹಾಲಯಕ್ಕೆ ವರ್ಗಾಯಿಸುವಂತೆ ಆದೇಶಿಸಿತು.[1]

ಈ. ಪ್ರಾಚೀನ ಆಯುಧಗಳ ಬಗ್ಗೆ ಮಾಹಿತಿ :

ಪ್ರಾಚೀನ ಸ್ಮಾರಕಗಳಲ್ಲಿ ಕಾಣಸಿಗುವ ವಿವಿಧ ತೆರನಾದ ಆಯುಧಗಳ ಶಿಲ್ಪಗಳು ರೈಸರನ್ನು ಆಕರ್ಷಿಸಿದವು. "ಮಹಾರಾಜರ ಅನುಮತಿಯನ್ನು ಪಡೆದು ಅರಮನೆಯ ಆಯುಧಾಗಾರದಲ್ಲಿನ ಆಯುಧಗಳನ್ನು ಪರಿಶೀಲಿಸಿದೆನಾದರೂ ಶಿಲ್ಪದಲ್ಲಿ ಕಾಣಸಿಗು ವಂತಹ ಆಯುಧಗಳಾಗಲೀ, ಅಥವಾ ಅವುಗಳ ಹೆಸರನ್ನು ಬಲ್ಲವರಾಗಲೀ ದೊರೆಯಲಿಲ್ಲ" ಎಂದು ಅವರು ಇಲಾಖೆಯ ಮೊದಲ ವರ್ಷದ ವರದಿಯಲ್ಲಿಯೇ ನಮೂದಿಸಿದ್ದಾರೆ.[2]

ಈ ದೆಸೆಯಲ್ಲಿನ ಸಂಶೋಧನೆಯನ್ನು ಅವರು ಏಕೆ ಮುಂದುವರೆಸಲಿಲ್ಲ ಎಂಬ ಅಂಶ ಸ್ಪಷ್ಟವಿಲ್ಲ. ಬಹುಶಃ ಶಾಸನಗಳ ಹುಡುಕಾಟ, ಅವುಗಳ ಪಾಠ ಪರಿಷ್ಕರಣ ಮುಂತಾದ ಕಾರ್ಯಗಳ ಒತ್ತಡದಿಂದಾಗಿ ಅವರು ಇದನ್ನು ಕಡೆಗಣಿಸಿದರೆಂದು ತೋರುತ್ತದೆ.

ಉ. ಉತ್ಖನನಗಳು :

ಪ್ರಾಕ್ತನ ನಿವೇಶನಗಳಲ್ಲಿ ಉತ್ಖನನದ ಮೂಲಕ ಭೂಪದರಗಳ ವಿಶ್ಲೇಷಣೆ, ಅವಶೇಷಗಳ ಸಂಗ್ರಹಣೆ ಮತ್ತು ಅವುಗಳ ವಿಶ್ಲೇಷಣೆಯ ಪುರಾತತ್ತ್ವಶೋಧನಾ ವಿಧಾನವು ಜಾಗತಿಕ ಮಟ್ಟದಲ್ಲಿ ರೂಪುಗೊಂಡಿದ್ದು ೧೯ನೆಯ ಶತಮಾನದ ಮಧ್ಯಭಾಗದಲ್ಲಿ, ಪ್ರಸ್ತುತ ಒಂದು ವೈಜ್ಞಾನಿಕ ವಿಧಾನದ ಸಂಶೋಧನೆಯಾಗಿ ರೂಪುಗೊಂಡಿರುವ ಈ ಶಾಸ್ತ್ರವು ಆರಂಭದ ದಿನಗಳಲ್ಲಿ ಕೇವಲ ನಿಧಿಶೋಧಕರ, ಕುತೂಹಲಿಗಳ ಹವ್ಯಾಸವಾಗಿತ್ತು.

ಇತರ ದೇಶಗಳಂತೆ ಭಾರತದಲ್ಲಿಯೂ ಇಂತಹ 'ಹವ್ಯಾಸಿ ಪುರಾತತ್ತ್ವ ಶಾಸ್ತ್ರಜ್ಞರು' ಉತ್ಖನನಗಳನ್ನು ನಡೆಸಿದ ಉದಾಹರಣೆಗಳಿವೆ. ೧೮೨೧ರಲ್ಲಿ ಫುಲ್ಲರ್‌ಟನ್ ಎಂಬ ನ್ಯಾಯಾಧೀಶ ಮದ್ರಾಸಿನ ಬಳಿಯ ಚಂಗಲ್ ಪೇಟೆಯಲ್ಲಿ ಹಾಗೂ ೧೮೩೮ರ ಸುಮಾರಿಗೆ ಮದ್ರಾಸಿಗೆ ಸಮೀಪದ ರೆಡ್‌ಹಿಲ್ ಪ್ರದೇಶದಲ್ಲಿ ಉತ್ಖನನ ನಡೆಸಲಾದ ದಾಖಲೆಗಳಿವೆ.

1 A.R., 1893-94.

2 A.R., 1885-86.

ಉತ್ತರ ಕರ್ನಾಟಕದಲ್ಲಿ ಮೆಡೋಸ್ ಟೇಲರ್ ಈ ಬಗೆಯ ಸಂಶೋಧನೆಗಳನ್ನು ನಡೆಸಿದವನು. ಮುಂದೆ ೨೦ನೇ ಶತಮಾನದ ಪೂರ್ವಭಾಗದಲ್ಲಿ ಈ ಶಾಸ್ತ್ರಕ್ಕೆ ಒಂದು ಸೈದ್ಧಾಂತಿಕವಾದ ಚೌಕಟ್ಟು ಲಭಿಸಿತು.

ಉತ್ಖನನ ಕಾರ್ಯದಲ್ಲಿ ಯಾವ ಪೂರ್ವ ತರಬೇತಿಯೂ ಇಲ್ಲದಿದ್ದರೂ ಮೈಸೂರು ಸಂಸ್ಥಾನದ ಕೆಲವು ಪ್ರಾಕ್ತನ ನೆಲೆಗಳನ್ನು ಹುಡುಕಿ ಅಲ್ಲಿ ಅನ್ವೇಷಣೆ (Exploration) ಹಾಗೂ ಉತ್ಖನನಗಳನ್ನು (Excavation) ಮೊದಲಿಗೆ ನಡೆಸಿದ ಕೀರ್ತಿ ರೈಸರಿಗೆ ಸಲ್ಲುತ್ತದೆ. ಇಲಾಖೆಯ ಪ್ರಾರಂಭದ ವರ್ಷಗಳಲ್ಲೇ ತಲಕಾಡಿನಲ್ಲಿನ ಹುದುಗಿಹೋದ ದೇವಾಲಯಗಳ ಉತ್ಖನನ ಕಾರ್ಯವನ್ನು ಅವರು ಕೈಗೊಂಡಿದ್ದ ರೆಂಬುದು ಇಲಾಖಾ ವರದಿಯಿಂದ ತಿಳಿದು ಬರುತ್ತದೆ.[1] "The buried temples entered through holes excavated in the sand and their interior inscriptions, copied. There were no means for more extensive excavations" ಎಂಬ ಮಾತುಗಳಿಂದ ಸಾಧ್ಯವಿದ್ದಿದ್ದರೆ ಅವರು ಅಲ್ಲಿ ಹೆಚ್ಚಿನ ಶೋಧ ವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದ್ದರು ಎಂಬುದು ಸ್ಪಷ್ಟವಾಗುತ್ತದೆ.

೧೮೯೨-೯೩ರಲ್ಲಿ ಅವರು ಚಿತ್ರದುರ್ಗದ ಬಳಿಯ ಅಂಕಲಿಮಠ ಹಾಗೂ ತುಮಕೂರು ಜಿಲ್ಲೆಯ ಬೆಳ್ಳಿಬಟ್ಟಲು ಎಂಬಲ್ಲಿ 'ಮೌರ್ಯರ ಮನೆ' ಅಥವಾ 'ಮೌರ್ಯರ ದಿಣ್ಣೆ' ಎಂದು ಕರೆಯಲಾಗುವ ಪ್ರಾಚೀನಾವಶೇಷಗಳನ್ನು (Cromlech) ಉತ್ಖನನ ನಡೆಸಿದ್ದರು. ಬೆಳ್ಳಿಬಟ್ಟಲಿನಲ್ಲಿ ಮಡಿಕೆಕುಡಿಕೆಗಳು ದೊರೆತಿರುವುದನ್ನು ಅವರು ದಾಖಲಿಸಿ ದ್ದಾರೆ. ಇವು ಬೃಹತ್ ಶಿಲಾಯುಗದ ಸಮಾಧಿಗಳಲ್ಲಿ ಕಾಣಸಿಗುವ ಸಾಮಗ್ರಿ ಎಂದು ಅ.ಸುಂದರ ಅಭಿಪ್ರಾಯಪಟ್ಟಿದ್ದಾರೆ.[2]

ರೈಸರು ನಡೆಸಿದ ಉತ್ಖನನಗಳಲೆಲ್ಲ ಅತ್ಯಂತ ಪ್ರಮುಖವಾದುದೆಂದರೆ ೧೮೯೪-೯೫ರಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕು ಚಂದ್ರವಳ್ಳಿಯಲ್ಲಿ ಅವರು ನಡೆಸಿದ ಭೂಶೋಧನೆ. ಚಂದ್ರವಳ್ಳಿಯು ಒಂದು ಪ್ರಮುಖವಾದ ಪ್ರಾಚೀನ ನಗರ ಎಂಬ ಜನಜನಿತವಾದ ಅಭಿಪ್ರಾಯವನ್ನು ಆಧರಿಸಿ ಅವರು ಇಲ್ಲಿಯ ಭೂಶೋಧನೆ ಯನ್ನು ಕೈಗೊಂಡರು. ಅವರಿಗೆ ಅಲ್ಲಿ ಬೃಹತ್ ಇಟ್ಟಿಗೆಗಳು ಮತ್ತು ಮಡಿಕೆಕುಡಿಕೆಗಳು ಅಪಾರ ಸಂಖ್ಯೆಯಲ್ಲಿ ದೊರೆತವು. ಅಷ್ಟೇ ಅಲ್ಲದೆ ಆ ಪ್ರದೇಶದಲ್ಲಿ ದೊರೆತಿದ್ದ ಸಾತವಾಹನರ ದೊರೆ ಪುಳುಮಾವಿಯ ಅಂಕಿತವಿದ್ದ ಸೀಸದ ನಾಣ್ಯಗಳೂ ಈ ಸ್ಥಳ ಒಂದು ಪ್ರಾಚೀನ ನೆಲೆ ಎಂಬುದನ್ನೂ ಖಚಿತಪಡಿಸಿತು.

---

1 A.R., 1886-87.

2 Sundara A., (Ed.) **Annual Reports of the Archaeological Department for the years 1885-1905.** (Mysore, 1989), P XXI.

ಬೆಳ್ಳಿಬಟ್ಟಲು ಮತ್ತು ಅಂಕಲಿಮಠಗಳಲ್ಲಿನಂತೆಯೇ ಇಲ್ಲಿಯೂ ರೈಸರು ಅನೇಕ ವೃತ್ತಾಕಾರದ ಮೌರ್ಯರಮನೆಗಳ ಉತ್ಖನನವನ್ನು ನಡೆಸಿ ಇವು ಬೇಡರ ಗುಡಿಸಲುಗಳ ಅಡಿಪಾಯಗಳಿರಬೇಕೆಂದು ತಪ್ಪಾಗಿ ಊಹಿಸಿದರು. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಐಮಂಗಲ ಎಂಬ ಊರಿನ ಬಳಿಯಲ್ಲಿನ ನೊಳಂಬಪಟ್ಟಣ ಎಂಬ ಪ್ರಾಚೀನ ನೆಲೆಯಲ್ಲಿಯೂ ಅವರು ಇಂತಹುದೇ ವೃತ್ತಾಕಾರದ ಕಲ್ಲಿನ ರಚನೆಗಳನ್ನು ಗುರುತಿಸಿದರು.

ವೃತ್ತಾಕಾರದ ಈ ರಚನೆಗಳು ಬೇಡರ ಗುಡಿಸಲುಗಳ ಅಡಿಪಾಯವಲ್ಲವೆಂದೂ, ಇವು ಕ್ರಿ.ಪೂ. ೧೦೦೦ದಿಂದ ಕ್ರಿ.ಶ. ೧ನೇ ಶತಮಾನದ ಬಗೆಗಿನ ಬೃಹತ್ ಶಿಲಾಯುಗದ ಕಾಲದ ಒಂಟಿ ಅಥವಾ ಬಹು ಸಂಖ್ಯೆಯ ಸಮಾಧಿಗಳ ಗುಂಪೆಂದೂ ಇತ್ತೀಚಿನ ಪುರಾತತ್ತ್ವ ಶೋಧಕರು ತೋರಿಸಿಕೊಟ್ಟಿದ್ದಾರೆ ನಿಜ.[1] ಆದರೆ ಈ ಸಂಶೋಧನೆಗಳೆಲ್ಲವೂ ೧೯೪೭ರ ನಂತರದವು. ಪುರಾತತ್ತ್ವಶಾಸ್ತ್ರವು ಸಾಕಷ್ಟು ಅಭಿವೃದ್ಧಿಗೆ ಬಂದು ದೇಶದಾದ್ಯಂತ ಇಂತಹ ಸಾವಿರಾರು ಪ್ರಾಚೀನ ನೆಲೆಗಳನ್ನು ಅಭ್ಯಸಿಸಿದ ನಂತರವೇ ಈ ಸಿದ್ಧಾಂತ ರೂಪುಗೊಂಡಿದೆ ಎಂಬುದನ್ನು ಮರೆಯುವಂತಿಲ್ಲ.

ಪುರಾತತ್ತ್ವಶೋಧನೆಯು ಇನ್ನೂ ಶೈಶವಾವಸ್ಥೆಯಲ್ಲಿದ್ದ ಕಾಲದಲ್ಲಿ ರೈಸರು ತಮಗಿದ್ದ ಅತ್ಯಲ್ಪ ಮಾಹಿತಿಯ ಆಧಾರದ ಮೇಲೆ ಪ್ರಾಚೀನ ನೆಲೆಗಳನ್ನು ಶೋಧಿಸಿ, ಉತ್ಖನನವನ್ನು ನಡೆಸಲು ಯತ್ನಿಸಿದ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದ್ದರು. ಹಾಗಾಗಿ "Rice was one of those early pioneers like Meadows Taylor, Cole, etc. in incidentally discovering the megalithic sites and examining them" ಎಂಬ ಅ. ಸುಂದರ ಅವರ ಅಭಿಪ್ರಾಯ[2] ಸೂಕ್ತವಾಗಿದೆ. ಆದರೆ ಮುಂದೆ ಚಂದ್ರವಳ್ಳಿಯಲ್ಲಿ ಉತ್ಖನನಗಳನ್ನು ನಡೆಸಿದ ಎಂ.ಎಚ್. ಕೃಷ್ಣ (೧೯೨೮) ಅವರಾಗಲೀ ಅಥವಾ ಮಾರ್ಟಿಮರ್ ವೀಲರ್ (೧೯೪೭) ಅವರಾಗಲೀ ರೈಸರು ಇಲ್ಲಿ ಭೂಶೋಧನೆಯ ಮತ್ತು ಉತ್ಖನನದ ಕಾರ್ಯವನ್ನು ಕೈಗೊಂಡಿದ್ದರೆಂಬುದನ್ನು ತಮ್ಮ ವರದಿಗಳಲ್ಲಿ ಪ್ರಸ್ತಾಪಿಸದೇ ಇರುವುದು ಅಚ್ಚರಿಯ ಸಂಗತಿಯಾಗಿದೆ.

ಎಂ.ಎಚ್. ಕೃಷ್ಣರವರು ತಮ್ಮ ವರದಿಯಲ್ಲಿ[3] previous work at Chandravalli ಎಂಬ ಉಪಶೀರ್ಷಿಕೆಯಲ್ಲಿ ಈ ಹಿಂದೆ ಚಂದ್ರವಳ್ಳಿಯಲ್ಲಿ ನಡೆದ ಅನ್ವೇಷಣೆಗಳನ್ನು ಕುರಿತು ವಿವರಿಸುವಾಗ ಸುಮಾರು ೩೦ ವರ್ಷಗಳ ಹಿಂದೆ ಗಣಿ ಇಂಜನಿಯರ್ ಒಬ್ಬರಿಗೆ ಈ ಪ್ರಾಂತ್ಯದಲ್ಲಿ ಕೆಲವು ನಾಣ್ಯಗಳು ದೊರೆತಿದ್ದು, ಆತನು ಅದನ್ನು ವೃತ್ತಪತ್ರಿಕೆಗಳ ಮೂಲಕ ಭಾರತಸರ್ಕಾರದ ಪುರಾತತ್ತ್ವ ಇಲಾಖೆಯ ನಿರ್ದೇಶಕರ ಗಮನ ಸೆಳೆದಿದ್ದು,

1 ಅಲ್ಲೇ., ಪು. ೪೦.

2 ಅಲ್ಲೇ., ಪು. XXI.

3 Excavation at Chandravalli, Part I, (Bangalore, 1929)

ಅವರು ಮೈಸೂರು ಪುರಾತತ್ತ್ವ ಇಲಾಖೆಯ ನಿರ್ದೇಶಕರಾಗಿದ್ದ ಆರ್. ನರಸಿಂಹಾಚಾರ್ಯರನ್ನು ಈ ಬಗ್ಗೆ ವರದಿ ಸಲ್ಲಿಸುವಂತೆ ಕೋರಿದ್ದು, ನರಸಿಂಹಾಚಾರ್ಯರು ೧೯೦೯ರಲ್ಲಿ ಇಲ್ಲಿ ಎಂಟು ಪ್ರಾಯೋಗಿಕ ಗುಂಡಿಗಳನ್ನು ತೋಡಿದ್ದು - ಇವುಗಳನ್ನು ನಮೂದಿಸಿದ್ದಾರಾದರೂ ನರಸಿಂಹಾಚಾರ್ಯರು ಉತ್ಖನನ ನಡೆಸುವುದಕ್ಕೂ ಹದಿನೈದು ವರ್ಷ ಮೊದಲೇ ರೈಸರು ಅಲ್ಲಿಯ ಮಹತ್ವವನ್ನು ಗುರುತಿಸಿ ಕಾರ್‍ಯಾರಂಭ ಮಾಡಿದ್ದರು ಎನ್ನುವ ಅಂಶವನ್ನು ಏಕೆ ದಾಖಲೆ ಮಾಡಲಿಲ್ಲವೋ ಊಹಿಸುವುದು ಕಷ್ಟ. "India was deplorably ignorant of the most fruitful and upto date method of antiquarian research, namely excavation" ಎಂಬ ಅಭಿಪ್ರಾಯವನ್ನು ಹೊಂದಿದ್ದ ಕೃಷ್ಣರು[1] ತಮ್ಮ ಇಲಾಖೆಯ ಹಿರಿಯರೇ ನಡೆಸಿದ ಉತ್ಖನನವನ್ನು ಮರೆತರೇಕೆ ಎಂಬ ಅಂಶ ಸ್ಪಷ್ಟವಿಲ್ಲ.

ಬಳ್ಳಿಗಾವೆಯಲ್ಲಿ ತಾರಾಭಗವತಿಯ ಶಿಲ್ಪದ ಪತ್ತೆ (೧೮೯೦-೯೧), ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಅಜ್ಞಾತವಾಗಿದ್ದ ೬೩ ಪುರಾತನ ಲೋಹದ ಪ್ರಾಚೀನ ವಿಗ್ರಹಗಳ ಶೋಧನೆ (೧೮೯೫-೯೬), ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ನೊಣ ಮಂಗಲದಲ್ಲಿ ಪ್ರಾಚೀನ ಜೈನ ಬಸದಿಯೊಂದರ ಉತ್ಖನನ (೧೮೯೬-೯೭) ಇವು ರೈಸರ ಕಾಲದಲ್ಲಾದ ಇನ್ನಿತರ ಪ್ರಮುಖ ಶೋಧಗಳು.

ಮುಂದುವರೆದ ವೃತ್ತಿ ಜೀವನದ ಸಮಸ್ಯೆಗಳು :

ಪ್ರಾಚ್ಯ ವಸ್ತುಗಳ ಶೋಧನೆಯ ಕ್ಷೇತ್ರದಲ್ಲಿ ರೈಸರು ಮಾಡಿದ ಸಾಧನೆಗಳು ಅವರನ್ನು ವಿಶ್ವವಿಖ್ಯಾತರನ್ನಾಗಿಸಿದವು. ದೇಶ ವಿದೇಶಗಳ ವಿದ್ವಾಂಸರು

> "Mr. Rice deserves our hearty thanks for having brought to light such valuable materials on so important a period in the History of Southern India"[2],
>
> "The numerous and various points of interest which the new epigraphic discoveries in Mysore offer, entitle Mr. Rice to the hearty congratulations of all the Sanskritists, and to their warm thanks for the ability and indefatigable zeal with which he continues the archaeological explorations in the province confined to his care"[3]

1 ಅಲ್ಲೇ., ಪು. ೧.

2 Prof. Eggling ಅವರು **Indian Antiquery**ಯಲ್ಲಿ ಬರೆದ ಲೇಖನದಲ್ಲಿ, **'Works by B.L. Rice and Extracts from Opinions thereon'** ಕೃತಿಯಲ್ಲಿ ಉದ್ಧೃತ.

3 Buleerರು 'Academy'ಯಲ್ಲಿ ಬರೆದ ಲೇಖನ, ಪೂರ್ವೋಕ್ತ.

ಎಂದೆಲ್ಲ ಅವರ ಸಾಧನೆಗಳನ್ನು ಪ್ರಶಂಸಿಸಿದರು. ಈ ಕೀರ್ತಿಗೆ ರೈಸ್ ಅರ್ಹರು ಎಂಬು ದೇನೋ ಸತ್ಯ. ಆದರೆ ಇಷ್ಟೆಲ್ಲ ಶ್ರಮವಹಿಸಿ ದುಡಿದುದರಿಂದ ಅವರಿಗಾದ ಲೌಕಿಕ ಪ್ರಯೋಜನ ಹೇಳಿಕೊಳ್ಳುವಂತಹುದೇನಾಗಿರಲ್ಲ. ಪೂರ್ವಾಪರಗಳನ್ನು ವಿಚಾರಿಸದೆ ಕೆಲವರು

> *"For his mere qualifications in Kanarese, in Sanskrit and in archaeology, Mr. L. Rice was dubbed with the title of C.I.E. by the Government of India and the Mysore Government gave him a princely salary of Rs. 2,500/- per month for nearly one third of a century. Of course, he has done some work but he could have done much more"* [1]

ಎಂದು ಕಟುವಾಗಿ ಟೀಕಿಸಿದ್ದೂ ಇದೆ. ಆದರೆ ಸತ್ಯಾಂಶ ಬೇರೆಯೇ ಇದೆ.

ಪತ್ರಾಗಾರದಲ್ಲಿರುವ ಸರ್ಕಾರಿ ದಾಖಲೆಗಳ ಪ್ರಕಾರ ರೈಸರ ಸಂಬಳ ಎಂದೂ ೧೫೦೦/- ರೂ.ಗಳನ್ನು ದಾಟಿಲ್ಲ.[2] ಮಾತ್ರವಲ್ಲದೆ ಇಷ್ಟು ಸಮರ್ಥವಾಗಿ ದುಡಿದರೂ ತಮ್ಮ ಕೆಲಸ ಖಾಯಂ ಎಂದು ರೈಸ್ ಭಾವಿಸುವಂತಿರಲಿಲ್ಲ. ಅವರ ಸೇವೆ ಮತ್ತು ವೇತನಕ್ಕೆ ಸಂಬಂಧಿಸಿ ಸಮಸ್ಯೆಗಳ ಬಗೆಗೆ ಸರ್ಕಾರಿ ದಾಖಲೆಗಳಲ್ಲಿರುವ ಮಾಹಿತಿ ಇಂತಿದೆ :

ಈ ಮೊದಲೇ ಪ್ರಸ್ತಾಪಿಸಿದಂತೆ ಕೇವಲ ಒಳ್ಳೆಯ ಅಧಿಕಾರಿ ಎಂಬ ಅಭಿಮಾನ ದಿಂದ ಬ್ರಿಟಿಷ್ ಸರ್ಕಾರದಲ್ಲಿ ಸೂಕ್ತ ಹುದ್ದೆ ಖಾಲಿಯಾಗುವವರೆಗೆ ರೈಸರನ್ನು ಮೈಸೂರು ಸರ್ಕಾರದ ಸೇವೆಯಲ್ಲಿ ತಾತ್ಕಾಲಿಕವಾಗಿ ಉಳಿಸಿಕೊಳ್ಳಲು ಶೇಷಾದ್ರಿ ಅಯ್ಯರ್‌ರು ನಿರ್ಧರಿಸಿದ್ದರು. ಆದರೆ ೧೮೮೫ರ ಫೆಬ್ರವರಿ ೯ರಂದು ಮೈಸೂರಿನ ರೆಸಿಡೆಂಟನ್ನು ದಿವಾನರಿಗೆ ಪತ್ರವೊಂದನ್ನು ಬರೆದು "ಲೂಯಿರೈಸ್ ಮತ್ತಿತರ ಐದು ಮಂದಿ ಬ್ರಿಟಿಷ್ ಅಧಿಕಾರಿಗಳು ಎಂದೂ ಬ್ರಿಟಿಷ್ ಸರ್ಕಾರದ ನೌಕರರೆಂದು ಪರಿಗಣಿಸಲು ಸಾಧ್ಯವಿಲ್ಲ" ಎಂಬ ನಿರ್ಣಯವೊಂದು ಜಾರಿಯಾಗಿರುವುದನ್ನು ಉಲ್ಲೇಖಿಸಿದನು.

ಇದಕ್ಕೆ ಉತ್ತರವಾಗಿ ತಾವು ಆಡಳಿತದ ಕಾಲದಲ್ಲಿ ನೌಕರಿಗೆ ಸೇರಿದ್ದನ್ನು ಮುಖ್ಯವಾಗಿ ಉಲ್ಲೇಖಿಸಿ, ಅದರೊಂದಿಗೆ ಮೈಸೂರು ಸರ್ಕಾರದ ವ್ಯಾಪ್ತಿಯನ್ನು ಮೀರಿದ ಗೆಜೆಟಿಯರ್‌ಗಳ ರಚನೆ, ಸಂಸ್ಕೃತ ಹಸ್ತಪ್ರತಿಗಳ ಸೂಚಿಯ ನಿರ್ಮಾಣ, ಜನಗಣತಿಯ ವರದಿಯ ಲೇಖನ ಕಾರ್ಯ ಮುಂತಾದ ಜವಾಬ್ದಾರಿಗಳನ್ನು ನಿರ್ವಹಿಸಿರುವುದನ್ನು ಪರಿಗಣಿಸಿ ತಮ್ಮನ್ನು ಬ್ರಿಟಿಷ್ ಚಕ್ರಾಧಿಪತ್ಯದ ನೌಕರನೆಂದೇ ಪರಿಗಣಿಸಬೇಕೆಂದು, ಉಳಿದ ಬ್ರಿಟಿಷ್ ಅಧಿಕಾರಿಗಳಿಗೆ ದೊರೆಯುವುದಷ್ಟೇ ಪ್ರಮಾಣದ ಸಂಬಳ, ಸಾರಿಗೆ, ರಜಾಭತ್ಯೆ, ಬಡ್ತಿ ಮುಂತಾದವುಗಳನ್ನು ತಮಗೂ ನೀಡಬೇಕೆಂದು ಪ್ರತಿಪಾದಿಸಿದರಾದರೂ[3] ಏನೂ ಉಪಯೋಗವಾದಂತಿಲ್ಲ.

1 Sooryanarayana Raw, B., **The Astrological Magazine**, July 1948.

2 K.S.A., S & A 21 of 1906-07.

3 K.S.A., G.M. 8 of 1882, Sl. No. 1, Dt. 6th April 1885.

ಬ್ರಿಟಿಷ್ ಚಕ್ರಾಧಿಪತ್ಯದ ಈ ನಿರ್ಣಯದಿಂದಾಗಿ ರೈಸರ ಉದ್ಯೋಗ ಮತ್ತೆ ಅತಂತ್ರವಾಯಿತು.

> *".... All our arrangements as they avowedly were, have now been upset by the recent orders of the Government of India which decide that you never belong to the British service and that you must be treated as an Officer belonging to Mysore local service – with reference to this decision and to the present requirements of Mysore for an officer of your standing and experience it becomes now necessary to have some definite understanding as to your position and prospects in Mysore service. In the present state of our finance, large and extensive reductions have become necessary in every department and His Highness's Government are therefore unable to offer you the prospect of promotion in the local service. But they are willing as you have served so long in Mysore, that you should continue to serve there, doing educational and other works suited to you until such time as you should become entitled to a half pension under the rules now in force. I hope that you will be able to accept this arrangement as satisfactory under the circumstances."* [1]

ಎಂಬ ದಿವಾನರ ಸಲಹೆಯೊಂದನ್ನು ರೈಸ್ ಅನಿವಾರ್ಯವಾಗಿ ಒಪ್ಪಲೇ ಬೇಕಾಯಿತು.

೧೮೭೯ರಿಂದ ೧೮೮೫ರವರೆಗೆ ೧೦೫೦/- ರೂಪಾಯಿಗಳ ವೇತನವನ್ನು ಪಡೆಯುತ್ತಿದ್ದ ರೈಸರು ೧೮೮೬-೮೭ರಲ್ಲಿ ಸಲ್ಲಿಸಿದ ವಿದ್ಯಾ ಇಲಾಖೆಯ ಆಯವ್ಯಯದಲ್ಲಿ ತಮ್ಮ ವೇತನವನ್ನು ೧೨೫೦/- ರೂಪಾಯಿಗಳಿಗೆ ಏರಿಸುವಂತೆ ಸರ್ಕಾರವನ್ನು ಪ್ರಾರ್ಥಿಸಿದರು. ವಿದ್ಯಾ ಇಲಾಖೆ ಮತ್ತು ಪುರಾತತ್ತ್ವ ಇಲಾಖೆಯ ಜವಾಬ್ದಾರಿಗಳಿಗೆ ತಲಾ ೬೦೦/- ಗಳಂತೆ ೧೮೮೬ರ ಏಪ್ರಿಲ್ ೧ರಿಂದ ಇವರ ವೇತನವನ್ನು ೧೨೦೦/- ರೂಪಾಯಿಗಳಿಗೆ ಏರಿಸಲಾಯಿತು.

---

1 ಅಲ್ಲೇ., Sl. No. 9, Dt. 22nd April 1885.


ಹತ್ತು ಮಕ್ಕಳನ್ನು ಒಳಗೊಂಡಿದ್ದ ದೊಡ್ಡ ಸಂಸಾರದ ಜವಾಬ್ದಾರಿ ಹೊರಲಾರದಷ್ಟು ಭಾರವಾದಾಗ ರೈಸರು ೧೮೮೯ರಲ್ಲಿ ಮತ್ತೆ ಸರ್ಕಾರದ ಮುಂದೆ ವೇತನದ ಏರಿಕೆಗಾಗಿ ಅಂಗಲಾಚಬೇಕಾಯಿತು. ಈ ಸಂಬಂಧದಲ್ಲಿ ಅವರು ಬರೆದಿರುವ

> *"I add a few words regarding myself which I have kept to the last and separate from the other memo, but it is not too much to say that in any other province I should, with my service and position, be drawing the pay of an Educational Officer of the 1st class, which is Rs. 1,250/- rising to Rs. 1,500/-. Mysore now gives me Rs. 1,200/- for Educational and Archaeological work combined. When I received an increase three years ago, I wanted the Dewan to make it Rs. 1,250/- but for some reason this was not approved. I should now be glad if government would put me on higher pay. It is needless to state that I give my whole time to Government, everyone knows this. In the interests entrusted to me are all prosperous and enlarging on all sides. Owing to the state of exchange I suffer great loss in remitting to England which are necessary for my children. I lost Rs. 800/- the other day by exchange, which it is as dead a loss as if the amount were taken from me and thrown into the sea. I dislike making applications of this kind but should be glad if Mysore would give me help, as circumstances compel me to ask for it."*[1]

ಎಂಬ ಪತ್ರ ಅವರ ದಯನೀಯ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ರೈಸರ ಈ ಪತ್ರ ಸರ್ಕಾರದ ಹೃದಯವನ್ನೇನೂ ಕರಗಿಸಲಿಲ್ಲ. ಏಕೆಂದರೆ ಪುರಾತತ್ತ್ವ ಇಲಾಖೆಯ ಕಾರ್ಯಗಳನ್ನು ಚಂದಗೊಳಿಸುವ ಭರದಲ್ಲಿ ವಿದ್ಯಾ ಇಲಾಖೆಯನ್ನು ಅಲಕ್ಷಿಸಿದ್ದರೆಂದು ತೋರುತ್ತದೆ. Review of the Progress of Education in the Mysore State ನಂತಹ ಸರ್ಕಾರಿ ವರದಿಗಳಲ್ಲಿ ಈ ಕಾಲಘಟ್ಟದ ವಿದ್ಯಾಭ್ಯಾಸದ ಪ್ರಗತಿಯ ಬಗೆಗೆ ಬಹಳ ಹೊಗಳಿಕೆಯ ಮಾತುಗಳಿವೆಯಾದರೂ ವಸ್ತುಸ್ಥಿತಿ ಭಿನ್ನವಾಗಿ

1 ಪೂರ್ವೋಕ್ತ., Diwan's memorandum of 15th May 1889 ರಲ್ಲಿ ಪ್ರತಿಮಾಡಲಾದ ರೈಸರ ಪತ್ರ, ದಿನಾಂಕ ನಮೂದಿಸಿಲ್ಲ.



Government will grant me a few
months more, to enable me to finish
up in a satisfactory manner the
works that have been entrusted
to me as being specially fitted
to carry them out. I am,

Yours very sincerely

L Rice

ರೈಸರ ಕೈಬರಹ ಮತ್ತು ಹಸ್ತಾಕ್ಷರ

ತ್ತೆಂದು ತೋರುತ್ತದೆ. ಶೇಷಾದ್ರಿ ಅಯ್ಯರ್‌ರವರು ಕಠಿಣವಾಗಿ "Mr. Rice's work in connection with archaeology is most excellent but I cannot say the same of his Education as there is not as much inspection as I would like to see"[1] ಎಂದು ಪ್ರತಿಕ್ರಯಿಸುವ ಮಟ್ಟಿಗೆ ಸ್ಥಿತಿಗತಿಗಳು ಹದಗಟ್ಟಿದ್ದವು. ಪತ್ರಿಕೆಗಳಲ್ಲಿ

> *"ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯು ಮೆ॥ ರೈಸ್ ಸಾಹೇಬ ರವರ ವಿಚಾರಣೆಯೊಳಿದ್ದ ಕಾಲದಲ್ಲಿ ಕಾಲದೇಶೋಚಿತಗಳಾದ ಅಭಿವೃದ್ಧಿ ಯನ್ನೈದಲಿಲ್ಲ ವೆಂಬುದಾಗಿ ಅನೇಕರು ಆಕ್ಷೇಪಿಸುತ್ತ ಅದು ಸಮರ್ಥವಾದ ಬೇರೊಬ್ಬರಿಗೆ ಒಪ್ಪಿಸಿ ವಿಶೇಷ ಕಾರ್ಯಕ್ರಮಗಳನ್ನೇರ್ಪಡಿಸಬೇಕೆಂಬುದಾಗಿ ಆಗಿಂದಾಗ್ಯೆ ಗವರ್ನಮೆಂಟಿನವರನ್ನು ಬಲಾತ್ಕರಿಸುತ್ತಲಿದ್ದರು...."*

ಮುಂತಾದ ವರದಿಗಳು ಪ್ರಕಟವಾದವು.[2] ಹಾಗಾಗಿ ವಿದ್ಯಾಭ್ಯಾಸದ ಇಲಾಖೆಯ ಜವಾಬ್ದಾರಿಯಿಂದ ರೈಸರನ್ನು ಬಿಡುಗಡೆ ಮಾಡುವುದು ಅನಿವಾರ್ಯವಾಯಿತು. ಈ ಹಿನ್ನೆಲೆ ಯಲ್ಲಿ ೧೮೮೯ರ ಮೇ ೧೫ರಂದು ದಿವಾನರು "೧೮೮೮ರ ಮಾರ್ಚ್ ೩೧ಕ್ಕೆ ರೈಸರ ಸೇವಾವಧಿ ಪೂರ್ಣವಾಗಿದೆ. ಆದರೆ ಪುರಾತತ್ತ್ವ ಇಲಾಖೆಯ ಕೆಲಸ ಕಾರ್ಯಗಳು ಇನ್ನೂ ಮುಗಿಯದಿರುವುದರಿಂದ ಈ ಹಂತದಲ್ಲಿ ಆತನ ಸ್ಥಾನಕ್ಕೆ ಹೊಸಬರನ್ನು ಹುಡುಕುವುದು ಕಷ್ಟ. ಆದ್ದರಿಂದ ಆತನ ಸೇವಾವಧಿಯನ್ನು ಮಾರ್ಚ್ ೩೧, ೧೮೯೧ರ ವರೆಗೆ ಮುಂದುವರೆಸಿ ನೂರೋ, ನೂರೈವತ್ತೋ ಹೆಚ್ಚಿಗೆ ಕೊಡೋಣ ಮತ್ತು ವಿದ್ಯಾಭ್ಯಾಸದ ಇಲಾಖೆಯನ್ನು ರೈಸರಿಂದ ಭಾಭಾನಿಗೆ ವರ್ಗಾಯಿಸೋಣ" ಎಂದು ಸರ್ಕಾರಕ್ಕೆ ಸಲಹೆ ಮಾಡಿದರು.

ಅಯ್ಯರ್‌ರವರ ಸಲಹೆಯನ್ನು ಕೌನ್ಸಿಲ್ ಸದಸ್ಯರಲ್ಲಿ ಒಬ್ಬರಾದ ಟಿ.ಆರ್.ಎ. ತಂಬೂಚೆಟ್ಟರು ಒಪ್ಪಿದರಾದರೂ ಮತ್ತೊಬ್ಬ ಕೌನ್ಸಿಲರ್ ಆಗಿದ್ದ ಪಿ. ಚಂಚಲರಾವ್ ಒಪ್ಪಲಿಲ್ಲ. 'ವಿದ್ಯಾ ಇಲಾಖೆಯ ಜವಾಬ್ದಾರಿಯಿಂದ ಹೊರಬಂದರೂ ರೈಸ್ ಇನ್ನೆರಡು ವರ್ಷದೊಳಗೆ ಪುರಾತತ್ತ್ವ ಇಲಾಖೆಯ ಕೆಲಸವನ್ನು ಪೂರ್ತಿಗೊಳಿಸುವರೆಂಬ ನಂಬಿಕೆ ನನಗಿಲ್ಲ' ಎಂದ ಆತ

> *"I am therefore of the opinion that Mr. Rice should be asked to retire at once and that we should find some other man for archaeological work. Will not Natesa*

1 ಅಲ್ಲೇ.

2 **ಕರ್ನಾಟಕ ಪ್ರಕಾಶಿಕಾ**, ಜೂನ್ ೧, ೧೮೯೧, ಪು-೩.

Sastry do? I do not know much about his qualification, but he claims to be strong in archaeology" ಎಂದು ಅಭಿಪ್ರಾಯಪಟ್ಟಿದ್ದಾರೆ.[1]

ಆದರೂ ೧೮೮೯ರ ಡಿಸೆಂಬರ್ ೧೭ರಂದು ಸರ್ಕಾರ ಆದೇಶವೊಂದನ್ನು ಹೊರಡಿಸಿ ರೈಸರ ಸಂಬಳವನ್ನು ೧೩೫೦/- ರೂ.ಗಳಿಗೆ ಏರಿಸಿತಲ್ಲದೆ ವಿದ್ಯಾಭ್ಯಾಸದ ಇಲಾಖೆಯ ಕಾರ್ಯದರ್ಶಿಯ ಜವಾಬ್ದಾರಿಯನ್ನು ಹಿಂಪಡೆಯಿತು. ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಅಫಿಶಿಯೇಟಿಂಗ್ ಅಂಡರ್ ಸೆಕ್ರೇಟರಿ ಎನ್. ಕೃಷ್ಣರಾವ್‌ರವರು ವ್ಯಕ್ತಪಡಿಸಿರುವ

"Mr. Rice's case is of a special character and must be dealt with separately. It has been decided to increase his consolidated salary from Rs. 1,200/- to Rs. 1,350/- with immediate effect and to relieve him at an early date of Educational work, so as to enable him to give his entire time and attention to the archaeological survey which in this way is expected to be completed for the whole province in 1891 or 1892. Special arrangements being made for the more expeditions printing of the rapidly growing mass of inscriptions. The Government attach the highest importance to this most useful work being completed by Mr. Rice, who in their opinion is the only officer who progresses the high speed qualifications required for it" ಎಂಬ ಅಭಿಪ್ರಾಯ[2] ರೈಸರ ಪರಿಶ್ರಮಕ್ಕೆ ಸಂದ ಪ್ರತಿಫಲವಾಗಿದೆ.

ಕ್ರಿ.ಶ. ೧೮೯೨ರಲ್ಲಿ ಮೈಸೂರು ಗೆಜೆಟಿಯರ್‌ನ ಪರಿಷ್ಕರಣದ ಕೆಲಸವನ್ನು ಒಪ್ಪಿಸಿದ್ದರಿಂದ ೧೮೯೩ರ ಮಾರ್ಚ್ ೩೧ರವರೆಗೆ ರೈಸರಿಗೆ ಸೇವೆಯ ಅವಧಿಯ ವಿಸ್ತರಣೆ ದೊರೆಯಿತಲ್ಲದೆ ವೇತನವೂ ೧೩೫೦/- ರೂಪಾಯಿಗಳಿಂದ ೧೫೦೦/- ರೂಪಾಯಿಗಳಿಗೆ ಏರಿತು. ಈ ವೇಳೆಗೆ ರೈಸರ ಕಾರ್ಯದಕ್ಷತೆ ಮಹಾರಾಜರು ಮತ್ತು ದಿವಾನರನ್ನು ಸುಪ್ರೀತರನ್ನಾಗಿಸಿತ್ತು.

"Both His Highness and myself have a very high opinion of your special qualification for completing in the best the style possible both the

1 K.S.A., S & A Dt. 24th May 1889.

2 Govt. Order Dt. 17th December. 1889.

> *Archaeological and Gazetteer work and we don't know of anyone else who can do it so well.... Both His Highness and myself would like you to remain in the service with which you have been so long and so honourably connected, and as long as you are small enough for your duties"*

ಎಂಬ ಭಾವನೆಯನ್ನು ದಿವಾನರು ಮುಕ್ತವಾಗಿ ವ್ಯಕ್ತಪಡಿಸಿದರಾದರೂ "at the same time the nature of work is such that it must come to an end within a fixed time... the whole work should be completed by 31st March 1893" ಎಂದು ಎಚ್ಚರಿಸುವುದನ್ನು ಮರೆಯಲಿಲ್ಲ.[1] ಆದರೆ ಗೆಜ಼ೆಟಿಯರ್‌ನ ಮತ್ತು ಪುರಾತತ್ತ್ವ ಶೋಧನೆಯ ಕಾರ್ಯಗಳು ಮುಗಿಯದಿದ್ದುದರಿಂದ ಕ್ರಮವಾಗಿ ೧೮೯೬ರ ಜೂನ್ ೩೦, ೧೮೯೭ರ ಜೂನ್ ೩೦ರವರೆಗೆ ಸೇವಾವಧಿಯ ವಿಸ್ತರಣೆ ದೊರೆಯಿತು.

೧೮೯೭ರಲ್ಲಿ ಗೆಜ಼ೆಟಿಯರ್‌ನ ಹೊಸ ಆವೃತ್ತಿ ಮುದ್ರಿತವಾಗಿ ಹೊರಬಂದಿತಾದರೂ ಎಪಿಗ್ರಾಫಿಯಾ ಕರ್ನಾಟಿಕ ಸರಣಿಯ ಕಾರ್ಯ ಮುಗಿದಿರಲಿಲ್ಲ. ಹಾಗಾಗಿ ರೈಸ್‌ರಿಗೆ ಮತ್ತೊಂದು ವರ್ಷದ ವಿಸ್ತರಣೆ ದೊರೆಯಿತು. ಮೊದಮೊದಲಿಗೆ 'ನಿಮ್ಮ ಕಾರ್ಯ ಮುಗಿದ ನಂತರ ಇಲಾಖೆಯನ್ನು ಮುಂದುವರೆಸುವ ಇಚ್ಛೆ ಸರ್ಕಾರಕ್ಕೆ ಇಲ್ಲ' ಎನ್ನುತ್ತಿದ್ದ ದಿವಾನರು ಕಡೆಕಡೆಗೆ "What steps you have taken for training of a Hindu for the archaeological work?... Please give me a complete programme of what in your opinion should be done during the next few years. When you desire to leave and what successor could get on with what you may leave unfinished...." ಎಂದು ಪ್ರಶ್ನಿಸಲು ಆರಂಭಿಸಿದ ರಲ್ಲದೆ "What do you think of one Narasimhachar (I am not quite sure of his name) in the Education Department.... Do you know any better or would you go in for Patak.....?" ಎಂದು ಕೇಳುವ ಮೂಲಕ[2] ಇಲಾಖೆಯ ಕೆಲಸವನ್ನು ಅರ್ಧದಲ್ಲಿ ಬಿಟ್ಟರೂ ಸರಿ, ರೈಸ್ ಸಾಧ್ಯವಾದಷ್ಟು ಬೇಗ ನಿವೃತ್ತ ರಾಗುವುದು ಉಚಿತ ಎಂಬುದನ್ನೂ ಸೂಚಿಸಿದ್ದಿದೆ.

ಈ ಪತ್ರಕ್ಕೆ ಪ್ರತಿಯಾಗಿ ರೈಸರು ಬರೆದಿರುವ ಕೆಳಗಿನ ಪತ್ರ ಅವರ ದಯನೀಯ ಸ್ಥಿತಿಯನ್ನೂ, ಹಿಂದೆಂದೂ, ಯಾರೂ ಕೈಗೊಂಡಿರದ ಮಹತ್ತಾದ ಕಾರ್ಯವೊಂದನ್ನು ಕೈಗೊಂಡ ವ್ಯಕ್ತಿಯೊಬ್ಬ ಅದು ಪೂರ್ಣಗೊಳ್ಳುವ ಹಂತದಲ್ಲಿ ಅದರಿಂದ ದೂರಾಗಬೇಕಾದ ಸಂದರ್ಭ ಒದಗಿದರೆ ಅನುಭವಿಸುವ ವೇದನೆಯನ್ನೂ ಹೃದಯಂಗಮವಾಗಿ ಚಿತ್ರಿಸುತ್ತದೆ :

---

1 K.S.A., S & A, Sl. No. 21(26) of 29th February, 1892.

2 ದಿನಾಂಕ ೧೪ ಫೆಬ್ರವರಿ, ೧೮೯೮ರ ಪತ್ರ

"..... as regards my retirement, you know how I am situated. It is true that I am of an age to retire, but being in no way infirm, and equal to any amount of work indoors or out, I have I may claim the privilege of orders which have been passed in other cases, that an official who is efficient is not to be retired simply on the score of age, or to make room for others. In my case, I am engaged on special work which there is no one else to do.

But the chief thing which makes me seek to prolong my service is the necessity of providing for my children, and especially of my sons, of whom I have six. Of four who are more or less provided for, one is in the Mysore P.W. but his transfer to the Marikanive project I understood, and so did he, was on promotion, but apparently this is not the case.

I have two sons yet to provide for. One was going into the Navy, and as regards physique was placed first by the Medical Board, who reported that they never had a young man before them, more sound or better formed in every way. But unfortunately he failed in the examination for admission. I have been making enquiries with the view of getting him into the South African Police, but he have no special knowledge of that service, and it is away from everyone we know. The other son is just leaving school and an effort will be made to get him into the navy. The expenses connected with preparation for such appointments are considerable, and the losses experienced from the fail of exchange for so many years have prevented much being dour in the way of saving. Hence my desire to go on working, as I am able to do. But if the arrangements I have mentioned above can be carried out, I think two years should see the end of the work in which I am now engaged, and Mysore will have a collection of valuable historical documents such as no other Province in India can boast of....." [1]

1 ದಿನಾಂಕ ೨೩ ಜುಲೈ ೧೮೯೮ರ ಪತ್ರ.

> *"....Give Mr. Rice the help he wants. I approve of his programme generally and it would be well to place it on record with Government approval so that Mr. Rice and the world may know what we expect get done and when..."*

ಎಂಬ ಆದೇಶದೊಂದಿಗೆ[1] ದಿವಾನರು ರೈಸರ ಅಹವಾಲನ್ನು ಪುರಸ್ಕರಿಸಿದರು.

೧೮೯೮ರಲ್ಲಿ ಇಡಿಯ ಮೈಸೂರು ಸಂಸ್ಥಾನದಲ್ಲಿ ತೀವ್ರವಾಗಿ ಪ್ಲೇಗ್ ಹರಡಿದ್ದರಿಂದ ಸರ್ಕಾರ ತನ್ನ ಎಲ್ಲ ಇಲಾಖೆಗಳ ಖರ್ಚು ವೆಚ್ಚಗಳನ್ನು ತಡೆಹಿಡಿದು ಹಣವನ್ನು ವೈದ್ಯೋಪಚಾರಕ್ಕೆ ಬಳಸಬೇಕಾಯಿತು. ಪುರಾತತ್ತ್ವ ಇಲಾಖೆಯ ಸ್ಥಿತಿಯೂ ಉಳಿದೆಲ್ಲ ಇಲಾಖೆಗಳಂತೆಯೇ ಇದ್ದರೂ ಅದೃಷ್ಟವಶದಿಂದ ಕ್ಷೇತ್ರಕಾರ್ಯದ ಕೆಲಸಗಳೆಲ್ಲ ಮುಗಿದು ಎಪಿಗ್ರಾಫಿಯಾ ಕರ್ನಾಟಿಕಾ ಹಾಗೂ ಬಿಬ್ಲಿಯಾಥೆಕಾ ಕರ್ನಾಟಕದ ಸಂಪುಟಗಳು ಅಚ್ಚಿನ ಮನೆಯಲ್ಲಿ ಇದ್ದುದರಿಂದ ಹೆಚ್ಚಿನ ಸಮಸ್ಯೆಯುಂಟಾಗಲಿಲ್ಲ. ಹಾಗೆ ನೋಡಿದರೆ ಎಪಿಗ್ರಾಫಿಯಾ ಕರ್ನಾಟಿಕಾದ ಒಂಬತ್ತು ಸಂಪುಟಗಳು ಹಾಗೂ ಬಿಬ್ಲಿಯಾಥೆಕಾ ಮಾಲೆಯ ಎರಡು ಕೃತಿಗಳು ಮಾತ್ರವಲ್ಲದೆ British Tombs and Monuments in Mysore ಎಂಬ ವಿಶಿಷ್ಟ ಕೃತಿ ಹೊರಬಂದಿದ್ದು ೧೮೯೮ ರಿಂದ ೧೯೦೫ರವರೆಗಿನ ಈ ಕಠಿಣ ಪರಿಸ್ಥಿತಿಯಲ್ಲಿಯೇ.

ಈ ಮಧ್ಯೆ ಬ್ರಿಟಿಷ್ ಚಕ್ರಾಧಿಪತ್ಯವು ೧೯೦೨ರಲ್ಲಿ ಇಂಪೀರಿಯಲ್ ಗೆಜೆಟಿಯರ್ ಸರಣಿಯಲ್ಲಿನ ಮೈಸೂರು ಮತ್ತು ಕೊಡಗಿನ ಭಾಗಗಳನ್ನು ಪರಿಷ್ಕರಿಸಲು ಆದೇಶಿಸಿದ್ದರಿಂದ ೧೯೦೪ರ ಕಡೆಯವರೆಗೆ ರೈಸರು ನಿರಾತಂಕವಾಗಿ ತಮ್ಮ ಕೆಲಸವನ್ನು ಮುಂದುವರೆಸುವಂತಾಯಿತು. ೧೯೦೫ರಲ್ಲಿ ಮತ್ತೆ ಸೇವಾವಿಸ್ತರಣೆಯ ಸಮಸ್ಯೆ ಕಾಡಿತು. ಅಂತಿಮವಾಗಿ ೪೬ ವರ್ಷ, ಏಳು ತಿಂಗಳುಗಳ ಸುದೀರ್ಘ ವೃತ್ತಿ ಜೀವನದ ನಂತರ ರೈಸರು ೧೯೦೬ರ ಅಕ್ಟೋಬರ್ ೧ರಂದು ಮೈಸೂರು ಸರ್ಕಾರದ ಉದ್ಯೋಗದಿಂದ ನಿವೃತ್ತರಾದರು. ಆ ಸಂದರ್ಭದಲ್ಲಿ ಪ್ರಕಟವಾಗಿರುವ ಅಧಿಸೂಚನೆಯಲ್ಲಿ ಮೈಸೂರು ಸಂಸ್ಥಾನಕ್ಕೆ ರೈಸರು ಸಲ್ಲಿಸಿದ ಸೇವೆಯನ್ನು ಸರ್ಕಾರ ಮುಕ್ತಕಂಠದಿಂದ ಶ್ಲಾಘಿಸಿದೆ.[2]

ನಿವೃತ್ತಿ ವೇತನದ ತೊಂದರೆಗಳು

ಮೈಸೂರು ಸರ್ಕಾರದ ಸೇವೆಯಿಂದ ನಿವೃತ್ತರಾದ ಮೇಲೆಯೂ ಆರ್ಥಿಕ ಸಮಸ್ಯೆಗಳು ರೈಸರನ್ನು ಕಾಡದೆ ಬಿಡಲಿಲ್ಲ. ಅದರಲ್ಲಿ ಪ್ರಮುಖವಾದುದೆಂದರೆ ನಿವೃತ್ತಿವೇತನದ ವಿದೇಶಿ ವಿನಿಮಯ ಮೌಲ್ಯದ ತಕರಾರು. ಸ್ವತಃ ರೈಸರಾಗಲೀ, ಅಥವಾ ಅವರ ಬಗೆಗೆ

1 ದಿನಾಂಕ ೧೪ ಫೆಬ್ರವರಿ, ೧೮೯೯ರ ಪತ್ರ.

2 ಅಧಿಸೂಚನೆಯ ಪೂರ್ಣಪಾಠಕ್ಕಾಗಿ ಅನುಬಂಧವನ್ನು ನೋಡಿ.

ಬರೆದಿರುವ ಮತ್ತಾವುದೇ ಬರಹಗಳಲ್ಲಿಯಾಗಲೀ ಉಲ್ಲೇಖಿತವಾಗಿಲ್ಲದ ಈ ವಿವರಗಳು ಕರ್ನಾಟಕ ರಾಜ್ಯ ಪತ್ರಾಗಾರದ 'ವೇತನ ಮತ್ತು ಭತ್ಯೆ'ಗಳ ಕಡತಗಳಲ್ಲಿವೆ. ಮೂರು ದೊಡ್ಡ ಫೈಲುಗಳನ್ನು ತುಂಬಿರುವ ಈ ದಾಖಲೆಗಳ ಅಧ್ಯಯನದಿಂದ ಕೆಳಕಂಡ ಅಂಶಗಳು ಮನದಟ್ಟಾಗುತ್ತವೆ.

ರೈಸರು ನಿವೃತ್ತರಾದದ್ದು ೧೯೦೬ರ ಅಕ್ಟೋಬರ್ ೧ ರಂದು. ನಿವೃತ್ತಿವೇತನ ತಿಂಗಳಿಗೆ ೫೦೦ ರೂಗಳು. ಭಾರತದಲ್ಲಿ ಸೇವೆ ಸಲ್ಲಿಸಿದನಂತರ ಇಂಗ್ಲೆಂಡಿಗೆ ತೆರಳಿದ ಅಧಿಕಾರಿಗಳಿಗೆ ಈ ಮೊತ್ತಕ್ಕೆ ಸರಿಯಾದ ಪೌಂಡ್‌ಗಳಲ್ಲಿ ನೀಡುತ್ತಿದ್ದದ್ದು ಆಗಿನ ಪದ್ಧತಿ. ೧೯೦೫ರ ವರೆಗೆ ಇಂತಹ ಅಧಿಕಾರಿಗಳು ಒಂದು ರೂಪಾಯಿಗೆ ಒಂದು ಶಿಲ್ಲಿಂಗ್ ಮತ್ತು ಒಂಬತ್ತು ಪೆನ್ನಿಗಳ ವಿನಿಮಯದರದಲ್ಲಿ ಪಿಂಚಣಿಯನ್ನು ಪಡೆಯುತ್ತಿದ್ದರು.

೧೯೦೫ರ ನವೆಂಬರ್ ೨೧ರಿಂದ ಅನ್ವಯವಾಗುವಂತೆ ಜಾರಿಗೊಂಡ ಹೊಸ ಆದೇಶದಲ್ಲಿ ಹಿಂದಿನ ವಿನಿಮಯದರವನ್ನು ರದ್ದುಗೊಳಿಸಿ ಒಂದು ರೂಪಾಯಿಗೆ ಒಂದು ಶಿಲ್ಲಿಂಗ್, ನಾಲ್ಕು ಪೆನ್ನಿಗಳ ಲೆಕ್ಕದಲ್ಲಿ ಪಿಂಚಣಿ ನೀಡಲು ಸರ್ಕಾರ ನಿರ್ಧರಿಸಿತು. ರೈಸರು ೧೯೦೬ರಲ್ಲಿ ನಿವೃತ್ತರಾದವರಾದ್ದರಿಂದ ಅವರಿಗೂ ಹೊಸದರವನ್ನೇ ಅನ್ವಯಿಸಲು ಹಣಕಾಸು ಇಲಾಖೆಯ ಆಗಿನ ಕಂಟ್ರೋಲರ್ ಆಗಿದ್ದ ಬಸು ಆದೇಶ ಹೊರಡಿಸಿದರು.

ಸರ್ಕಾರದ ಈ ನಿರ್ಧಾರವನ್ನು ಪುನಃ ಪರಿಶೀಲಿಸುವಂತೆ ರೈಸ್ ಪದೇ ಪದೇ ಕೋರಬೇಕಾಯಿತು. ಈ ಸಂಬಂಧದಲ್ಲಿ ಬರೆದ ಪತ್ರಗಳಲ್ಲಿ ಅವರು ತಮ್ಮ ದಯನೀಯ ಪರಿಸ್ಥಿತಿಯನ್ನು ತೋಡಿಕೊಂಡಿದ್ದಾರೆ. ಹೊಸ ವಿನಿಮಯ ದರದ ಲೆಕ್ಕವನ್ನು ಪರಿಗಣಿಸಿದರೆ ತಮಗೆ ಸಹಜವಾಗಿ ಸಿಗಬೇಕಾಗಿದ್ದ ನಿವೃತ್ತಿ ವೇತನದ ಶೇಕಡಾ ೩೧ ೧/೪ರಷ್ಟು ಹಣ ಕಡಿಮೆಯಾಗಲಿದ್ದು ಇದೊಂದು ದೊಡ್ಡ ಹೊಡೆತ ಎಂದು ಅವರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. (ಹಳೆಯ ಲೆಕ್ಕದ ಪ್ರಕಾರ ರೈಸರಿಗೆ ದೊರಕುತ್ತಿದ್ದ ಪಿಂಚಣಿ ४३.೭೫ ಪೌಂಡ್‌ಗಳಾದರೆ ಹೊಸದರ ಪ್ರಕಾರ ೩೩.೩೪ ಪೌಂಡ್‌ಗಳು, ಎಂದರೆ ೧೦.೪೧ ಪೌಂಡ್ ಗಳ ಕಡಿತ).

ಸರ್ಕಾರ ಈ ವಿಷಯವನ್ನು ಪುನಃ ಪರಿಶೀಲಿಸಲು ಕೈಗೆತ್ತಿಕೊಂಡಾಗ ರೈಸರ ನೆರವಿಗೆ ಬಂದವರೆಂದರೆ ಆಗಿನ ಕೌನ್ಸಿಲರ್‌ಗಳಾದ ಟಿ. ಆನಂದರಾಯರು ಮತ್ತು ಸರ್. ಪುಟ್ಟಣ್ಣ ಚೆಟ್ಟರು. ಪುಟ್ಟಣ್ಣ ಚೆಟ್ಟರು ಈ ಬಗ್ಗೆ ತಮ್ಮ ವರದಿಯಲ್ಲಿ :

> *"…. Mr. Rice has rendered long and distinguished services to the State. He completed his valuable services many years ago and if he had chosen to retire on 1st April 1905, he would surely have been granted the*

concession rate of 1s 9d for payment of his pension in England. He was granted an extension of service from year to year, purely in public interests. Is it fair to make him suffer in pension on this account?..." ಎಂದು ಪ್ರಶ್ನಿಸಿ,

".... My humble opinion is that Mr. Rice is entitled to draw his pension of Rs. 6000 a year in England at 1s 9d per rupee and this may be sanctioned..." ಎಂದಿದ್ದಾರೆ.[1]

ಫಸ್ಟ್ ಕೌನ್ಸಿಲರ್ ಆದ ಟಿ. ಆನಂದರಾಯರು ಪುಟ್ಟಣ್ಣ ಚೆಟ್ಟರ ಅಭಿಪ್ರಾಯವನ್ನು ಅನುಮೋದಿಸಿದ್ದರಿಂದ ದಿವಾನ್ ಪಿ.ಎನ್. ಕೃಷ್ಣಮೂರ್ತಿಯವರು ೧೯೦೫ರ ನವೆಂಬರ್ ೨೧ರ ನಂತರ ಕೆಲಸಕ್ಕೆ ಸೇರಿದವರಿಗೆ ಮಾತ್ರ ಹೊಸ ನಿಯಮ ಅನ್ವಯವಾಗಬೇಕೆಂದೂ, ಅದಕ್ಕಿಂತ ಮುಂಚಿನವರಿಗೆ ಹಳೆಯ ವಿನಿಮಯ ದರದಲ್ಲಿಯೇ ನಿವೃತ್ತಿ ವೇತನವನ್ನು ನೀಡಬಹುದೆಂದೂ ಮಹಾರಾಜರಿಗೆ ಶಿಫಾರಸ್ಸು ಮಾಡಿದರು.[2] ಅದರಂತೆ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಯೂರೋಪಿನಲ್ಲಿರುವ ಎಲ್ಲ ನಿವೃತ್ತ ಬ್ರಿಟಿಷ್ ಅಧಿಕಾರಿಗಳಿಗೂ ಈ ಅನುಕೂಲ ದೊರೆಯುವಂತೆ ಆಜ್ಞೆಯೊಂದನ್ನು ಹೊರಡಿಸಿದರು. ಹೀಗಾಗಿ ರೈಸರ ಪ್ರಯತ್ನದಿಂದ ಪಿಂಚಣಿಯ ಸಮಸ್ಯೆ ತೀರ್ಮಾನವಾಗದೇ ಉಳಿದಿದ್ದ ಕುಕ್, ಸ್ಪಾರ್ಕ್ಸ್, ಬೌರಿಂಗ್, ಟೇಟ್, ವಿಯರ್, ಪ್ಲೂಮರ್, ವೆಥೆರಲ್ ಮುಂತಾದ ಐರೋಪ್ಯ ಅಧಿಕಾರಿಗಳಿಗೂ ಅನುಕೂಲವಾಯಿತು.

ಮರಳಿ ಸ್ವದೇಶಕ್ಕೆ

ಮೈಸೂರು ಸರ್ಕಾರದ ಸೇವೆಯಿಂದ ನಿವೃತ್ತರಾದ ಮೇಲೆ ರೈಸರು ತಮ್ಮ ಪೂರ್ವಿಕರ ನಾಡಾದ ಇಂಗ್ಲೆಂಡಿಗೆ ಹಿಂದಿರುಗಲು ನಿರ್ಧರಿಸಿದರು. ಆ ವೇಳೆಗೆ ಅವರ ಹಿರಿಯ ಮಗನಾದ ಹರ್ಬರ್ಟ್ ಲಂಡನ್ ಸಮೀಪದ ಹ್ಯಾರೋ ಆನ್ ದ ಹಿಲ್ ಪ್ರದೇಶದಲ್ಲಿನ ಚರ್ಚೊಂದರ ಕ್ಯೂರೇಟ್ ಆಗಿ ಕಾರ್ಯನಿರ್ವಹಿಸು ತ್ತಿದ್ದುದರಿಂದ ಆ ಪ್ರಾಂತ್ಯದಲ್ಲಿಯೇ ತಾವೂ ನೆಲೆಸಲು ಅವರು ತೀರ್ಮಾನಿಸಿದರು. 'The Limes', 'Lady Kirk', 'Longfield' ಮುಂತಾದ ಹೆಸರಿನ ಮನೆಗಳಲ್ಲಿ ಕೆಲಕಾಲ ಕಳೆದು ನಂತರ ವ್ಯಾಕ್ಸ್‌ಟೆಡ್ ಪಾರ್ಕ್‌ನ ಸಮೀಪದ ಮನೆಯೊಂದನ್ನು ಖರೀದಿಸಿದರು. ತಾವು ಬೆಂಗಳೂರಿನಲ್ಲಿ ಮೊತ್ತಮೊದಲು ವಾಸಿಸಿದ ಗ್ರೀನ್‌ಹೇ (Green Halgh) ಎಂಬ

---

1 K.S.A., S & A, 21 of 1906-07 Dt. 10th December, 1906ರ ವರದಿ.

2 ಅಲ್ಲೇ, ದಿನಾಂಕ ೨೮, ಮಾರ್ಚ್ ೧೯೦೭ರ ವರದಿ.

ಮನೆಯ ಹೆಸರನ್ನೇ ಈ ಮನೆಗೂ ಇರಿಸಿದರು.[1] ಜೀವನದ ಅಂತ್ಯದ ವರೆಗೆ ಅದೇ ಅವರ ಆವಾಸ ಸ್ಥಾನವಾಯಿತು.

ನಿವೃತ್ತಿಯ ನಂತರದ ಕಾರ್ಯಗಳು :

ಇಂಗ್ಲೆಂಡಿಗೆ ತೆರಳಿದ ನಂತರವೂ ರೈಸರು ಇತಿಹಾಸಾಧ್ಯಯನದ ಕಾರ್ಯವನ್ನು ಮುಂದುವರೆಸುವುದನ್ನು ಬಿಡಲಿಲ್ಲ. ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿ, ರಾಯಲ್ ಸೊಸೈಟಿ ಆಫ್ ಆರ್ಟ್ಸ್, ಈಸ್ಟ್ ಇಂಡಿಯಾ ಅಸೋಸಿಯೇಷನ್, ಬ್ರಿಟಿಷ್ ಅಕಾಡೆಮಿ, ಬ್ರಿಟಿಷ್ ಮ್ಯೂಸಿಯಂ, ಇಂಡಿಯಾ ಆಫೀಸ್ ಲೈಬ್ರರಿ, ಗಿಲ್ಡ್‌ಹಾಲ್ ಲೈಬ್ರರಿ ಮುಂತಾದ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕವನ್ನು ಬೆಳೆಸಿಕೊಂಡ ಅವರು ಸತತವಾದ ಲೇಖನಕಾರ್ಯದಲ್ಲಿ ತೊಡಗಿದರು. 'Mysore and Coorg Inscriptions' ಅವರು ನಿವೃತ್ತರಾದ ನಂತರ ರಚಿಸಿದ ಪ್ರಮುಖ ಕೃತಿ. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಕ್ರೋಢೀಕರಿಸಿ ರೈಸ್ ಈ ಕೃತಿಯನ್ನು ರಚಿಸಿದ್ದಾರೆ. ಇದೇ ಸಮಯದಲ್ಲಿಯೇ ಅವರು ಭಾರತ ಸರ್ಕಾರಕ್ಕೆ ತಮ್ಮ Coorg Inscriptions ಕೃತಿಯನ್ನು ಪರಿಷ್ಕರಿಸಿ ಕೊಟ್ಟರು. ಇಷ್ಟಲ್ಲದೆ ಇಂಡಿಯನ್ ಆಂಟಿಕ್ವೆರಿ, ಜರ್ನಲ್ ಆಫ್ ರಾಯಲ್ ಏಷಿಯಾಟಿಕ್ ಸೊಸೈಟಿ, ಎಪಿಗ್ರಾಫಿಯಾ ಇಂಡಿಕಾ, ಮಿಥಿಕ್ ಸೊಸೈಟಿಯ ಜರ್ನಲ್ ಮತ್ತು ಎನ್‌ಸೈಕ್ಲೋಪೀಡಿಯ ಆಫ್ ರಿಲಿಜನ್ ಅಂಡ್ ಎಥಿಕ್ಸ್‌ಗಳಲ್ಲಿ ಸುಮಾರು ಹದಿನೈದಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯಗಳಲ್ಲಿ ರೈಸರಿಗಿದ್ದ ಪರಿಣತಿಯನ್ನು ಗಮನಿಸಿ ಲಂಡನ್ ವಿಶ್ವವಿದ್ಯಾಲಯವು ರೈಸರನ್ನು ಕನ್ನಡ ಭಾಷಾ ಪರೀಕ್ಷಕರನ್ನಾಗಿ ನೇಮಿಸಿತು. ಇದರೊಂದಿಗೆ ಸ್ಕೂಲ್ ಆಫ್ ಓರಿಯೆಂಟಲ್ ಅಂಡ್ ಆಫ್ರಿಕನ್ ಸ್ಟಡೀಸ್ ಸಂಸ್ಥೆಯಲ್ಲಿ ತಮಿಳು ಮತ್ತು ತೆಲುಗು ಭಾಷೆಗಳ ಬಾಹ್ಯ ಪರೀಕ್ಷಕರಾಗಿಯೂ ಅವರು ಕೆಲಕಾಲ ಸೇವೆ ಸಲ್ಲಿಸಿದ್ದಿದೆ.

ಕೌಟುಂಬಿಕ ವಿದ್ಯಮಾನಗಳು

ವಿವಾಹ :

ಲೂಯಿರೈಸರು ತಮ್ಮ ೩೨ನೆಯ ವರ್ಷದಲ್ಲಿ ಮೇರಿ ಸೋಫಿಯಾ ಗ್ಯಾರೆಟ್ ಎಂಬಾಕೆಯನ್ನು ಮದುವೆಯಾದರು. ಈಕೆ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ

1 ಮುಂದೆ ೧೯೨೪ರಲ್ಲಿ ಪ್ರಕಟವಾದ 'Kelly's Directory of Harrow' ಕೃತಿಯಲ್ಲಿ ಮಾರ್ಕ್ಸ್‌ಟಿಡ್ ಪಾರ್ಕ್ ರಸ್ತೆಯ ದಕ್ಷಿಣ ದಿಕ್ಕಿಗೆ ಇರುವ ಮನೆಯಲ್ಲಿ ರೈಸ್ ವಾಸವಿದ್ದುದನ್ನು ಉಲ್ಲೇಖಿಸಲಾಗಿದೆ (ಪುಟ ೨೧). ಅಲ್ಲದೆ ೧೮೬೩-೬೪ರಲ್ಲಿ ಸರ್ವೇಕ್ಷಣಗೊಂಡು ೧೮೯೪ರಲ್ಲಿ ಪುನರ್ಪರಿಶೀಲಿಸಲಾದ ಮಿಡಲ್‌ಸೆಕ್ಸ್‌ನ ನಕಾಶೆಯಲ್ಲಿ ರೈಸರ ಮನೆ ಸ್ಪಷ್ಟವಾಗಿ ನಮೂದಾಗಿದೆ (ನಕಾಶೆ ೧). ಆದರೆ ೧೯೬೪ರ ವೇಳೆಗೆ ಈ ಸ್ಥಳದಲ್ಲಿ ಹೊಸಮನೆ ನಿರ್ಮಿತವಾಗಿರುವುದನ್ನು ಆರ್ಡಿನೆನ್ಸ್ ಸರ್ವೆ ನಕಾಶೆ ೨ರಲ್ಲಿ ಕಾಣಬಹುದು. ಪ್ರಸ್ತುತ ಈ ಸ್ಥಳದಲ್ಲಿರುವ ಮನೆಯಲ್ಲಿ ಭಾರತೀಯ ಮೂಲದ ಕುಟುಂಬವೊಂದು ವಾಸಿಸುತ್ತಿದೆ.

CERTIFIED COPY OF AN ENTRY OF MARRIAGE — GIVEN AT THE GENERAL REGISTER OFFICE

Application Number B014736A

1867. Marriage solemnized at the Parish Church in the Parish of Wimbledon in the County of Surrey

No.	When Married	Name and surname	Age	Condition	Rank or Profession	Residence at the time of Marriage	Father's Name and Surname	Rank or Profession of Father
138	22nd July 1867	Benjamin Lewis Rice	32	Bachelor	Inspector of Schools in Mysore and Coorg	Derwent Lodge Wimbledon	Benjamin Rice	Missionary
		Mary Sophia Garrett	23	Spinster		Cottenham Wimbledon	John Garrett	Director of Public Instruction in Mysore

Married in the Parish Church according to the Rites and Ceremonies of the Established Church, by Licence by me, Wm. Haygarth, Vicar

This Marriage was solemnized between us, Benjamin Lewis Rice, Mary Sophia Garrett

in the Presence of us, E. Walker, Susan Emily Walker

CERTIFIED to be a true copy of an entry in the certified copy of a register of Marriages in the Registration District of Kingston

Given at the General Register Office, under the Seal of the said Office, the 19th day of March 1997

MXA 132084

This certificate is issued in pursuance of section 65 of the Marriage Act 1949. Sub-section 3 of that section provides that any certified copy of an entry purporting to be sealed or stamped with the seal of the General Register Office shall be received as evidence of the marriage to which it relates without any further or other proof of the entry, and no certified copy purporting to have been given in the said Office shall be of any force or effect unless it is sealed or stamped as aforesaid.

CAUTION.—It is an offence to falsify a certificate or to make or knowingly use a false certificate or a copy of a false certificate intending it to be accepted as genuine to the prejudice of any person, or to possess a certificate knowing it to be false without lawful authority.

WARNING: THIS CERTIFICATE IS NOT EVIDENCE OF THE IDENTITY OF THE PERSON PRESENTING IT.

KJ

Form A514MX

[illegible]

ರೈಸರ ವಿವಾಹದ ದೃಢೀಕರಣ ಪತ್ರ

ಇಲಾಖೆಯ ಮೊದಲ ಡೈರೆಕ್ಟರರೂ, ರೈಸರ ಮೇಲಧಿಕಾರಿಯೂ ಆಗಿದ್ದ ಜಾನ್ ಗ್ಯಾರೆಟ್‌ರ ಪುತ್ರಿ. ತಾಯಿ ಸೋಫಿ ಆಸ್ಟಿನ್. ೧೮೪೫ರ ಆಗಸ್ಟ್ ೨೧ರಂದು ಜನಿಸಿದ ಸೋಫಿಯಾ ರೈಸರಂತೆಯೇ ಕೆಲಕಾಲ ಇಂಗ್ಲೆಂಡಿನಲ್ಲಿ ಕಲಿತು ನಂತರ ಭಾರತಕ್ಕೆ ಮರಳಿದ್ದ ಮಹಿಳೆ. ೧೮೬೭ರ ಅಕ್ಟೋಬರ್‌ನಲ್ಲಿಯೇ ಇವರ ವಿವಾಹ ನಿಶ್ಚಯವಾಯಿತಾದರೂ ಗ್ಯಾರೆಟ್‌ರ ಪತ್ನಿಯ ನಿಧನದ ಕಾರಣದಿಂದಾಗಿ ಮದುವೆ ಮುಂದೂಡಬೇಕಾಗಿ ಬಂದು ಕಡೆಗೆ ೧೮೬೮ರ ಜುಲೈ ೨೨ರಂದು ವಿಂಬಲ್ಡನ್‌ನ ಪಾರಿಷ್ ಚರ್ಚ್‌ನಲ್ಲಿ ನಡೆಯಿತು. ಈ ವಿವಾಹದ ನೋಂದಣಿಯ ದಾಖಲೆಯು ಈಗಲೂ ಲಂಡನ್ನಿನ ಫ್ಯಾಮಿಲಿ ರೆಕಾರ್ಡ್ ಆಫೀಸ್‌ನಲ್ಲಿ (ಜನರಲ್ ರಿಜಿಸ್ಟರ್ ಆಫೀಸ್) ಲಭ್ಯವಿದೆ.

ರೈಸರದು ಹತ್ತು ಜನ ಮಕ್ಕಳಿದ್ದ ದೊಡ್ಡ ಕುಟುಂಬ. ಅವರ ಆತ್ಮಚರಿತ್ರೆಯಲ್ಲಿ ಹಾಗೂ ಕೇಂಬ್ರಿಡ್ಜ್ ಸಂಗ್ರಹದಲ್ಲಿರುವ ವಂಶಾವಳಿಯಲ್ಲಿ ಇರುವ ಅವರ ಮಕ್ಕಳನ್ನು ಕುರಿತಾದ ಮಾಹಿತಿಯನ್ನು ಹೀಗೆ ಕ್ರೋಢೀಕರಿಸಬಹುದು :

ಹರ್ಬರ್ಟ್ ಲೆವೆಲ್ಲೆ :

ಈತ ರೈಸರ ಮೊದಲ ಮಗ. ಜನನ ೧೮೭೦ರ ಅಕ್ಟೋಬರ್ ೭ರಂದು. ಲಂಡನ್ ಸಮೀಪದ ರಿಡಿಂಗ್‌ನ ಪ್ರಖ್ಯಾತ ರಿಡಿಂಗ್ ಗ್ರಾಮರ್ ಸ್ಕೂಲ್‌ನಲ್ಲಿ ಹಾಗೂ ಕೇಂಬ್ರಿಡ್ಜ್‌ನ ಕ್ವೀನ್ಸ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ. ವಿವಿಧ ಊರುಗಳ ಚರ್ಚುಗಳಲ್ಲಿ ಸಹಾಯಕ ಪಾದ್ರಿಯಾಗಿ (Curate) ಸೇವೆಸಲ್ಲಿಸಿದ ನಂತರ ಈತ ರಿಡಿಂಗ್‌ನ ಬಳಿಯ ಶಿನ್‌ಫೀಲ್ಡ್ ಎಂಬ ಊರಿನ ಚರ್ಚಿನ ಧರ್ಮಾಧಿಕಾರಿಯಾಗಿ (Vicar) ನೇಮಕಗೊಂಡ. ೧೯೨೧ರಲ್ಲಿ ಈತ ಐರಿಸ್ ಗರ್ನೇ ಎಂಬಾಕೆಯನ್ನು ವಿವಾಹವಾದ. ಏಂಜೆಲಾ ಈತನ ಮಗಳು.

ಸಿಡ್ನಿ ಮೆರ್ವಿನ್ :

ರೈಸರ ಎರಡನೆಯ ಮಗನಾದ ಈತನ ಜನನ ೧೮೭೩ರ ಮಾರ್ಚ್ ೪ರಂದು. ಇಂಡಿಯನ್ ಸಿವಿಲ್ ಸರ್ವೀಸಿಗೆ ಸೇರಬೇಕೆಂಬ ಆಸೆಯಿಂದ ರೆನ್‌ರವರ ಪ್ರಖ್ಯಾತ ಗ್ರಾಮರ್ ಶಾಲೆಗೆ ಸೇರಿದನಾದರೂ ವಯಸ್ಸಿನ ಮಿತಿ ದಾಟಿದ್ದರಿಂದ ಅವಕಾಶ ದೊರೆಯಲಿಲ್ಲ. ಹಾಗಾಗಿ ಬ್ರಿಟಿಷ್ ಸೈನ್ಯಕ್ಕೆ ದಾಖಲಾಗಬೇಕಾಯಿತು (೧೮೯೪). ಬೆಂಗಳೂರು, ತಿರುಚಿನಾಪಳ್ಳಿ, ಉದಕಮಂಡಲ ಮುಂತಾದ ಸ್ಥಳಗಳಲ್ಲಿ ಕೆಲಸಮಾಡಿದ ಸಿಡ್ನಿ ರಷ್ಯಾ - ಜಪಾನ್ ನಡುವಣ ಯುದ್ಧದಲ್ಲಿ ಜಪಾನ್‌ನ ಪರವಾಗಿ ಭಾಗವಹಿಸಿದ ಯೋಧ. ಝೂನ್ಸಿಯ ಬಳಿಯ ಕಾಡೊಂದರಲ್ಲಿ ಬೇಟೆಯಾಡುವಾಗ ಚಿರತೆಯೊಂದು ಕಚ್ಚಿದ್ದರಿಂದ ಬಲಗಾಲನ್ನು ಕಳೆದುಕೊಂಡಿದ್ದರಿಂದ ಸಕ್ರಿಯವಾದ ಯುದ್ಧರಂಗದ ಸೇವೆಯಿಂದ ಹಿಂದೆ ಸರಿಯಬೇಕಾದರೂ ಆಡಳಿತಾಧಿಕಾರಿಯಾಗಿ ಆತ ಮುಂದುವರೆದ.

ಮೊದಲ ವಿಶ್ವಯುದ್ಧದ ಸಮಯದಲ್ಲಿ (೧೯೧೯) ಮೆಸಪಟೋಮಿಯಾಕ್ಕೆ ಸೈನ್ಯದ ತುಕಡಿಗಳನ್ನು ಸಕಾಲಕ್ಕೆ ತಲುಪಿಸುವಲ್ಲಿ ಈತ ವಹಿಸಿದ ಗಣನೀಯ ಪಾತ್ರವನ್ನು ಗುರುತಿಸಿ ಬ್ರಿಟಿಷ್ ಸರ್ಕಾರ 'ಕಮಾಂಡರ್ ಆಫ್ ದಿ ಆರ್ಡರ್ ಆಫ್ ಇಂಡಿಯನ್ ಎಂಪೈರ್' (ಸಿ.ಐ.ಇ.) ಬಿರುದನ್ನಿತ್ತು ಗೌರವಿಸಿತು. ಆಫ್ಘನ್ ಯುದ್ಧದಲ್ಲಿ ಯುದ್ಧಪದಕವನ್ನು ಪಡೆದ ಸಿಡ್ನಿ ನಿವೃತ್ತನಾಗುವ ವೇಳೆಗೆ ಲೆಫ್ಟಿನೆಂಟ್ ಕರ್ನಲ್‌ನ ಹುದ್ದೆಗೇರಿದ್ದು ಮಾತ್ರವಲ್ಲದೆ 'ಕಮಾಂಡರ್ ಆಫ್ ದ ಆರ್ಡರ್ ಆಫ್ ಬ್ರಿಟಿಷ್ ಎಂಪೈರ್' (ಸಿ.ಬಿ.ಇ.) ಬಿರುದನ್ನೂ ಸಂಪಾದಿಸಿಕೊಂಡಿದ್ದ (೧೯೨೦). ಸೈನ್ಯ ಮತ್ತು ಸೈನಿಕರ ಇತಿಹಾಸವನ್ನು ಕುರಿತಾದ Burke's Landed Gentry ಎಂಬ ವಿಶ್ವಕೋಶದ ಪರಿಷ್ಕೃತ ಆವೃತ್ತಿಯಲ್ಲಿ ಸಿಡ್ನಿಯ ವಿವರಗಳನ್ನು ಸೇರಿಸಲು ಬಯಸಿ ಅದರ ಸಂಪಾದಕರು ಪತ್ರ ಬರೆಯುವಷ್ಟರ ಮಟ್ಟಿಗೆ[1] ಆತ ಪ್ರಸಿದ್ಧನಾಗಿದ್ದ.

೧೯೨೨ರಲ್ಲಿ ಸೇನೆಯಿಂದ ನಿವೃತ್ತನಾದ ಮೇಲೆ ಅರಣ್ಯಶಾಸ್ತ್ರದಲ್ಲಿ ವಿಶೇಷ ಆಸಕ್ತಿಯನ್ನು ಬೆಳೆಸಿಕೊಂಡು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅದನ್ನು ಕುರಿತಾಗಿ ವಿಶೇಷ ಅಧ್ಯಯನವನ್ನು ನಡೆಸಿದ. ಲೆ.ಕ. ಸಿ.ಟಿ. ಸೆನೆಟ್‌ರ ಮಗಳು ಡೊರೋಥಿ ಈತನ ಪತ್ನಿ. ಸಿಡ್ನಿ ೧೯೫೫ರ ಫೆಬ್ರವರಿ ೫ರಂದು ನಿಧನನಾದ.

ಹೆರಾಲ್ಡ್ ಡಗ್ಲಸ್ :

ತನ್ನ ತಾತ ಹಾಗೂ ತಂದೆಯರಂತೆ ಮೈಸೂರು ಸಂಸ್ಥಾನದಲ್ಲಿ ವಿಶೇಷವಾಗಿ ಸೇವೆ ಸಲ್ಲಿಸಿದ ರೈಸ್ ವಂಶೀಯನೆಂದರೆ ಹೆರಾಲ್ಡ್ ಡಗ್ಲಸ್. ಈತ ರೈಸರ ಮೂರನೆಯ ಮಗ. ೧೮೭೬ರ ಜುಲೈ ೯ರಂದು ಜನಿಸಿದ ಈತ ಮೊದಲು ಖಾಸಗಿಯಾಗಿ ನಂತರ ಕೇಂಬ್ರಿಡ್ಜ್‌ನ ಕ್ವೀನ್ಸ್ ಕಾಲೇಜಿನಲ್ಲಿ ಎಂಜಿನಿಯರಿಂಗನ್ನು ಅಭ್ಯಾಸಮಾಡಿದರು. ಅನಂತರ ನಿರ್ಮಾಣ ಹಂತದಲ್ಲಿದ್ದ ಶಿವನಸಮುದ್ರದ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ಸಹಾಯಕ ಎಂಜಿನಿಯರ್ ಆಗಿ ಈತ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಮೈಸೂರು ಸರ್ಕಾರ ಹೆಚ್ಚಿನ ಪರಿಣತಿಯನ್ನು ಪಡೆಯಲೆಂದು ಐದು ವರ್ಷಗಳ ಕಾಲ ಅಮೇರಿಕಾಕ್ಕೆ ಕಳುಹಿಸಿತು. ಆದರೆ ಅಮೇರಿಕಾದ ಅಧಿಕಾರಿಗಳು ಇತರರಿಗೆ ತಮ್ಮಲ್ಲಿದ್ದ ವಿದ್ಯೆಯನ್ನು ಹಂಚಿಕೊಳ್ಳುವುದರಲ್ಲಿ ನಿರಾಸಕ್ತರಾಗಿದ್ದದ್ದನ್ನು ಪ್ರತಿಭಟಿಸಿ ಡಗ್ಲಸ್ ಭಾರತಕ್ಕೆ ವಾಪಸಾದರು. ಮುಂದೆ ಮೈಸೂರು ಸರ್ಕಾರ ೧೮೯೮ರಲ್ಲಿ ವೇದವತಿ ನದಿಗೆ ಮಾರಿಕಣಿವೆ ಎಂಬಲ್ಲಿ (ಈಗಿನ ವಾಣಿ ವಿಲಾಸಸಾಗರ) ದೊಡ್ಡ ಅಣೆಕಟ್ಟೊಂದನ್ನು ನಿರ್ಮಿಸಲು ನಿರ್ಧರಿಸಿದಾಗ ಡಗ್ಲಸ್

1 ದಿನಾಂಕ ೧೯೩೮ರ ಪತ್ರ. ಆದರೆ ಸಿಡ್ನಿ ಈ ಪತ್ರಕ್ಕೆ ಉತ್ತರಿಸಿದಂತೆ ತೋರುವುದಿಲ್ಲ. ಏಕೆಂದರೆ ೧೯೩೯ರ ಪರಿಷ್ಕೃತ ಆವೃತ್ತಿಯಲ್ಲಿ ಈತನ ವಿವರಗಳು ಇಲ್ಲ.

ರೈಸರನ್ನೇ ಚೀಫ್ ಎಂಜಿನಿಯರ್‌ನನ್ನಾಗಿ ನೇಮಿಸಿತು. ತೀವ್ರವಾಗಿ ಹರಡಿದ ಕಾಲರಾದ ಕಾರಣದಿಂದಾಗಿ ಕೆಲಸ ಬಹಳ ನಿಧಾನವಾದರೂ ಧೃತಿಗೆಡದ ಡಗ್ಲಸ್ ೧೯೦೭ ರಲ್ಲಿ ೧೩೩೦ ಅಡಿ ಉದ್ದ ೧೬೨ ಅಡಿ ಎತ್ತರದ ಭವ್ಯ ಅಣೆಕಟ್ಟಿನ ನಿರ್ಮಾಣವನ್ನು ಪೂರ್ಣಗೊಳಿಸಿ ಸರ್ಕಾರದ ಮೆಚ್ಚುಗೆಗೆ ಪಾತ್ರರಾದರು.

ಡಗ್ಲಸ್‌ರ ನೇತೃತ್ವದಲ್ಲಿ ಭಟ್ಕಳದಲ್ಲಿ ನೌಕಾ ಬಂದರೊಂದನ್ನು ನಿರ್ಮಾಣಗೊಳಿಸಲು ಮೈಸೂರು ಸರ್ಕಾರ ಯತ್ನಿಸಿತಾದರೂ ರಾಜತಾಂತ್ರಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಆಗ ಈ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ. ಚಾಮುಂಡಿ ಬೆಟ್ಟಕ್ಕೆ ಡಾಂಬರು ರಸ್ತೆಯನ್ನು ಮಾಡುವ ಕಾರ್ಯದಲ್ಲಿ ಡಗ್ಲಸ್ ರೈಸರು ತೋರಿದ ಕಾರ್ಯಕ್ಷಮತೆಯನ್ನು ಗುರುತಿಸಿದ ಸರ್ಕಾರ ಆ ರಸ್ತೆಯಲ್ಲಿನ ವೃತ್ತವೊಂದಕ್ಕೆ ಅವರ ಹೆಸರನ್ನೇ ನಾಮಕರಣ ಮಾಡಿದೆ.

ಸಂಸ್ಥಾನದ ಚೀಫ್ ಇಂಜಿನಿಯರ್ ಆಗಿ ನಿವೃತ್ತರಾದ ನಂತರ ಇಂಗ್ಲೆಂಡಿನಲ್ಲಿ ವಾಸವಾಗಿದ್ದ ಡಗ್ಲಸ್ ರೈಸರನ್ನು ಮೈಸೂರು ಸರ್ಕಾರ ಶ್ರೀಗಂಧದ ಎಣ್ಣೆ ಮತ್ತಿತರ ಮೈಸೂರಿನ ಸುಪ್ರಸಿದ್ಧ ಕರಕುಶಲ ವಸ್ತುಗಳ ಮಾರಾಟದ ವ್ಯವಸ್ಥೆಯ ಏಜೆಂಟರನ್ನಾಗಿ ನೇಮಿಸಿತು.* ಫಿಲ್ಲಿಸ್ ಇವರ ಪತ್ನಿ.

ಆರ್ಥರ್ :

ಲೂಯಿರೈಸರ ನಾಲ್ಕನೆಯ ಮಗನಾದ ಆರ್ಥರ್ ಜನಿಸಿದ್ದು ೧೮೭೮ರ ಮೇ ೧ ರಂದು. ವೃತ್ತಿಯಿಂದ ಬ್ಯಾಂಕರ್. ಕಾನ್‌ಸ್ಟಾನ್ಸ್ ಎಂಬಾಕೆ ಈತನ ಪತ್ನಿ. ಈತ ೧೯೪೮ರಲ್ಲಿ ನಿಧನನಾದ.

ಆಲ್ಫ್ರೆಡ್ ರೇ :

ರೈಸರ ಐದನೆಯ ಮಗ. ಜನನ ೧೮೮೦ರ ಜೂನ್ ೧೨ರಂದು. ಕಲಿತಿದ್ದು ಅರಣ್ಯಶಾಸ್ತ್ರವಾದರೂ ಪರಿಣತಿ ಗಣಿಗಾರಿಕೆ, ಕುದುರೆ ಸಾಕಣೆ, ಚೌಬೀನೆ ವ್ಯಾಪಾರ, ಆನೆಗಳ ವ್ಯಾಪಾರ, ತರಬೇತಿ ಮುಂತಾದವುಗಳಲ್ಲಿ. ಮೊದಲ ವಿಶ್ವಯುದ್ಧದ ಸಮಯದಲ್ಲಿ ಫ್ರಾನ್ಸ್, ಈಜಿಪ್ಟ್, ಪ್ಯಾಲಸ್ಟೈನ್ ಮುಂತಾದ ಸ್ಥಳಗಳಲ್ಲಿ ರಾಹುತದಳದ ಯೋಧನಾಗಿ ಸೇವೆ. ಯುದ್ಧಾನಂತರ ದಕ್ಷಿಣ ಆಫ್ರಿಕಾದಲ್ಲಿ ತೋಟಗಾರಿಕೆಯಲ್ಲಿ ನಿರತನಾಗಿದ್ದ. ಐಲೀನ್ ಬೆರ್ರಿ ಈತನ ಪತ್ನಿ.

* ಆ ಕಾಲದಲ್ಲಿ ನಡೆದ ಕೆಲವು ವಿದ್ಯಮಾನಗಳ ವಿವರಗಳನ್ನು ಎಂ.ಎ. ಶ್ರೀನಿವಾಸನ್ ಎಂಬುವರು 'Raj, Maharaja & Me' ಎಂಬ ಕೃತಿಯಲ್ಲಿ ನೀಡಿದ್ದಾರೆ.

ಚಾರ್ಲಿ :

ರೈಸರ ಆರನೆಯ ಮಗ. ಜನನ ೧೮೮೨ರ ಮೇ ೭ರಂದು. ಕಲ್ಕತ್ತ, ಯೊಕೊಹಾಮಾ, ಫಾರ್ಮೊಸಾ ಮುಂತಾದ ಕಡೆಗಳಲ್ಲಿ ಹಾಂಕಾಂಗ್ ಮತ್ತು ಶಾಂಘೈ ಬ್ಯಾಂಕ್‌ನ ಏಜೆಂಟನಾಗಿ ಸೇವೆ. ವಿನ್ನಿ ಈತನ ಪತ್ನಿ.

ಹೆಣ್ಣು ಮಕ್ಕಳು :

ಮಬೆಲ್ (ಜನನ ೧೮೭೧ ನವೆಂಬರ್ ೧೩), ಲಿಲ್ಲಿ (೧೮೭೪ ನವೆಂಬರ್ ೧೮), ಗ್ಲಾಡಿಸ್ (೧೮೮೬ ಜನವರಿ ೨೬) ಹಾಗೂ ಮೌಡ್ (೧೮೮೮ ಮಾರ್ಚ್ ೧೪)ರು ರೈಸರ ನಾಲ್ವರು ಹೆಣ್ಣುಮಕ್ಕಳು. ಇವರಲ್ಲಿ ಮೂರನೆಯವಳಾದ ಗ್ಲಾಡಿಸ್ ವಿವಾಹವಾದಂತೆ ತೋರುವುದಿಲ್ಲ. ಉಳಿದ ಮೂವರೂ ಕ್ರಮವಾಗಿ ಕ್ಯಾಪ್ಟನ್ ಗ್ರಾಟ್ಟನ್, ಕ್ಯಾಪ್ಟನ್ ಗಿಬ್ಬರ್ಡ್ ಹಾಗೂ ವಿಲ್ಫ್ರೆಡ್ ಪಾರ್ಸನ್ ಎಂಬ ಸೈನ್ಯ ವೈದ್ಯಾಧಿಕಾರಿಗಳನ್ನು ಮದುವೆಯಾದರು. ಬೆಂಗಳೂರಿನ ಹೋಲಿ ಟ್ರಿನಿಟಿ ಚರ್ಚಿನಲ್ಲಿ ಮಬೆಲ್ಲಳ ವಿವಾಹಕ್ಕೆ ಹಾಗೂ ಸೈಂಟ್ ಮಾರ್ಕ್ಸ್ ಚರ್ಚ್‌ನಲ್ಲಿ ನಡೆದ ಲಿಲ್ಲಿಯ ವಿವಾಹಕ್ಕೆ ಮಹಾರಾಜರು, ಮಹಾರಾಣಿಯವರು, ದಿವಾನರೇ ಸೇರಿದಂತೆ ರಾಜ್ಯದ ಎಲ್ಲ ಗಣ್ಯ ಅಧಿಕಾರಿಗಳು ಆಗಮಿಸಿದ್ದುದನ್ನು ರೈಸ್ ತಮ್ಮ ಆತ್ಮಚರಿತ್ರೆಯಲ್ಲಿ ಸ್ಮರಿಸಿಕೊಂಡಿದ್ದಾರೆ.[1]

ಕೊನೆಯ ದಿನಗಳು :

ನಿವೃತ್ತಿಯ ನಂತರವೂ ಅನೇಕ ವರ್ಷಗಳ ಕಾಲ ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದ ರೈಸರು ತಮ್ಮ ಎಂಬತ್ತೈದನೆಯ ವಯಸ್ಸಿನಲ್ಲಿ ತೀವ್ರವಾದ ಅನಾರೋಗ್ಯಕ್ಕೆ ತುತ್ತಾದರು. ಇದರೊಂದಿಗೆ ಕಾಲಿನ ನರಗಳ ಉರಿಯೂತವೂ ಕಾಣಿಸಿಕೊಂಡಿದ್ದರಿಂದ ನಡೆದಾಟ ಕಷ್ಟವಾಯಿತು. ಆದರೂ "ದೇವರ ದಯೆಯಿಂದ ಈ ಎಂಬತ್ತೈದನೆಯ ವರ್ಷದಲ್ಲಿಯೂ ನನ್ನ ಸಾಮಾನ್ಯ ಆರೋಗ್ಯ ಚೆನ್ನಾಗಿದೆ. ಕಣ್ಣು ಕಿವಿಗಳು ಸರಿಯಾಗಿವೆ" ಎಂದು ಅವರು ಸಮಾಧಾನಪಟ್ಟುಕೊಂಡಿದ್ದಾರೆ.[2] ೧೯೨೪ರಲ್ಲಿ ಪ್ರಕಟವಾದ ಜರ್ನಲ್ ಆಫ್ ರಾಯಲ್ ಏಷಿಯಾಟಿಕ್ ಸೊಸೈಟಿಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ "Oldest Annals of Mysore" ಎಂಬ ಲೇಖನವೇ ಪ್ರಸ್ತುತ ದೊರೆತಿರುವ ರೈಸರ ಬರಹಗಳಲ್ಲಿ ಕೊನೆಯದಾಗಿದ್ದು ಎಂಬತ್ತೇಳನೆಯ ವರ್ಷದಲ್ಲಿಯೂ ಅವರ ವ್ಯಾಸಂಗ ಮತ್ತು ಲೇಖನ ಕಾರ್ಯಗಳು ಮುಂದುವರೆದಿದ್ದನ್ನು ಸೂಚಿಸುತ್ತದೆ.

---

1 ಈ ಸಂದರ್ಭದಲ್ಲಿ ಅತಿಥಿಗಳು ವಧುವರರಿಗೆ ನೀಡಿದ ಕೊಡುಗೆಗಳ ಎಲ್ಲದರ ವಿವರಗಳನ್ನು ಬೆಂಗಳೂರಿನ ಆಗಿನ ಇಂಗ್ಲಿಷ್ ಪತ್ರಿಕೆಯೊಂದು ವರದಿಮಾಡಿದೆ.

2 Biographical Notes, P–68.

ನಿಧನ :

ಕ್ರಿ.ಶ. ೧೯೨೭ರ ಜುಲೈ ೧೦ರಂದು ಭಾನುವಾರ ಲೂಯಿರೈಸರು ತಮ್ಮ ೯೦ನೆಯ ವಯಸ್ಸಿನಲ್ಲಿ ಹ್ಯಾರೋದಲ್ಲಿನ ತಮ್ಮ ಮನೆಯಲ್ಲಿ ನಿಧನರಾದರು. ಲಂಡನ್ನಿನ ಜನರಲ್ ರಿಜಿಸ್ಟರ್ ಆಫೀಸ್‌ನ ದಾಖಲೆಗಳ ಪ್ರಕಾರ ಹೃದಯಸ್ಥಂಭನದಿಂದಾಗಿ ಅವರ ಸಾವು ಸಂಭವಿಸಿದೆ. ದಿನಾಂಕ ೧೩.೧೦.೧೯೨೭ರಂದು ಪಿನ್ನರ್ ರಸ್ತೆಯಲ್ಲಿರುವ ಹ್ಯಾರೋ ಸೆಮಿಟ್ರಿಯಲ್ಲಿ ರೈಸರ ಶವವನ್ನು ಸಂಸ್ಕಾರ ಮಾಡಲಾಯಿತು. ಮೈಸೂರಿನಿಂದ ಆಮದು ಮಾಡಿಕೊಳ್ಳಲಾಗಿದ್ದ ಗ್ರಾನೈಟ್ ಶಿಲೆಯಿಂದ ತಯಾರಾದ ಸ್ಮಾರಕ ಶಿಲೆಯನ್ನು ನೆಟ್ಟು ಅದರ ಮೇಲೆ ಈ ಕೆಳಗಿನ ಚರಮ ವಾಕ್ಯಗಳನ್ನು ಕೆತ್ತಲಾಯಿತು.[1]

In memory of
B. Lewis Rice, *C.I.E.,*
For 45 years in Mysore Service of India as
Director of Public Instruction
And of
Archaeological Researches,
Born : Bangalore, 17 July 1837,
Died : Harrow, 10 July 1927.

ಲಂಡನ್ನಿನ 'Evening Standard', 'The Times', ಕಲ್ಕತ್ತೆಯ 'The StatesMan', ಬೆಂಗಳೂರಿನ 'Daly Post', ವಿಶ್ವಕರ್ನಾಟಕ, ಪ್ರಬುದ್ಧ ಕರ್ಣಾಟಕ ಮುಂತಾದ ಪತ್ರಿಕೆಗಳು ರೈಸರ ಮರಣದ ವಾರ್ತೆಯನ್ನು ಶ್ರದ್ಧಾಂಜಲಿಯ ರೂಪದಲ್ಲಿ ಪ್ರಕಟಿಸಿದವು. 'Harrow Observer and Gazette' ಪತ್ರಿಕೆಯಂತೂ 'Death of Mr. B. Lewis Rice' ಎಂಬ ಶೀರ್ಷಿಕೆಯಲ್ಲಿ ರೈಸರ ಸಮಗ್ರಜೀವನ ಚರಿತ್ರೆಯನ್ನೇ ಪ್ರಕಟಿಸಿದೆ. JRAS ನಲ್ಲಿ ಎಲ್.ಡಿ. ಬಾರ್ನೆಟ್‌ರು ಬರೆದಿರುವ ಶ್ರದ್ಧಾಂಜಲಿ, ಪ್ರಬುದ್ಧ ಕರ್ಣಾಟಕದಲ್ಲಿನ ಎ.ಆರ್. ಕೃಷ್ಣಶಾಸ್ತ್ರಿಗಳ ಸಂತಾಪ ಸಂದೇಶಗಳು ರೈಸರ ಸಮಗ್ರ ಸಾಧನೆಯನ್ನು ಗುರುತಿಸುವ ಬರಹಗಳು.

---

1 ಹ್ಯಾರೋ ಸೆಮೆಟ್ರಿಯ ದಾಖಲೆಗಳಲ್ಲಿ ರೈಸರ ಸಮಾಧಿಯ ಉಲ್ಲೇಖವಿದೆಯಾದರೂ ನಕಾಶೆಯಲ್ಲಿ ಗುರುತಿಸಲಾಗಿರುವ ಸ್ಥಳದಲ್ಲಿ ಪ್ರಸ್ತುತ ದೊಡ್ಡ ಪೊದೆಯೊಂದು ಬೆಳೆದಿರುವುದರಿಂದ ಸಮಾಧಿಸ್ಥಳದ ಮೇಲಿನ ಸ್ಮಾರಕಶಿಲೆಯನ್ನು ಪತ್ತೆಹಚ್ಚುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಾಧ್ಯವಾಗಲಿಲ್ಲ. ಆದರೆ ಕೇಂಬ್ರಿಡ್ಜ್‌ನ ದಾಖಲೆಯೊಂದರಲ್ಲಿ 'Wording on the Grave at Pinner Road Cemetery, Harrow' ಎಂಬ ಶೀರ್ಷಿಕೆಯಡಿಯಲ್ಲಿ ಮೇಲ್ಕಂಡ ವಾಕ್ಯಗಳಿದ್ದು ಈ ದಾಖಲೆಯನ್ನೇ ಪ್ರಮಾಣವಾಗಿ ಗಣಿಸಲಾಗಿದೆ.

CERTIFIED COPY OF AN ENTRY OF DEATH

GIVEN AT THE GENERAL REGISTER OFFICE

Application Number B044731/A

REGISTRATION DISTRICT Hendon

1927 DEATH in the Sub-district of Harrow in the County of Middlesex

Columns:	1	2	3	4	5	6	7	8	9
No.	When and where died	Name and surname	Sex	Age	Occupation	Cause of death	Signature, description and residence of informant	When registered	Signature of registrar
29	Tenth July 1927 Greenhalgh Marlisle Park Harrow U.D.	Benjamin Lewis Rice	Male	89 years	C.I.E. Director of Archaeology Mysore State India (retired)	(a) Heart failure (b) Senile Decay Certified by W S Darby M.B.	H. O. Rice Son Westfield Hatch End Middx	Twelfth July 1927	W R Hurst Registrar

CERTIFIED to be a true copy of an entry in the certified copy of a Register of Deaths in the District above mentioned.

Given at the GENERAL REGISTER OFFICE, under the Seal of the said Office, the 18th day of March 1992

DXZ 398308

CAUTION:—It is an offence to falsify a certificate or to make or knowingly use a false certificate or a copy of a false certificate intending it to be accepted as genuine to the prejudice of any person or to possess a certificate knowing it to be false without lawful authority.

ರೈಸರ ಮರಣ ಪ್ರಮಾಣಪತ್ರ

OFFICE COPY

VALID ONLY IF BEARING
IMPRESSED COURT SEAL

THIS IS THE LAST WILL AND TESTAMENT of me BENJAMIN LEWIS RICE of Greenhalgh Harrow on the Hill in the County of Middlesex Esquire C I E I hereby revoke all wills and testamentary dispositions heretofore made by me and declare this to be my last will I give devise and bequeath all my property real and personal whatsoever and wheresoever Unto and to the use of my wife Mary Sophia Rice absolutely and I appoint her sole EXECUTRIX of this my will if she shall survive me But if my said wife shall die in my lifetime then I appoint my sons Colonel Sidney Mervyn Rice and Harold Douglas Rice and my daughter Gladys Evelyn May Rice to be the EXECUTORS of this my will and I direct my executors to sell my real estate and to sell call in collect or otherwise convert into money such parts of my estate as shall not consist of ready money and to pay thereout my funeral and testamentary expenses and debts and to divide the residue of my estate between the following of my children in the proportions mentioned namely To my said daughter Gladys Evelyn May Rice sixteen fifty first parts thereof To my son Herbert Llewellyn Rice seventeen fifty firts parts thereof To my son Roy Alfred Rice ten fifty first parts thereof and to my daughter Constance Maud Parsons eight fifty first parts thereof for their respective absolute use and benefit

IN WITNESS WHEREOF I have hereunto set my hand this twenty third day of [illegible] one thousand nine hundred and twenty one -- B L RICE --

SIGNED by the above named testator Benjamin Lewis Rice as his last will in the presence of us present at the same time who in his presence & in the presence of each other have hereunto subscribed our names as witnesses --

A MACFADYEN 25 Roxborough Park Harrow Stockbroker -- [illegible] CUMMINGS Cobham Surrey Widow --

Proved 29th July 1927.

7

ರೈಸರ ಅಂತಿಮ ಉಯಿಲು

Phone: Central 6646 Estd. 1897

The Temple Press Cutting Offices

DANES INN HOUSE
265, STRAND, LONDON, W.C.2

Bankers-- Westminster Bank Ltd. E. Willis, Proprietor

Cutting from E. Standard

Date 12.7.27

Evening Standard - July 12, 1927

An Indian Scholar.

Mr. B. Lewis Rice, who has just died in his ninetieth year, was a strikingly typical and admirable figure.

He began his public career in the Indian Educational Service, and as long ago as the 'eighties was one of the most prominent educationalists in India. But his real bent was for archæological research, and it is not too much to say that his researches revolutionised Indian archæology. He discovered among other things the immensely important edicts of Asoka.

Such scholars, labouring quietly, and generally regarded by their colleagues as at best harmless eccentrics, are often among the happiest, as they are not the least useful, products of our rule in India.

DEATH OF MR. B. LEWIS RICE.

We regret to record the death of Mr. B. Lewis Rice, C.I.E., the foremost Kanarese scholar of the day and a distinguished Sanskritist, which occurred at his residence, Greenhalgh, Harrow, on Sunday, exactly a week before completing his 90th year.

Born in Bangalore, Southern India, 240 miles in a palanquin, he set sail on July 17, 1837, he was sent to England by his parents, at the age of eleven, in 1848. After a tedious road journey of from Madras in one of Green's well-known sailing ships. In those days cabins were not fitted with berths and furnished as now. The passenger received merely a cabin and had to purchase all the necessary fittings and furniture before embarking on the voyage. The ship touched land for the first time at the Cape of Good Hope, and subsequently at St. Helena, where she was unfortunately in collision with another ship. On arrival in the Channel, Lewis Rice, with others, was landed in a sailing boat somewhere near the Goodwin Sands. After six

Harrow Observer and Gazette – July 15, 1927

Obituary.

MR. B. LEWIS RICE.


A GREAT INDIAN EPIGRAPHIST.

Mr. B. Lewis Rice, C.I.E., the foremost Canarese scholar of the day and a distinguished Sanskritist, died at his residence, Greenhalgh, Harrow-on-the-Hill, on Sunday, exactly a week before completing his 90th year. Rather more than half his life was spent in the public service in Mysore, for Mr. Rice was on the active list for the exceptional period, in the case of a European officer, of 46 years, and his visits home on furlough were few and far between.

The son of an agent of the London Missionary Society in South India, he was born in that country on July 17, 1837, a few weeks after the accession of Queen Victoria. After education in this country Rice had half a dozen years' business experience in the City—first in a foreign merchant's office in Fenchurch-street, and then in the banking house of George Peabody, the millionaire philanthropist, with whom he established an intimate friendship. He went out in 1860 to Mysore (then and for many years afterwards under British administration) as headmaster of the Central High School, Bangalore. Later he became an inspector of schools in Mysore and Coorg, and eventually Director of Public Instruction. In 1882 he was placed on special duty as Secretary of the important Education Commission, which, under the chairmanship of Sir W. W. Hunter, laid down revised principles of the relations of the State to private enterprise and local administration in this field. Returning to Mysore he became the first Education Secretary to the local Government.

Times, London – July 12, 1927

ಪತ್ರಿಕೆಗಳಲ್ಲಿ ಪ್ರಕಟವಾದ ರೈಸರ ನಿಧನದ ವಾರ್ತೆಗಳು



ಪಿನ್ನರ್ ರಸ್ತೆಯ ಸ್ಮಶಾನದಲ್ಲಿ ರೈಸರ ಸಮಾಧಿಯನ್ನು ಸೂಚಿಸುವ ನಕ್ಷೆ

ವ್ಯಕ್ತಿತ್ವ :

ರೈಸರ ಬರಹ ಹಾಗೂ ಕಾರ್ಯಗಳನ್ನು ಪರಿಶೀಲಿಸುವುದರ ಮೂಲಕ ಮತ್ತು ಸಮಕಾಲೀನರನೇಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಆಧಾರದ ಮೇಲೆ ಅವರ ವ್ಯಕ್ತಿತ್ವವನ್ನು ಅರಿಯಲು ಸಾಧ್ಯ.

ಮೂಲತಃ ರೈಸರು ಧರ್ಮಪ್ರಚಾರಕರ ಕುಟುಂಬದಲ್ಲಿ ಜನಿಸಿದವರು. ಇವರ ತಂದೆ, ತಮ್ಮ (ಮುಂದೆ ಇವರ ಮಗ) ಮುಂತಾದವರು ವೃತ್ತಿಯಿಂದ ಧರ್ಮಪ್ರಚಾರಕರಾಗಿದ್ದವರೇ. ಆದರೆ ಸರ್ಕಾರಿ ಅಧಿಕಾರಿಯಾದ ಲೂಯಿರೈಸ್ ಎಂದೂ ಧರ್ಮ ಪ್ರಚಾರದ ಕಡೆಗೆ ಒಲಿದಂತೆ ತೋರುವುದಿಲ್ಲ. ವ್ಯಕ್ತಿಯಾಗಿ ಅವರೊಬ್ಬ ಕ್ರೈಸ್ತಧರ್ಮೀಯ ನಿಜ.[1] ಆದರೆ ತಮ್ಮ ಧರ್ಮಶ್ರದ್ಧೆಯನ್ನು ಅವರು ಧರ್ಮಪ್ರಚಾರದ ಸಾಧನವಾಗಿ ಬಳಸಿದಂತಹ ನಿದರ್ಶನಗಳಿಲ್ಲ. ಬದಲಿಗೆ ಅವರ ನಿಷ್ಪಕ್ಷಪಾತ ದೃಷ್ಟಿಯನ್ನು ತೋರುವ ಒಂದೆರಡು ಉದಾಹರಣೆಗಳನ್ನು ನೋಡಬಹುದು :

ಮೇಲುಕೋಟೆಯಲ್ಲಿದ್ದ ಸಂಸ್ಕೃತ ಶಾಲೆಯೊಂದು ಸರ್ಕಾರದಿಂದ ಅನುದಾನವನ್ನು ಕೋರಿದಾಗ ಶಾಲೆಯ ಪರಿವೀಕ್ಷಣೆ ನಡೆಸಿದ ರೈಸ್ ಶಾಲೆಯ ಬಗ್ಗೆ ನೀಡಿರುವ ವರದಿಯಲ್ಲಿ

> *".... I have no hesitation in recommending that it should receive a Government grant-in-aid. From the nature of view, it is a very high class school, it has been a long time in successful operation in a place which is one of the chief seats of Brahminical learning in this part of India, celebrated for its literary appreciations and inhabited by a population eminently intellectual and strongly involved with Hindu philosophical notions..."*

ಎಂದು ಶಾಲೆಯ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಾರೆ,[2] ಸರ್ಕಾರದ ಅನುದಾನ ದೊರೆಯುವಂತೆ ಮಾಡಿದ್ದಾರೆ. ಇದೇ ರೀತಿಯಲ್ಲಿ "ವಿದ್ವಾನ್ ರಾಜಗೋಪಾಲಾಚಾರ್ಯರು ಚಿಕ್ಕಬಳ್ಳಾಪುರದಲ್ಲಿ ಸ್ಥಾಪಿಸಿದ ಸಂಸ್ಕೃತ ಮಹಾಪಾಠಶಾಲೆಗೆ ಪ್ರಭುತ್ವ ಮೂಲದ ಗೌರವಾನುಗ್ರಹಗಳನ್ನು ದ್ರವ್ಯ ಸಹಾಯವನ್ನು ಗಳಿಸಿಕೊಟ್ಟವರು ರೈಸರು."[3]

ಅಂತೆಯೇ ಕೈಕೆಳಗಿನ ಅಧಿಕಾರಿ ಯೋಗ್ಯವಾಗಿ ನಡೆದುಕೊಳ್ಳದಿದ್ದಾಗ ಆತ ಸ್ವಧರ್ಮೀಯನಾಗಿದ್ದರೂ ಅದನ್ನು ಲೆಕ್ಕಿಸದೆ ಶಿಕ್ಷಿಸಿದ ಘಟನೆಯೂ ಇದೆ. ಉದಾಹರಣೆಗೆ ಬೆಂಗಳೂರಿನ ದಂಡುಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ರೆವರೆಂಡ್

---

1 "ಒಮ್ಮೆ ರೈಸರು ಕ್ರಿಸ್ಮಸ್ ಪೂಜೆಯಲ್ಲಿ ತೊಡಗಿದ್ದಾಗ ಕೆ.ಬಿ. ಪಾಠಕರು ಅವರ ಮನೆಗೆ ಹೋದರಂತೆ. ಆ ಪೂಜಾ ಮಾಡುವ ಕಾಲಕ್ಕೆ ಸಾಮಾನ್ಯವಾಗಿ ಹೊರಗೆ ಬರದ ರಾಯಿಸರು ಪಾಠಕರು ಬಂದದ್ದನ್ನು ಕೇಳಿ ಸ್ವತಃ ಬಂದು ಅವರನ್ನು ಸ್ವಾಗತಿಸಿದರಂತೆ." - ಅಣ್ಣಿಗೇರಿ, ಎಂ.ಎಂ., **ಕರ್ನಾಟಕ ಇತಿಹಾಸ ಸಂಶೋಧಕರು**, ಪು - ೧೫.

2 K.S.A. Ed. 1 of 1887 ದಿನಾಂಕ ೨೩ ನವೆಂಬರ್ ೧೮೮೭ರಂದು ಗ್ಯಾರೆಟ್‌ರವರು ಸಲ್ಲಿಸಿರುವ ವರದಿಯಲ್ಲಿ ಉದ್ಧೃತ.

3 ಶರ್ಮ, ತಿ.ತಾ., **ನನ್ನ ಜೀವನ ಮತ್ತು ಧ್ಯೇಯ**, ಪು - ೨೧, ೨೦೦೨.

ಪೆಟೆಗ್ರೂರಿಂದ ಆರಂಭವಾದ ಬಿಷಪ್ ಕಾಟನ್ ಶಾಲೆ ಎಲ್ಲ ರೀತಿಯಲ್ಲಿಯೂ ಉತ್ತಮವಾಗಿತ್ತಾದರೂ ಅಲ್ಲಿನ ಮುಖ್ಯೋಪಾಧ್ಯಾಯ ಮಾತ್ರ ಯೋಗ್ಯನಾಗಿರಲಿಲ್ಲ. ಕುದುರೆ ಜೂಜು, ಕುಡಿತಗಳ ಅತಿಯಾದ ಚಟವಿದ್ದ ಈತನ ಬಗ್ಗೆ ೧೮೬೬ರಲ್ಲಿ ದೂರುಗಳ ಬಗ್ಗೆ ವಿಚಾರಣೆ ನಡೆಸಲೆಂದು ಹೋದ ರೈಸರಿಗೆ ಶಾಲೆಯ ವೇಳೆಯಲ್ಲಿಯೇ ಆತ ಮಾದಕದ್ರವ್ಯಗಳನ್ನು ನೀಡಬಂದನಂತೆ! ಹಾಗಾಗಿ ಈತ ಶಾಲಾಶಿಕ್ಷಕನಾಗಲು ಅಯೋಗ್ಯ ಎಂಬ ರೈಸರ ವರದಿಯನ್ನು ಆಧರಿಸಿ ಚೀಫ್ ಎಂಜಿನಿಯರ್ ಕಛೇರಿಗೆ ವರ್ಗಾಯಿಸಲಾಯಿತು.[1]

ಹಾಗೆಂದ ಮಾತ್ರಕ್ಕೆ ಉತ್ತಮ ಉದ್ದೇಶದ ಕ್ರೈಸ್ತಧರ್ಮೀಯ ಶಾಲೆಗಳಿಗೆ ರೈಸ್ ಸಹಾಯ ಮಾಡದೆಯೂ ಸುಮ್ಮನಿರಲಿಲ್ಲ. ಆದರೆ ಈ ಸಹಾಯ ಸರ್ಕಾರಿ ಹಣದ್ದಾಗಿರುತ್ತಿರಲಿಲ್ಲ. ಬದಲಿಗೆ ಸ್ವಂತ ಹಣದ್ದಾಗಿರುತ್ತಿತ್ತು ಎಂಬುದಕ್ಕೆ ಮಿತ್ರಾಲಯ ಹೆಣ್ಣುಮಕ್ಕಳ ಕನ್ನಡ ಶಾಲೆಗೆ ಅವರು ನೀಡಿರುವ ಚಂದಾ ಹಣದ ವಿವರಗಳೇ ಸಾಕ್ಷಿ :

ವರ್ಷ	ರೂ.	ಆಣೆ.	ಪೈ.	ವಿವರ
೧೮೯೬	೨೬	೦	೦	ಸ್ಥಳೀಯ ಚಂದಾ
೧೮೯೭	೨೪	೦	೦	ಸ್ಥಳೀಯ ಚಂದಾ
೧೮೯೭	೫೦	೦	೦	ಹೊಸಶಾಲಾ ಕೊಠಡಿಯ ನಿರ್ಮಾಣಕ್ಕಾಗಿ ಕೊಡುಗೆ
೧೯೦೦	೨೮	೦	೦	ಸ್ಥಳೀಯ ಚಂದಾ[2]

ಮೇಲಿನ ಮೂರೂ ನಿದರ್ಶನಗಳು ರೈಸರ ಧರ್ಮನಿರಪೇಕ್ಷ ಗುಣವನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

ರೈಸರ ವ್ಯಕ್ತಿತ್ವದಲ್ಲಿ ಅತ್ಯಂತ ನಿಚ್ಚಳವಾಗಿ ಕಂಡುಬರುವುದು ಅವರ ಕನ್ನಡಾಭಿಮಾನ. ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗ್ಗೆ ಅವರಿಗಿದ್ದ ಪ್ರೀತಿ ಅವ್ಯಾಜವಾದದ್ದು. ಕನ್ನಡ ನಾಡಿನ ನೆಲ, ಜಲ, ಜನ ಸಂಸ್ಕೃತಿಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭ ಬಂದಾಗಲೆಲ್ಲಾ ಅವರ ಭಾಷೆ ಎಷ್ಟು ಅಲಂಕಾರಿಕವಾಗುತ್ತದೆ ಹಾಗೂ ಮಧುರವಾಗುತ್ತದೆ ಎಂಬುದನ್ನು ಕೆಳಗಿನ ಮಾತುಗಳಲ್ಲಿ ಕಾಣಬಹುದು :

> *".... If there be any truth in the observation that small countries with diversified and distinctive physical characteristics have played the greatest part in the world's history, and given rise to its most distinguished men – Greece, Palestine, England and others being quoted as instances – Mysore, it seems to be, my fairly claim a place in the category. Not only does she abound in the picturesque features of lofty mountains, primeval forests, of noble rivers and mighty cataracts, but – to mention*

1 Biographical Notes, P-17.

2 L.M.S. Reports for the years 1896 (p 12), 1897 (p 5, 8) and 1900.

only a few of the products specially pertaining to her, - she yields by for the most gold of any country in India, and her treasure in the past, carried of to the north by musalman invaders, may have found its way to Central Asia among the spoils of Torture hordes; she is the peculiar home of the sandal and also of Teak, a special haunt of the elephant, rears famous and superior bread of horned cattle, supplies as the stumble food of her people they nutrient grain of ragi, was a cradle in India and still the chief garden of coffee cultivation. Thus in every department of the natural world, she may claim some pre-eminence.

In the fine arts, she has produced marvelous examples of architecture and sculpture. In relation to humanity, again, she has been to the two greatest Hindu reformers a home for the monastery of one, and an asylum to the other. Nearly every form of faith, from Buddhism and Jainism to Islam, has here had its day, and she is now known as having largely adopted and still strongly holding a special cult of native origin not conforming to Brahmanism. The Malnad region of Mysore, has been the birth place of the royal races dominant in the South– the Kadambas, Hoysalas, and perhaps also the Vijayanagara sovereigns. In modern times, the greatest general of the age, the Iron Duke, learned in the Malnad wilds of Mysore, no less than in the plains of the Deccan, those lessons of welfare which enabled him to end the ambitious career of the subjugator of Europe, who once thought to make an ally of Mysore and to conquer the East. Waterloo may in one sense have been won in the plying fields of Eton, but it was Mysore that contributed to develop the genius of the commander who carried the day, described though he had been as the Sepoy general.

One cannot be struck, in going over the modern history of Mysore, with the magnanimity of the British to this country, and equally with the manner in which the country has responded to the good influences exerted upon it. That it may continue to prosper and must be the wish of all..."[1]

1 **Mysore a Gazetteer**, Vol I, P : VI–VII, 1897 (2nd Edition).

ರೈಸರ ಉಜ್ವಲ ಕನ್ನಡಾಭಿಮಾನವನ್ನು ಅಭಿವ್ಯಕ್ತಗೊಳಿಸುವ ಮತ್ತೊಂದು ಘಟನೆ ಯೆಂದರೆ ಅವರಿಗೂ ಮೈಸೂರು ಸರ್ಕಾರದ ಹಿರಿಯ ಅಧಿಕಾರಿಗಳಾಗಿದ್ದ ಎಸ್.ಜಿ. ಶಾಸ್ತ್ರಿಯವರಿಗೂ ಲಂಡನ್ನಿನಲ್ಲಿ ನಡೆಯಿತೆನ್ನಲಾದ ಮಾತುಕತೆ :

೧೯೨೪ರಲ್ಲಿ ಲಂಡನ್ನಿನ ವೆಂಬ್ಲಿಯಲ್ಲಿ ನಡೆದ ಬ್ರಿಟಿಷ್ ಅಧಿಪತ್ಯದ ರಾಷ್ಟ್ರಗಳ ಔದ್ಯಮಿಕ ಪ್ರದರ್ಶನದಲ್ಲಿ ಮೈಸೂರು ಸರ್ಕಾರವೂ ಮಳಿಗೆಯೊಂದನ್ನು ತೆರೆದಿತ್ತು. 'ಮೈಸೂರು ಕೋರ್ಟ್' ಎಂದು ಹೆಸರಾಗಿದ್ದ ಆ ಮಳಿಗೆಯ ಮೇಲ್ವಿಚಾರಕರಾಗಿದ್ದವರು ಸಂಸ್ಥಾನದ ಹಿರಿಯ ಅಧಿಕಾರಿಗಳೂ, ಸ್ವತಃ ಲೇಖಕರೂ ಆಗಿದ್ದ ಎಸ್.ಜಿ. ಶಾಸ್ತ್ರಿಯವರು. ತಮ್ಮ ಅನಾರೋಗ್ಯದ ನಡುವೆಯೂ ಮೈಸೂರು ರಾಜ್ಯದ ಉತ್ಪನ್ನಗಳನ್ನು ನೋಡುವ, ಕನ್ನಡಿಗರೊಂದಿಗೆ ಮಾತನಾಡಿಸುವ ಹಂಬಲದಿಂದ ರೈಸರು ಈ ಮಳಿಗೆಗೆ ಭೇಟಿನೀಡಿ ಶಾಸ್ತ್ರಿಯವರನ್ನು ಪರಿಚಯಿಸಿಕೊಂಡರಂತೆ. ರೈಸ್ ಮತ್ತು ಶಾಸ್ತ್ರಿಯವರ ಭೇಟಿಯನ್ನು ತಿ.ತಾ. ಶರ್ಮರು ವಿವರಿಸಿರುವ ಬಗೆ ಇದು :

> *"... ಲೂಯಿ ರೈಸರು ಪ್ರದರ್ಶನಕ್ಕೆ ಬಂದಿದ್ದಾರೆಂದೂ, ಮೈಸೂರು ವಿಭಾಗಕ್ಕೆ ಭೇಟಿಕೊಡುವುದೇ ಅವರ ಆಸೆಯೆಂದೂ ಕೇಳಿ ಹಣ್ಣುಹಣ್ಣು ಮುದುಕರಾದ ರೈಸರನ್ನೊಂದು ಕೈಗಾಡಿಯಲ್ಲಿ ಕೂಡಿಸಿ ಕರೆತಂದು ಅವರನ್ನು ಮರ್ಯಾದೆಯಿಂದ ಕರೆದೊಯ್ದು ಮೈಸೂರು ವಿಭಾಗದ ದ್ವಾರದಲ್ಲಿ ಅವರಿಗೆ ಸ್ವಾಗತೋಪಚಾರ ಮಾಡಿದೆ; ಇಂಗ್ಲೀಷಿನಲ್ಲಿ ಮಾತನಾಡಿದೆ : ಆಗ ರೈಸರು 'ನೀವು ಮೈಸೂರಿನವರಲ್ಲವೆ? ಕನ್ನಡ ಬರಬೇಕಲ್ಲ? ಆ ಕನ್ನಡದಲ್ಲೇ ಮಾತನಾಡಿ; ಮಧುರವಾದ ಕನ್ನಡ; ಅಮೃತೋಪಮವಾದ ಆ ಕನ್ನಡದ ಸೊಲ್ಲನ್ನು ಕಿವಿಯಾರ ಕೇಳಿ ತಣಿಸಿ ನನ್ನ ಕಡೆಯ ದಿನಗಳನ್ನು ಕಳೆಯುವೆನು. ಕನ್ನಡ ಭಾಷೆಯಲ್ಲೇ ಮಾತನಾಡಿ' ಅಂದರು. ಮತ್ತೆ ನಾನು ಕನ್ನಡದಲ್ಲೇ ಮಾತನಾಡಿ, ಅವರಿಗೆ ಶ್ರೀಮನ್ಮಹಾರಾಜರ ಸರಕಾರದ ಪರವಾಗಿ ಸ್ವಾಗತವಿತ್ತೆ. ಅವರು ಮೈಸೂರು ವಿಭಾಗವನ್ನು ನೋಡುತ್ತ 'ಮೈಸೂರು ದೇಶದಲ್ಲಿ ವಿದ್ಯಾಭ್ಯಾಸ ಹರಡುತ್ತಿದೆಯೋ' ಎಂದು ಕೇಳಿದರು. 'ಆರ್ಕಿಯ ಲಾಜಿಕಲ್ ಶಾಖೆ ಹೇಗೆ ಕೆಲಸ ನಡೆಯುತ್ತಿದೆ' ಎಂದು ಕೇಳಿದರು. ಅವರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಕುರಿತು ತೋರಿದ ಉತ್ಸಾಹ ಕಂಡು ನಾನು ಬೆರಗಾಗಿ ಹೋದೆ! 'ಒಮ್ಮೊಮ್ಮೆ ನಾನು ಮೈಸೂರಿನ ಕನಸು ಕಾಣು ತ್ತೇನೆ' ಎಂದು ಪಕಪಕನೆ ನಕ್ಕಾಗ ನಾನು ಕರಗಿ ನೀರಾಗಿ ಹೋದೆ."* [1]

---

1 ಶರ್ಮ, ತಿ.ತಾ., *'ಕನ್ನಡ ನಾಡಿನ ಸಂಶೋಧಕರು'*, **ಪ್ರಜಾಮತ**, ೧೯೬೩, ಪು. ೫೦-೫೧.

ರೈಸರ ಜೀವನವನ್ನು ಚಿತ್ರಿಸಿರುವ ಬಹುಪಾಲು ಎಲ್ಲ ಲೇಖಕರೂ ಶಾಸ್ತ್ರಿ ಮತ್ತು ರೈಸರ ನಡುವಣ ಈ ಸಂಭಾಷಣೆಯನ್ನು ಕುರಿತು ಪ್ರಸ್ತಾಪಿಸಿರುವರಾದರೂ ಯಾರೊಬ್ಬರೂ ಇದರ ಮೂಲವನ್ನು ಉಲ್ಲೇಖಿಸಿಲ್ಲ. ತಿ.ತಾ. ಶರ್ಮರು ಮಾತ್ರ "ಆ ಹೃದಯಸ್ಪರ್ಶಿ ಸನ್ನಿವೇಶ ಕುರಿತು ಶಾಸ್ತ್ರಿಗಳು ಪತ್ರ ಬರೆದಿದ್ದರು. ಅಲ್ಲಿಂದ ಹಿಂದಿರುಗಿದ ಮೇಲೆ ಅವರೇ ವರ್ಣಿಸಿದ್ದರು"[1] ಎಂದು ಹೇಳಿ ನಂತರ ಮೇಲೆ ನಮೂದಿಸಿದ ಭಾಗವನ್ನು ಯಥಾವತ್ ನಿರೂಪಣೆ ಎಂಬಂತೆ ದಾಖಲಿಸಿದ್ದಾರೆ. ಆದರೆ ಶಾಸ್ತ್ರಿಗಳು ಪತ್ರ ಬರೆದದ್ದು ಯಾರಿಗೆ ಎಂಬ ಅಂಶ ಇಲ್ಲಿ ಸ್ಪಷ್ಟವಿಲ್ಲ. ಶಾಸ್ತ್ರಿಗಳ ಕುಟುಂಬವರ್ಗದವರು ಅವರ ಅನೇಕ ಕಾಗದ ಪತ್ರಗಳನ್ನು ಸಂರಕ್ಷಿಸಿದ್ದರಾದರೂ ಅದರಲ್ಲಿಯೂ ಈ ಅಂಶ ಉಕ್ತವಾಗಿಲ್ಲ.

ಆದರೆ ಈ ಸಂಭಾಷಣೆ ನಡೆದಿರುವುದು ಖಚಿತ ಎಂಬುದಕ್ಕೆ ಪರೋಕ್ಷವಾದ ಆಕರವೊಂದು ಲಭ್ಯವಿದೆ. ಅದೆಂದರೆ ೧೯೪೬ರಲ್ಲಿ ಎಸ್.ಜಿ. ಶಾಸ್ತ್ರಿಯವರು ರಚಿಸಿರುವ 'ಇದ್ದರೂ ಇರಬಹುದು' ಎಂಬ ಕಥಾಸಂಕಲನದಲ್ಲಿನ[2] 'ಹಂಸಪದಕ ಒಂದು ಪೊಳ್ಳುಕಥೆ' ಎಂಬ ಕತೆ. ಇದರಲ್ಲಿ ಕೃಷ್ಣಗಿರಿ ಸಂಸ್ಥಾನದ ಪ್ರಧಾನನಾದ ಆನಂದರಾಯ ತನ್ನ ಮೊಮ್ಮಗ ಕೃಷ್ಣರಾಯನನ್ನು ಕೇಂಬ್ರಿಡ್ಜ್‌ನ ಶಾಲೆಗೆ ಸೇರಿಸಲು ಕರೆದುಕೊಂಡು ಹೋಗಿರುತ್ತಾನೆ. ಆತ ಕಾರಣಾಂತರದಿಂದ ಲಂಡನ್‌ಗೆ ಬಂದಾಗ ಅಲ್ಲಿ ಕೃಷ್ಣಗಿರಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದು ಹೆಚ್ಚಿನ ವ್ಯಾಸಂಗಕ್ಕಾಗಿ ಲಂಡನ್‌ಗೆ ಬಂದಿದ್ದ ಹಿರಣ್ಯಪ್ಪನ ಭೇಟಿ ಯಾಗುತ್ತದೆ. ಆತ ಆನಂದರಾಯನನ್ನು ಕಂಡೊಡನೆಯೇ

"ರಾಯರಿಗೆ ನಮಸ್ಕಾರ" ಎಂದ.

ಆನಂದರಾಯ : *"ನಮಸ್ಕಾರ, ಆಹಾ! ಕನ್ನಡಭಾಷೆ ಎಷ್ಟು ಇಂಪಾಗಿದೆ! ಕನ್ನಡ ಮಾತನಾಡುವವರು ಯಾರಾದ್ದರೂ ಸಿಕ್ಕಿದರೆ ಸಾಕು ಎನ್ನುತ್ತಿದ್ದೆ! ನೀವು ಬಂದುದು ಬಹಳ ಸಂತೋಷ. ಇಂಗ್ಲೀಷಿನಲ್ಲಿ ಮಾತುಬೇಡ. ಕನ್ನಡದಲ್ಲಿ ಮಾತನ್ನಾಡೋಣ..."* ಎನ್ನುತ್ತಾನೆ.[3]

ಈ ಪ್ರಸಂಗ ರೈಸ್ - ಶಾಸ್ತ್ರಿಗಳ ಸಂಭಾಷಣೆಯನ್ನೇ ಹೋಲುತ್ತದೆ ಎಂಬುದು ಸ್ಪಷ್ಟವಾಗಿದೆ. ಅಲ್ಲದೆ ಕೃತಿಯ ಮುನ್ನುಡಿಯಲ್ಲಿನ *"....ಇಲ್ಲಿನ ಕತೆಗಳಲ್ಲಿ ನಿರೂಪಿತ ವಾಗಿರುವ ಸಂಗತಿಗಳೆಲ್ಲವೂ ನನಗೆ ತಿಳಿದ ಪ್ರಸಂಗಗಳು. ನಿಜವಾಗಿ ನಡೆದ ಸಮಾಜದ ವ್ಯಾಪಾರಗಳು. ಈ ವ್ಯಾಪಾರಗಳನ್ನು ಕಥಾಸಂವಿಧಾನಕ್ಕೆ ಅನುಕೂಲವಾಗುವಂತೆ ಜೋಡಿಸಿದ"* ಎಂಬ ಮಾತುಗಳಿಂದ ಮೇಲಿನ ಪ್ರಸಂಗಕ್ಕೆ ರೈಸರೊಂದಿಗೆ ಅವರು ನಡೆಸಿರುವ ಸಂಭಾಷಣೆಯೇ ಸ್ಫೂರ್ತಿ ಎಂಬುದು ಖಚಿತವಾಗುತ್ತದೆ.

---

1 ಅಲ್ಲೇ.,

2 ಪ್ರಕಾಶಕರು ಕನ್ನಡ ಕಾವ್ಯಮಾಲೆ, ಕಾವ್ಯಾಲಯ, ಮೈಸೂರು ವರ್ಷ : ?

3 ಅಲ್ಲೇ., ಪು. ೪೬-೪೭

ಮಿತ್ರವರ್ಗ :

ಲೂಯಿರೈಸರ ಮಿತ್ರವರ್ಗ ದೊಡ್ಡದು. ವಯಸ್ಸಿನಲ್ಲಿ ತಮಗಿಂತ ಹಿರಿಯರಾದ ಫರ್ಡಿನಾಂಡ್ ಕಿಟೆಲ್‌ರಿಂದ ಹಿಡಿದು ತಮಗಿಂತ ಸುಮಾರು ಐವತ್ತು ವರ್ಷ ಕಿರಿಯರಾಗಿದ್ದ ಎಸ್.ಜಿ. ಶಾಸ್ತ್ರಿಯವರವರೆಗೆ ಅವರ ಸ್ನೇಹ-ವಿಶ್ವಾಸ ವ್ಯಾಪಿಸಿತ್ತು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಒಲವಿದ್ದ, ಆ ಕ್ಷೇತ್ರಗಳಲ್ಲಿ ಕೆಲಸಮಾಡಲು ಆಸಕ್ತರಾಗಿದ್ದ ಆ ಕಾಲದ ಎಲ್ಲ ಗಣ್ಯರೊಂದಿಗೆ ರೈಸರ ಸ್ನೇಹ ಸಂಪರ್ಕವಿದ್ದದ್ದು ಕಂಡು ಬರುತ್ತದೆ. ಅಂತಹವರಲ್ಲಿ ಕೆಲವರ ಬಗೆಗಿನ ವಿವರಗಳನ್ನು ಗಮನಿಸಬಹುದು :

ಫರ್ಡಿನಾಂಡ್ ಕಿಟೆಲ್

ಪ್ರಸಿದ್ಧ ಪಾಶ್ಚಾತ್ಯ ಕನ್ನಡ ವಿದ್ವಾಂಸ, ನಿಘಂಟುಕಾರರಾದ ಕಿಟೆಲ್ ರೈಸರಿಗಿಂತ ಸ್ವಲ್ಪ ಹಿರಿಯರು (ಜನನ ೧೮೩೨). ಅವರಿಗೆ ಅಪಾರ ಕೀರ್ತಿ ಹಾಗೂ ಮನ್ನಣೆಗಳನ್ನು ತಂದುಕೊಟ್ಟದ್ದು ಕನ್ನಡ-ಇಂಗ್ಲೀಷ್ ಶಬ್ದಕೋಶ. ಇದರ ರಚನೆಗೆ ಲೂಯಿರೈಸರು ನೀಡಿದ ಬೆಂಬಲ ಮತ್ತು ಪ್ರೋತ್ಸಾಹಗಳು ಗಣನೀಯವಾಗಿದ್ದು. ಕರ್ನಾಟಕ ರಾಜ್ಯ ಪತ್ರಾಗಾರದ ದಾಖಲೆಗಳಲ್ಲಿರುವ ಇದರ ವಿವರಗಳನ್ನು ಹೀಗೆ ಕ್ರೋಢೀಕರಿಸಬಹುದು :

ಕ್ರಿ.ಶ. ೧೮೩೨ರ ವೇಳೆಗೆ ಪ್ರಕಟವಾಗಿದ್ದ ರೀವ್‌ನ ಕನ್ನಡ-ಇಂಗ್ಲೀಷ್ ಶಬ್ದಕೋಶವೇ ಕಿಟೆಲ್ ಕೋಶಕ್ಕೂ ಮೊದಲಲ್ಲಿ ಬಳಕೆಯಲ್ಲಿದ್ದ ಏಕೈಕ ಕನ್ನಡ ನಿಘಂಟು. ಇದರ ಉಪಯುಕ್ತತೆಯನ್ನು ಮನಗಂಡ ಗ್ಯಾರೆಟ್ ಇದನ್ನು ೧೮೪೫ರಲ್ಲಿ ಪರಿಷ್ಕರಿಸಿದರು. ಮುಂದೆ ಸ್ಯಾಂಡರ್ಸನ್‌ನು ಈ ಕೃತಿಯಲ್ಲಿನ ಬಹುತೇಕ ಎಲ್ಲ ಶಬ್ದಗಳನ್ನು ಉಳಿಸಿಕೊಂಡು ತಿದ್ದಿ ಬೆಳೆಸಿದ ಆವೃತ್ತಿಯನ್ನು ೧೮೫೮ರಲ್ಲಿ ಪ್ರಕಟಿಸಿದನು. ಕಮೀಷನರ್ ಕಬ್ಬನ್ ಇದರ ೫೦೦ ಪ್ರತಿಗಳನ್ನು, ಮುಂಬೈ ಸರ್ಕಾರದವರು ೧೦೦ ಪ್ರತಿಗಳನ್ನೂ ಕೊಂಡುಕೊಂಡಿದ್ದರಾದರೂ ೧೮೭೫ರ ವೇಳೆಗೆ ಪ್ರತಿಗಳು ದುರ್ಲಭವಾಗಿದ್ದರಿಂದ ಅದರ ಪರಿಷ್ಕೃತ ಆವೃತ್ತಿ ಹೊರಬರಬೇಕಿತ್ತು. ವಿದ್ಯಾಭ್ಯಾಸದ ಇಲಾಖೆಯ ಆಗಿನ ನಿರ್ದೇಶಕರಾಗಿದ್ದ ರೈಸರ ಒತ್ತಾಯದ ಮೇರೆಗೆ ಚೀಫ್ ಕಮೀಷನರ್‌ರು ಸ್ಯಾಂಡರ್‌ಸನ್ನನಿಗೆ ಪತ್ರಬರೆದು[1] 'ಕೋಶವನ್ನು ಪರಿಷ್ಕರಿಸಿಕೊಡಲು ಸಾಧ್ಯವೇ' ಎಂದು ಪ್ರಶ್ನಿಸಿದ್ದರು.

ಮೊದಲಿಗೆ ಸ್ಯಾಂಡರ್ಸನ್ ಈ ಯೋಜನೆಯನ್ನು ಒಪ್ಪಿ ಕಾರ್ಯಪ್ರವೃತ್ತನಾಗುವಂತೆ ಕಂಡರೂ ಸೆಪ್ಟೆಂಬರ್ ೭ರಂದು ಆತನಿಂದ ಬಂದ ಕಾಗದದಲ್ಲಿ ಕೆಲಸದಲ್ಲಿ ಯಾವುದೇ ಪ್ರಗತಿ ಆಗಿಲ್ಲವೆಂಬುದನ್ನು ಉಲ್ಲೇಖಿಸಲಾಗಿದೆ.[2] ಕಡೆಗೆ ೧೮೭೬ರ ಫೆಬ್ರವರಿಯಲ್ಲಿ ಈ ಕಾರ್ಯವನ್ನು ಮಂಗಳೂರಿನ ಬಾಸೆಲ್ ಮಿಷನ್ನಿಗೆ ಒಪ್ಪಿಸಲು ನಿರ್ಧರಿಸಲಾಯಿತು. ಬಾಸೆಲ್

1 K.S.A. No. 3153, G 685 of 14th July 1875.

2 K.S.A. G 1892, 1878–79ರಲ್ಲಿನ ಉಲ್ಲೇಖ.

ಮಿಷನ್ನಿನವರು ನಿಘಂಟಿನ ಕರಡಚ್ಚನ್ನು ಬೆಂಗಳೂರಿಗೆ ಕಳುಹಿಸಲು ಚಿಂತಿಸುತ್ತಿದ್ದರು. ಆದರೆ ರೈಸ್ ಅದಕ್ಕೆ ಒಪ್ಪದೆ ಮಂಗಳೂರಿನಲ್ಲಿಯೇ ಕರಡು ತಿದ್ದುವಿಕೆ ಹಾಗೂ ಪರಿಷ್ಕರಣದ ಕಾರ್ಯವನ್ನು ಮಾಡಲು ಸೂಚಿಸಿದರು. ಈ ಕೆಲಸವನ್ನು ಕೈಗೊಳ್ಳಲೆಂದು ಬಾಸೆಲ್ ಮಿಷನ್ ತನ್ನ ಮಿಷನರಿಗಳಲ್ಲಿ ಒಬ್ಬರಾದ ಕಿಟೆಲ್‌ರನ್ನು ಕೋರಿತು. ಆಗ ಕಿಟೆಲ್ ಸ್ಯಾಂಡರ್ಸನ್ನನ ಕೋಶವನ್ನು ಪರಿಷ್ಕರಿಸುವುದರ ಬದಲಿಗೆ ತಾನೇ ಸ್ವತಂತ್ರವಾದ ನಿಘಂಟನ್ನು ರಚಿಸುವೆನೆಂಬ ಆಶಯವನ್ನು ವ್ಯಕ್ತಪಡಿಸಿದರು. ಹಾಗಾಗಿ ಬಾಸೆಲ್ ಮಿಷನ್ ೧೮೭೬ರ ಏಪ್ರಿಲ್ ೨೫ರಂದು ರೈಸರಿಗೆ ಬರೆದ ಪತ್ರದಲ್ಲಿ ಹೊಸ ನಿಘಂಟಿನ ಪ್ರಸ್ತಾವನೆ ಯನ್ನು ಈ ರೀತಿ ನೀಡಿತು. ಈ ಪತ್ರದಲ್ಲಿ

> *"....Soon after Mr. Sanderson's Dictionary has been published, some of our missionaries regretted that it had remained so much behind what they thought. It ought, and could have been, after such a work from Reev's had been 30 years in existence. It was therefore resolved to compile in our mission a Canarese Dictionary solely founded on original research. Mr. Kittel has for many years been occupied with this task and on our question whether we were perhaps prepared to edit a new edition of Mr. Sanderson's Dictionary, he replied he feeled completed to decline accepting the work starting that if he were to edit Mr. Sanderson's dictionary he would have tio alter it. So entirely, that it could be no longer Mr. Sanderson's work. Besides feeling that his Indian career is drawing to an end, he believes he must devote his whole time and strength in finishing this work, which he hoped will be possible in about 5 years and more...."* ಎಂಬ ಮಾತುಗಳಿವೆ.[1]

ಇದೇ ಸಮಯದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಕಾರ್ಯದರ್ಶಿಯು ಮೈಸೂರಿನ ಚೀಫ್ ಕಮೀಷನ್‌ರಿಗೆ ಪತ್ರ ಒಂದನ್ನು ಬರೆದು 'ಮೈಸೂರು ದೇಶದಲ್ಲಿಯೇ ಬೇರೆಲ್ಲ ಕಡೆಗಳಿಗಿಂತ ಅತ್ಯಂತ ಹೆಚ್ಚು ಕನ್ನಡ ಮಾತನಾಡುವ ಜನರಿರುವುದರಿಂದ ಕಿಟೆಲ್ ರಚಿಸಲಿರುವ ಹೊಸ ಕನ್ನಡ-ಇಂಗ್ಲೀಷ್ ಕೋಶದ ಅವಶ್ಯಕತೆ ಇದೆಯೇ? ಇದ್ದಲ್ಲಿ ಮೈಸೂರು ಸರ್ಕಾರ ಎಷ್ಟು ಪ್ರತಿಗಳನ್ನು ಕೊಳ್ಳಬಯಸುತ್ತದೆ?' ಎಂಬೆಲ್ಲ ಪ್ರಶ್ನೆಗಳಿಗೆ ವಿವರಣೆಯನ್ನು

1 K.S.A. G.M 31 of 1875, Sl.No. 8

ಕೋರಿದ್ದರು. ಈ ಪತ್ರಕ್ಕೆ ಲೂಯಿರೈಸರು ಚೀಫ್ ಕಮೀಷನರ್‌ರವರಿಗೆ ನೀಡಿರುವ ವರದಿ ಅವರ ಉತ್ಕಟ ಕನ್ನಡಾಭಿಮಾನಕ್ಕೆ ಸಾಕ್ಷಿಯಾಗಿದ್ದು ಇಡಿಯ ಪತ್ರ ವಾಚನಯೋಗ್ಯವಾಗಿದೆ. ಈ ಪತ್ರದಲ್ಲಿ ರೈಸರು ಆವರೆಗೆ ಕನ್ನಡದಲ್ಲಿ ಬಂದಿದ್ದ ನಿಘಂಟುಗಳು, ಅವುಗಳ ಸತ್ವ ಕಿಟೆಲ್‌ರು ಹೊಸ ನಿಘಂಟನ್ನು ರಚಿಸಬೇಕಾಗಿರುವ ಅವಶ್ಯಕತೆ ಇತ್ಯಾದಿಗಳನ್ನು ಎಳೆಎಳೆ ಯಾಗಿ ಬಿಡಿಸಿ ತೋರಿಸಿದ್ದಾರೆ. ಕಿಟೆಲ್‌ಕೋಶವು ಗುಂಡರ್ಟನ ಮಲೆಯಾಳಂ-ಇಂಗ್ಲೀಷ್ ಕೋಶದಷ್ಟೇ ಪ್ರೌಢವಾಗಿರುವುದೆಂಬ ಭರವಸೆಯನ್ನು ಅವರು ಸರ್ಕಾರಕ್ಕೆ ಇತ್ತಿದ್ದಾರೆ.

ರಾಜಗೋಪಾಲಾಚಾರ್ಯರು :

ರೈಸರ ಆಪ್ತವರ್ಗಕ್ಕೆ ಸೇರಿದ ದೇಶೀಯ ವಿದ್ವಾಂಸರಲ್ಲಿ ಚಿಕ್ಕಬಳ್ಳಾಪುರದ ರಾಜಾ ಗೋಪಾಲಾಚಾರ್ಯರು ಪ್ರಮುಖರು. ರೈಸ್ ಮತ್ತು ರಾಜಾಗೋಪಾಲಾಚಾರ್ಯರ ನಡುವಣ ಸ್ನೇಹದ ವರ್ಣನೆಯನ್ನು ರಾಜಗೋಪಾಲಾಚಾರ್ಯರ ಮೊಮ್ಮಕ್ಕಳಲ್ಲಿ ಒಬ್ಬರಾದ ತಿ.ತಾ. ಶರ್ಮರು ಹೀಗೆ ಮಾಡಿದ್ದಾರೆ :

> *"...ವಿದ್ವಾನ್ ರಾಜಗೋಪಾಲಾಚಾರ್ಯರು ಚಿಕ್ಕಬಳ್ಳಾಪುರದಲ್ಲಿ ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿದವರು; ನೂರಾರು ಮಂದಿಗೆ ವಿದ್ಯಾದಾನ ಮಾಡಿ ಕೀರ್ತಿ ಗಳಿಸಿದವರು. ಇವರು ಮೈಸೂರು ಸಂಸ್ಥಾನದ ಶಿಕ್ಷಣ ಶಾಖೆಯ ಮತ್ತು ಪ್ರಾಚೀನ ವಾಸ್ತು ಶಿಲ್ಪ ಮತ್ತು ಪ್ರಾಚೀನ ಲಿಪ್ಯನ್ವೇಷಣ ಶಾಖಾಧಿಕಾರಿಗಳಾಗಿಯೂ ಇದ್ದ. ಬಿ. ಲೂಯಿ ರೈಸರವರಿಗಂತೂ ಪರಮಾಪ್ತರು.*
>
> *ಡಾ॥ ಹುಲ್ಷ್ ಎಂಬ ಮತ್ತೊಬ್ಬ ವಿದ್ವಾಂಸ-ಸಂಶೋಧಕರು ಇಂಡಿಯಾ ಸರಕಾರದ ಪ್ರಾಚೀನ ಶಾಸನ ಶಾಖಾಧಿಕಾರಿಗಳಾಗಿದ್ದರು. ಇವರನ್ನು ರೈಸರು ರಾಜಗೋಪಾಲಾಚಾರ್ಯರಿಗೆ ಪರಿಚಯ ಮಾಡಿಕೊಟ್ಟರು. ಇವರಿಬ್ಬರು ರಾಜ ಗೋಪಾಲಾಚಾರ್ಯರಲ್ಲಿ ವಿಶೇಷ ಆದರ, ಗೌರವಗಳನ್ನಿಟ್ಟಿದ್ದರು. ರೈಸ್-ಹುಲ್ಷ್-ರಾಜಗೋಪಾಲಾಚಾರ್ಯ ಮೂವರೂ ನಂದಿಬೆಟ್ಟದ ಮೇಲೆ ಸೇರಿದರೆಂದರೆ ಅದೊಂದು ಕಲ್ಪನಾತೀತವಾದ ಜೀವನಾನುಭವ. ಒಬ್ಬ ಆಂಗ್ಲ, ಒಬ್ಬ ಜರ್ಮನ್, ಒಬ್ಬ ಭಾರತೀಯ ಈ ತ್ರಿಮೂರ್ತಿಗಳು ಪ್ರಾಕೃತ, ಸಂಸ್ಕೃತ ಇತಿಹಾಸ, ಧರ್ಮ, ದರ್ಶನ, ಕಾವ್ಯಾಲಾಪ, ಇತ್ಯಾದಿಗಳಲ್ಲಿ ಆಸಕ್ತರು. ಶಿಲಾ ಶಾಸನಗಳನ್ನು ತಾಮ್ರಶಾಸನಗಳನ್ನು ಓದುವಾಗ ಕ್ಷಣ ಕ್ಷಣಕ್ಕೂ ತೊಡಕುಗಳು; ಹೆಜ್ಜೆಹೆಜ್ಜೆಗೂ ತಲೆಕೆಡಿಸುವಂತಹ ಸಮಸ್ಯೆಗಳು. ಈ ತೊಡಕುಗಳಿಂದ ಪಾರಾಗಲು, ಈ ಸಮಸ್ಯೆಗಳಿಗೆ ಪರಿಹಾರ ಹುಡುಕಲು ರೈಸರು ರಾಜಗೋಪಾಲಾಚಾರ್ಯರ ಸಹಾಯವನ್ನು ಪಡೆಯುತ್ತಿದ್ದರು.*

ರೈಸರೊಮ್ಮೆ ಸತೀದ್ವಿತೀಯರಾಗಿ ಮಕ್ಕಳು ಮರಿಗಳೊಂದಿಗೆ ನಂದಿ ಬೆಟ್ಟಕ್ಕೆ ಬಂದು ಬಿಡಾರ ಮಾಡಿದರು. ಎಂದಿನಂತೆ ಮೊದಲೇ ಈ ಸಮಾಚಾರ ರಾಜಗೋಪಾಲಾಚಾರ್ಯರಿಗೆ ತಿಳಿಯಲೇ ಬೇಕು. ಆಚಾರ್ಯರು ಮನೆಯಲ್ಲಿ ಅತಿರಸವನ್ನು ಮಾಡಿಸಿ ಎರಡು ಬುಟ್ಟಿಗಳ ತುಂಬ ಅವುಗಳನ್ನಿಟ್ಟುಕೊಂಡು, ಬೆಟ್ಟ ಹತ್ತಿದರು. ರೈಸರು ಬಾಗಿಲಿಗೆ ಬಂದು ಎರಡು ಕೈಗಳನ್ನೂ ನೀಡಿ, ಸ್ವಾಗತ ಬಯಸುತ್ತಾ ಬುಟ್ಟಿಗಳನ್ನು ತೋರಿಸಿ ಏನಿದು? ಅಂದರು. ಅತಿರಸ ಅಂದರು ಆಚಾರ್ಯರು. ಎಲ್ಲರೂ ಕೂತರು. ಆಚಾರ್ಯರು ಬುಟ್ಟಿಯಿಂದ ಒಂದನ್ನು ತೆಗೆದು ತೋರಿಸುತ್ತ, ಘೃತಪಕ್ವ ಅಂದರು! ಒಂದು ಚೂರು ಬಾಯಿಗೆ ಹಾಕಿಕೊಂಡು ನೋಡಿ ಅನ್ನುತ್ತಾ ರೈಸರಿಗೂ ಅವರ ಪತ್ನಿಯವರಿಗೂ ಒಂದೊಂದನ್ನಿತ್ತಿ ಕೊಟ್ಟರು. ಶ್ರೀಮತಿಯವರದನ್ನೆತ್ತಿ ಅತ್ತ ಇತ್ತ ತಿರುಗಿಸಿ ನೋಡುತ್ತಿದ್ದಾರೆ. ರೈಸರಾದರೋ ಎಲ್ಲ ಸಂಕೋಚ, ಸಮಾಚಾರಗಳನ್ನೂ ಬಿಟ್ಟು ಅತಿರಸವನ್ನು ಮುರಿದೊಂದು ಚೂರನ್ನು ಬಾಯಿಗೆ ಹಾಕಿಕೊಂಡರು. ಮೆಲ್ಲುತ್ತಾ ಹೆಂಡತಿಯ ಕಡೆ ನೋಡಿದರು. ಅವರೂ ಒಂದು ಚೂರನ್ನು ಬಾಯಿಗೆ ಹಾಕಿಕೊಂಡರು. ತಂದೆ ತಾಯಿಗಳು ರುಚಿ ನೋಡಿದ ಮೇಲೆ ಮಕ್ಕಳು ಸುಮ್ಮನಿರುವರೇನು! ಆಯಿತಲ್ಲಿ ಅತಿರಸಗಳ ವಿನಿಯೋಗ! ರೈಸ್ ದಂಪತಿಗಳಂದಿನಿಂದ ಒಂದು ಹೊಸ ಸಂಪ್ರದಾಯವನ್ನು ಆರಂಭಿಸಿದರು. ಅವರು ಯಾವಾಗ ನಂದಿಗೆ ಬಂದರೂ ಅತಿರಸದ ಬುಟ್ಟಿಗಳು ಸಿದ್ಧವಾಗಿರಬೇಕು...'' [1]

ರಾಜಗೋಪಾಲಾಚಾರ್ಯರು ೧೮೯೮ರಲ್ಲಿ ಕ್ಯಾನ್ಸರ್ ರೋಗದಿಂದ ನಿಧನರಾದಾಗ "ಲೂಯಿರೈಸರಂತೂ ಆಸ್ಪತ್ರೆಗೋಡಿ ಬಂದು ತಮ್ಮ ಆಪ್ತಮಿತ್ರ ರಾಜಗೋಪಾಲಾಚಾರ್ಯರ ಮುಖದರ್ಶನ ಮಾಡಿ ಅವರನುಭವಿಸಿದ ದುಃಖ ಊಹಿಸಲಾರದೆಂದೂ ಅನಂತರ ರಾಜಗೋಪಾಲಾಚಾರ್ಯರ ಮಕ್ಕಳಾದ ವೆಂಕಟಾಚಾರ್ಯರಿಗೆ ದೀರ್ಘವಾದ ಪತ್ರವೊಂದನ್ನು ಬರೆದರೆಂದೂ'' ಶರ್ಮರು ದಾಖಲಿಸಿದ್ದಾರೆ. ರಾಜ ಗೋಪಾಲಾಚಾರ್ಯರಂತೆ ಚಿಕ್ಕಬಳ್ಳಾಪುರದವರೇ ಆದ ನರಹರಿಶಾಸ್ತ್ರಿಗಳೆಂಬುವರೂ ರೈಸರ ಆಪ್ತಮಿತ್ರರಾಗಿದ್ದರೆಂದೂ ಶರ್ಮರು ಹೇಳಿದ್ದಾರಾದರೂ ಇವರ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಬ್ರಹ್ಮಸೂರಿಶಾಸ್ತ್ರಿ :

ರಾಜಗೋಪಾಲಾಚಾರ್ಯರಂತೆಯೇ ಶಾಸನಾಧ್ಯಯನ ಹಾಗೂ ಗ್ರಂಥ ಸಂಪಾದನ ಕಾರ್ಯಗಳಲ್ಲಿ ರೈಸರಿಗೆ ಸಹಾಯ - ಸಹಕಾರಗಳನ್ನಿತ್ತ ಮತ್ತೊಬ್ಬ ದೇಶೀಯ

1 ಶರ್ಮ, ತಿ.ತಾ., 'ನನ್ನ ಜೀವನ ಮತ್ತು ಧ್ಯೇಯ', ಪು. ೨೧-೨೨, ೨೦೦೨.

ವಿದ್ವಾಂಸರೆಂದರೆ ಶ್ರವಣಬೆಳಗೊಳದ ಬ್ರಹ್ಮಸೂರಿಶಾಸ್ತ್ರಿ. ೧೮೯೮ರಲ್ಲಿ ಇವರು ನಿಧನರಾದಾಗ ರೈಸ್ ತಮ್ಮ ಇಲಾಖೆಯ ವಾರ್ಷಿಕ ವರದಿಯಲ್ಲಿ ಶಾಸ್ತ್ರಿಗಳನ್ನು ಹೀಗೆ ಕೊಂಡಾಡಿದ್ದಾರೆ :

> *"Here I would place on record my sense of the great loss that Kannada literature has sustained in the death of the lamented Brahmasoorisastri of Sravanabelagola. He was certainly the most learned Jaina in South India and proved of great assistance in the acquisition of old manuscripts. I was instrumental in making him known to orientalists of Europe who corresponded with him on Jaina topics."*[1]

ರೊನಾಲ್ಡ್‌ರಾಸ್ :

ಮಲೇರಿಯಾ ರೋಗವನ್ನು ಕುರಿತಾದ ವಿಶೇಷ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿಯನ್ನು ಪಡೆದ ವಿಜ್ಞಾನಿಯಾದ ರೊನಾಲ್ಡ್‌ರಾಸ್ ರೈಸರ ಆಪ್ತ ಸ್ನೇಹಿತರಲ್ಲಿ ಒಬ್ಬ. ತನ್ನ ವೃತ್ತಿಜೀವನದ ಕೆಲವು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಕಳೆದಿದ್ದ ಆತ ರೈಸರ ಮನೆಯ ಸಮೀಪದಲ್ಲೇ ವಾಸಿಸುತ್ತಿದ್ದರು. ತನ್ನ Memoirs ಕೃತಿಯಲ್ಲಿ ಬೆಂಗಳೂರನ್ನು ನೆನಪಿಸಿಕೊಳ್ಳುವಾಗ ಆತ '....Among our many friends, were Surgeon Major and Mrs. Dobson .... Mr. and Mrs. Rice of the Archaeological Dept. formed a very pleasant and cheerful society of the Highground..." ಎಂದು ತಪ್ಪದೆ ರೈಸರನ್ನು ಸ್ಮರಿಸಿದ್ದಾನೆ.[2] ಸತತ ಪ್ರಯಾಣದಲ್ಲಿ ಇರುತ್ತಿದ್ದ ಮತ್ತು ಬೇರೆಬೇರೆ ಕಡೆಗಳಲ್ಲಿ ಸೇವೆಸಲ್ಲಿಸುತ್ತಿದ್ದ ರೊನಾಲ್ಡ್‌ರಾಸ್‌ರನ್ನು ರೈಸ್ ಮತ್ತೆ ಭೇಟಿಯಾದದ್ದು ೧೮೮೯ರಲ್ಲಿ. ಬಹಳ ಅನಿರೀಕ್ಷಿತವಾಗಿ ಮೂರು ತಿಂಗಳ ರಜೆ ಪಡೆದು ಇಂಗ್ಲೆಂಡಿಗೆ ಹೊರಟಿದ್ದ ರೈಸ್ ದೋಣಿಯೊಂದರಲ್ಲಿ ಇಂಗ್ಲೀಷ್ ಕಡಲ್ಗಾಲುವೆಯನ್ನು ದಾಟುತ್ತಿದ್ದಾಗ ಅದೇ ದೋಣಿಯಲ್ಲಿ ರಾಸ್‌ರೂ ಇದ್ದರೆಂದೂ ಅವರ ಸಂಶೋಧನಾ ಸಾಮಗ್ರಿಗಳಿದ್ದ ಪೆಟ್ಟಿಗೆಗಳನ್ನು ದೋಣಿಯಿಂದ ಇಳಿಸಲು ತಾನು ನೆರವಾಗಿದ್ದಾಗಿಯೂ ರೈಸ್ ತಮ್ಮ ಟಿಪ್ಪಣಿಗಳಲ್ಲಿ ನೆನಪಿಸಿಕೊಂಡಿದ್ದಾರೆ.

ಸಹೋದ್ಯೋಗಿಗಳೊಂದಿಗೆ :

ಪುರಾತತ್ತ್ವ ಇಲಾಖೆಯ ಕಾಗದಪತ್ರಗಳ ಪರಿಶೀಲನೆಯಿಂದ ಹಾಗೂ ಇತರ ದಾಖಲೆಗಳಿಂದ ರೈಸರು ತಮ್ಮ ಸಹೋದ್ಯೋಗಿಗಳೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೆಂಬ

---

1 ARAD, 1897-98, P–50.

2 **Ross, Ronald., Memoirs**, P 95, John Murray & Co., London. 1923.

ಸ್ಥೂಲಚಿತ್ರಣ ದೊರಕುತ್ತದೆ. ಅವರು ತಮ್ಮ ಪ್ರತಿವಾರ್ಷಿಕ ವರದಿಯ ಕೊನೆಯಲ್ಲಿ ತಮ್ಮ ಸಹೋದ್ಯೋಗಿಗಳ ಕಾರ್ಯವೈಖರಿಯ ಬಗೆಗೆ ಮುಕ್ತವಾಗಿ ಪ್ರಶಂಸಿಸಿದ್ದಾರೆ. ಉದಾಹರಣೆಗೆ:

"...I am glad to report that that all hands in the office have worked well and energetically during the year. The office staffs have been kept close at work copying, deciphering, transliterating and correcting proofs..."[1]

"...They in general manifest a good deal of interest in these duties, and the work, though often tedious, is being presented as vigorously as circumstances will allow..."[2]

ಇತ್ಯಾದಿ. ಒಮ್ಮೆಯಂತೂ

"...The staff of the Archaeological office are all working well. But I regret that serious interruptive arose from severe illness on the part of nearly all who accompanied me on tour, even life being in danger in some cases from the fevers contracted..."[3] ಎಂದು ತಮ್ಮ ಸಹೋದ್ಯೋಗಿಗಳ ಆರೋಗ್ಯದ ಬಗ್ಗೆ ಹಳಹಳಿಸಿದ್ದಾರೆ.

ಪ್ಲೇಗ್‌ನ ಕಾರಣದಿಂದಾಗಿ ತಮ್ಮ ಇಲಾಖೆಯ ಇಬ್ಬರು ನುರಿತ ಸೇವಕರು ಸತ್ತಿದ್ದನ್ನು, ಹಾಗೂ ಆಫೀಸಿನ ಎಲ್ಲ ನೌಕರ ವರ್ಗದವರಿಗೆ ಪ್ಲೇಗ್ ಬಾರದಿರುವಂತೆ ಲಸಿಕೆ ಹಾಕಿಸಿರುವುದನ್ನೂ ರೈಸ್ ಒಂದೆಡೆ ದಾಖಲಿಸಿದ್ದಾರೆ. ಇದಲ್ಲದೆ ತಮ್ಮ ಸಹೋದ್ಯೋಗಿಗಳನೇಕರ ಸಂಬಳ ಸಾರಿಗೆ ಇತ್ಯಾದಿಗಳ ಬಗೆಗೂ ಬಹಳ ಮುತುವರ್ಜಿ ವಹಿಸಿದ್ದಾರೆ. ೧೮೯೬ರ ದಾಖಲೆಯೊಂದರಲ್ಲಿ ಅವರು "Certain pandits of this office who have served satisfactorily for three years without any increase of salary, are recommended as specially deserving" ಎಂಬ ಶರಾ ಬರೆದು ರಾಘವೇಂದ್ರಾಚಾರಿ, ಶಾಮಾಚಾರಿ ಇವರಿಬ್ಬರ ಸಂಬಳವನ್ನು ಕ್ರಮವಾಗಿ ೪೦ ಹಾಗೂ ೩೫ರೂ.ಗಳಿಂದ ೫೦ ಹಾಗೂ ೪೫ರೂ.ಗಳಿಗೂ ಮತ್ತು ಶ್ರೀನಿವಾಸ ಅಯ್ಯಂಗಾರ್, ವೆಂಕಣ್ಣಾಚಾರಿ, ಚೊಕ್ಕಣ್ಣ, ಪದ್ಮಾರಾಜ ಪಂಡಿತ ಎಂಬ ವಿದ್ವಾಂಸರುಗಳ ಸಂಬಳದಲ್ಲಿ ಐದು ರೂ.ಗಳ ಹೆಚ್ಚಳ ಹಾಗೂ ಮೊಹಿಯುದ್ದೀನ್ ಎಂಬ ಸೇವಕನಿಗೆ ಮತ್ತು ಮನ್ನಾಜಿ, ಮುನಿವೆಂಕಟರಿಗೆ ತಲಾ ೧ರೂ. ಹೆಚ್ಚಳಕ್ಕೂ ಶಿಫಾರಸ್ಸು ಮಾಡಿದ್ದಾರೆ.[4]

1 ARAD, 1891-92, P–27.

2 ARAD, 1896-97, P–47.

3 ARAD, 1888-89, P–11

4 K.S.A.GM 118 of 1896 Sl.No. 6

ಬಹುಶಃ ತಮ್ಮ ವಿಶೇಷವಾದ ಕಾರ್ಯದಕ್ಷತೆಯಿಂದ ರೈಸರ ಪ್ರೀತಿ ಅಭಿಮಾನಗಳನ್ನು ಅತ್ಯಂತ ಹೆಚ್ಚಾಗಿ ಪಡೆದುಕೊಂಡವರೆಂದರೆ ಅವರ ಸಂಶೋಧನಾಕಾರ್ಯಗಳ ಬಲಗೈಯಂತಿದ್ದ ಆರ್. ನರಸಿಂಹಾಚಾರ್ಯರು ಹಾಗೂ ಛಾಯಾಗ್ರಹಣ, ನಕಾಶೆಗಳ ತಯಾರಿ, ರೇಖಾಚಿತ್ರಗಳ ರಚನೆ ಮುಂತಾದ ತಾಂತ್ರಿಕ ಕೆಲಸಗಳಲ್ಲಿ ನುರಿತಿದ್ದ ನಮಶ್ಶಿವಾಯಂ ಪಿಳ್ಳೈ ಎಂಬ ಡ್ರಾಫ್ಟ್ಸ್‌ಮನ್. ಇವರಿಬ್ಬರ ಬಗೆಗಿನ ರೈಸರ ನಂಟನ್ನು ಸ್ವಲ್ಪ ವಿಸ್ತೃತವಾಗಿ ಗಮನಿಸಬಹುದು.

ನಮಶ್ಶಿವಾಯಂ ಪಿಳ್ಳೈ

ಈತನ ಬಗ್ಗೆ ರೈಸರಿಗಿದ್ದ ಅಭಿಮಾನ, ಸದಭಿಪ್ರಾಯಗಳು ಅವರ ವಾರ್ಷಿಕ ವರದಿಗಳಲ್ಲಿ ಬಹಳ ಸ್ಪಷ್ಟವಾಗಿ ವ್ಯಕ್ತವಾಗಿದೆ. ಮೂಲತಃ ಪಿಳ್ಳೆಯದು ನಕಾಶೆ ಹಾಗೂ ರೇಖಾಚಿತ್ರಗಳ ಕಾರ್ಯವಾದರೂ ಛಾಯಾಗ್ರಹಣದಲ್ಲಿಯೂ ಆತ ನಿಪುಣನಾಗಿದ್ದನೆಂದು ತಿಳಿದುಬರುತ್ತದೆ. ಹಾಗಾಗಿ ಆತ ೧೮೯೬ರ ಸುಮಾರಿಗೆ ೫೦ ರೂ.ಗಳ ವೇತನವನ್ನು ಗಳಿಸುತ್ತಿದ್ದ. ಇದು ಇಲಾಖೆಯ ಪಂಡಿತವರ್ಗದವರಿಗೆ ಸರಿಗಟ್ಟುವಂತಹ ಸಂಬಳವಾಗಿತ್ತೆನ್ನುವುದು ಗಮನಾರ್ಹ. ಇಷ್ಟೇ ಅಲ್ಲದೆ ೧೮೯೭ರಲ್ಲಿ ರೈಸರು ಮೈಸೂರು ಗೆಜೆಟಿಯರ್‌ನ ಪರಿಷ್ಕರಣೆಯ ಕಾರ್ಯವನ್ನು ಆರಂಭಿಸಿದಾಗ ಇದಕ್ಕೆ ಸಂಬಂಧಿಸಿದಂತೆ ಪಿಳ್ಳೈಯವರಿಗೆ ೨೫ ರೂ.ಗಳ ಹೆಚ್ಚು ಸಂಬಳವನ್ನು ನೀಡುವಂತೆಯೂ, ಛಾಯಾಗ್ರಾಹಕನ ಅನುಪಸ್ಥಿತಿಯಲ್ಲಿ ಆತ ಛಾಯಾಗ್ರಹಣದ ಕೆಲಸವನ್ನು ಮಾಡಬೇಕಾದಾಗ ಇನ್ನೂ ೨೫ ರೂ.ಗಳನ್ನು ಸೇರಿಸಿ ಒಟ್ಟು ೧೦೦ ರೂ.ಗಳ ಸಂಬಳವನ್ನು ನೀಡಬೇಕೆಂದೂ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ.[1] ಶ್ರದ್ಧೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುವ ತಮ್ಮ ಸಹೋದ್ಯೋಗಿಗಳನ್ನು ರೈಸ್ ಎಷ್ಟು ಆದರಿಸುತ್ತಿದ್ದರು ಎಂಬುದಕ್ಕೆ ಈ ಪ್ರಸಂಗ ಉತ್ತಮ ನಿದರ್ಶನ. ಲಂಡನ್ನಿನಲ್ಲಿ ಎಸ್.ಜಿ. ಶಾಸ್ತ್ರಿಯೊಂದಿಗೆ ಸಂಭಾಷಿಸುವಾಗ ರೈಸರು "ನಮಶ್ಶಿವಾಯಂ ಪಿಳ್ಳೈ ಈಗ ನಿವೃತ್ತರಾಗಿರಬೇಕು" ಎಂದು ಪಿಳ್ಳೈಯವರನ್ನು ನೆನೆಸಿಕೊಂಡರೆಂಬ ಉಲ್ಲೇಖವಿದೆ.[2] ಪಿಳ್ಳೈಯವರ ಬಗ್ಗೆ ರೈಸರಿಗಿದ್ದ ಅಭಿಮಾನ ಈ ಮಾತುಗಳನ್ನು ಆಡಿಸಿತೆನ್ನಬಹುದು.

ಆರ್. ನರಸಿಂಹಾಚಾರ್ಯ

ಲೂಯಿರೈಸರ ನಂತರ ಮೈಸೂರು ಪುರಾತತ್ತ್ವ ಇಲಾಖೆಯ ಕೆಲಸಕಾರ್ಯಗಳನ್ನು ಅಷ್ಟೇ ಸಮರ್ಥವಾಗಿ ಮುಂದುವರೆಸಿಕೊಂಡು ಹೋದವರು ಆರ್. ನರಸಿಂಹಾಚಾರ್ಯರು.

---

1 ಅಲ್ಲೇ.,

2 ಹಾವನೂರ, ಶ್ರೀನಿವಾಸ., **ಶಾಸನ ಪಿತಾಮಹ ಬಿ.ಎಲ್. ರೈಸ್**. ಪು. ೪೭. ೧೯೭೮.

ಇಲಾಖೆಯು ಆರಂಭವಾದ ಕಾಲದಿಂದಲೂ ರೈಸರು ಸಮರ್ಥರಾದ ಸಹಾಯಕರೊಬ್ಬರಿಗಾಗಿ ಪ್ರಯತ್ನಪಡುತ್ತಲೇ ಇದ್ದರು. ವಿ.ಎನ್. ನಾರಾಯಣರಾವ್, ಪಿ. ಚಂಚಲ್‌ರಾವ್, ವಿಜೇಂದ್ರರಾವ್ ಮುಂತಾದವರ ನೆರವೇನೋ ಆಗಾಗ್ಗೆ ದೊರೆ ಯಿತಾದರೂ ಅವೆಲ್ಲಾ ತಾತ್ಕಾಲಿಕವಾಗಿದ್ದವು ಮತ್ತು ಬಹುಶಃ ರೈಸರು ನಿರೀಕ್ಷಿಸಿದ ಮಟ್ಟಕ್ಕೆ ಇವರಾರೂ ತಮ್ಮ ಪ್ರತಿಭೆಯನ್ನು ತೋರಿರಲಿಲ್ಲ. ಕೆ.ಬಿ. ಪಾಠಕ್‌ರು ಸಮರ್ಥರಾಗಿದ್ದರಾದರೂ ಅವರು ಮುಂಬೈ ಸರ್ಕಾರದ ಸೇವೆಯನ್ನು ಬಿಟ್ಟುಬರುವಂತಿರಲಿಲ್ಲ. ೧೮೯೮ರ ವೇಳೆಗೆ ಪಾಠಕ್‌ರು ಹಿಂದಿರುಗಲೇಬೇಕಿತ್ತು.

ಆದರೆ ಇದಕ್ಕೂ ಪೂರ್ವದಲ್ಲಿಯೇ, ಎಂದರೆ ೧೮೯೫ರ ಸುಮಾರಿಗೆ ರೈಸರ ಚುರುಕುಗಣ್ಣು ಆರ್. ನರಸಿಂಹಾಚಾರ್ಯರಲ್ಲಿದ್ದ ಪ್ರತಿಭೆಯನ್ನು ಗುರುತಿಸಿತ್ತು. ಪಂಪ ಭಾರತದ ಮುದ್ರಿತ ಹಾಳೆಗಳ ಕರಡಚ್ಚನ್ನು ನೋಡುವ ಕಾರ್ಯವನ್ನು ರೈಸ್ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಆಚಾರ್ಯರಿಗೆ ಒಪ್ಪಿಸಿದರು. ಕೇವಲ ತಪ್ಪನ್ನು ತಿದ್ದುವುದಷ್ಟಕ್ಕೆ ಮಾತ್ರ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳದೆ ಆಚಾರ್ಯರು ಅನೇಕ ಸಮಯೋಚಿತ ಸಲಹೆ ಸೂಚನೆಗಳನ್ನು ನೀಡಿದರೆಂದೂ, ರೈಸ್ ಅದನ್ನು ಸಂತೋಷದಿಂದ ಸ್ವೀಕರಿಸಿದರೆಂಬುದನ್ನೂ ರೈಸರೇ ಬರೆದಿರುವ ಪತ್ರದ ಈ ಭಾಗ ಸ್ಪಷ್ಟಪಡಿಸುತ್ತದೆ :

> *"I have to thank you very much for the through manner in which you examined the proof of the Pampa Bharata and for your valuable suggestions, many of which have been adopted. Further proofs of the work, as they are printed, will be forwarded to you for your suggestions. I hope now with your aid the work can be published with some approach to accuracy, though no manuscripts that are altogether trustworthy have been obtained as a guide, not withstanding every effort to procure one"* [1]

ಇಷ್ಟೇ ಅಲ್ಲದೇ ತಾವು ಬಹುದಿನಗಳಿಂದ ಹುಡುಕುತ್ತಿದ್ದ ಪಂಪಭಾರತದ ಹಸ್ತಪ್ರತಿಯನ್ನು ಆಚಾರ್ಯರು ಬಿ. ಮಲ್ಲಪ್ಪನವರಿಂದ ದೊರಕಿಸಿಕೊಟ್ಟಿದ್ದನ್ನು ರೈಸ್ ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಇದಾದ ನಂತರ ೧೮೯೮ರಲ್ಲಿ ಆಚಾರ್ಯರು ಪುರಾತತ್ತ್ವ

1 Extracts from some of the letters from scholars to R. Narasimhachar ರಲ್ಲಿಯ ಉಲ್ಲೇಖ, ಪು. ೨೦.

ಇಲಾಖೆಗೆ ಬರುವವರೆಗೂ ರೈಸ್ ಆಚಾರ್ಯರ ನಡುವೆ ಪತ್ರವ್ಯವಹಾರ ನಡೆದೇ ಇತ್ತು. ಹಾಗಾಗಿ "what steps you have taken for training a Hindu for the work" ಎಂದು ದಿವಾನರಾದ ಶೇಷಾದ್ರಿ ಅಯ್ಯರ್ ಒಮ್ಮೆ ಪ್ರಶ್ನಿಸಿದಾಗ ರೈಸರು "The Kannada translator in the Educational Dept. would be a better man, as I have mentioned to you" ಎಂದು ಉತ್ತರಿಸಿದರಲ್ಲದೇ, ಮರುವರ್ಷವೇ ನರಸಿಂಹಾಚಾರ್ಯ ರನ್ನು ತಮ್ಮ ಇಲಾಖೆಗೆ ಕರೆದುಕೊಂಡರು. ಒಳ್ಳೆಯ ಕೆಲಸಗಾರರಿಗೆ ಅವರ ಯೋಗ್ಯತೆಗೆ ತಕ್ಕಷ್ಟು ವರಮಾನ ದೊರೆಯಬೇಕು ಎಂಬುದು ರೈಸರ ಸಿದ್ಧಾಂತ ಎಂಬುದನ್ನು ನಮಶ್ಶಿವಾಯಂ ಪಿಳ್ಳೆಯವರ ಪ್ರಸಂಗದಲ್ಲಿ ಈಗಾಗಲೇ ಸ್ಪಷ್ಟವಾಗಿದೆ. ಇಂತಹುದೇ ಇನ್ನೊಂದು ಪ್ರಸಂಗ ನರಸಿಂಹಾಚಾರ್ಯರ ವೇತನಕ್ಕೆ ಸಂಬಂಧಿಸಿ ದಂತೆಯೂ ನಡೆದಿರುವುದನ್ನು ಸರ್ಕಾರಿ ದಾಖಲೆಗಳು ವಿವರಿಸುತ್ತವೆ.

ನರಸಿಂಹಾಚಾರ್ಯರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಇದ್ದಾಗ ಅವರ ಸಂಬಳ ೨೫೦-೧೦-೩೦೦ ಆಗಿತ್ತು. ಅವರು ಪುರಾತತ್ತ್ವ ಇಲಾಖೆಗೆ ಬರುವ ವೇಳೆಗೆ ವೇತನ ಪರಿಷ್ಕರಣೆಯಾಗಿ ತುಟ್ಟಿಭತ್ಯೆಯ ಮೊತ್ತ ೧೦ ರೂಪಾಯಿಗಳಿಂದ ೧೫ ರೂಪಾಯಿಗಳಿಗೆ ಏರಿತು. ರೈಸರು ಈ ಬಗ್ಗೆ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ನರಸಿಂಹಾಚಾರ್ಯರು ಮದ್ರಾಸ್ ವಿಶ್ವವಿದ್ಯಾಲಯದ ಮೊತ್ತಮೊದಲ ದ್ರಾವಿಡಭಾಷಾ ಎಂ.ಎ. ಪದವೀಧರ. ಹಾಗಾಗಿ ಇವರಿಗೂ ಅಸಿಸ್ಟೆಂಟ್ ಕಮೀಷನರ್‌ರ ಸಂಬಳವನ್ನೇ ನೀಡಬೇಕೆಂದು ಆಗ್ರಹಿಸಿದರು. ಅದರಂತೆ ೧೮೯೯ರ ಸೆಪ್ಟೆಂಬರ್ ೧೮ರಂದು ಹೊರಡಿಸಲಾದ ಅಧಿಸೂಚನೆಯಲ್ಲಿ ಆಚಾರ್ಯರ ಸಂಬಳ ೨೫೦-೨೫-೪೫೦ ಎಂದು ಅಧಿಕೃತವಾಗಿ ಪ್ರಕಟಿಸಲಾಯಿತು.[1]

ರೈಸರ ನಿರೀಕ್ಷೆಗೆ ತಕ್ಕಂತೆ ನರಸಿಂಹಾಚಾರ್ಯರು ಪುರಾತತ್ತ್ವಶೋಧನೆ, ಶಾಸನಾಧ್ಯಯನ, ಗ್ರಂಥ ಸಂಪಾದನೆ ಮುಂತಾದ ಕಾರ್ಯಗಳಲ್ಲಿ ಅಭೂತಪೂರ್ವವಾದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿದಾಗ ರೈಸ್ ತುಂಬು ಹೃದಯದಿಂದ ಅವರನ್ನು ಶ್ಲಾಘಿಸಿದ್ದಾರೆ. ಉದಾಹರಣೆಗೆ ಆಚಾರ್ಯರ ಆಚಾರ್ಯಕೃತಿಯಾದ ಕರ್ನಾಟಕದ ಕವಿಚರಿತ್ರೆಯ ಬಗ್ಗೆ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ :

> *"...The work on Kannada literature, which is being published by my assistant Mr. R. Narasimhachar, M.A., is the only one of the kind and the greatest value for the history of the language – the first steps in this field were contained in my Introduction to the*

1 K.S.A. Go No. 3090 – 93, MIS 858, GM 142 of 1898.

> *Karnataka Bhasha bhushana and articles published in the Royal Asiatic Society's Journals. Much fuller information was obtained and embodied in my Introduction to the Karnataka Sabdamsasana. On these notices Mr. Narasimhachar has based his work but has greatly extended them by further and more accurate researches. His work may be accepted as a standard authority and is well deserving of the utmost patronage and encouragement of the Government of those countries in which Kannada language prevails, as well as of the universities of Madras and Bombay...."* [1]

ಆರ್. ನರಸಿಂಹಾಚಾರ್ಯರು ಪುರಾತತ್ತ್ವ ಇಲಾಖೆಯ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಪ್ರತಿವರ್ಷದ ಇಲಾಖೆಯ ವಾರ್ಷಿಕ ವರದಿಗಳನ್ನು ರೈಸರೂ ಸೇರಿದಂತೆ ವಿಶ್ವದಾದ್ಯಂತ ಇದ್ದ ವಿದ್ವಾಂಸರಿಗೆ ಪರಾಮರ್ಶನಕ್ಕಾಗಿ ಕಳುಹಿಸುತ್ತಿದ್ದರು. ಅದಕ್ಕೆ ಬದಲಾಗಿ ವಿದ್ವಾಂಸರುಗಳು ನೀಡಿರುವ ಪ್ರತಿಕ್ರಿಯೆಗಳ ಮುಖ್ಯಾಂಶಗಳನ್ನೆಲ್ಲ ಸೇರಿಸಿ ಆಚಾರ್ಯರು ಪುಟ್ಟದೊಂದು ಪುಸ್ತಿಕೆಯನ್ನೇ ಹೊರತಂದಿದ್ದಾರೆ.[2] ಇದರಲ್ಲಿ ಫ್ಲೀಟ್, ವಿನ್ಸೆಂಟ್‌ಸ್ಮಿತ್, ಹುಲ್ಷ್, ಬರ್ಗೆಸ್, ಬಾರ್ನೆಟ್ ಮುಂತಾದವರು ಬರೆದ ಅನೇಕ ಪತ್ರಗಳ ಭಾಗಗಳು ಮುದ್ರಿತವಾಗಿವೆ. ಅವುಗಳಲ್ಲೆಲ್ಲಾ ಹೆಚ್ಚಿನ ಸಂಖ್ಯೆಯ ಪತ್ರಗಳನ್ನು ಬರೆದಿರುವವರೆಂದರೆ ಲೂಯಿರೈಸರು. ೧೯೦೭ ರಿಂದ ೧೯೧೪ರವರೆಗಿನ ಅವರು ಬರೆದ ೧೭ ಪತ್ರಗಳನ್ನು ಇಲ್ಲಿ ಮುದ್ರಿಸಲಾಗಿದೆ. ಈ ಎಲ್ಲಾ ಪತ್ರಗಳಲ್ಲಿ ಆಚಾರ್ಯರ ಬಗ್ಗೆ ರೈಸರಿಗಿದ್ದ ಅವ್ಯಾಜ್ಯವಾದ ಪ್ರೀತಿ ವಿಶ್ವಾಸಗಳು ವ್ಯಕ್ತವಾಗಿವೆ.

ಪದ್ಮರಾಜಪಂಡಿತ

ಪುರಾತತ್ತ್ವ ಇಲಾಖೆಯಲ್ಲಿ ರೈಸರ ಸಹೋದ್ಯೋಗಿಯಾಗಿದ್ದ ಪದ್ಮರಾಜಪಂಡಿತರು 'ಸಟೀಕಾ ಅಕಲಂಕಾಷ್ಟಕ' (೧೮೯೩), 'ಸಜ್ಜನ ಚಿತ್ತವಲ್ಲಭ' (೧೮೯೧), 'ಸಂಸ್ಕೃತ ಜಿನೇಂದ್ರ

1 **Some opinions on the Karnataka Kavicharirthe and other works** ನಲ್ಲಿ ಉದ್ಧೃತವಾಗಿರುವ ಜುಲೈ ೩, ೧೮೮೭ರ ಪತ್ರ.

2 ಇದೇ ಈ ಮೊದಲು ಉಲ್ಲೇಖಿಸಲಾದ **Extracts from some of the letters from scholars to R. Narasimhachar** ಎಂಬ ಕೃತಿ. ಇದರ ಪ್ರಕಟಣೆಯ ಕಾಲ ತಿಳಿದಿಲ್ಲವಾದರೂ ೧೯೧೪ರ ವರೆಗಿನ ಪತ್ರಗಳು ಇಲ್ಲಿ ದಾಖಲಾಗಿರುವುದರಿಂದ ಅನಂತರದಲ್ಲಿ ಇದು ಪ್ರಕಟವಾಗಿದೆ ಎಂದು ಊಹಿಸಬಹುದು. **Some opinions on the Karnataka Kavicharirthe and other works** ಎನ್ನುವುದೂ ಇಂತಹುದೇ ಪತ್ರಗಳ ಸಂಕಲನ.

ಮಾಲ' (೧೮೮೯) ಮುಂತಾದ ೨೫ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ ವಿದ್ವಾಂಸರು. ಬಹುಪಾಲು ಕೃತಿಗಳು ಜೈನಧರ್ಮವನ್ನು ಪ್ರತಿಪಾದಿಸುವಂತಹವು. ಇವುಗಳಲ್ಲಿ 'ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣವಡೆಯರವರ ಪಟ್ಟಾಭಿಷೇಕ ಚರಿತ್ರೆ' (೧೯೦೨) ಮತ್ತು 'ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜವಡೆಯವರ ಮತ್ತು ಸೌಭಾಗ್ಯವತಿ ಪ್ರತಾಪಕುಮಾರಿಬಾಯಿ ಮಹಾದೇವಿಯವರ ಪರಿಣಯವು' (೧೯೦೦) ಎಂಬ ಎರಡು ಕೃತಿಗಳು ಮಾತ್ರವೇ ಲೌಕಿಕ ವಿಷಯಗಳನ್ನು ಒಳಗೊಂಡವು. ಇವೆರಡನ್ನಲ್ಲದೇ ಪದ್ಮರಾಜ ಪಂಡಿತರು ರಚಿಸಿರುವ ಮತ್ತೊಂದು ಲೌಕಿಕ ವಿಷಯಕ ಕೃತಿಯೆಂದರೆ ಲೂಯಿರೈಸರ ಜೀವನ ಸಾಧನೆಗಳನ್ನು ಕುರಿತಾದ 'ಶ್ರೀರೈಸಾರ್ಯ ಚರಿತಂ' ಎಂಬ ಸಂಸ್ಕೃತ ಕೃತಿ. ಕಂದ ವೃತ್ತಾದಿಗಳಿಂದ ಕೂಡಿರುವ ಈ ಕಾವ್ಯದಲ್ಲಿ ರೈಸರ ಜೀವನ ಹಾಗೂ ಅವರ ಸಾಧನೆಗಳನ್ನು ವಿವರಿಸಲಾಗಿದೆ.

ಸಂಸ್ಥೆಗಳು :

ರೈಸರು ಹೆಚ್ಚಿನ ಸಂಖ್ಯೆಯ ಸಂಘಸಂಸ್ಥೆಗಳೊಂದಿಗೆ ಸಂಪರ್ಕವನ್ನೇನೂ ಬೆಳೆಸಿ ಕೊಂಡಂತೆ ತೋರುವುದಿಲ್ಲ. ಬಹುಶಃ ಸತತವಾದ ಅಧ್ಯಯನ - ಪ್ರವಾಸ - ಪ್ರಕಟಣಗಳ ಕಾರ್ಯದಿಂದಾಗಿ ಅವರಿಗೆ ಹೆಚ್ಚಿನ ಕಾಲಾವಕಾಶ ದೊರೆಯದೆ ಇದ್ದುದು ಇದಕ್ಕೆ ಕಾರಣ ವೆಂದು ತೋರುತ್ತದೆ. ಆದರೂ ಸಾಹಿತ್ಯಕ ಸಂಸ್ಥೆಗಳಾದ ಧಾರವಾಡದ ವಿದ್ಯಾವರ್ಧಕ ಸಂಘ, ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿ ಮುಂತಾದ ಪ್ರತಿಷ್ಠಿತ ಸಂಸ್ಥೆ ಗಳೊಂದಿಗೆ ಅವರು ಸಂಪರ್ಕ ಹೊಂದಿದ್ದರು. ಆದರೆ ಎಲ್ಲಕ್ಕಿಂತ ಹೆಚ್ಚಿನ ಸಂಪರ್ಕವಿದ್ದುದ್ದು ಬೆಂಗಳೂರಿನ ಅತ್ಯಂತ ಪ್ರಾಚೀನ ಹಾಗೂ ಪ್ರಸಿದ್ಧ ಸಂಸ್ಥೆಗಳಲ್ಲಿ ಒಂದಾದ ಬೌರಿಂಗ್ ಇನ್ಸ್‌ಟ್ಯೂಟ್‌ನೊಂದಿಗೆ. ಇದರ ಹುಟ್ಟು ಮತ್ತು ಬೆಳವಣಿಗೆಗಾಗಿ ಸುಮಾರು ಕಾಲು ಶತಮಾನಕ್ಕೂ ಹೆಚ್ಚು ಕಾಲ ಶ್ರಮಿಸಿದವರು ಲೂಯಿರೈಸರು. ೧೮೬೮ರ ಫೆಬ್ರವರಿ ೧೫ ರಂದು ಸಭೆ ಸೇರಿದ ಬೆಂಗಳೂರಿನ ಕೆಲವು ಗಣ್ಯವ್ಯಕ್ತಿಗಳು ಉಪನ್ಯಾಸ, ಚರ್ಚೆ, ಸಂವಾದ, ಗ್ರಂಥಾಲಯ, ವಾಚನಾಲಯ ಮುಂತಾದವುಗಳ ಮೂಲಕ ಬೆಂಗಳೂರಿನ ಯುವಜನರ ಬೌದ್ಧಿಕ ಮತ್ತು ನೈತಿಕ ಅಭಿವೃದ್ಧಿಗೆ ನೆರವಾಗುವಂತೆ Literary and Scientific Institute ಒಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಮೈಸೂರಿನ ಮತ್ತು ಕೊಡಗಿನ ಆಗಿನ ಚೀಫ್ ಕಮೀಷನರ್ ಆಗಿದ್ದ ಎಲ್.ಬಿ. ಬೌರಿಂಗ್ ಇದರ ಮೊದಲ ಅಧ್ಯಕ್ಷ. ಜುಡಿಶಿಯಲ್ ಕಮೀಷನರ್ ಸ್ಯಾಂಡರ್ಸ್ ಹಾಗೂ ಮೇಜರ್ ಜನರಲ್ ಹೇನ್ಸ್ ಉಪಾಧ್ಯಕ್ಷರುಗಳು ಹಾಗೂ ಮಹಾರಾಜರು ಮತ್ತು ಚೀಫ್ ಕಮೀಷನರ್ ಇವರುಗಳು ಪೋಷಕರಾದರು. ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿದ್ದ ರೈಸರು ಗೌರವ ಕಾರ್ಯದರ್ಶಿಯಾಗಿ ಆಗ ನೇಮಕವಾದರು.

ಮ್ಯೂಸಿಯಂ ರಸ್ತೆಯ ೭ನೇ ನಂಬರಿನ ಬಾಡಿಗೆ ಬಂಗಲೆಯಲ್ಲಿ ಪ್ರಾರಂಭವಾದ ಇನ್ಸ್‌ಟಿಟ್ಯೂಟ್ ಬಹುಬೇಗ ೭೭ ಮಂದಿ ಸದಸ್ಯರನ್ನು ಪಡೆಯಿತು. ಮೇಜರ್ ನೇಪಿಯರ್ ಕ್ಯಾಂಬೆಲ್‌ರ ಮಾರ್ಗದರ್ಶನದಲ್ಲಿ ವಾರದಲ್ಲಿ ಒಂದು ದಿನ ಅಧ್ಯಯನ ಗೋಷ್ಠಿಗಳು ನಡೆಯಲಾರಂಭಿಸಿದವು. ಸದಸ್ಯರಲ್ಲಿ ಕೆಲವರು ಉದಾರವಾಗಿ ಪತ್ರಿಕೆಗಳನ್ನು ಕೊಡುಗೆಯಾಗಿ ಕೊಟ್ಟರು. ರೆಸಿಡೆಂಟ್ ಬೌರಿಂಗ್ ನೀಡಿದ ೭೭೪ ಅಮೂಲ್ಯವಾದ ಗ್ರಂಥಗಳಿಂದ ಗ್ರಂಥಾಲಯ ಸಾಕಷ್ಟು ವಿಸ್ತಾರವಾಯಿತು. ೧೮೮೯ರ ವೇಳೆಗೆ ಸದಸ್ಯರ ಸಂಖ್ಯೆ ೧೦೪ನ್ನು ಮುಟ್ಟಿತು. ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿದ್ದ ರೈಸರು ಮೈಸೂರು ಸರಕಾರವನ್ನು ಪ್ರಾರ್ಥಿಸಿ ಗ್ರಂಥಾಲಯ ಮತ್ತು ವಾಚನಾಲಯಗಳಿಗೆ ವರ್ಷಕ್ಕೆ ೫೦ ರೂ.ಗಳ ಸಹಾಯಧನ ದೊರೆಯುವಂತೆ ಮಾಡಿದರು. ರೈಸರ ಕಾರಣದಿಂದಾಗಿ ಸುಮಾರು ೫೫ ವರ್ಷಗಳ ಕಾಲ ಎಂದರೆ ೧೯೨೪ರವರೆಗೆ ಸಂಸ್ಥೆಗೆ ಒಂದು ನಿಶ್ಚಿತವಾದ ಆರ್ಥಿಕ ಸಹಾಯ ದೊರಕುವಂತಾಯಿತು.

ಆರಂಭದಲ್ಲಿ ಸಾಕಷ್ಟು ಚಟುವಟಿಕೆಯಿಂದಿದ್ದ ಇನ್ಸ್‌ಟಿಟ್ಯೂಟ್ ನಂತರದ ವರ್ಷಗಳಲ್ಲಿ ಸ್ವಲ್ಪ ಮಂಕಾಯಿತು. ಆಸಕ್ತರಾದ ಸದಸ್ಯರು ಬೇರೆ ಬೇರೆ ಊರುಗಳಿಗೆ ವರ್ಗವಾಗಿ ಹೋಗಿದ್ದರಿಂದ ಹಾಗೂ ಬೆಂಗಳೂರಿನ ಬೇರೆಬೇರೆ ಪ್ರದೇಶಗಳಲ್ಲಿ ಇಂಥಹವೇ ಅನೇಕ ಸಂಸ್ಥೆಗಳು ಹುಟ್ಟಿಕೊಂಡಿದ್ದರಿಂದ ಇನ್ಸ್‌ಟಿಟ್ಯೂಟ್‌ನ ಸದಸ್ಯಬಲ ಇಳಿಯಿತು. ಇದ್ದ ಅಲ್ಪಸ್ವಲ್ಪ ಹಣದ ಬಹುಪಾಲು ಕಟ್ಟಡದ ಬಾಡಿಗೆಗೆ ನೀಡಲೇ ಖರ್ಚಾಗುತ್ತಿತ್ತು. ಇನ್ಸ್‌ಟಿಟ್ಯೂಟ್ ಸ್ವಂತ ಕಟ್ಟಡ ಒಂದನ್ನು ಹೊಂದಿದ್ದರೆ ಆರ್ಥಿಕ ಕಷ್ಟಗಳಿಂದ ಪಾರಾಗಬಹುದು ಎಂಬ ಉದ್ದೇಶದಿಂದ ರೈಸ್ ಸತತವಾಗಿ ತಮ್ಮ ಪ್ರಯತ್ನವನ್ನು ಮುಂದುವರೆಸಿದರು.

ಮೈಸೂರಿನ ಕಮೀಷನರ್ ಆಗಿದ್ದ ಎಲ್.ಬಿ. ಬೌರಿಂಗ್‌ರ ಸ್ಮಾರಕವಾಗಿ ಯಾವುದಾದರೊಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ೧೮೭೦ರ ಸುಮಾರಿಗೆ ಸಮಿತಿಯೊಂದು ರೂಪುಗೊಂಡಿತ್ತು. ಪಿ.ಎನ್. ಕೃಷ್ಣಮೂರ್ತಿ, ಎ. ನಾರಾಯಣಸ್ವಾಮಿ ಮೊದಲಿಯಾರ್ ಮುಂತಾದವರ ನೇತೃತ್ವದ ಈ ಸಮಿತಿಯೊಂದಿಗೆ ಚರ್ಚಿಸಿದ ರೈಸರು "ಸಮಿತಿಯು 'ಬೌರಿಂಗ್ ಇನ್ಸ್‌ಟಿಟ್ಯೂಟ್' ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಲಿ, ಬೌರಿಂಗ್‌ರೇ ಸ್ಥಾಪಿಸಿದ ಲಿಟರರಿ ಮತ್ತು ಸೈಂಟಿಫಿಕ್ ಇನ್ಸ್‌ಟಿಟ್ಯೂಟನ್ನು ಅದರಲ್ಲಿ ವಿಲೀನಗೊಳಿಸೋಣ. ಇದರಿಂದ ಹಳೆಯ ಸಂಸ್ಥೆಗೆ ಕಾರ್ಯನಿರ್ವಹಿಸಲು ಸ್ಥಳ ದೊರೆಯುತ್ತದೆ. ಹೊಸ ಸಂಸ್ಥೆಗೆ ೮೦-೧೦೦ ಜನರ ಸದಸ್ಯತ್ವ, ೧೫೦೦ ಪುಸ್ತಕಗಳ ಗ್ರಂಥಾಲಯ, ಸರ್ಕಾರದ ಸಹಾಯಧನ ಮುಂತಾದವು ದೊರಕುತ್ತವೆ" ಎಂಬ ಪ್ರಸ್ತಾವವನ್ನು ಮುಂದಿಟ್ಟರು. ಈ ಪ್ರಸ್ತಾವವನ್ನು ಒಪ್ಪಿಗೊಂಡ ಸಮ್ಮಿತಿ ಕಟ್ಟಡ ನಿರ್ಮಾಣ ಜವಾಬ್ದಾರಿಯನ್ನೂ ರೈಸರ ವಶಕ್ಕೇ ಬಿಟ್ಟರು.


೧೮೮೮ರಲ್ಲಿ ಸ್ಯೆಂಟ್ ಮಾರ್ಕ್ಸ್ ಚೌಕದ ಬಳಿ ನಿವೇಶನವನ್ನು ಪಡೆದ ಬೌರಿಂಗ್ ಇನ್ಸ್‌ಟಿಟ್ಯೂಟ್ ೧೮೯೦ರ ಮೇ ತಿಂಗಳಿನಲ್ಲಿ ತನ್ನ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಆ ವೇಳೆಗೆ ಸಂಸ್ಥೆ ೧೦೫ ಜನರ ಸದಸ್ಯಬಲ ಹಾಗೂ ೨೦೦೦ ಪುಸ್ತಕಗಳನ್ನು ಹೊಂದಿತ್ತಲ್ಲದೆ ವರ್ಷಕ್ಕೆ ೨೦೦೦ ರೂ.ಗಳ ಆದಾಯ ಹೊಂದಿತ್ತು. ಈ ಎಲ್ಲಾ ಸಾಧನೆಯ ಕಾರಣಕರ್ತ ರಾದ ರೈಸರನ್ನೇ ಸಂಸ್ಥೆ ಸತತವಾಗಿ ೧೮೮೮ ರಿಂದ ೧೮೯೧ರವರೆಗೆ ಮೂರು ವರ್ಷಗಳ ಕಾಲಕ್ಕೆ ತನ್ನ ಅಧ್ಯಕ್ಷರನ್ನಾಗಿ ಆಯ್ಕೆಮಾಡಿಕೊಂಡಿದ್ದು ಸಹಜವೇ ಆಗಿತ್ತು.

೧೮೯೧ರಲ್ಲಿ ರೈಸ್ ಇನ್ಸ್‌ಟಿಟ್ಯೂಟಿನ ಅಧ್ಯಕ್ಷ ಪದವಿಯಿಂದ ನಿವೃತ್ತರಾದಾಗ ಸಂಸ್ಥೆಯ ಸರ್ವ ಸದಸ್ಯರ ಸಭೆ ಸೇರಿ "The member of this Institute would have been glad to have had Mr. Rice as their President in perpetuity. Considering the valuable services rendered by Mr. Rice to this Institute for many years, part of this meeting records it's high appreciation of Mr. Rice's labours" ಎಂದು ರೈಸರ ಸೇವೆಯನ್ನು ಸ್ಮರಿಸಿದೆ.[1]


ಮುಂದಿನ ಪೀಳಿಗೆ :

ಆರು ಮಂದಿ ಗಂಡುಮಕ್ಕಳು ಮತ್ತು ನಾಲ್ಕುಮಂದಿ ಹೆಣ್ಣುಮಕ್ಕಳನ್ನು ಹೊಂದಿದ್ದ ಲೂಯಿರೈಸರ ಮುಂದಿನ ಪೀಳಿಗೆಯೂ ಸಾಕಷ್ಟು ದೊಡ್ಡದು. ಜಗತ್ತಿನ ವಿವಿಧ ಭಾಗಗಳಲ್ಲಿ ಹರಡಿ ಹೋಗಿರುವ ರೈಸ್ ಕುಟುಂಬದ ಎಲ್ಲ ಸದಸ್ಯರ ಮಾಹಿತಿ ಒಂದೆಡೆ ಸಿಗುವುದು ಕಷ್ಟಸಾಧ್ಯ. ಆದರೂ ರೈಸ್ ಕುಟುಂಬದ ಕೆಲವು ಸದಸ್ಯರು ಸ್ವಂತ ಆಸಕ್ತಿಯಿಂದ ಸಾಧ್ಯ ವಾದಷ್ಟು ವಿವರಗಳನ್ನು ಸಂಗ್ರಹಿಸಲು ಯತ್ನಿಸಿದ್ದಾರೆ. ಅಂತಹವರಲ್ಲಿ ಲೂಯಿರೈಸರ ಮೊಮ್ಮಗ (ಡಗ್ಲಸ್ ರೈಸ್‌ರ ಪುತ್ರ) ದಿ। ರೊನಾಲ್ಡ್ ರೈಸರೂ ಒಬ್ಬರು. ಇವರು ಲೂಯಿ ರೈಸರ ಚಿಕ್ಕಪ್ಪ ಎಡ್ವರ್ಡ್ ಪೀಟರ್ ರೈಸರು ಸಂಗ್ರಹಿಸಿದ ವಿವರಗಳನ್ನು ಸಂರಕ್ಷಿಸಿದ್ದಾರಲ್ಲದೆ ೧೯೭೩ರಲ್ಲಿ ತಮ್ಮ ಪತ್ನಿಯೊಂದಿಗೆ ಭಾರತಕ್ಕೆ ಭೇಟಿ ನೀಡಿ ತಮ್ಮ ಪೂರ್ವಿಕರ ವಿವರಗಳನ್ನು ಕಲೆಹಾಕಲು ಯತ್ನಿಸಿದರು. ಅವರ ಪುತ್ರ, ಡೆವೋನ್‌ನ ನಿವಾಸಿಯಾದ ಡಗ್ಲಸ್ ರೈಸರಲ್ಲಿ ರೈಸ್ ಕುಟುಂಬದ ವಂಶವೃಕ್ಷದ ಪ್ರತಿಯೊಂದಿದ್ದು ಅದರಲ್ಲಿನ ಲೂಯಿರೈಸರ ನಂತರದ ಪೀಳಿಗೆಯವರ ಸ್ಥೂಲವಿವರಗಳು ಹೀಗಿವೆ :

1 Morrison, H.E., **The Origin and Growth of the Bowring Institute**, P 14–15.



ಲೂಯಿರೈಸರ ನಂತರ ಪೀಳಿಗೆಯ ವಂಶವೃಕ್ಷ
[ಕಂಸದಲ್ಲಿರುವ ಹೆಸರುಗಳು ಸತಿ/ಪತಿಯ ಹೆಸರನ್ನು ಸೂಚಿಸುತ್ತದೆ]



ಲೂಯಿರೈಸರ ನಂತರ ಪೀಳಿಗೆಯ ವಂಶವೃಕ್ಷ
[ಕಂಸದಲ್ಲಿರುವ ಹೆಸರುಗಳು ಸತಿ/ಪತಿಯ ಹೆಸರನ್ನು ಸೂಚಿಸುತ್ತದೆ]

ಅನುಬಂಧ:

ಎಡ್ವರ್ಡ್ ಪೀಟರ್ ರೈಸ್

ಕನ್ನಡ ಸಾಹಿತ್ಯಲೋಕದಲ್ಲಿ ಇ.ಪಿ. ರೈಸ್ ಎಂದೇ ಪ್ರಸಿದ್ಧರಾಗಿರುವ ಎಡ್ವರ್ಡ್ ಪೀಟರ್; ಲೂಯಿ ರೈಸರ ಕಡೆಯ ತಮ್ಮ. 1849ರ ಏಪ್ರಿಲ್ 26 ರಂದು ಜನಿಸಿದ ಎಡ್ವರ್ಡ್‌ಪೀಟರ್ ಲಂಡನ್ನಿನ ಚೆಥೆಂಟ್ ಕಾಲೇಜಿನಲ್ಲಿ ಓದಿ ಲಂಡನ್ ವಿಶ್ವವಿದ್ಯಾಲಯದ ಬಿ.ಎ. ಪದವೀಧರರಾದರು. 1873ರ ನವೆಂಬರ್ 4ರಂದು ಈಲಿಂಗ್ಟನ್‌ನ ಯೂನಿಯನ್ ಛಾಪೆಲ್‌ನಲ್ಲಿ ಲಂಡನ್ ಮಿಷನ್ನಿನ ಪಾದ್ರಿಯಾಗಿ ದೀಕ್ಷೆ ನೀಡಲಾಯಿತು. 1891ರವರೆಗೆ ಮದ್ರಾಸಿನಲ್ಲಿ ಕೆಲಸಮಾಡಿದ ನಂತರ ಚಿಕ್ಕಬಳ್ಳಾಪುರದಲ್ಲಿ ಹೊಸದಾಗಿ ಆರಂಭವಾದ ಕೇಂದ್ರಕ್ಕೆ 1892ರ ಜನವರಿ 1 ರಿಂದ ಸ್ಥಾಪಕಪಾದ್ರಿಯಾಗಿ ನಿಯೋಜಿತರಾದರು. 1896ರ ಜನವರಿ 15ರಂದು ಲಂಡನ್ನಿನಲ್ಲಿ ಇವರ ಮದುವೆ ಲಿಲಿಯನ್ ಎಡ್ಗರ್ ಎಂಬಾಕೆಯೊಂದಿಗೆ ನೆರವೇರಿತು. 1896ರ ಮಾರ್ಚ್‌ನಲ್ಲಿ ಮರಳಿ ಚಿಕ್ಕಬಳ್ಳಾಪುರಕ್ಕೆ ಹಿಂದಿರುಗಿದ ಎಡ್ವರ್ಡ್ ಪೀಟರರು ಅನೇಕ ವರ್ಷಗಳ ಕಾಲ ಅಲ್ಲಿ ಸೇವೆಸಲ್ಲಿಸಿದರು.

ಮುಂದೆ ಅವರ ಸೇವೆ ಸಂದಿದ್ದು ಅವರ ತಂದೆ ಬೆಂಜಮಿನ್ ರೈಸರು ಸ್ಥಾಪಿಸಿದ ಲಂಡನ್ ಮಿಷನ್ ಬಾಲಕರ ಹೈಸ್ಕೂಲಿನ ಪ್ರಿನ್ಸಿಪಾಲರಾಗಿ.[1] ಆರಂಭದಿಂದಲೇ ಅವರು ಕನ್ನಡ ಬೈಬಲ್ ಪರಿಷ್ಕರಣ ಮತ್ತು ಕ್ರೈಸ್ತ ಕೀರ್ತನ ಸಾಹಿತ್ಯಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರು ರಚಿಸಿದ 'ಜಯಜಯ ವಿಜಯಸ್ವಾಮಿಗೆ', 'ಪ್ರಿಯಮಿತ್ರ ಸಾಯಲು' ಮುಂತಾದ ಕೀರ್ತನೆಗಳು ಇಂದಿಗೂ ಬಳಕೆಯಲ್ಲಿವೆ. 1893ರಲ್ಲಿ ಆರಂಭವಾದ ಬೈಬಲ್‌ನ ಕನ್ನಡಾನುವಾದ ಮತ್ತು ಪರಿಷ್ಕರಣದ ಕಾರ್ಯಕ್ಕೆಂದು ನಿಯೋಜಿತವಾದ ಸಮಿತಿಯ ಸದಸ್ಯರಾಗಿದ್ದ ಇವರು 1903ರಲ್ಲಿ ಅದರ ಅಧ್ಯಕ್ಷರಾದರು. ಈ ಸಮಿತಿಯ ಪರವಾಗಿ ಅವರು ಪ್ರಕಟಿಸಿದ 'ಯೇಸುಕ್ರಿಸ್ತನ ಮೂಲಕ ಸ್ಥಾಪಿತವಾದ ಹೊಸ ಒಡಂಬಡಿಕೆ ಎಂಬ ಗ್ರಂಥವು ಗ್ರೀಕ್‌ಭಾಷೆಯಿಂದ ನೂತನವಾಗಿ ಭಾಷಾಂತರಿಸಿದ್ದು' 1906ರಲ್ಲಿ ಹೊರಬಂದಿತು.

ಇ.ಪಿ. ರೈಸರು ಕನ್ನಡಿಗರಿಗೆ ಪರಿಚಿತರಾಗಿರುವುದು ಅವರ 'History of Kanarese Literature' ಕೃತಿಯಿಂದಾಗಿ. 1918ರಲ್ಲಿ ಪ್ರಕಟವಾದ ಈ ಕೃತಿ ಕೆಲವು

1 ತರಗತಿಯಲ್ಲಿ ಹಿಂದಿನ ಬೆಂಚಿನಲ್ಲಿ ಕುಳಿತು ಬೋರ್ಡಿನ ಮೇಲೆ ಬರೆದದ್ದು ಕಾಣದೆ ತೊಂದರೆಪಡುತ್ತಿದ್ದ ತಮ್ಮನ್ನು ಶಿಷ್ಯವತ್ಸಲರಾದ ಇ.ಪಿ. ರೈಸರು ನಾಲ್ಕಾರು ದಿನ ತಮ್ಮ ವಿಕ್ಟೋರಿಯಾ ಕೋಚ್‌ನಲ್ಲಿ ಮಿಂಟೋ ಕಣ್ಣಾಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದುದನ್ನು ಶಿ.ತಾ. ಶರ್ಮರು ತಮ್ಮ ಆತ್ಮಕಥೆ 'ನನ್ನ ಜೀವನ ಮತ್ತು ಧ್ಯೇಯ'ದಲ್ಲಿ ನೆನಪಿಸಿಕೊಂಡಿದ್ದಾರೆ.

ನ್ಯೂನತೆಗಳ ನಡುವೆಯೂ ಕನ್ನಡ ಸಾಹಿತ್ಯವನ್ನು ಇಂಗ್ಲಿಷ್ ಬಲ್ಲ ಓದುಗರಿಗೆ ಪರಿಚಯಿಸುವ ಒಂದು ಉತ್ತಮ ಕೃತಿಯಾಗಿದೆ. ಅವರ ಎರಡನೆಯ ಕೃತಿ ತಮ್ಮ ತಂದೆ ಬೆಂಜಮಿನ್ನರ ಜೀವನವನ್ನು ಕುರಿತ 'Benjamin Rice OR fifty years in the Master's service' ಎಂಬುದು. ಇದರಲ್ಲಿ ಅವರು ತಮ್ಮ ತಂದೆ ಭಾರತದಲ್ಲಿ ಸುಮಾರು 50 ವರ್ಷಗಳ ಕಾಲ ಕ್ರೈಸ್ತ ಮತಪ್ರಚಾರಕರಾಗಿ ಸೇವೆ ಸಲ್ಲಿಸಿದ ವಿವರಗಳನ್ನಲ್ಲದೆ ತಮ್ಮ ವಂಶದ ಪೂರ್ವಿಕರ ವಿವರಗಳನ್ನು ಪ್ರಾಸ್ತಾವಿಕವಾಗಿ ನೀಡಿದ್ದಾರೆ. ಈ ವಿವರಗಳು ರೈಸ್ ಮನೆತನದ ಬಗ್ಗೆ ತಿಳಿದುಕೊಳ್ಳಲು ಉಪಯುಕ್ತವಾಗಿವೆ. ಇ.ಪಿ. ರೈಸರ ಮತ್ತೊಂದು ಮಹತ್ವದ ಕೃತಿಯೆಂದರೆ 'The Mahabharatha, Analysis and Index'. 1934ರಲ್ಲಿ ಪ್ರಕಟವಾದ ಈ ಕೃತಿ ಮಹಾಭಾರತದ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಬೆಂಗಳೂರಿನ ಸಾರ್ವಜನಿಕ ಜೀವನದಲ್ಲಿ ಸಾಕಷ್ಟು ಸಕ್ರಿಯವಾಗಿ ಭಾಗವಹಿಸುತ್ತಿದ್ದ ರೈಸರಿಗೆ ಕೆ.ಪಿ. ಪುಟ್ಟಣ್ಣಚೆಟ್ಟರು, ಬಿ. ಪುಟ್ಟಯ್ಯ ಮುಂತಾದ ಗಣ್ಯರೊಂದಿಗೆ ವಿಶ್ವಾಸವಿತ್ತು. ರೈಸರ ಸಾಮಾಜಿಕ ಕಾರ್ಯಗಳನ್ನು ಗಮನಿಸಿ 1891ನೆಯ ಇಸವಿಯಲ್ಲಿ ಇವರನ್ನು ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆ ಮಾಡಬೇಕೆಂದು ಸೂಚಿಸಲಾಗಿತ್ತು.

ನಲವತ್ತೆರಡು ವರ್ಷಗಳಷ್ಟು ಸುದೀರ್ಘಕಾಲ ಕನ್ನಡನಾಡಿನಲ್ಲಿ ಸೇವೆಸಲ್ಲಿಸಿದ ನಂತರ 1915ರ ಫೆಬ್ರವರಿಯಲ್ಲಿ ಇ.ಪಿ. ರೈಸರು ಸ್ವದೇಶಕ್ಕೆ ಮರಳಿದರು. ಆ ಸಂದರ್ಭದಲ್ಲಿ ಬೆಂಗಳೂರಿನ ರೈಸ್ ಸ್ಮಾರಕ ದೇವಾಲಯದ ವತಿಯಿಂದ ವಿಶೇಷವಾದ ವಿದಾಯ ಭಾಷಣವನ್ನು ಏರ್ಪಡಿಸಲಾಗಿತ್ತಲ್ಲದೆ ಸುಂದರವಾದ ಬೆಳ್ಳಿಯ ಕರಂಡಕವನ್ನು ಉಡುಗೊರೆಯಾಗಿ ನೀಡಲಾಯಿತು.[1]

ಎಡ್ಗರ್, ಡೊರೋಥಿ, ಐರಿಸ್, ಉರ್ಸುಲಾ ಮುಂತಾದ ಮಕ್ಕಳ ತಂದೆಯಾಗಿದ್ದ ಇ.ಪಿ. ರೈಸರು 1936ರಲ್ಲಿ ಲಂಡನ್ನಿನಲ್ಲಿ ನಿಧನರಾದರೆಂದು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ 1936ರ ಸಂಚಿಕೆಯಿಂದ ತಿಳಿದುಬರುತ್ತದೆ.

1 Rice Memorial Church Dedication and Opening Services, P – 17.

3. ಶಿಕ್ಷಣ ತಜ್ಞ

ರೈಸ್‌ಪೂರ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣ ವ್ಯವಸ್ಥೆ :

೧೯ನೇ ಶತಮಾನದ ಆದಿಭಾಗದವರೆಗೆ ಉಳಿದೆಲ್ಲ ಭಾರತೀಯ ಸಂಸ್ಥಾನಗಳಂತೆ ಮೈಸೂರಿನಲ್ಲಿಯೂ ಇದ್ದದ್ದು ಪ್ರಾಥಮಿಕ ಹಂತದ ಓದು, ಬರಹ, ಬರವಣಿಗೆ ಮತ್ತು ಅಂಕ ಗಣಿತವನ್ನು ಮಾತ್ರ ಕಲಿಸುತ್ತಿದ್ದ 'ಕೂಲಿಮಠ'ದ ಮಾದರಿಯ ಸಾಂಪ್ರದಾಯಿಕ ಶಿಕ್ಷಣವೇ. ಸಂಸ್ಥಾನದ ರೆಸಿಡೆಂಟನಾಗಿದ್ದ ಮೇಜರ್ ಜನರಲ್ ಫ್ರೇಸರ್ ನೀಡಿದ ಸಲಹೆಯಂತೆ ೧೮೩೩ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಮೈಸೂರು ನಗರದಲ್ಲಿ ಇಂಗ್ಲಿಷ್ ಶಿಕ್ಷಣಪದ್ಧತಿಯ 'ರಾಜಾಸ್ ಸ್ಕೂಲ್' ಅನ್ನು ಮೊತ್ತಮೊದಲಿಗೆ ಆರಂಭಿಸಿದರು. ಇಲ್ಲಿ ಇಂಗ್ಲಿಷ್, ಗಣಿತ, ಇತಿಹಾಸ ಮತ್ತು ಭೂಪಟ ಲೇಖನ ಮುಂತಾದವನ್ನು ಬೋಧಿಸಲಾಗುತ್ತಿತ್ತು. (ಇದಕ್ಕೂ ಒಂದು ವರ್ಷ ಮೊದಲಿಗೆ ಬೆಂಗಳೂರಿನ ಕೋಟೆ ಪ್ರದೇಶದಲ್ಲಿ 'Ordinance School' ಎಂಬ ಹೆಸರಿನ ಶಾಲೆಯೊಂದು ಆರಂಭವಾಯಿತೆಂಬ ಮಾಹಿತಿ ಇದೆಯಾದರೂ ಇದರ ಸ್ವರೂಪವೇನೆಂಬುದು ಸ್ಪಷ್ಟವಾಗಿಲ್ಲ.) ಆದರೆ ಅಪರಿಚಿತವಾದ ಶಿಕ್ಷಣಪದ್ಧತಿಯ ಬಗ್ಗೆ ಜನ ಸಾಮಾನ್ಯರಲ್ಲಿದ್ದ ಭೀತಿಯಿಂದ ಹೆಚ್ಚು ಜನ ವಿದ್ಯಾರ್ಥಿಗಳು ಸೇರದುದರಿಂದ ಹಾಗೂ ಯೋಗ್ಯರಾದ ಬೋಧಕರ ಕೊರತೆಯಿಂದಾಗಿ ಈ ಶಾಲೆ ನಿರೀಕ್ಷಿಸಿದಷ್ಟು ಉತ್ತಮರೀತಿಯಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗಲಿಲ್ಲ. ಹಾಗಾಗಿ ಆಡಳಿತವನ್ನು ಉತ್ತಮಗೊಳಿಸುವ ದೃಷ್ಟಿಯಿಂದ ಮಹಾರಾಜರು ಈ ಶಾಲೆಯನ್ನು ೧೮೪೦ರಲ್ಲಿ ವೆಸ್ಲಿಯನ್ ಮಿಷನರಿಗಳ ಕೈಗೆ ಹಸ್ತಾಂತರಿಸಿದರಾದರೂ ಏನೂ ಪ್ರಯೋಜನವಾಗದೇ ಅವರು ೧೮೫೦ರಲ್ಲಿ ಮತ್ತೆ ಶಾಲೆಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರು. ಮುಂದೆ ೧೮೬೨ ರಲ್ಲಿ ಡನ್ನಿಂಗ್ ಎಂಬಾತ ಈ ಶಾಲೆಯ ಮುಖ್ಯೋಪಾಧ್ಯಾಯನಾಗುವವರೆಗೆ ಈ ಶಾಲೆ ಹೇಳಿಕೊಳ್ಳುವಂತಹ ಸಾಧನೆಯನ್ನೇನೂ ಮಾಡಿರಲಿಲ್ಲ.

೧೮೫೭ರಲ್ಲಿ ವಿದ್ಯಾಭ್ಯಾಸಕ್ಕೆಂದೇ ಪ್ರತ್ಯೇಕವಾದ ಒಂದು ಇಲಾಖೆ ಆರಂಭವಾಗುವ ವರೆಗೆ ಇಡಿಯ ಸಂಸ್ಥಾನದಲ್ಲಿ ಅಸ್ತಿತ್ವದಲ್ಲಿದ್ದ ಒಟ್ಟು ಶಾಲೆಗಳೆಂದರೆ:

ಬೆಂಗಳೂರಿನಲ್ಲಿ	-	೧೫
ಮೈಸೂರಿನಲ್ಲಿ	-	೦೩
ತುಮಕೂರಿನಲ್ಲಿ	-	೦೨
ಹಾಸನದಲ್ಲಿ	-	೦೧
ಶಿವಮೊಗ್ಗದಲ್ಲಿ	-	೦೧
ಗುಬ್ಬಿಯಲ್ಲಿ	-	೦೧
ಹೊಸಹಳ್ಳಿಯಲ್ಲಿ	-	೦೧
ಒಟ್ಟು	-	೨೪ [1]

1 A.C. Devegowda & Parameshwaran T.R., **History of Education in Mysore**. P - 42, 43. 1985.

ಇವುಗಳಲ್ಲಿ 'ರಾಜರಶಾಲೆ' ಒಂದನ್ನು ಬಿಟ್ಟರೆ ಉಳಿದವೆಲ್ಲ ಖಾಸಗಿ ಆಡಳಿತದ ಮಿಷನರಿ ಸಂಸ್ಥೆಗಳ ಮಾಲಿಕತ್ವದಲ್ಲಿದ್ದರೂ ಸರ್ಕಾರದ ಅನುದಾನವನ್ನು ಪಡೆಯುತ್ತಿದ್ದ ಸಂಸ್ಥೆಗಳು.

ಈ ಮಧ್ಯೆ ಈಸ್ಟ್ ಇಂಡಿಯಾ ಕಂಪನಿ ತನ್ನ ಅಧಿಪತ್ಯದಲ್ಲಿದ್ದ ಪ್ರದೇಶಗಳಲ್ಲಿ ವಿದ್ಯಾಭ್ಯಾಸದ ಪದ್ಧತಿಯನ್ನು ಹೆಚ್ಚು ವ್ಯವಸ್ಥಿತಗೊಳಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿತ್ತು. ೧೮೫೪ರಲ್ಲಿ ಚಾರ್ಲ್ಸ್‌ವುಡ್ ಎಂಬಾತ ನೀಡಿದ ವರದಿಯ (Despatch) ಶಿಫಾರಸ್ಸಿನಂತೆ ದೇಶದ ಅನೇಕ ಪ್ರಾಂತ್ಯಗಳಲ್ಲಿ ಶಿಕ್ಷಣ ಇಲಾಖೆಗಳು ಆರಂಭವಾದವಲ್ಲದೆ ಕಲ್ಕತ್ತಾ, ಮದ್ರಾಸ್ ಹಾಗೂ ಮುಂಬಯಿಗಳಲ್ಲಿ ವಿಶ್ವವಿದ್ಯಾನಿಲಯಗಳು ಆರಂಭವಾದವು.

ಮೈಸೂರು ಸಂಸ್ಥಾನದಲ್ಲಿ:

ಚಾರ್ಲ್ಸ್‌ವುಡ್‌ರ ವರದಿಯನ್ನು ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಹೇಗೆ ಜಾರಿಗೊಳಿಸಬೇಕು ಎಂಬುದನ್ನು ವಿವರಿಸಲು ೧೮೫೬ರಲ್ಲಿ ಆಗಿನ ಜುಡಿಷಿಯಲ್ ಕಮೀಷನರ್ ಆಗಿದ್ದ ಡೊವೊರೆ (Devereux) ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ.[1] ಈ ವರದಿಯ ಮುಖ್ಯಾಂಶಗಳೆಂದರೆ:

೧. ನಂದಿದುರ್ಗ, ನಗರ, ಅಷ್ಟಗ್ರಾಮ ಹಾಗೂ ಚಿತ್ರದುರ್ಗ ಡಿವಿಷನ್‌ಗಳಲ್ಲಿ ತಲಾ ಒಂದರಂತೆ ಒಟ್ಟು ನಾಲ್ಕು ಆಂಗ್ಲೋ-ವರ್ನಾಕ್ಯುಲರ್ ಶಾಲೆಗಳನ್ನು ಆರಂಭಿಸಬೇಕು.

೨. ಪ್ರತಿ ತಾಲ್ಲೂಕಿನಲ್ಲಿ ಒಂದೊಂದರಂತೆ ೮೦ ದೇಶಭಾಷಾ (ವರ್ನಾಕ್ಯುಲರ್) ಶಾಲೆಗಳಿರಬೇಕು. ತಮಗೆ ಶಾಲೆಯ ಅವಶ್ಯಕತೆ ಇದೆ ಎಂಬ ಅರ್ಜಿ ಸಲ್ಲಿಸಿದ ತಾಲ್ಲೂಕುಗಳಲ್ಲಿ ಮಾತ್ರ ಈ ಶಾಲೆಗಳನ್ನು ಸ್ಥಾಪಿಸಬೇಕು.

೩. ಮಲೆನಾಡು ಪ್ರದೇಶಕ್ಕೆ ಒಂದು ಹಾಗೂ ಮೈದಾನ ಪ್ರದೇಶಕ್ಕೆ ಒಂದರಂತೆ ಒಟ್ಟು ಎರಡು ನಾರ್ಮಲ್ (ಶಿಕ್ಷಕರ ತರಬೇತಿ) ಶಾಲೆಗಳಿರಬೇಕು.

೪. ಒಂದು ಸೆಂಟ್ರಲ್ ಕಾಲೇಜನ್ನು ಸ್ಥಾಪಿಸಬೇಕು.

೫. ಇಲಾಖೆಯಲ್ಲಿ ಇರಬೇಕಾದ ಹುದ್ದೆಗಳು:

ನಿರ್ದೇಶಕ - ಒಂದು ಹುದ್ದೆ,
ಪರಿವೀಕ್ಷಣಾಧಿಕಾರಿ - ಇಬ್ಬರು,
ಸಹಾಯಕ ಪರಿವೀಕ್ಷಕ - ನಾಲ್ವರು,
ಉಪ ಸಹಾಯಕ ಪರಿವೀಕ್ಷಕ - ೨೦ ಮಂದಿ.

---

1 K.S.A., Ed. 1 of 1856 Sl. No. 1 ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸದ ಇತಿಹಾಸವನ್ನು ಕುರಿತು ಪ್ರಸ್ತಾಪಿಸುವಾಗ ಹ್ಯಾಲಿಫಾಕ್ಸ್ ಪತ್ರ ಅಥವಾ ವುಡ್‌ರ ಪತ್ರವನ್ನು ಮಾತ್ರ ಉಲ್ಲೇಖಿಸುವುದು ವಾಡಿಕೆ. ಆದರೆ ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿದ್ದ ಜಾನ್ ಗ್ಯಾರೆಟ್‌ರು ೧೮೫೩ರಲ್ಲಿಯೇ ಆಗಿನ ಸ್ಕೂಲ್ ಕಮೀಷನ್‌ನ ಕಾರ್ಯದರ್ಶಿಯಾಗಿದ್ದ ಸಿ.ಕೃಷ್ಣಮನಾಯ್ಡು ಅವರಿಗೆ ಇಂತಹುದೇ ಒಂದು ವಿಸ್ತೃತವಾದ ವರದಿಯನ್ನು ಸಲ್ಲಿಸಿರುವುದನ್ನು ಪರಿಗಣಿಸದಿರುವುದು ಆಶ್ಚರ್ಯಕರ. ಇದರ ಪ್ರತಿಯೊಂದು ರಾಜ್ಯಪತ್ರಾಗಾರದಲ್ಲಿದೆ. {Ed. 1 of 1853 (1-13)}

೬. ಈಗ ಕನ್ನಡ ಶಾಲೆಯ ಮಾಸ್ತರರಿಗೆ ಕೊಡುತ್ತಿರುವ ಸಂಬಳ ೫ ರಿಂದ ೯ ರೂ. ಅದನ್ನು ಕ್ರಮವಾಗಿ ೧೫, ೨೦ ಹಾಗೂ ೨೫ ರೂ.ಗಳಿಗೆ ಏರಿಸಬೇಕು. ಆದರೆ ಇವರು ನಾರ್ಮಲ್ ಶಾಲೆಗಳಲ್ಲಿ ಕಲಿತವರಾಗಿರಬೇಕು.

೭. ಈ ಶಾಲೆಗಳಲ್ಲಿ ಫೀಸನ್ನು ತೆಗೆದುಕೊಳ್ಳಬೇಕೇ ಬೇಡವೇ ಎಂಬ ವಿಷಯದ ಬಗ್ಗೆ ಜಿಜ್ಞಾಸೆ ಇದೆಯಾದರೂ ಅಂತಿಮ ತೀರ್ಮಾನವಿಲ್ಲ. ತೆಗೆದುಕೊಂಡರೆ ಒಳ್ಳೆಯದು ಎನ್ನುವ ಭಾವನೆ ಇದೆ.

ಬ್ರಿಟಿಷ್ ಅಧಿಪತ್ಯವು ಡೆವೊರೆ ವರದಿಯನ್ನು ಕೆಲವು ಸೂಕ್ತ ಬದಲಾವಣೆಗಳೊಂದಿಗೆ ಜಾರಿಗೆ ತರಬಹುದು ಎಂಬ ಅನುಮತಿಯನ್ನು ಮೈಸೂರು ಸರ್ಕಾರಕ್ಕೆ ನೀಡಿತು. ಅದರಂತೆ ೧೮೫೭ರಲ್ಲಿ ವಿದ್ಯಾ ಭ್ಯಾಸದ ಇಲಾಖೆ ಆರಂಭವಾಯಿತು. ಕ್ಯಾಪ್ಟನ್ ಸ್ಟೀಫನ್ಸ್ (೧೮೫೭-೧೮೫೯), ಮೇಜರ್ ಬ್ರೂಕ್‌ಮನ್ (೧೮೫೯-೧೮೬೦) ಹಾಗೂ ಜೆ. ಗ್ಯಾರೆಟ್ (೧೮೬೦-೧೮೭೩) ಇವರು ರೈಸ್ ಪೂರ್ವದ ಇಲಾಖೆಯ ನಿರ್ದೇಶಕರುಗಳು.

ಡೆವೊರೆ ವರದಿಯ ಅನುಷ್ಠಾನದ ಕಾರಣದಿಂದಾಗಿ ಸಂಸ್ಥಾನದಲ್ಲಿದ್ದ ವಿದ್ಯಾಭ್ಯಾಸದ ಚಿತ್ರಣವನ್ನು ಕೆಳಗಿನ ಕೋಷ್ಟಕ ನೀಡುತ್ತದೆ.[1]

	ಸರ್ಕಾರಿ		ಅನುದಾನಿತ		ಒಟ್ಟು	
ವರ್ಷ	ಶಾಲೆ	ವಿದ್ಯಾರ್ಥಿ ಸಂಖ್ಯೆ	ಶಾಲೆ	ವಿದ್ಯಾರ್ಥಿ ಸಂಖ್ಯೆ	ಶಾಲೆ	ವಿದ್ಯಾರ್ಥಿ ಸಂಖ್ಯೆ
೧೮೫೯-೬೦	-	೬೨೨	-	೩೮೫	-	೧೦೦೭
೧೮೬೦-೬೧	-	೧೧೬೨	೫	೪೯೯	೫	೧೬೬೧
೧೮೬೧-೬೨	೮	೬೧೬	೫	೬೪೨	೧೩	೧೨೫೮
೧೮೬೨-೬೩	೧೩	೯೯೦	೧೪	೧೩೮೩	೨೨	೨೩೭೩

(ಮೊದಲ ಎರಡು ವರ್ಷಗಳ ಅಂಕಿ ಅಂಶಗಳಲ್ಲಿ ಕೊಡಗಿನ ವಿವರಗಳೂ ಸೇರಿವೆ)

ಡೆವೊರೆ ವರದಿಯ ಅನುಷ್ಠಾನದಿಂದಾಗಿ ಸಂಸ್ಥಾನದಲ್ಲಿ ಸ್ವಲ್ಪಮಟ್ಟಿಗೆ ವಿದ್ಯಾಭ್ಯಾಸ ದಲ್ಲಿ ಪ್ರಗತಿಯುಂಟಾಯಿತಾದರೂ ಸಾಕಷ್ಟು ಕಷ್ಟಗಳೂ ತಲೆದೋರಿದವು. ಅವುಗಳಲ್ಲಿ ಪ್ರಮುಖವಾದುದೆಂದರೆ:

೧. ಒಟ್ಟು ಸಂಸ್ಥಾನದ ಎಲ್ಲ ಶಾಲೆಗಳಲ್ಲಿ ಇದ್ದ ವಿದ್ಯಾರ್ಥಿಗಳ ಸರಿಯಾದ ವರ್ಗೀಕರಣ ಆಗಿರಲಿಲ್ಲ.

೨. ಏಕಪ್ರಕಾರದ ಪಠ್ಯಪುಸ್ತಕಗಳ ಪೂರೈಕೆ ಇರಲಿಲ್ಲ.

೩. ಸಾಂಪ್ರದಾಯಿಕ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಬೋಧನೆ ಚೆನ್ನಾಗಿತ್ತಾದರೂ ಫಲಿತಾಂಶ ನಿರೀಕ್ಷಿಸಿದ ಮಟ್ಟವನ್ನು ತಲುಪಿರಲಿಲ್ಲ.

---

1 ARPI, 1872–73, P-22.

೪. ಬೆಂಗಳೂರನ್ನು ಬಿಟ್ಟರೆ ಉಳಿದೆಲ್ಲ ಕಡೆಗಳಲ್ಲಿ ಹೊಸಬಗೆಯ ಶಾಲೆಗಳ ಬಗ್ಗೆ, ಮುಸಲ್ಮಾನರಿಗೆ ಹೋಲಿಸಿದರೆ ಹಿಂದೂಗಳ ಪ್ರತಿಕ್ರಿಯೆ ನೀರಸವಾಗಿತ್ತು.

೫. ೧೮೬೧ರಲ್ಲಿ ಆರಂಭವಾದ ನಾರ್ಮಲ್ ಶಾಲೆಗಳಲ್ಲಿ ತರಬೇತಾದವರ ಸಂಖ್ಯೆ ಬಹಳ ಕಡಿಮೆಯಿತ್ತು ಹಾಗೂ ಇವರು ಉನ್ನತ ಶಿಕ್ಷಣಮಟ್ಟದ ತರಗತಿಗಳಿಗೆ ಬೋಧಿಸುವಷ್ಟು ಶಕ್ತರಾಗಿರಲಿಲ್ಲ.

೬. ಶಾಲೆಗಳ ಉಪಾಧ್ಯಾಯರು ಸದಾ ಸಂಬಳವನ್ನು ಹೆಚ್ಚಿಸಲು ಮತ್ತು ಬೆಂಗಳೂರಿನ ಸಮೀಪದ ಸ್ಥಳಗಳಿಗೆ ತಮ್ಮನ್ನು ವರ್ಗಾಯಿಸಲು ಕೋರುತ್ತಿದ್ದರು.

೭. ಅನುದಾನಿತ ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡುವ ಯಾವ ವ್ಯವಸ್ಥೆಯೂ ಇರಲಿಲ್ಲ.

೮. ತೆಲುಗುಭಾಷಿಕರು ಹೆಚ್ಚಾಗಿದ್ದ ಪ್ರಾಂತ್ಯಗಳಲ್ಲಿ ಕನ್ನಡ ಶಾಲೆಗಳಿಗಿಂತ ಹೆಚ್ಚಾಗಿ ತೆಲುಗು ಶಾಲೆಗಳನ್ನು ಆರಂಭಿಸಬೇಕೆನ್ನುವ ಒತ್ತಾಯ ಸಾರ್ವಜನಿಕರಿಂದ ಬರತೊಡಗಿತು.

೯. ಪಠ್ಯಕ್ರಮ, ಸಂಬಳ ಮುಂತಾದವುಗಳ ಬಗ್ಗೆ ದೇಶೀಯ ಮಾದರಿಯ ಶಾಲೆಗಳಲ್ಲಿ ಅವರವೇ ಆದ ಸಮಸ್ಯೆಗಳಿದ್ದವು.[1]

ಇಂತಹ ಪರಿಸ್ಥಿತಿಯಲ್ಲಿ ರೈಸರು ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಫೆಬ್ರವರಿ ೨೯, ೧೮೬೦ರಂದು ನೇಮಕಗೊಂಡರು.

ಉಪಾಧ್ಯಾಯನಾಗಿ :

೧೮೬೦ರಲ್ಲಿ ರೈಸ್ ಬೆಂಗಳೂರು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಅಧಿಕಾರ ಸ್ವೀಕರಿಸಿದಾಗ ಶಾಲೆಯಲ್ಲಿ ಸುಮಾರು ಇನ್ನೂರು ಮಂದಿ ವಿದ್ಯಾರ್ಥಿಗಳು ಮತ್ತು ಆರುಜನ ಸಹ ಅಧ್ಯಾಪಕರಿದ್ದರು.

ಉತ್ತಮ ಶಿಕ್ಷಣ ಸೌಲಭ್ಯವಿದ್ದುದರಿಂದ ಆ ಶಾಲೆಯ ಕಡೆಗೆ ಸಹಜವಾಗಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಆಕರ್ಷಿತರಾದರು. ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಂತೆ ಶಾಲೆಯ ಕಟ್ಟಡವನ್ನು ವಿಸ್ತರಿಸಬೇಕಾದ ಅವಶ್ಯಕತೆಯುಂಟಾಯಿತು. ಎತ್ತರವಾದ ಗಡಿಯಾರದ ಗೋಪುರ, ವಿಶಾಲವಾದ ಕೊಠಡಿಗಳನ್ನು ಒಳಗೊಂಡ ಸುಸಜ್ಜಿತವಾದ ಕಟ್ಟಡ ೧೮೬೦ರಲ್ಲಿ ರೈಸರ ಮಾರ್ಗದರ್ಶನದಲ್ಲಿ ರೂಪುಗೊಂಡಿತು. ಗಾಥಿಕ್ ಶೈಲಿಯಲ್ಲಿ ನಿರ್ಮಿತವಾದ ಈ ಕಟ್ಟಡ ಅಂದಿನಿಂದ ಇಂದಿನವರೆಗೆ ನೋಡುಗರನ್ನು ಆಕರ್ಷಿಸುತ್ತಿದೆ. ಮದ್ರಾಸಿನ ಗೌರ್ನರ್ ಆಗಿದ್ದ ಲಾರ್ಡ್ ನೇಪಿಯರ್ ಬಿಷಪ್ ಜೆಲ್‌ರೊಂದಿಗೆ ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಎಚ್.ಡಬ್ಲ್ಯೂ. ಲಾಂಗ್‌ಫೆಲೋ ಕವಿಯ Excelsior ಕವನವನ್ನು ಯಾರಾದರೂ ಆಶುವಾಗಿ ಕನ್ನಡಕ್ಕೆ ಭಾಷಾಂತರ ಮಾಡಬಲ್ಲಿರಾ ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗ ಪೂರ್ಣಯ್ಯ ಎಂಬ ವಿದ್ಯಾರ್ಥಿ ಕಷ್ಟಸಾಧ್ಯವಾದ ಈ ಕಾರ್ಯವನ್ನು ಮಾಡಿ ಜಯಿಸಿದನಂತೆ.[2]

ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದವರನ್ನು ಗೌರವಿಸುವ 'ಪ್ರೈಸ್ ಡೇ' ಸಮಾರಂಭ ಸಾರ್ವಜನಿಕರನ್ನು ವಿಶೇಷವಾಗಿ ಆಕರ್ಷಿಸುತ್ತಿತ್ತು. ೧೮೬೦ನೇ ವರ್ಷದ ಸಮಾರಂಭಕ್ಕೆ ಆಗಿನ

1 A.C. Devegowda & Parameshwaran T.R., ಪೂರ್ವೋಕ್ತ., ಪು. ೫೨.

2 ಇವರೇ ಮುಂದೆ ಮೈಸೂರು ಸಂಸ್ಥಾನದ ದಿವಾನರಾದ ಶ್ರೀ ಪಿ.ಎನ್. ಕೃಷ್ಣಮೂರ್ತಿ.

ಚೀಫ್ ಕಮೀಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್ ಆಗಮಿಸಿ ಅತ್ಯುತ್ತಮ ಇಂಗ್ಲಿಷ್ ಪ್ರಬಂಧಕ್ಕೆ ನೂರು ರೂ.ಗಳ ವೈಯಕ್ತಿಕ ಬಹುಮಾನವನ್ನು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದ್ದರು. ಕಾವ್ಯ ಗಾಯನ, ನಾಟಕ ಪ್ರದರ್ಶನ, ಚರ್ಚಾ ತರಗತಿಗಳು ಮುಂತಾದ ಪಠ್ಯೇತರ ಚಟುವಟಿಕೆಗಳನ್ನು ನಡೆಸಲು ರೈಸ್ ಪ್ರಯತ್ನಿಸಿದರಾದರೂ ಅವರ ಯತ್ನ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಏಕೆಂದರೆ ಬೆಳಗಿನ ವೇಳೆಯಲ್ಲಿ ತರಗತಿಗಳು ಇರುತ್ತಿದ್ದುದರಿಂದ ಸಂಜೆಯ ವೇಳೆಯಲ್ಲಷ್ಟೇ ಈ ಕಾರ್ಯಕ್ರಮಗಳನ್ನು ನಡೆಸಬೇಕಿತ್ತು. ಆದರೆ ದೀಪದ ವ್ಯವಸ್ಥೆ ಇರಲಿಲ್ಲವಾದ್ದರಿಂದ ಸಂಜೆ ಸಭೆಯನ್ನು ನಡೆಸುವುದು ಅನೇಕ ವೇಳೆ ಸಾಧ್ಯವಾಗುತ್ತಿರಲಿಲ್ಲ.

ರೈಸರ ಮಾರ್ಗದರ್ಶನದಲ್ಲಿ ಸೆಂಟ್ರಲ್ ಹೈಸ್ಕೂಲ್ ಯಶಸ್ವಿಯಾಗಿ ಮುಂದುವರೆಯಿತು. ೧೮೬೩ ರಲ್ಲಿ ಈ ಶಾಲೆಯಲ್ಲಿ ಕಲಿತು, ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಬರೆದ ೧೧ ಜನರ ಮೊದಲ ತಂಡದಲ್ಲಿ ೭ ಮಂದಿ ಉತ್ತೀರ್ಣರಾದರು. ಇದರಿಂದ ಆವರೆಗೆ ಪರೀಕ್ಷೆ ಬರೆಯಲೆಂದು ವಿದ್ಯಾರ್ಥಿಗಳು ಮದ್ರಾಸಿಗೆ ಹೋಗಬೇಕಾಗಿದ್ದ ತೊಂದರೆ ತಪ್ಪಿ ಸೆಂಟ್ರಲ್ ಹೈಸ್ಕೂಲು ಒಂದು ಪರೀಕ್ಷಾ ಕೇಂದ್ರವಾಗಿ ಪರಿಗಣಿತವಾಯಿತು. ಇದೇ ಸಂದರ್ಭದಲ್ಲಿ ಪಾಸಾಗುವ ಯೋಗ್ಯತೆಯಿದ್ದೂ ನಕಲು ಮಾಡಲು ಹೋಗಿ ಸಿಕ್ಕಿಬಿದ್ದ ಕಲಾ ವಿಭಾಗದ ವಿದ್ಯಾರ್ಥಿಯೊಬ್ಬನನ್ನು ಯಾವುದೇ ಕರುಣೆ ತೋರದೇ ರೈಸ್ ಹೊರ ಹಾಕಿದರು. ತಮ್ಮ ಶಾಲೆಯ ವಿದ್ಯಾರ್ಥಿಯೊಬ್ಬ ಇಂತಹ ಅಕ್ರಮಕ್ಕೆ ಕೈಹಾಕಿದ್ದು ಅವರಲ್ಲಿ ನಿರಾಸೆ, ಬೇಸರಗಳನ್ನು ಮೂಡಿಸಿತಾದರೂ ಶಾಲೆಯ ಶಿಸ್ತನ್ನು ಕಾಯ್ದುಕೊಳ್ಳಲೆಂದು ಈ ಕಠಿಣ ನಿರ್ಧಾರವನ್ನು ಕೈಗೊಳ್ಳಲು ಅವರು ಹಿಂಜರಿಯಲಿಲ್ಲ.

ಶಾಲೆಯ ಸರ್ವಾಂಗೀಣ ಅಭಿವೃದ್ಧಿ ರೈಸರ ಆಶಯವಾಗಿತ್ತು. ತಾವು ಸ್ವತಃ ವಿಜ್ಞಾನವನ್ನು ಅಭ್ಯಾಸ ಮಾಡಿರದಿದ್ದರೂ ತಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಅದರ ಅವಶ್ಯಕತೆ ಇದೆಯೆಂಬುದನ್ನು ಅವರು ಮರೆತಿರಲಿಲ್ಲ. ವೈಜ್ಞಾನಿಕ ವಿಷಯಗಳ ಅಧ್ಯಯನದಲ್ಲಿ ವಿಶೇಷ ಆಸಕ್ತಿಯಿದ್ದ ಕಮಿಷನರ್ ಮಾರ್ಕ್ ಕಬ್ಬನ್ ಸೆಂಟ್ರಲ್ ಹೈಸ್ಕೂಲಿಗೆ ವೈಜ್ಞಾನಿಕ ಉಪಕರಣಗಳ ದೊಡ್ಡ ಕೊಡುಗೆಯೊಂದನ್ನು ನೀಡಿದ್ದರು. ಅದನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದು ರೈಸರಿಂದಾಗಲೀ ಅಥವಾ ಅವರ ಸಹ ಅಧ್ಯಾಪಕರಿಂದಾಗಲೀ ಸಾಧ್ಯವಾಗಿರಲಿಲ್ಲ. ಏಕೆಂದರೆ ಅವರಾರೂ ವಿಜ್ಞಾನವನ್ನು ವಿಶೇಷವಾಗಿ ಅಧ್ಯಯನ ಮಾಡಿದವರಲ್ಲ. ತಮ್ಮ ಈ ಅಸಾಮರ್ಥ್ಯದಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂಬ ಬೇಸರ ರೈಸರ ಮನದಲ್ಲಿತ್ತೆಂದು ತೋರುತ್ತದೆ. ಆದ್ದರಿಂದಲೇ ೧೮೬೫ರಲ್ಲಿ ಶಾಲಾ ಪರಿವೀಕ್ಷಣಾಧಿಕಾರಿಯಾಗಿ ತಮಗೆ ಬಡ್ತಿ ದೊರೆತಾಗ ತಮ್ಮ ಸ್ಥಾನವನ್ನು ತುಂಬಲು ಆಕ್ಸ್‌ಫರ್ಡ್ ಅಥವಾ ಕೇಂಬ್ರಿಡ್ಜಿನಲ್ಲಿ ಕಲಿತ ಒಬ್ಬ ಸಮರ್ಥನಾದ ಅಧ್ಯಾಪಕರನ್ನು ಕಳುಹಿಸಿ ಕೊಡಬೇಕೆಂದು ಸರ್ಕಾರವನ್ನು ಕೋರಿದರು.[1] ಸಕಾಲದಲ್ಲಿ ಅಂತಹ ಅರ್ಹ ಅಧ್ಯಾಪಕ ದೊರೆಯದಿದ್ದಾಗ ಸುಮಾರು ಒಂದು ವರ್ಷ ಕಾಲ ತಮ್ಮ ಬಡ್ತಿಯನ್ನು ಮುಂದೂಡಲೂ ಅವರು ಹಿಂದೆ ಮುಂದೆ ನೋಡಲಿಲ್ಲ. ರೈಸರ ಅಪೇಕ್ಷೆಯಂತೆಯೇ ಕೇಂಬ್ರಿಡ್ಜಿನಲ್ಲಿ ವಿದ್ಯಾಭ್ಯಾಸ ಮಾಡಿದ ವಾಟರ್ಸ್ ಎಂಬುವರು ಸೆಂಟ್ರಲ್ ಹೈಸ್ಕೂಲಿನ ಮುಂದಿನ ಪ್ರಾಂಶುಪಾಲರಾದರು.

1 K.S.A., Ed. 1 of 1874 dated 14 May 1875.

ಶಾಲಾ ಪರಿವೀಕ್ಷಣಾಧಿಕಾರಿಯಾಗಿ:

ಹ್ಯಾಲಿಫ್ಯಾಕ್ಸ್ ಮತ್ತು ಡೆವೊರೆ ವರದಿಗಳ ಆಧಾರದ ಮೇಲೆ ಇಬ್ಬರು ಶಾಲಾ ಪರಿವೀಕ್ಷಣಾಧಿಕಾರಿಗಳನ್ನು ನೇಮಿಸಬೇಕಿತ್ತಾದರೂ ಅವರ ನೇಮಕದ ಬಗ್ಗೆ ಖಚಿತವಾದ ಮಾಹಿತಿ ಲಭ್ಯವಿಲ್ಲ. ೧೮೫೭ ರಿಂದ ೧೮೬೭ರ ವರೆಗಂತೂ ಇಡಿಯ ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರಾಂತ್ಯಗಳ ಎಲ್ಲಾ ಶಾಲೆಗಳು ಒಬ್ಬನೇ ಶಾಲಾಪರಿವೀಕ್ಷಣಾಧಿಕಾರಿಯ ಆಡಳಿತವ್ಯಾಪ್ತಿಗೆ ಒಳಪಟ್ಟಿದ್ದವು. ವರ್ಷದಲ್ಲಿ ಮೂರು ಬಾರಿ ಪ್ರತಿ ಶಾಲೆಗೂ ಭೇಟಿ ನೀಡಿ ಶಾಲೆಯ ಗುಣಮಟ್ಟ, ವಿದ್ಯಾರ್ಥಿಗಳ ಹಾಜರಾತಿ, ಬೋಧನೆಯ ಗುಣಮಟ್ಟ ಮುಂತಾದವುಗಳನ್ನು ತಪಾಸಿಸುವುದು, ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಏರ್ಪಡಿಸಿ ತೇರ್ಗಡೆಯಾದವರನ್ನು ಮುಂದಿನ ತರಗತಿಗಳಿಗೆ ಹೋಗಲು ಅನುಮತಿ ನೀಡುವುದು, ಅಧ್ಯಾಪಕರ ನೇಮಕ, ಶಾಲೆಗೆ ಅನುದಾನ ನೀಡಿಕೆ ಮುಂತಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುವುದು ಶಾಲಾಪರಿವೀಕ್ಷಣಾಧಿಕಾರಿಯ ಜವಾಬ್ದಾರಿಯಾಗಿತ್ತು.

ಅಪಾರ ದೇಹಶ್ರಮದ, ಸತತ ಸಂಚಾರದ ಈ ಜವಾಬ್ದಾರಿಯನ್ನು ಲೂಯಿ ರೈಸರು ಸಂತೋಷದಿಂದಲೇ ವಹಿಸಿಕೊಂಡರು. ಈ ಬಗ್ಗೆ ಅವರು

> *"It was much rejoiced at being released in 1866 from the School work, which was felling on my health. As I was the only Inspector, I had the range of the whole province as well as Coorg, leading an open air life with a freedom greatly to my liking"* ಎಂದು ಹೇಳಿಕೊಂಡಿದ್ದಾರೆ.[1]

ಹೋಬಳಿ ಸ್ಕೂಲ್ ವರದಿ:

ರೈಸರು ಶಾಲಾ ಪರಿವೀಕ್ಷಣಾಧಿಕಾರಿಯಾಗಿದ್ದ ಸಮಯದಲ್ಲಿ, ಎಂದರೆ ೧೮೬೭-೬೮ನೇ ಸಾಲಿನಲ್ಲಿ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳೆರಡನ್ನೂ ಸೇರಿಸಿ ಕೇವಲ ೧೧೦ ಶಾಲೆಗಳಿದ್ದವು ಹಾಗೂ ಅದರಲ್ಲಿ ಒಟ್ಟು ೬೯೩೫ ಮಂದಿ ವಿದ್ಯಾರ್ಥಿಗಳು ವ್ಯಾಸಂಗವನ್ನು ನಡೆಸುತ್ತಿದ್ದರು. ಈ ಶಾಲೆಗಳು ಕೇವಲ ಪ್ರಮುಖವಾದ ಪಟ್ಟಣಗಳಲ್ಲಿ ಮಾತ್ರವೇ ಇದ್ದುದರಿಂದ ಗ್ರಾಮಾಂತರ ಪ್ರದೇಶದ ಜನರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಈ ಅಂಶ ಬ್ರಿಟಿಷ್ ಅಧಿಪತ್ಯದ ಗಮನಕ್ಕೂ ಬರುವಷ್ಟು ಗಹನವಾಗಿತ್ತು. ೧೮೬೮ರಲ್ಲಿ ಬ್ರಿಟಿಷ್ ಸರ್ಕಾರದ ವಿದೇಶ ವಿಭಾಗದ ಅಧೀನಕಾರ್ಯದರ್ಶಿಯಾಗಿದ್ದ ಲೀಪೋ ವೈನೆ ಮೈಸೂರು ಸರ್ಕಾರಕ್ಕೆ ಪತ್ರವೊಂದನ್ನು ಬರೆದು[2] 'ಮೈಸೂರು ಸಂಸ್ಥಾನದಲ್ಲಿ ಸರ್ಕಾರಿ ಆಡಳಿತದ ಹೆಣ್ಣುಮಕ್ಕಳ ಶಾಲೆಗಳು ಹಾಗೂ ಸಾರ್ವಜನಿಕರಿಗೆ ವಿದ್ಯಾಭ್ಯಾಸವನ್ನು

1 ಪೂರ್ವೋಕ್ತ., ಪು. 16.

2 No. 200, Dated 1st March 1868. ಈ ಪತ್ರ ನೋಡಲು ಸಿಕ್ಕಿಲ್ಲ. ಆದರೆ ಇಲಾಖೆಯ ೧೮೬೮-೬೯ರ ವರ್ಷದ ವರದಿಯಲ್ಲಿ ಇದರ ಉಲ್ಲೇಖವಿದೆ.

ನೀಡಲು ಅಗತ್ಯವಾದ ದೇಶಭಾಷಾ ಶಾಲೆಗಳು ಅಗತ್ಯವಾದಷ್ಟು ಸಂಖ್ಯೆಯಲ್ಲಿ ಇಲ್ಲವೆಂಬುದನ್ನು ಚಕ್ರಾಧಿಪತ್ಯ ಗಮನಿಸಿದೆ. ಈ ಬಗ್ಗೆ ಸ್ವಲ್ಪವೂ ತಡವಿಲ್ಲದೇ ಯೋಜನೆಯೊಂದನ್ನು ರೂಪಿಸುವುದು ಅತಿ ಮುಖ್ಯ' ಎಂದು ಆದೇಶಿಸಿದ. ಈ ಆದೇಶವನ್ನು ತೀವ್ರವಾಗಿ ಪರಿಗಣಿಸಿದ ಸಂಸ್ಥಾನದ ಸರ್ಕಾರ ತತ್ಕಾಲೀನ ಶಿಕ್ಷಣವ್ಯವಸ್ಥೆಯ ಲೋಪ ದೋಷಗಳನ್ನು ಅಭ್ಯಸಿಸಿ ಅದನ್ನು ನಿವಾರಿಸಲು ಹಾಗೂ ಬ್ರಿಟಿಷ್ ಚಕ್ರಾಧಿಪತ್ಯದ ಸೂಚನೆಗೆ ಸರಿಹೊಂದುವಂತಹ ಹೊಸ ವ್ಯವಸ್ಥೆಯೊಂದನ್ನು ಜಾರಿಗೆ ತರಲು ಅಗತ್ಯವಾದ ವರದಿಯನ್ನು ಸಲ್ಲಿಸುವಂತೆ ವಿದ್ಯಾಭ್ಯಾಸ ಇಲಾಖೆಯ ಪ್ರಭಾರಿ ನಿರ್ದೇಶಕರಾಗಿದ್ದ ರೈಸರಿಗೆ ಆದೇಶಿಸಿತು. ಇದರ ಫಲವೇ ಹೋಬಳಿ ಸ್ಕೂಲ್ ವರದಿ.[1] ಈ ವರದಿಯ ಮುಖ್ಯಾಂಶಗಳೆಂದರೆ:

೧. ಪ್ರಸ್ತುತ ಸರ್ಕಾರಿ ಮತ್ತು ಮಿಷನ್ ಶಾಲೆಗಳಲ್ಲಿ ಹುಡುಗಿಯರೂ ಸೇರಿ ಒಟ್ಟು ೬,೦೦೦ ವಿದ್ಯಾರ್ಥಿಗಳೂ, ದೇಶೀಯ ಶಾಲೆಗಳಲ್ಲಿ ೨೨,೦೦೦ ವಿದ್ಯಾರ್ಥಿಗಳೂ ಕಲಿಯುತ್ತಿದ್ದಾರೆ. ಒಟ್ಟಾರೆಯಾಗಿ ಈ ಸಂಖ್ಯೆ ೨೮,೦೦೦ ವಾಗುತ್ತದೆ.

೨. ಪುರುಷರ ಸದ್ಯದ ಜನಸಂಖ್ಯೆ ೨೦,೯೭,೩೧೮. ಇದರ ೧/೯ರಷ್ಟು ಜನ ಹುಡುಗರು, ಎಂದರೆ ೨,೩೩,೦೩೫ ಜನರು ಶಾಲೆಗೆ ಹೋಗುವ ವಯಸ್ಸಿನವರಾಗಿದ್ದಾರೆ. ಎಂದರೆ ಕನಿಷ್ಠ ಪಕ್ಷ ೨ ಲಕ್ಷ ಜನ ಹುಡುಗರಿಗೆ ವಿದ್ಯಾಭ್ಯಾಸದ ಸೌಲಭ್ಯ ದೊರೆಯುತ್ತಿಲ್ಲ.

೩. ಪ್ರಸ್ತುತ ವರದಿಯು
   ಅ. ಶಾಲೆಗಳ ಸ್ಥಾಪನೆ,
   ಆ. ಪರಿವೀಕ್ಷಣೆ ಹಾಗೂ
   ಇ. ಅಧ್ಯಾಪಕರ ತರಬೇತಿ ಎಂಬ ಮೂರು ಅಂಶಗಳನ್ನು ಹೊಂದಿದೆ.

೪. ಶಾಲೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಬ್ರಿಟಿಷ್ ಅಧಿಪತ್ಯವು ಸೂಚಿಸಿರುವ 'ಹಲ್ಕಾಬಂದಾ' ಪದ್ಧತಿಯಲ್ಲಿ ೧೨ ಚದರ ಮೈಲಿಗಳಿಗೆ ಒಂದು ಶಾಲೆಯನ್ನು ಸ್ಥಾಪಿಸಿರುವ ಬದಲಾಗಿ ತಾಲ್ಲೂಕಿನ ಉಪವಿಭಾಗದ ಹೋಬಳಿಗೆ ಒಂದು ಶಾಲೆಯನ್ನು ಸ್ಥಾಪಿಸಬಹುದು. ಸಂಸ್ಥಾನದಲ್ಲಿ ಒಟ್ಟು ೬೪೫ ಹೋಬಳಿಗಳಿದ್ದು ಅವುಗಳ ಸರಾಸರಿ ವಿಸ್ತೀರ್ಣ ೪೧ ಚದರ ಮೈಲಿಗಳಾಗಿವೆ ಹಾಗೂ ಸುಮಾರು ೬,೦೪೦ ಜನರು ವಾಸಿಸುತ್ತಿದ್ದಾರೆ. ಪ್ರತಿ ಹೋಬಳಿ ಕೇಂದ್ರದಲ್ಲಿಯೂ ಒಂದೊಂದು ಶಾಲೆಯನ್ನು ಸ್ಥಾಪಿಸಿದರೆ ಆ ಹೋಬಳಿಯ ಅತ್ಯಂತ ದೂರದ ಹಳ್ಳಿಯೂ ನಾಲ್ಕೂವರೆ ಮೈಲಿಗಳಿಗಿಂತ ಹೆಚ್ಚು ದೂರದಲ್ಲಿರುವುದಿಲ್ಲ. ಹಾಗಾಗಿ ಮಕ್ಕಳು ಶಾಲೆಗೆ ಬರಲು ಕಷ್ಟವಾಗುವುದಿಲ್ಲ.

೫. ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ದೇಶೀಯ ಅಧ್ಯಾಪಕರುಗಳಲ್ಲಿ ಅತ್ಯಂತ ಬುದ್ಧಿವಂತರಾಗಿರುವ ಹಾಗೂ ಪ್ರಭಾವಶಾಲಿಗಳಾಗಿರುವವರನ್ನು ಆಯ್ದುಕೊಂಡು ಅವರಿಗೆ

1 ವರದಿಯ ಪೂರ್ಣಪಾಠ ಅನುಬಂಧ-1 ರಲ್ಲಿದೆ.

ತಿಂಗಳಿಗೆ ೭ ರೂ.ಗಳ ಸಂಬಳ ನೀಡಬಹುದು. ತಾಲ್ಲೂಕಿನ ಶಾಲೆಯ ಸಹೋಪಾಧ್ಯಾಯರ ಹುದ್ದೆಗೆ ಬಡ್ತಿಹೊಂದಿ ೧೨ ರೂ.ಗಳ ಸಂಬಳ ಪಡೆಯುವ ಅವಕಾಶವನ್ನು ಇವರಿಗೆ ಕಲ್ಪಿಸಬೇಕು.

೬. ಸರಾಸರಿ ೩೪೦೦ ಚದರ ಮೈಲಿಗೆ ಅಥವಾ ಪ್ರತಿಜಿಲ್ಲೆಗೆ ಒಬ್ಬರಂತೆ ಎಂಟು ಜನ ಉಪಸಹಾಯಕ ಪರಿವೀಕ್ಷಣಾಧಿಕಾರಿಗಳನ್ನು (Sub Deputy Inspectors) ನೇಮಿಸಬೇಕು. ತಿಂಗಳಿಗೆ ೪೦ ರೂ.ಗಳ ವೇತನ ಹಾಗೂ ದಿನಕ್ಕೆ ೮ ಆಣೆಗಳ ಪ್ರವಾಸಭತ್ಯೆಯನ್ನು ಪಡೆಯುವ ಇವರು ಪ್ರತಿಶಾಲೆಗೆ ವರ್ಷಕ್ಕೆ ೩ ಬಾರಿ ಭೇಟಿ ನೀಡಿ ವರದಿಯನ್ನು ಸಲ್ಲಿಸಬೇಕು.

೭. ಇಲ್ಲಿಯ ದೇಶೀಯ ಉಪಾಧ್ಯಾಯರು ಅಂಕಗಣಿತ ಹಾಗೂ ಭೂಗೋಳ ಶಾಸ್ತ್ರಗಳನ್ನು ಹೆಚ್ಚು ಕಲಿತವರಲ್ಲ ಹಾಗೂ ಬೋಧನಾ ಕಾರ್ಯವನ್ನು ಕ್ರಮಬದ್ಧವಾಗಿ ನಡೆಸುವುದನ್ನು ತಿಳಿದಿಲ್ಲ. ಹಾಗಾಗಿ ಅಧ್ಯಾಪಕರನ್ನು ತರಬೇತುಗೊಳಿಸುವ ಶಾಲೆಯೊಂದರ ಅಗತ್ಯವಿದೆ. ಪ್ರತಿ ಕಂದಾಯ ವಿಭಾಗಕ್ಕೆ ಒಬ್ಬರಂತೆ ಒಟ್ಟು ೩ ಮಂದಿ ಅಧ್ಯಾಪಕರನ್ನು ತಿಂಗಳಿಗೆ ೪೦ ರೂ.ಗಳ ಸಂಬಳದ ಮೇಲೆ ಈ ಶಾಲೆಗಳಿಗೆ ನೇಮಿಸಬೇಕು. ಅವರು ಅಗತ್ಯಕ್ಕೆ ತಕ್ಕಂತೆ ಒಂದೊಂದು ವರ್ಷ ಒಂದೊಂದು ಜಿಲ್ಲೆಯಲ್ಲಿ ಕೆಲಸ ಮಾಡಬೇಕು. ಈ ಶಾಲೆಗಳಲ್ಲಿ ತರಬೇತಿಯನ್ನು ಪಡೆಯಲು ಬರುವ ಅಧ್ಯಾಪಕರಿಗೆ ತಿಂಗಳಿಗೆ ೫ ರೂ.ಗಳ ನಿರ್ವಹಣೆ ಭತ್ಯೆ ಪಡೆಯುವರು.

೮. ಸದ್ಯಕ್ಕೆ ಬಾಡಿಗೆ ಇಲ್ಲದೆ ದೊರಕುವ ಅಥವಾ ಹಳ್ಳಿಗರಿಂದ ಉಚಿತವಾಗಿ ನೀಡಲ್ಪಟ್ಟ ಕಟ್ಟಡಗಳಲ್ಲಿ ಹೋಬಳಿ ಶಾಲೆಗಳನ್ನು ನಡೆಸಬಹುದು. ಈ ಯೋಜನೆಯು ಯಶಸ್ವಿಯಾಗಿ ನಡೆಯುವುದೆಂದು ಸಿದ್ಧವಾದ ಮೇಲೆ ಬೇರೆ ಕಟ್ಟಡಗಳನ್ನು ಕಟ್ಟಿಸಬಹುದು.

೯. ಕಪ್ಪು ಹಲಗೆ, ಸ್ಲೇಟು ಹಾಗೂ ಭೂಪಟಗಳು - ಇವಿಷ್ಟೇ ಶಾಲೆಯ ಪೀಠೋಪಕರಣಗಳು. ಪಠ್ಯಪುಸ್ತಕಗಳನ್ನು ಇಲಾಖೆಯೇ ಮುದ್ರಿಸಿ ಒದಗಿಸುವುದು.

೧೦. ಈ ಶಾಲೆಗಳಲ್ಲಿ ಪಾಠಪ್ರವಚನಗಳು ಸಂಪೂರ್ಣವಾಗಿ ಕನ್ನಡದಲ್ಲಿ ನಡೆಯಲಿದ್ದು ಅದು ಓದು, ಬರಹ ಹಾಗೂ ಅಂಕಗಣಿತ ಮತ್ತು ಭೂಗೋಳದ ಪ್ರಾಥಮಿಕ ಅಂಶಗಳನ್ನು ಒಳಗೊಂಡಿರುತ್ತದೆ.

೧೧. ಯಾರ ಸಂಬಂಧಿಕರು ವಿದ್ಯಾಭ್ಯಾಸದ ನಿಧಿಗೆ ದೇಣಿಗೆಯನ್ನು ನೀಡಿರುವುದಿಲ್ಲವೋ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಶಾಲಾಶುಲ್ಕವನ್ನು ವಿಧಿಸಲಾಗುತ್ತದೆ.

೧೨. ಈ ಶಾಲೆಗಳಿಗೆ ಸೇರಲು ಹುಡುಗರು ಹಾಗೂ ಹುಡುಗಿಯರು ಇಬ್ಬರಿಗೂ ಅವಕಾಶವಿದೆ.

೧೩. ಬೆಳಗಿನ ವೇಳೆಯಲ್ಲಿ ಶಾಲೆಗೆ ಬರಲು ಆಗದಿರುವವರಿಗಾಗಿ ರಾತ್ರಿ ಶಾಲೆಗಳನ್ನೂ ಏರ್ಪಡಿಸಬೇಕು. ಉಪಾಧ್ಯಾಯರ ಹೆಚ್ಚುವರಿ ಭತ್ಯೆಗಾಗಿ ಹಾಗೂ ದೀಪದ ಖರ್ಚಿಗೆಂದು ಮಾತ್ರ ಶುಲ್ಕವನ್ನು ವಿಧಿಸಬೇಕು.

೧೪. ಸ್ಥಳದ ಗಣ್ಯನಾಗರೀಕರು ಹಾಗೂ ಹಳ್ಳಿಯ ಅಧಿಕಾರಿಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಿ ಅದಕ್ಕೆ ಶಾಲೆಯ ಸಾಮಾನ್ಯ ಉಸ್ತುವಾರಿಯನ್ನು ವಹಿಸಬಹುದು. ಇದರಿಂದಾಗಿ ಶಾಲೆಗಳು ಹೆಚ್ಚು ಜನಪ್ರಿಯವಾಗುತ್ತವೆ.

ರೈಸರ ಈ ವರದಿ ಸರ್ಕಾರ - ಸಾರ್ವಜನಿಕರಿಬ್ಬರಿಂದಲೂ ಅಪಾರವಾದ ಮನ್ನಣೆಯನ್ನು ಗಳಿಸಿತು. ಬ್ರಿಟಿಷ್ ಅಧಿಪತ್ಯವು ಈ ಯೋಜನೆಯಲ್ಲಿ ಯಾವುದೇ ಬದಲಾವಣೆಯನ್ನು ಸೂಚಿಸದೇ ಸಮಗ್ರವಾಗಿ ಅದನ್ನು ಒಪ್ಪಿ ಕೂಡಲೇ ಜಾರಿಗೆ ತರುವಂತೆ ಆದೇಶಿಸಿತು.[1] ಸರ್ಕಾರವು ತಾಲ್ಲೂಕುಗಳ ಅಮಲ್ದಾರರುಗಳ ಮೂಲಕ ಈ ಬಗ್ಗೆ ಕರಪತ್ರಗಳನ್ನು ಹೊರಡಿಸಿ ಎಲ್ಲಾ ಗ್ರಾಮಸ್ಥರಿಗೆ ದೊರಕುವಂತೆ ಮಾಡಿತು.[2] ಸರ್ಕಾರಿ ಅಧಿಕಾರಿಗಳು ವೈಯಕ್ತಿಕವಾಗಿ ಆಸಕ್ತಿಯನ್ನು ತಳೆದು ವಿದ್ಯಾಭ್ಯಾಸದ ಮಹತ್ವವನ್ನು ಸಾಧ್ಯವಾದ ಕಡೆಗಳಲ್ಲೆಲ್ಲಾ ಪ್ರತಿಪಾದಿಸಲು ಆರಂಭಿಸಿದರು.[3]

ತಮ್ಮ ಮಕ್ಕಳಿಗೆ ಹೆಚ್ಚು ಓಡಾಟವಿಲ್ಲದೆ ಶಿಕ್ಷಣ ದೊರೆಯುವಂತಹ ಒಂದು ಪದ್ಧತಿ ಆರಂಭವಾಗು ತ್ತದೆನ್ನುವ ಸುದ್ದಿಯೇ ಜನಸಾಮಾನ್ಯರಿಗೆ ಬಹಳ ಸಂತೋಷವನ್ನು ತಂದಿತು. ತಮ್ಮ ಊರುಗಳಲ್ಲಿಯೂ ಇಂತಹುದೊಂದು ಶಾಲೆಯನ್ನು ಆರಂಭಿಸಿ ಎಂದು ಅನೇಕ ಹಳ್ಳಿಗಳ ಜನರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದರು. ಅದರ ಮಾದರಿಯೊಂದು ಹೀಗಿದೆ:

> *"We who are the residents of the following 13 villages, situated in the .... Hobli of the Talook desire to express the great joy (Mahaa santosha) with which we have all received the ishtihar stating that Govt. will establish schools in every hobli for the education of all classes. Had the Kavand issued such an order before, what great blessings should we already have enjoyed. Even now the Kavand has conferred such favour upon us, and no matter could be of greater importance, we undertake to*

1 ಬ್ರಿಟಿಷ್ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಸಿ.ಯು. ಅಚಿನ್‌ಸನ್‌ನು ಮೈಸೂರು ಕಮೀಷನ್‌ರಿಗೆ ಬರೆದ ಪತ್ರ : ಸಂ. ೮೭೧, ದಿನಾಂಕ ಮೇ ೧೯, ೧೮೬೮.

2 ಈ 'ಇಸ್ತಿಹಾರ್ ನಾಮಾ'ದ ಮಾದರಿಯೊಂದನ್ನು ಅನುಬಂಧ-೨ರಲ್ಲಿ ಕೊಟ್ಟಿದೆ.

3 ಉದಾಹರಣೆಗೆ ಮೈಸೂರು ಜಿಲ್ಲೆಯ ಪ್ರಭಾರಿ ಜಿಲ್ಲಾಧಿಕಾರಿಯಾಗಿದ್ದ ಎಲ್. ರಿಕೆಟ್ಸ್ ನೀಡಿರುವ ವರದಿಯ ಈ ಭಾಗವನ್ನು ನೋಡಿ:
"....since assuming charge of the district, I have sent detailed instructions to the Amildars, explaining to them fully the advantages attainable from the scheme. I have especially directed them to use their personal influence with the ryots, in furtherence of it. In addition to this, I have, during my visit in the district taken every opportunity to explain the object of the scheme to the people: I have reason to believe that the Amildars will, on the whole exert themselves to support it...." ARPI, 1868-69, p-135.

build a school house near to, and in the middle of these 13 villages, and earnestly pray that Govt. will apoint a Canarese master to instruct our children (79 signatures)." [1]

ಹಾಗೆಂದ ಮಾತ್ರಕ್ಕೆ ಸಂಸ್ಥಾನದ ಎಲ್ಲ ಗ್ರಾಮಸ್ಥರೂ ಈ ಯೋಜನೆಯ ಕಡೆಗೆ ಆಕರ್ಷಿತರೆಂದೇನೂ ಅರ್ಥವಲ್ಲ. 'ಓದು ಬರಹ ಕಲಿತ ಮನುಷ್ಯ ಹೊಲ ಉಳುವುದನ್ನು ನಿಲ್ಲಿಸುತ್ತಾನೆ' ಎಂಬುದೇ ಅವರಲ್ಲಿ ಬಹುಪಾಲು ಜನರ ಭಾವನೆಯಾಗಿತ್ತು. ಆದರೆ ಕಾಲಕಳೆದಂತೆ ಇಂತಹವರಲ್ಲೂ ವಿದ್ಯಾಭ್ಯಾಸದ ಬಗೆಗೆ ಆಸಕ್ತಿ ಮೂಡಿತು. ಹಳ್ಳಿಹಳ್ಳಿಗಳಲ್ಲಿ ಗ್ರಾಮಸ್ಥರು ಶಾಲಾಕಟ್ಟಡಗಳನ್ನು ತಾವಾಗಿ ನಿರ್ಮಿಸಿಕೊಡಲು ಆರಂಭಿಸಿದರು. ಕಡೆಕಡೆಗೆ "There were many more school houses completed and waiting the arrival of the master", "Applications for the establishment of schools are of almost daily occurrence" ಎಂಬಿತ್ಯಾದಿಯಾದ ಮಾತುಗಳು ವಾರ್ಷಿಕ ವರದಿಗಳಲ್ಲಿ ಕಾಣಿಸತೊಡಗಿದವು.

ಯೋಜನೆಯು ಮಂಜೂರಾದ ಮೊದಲ ವರ್ಷವೇ (೧೮೬೮-೬೯) ಇಡಿಯ ಸಂಸ್ಥಾನದಲ್ಲಿ ಒಟ್ಟು ೧೪೬ ಹೋಬಳಿ ಶಾಲೆಗಳು ಏಕಕಾಲಕ್ಕೆ ಆರಂಭವಾದವು.[2] ಮುಂದಿನ ೩೦ ವರ್ಷಗಳಲ್ಲಿ ಈ ಬಗೆಯ ಶಾಲೆಗಳು ಅಭಿವೃದ್ಧಿಗೊಂಡ ಬಗೆಯನ್ನು ಕೆಳಗಿನ ಕೋಷ್ಟಕ ವಿವರಿಸುತ್ತದೆ:

ಹೋಬಳಿ ಶಾಲೆಗಳ ಬೆಳವಣಿಗೆ:[3]

(೧೮೬೮-೬೯ ರಿಂದ ೧೮೯೯-೧೯೦೦ರವರೆಗೆ)

ವರ್ಷ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ		
		ಹುಡುಗರು	ಹುಡುಗಿಯರು	ಒಟ್ಟು
೧೮೬೮-೬೯	೧೪೬	ತಿಳಿದಿಲ್ಲ	ತಿಳಿದಿಲ್ಲ	ತಿಳಿದಿಲ್ಲ
೧೮೭೪-೭೫	೫೬೨	೧೪೮೮೮	೧೪೭	೧೫೦೩೫
೧೮೭೯-೮೦	೬೩೬	೧೮೩೯೦	೩೨೮	೧೮೭೧೮
೧೮೮೯-೯೦	೯೪೭	೩೦೭೮೫	೧೮೦೭	೩೨೫೯೨
೧೮೯೪-೯೫	೧೨೦೫	೩೮೦೦೬	೨೧೦೮	೪೦೩೧೪
೧೮೯೯-೧೯೦೦	೧೩೭೬	೪೦೫೨೭	೨೭೮೭	೪೩೩೧೪

1 ARPI, 1868-69, p-21.

2 ಕೋಲಾರ ಜಿಲ್ಲೆ - ೩೯, ಬೆಂಗಳೂರು - ೨೩, ತುಮಕೂರು - ೧೪, ಮೈಸೂರು - ೩೦, ಶಿವಮೊಗ್ಗ - ೧೫, ಹಾಸನ - ೧೬, ಕಡೂರು - ೧೧, ಚಿತ್ರದುರ್ಗ - ೦೮, ಒಟ್ಟು - ೧೪೬. (ಮೂಲ : ೧೮೬೮-೬೯ರ ಇಲಾಖಾ ವರದಿ, ಪು-೨೧).

3 A.C. **Devegowda** & Parameshwaran T.R., ಪೂರ್ವೋಕ್ತ., ಪು. ೬೬.

ಹೋಬಳಿ ಶಾಲೆಗಳಲ್ಲಿ ಒಂದರಿಂದ ಐದರವರೆಗೆ ಒಟ್ಟು ಐದು ತರಗತಿಗಳಿದ್ದವು. (ಆಶ್ಚರ್ಯವೆಂದರೆ ಅತ್ಯಂತ ಕೆಳಗಿನ ತರಗತಿಯನ್ನು ೫ನೇ ತರಗತಿ ಎಂದೂ, ಮೇಲಿನದನ್ನು ಒಂದನೇ ತರಗತಿ ಎಂದೂ ಕರೆಯಲಾಗುತ್ತಿದ್ದುದು!) ಐದನೇ ತರಗತಿಯಲ್ಲಿ ಅಕ್ಷರಗಳನ್ನು ಓದುವುದು, ಮರಳಿನಲ್ಲಿ ಕಾಗುಣಿತವನ್ನು ಬರೆಯುವುದರೊಂದಿಗೆ ಆರಂಭವಾಗುತ್ತಿದ್ದ ಕಲಿಕೆ, ಮೊದಲನೆ ತರಗತಿಯಲ್ಲಿ ಪದ್ಯಸಾರ, ವಾಗ್ವಿಧಾಯಿನಿ, ಅಮರಕೋಶ ಮುಂತಾದವುಗಳನ್ನು ಓದುವುದು, ಯೋಗಕ್ಷೇಮ ಕಾಗದಗಳನ್ನು, ಅರ್ಜಿಗಳನ್ನು ಬರೆಯುವುದು, ಭಿನ್ನರಾಶಿ, ಬಡ್ಡಿಲೆಕ್ಕ ಮುಂತಾದ ಮೇಲ್ಮಟ್ಟದ ಗಣಿತದ ಅಭ್ಯಾಸ ಮತ್ತು ಭೂಪಟಗಳನ್ನು ಓದುವುದು ಮುಂತಾದವುಗಳಲ್ಲಿ ಪರಿಣತಿಯನ್ನು ಪಡೆಯುವುದರೊಂದಿಗೆ ಮುಕ್ತಾಯವಾಗುತ್ತಿತ್ತು.[1]

ಹೋಬಳಿ ಶಾಲೆಗಳಲ್ಲಿ ಕಲಿಯುವುದು ವಿದ್ಯಾರ್ಥಿಗಳಿಗೆ ಹೊಸ ಅನುಭವವಾಗಿದ್ದಂತೆ ಅಧ್ಯಾಪಕರಿಗೆ ಕಲಿಸುವುದೂ ಒಂದು ಹೊಸ ಅನುಭವವೇ ಆಗಿತ್ತು. ಈವರೆಗೆ ಕೇವಲ ಬಾಯಿಪಾಠ, ಅಕ್ಷರ, ಕಾಗುಣಿತಗಳ ಬರವಣಿಗೆ ಹಾಗೂ ಬಾಯಿಲೆಕ್ಕ ಇಷ್ಟಕ್ಕೆ ಮಾತ್ರ ಪ್ರಾಥಮಿಕ ಶಾಲೆಗಳ ಅಧ್ಯಾಪನ ಸೀಮಿತವಾಗಿತ್ತು. ಪರಂಪರಾಗತವಾಗಿ ಅಧ್ಯಾಪನ ಕಾರ್ಯದಲ್ಲಿ ತೊಡಗಿದ್ದ ಬಹುತೇಕರಿಗೆ ಇದಕ್ಕಿಂತ ಭಿನ್ನವಾದ ಬೋಧನಾ ವಿಧಾನವೊಂದು ಇರಬಹುದು ಎಂಬ ಕಲ್ಪನೆಯೇ ಇರಲಿಲ್ಲ. ಹಾಗಾಗಿ 'ನಾರ್ಮಲ್ ಶಾಲೆಗಳಿಗೆ ದಾಖಲಾಗಿ ಶಿಕ್ಷಕರಾಗಲು ತರಬೇತಿ ಪಡೆಯಬೇಕು' ಎಂಬ ಅಂಶವೇ ಅವರಿಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು.

ಆದರೂ ಹೋಬಳಿ ಸ್ಕೂಲ್ ಪದ್ಧತಿ ಆರಂಭವಾದ ಮೊದಲ ವರ್ಷವೇ (೧೮೬೮-೬೯) ಒಟ್ಟು ಸಂಸ್ಥಾನದಲ್ಲಿ ೩೫೪ ಮಂದಿ ವಿದ್ಯಾರ್ಥಿಗಳು ಶಿಕ್ಷಕರ ತರಬೇತಿಗೆಂದು ದಾಖಲಾಗಿದ್ದರು.[2] ಸಂಕ್ರಮಣ ಕಾಲದ ಈ ವಿದ್ಯಾರ್ಥಿಗಳ ಮನೋಧರ್ಮ ಹೇಗಿತ್ತು, ಹೊಸ ಶಿಕ್ಷಣವ್ಯವಸ್ಥೆಗೆ ಅವರು ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ವಾರ್ಷಿಕ ವರದಿಯ ಈ ಭಾಗ ಸ್ವಾರಸ್ಯಕರವಾಗಿ ನಿರೂಪಿಸುತ್ತದೆ:

> *"ಈ ರೀತಿ ನಾರ್ಮಲ್ ಶಾಲೆಗೆ ಸೇರಿದವರಲ್ಲಿ ಬಹುಪಾಲು ಜನ ವಂಶ ಪಾರಂಪರ್ಯವಾಗಿ ಉಪಾಧ್ಯಾಯ ವೃತ್ತಿಯನ್ನೇ ನಡೆಸಿಕೊಂಡು ಬಂದರು. ತಾವು ಹೊಸದಾಗಿ ಕಲಿಯಬೇಕಾದ್ದು ಏನೂ ಇಲ್ಲ. ತಮ್ಮ ಅನುಭವದ ಬಲದಿಂದಲೇ ಶಾಲಾ ಅಧ್ಯಾಪಕನ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸ*

1 ಹೋಬಳಿ ಶಾಲೆಗಳಿಗೆ ನಿಗದಿತವಾಗಿದ್ದ ಪಠ್ಯಗಳ ಸಂಪೂರ್ಣ ಪಟ್ಟಿಗಾಗಿ ಅನುಬಂಧ - ೩ ನೋಡಿ.

2 ARPI, 1868–69, p-25.

ಬಲ್ಲೆವು ಎಂಬುದು ಅವರ ಧೋರಣೆಯಾಗಿತ್ತು. ಅನೇಕರು ಈ ಹೊಸ ಮಾದರಿಯ ಶಾಲೆಯ ನೀತಿ ನಿಬಂಧನೆಗಳ ಬಗ್ಗೆ ನಗೆಯಾಡಿದ್ದೂ ಉಂಟು.

ಶಾಲೆಗೆ ಸೇರಿದ ಹೊಸತರಲ್ಲಿ ಇವರಲ್ಲಿ ಬಹುಪಾಲು ಜನರಿಗೆ ಮುದ್ರಿತ ಪುಸ್ತಕಗಳನ್ನು ಓದುವ ಅಭ್ಯಾಸವೇ ಇರಲಿಲ್ಲ. ಅವರಲ್ಲಿ ಕೆಲವರು ಮಾತ್ರವೇ ತಾವು ಓದಿದ್ದನ್ನು ವಿವರಿಸ ಬಲ್ಲವರಾಗಿದ್ದರು. ಉಳಿದವರು ಅದು ತಮ್ಮ ಕೈಲಾಗದ ಕೆಲಸವೆಂದು ನೇರವಾಗಿ ಒಪ್ಪಿಬಿಟ್ಟರು. ಉಕ್ತಲೇಖನವನ್ನು ಅವರೆಲ್ಲ ಬರೆಯಬಲ್ಲವರಾಗಿದ್ದರಾದರೂ ಅಕ್ಷರ ಸಂಯೋಜನೆಯ ಕಡೆಗೆ ಅವರ ಗಮನವಿರುತ್ತಿರಲಿಲ್ಲ. ಗುಣಾಕಾರದ ಲೆಕ್ಕಗಳನ್ನು ಅವರು ಮಾಡ ಬಲ್ಲವರಾದರೂ ಇದೇ ಮಾತನ್ನು ಭಾಗಾಹಾರಕ್ಕೆ ಹೇಳುವಂತಿರಲಿಲ್ಲ.

ಎಲ್ಲಕ್ಕಿಂತ ಹೆಚ್ಚು ಚರ್ಚಿತವಾಗುತ್ತಿದ್ದ ವಿಷಯವೆಂದರೆ ಭೂಗೋಳಶಾಸ್ತ್ರ. ಭೂಪಟದ ಮೇಲೆ ಅಲ್ಲಲ್ಲಿ ಕಂಡುಬರುತ್ತಿದ್ದ, ದೇಶಗಳನ್ನು ಸೂಚಿಸಿರುವ ಬಣ್ಣಬಣ್ಣದ ಭಾಗಗಳ ಬಗ್ಗೆ ಅವರ ಟೀಕೆಗಳು ಕೇಳಿಬರುತ್ತಿದ್ದವು. ನದಿಗಳು ಹಾಗೂ ಪರ್ವತಗಳನ್ನು ಪ್ರತಿನಿಧಿಸುವ ಗೆರೆಗಳು ಅವರಿಗೆ ಮರಗಳಂತೆಯೋ ಅಥವಾ ಹುಳುಹುಪ್ಪಟೆಗಳಂತೆಯೋ ತೋರುತ್ತಿದ್ದವು. ಅವರ ಭಿನ್ನಾಭಿಪ್ರಾಯದ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸಿಯೇ ಭೂಮಿಯ ಪ್ರದಕ್ಷಿಣೆ ಹಾಗೂ ಪರಿಭ್ರಮಣೆ ಇತ್ಯಾದಿ ವಿಷಯಗಳನ್ನು ಅವರಿಗೆ ಮನವರಿಕೆ ಮಾಡಿಸಿ ಕೊಡಬೇಕಿತ್ತು.

ಅನೇಕ ತಿಂಗಳುಗಳ ತರಬೇತಿಯನಂತರ ಈ ವಿದ್ಯಾರ್ಥಿಗಳು ಕಠಿಣವಾದ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳನ್ನು ಎದುರಿಸಿ, ತೇರ್ಗಡೆಯಾಗಿ ಹೋಬಳಿ ಶಾಲೆಗಳ ಶಿಕ್ಷಕರಾಗಲು ಅರ್ಹರಾಗುತ್ತಿದ್ದರು. ಅವರೆಲ್ಲಾ ಈಗ ಕನ್ನಡ ಪದ್ಯಗದ್ಯಗಳು, ವ್ಯಾಕರಣ, ಅಂಕಗಣಿತ ಹಾಗೂ ಭೂಗೋಳವನ್ನು ಕಲಿಸಲು ಬಹುಮಟ್ಟಿಗೆ ಶಕ್ತರು. ಇದರೊಂದಿಗೆ ಶಾಲೆಯ ಆಡಳಿತವನ್ನು ನಡೆಸಲುಬೇಕಾದ ಅರಿವೂ ಅವರಿಗೆ ಲಭ್ಯವಾಗಿರುತ್ತದೆ.

ಕೇವಲ ಕೆಲವೇ ದಿವಸಗಳ ತರಬೇತಿಯಿಂದ ಇವರಲ್ಲಿನ ಎಲ್ಲ ರೂಢಿಗತ ಧೋರಣೆಗಳು ಹಾಗೂ ಅಭ್ಯಾಸಗಳನ್ನು ಬದಲಾಯಿಸುವುದು ಕಷ್ಟ. ಆದರೂ ಅವರು ಈಗ ಶಿಕ್ಷಕರ ಜವಾಬ್ದಾರಿಗಳ ಬಗ್ಗೆ ಹೆಚ್ಚು ತಿಳಿದವರಾಗಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಬೋಧಿಸಬೇಕಿರುವ ವಿಷಯಗಳ ಬಗ್ಗೆ ಸಾಕಷ್ಟು ಜ್ಞಾನವುಳ್ಳವರಾಗಿ ತಮ್ಮ ಕೆಲಸಗಳಿಗೆ ಹಾಜರಾಗುತ್ತಾರೆ. ನಿರಂತರವಾದ

ಮೇಲ್ವಿಚಾರಣೆ ಹಾಗೂ ಪುನರ್‌ಪರೀಕ್ಷೆಗಳಿಂದ ಹೊಸದಾಗಿ ಕಲಿತ ವಿಷಯಗಳು ಅವರ ನೆನಪಿನಿಂದ ಮಾಸದಂತೆ ಹಾಗೂ ನಾರ್ಮಲ್ ಶಾಲೆಗಳಲ್ಲಿ ಕಲಿತ ಬೋಧನಾ ತತ್ವಗಳನ್ನು ಅವರು ಸದಾ ಅಭ್ಯಾಸದಲ್ಲಿ ಇಟ್ಟುಕೊಂಡಿರುವಂತೆ ಮಾಡಬಹುದು.'' [1]

ರೈಸರ ಈ ಹೇಳಿಕೆ ಸ್ವಲ್ಪಮಟ್ಟಿಗೆ ವಸಾಹತುಶಾಹಿ ಅಧಿಕಾರಿಯೊಬ್ಬ ದೇಶೀಯರ ಬಗ್ಗೆ ತಳೆದ ತಾತ್ಸಾರದ ಭಾವನೆಯಂತಿದೆ ನಿಜ. ಆದರೆ ಬಹುಬೇಗ ಹೊಸ ಪದ್ಧತಿಯ ಶಿಕ್ಷಣಕ್ರಮಕ್ಕೆ ಅಧ್ಯಾಪಕ-ವಿದ್ಯಾರ್ಥಿಗಳಿಬ್ಬರೂ ಹೊಂದಿಕೊಂಡರು. ಶಾಲಾ ಉಪಾಧ್ಯಾಯರುಗಳಿಗೆ ಆಗಿಂದಾಗ್ಗೆ ಸೂಕ್ತವಾದ ಸುತ್ತೋಲೆಗಳನ್ನು ಹೊರಡಿಸುವುದರ ಮೂಲಕ ಆಡಳಿತ ಅಧ್ಯಾಪನಗಳೆರಡರಲ್ಲಿಯೂ ಸುಧಾರಣೆಯನ್ನು ರೈಸ್ ತಂದರು.[2] ಹಾಗಾಗಿಯೇ ಈ ಪದ್ಧತಿ ಅನೇಕ ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಣದ ಪ್ರಮುಖ ವಿಧಾನವಾಗಿತ್ತು.

ಜನಸಾಮಾನ್ಯರ ಪ್ರತಿಕ್ರಿಯೆ :

ತಾವು ಆವರೆಗೆ ಕಂಡುಕೇಳರಿಯದಿದ್ದ ಮಾದರಿಯ ಶಾಲೆಯೊಂದು ತಮ್ಮ ಊರುಗಳಲ್ಲಿಯೇ ಆರಂಭವಾಗುವಂತಹ ಪರಿಸ್ಥಿತಿ ಒದಗಿದಾಗ ಮೊದಲಿಗೆ ಜನಸಾಮಾನ್ಯರು ಅದನ್ನು ಸ್ವೀಕರಿಸಿದ ಬಗೆ ಕುತೂಹಲಕಾರಿಯಾದದ್ದು. ವಿದ್ಯಾಭ್ಯಾಸದ ಪ್ರಸಾರದ ಮಹತ್ವದ ಅರಿವಿದ್ದ ಊರಿನ ನಾಲ್ಕಾರು ಗಣ್ಯರು ಸೇರಿ ಶಾಲೆಯ ಆರಂಭಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡಿರುತ್ತಿದ್ದರಾದರೂ ಅನಕ್ಷರಸ್ಥರಾದ ಸಾಮಾನ್ಯ ಜನರಿಗೆ ಇದೊಂದು ಅಚ್ಚರಿಯ ಸಂಗತಿಯೇ ಆಗಿತ್ತು. ಅದರಲ್ಲಿಯೂ ಶಾಲೆಯ ಪರಿವೀಕ್ಷಣೆಯ ನೆಪದಲ್ಲಿ ಯೂರೋಪಿಯನ್ ಅಧಿಕಾರಿಗಳಂತೂ ಮಕ್ಕಳನ್ನು ಕದ್ದೊಯ್ಯಲೆಂದೇ ಬರುತ್ತಾರೆ ಎಂಬ ಭ್ರಮೆ ಕೆಲಕಾಲ ಸಾಮಾನ್ಯ ಜನರಲ್ಲಿ, ವಿಶೇಷವಾಗಿ ತಾಯಂದಿರಲ್ಲಿತ್ತು! ಹಾಗಾಗಿ ಶಾಲೆಯ ಪರಿವೀಕ್ಷಣೆಗೆಂದು ಯೂರೋಪಿಯನ್ ಅಧಿಕಾರಿಗಳು ಬಂದರೆ ಇಡಿಯ ಊರಿಗೆ ಊರೇ ಜಾಗೃತಗೊಳ್ಳುತ್ತಿತ್ತು. ಅಂತಹುದೊಂದು ಶಾಲಾಪರಿವೀಕ್ಷಣೆಯ ವಿನೋದದ ದೃಶ್ಯದ ವಿವರಣೆ ಇಲಾಖೆಯ ೧೮೭೨-೭೩ರ ವಾರ್ಷಿಕ ವರದಿಯಲ್ಲಿ ಹೀಗೆ ದಾಖಲಾಗಿದೆ:

"....ಶಾಲೆಗಳ ಪರಿವೀಕ್ಷಣೆ, ಅದರಲ್ಲೂ ಒಬ್ಬ ಯೂರೋಪಿಯನ್ ಅಧಿಕಾರಿಯಿಂದ ಎನ್ನುವುದು ಯಾವಾಗಲೂ ಒಂದು ಜನಪ್ರಿಯ ಕಾರ್ಯಕ್ರಮ. ಬಿಡುವಾಗಿರುವ ಹಳ್ಳಿಗರೆಲ್ಲಾ ಈ ಅದ್ಭುತ ದೃಶ್ಯವನ್ನು ನೋಡಲು ನೆರೆಯುತ್ತಾರೆ. ಅವರೆಲ್ಲಾ ಬಾಗಿಲ ಮರೆಯಿಂದಲೋ ಅಥವಾ ಗೋಡೆಗಳ ಬಿರುಕುಗಳ ಮೂಲಕವೋ ಶಾಲೆಯ ಒಳಗೆ ನಡೆಯುವ

---

1 ಅದೇ., ಪು. ೨೫-೨೭ರಲ್ಲಿಯ ಅನುವಾದ.

2 ಅಂತಹ ಸುತ್ತೋಲೆಯ ಮಾದರಿಗಳನ್ನು ಅನುಬಂಧ - ೪ರಲ್ಲಿ ಕೊಟ್ಟಿದೆ.

ಕುತೂಹಲಕರ ವಿದ್ಯಮಾನಗಳಿಗೆ ಸಾಕ್ಷಿಯಾಗುತ್ತಾರೆ. ಹೆಂಗಸರು ಶಾಲೆಗಳ ಸಮೀಪದ ಮನೆಗಳ ಮೇಲೆ ಗುಂಪುಗುಂಪಾಗಿ ನೆರೆದಿರುತ್ತಾರೆ. ಅವರು ಅಂತಹ ಸ್ಥಳವನ್ನು ಆಯ್ದುಕೊಳ್ಳಲು ಕಾರಣ ಮೊದಲನೆಯದಾಗಿ ಕುತೂಹಲ ಹಾಗೂ ಎರಡನೆಯದಾಗಿ ಅಕಸ್ಮಾತ್ ಆ ಯೂರೋಪಿಯನ್ ಮನುಷ್ಯ ತಮ್ಮನ್ನು ಹಾರಿಸಿಕೊಂಡು ಹೋಗದಂತೆ ರಕ್ಷಿಸಿಕೊಳ್ಳಲು!

ಶಾಲೆಯ ಉಪಾಧ್ಯಾಯನಿಗೂ ಇದು ಆತಂಕದ ಕ್ಷಣ. ಭಯ ಹಾಗೂ ಉದ್ವೇಗಗಳಿಂದ ಆತ ಅಚ್ಚರಿಗಣ್ಣುಗಳ ಪ್ರೇಕ್ಷಕವರ್ಗದ ಮುಂದೆ ದೊಡ್ಡ ಗಾತ್ರದ ಜಗತ್ತಿನ ಭೂಪಟವೊಂದನ್ನು ಬಿಡಿಸಿ ನೇತುಹಾಕುತ್ತಾನೆ. ನೋಡುಗರ ಕಣ್ಣಿಗೆ ಗೂಢವಾಗಿ ಕಾಣುವ ಗೆರೆಗಳು ಹಾಗೂ ಆಕಾರಗಳನ್ನು ಹೊಂದಿರುವ ಆ ಭೂಪಟದ ಮುಂದೆ ನಿಂತು ತನ್ನ ವಿದ್ಯಾರ್ಥಿಗಳನ್ನು ಪರೀಕ್ಷಿಸಲು ಆರಂಭಿಸುತ್ತಾನೆ.

ಇಂತಹ ಕ್ಷಣಗಳೇ ನಿಜವಾಗಿ ಶಾಲಾಮಾಸ್ತರನೊಂದಿಗೆ ಜನಸಾಮಾನ್ಯರ ಸಂಬಂಧ ಗಾಢವಾಗಿ ಬೆಸೆಯುವಂತೆ ಮಾಡುತ್ತವೆ. ಸಂಸ್ಥಾನದ ಮೂಲೆ ಮೂಲೆಯ ಅವಿದ್ಯಾವಂತ ಹಳ್ಳಿಗರಿಗೆ 'ಶಾಲೆ' ಎಂಬ ಹೆಸರು ಈಗ 'ಕೋರ್ಟು', 'ಜೈಲು'ಗಳಂತೆ ಚಿರಪರಿಚಿತವಾಗಿವೆ. ಮೇಲೆ ವಿವರಿಸಿದಂತಹ ಘಟನೆಯು ಮುಗಿದ ಬಳಿಕ ಊರಿನ ಹಿರಿಯರೊಬ್ಬರು ಅಲ್ಲಿ ನೆರೆದಿರುವ ಜನರನ್ನು ಉದ್ದೇಶಿಸಿ ಮಾತನಾಡಿ ಸಮಾಜದ ಅತ್ಯಂತ ಕೆಳವರ್ಗದವರಿಗೂ ವಿದ್ಯೆಯನ್ನು ಕಲಿಸಲು ಶ್ರಮಿಸುತ್ತಿರುವ ಸರ್ಕಾರದ ಧರ್ಮಬುದ್ಧಿಯನ್ನು ಪ್ರಶಂಸಿಸುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯ. ರಾಮರಾಜ್ಯ ವೆಂದು ಕರೆಯಲ್ಪಡುವ ಶ್ರೀರಾಮಚಂದ್ರನ ಆಡಳಿತವೂ ಈ ವಿಷಯದಲ್ಲಿ ಈ ಮಟ್ಟವನ್ನು ಮುಟ್ಟಲಾರದು." [1]

ಹೋಬಳಿ ಶಾಲೆಗಳ ಅಭೂತಪೂರ್ವವಾದ ಯಶಸ್ಸಿಗೆ ಕಾರಣರಾದ ರೈಸರನ್ನು ಅವರ ಮೇಲಧಿಕಾರಿಗಳು ವಿಶೇಷವಾಗಿ ಅಭಿನಂದಿಸಿದರೆಂಬುದನ್ನು ದಾಖಲೆಗಳು ವಿವರಿಸುತ್ತವೆ. ಸಂಸ್ಥಾನದ ಆಗಿನ ಚೀಫ್ ಕಮೀಷನರ್ ಆಗಿದ್ದ ಎಲ್. ಬೌರಿಂಗನ ಆಪ್ತ ಕಾರ್ಯದರ್ಶಿಯಾದ ಟಿ. ಕ್ಲಾರ್ಕ್ ಈ ಬಗ್ಗೆ :

> *"....The educational department has been very efficiently presided over by Mr. Rice, to whose industry and ability most of the improvements effected are due, and he is well entitled to the best thanks of the Chief Commissioner...."* ಎಂದಿದ್ದಾನೆ.[2]

---

1 ಅದೇ, ಪು. ೫೨ ರಲ್ಲಿಯ ಅನುವಾದ.

2 ಅದೇ., ಪು. ೩.

ಅಷ್ಟೇ ಅಲ್ಲದೆ 'ಈ ವರ್ಷದ ವರದಿಯು ನಿಸ್ಸಂಶಯವಾಗಿ ಈವರೆಗಿನ ಎಲ್ಲಾ ವರದಿಗಳಿಗಿಂತ ಅತ್ಯುತ್ತಮವಾಗಿದ್ದು ಇದರ ಸಂಪೂರ್ಣ ಯಶಸ್ಸೆಲ್ಲವೂ ಪ್ರಭಾವಿ ನಿರ್ದೇಶಕರಿಗೆ ಸಲ್ಲಬೇಕು' ಎಂಬ ಹೊಗಳಿಕೆಯೂ ಆತನಿಂದ ಸಂದಿದೆ.

೧೮೬೮ ರಿಂದ ೧೮೭೪ ರವರೆಗೆ, ಎಂದರೆ ರೈಸರು ಶಾಲಾ ವೀಕ್ಷಣಾಧಿಕಾರಿಯಾಗಿದ್ದ ಅವಧಿಯಲ್ಲಿ ಕೇವಲ ಹೋಬಳಿ ಶಾಲೆಗಳೇ ಅಲ್ಲದೇ ಸರ್ಕಾರಿ ಅನುದಾನಿತ ಶಾಲೆಗಳು ಹಾಗೂ ಖಾಸಗಿ ಶಾಲೆಗಳಲ್ಲಿಯೂ ಉತ್ತಮ ಶಿಕ್ಷಣ ದೊರೆಯುತ್ತಿದ್ದುದರ ಫಲವಾಗಿ ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಪ್ರಗತಿ ಅತ್ಯಂತ ಸಮಾಧಾನಕರವಾಗಿತ್ತು. ೧೮೭೧-೭೨ರ ಅಂತ್ಯದ ವೇಳೆಗೆ ೩೯ ಹೋಬಳಿಗಳನ್ನು ಬಿಟ್ಟು ಉಳಿದ ೬೦೬ ಹೋಬಳಿಗಳಲ್ಲಿ ಒಂದೊಂದು ಸಾಮಾನ್ಯ ಶಾಲೆಯೂ ಪ್ರತಿ ತಾಲ್ಲೂಕಿನ ಮುಖ್ಯ ಸ್ಥಳದಲ್ಲಿ ಒಂದೊಂದು ಮೇಲ್ಮಟ್ಟದ ದೇಶಾಭಾಷಾ ಶಾಲೆಗಳೂ ಕಾರ್ಯ ನಿರ್ವಹಿಸುತ್ತಿದ್ದವು. ೧೪೨ ಮಂದಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಹಾಜರಾಗಿದ್ದರು. ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಎದುರಿಸಿದ ೧೨೨ ಮಂದಿ ವಿದ್ಯಾರ್ಥಿಗಳಲ್ಲಿ ೫೫ ಮಂದಿ ಉತ್ತೀರ್ಣರಾಗಿದ್ದರು, ಬಿ.ಎ. ಪದವಿಯ ಪರೀಕ್ಷೆಯನ್ನು ಬರೆದಿದ್ದ ೧೪ ಮಂದಿಯಲ್ಲಿ ೭ ಜನ ಉತ್ತೀರ್ಣರಾಗಿದ್ದರು. ಹಾಗಾಗಿಯೇ ರೈಸರು ತಮ್ಮ ವಾರ್ಷಿಕ ವರದಿಯಲ್ಲಿ

> *"....on comparing the progress of education since this department was established with what has been done in other parts of India, it will, I think be admitted that Mysore has not been behind hand in contributing to the general improvement throughout the Empire and that while in the higher cultivation of the English, she has attained an honourable position, the promotion of instruction in Vernaculars it has received particular notice and attention..."* ಎಂದು ಸಮಾಧಾನ ಪಟ್ಟುಕೊಂಡಿದ್ದಾರೆ.[1]

ಅವರ ಈ ಭಾವನೆಗಳಿಗೆ ಪೂರಕವಾಗುವಂತಹುದೊಂದು ಪ್ರಸಂಗ ೧೮೭೦ರ ಡಿಸೆಂಬರ್‌ನಲ್ಲಿ ನಡೆಯಿತು. ಅದೆಂದರೆ ಭಾರತದಲ್ಲಿಯ ಶಿಕ್ಷಣಕ್ರಮವನ್ನು ಕುರಿತಾದ ಅಂತರರಾಷ್ಟ್ರೀಯ ವಸ್ತುಪ್ರದರ್ಶನ. ಈ ಪ್ರದರ್ಶನದಲ್ಲಿ ಮೈಸೂರು ಸಂಸ್ಥಾನದಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಕುರಿತಾದ ಅನೇಕ ರೇಖಾಚಿತ್ರಗಳು, ವರ್ಣಚಿತ್ರಗಳು ಹಾಗೂ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಅಷ್ಟೇ ಅಲ್ಲದೆ ದೇಶೀಯ ಶಾಲೆಗಳ ಮಾದರಿಗಳು ಹಾಗೂ ಚಿತ್ರಗಳು, ಅಲ್ಲಿ ಶಿಕ್ಷೆ ಕೊಡುತ್ತಿದ್ದ ಪದ್ಧತಿಗಳು, ಹೋಬಳಿ ಶಾಲೆಯ ಹಾಗೂ ಅಲ್ಲಿಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಕಾರ್ಯವಿಧಾನವನ್ನು ವಿವರಿಸುವ ಮಾದರಿ;

1 R.P.E.M. (1911-16), p-4.

ತಾಳೆಗರಿಯ ಪುಸ್ತಕಗಳು, ಕಂಟ, ಇತ್ಯಾದಿ ಲೇಖನ ಸಾಮಗ್ರಿಗಳಿಂದ ಹಿಡಿದು ಆ ವೇಳೆಗೆ ಪ್ರಕಟವಾಗಿದ್ದ ಎಲ್ಲಾ ರೀತಿಯ ಪಠ್ಯಪುಸ್ತಕಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.[1]

ಪ್ರದರ್ಶನವನ್ನು ವೀಕ್ಷಿಸಿದವರ ಪ್ರತಿಕ್ರಿಯೆ ಏನೆಂಬ ಮಾಹಿತಿ ಎಲ್ಲಿಯೂ ಲಭ್ಯ ವಿಲ್ಲವಾದರೂ "ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಪ್ರಗತಿ ಸಾಕಷ್ಟಿಲ್ಲ" ಎಂಬ ಭಾವನೆ ಯನ್ನಂತೂ ಖಂಡಿತ ಅದು ತೊಡೆದುಹಾಕುವಂತಿತ್ತು ಎಂದು ಊಹಿಸಬಹುದು.

ಪಠ್ಯಪುಸ್ತಕಗಳ ರಚನೆ :

ಆರಂಭದ ದಿನಗಳಲ್ಲಿ ವಿದ್ಯಾಭ್ಯಾಸದ ಇಲಾಖೆಯು ಎದುರಿಸುತ್ತಿದ್ದ ಪ್ರಮುಖ ಸಮಸ್ಯೆಗಳಲ್ಲಿ ಒಂದೆಂದರೆ ಪಠ್ಯಪುಸ್ತಕಗಳ ಕೊರತೆ. ದೇಶೀಯ ಶಾಲೆಗಳಲ್ಲಿ ಬಾಯಿಪಾಠವೇ ಪ್ರಮುಖ ಮಾಧ್ಯಮವಾಗಿದ್ದುದರಿಂದ ಅಲ್ಲಿ ಪಠ್ಯಪುಸ್ತಕಗಳ ಅಗತ್ಯವಿರಲಿಲ್ಲ. ಆದರೆ ಆಂಗ್ಲ ಮಾದರಿಯ ಶಾಲೆಗಳು ಆರಂಭವಾದ ಮೇಲೆ ಪಠ್ಯಪುಸ್ತಕಗಳ ಅವಶ್ಯಕತೆ ಹೆಚ್ಚಾಯಿತು. ೧೮೧೭ರಲ್ಲಿ ಬಂಗಾಲದ ಶ್ರೀರಾಮಪುರ ಪ್ರೆಸ್ಸಿನಲ್ಲಿ ಮುದ್ರಿತವಾದ ವಿಲಿಯಂ ಕ್ಯಾರಿಯ 'A Grammer of the Kurnata Language', ೧೮೨೦ ಪ್ರಕಟವಾದ ಮೆಕ್ಕೆರಲ್‌ನ 'A Grammer of the Carnataca Language' ಮುಂತಾದವು ಶಿಕ್ಷಣಕ್ಕೆ ಸಂಬಂಧಿಸಿದವೇ ಆದರೂ ಇವೆಲ್ಲ ಪ್ರೌಢಶಿಕ್ಷಣಕ್ಕೆ ಯೋಗ್ಯವಿದ್ದವೇ ಹೊರತೂ ಪ್ರಾಥಮಿಕ ಶಿಕ್ಷಣಕ್ಕಲ್ಲ. ಅನಂತರ ಮುಂಬೈ, ಮದ್ರಾಸ್, ಬೆಳಗಾಂ, ಮಂಗಳೂರು, ಬಳ್ಳಾರಿ ಹಾಗೂ ಬೆಂಗಳೂರು ಗಳಲ್ಲಿಯೇ ಪಠ್ಯಪುಸ್ತಕಗಳು ಸಿದ್ಧವಾದವು ನಿಜ. ಆದರೆ ಇವುಗಳಲ್ಲಿ ಬಹುಪಾಲು ಕ್ರೈಸ್ತ ಮಿಷನರಿಗಳಿಂದ ರಚಿತವಾದವು. ಹಾಗಾಗಿ ಇಲ್ಲಿಯ ಭಾಷೆಯಾಗಲೀ ಅಥವಾ ವಸ್ತುವಿನಲ್ಲಿ ಯಾಗಲೀ ನೈಜತೆಯ ಅಂಶ ಕಡಿಮೆ. ಜೊತೆಗೆ ಈ ಪುಸ್ತಕಗಳೂ ಸುಲಭವಾಗಿ ಲಭ್ಯವಿಲ್ಲ ದಿದ್ದುದರಿಂದ ಡೆವೊರೆ ವರದಿಯ ಅನುಷ್ಠಾನದ ಸಂದರ್ಭದಲ್ಲಿ ಪಠ್ಯಪುಸ್ತಕಗಳ ವಿತರಣೆ ಏಕಕಾಲದಲ್ಲಿ ಆಗಿರಲಿಲ್ಲ. ಹಾಗೂ ಪಠ್ಯಪುಸ್ತಕಗಳ ಕೊರತೆಯಿಂದಾಗಿ ಸಂಸ್ಥಾನದ ಎಲ್ಲಾ ಶಾಲೆಗಳಲ್ಲಿ ಏಕರೂಪದ ಪಠ್ಯಕ್ರಮವನ್ನು ಜಾರಿಗೊಳಿಸುವುದೂ ಸಾಧ್ಯವಿರಲಿಲ್ಲ. ಸರ್ಕಾರದ ಕಡೆಯಿಂದ ಪುಸ್ತಕಗಳನ್ನು ಸರಬರಾಜು ಮಾಡಬೇಕಾದ ಪರಿಸ್ಥಿತಿ ಬಂದಾಗ ಅಂಚೆಯ ಮೂಲಕ ತಾಲ್ಲೂಕಿನ ಅಮಲ್ದಾರರಿಗೆ ತಲುಪಿಸಿ ಶಾಲೆಗಳಿಗೆ ಹಂಚುವಂತೆ ಆದೇಶಿಸ ಲಾಗುತ್ತಿತ್ತು.[2]

ಈ ಸಮಸ್ಯೆಯನ್ನು ತಪ್ಪಿಸಲು ೧೮೬೪ರಲ್ಲಿ ವಿದ್ಯಾಇಲಾಖೆಯ ಆಗಿನ ನಿರ್ದೇಶಕ ರಾಗಿದ್ದ ಜೆ. ಗ್ಯಾರೆಟ್ ಅವರು 'ಬೆಂಗಳೂರಿನಲ್ಲಿ ಒಂದು ಸೆಂಟ್ರಲ್ ಬುಕ್ ಡಿಪೋವನ್ನೂ

1 ARPI, 1869–70, p 29-31.

2 K.S.A., Ed. 1864–65. File 1 of 1864. Sl. No. 1

ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಅದರ ಶಾಖೆಗಳನ್ನೂ ಮಾಡುವುದು ಉಚಿತ' ಎಂದು ವರದಿ ನೀಡಿದರು. ಅದರಂತೆಯೇ ಡಿಪೋಗಳ ಸ್ಥಾಪನೆಯಾಯಿತಾದರೂ ಪಠ್ಯಕ್ರಮದ ಏಕರೂಪತೆ ಇನ್ನೂ ಬಂದಿರಲಿಲ್ಲ. ಆ ಕೆಲಸವನ್ನೂ ರೈಸರೇ ಮಾಡಬೇಕಾಯಿತು. ಈ ಬಗ್ಗೆ ಜೆ. ಗ್ಯಾರೆಟ್ಟರು ತಮ್ಮ ಒಂದು ವರದಿಯಲ್ಲಿ,

> *".... It was soon found that some more stringent regulation was needed regarding the course of studies persued and the text books employed in the different grades of schools. Mr. Rice accordingly drew up courses of lessons for Anglo-Vernacular, Canarese and Hindustani schools...."* ಎಂದಿದ್ದಾರೆ.[1]

ಹೀಗೆ ನಿಗದಿಮಾಡಿದ ಪಠ್ಯಪುಸ್ತಕಗಳಲ್ಲಿಯೂ[2] ಗ್ಯಾರೆಟ್ ಮತ್ತು ಬೆಂಜಮಿನ್ ರೈಸ್ ಅವರ ಪಠ್ಯಗಳನ್ನು ಬಿಟ್ಟರೆ ಉಳಿದೆಲ್ಲವೂ ಮಂಗಳೂರಿನಿಂದ ಸರಬರಾಜಾಗಬೇಕಿತ್ತು ಎಂಬುದು ಗಮನಾರ್ಹ.

ಈ ಪರಿಸ್ಥಿತಿಯನ್ನು ಮನಗಂಡ ರೈಸರು ಅನೇಕ ಸ್ಥಳೀಯ ವಿದ್ವಾಂಸರುಗಳಿಂದ ಪಠ್ಯಪುಸ್ತಕಗಳನ್ನು ಬರೆಸಿದರಲ್ಲದೆ ತಾವೂ ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಹಾಗೆ ಅವರು ಸಂಪಾದಿಸಿದ ಮೂರು ಪ್ರಮುಖ ಕೃತಿಗಳೆಂದರೆ ರಾಮಾನುಜಯ್ಯ ಎಂಬಾತನ 'ರಾಮಾಯಣ ಸಂಗ್ರಹಃ' ಎಂಬ ಸಂಸ್ಕೃತ ಕೃತಿ, ಪ್ರಾಚೀನ ಕನ್ನಡ ಕವಿಗಳ ಪದ್ಯಗಳ ಸಂಗ್ರಹವಾದ 'ಪದ್ಯಸಾರ' ಹಾಗೂ ಅಮರಸಿಂಹನ 'ಅಮರ ಕೋಶ' ಎಂದು ಪ್ರಖ್ಯಾತವಾದ ನಾಮ ಲಿಂಗಾನುಶಾಸನ. (ಈ ಕೃತಿಗಳ ಬಗೆಗಿನ ಸವಿವರವಾದ ವಿಮರ್ಶೆಯನ್ನು ಗ್ರಂಥಸಂಪಾದನೆಯನ್ನು ಕುರಿತಾದ ಅಧ್ಯಾಯದಲ್ಲಿ ಕಾಣಬಹುದು.) ಇವುಗಳಲ್ಲಿ ಮೊದಲನೆಯದು ಹೆಚ್ಚು ಬಾರಿ ಮರುಮುದ್ರಿತವಾದಂತೆ ಕಾಣುವುದಿಲ್ಲ. ವ್ಯಾಕರಣದ ದೃಷ್ಟಿಯಿಂದ ನೋಡಿದಾಗ ಕೆಲವು ತಪ್ಪುಗಳಾಗಿರುವುದು ಇದಕ್ಕೆ ಕಾರಣ ವಿರಬೇಕು.

ಆದರೆ ಪದ್ಯಸಾರ ಹಾಗೂ ಅಮರಕೋಶಗಳ ವಿಷಯದಲ್ಲಿ ಹೀಗೆನ್ನುವಂತಿಲ್ಲ. ದಾಸರ ಪದಗಳು, ಜ್ಞಾನಸಿಂಧು, ಅನುಭವಾಮೃತ, ಕುಮಾರವ್ಯಾಸಭಾರತ, ಶಬರಶಂಕರ ವಿಳಾಸ, ರಾಜಶೇಖರ ವಿಳಾಸ, ಚನ್ನಬಸವ ಪುರಾಣ, ಬಸವ ಪುರಾಣ, ಲೀಲಾವತಿ ಮುಂತಾದ ಅಭಿಜಾತ ಕೃತಿಗಳಿಂದ ಆಯ್ದ ಪದ್ಯಭಾಗಗಳನ್ನು ರೈಸ್ 'ಪದ್ಯಸಾರ'ದಲ್ಲಿ

---

1 ARPI, 1866–67, p 1-2.

2 ಇವುಗಳ ಪೂರ್ಣವಿವರಗಳು ಅನುಬಂಧ - ೫ ರಲ್ಲಿವೆ.

ಸೇರಿಸಿ ೧೮೬೮ರಲ್ಲಿ ಮೊತ್ತಮೊದಲ ಬಾರಿಗೆ ಪ್ರಕಟಿಸಿದರು.[1] ಈ ಎಲ್ಲಾ ಕೃತಿಗಳೂ ಮೊಗ್ಲಿಂಗನ 'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲೆಯಲ್ಲಿ ಪ್ರಕಟವಾದವು. ಅವುಗಳಿಂದ ರಸವತ್ತಾದ ಭಾಗಗಳನ್ನು ಆಯ್ದು ಪೋಣಿಸಲಾದ 'ಪದ್ಯಸಾರ' ಆ ಕಾಲದ ಅತ್ಯಂತ ಜನಪ್ರಿಯ ಪಠ್ಯಪುಸ್ತಕಗಳಲ್ಲಿ ಒಂದು. ೧೮೮೧ರಲ್ಲಿ ಪದ್ಯಸಾರದ ಐದನೇ ಮುದ್ರಣವನ್ನು ಹೊರತರುವಾಗ ರೈಸ್ ಇವುಗಳೊಂದಿಗೆ ತಮ್ಮ ಶೋಧನೆಯಲ್ಲಿ ಕಂಡುಬಂದ ಅತ್ಯುತ್ತಮ ಕೃತಿಗಳಾದ ಪಂಪಭಾರತ ಹಾಗೂ ಪಂಪರಾಮಾಯಣಗಳ ಭಾಗಗಳನ್ನೂ ಸೇರಿಸಿ ಮುನ್ನುಡಿಯಲ್ಲಿ ಇವುಗಳ ಬಗ್ಗೆ ವಿಸ್ತಾರವಾದ ಟಿಪ್ಪಣಿಗಳನ್ನೂ ಬರೆದಿದ್ದಾರೆ. ಈ ಮುದ್ರಣ ಸಂದರ್ಭದಲ್ಲಿ ೧೦,೦೦೦ ಪ್ರತಿಗಳನ್ನು ಮುದ್ರಿಸಲಾಗಿತ್ತು ಎಂಬುದು ಇದರ ಜನಪ್ರಿಯತೆಗೆ ಸಾಕ್ಷಿ. ಅಷ್ಟೇ ಅಲ್ಲದೆ ಈ ಪಠ್ಯದಲ್ಲಿನ ಪದ್ಯಗಳ ತಾತ್ಪರ್ಯ, ಅನ್ವಯ, ಅರ್ಥಗಳನ್ನು ವಿವರಿಸುವ ಎಚ್. ವೆಂಕಟರಾಮಾಶಾಸ್ತ್ರಿಯ 'ಪದ್ಯಸಾರ ಪ್ರಕಾಶಿಕೆ' (ಮೊದಲ ಮುದ್ರಣ ೧೮೭೯, ನಾಲ್ಕನೇ ಮುದ್ರಣ ೧೮೯೧) ಹಾಗೂ ಬಿ. ಪದ್ಮರಾಜ ಪಂಡಿತನ 'ಪದ್ಯಸಾರದ ಟೀಕು' (ಮೊದಲ ಮುದ್ರಣ ೧೮೯೧, ತೃತೀಯ ಮುದ್ರಣ ೧೮೯೨) ಎಂಬ ಕೃತಿಗಳೂ ಅತ್ಯಂತ ಜನಪ್ರಿಯವಾಗಿದ್ದವು. ಪದ್ಯಸಾರ ಎಂಬ ಹೆಸರು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರಲ್ಲಿ ಎಷ್ಟು ಜನಪ್ರಿಯವಾಗಿತ್ತೆಂದರೆ ೧೯೦೦ರಲ್ಲಿ ಎಂ. ಶಾಮರಾಯರ ನೇತೃತ್ವದ ಪಠ್ಯನಿಯಾಮಕ ಸಮಿತಿಯು ಹೊರತರಲು ನಿರ್ಧರಿಸಿದ ಕಾವ್ಯಭಾಗಗಳ ಸಂಕಲನದ ಹೆಸರೂ ಪದ್ಯಸಾರ ಎಂಬುದೇ ಆಗಿತ್ತು.

ಅಮರಸಿಂಹನ ನಾಮಲಿಂಗಾನುಶಾಸನವು ಕನ್ನಡ ವ್ಯಾಖ್ಯಾನದೊಂದಿಗೆ ೧೮೩೦ರ ವೇಳೆಗೇ ಪ್ರಕಟವಾಗಿತ್ತು ಎಂದು ಬಾರ್ನೆಟ್ ಊಹಿಸುತ್ತಾರೆ.[2] ಆದರೆ "ಮೈಸೂರು ಸೀಮೆಯ ರಾಜಕೀಯ ಕರ್ಣಾಟಕ ಪಾಠಶಾಲೆಗಳಿಗಾಗಿ ಸುಲಭ ಮೌಲ್ಯಕ್ಕೆ ಕಾಲಕಾಲಕ್ಕೂ ಸಾಕಷ್ಟು ಪ್ರತಿಗಳು ದೊರೆಯದೇ ಇದ್ದುದರಿಂದಲೂ ಸಹ ಇದನ್ನು ರಾಜಕೀಯ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಾಪಿಸಬೇಕೆಂದು ಸಂಕಲ್ಪಿಸಿ" ರೈಸ್ ಇದನ್ನು ಸಂಪಾದಿಸಿದರು.

ಈ ಕೃತಿಯು ೧೮೭೩ರಲ್ಲಿ ಮೊತ್ತಮೊದಲಿಗೆ ಪ್ರಕಟವಾಯಿತು ಎಂದು ಶ್ರೀನಿವಾಸ ಹಾವನೂರರು ಅಭಿಪ್ರಾಯಪಡುತ್ತಾರೆ.[3] ೧೮೮೧ರಲ್ಲಿ ಮೂರನೆಯ ಮುದ್ರಣ, ೧೯೨೭ರಲ್ಲಿ ನಾಲ್ಕನೆಯ ಮುದ್ರಣ ಹೊರಬಂದಿದೆ. ಈಗಲೂ ರೈಸರು ಸಂಪಾದಿಸಿದ ಅಮರ

---

1 ಈ ಮುದ್ರಣದ ಪ್ರತಿಗಳು ಈಗ ನೋಡಲು ಲಭ್ಯವಿಲ್ಲ. ಬಾರ್ನೆಟ್ ಅವರ ಸೂಚಿಯಲ್ಲಿ ಸಂಪಾದಕರನ್ನು ಹೆಸರಿಸದೆ ಕೇವಲ 'Printed for the department of Public Instructions, Mysore and Coorg' ಎಂದಷ್ಟೇ ಸೂಚಿಸಲಾಗಿದೆ. ಆದರೆ ಅನಂತರದ ಮುದ್ರಣಗಳಲ್ಲಿ ರೈಸರ ಹೆಸರಿರುವುದರಿಂದ ಹಾಗೂ ಪದ್ಯಸಾರವನ್ನು ಸಂಕಲಿಸುವಾಗ ರಾಮಸ್ವಾಮಿಶಾಸ್ತ್ರಿ ಎಂಬ ಕನ್ನಡ ಭಾಷಾಂತರಕಾರರು ನೆರವಾದದ್ದನ್ನು ರೈಸ್ ತಮ್ಮ ೧೮೬೯-೭೦ರ ವಾರ್ಷಿಕವರದಿಯಲ್ಲಿ ಸ್ಮರಿಸಿರುವುದರಿಂದ ರೈಸರೇ ದೇಶೀಯ ವಿದ್ವಾಂಸರ ನೆರವಿನಿಂದ ಇದನ್ನು ಸಂಪಾದಿಸಿದ್ದಾರೆಂದು ನಿರ್ಧರಿಸಬಹುದು.

2 C P 106.

3 ಹೊ.ಅ., ಪು. ೧೬೫

ಕೋಶದ ಆವೃತ್ತಿಯೇ ಹೆಚ್ಚು ಜನಪ್ರಿಯವಾಗಿದ್ದು ಮೈಸೂರು ವಿಶ್ವವಿದ್ಯಾನಿಲಯದಿಂದ ಅನೇಕ ಪರಿಷ್ಕೃತ ಮುದ್ರಣಗಳು ಹೊರಬಂದಿವೆ.

ಇತರರಿಂದ :

ಬ್ರಿಟಿಷ್ ಚಕ್ರಾಧಿಪತ್ಯದ ಗೃಹಖಾತೆಯ ಕಾರ್ಯದರ್ಶಿಯಾಗಿದ್ದ ಹೋವೆಲ್ ಎಂಬಾತ ೧೮೭೧ ರಲ್ಲಿ "Note on Education in India" ಎಂಬ ಟಿಪ್ಪಣಿಯನ್ನು ಬರೆದು ಅದರಲ್ಲಿ ದೇಶೀಯ ಭಾಷೆಗಳ ಪಠ್ಯಪುಸ್ತಕಗಳ ಶೋಚನೀಯ ಸ್ಥಿತಿಯ ಬಗ್ಗೆ ಟೀಕಿಸಿದ್ದಾನೆ. "ಭಾರತದ ಪ್ರಾಚೀನ ಸಾಹಿತ್ಯವು ಪ್ರಕ್ಷಿಪ್ತಗಳಿಂದ ತುಂಬಿಹೋಗಿರುವುದು ನಿಜಕ್ಕೂ ಭಯಾನಕ. ಪ್ರತಿವರ್ಷವೂ ಇಂತಹ ಸಾಹಿತ್ಯವನ್ನೇ ಸರ್ಕಾರವು ಸಾವಿರಾರು ಜನ ಏನೂ ಅರಿಯದ ವಿದ್ಯಾರ್ಥಿಗಳ ಕೈಗೆ ತಲುಪಿಸುತ್ತಿದೆ. ಹಾಗಾಗಿ ಇತ್ತ ಅತೀ ಮಡಿವಂತಿಕೆಯನ್ನೂ ತೋರದ, ಅತ್ತ ಅತೀ ಪ್ರಕ್ಷಿಪ್ತವೂ ಅಲ್ಲದ ರೀತಿಯಲ್ಲಿ ಇಲ್ಲಿಯ ಸಾಹಿತ್ಯ ಕೃತಿಗಳನ್ನು ಈ ದೇಶದ ಮುಂದಿನ ಪೀಳಿಗೆಯವರಿಗೆ ಹೇಗೆ ತಲುಪಿಸಬೇಕು ಎಂಬ ಮಹತ್ತರವಾದ ಪ್ರಶ್ನೆಯನ್ನು ಬಗೆಹರಿಸುವ ಗಣನೀಯವಾದ ಜವಾಬ್ದಾರಿ ಸರ್ಕಾರದ ಮೇಲಿದೆ" ಎಂದು ಆತ ಅಭಿಪ್ರಾಯಪಟ್ಟಿದ್ದಾನೆ.[1]

ಈ ಬಗ್ಗೆ ಮೈಸೂರು ವಿದ್ಯಾಇಲಾಖೆಯ ನಿರ್ದೇಶಕರಾಗಿ ಪುನಃ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಗ್ಯಾರೆಟ್‌ರು 'ಮೈಸೂರು ಸಂಸ್ಥಾನದ ಎಲ್ಲಾ ಭಾಷಾಪಠ್ಯಗಳನ್ನು ಈಗಾಗಲೇ ರೈಸರ ಮುಂದಾಳತ್ವದಲ್ಲಿ ಅತ್ಯಂತ ಜಾಗರೂಕವಾಗಿ ಸಂಪಾದಿಸಿ ಪ್ರಕಟಿಸಲಾಗಿದೆ' ಎಂದು ಉತ್ತರಿಸಿದ್ದಾರೆ.[2] ಗ್ಯಾರೆಟ್‌ರ ಈ ಅಭಿಪ್ರಾಯವು ರೈಸರ ಕಾರ್ಯದಕ್ಷತೆಗೆ ನೀಡಿದ ಮನ್ನಣೆ ಎನ್ನಬಹುದು.

ಹೋವೆಲ್‌ನ ಟಿಪ್ಪಣಿಯನ್ನು ಗಂಭೀರವಾಗಿ ಪರಿಗಣಿಸಿದ ಬ್ರಿಟಿಷ್ ಚಕ್ರಾಧಿಪತ್ಯದ ಗೃಹಶಾಖೆ (ವಿದ್ಯಾಭ್ಯಾಸ) ೧೮೭೩ರಲ್ಲಿ ಒಂದು ನಿರ್ಣಯವನ್ನು ಕೈಗೊಂಡಿತು. "....the content of the books taught shall be, as much as possible within easy range of the pupil's comprehension and ordinary experience..." ಎಂಬುದು ಈ ನಿರ್ಣಯದ ಪ್ರಮುಖವಾದ ಧ್ಯೇಯ. ಈ ವಿಷಯವನ್ನು ಜಾರಿಗೊಳಿಸಲು ಸ್ಥಳೀಯ ಸರ್ಕಾರಗಳು ಸಮಿತಿಯೊಂದನ್ನು ಸ್ಥಾಪಿಸಬೇಕೆಂದು ಈ ನಿರ್ಣಯ ಸೂಚಿಸಿದೆ.

ಅದರಂತೆ ಮೈಸೂರು ಸರ್ಕಾರವು ಮೊದಲಿಗೆ ಹಂಗಾಮಿ ನಿರ್ದೇಶಕರಾಗಿದ್ದ ಲೂಯಿರೈಸರ ಅಧ್ಯಕ್ಷತೆಯಲ್ಲಿ ಡಾ|| ಜಿ.ಯು. ಪೋಪ್, ಕರ್ನಲ್ ಮಾಲೆಸನ್ ಹಾಗೂ ತಂಬೂಚೆಟ್ಟಿಯವರನ್ನು ಒಳಗೊಂಡ ಸಮಿತಿಯೊಂದನ್ನು ನೇಮಿಸಿತು. ಅನಂತರ ಈ

1 ARPI, 1871–72, p 40–41ರಲ್ಲಿ ಉದ್ಧೃತ

2 ಅಲ್ಲೇ.

ಪಟ್ಟಿಗೆ ಸಿ. ರಂಗಾಚಾರ್ಲು ಹಾಗೂ ಕ್ಯಾಪ್ಟನ್ ಮೆಕೆಂಜ಼ಿ ಮುಂತಾದವರನ್ನು ಸೇರಿಸ ಲಾಯಿತು. ಅಂತಿಮವಾಗಿ ಈ ಸಮಿತಿ ಹೀಗಿತ್ತು:[1]

೧.	ಬಿ.ಎಲ್. ರೈಸ್	ಅಧ್ಯಕ್ಷ
೨.	ಜಿ.ಎಫ್. ಮೆಕೆಂಜ಼ಿ	ಕಾರ್ಯದರ್ಶಿ
೩.	ಜಿ.ಯು. ಪೋಪ್	ಸದಸ್ಯ
೪.	ರಂಗಾಚಾರ್ಲು ಸಿ.	ಸದಸ್ಯ
೫.	ತಂಬೂಚೆಟ್ಟಿ	ಸದಸ್ಯ
೬.	ಮಹಮದ್ ಆಲಿ	ಸದಸ್ಯ
೭.	ಎ. ಶಿವರಾಮಯ್ಯ	ಸದಸ್ಯ
೮.	ಎ. ಶ್ರೀನಿವಾಸಾಚಾರಿ	ಸದಸ್ಯ

ಈ ಸಮಿತಿಯು ಕೈಗೊಂಡ ಪ್ರಮುಖ ನಿರ್ಣಯಗಳೆಂದರೆ:

೧. ರಾಷ್ಟ್ರದಾದ್ಯಂತ ಬಳಸಲು ಸಾಧ್ಯವಾಗುವಂತೆ ವ್ಯಾಕರಣ, ಅಂಕಗಣಿತ, ಚರಿತ್ರೆ, ಭೂಗೋಳದ ಪುಸ್ತಕಗಳನ್ನು ಇಂಗ್ಲೀಷಿನಲ್ಲಿ ರಚಿಸಬೇಕು.

೨. ಸಂಸ್ಕೃತ ಹಾಗೂ ಪರ್ಷಿಯನ್ ಭಾಷೆಯ ಕೆಲವು ಪ್ರಮುಖ ಕೃತಿಗಳನ್ನು ಮುದ್ರಿಸ ಬೇಕು. ಇವು ಸಾಮ್ರಾಜ್ಯದಾದ್ಯಂತ ಸಾಮಾನ್ಯರು ಹಾಗೂ ವಿದ್ಯಾರ್ಥಿಗಳೂ ಬಳಸುವಂತಿರಬೇಕು.

೩. ಸಂಸ್ಥಾನದ ಬಳಕೆಗಾಗಿ ಅಭ್ಯಾಸ ಸಹಿತವಾದ ಒಂದು ವ್ಯಾಕರಣದ ಪುಸ್ತಕ, ಶಾಲಾ ಆಡಳಿತಕ್ಕೆ ಸಂಬಂಧಿಸಿದ ಒಂದು ಪಠ್ಯ, ಚರಿತ್ರೆ ಹಾಗೂ ಭೂಗೋಳಗಳಿಗೆ ಸಂಬಂಧಿಸಿದ ತಲಾ ಒಂದೊಂದು ಪಠ್ಯಗಳನ್ನು ಇಂಗ್ಲೀಷ್ ಮತ್ತು ಕನ್ನಡ ಗಳೆರಡರಲ್ಲೂ ಸಿದ್ಧಪಡಿಸಬೇಕು. ಇದರೊಂದಿಗೆ ಅನುವಾದದ ಪುಸ್ತಕವೂ ಒಂದಿರಬೇಕು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ದೇಶದ ಇತರ ಪ್ರಾಂತ್ಯ ಗಳವರೂ ಯಾವುದೇ ತೊಂದರೆ ಇಲ್ಲದೆ ಇವನ್ನು ಬಳಸಿಕೊಳ್ಳಲು ಸಾಧ್ಯವಾಗು ವಂತೆ ಈ ಪಠ್ಯಗಳನ್ನು ರಚಿಸಬೇಕು.

ಈ ಬಗೆಯಲ್ಲಿ ಪಠ್ಯಗಳನ್ನು ರಚಿಸಲು ಅವಶ್ಯಕವಾದ ಮಾರ್ಗದರ್ಶಕ ಸೂತ್ರ ಗಳನ್ನೂ ಸಮಿತಿ ನೀಡಿದೆ.[2] ಅವುಗಳಲ್ಲಿ ಪ್ರಮುಖವಾದ ಕೆಲವೆಂದರೆ :

೧. ಶಾಲೆಗಳಲ್ಲಿ ಬೋಧನೆಯ ಮಾಧ್ಯಮವಾಗಿ ದೇಶಭಾಷೆಯನ್ನು ಹೆಚ್ಚು ಬಳಸ ಬೇಕೇ ವಿನಃ ಇಂಗ್ಲೀಷನ್ನಲ್ಲ.

---

1 K.S.A., Ed., 1864–65. ಆದರೆ ಹಯವದನರಾಯರು ತಮ್ಮ ಗೆಜ಼ೆಟಿಯರ್‌ನಲ್ಲಿ ಕೇವಲ ರೈಸ್ ಹಾಗೂ ರಂಗಾಚಾರ್ಲು ಇವರಿಬ್ಬರನ್ನು ಮಾತ್ರ ಹೆಸರಿಸಿದ್ದಾರೆ. (ಸಂ. ೪. ಪು. ೬೩೪)

2 ARPI, 1873–74, p 43–44

೨. ಇಂಗ್ಲೀಷ್ ಭಾಷೆಯಲ್ಲಿರುವ ಈಗಿನ ಬಹುತೇಕ ಪುಸ್ತಕಗಳು ಇಂಗ್ಲೆಂಡಿನ ಸಾಮಾಜಿಕ ಹಾಗೂ ಭೌಗೋಳಿಕ ಪರಿಸ್ಥಿತಿಗೆ ತಕ್ಕಂತಿದೆಯೇ ವಿನಃ ಭಾರತೀಯ ಜನಜೀವನಕ್ಕಲ್ಲ. ಹಾಗಾಗಿ ಗಣಿತ, ಇತಿಹಾಸ ಹಾಗೂ ಭೂಗೋಳಗಳಂತಹ ವಿಷಯಗಳನ್ನು ಕಲಿಸುವಾಗ ಉದಾಹರಣೆಗಳು ಹಾಗೂ ವಿವರಣೆಗಳ ಸಂದರ್ಭ ದಲ್ಲಿ ಭಾರತೀಯತೆ ಪ್ರಧಾನವಾಗಿ ಎದ್ದು ಕಾಣುವಂತಿರಬೇಕು, ಯೂರೋಪ್ ಅಲ್ಲ (India, Not Europe should occupy the prominent place in illustrations and examples).

೩. ಪ್ರಯೋಗಶೀಲವಾದ ಹಾಗೂ ವೈಜ್ಞಾನಿಕವಾದ ವಿಷಯಗಳನ್ನು ಹೆಚ್ಚುಹೆಚ್ಚು ಕಲಿಸಬೇಕು ಹಾಗೂ ನೈತಿಕ ಮೌಲ್ಯಗಳನ್ನು ಬಿಂಬಿಸುವ ಪಾಠಗಳನ್ನು ಪಠ್ಯದಲ್ಲಿ ಅಳವಡಿಸಿಕೊಳ್ಳಬೇಕು.

೪. ಕಾಲದಿಂದ ಕಾಲಕ್ಕೆ ಪಠ್ಯಪುಸ್ತಕ ಸಮಿತಿಗಳನ್ನು ರಚಿಸುವುದರ ಮೂಲಕ ಬದಲಾಗುವ ಶಿಕ್ಷಣದ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸಬೇಕು.

ಈ ಮಾರ್ಗದರ್ಶಕ ಸೂತ್ರಗಳ ಹಿನ್ನೆಲೆಯಲ್ಲಿ ಸಿದ್ಧವಾದ ಹೊಸ ಪಠ್ಯಗಳಲ್ಲಿ ಅಪರಿಚಿತವೂ, ಅಗ್ರಾಹ್ಯವೂ ಆದ ಆಂಗ್ಲ ಉದಾಹರಣೆಗಳಿಗೆ ಬದಲಾಗಿ ಸ್ಥಳೀಯವಾದ ವಿಷಯ-ವಿವರಗಳೂ, ಪರಿಚಿತ ಪಠ್ಯವಿಷಯಗಳೂ ಸೇರ್ಪಡೆಯಾಗಿರುವುದನ್ನು ಗಮನಿಸ ಬಹುದು. ಆ ಕಾಲದ 'ಕನ್ನಡಬಾಲಬೋಧೆ'ಯ ಪಾಠವೊಂದನ್ನು ಉದಾಹರಣೆಗಾಗಿ ಅನುಬಂಧ ೬ರಲ್ಲಿ ಕಾಣಬಹುದಾಗಿದೆ. ರೈಸರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥ ರಾಗಿದ್ದಾಗ ಅವರ ಮಾರ್ಗದರ್ಶನದಲ್ಲಿ ರಚಿತವಾದ 'ಭೂವಿವರಣೆ', 'ವಾಗ್ವಿಧಾಯಿನಿ', 'ಇಂಡಿಯಾ ದೇಶದ ಚರಿತ್ರೆ', 'ಇಂಗ್ಲೆಂಡ್ ದೇಶದ ಚರಿತ್ರೆ', 'ಕಥಾಸಪ್ತತಿ', 'ಕಥಾಮಂಜರಿ' ಮುಂತಾದವು ಪ್ರತಿಯೊಂದೂ ಒಂದೊಂದು ಬಾರಿಗೆ ಐದರಿಂದ ಹತ್ತು ಸಾವಿರ ಪ್ರತಿ ಗಳಷ್ಟು ಸಂಖ್ಯೆಯಲ್ಲಿ ಮುದ್ರಿತವಾಗಿರುವುದು ಅವುಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ.

೧೮೭೭ರಲ್ಲಿ ಮತ್ತೆ ಬ್ರಿಟಿಷ್ ಚಕ್ರಾಧಿಪತ್ಯದ ಗೃಹಖಾತೆಯು ಭಾರತೀಯ ಶಾಲೆಗಳಲ್ಲಿ ಬಳಕೆಯಾಗುತ್ತಿರುವ ಪಠ್ಯಪುಸ್ತಕಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಿ (ಗೃಹಖಾತೆಯ ನಿರ್ಣಯ ಸಂಖ್ಯೆ ೧೦೧, ದಿ. ೨೩ ಏಪ್ರಿಲ್ ೧೮೭೭) ಅದರ ನಿರ್ಣಯಗಳನ್ನು ಪರಿಶೀಲನೆಗೆಂದು ಸಂಸ್ಥಾನದ ಚೀಫ್ ಕಮೀಷನರ್‌ರಿಗೆ ಕಳುಹಿಸಿದೆ.[1] ಇದಕ್ಕೆ ಉತ್ತರವಾಗಿ ರೈಸರು ಸುದೀರ್ಘವಾದ ಪತ್ರವೊಂದನ್ನು ಬರೆದು ಸಂಸ್ಥಾನದಲ್ಲಿ ಬಳಕೆಯಲ್ಲಿರುವ ಪಠ್ಯಪುಸ್ತಕಗಳ ವೈಜ್ಞಾನಿಕವಾದ ರಚನೆಯನ್ನು ಸಮರ್ಥಿಸಿಕೊಂಡಿದ್ದಾರೆ.[2]

---

1 K.S.A., Ed. 5 of 1877 (1–13)

2 ಅಲ್ಲೇ.

ಸ್ತ್ರೀಶಿಕ್ಷಣ:

ಮೈಸೂರು ಸಂಸ್ಥಾನದಲ್ಲಿ ಸ್ತ್ರೀಶಿಕ್ಷಣವು ಭದ್ರವಾಗಿ ನೆಲೆಯೂರುವಲ್ಲಿ ರೈಸರ ಪಾತ್ರ ಹಿರಿದಾದದ್ದು. ೧೮೪೨ರಷ್ಟು ಹಿಂದೆಯೇ ಲೂಯಿರೈಸರ ತಾಯಿಯಾದ ಜೇನ್‌ರೈಸ್‌ರು ಲಂಡನ್ ಮಿಷನ್‌ನ ಆಶ್ರಯದಲ್ಲಿ ಹೆಣ್ಣುಮಕ್ಕಳ ಕನ್ನಡ ಶಾಲೆಯೊಂದನ್ನು ಸ್ಥಾಪಿಸಿದ್ದರು. ಅನಂತರದಲ್ಲಿ ೫೦ರ ದಶಕದಲ್ಲಿ ಇನ್ನೂ ನಾಲ್ಕು ಹೆಣ್ಣುಮಕ್ಕಳ ಶಾಲೆಗಳು ಆರಂಭವಾದ ದಾಖಲೆಗಳಿವೆ.[1] ಹೋಬಳಿ ಶಾಲೆಗಳ ಆರಂಭದೊಂದಿಗೆ ಸ್ತ್ರೀಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಹುಡುಗರು ಮಾತ್ರವಲ್ಲದೆ 'ಇಷ್ಟವಿದ್ದ ಪಕ್ಷದಲ್ಲಿ ಹುಡುಗಿಯರು ಸಹಾ ಬಂದು ಈ ಮಠಗಳಲ್ಲಿ ಓದಬಹುದು' ಎಂಬ ಸರ್ಕಾರದ ಘೋಷಣೆ[2] ಸಾಕಷ್ಟು ಪ್ರಭಾವವನ್ನೇ ಬೀರಿತು. ಹಿಂದಿನ ಕೋಷ್ಟಕವೇ ವಿವರಿಸುವಂತೆ ೧೮೭೪-೭೫ರಲ್ಲಿ ಕೇವಲ ೧೪೭ ಜನ ಬಾಲಕಿಯರು ಹೋಬಳಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರಾದರೆ ೧೮೮೯-೯೦ರ ವೇಳೆಗೆ ಈ ಸಂಖ್ಯೆ ೨,೭೮೭ಕ್ಕೆ ಮುಟ್ಟಿತ್ತು.

ಕೇವಲ ಹೋಬಳಿ ಶಾಲೆಗಳಲ್ಲಿ ಬಾಲಕಿಯರಿಗೆ ವಿದ್ಯೆ ಕಲಿಯುವುದಕ್ಕೆ ಅವಕಾಶ ಕಲ್ಪಿಸುವುದು ಮಾತ್ರವಲ್ಲದೆ ಅವರಿಗೆಂದೇ ಪ್ರತ್ಯೇಕವಾದ ಸರ್ಕಾರಿ ಶಾಲೆಗಳನ್ನು ರೈಸರು ತಮ್ಮ ಅಧಿಕಾರಾವಧಿಯಲ್ಲಿ ಆರಂಭಿಸಿದರು. ಅವುಗಳ ವಿವರ ಹೀಗಿವೆ:

ವರ್ಷ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿನಿಯರ ಸಂಖ್ಯೆ
೧೮೬೯-೭೦	೫	೧೨೭
೧೮೭೧-೭೨	೮	೨೧೫
೧೮೭೨-೭೩	೫	೨೦೯
೧೮೭೩-೭೪	೯	೨೫೨
೧೮೭೪-೭೫	೯	೩೩೭
೧೮೭೬-೭೭	೧೧	೩೦೫

ಬೆಂಗಳೂರು, ಕೋಲಾರ ಹಾಗೂ ಹಾಸನಗಳಲ್ಲಿದ್ದ ಈ ಸರ್ಕಾರಿ ಶಾಲೆಗಳಲ್ಲಿ ಮಾತ್ರವಲ್ಲದೆ ಬೆಂಗಳೂರು, ಮೈಸೂರು, ಶಿವಮೊಗ್ಗ, ಆನೆಕಲ್ಲು, ತುಮಕೂರು ಮುಂತಾದ ಕಡೆ ೨೭ ಹೆಣ್ಣುಮಕ್ಕಳ ಅನುದಾನಿತ ಶಾಲೆಗಳೂ ಕಾರ್ಯಪ್ರವೃತ್ತವಾಗಿದ್ದವು.

1 ARPI, 1857

2 ARPI, 1868–69, p - 139.

ಸ್ತ್ರೀಶಿಕ್ಷಣದಲ್ಲಿನ ಈ ಪ್ರಗತಿ ಚೀಫ್ ಕಮೀಷನರ್‌ನನ್ನು ಎಷ್ಟು ಸಂಪ್ರೀತಗೊಳಿಸಿತೆಂದರೆ ಆತ

> "…. *the first attempts made to establish female schools have proved so successful that I think now that the cooperation of influencial high caste natives has been secured, the number may be increased in different parts of Mysore*" ಎಂದು ಅಭಿಪ್ರಾಯ ಪಟ್ಟಿದ್ದಾನೆ.[1]

ಕಾನಕಾನ ಹಳ್ಳಿ, ಗುಡಿಬಂಡೆಗಳಂತಹ ಚಿಕ್ಕಚಿಕ್ಕ ಊರುಗಳಿಂದಲೂ ಹೆಣ್ಣುಮಕ್ಕಳ ಶಾಲೆಗಳ ಸ್ಥಾಪನೆಗೆ ಕೋರಿಕೆಗಳು ಬರುವಷ್ಟು[2] ತೀವ್ರವಾಗಿ ಸ್ತ್ರೀಶಿಕ್ಷಣದ ಬಗೆಗಿನ ಕಾಳಜಿ ಜನರಲ್ಲಿ ಮೂಡಿದ್ದು ಒಂದು ಪ್ರಮುಖವಾದ ಪ್ರಗತಿಯಾದರೆ ಚಿಕ್ಕವಯಸ್ಸಿನ ಬಾಲಕಿಯರು ಮಾತ್ರವಲ್ಲದೆ ಪ್ರೌಢಗೃಹಿಣಿಯರೂ ವಿದ್ಯಾಭ್ಯಾಸದ ಕಡೆಗೆ ಆಕರ್ಷಿತರಾದದ್ದು ಮತ್ತೊಂದು ಗಮನಾರ್ಹ ಬೆಳವಣಿಗೆ. "ಹಾಸನದ ಹೆಣ್ಣುಮಕ್ಕಳ ಶಾಲೆಯ ಮಾಸ್ತರರು ಗೌರವಾನ್ವಿತ ವ್ಯಕ್ತಿಯಾಗಿದ್ದು ಅನೇಕ ದೇಶೀಯ ಅಧಿಕಾರಿಗಳ ಪತ್ನಿಯರಿಗೆ ಅವರ ಮನೆಗಳಲ್ಲಿಯೇ ವಿದ್ಯೆಯನ್ನು ಕಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ" ಎಂದು ೧೮೭೧-೭೨ರ ಇಲಾಖಾ ವಾರ್ಷಿಕ ವರದಿ ದಾಖಲಿಸಿದೆ.

ಹೆಣ್ಣುಮಕ್ಕಳಿಗೆ ವಿದ್ಯೆಯನ್ನು ಕಲಿಸುವಾಗ ಕೇವಲ ಅವರಿಗೆ ಓದು ಬರಹಗಳನ್ನು ಕಲಿಸಿದರೆ ಸಾಲದು, ಬದಲಿಗೆ ಅವರ ಭವಿಷ್ಯತ್ತಿನ ಜೀವನಕ್ಕೆ ಅವರ ಓದು ನೆರವಾಗುವಂತಿರಬೇಕು ಎಂಬುದು ರೈಸರ ಉದ್ದೇಶವಾಗಿತ್ತು. ಉದಾಹರಣೆಗೆ ಅವರು ಬೆಂಗಳೂರಿನ ಸೈಂಟ್ ಜಾನ್ ಡಿಸ್ಟ್ರಿಕ್ಟ್ ಸ್ಕೂಲ್‌ನಲ್ಲಿನ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಆಡಿರುವ ಮಾತುಗಳ ಭಾವಾನುವಾದವಿದು:

> *"ಹೆಣ್ಣುಮಕ್ಕಳಿಗೆ ಅಗತ್ಯವಿರುವ ಮಟ್ಟದ ಶಿಕ್ಷಣವನ್ನು ಇಲ್ಲಿ ಚೆನ್ನಾಗಿ ನೀಡಲಾಗುತ್ತಿದೆ ನಿಜ. ಆದರೆ ಪಠ್ಯಪುಸ್ತಕಗಳ ಬಗೆಗೆ ಇನ್ನೂ ಹೆಚ್ಚಿನ ಗಮನವನ್ನು ನೀಡಬೇಕೆಂಬುದು ನನ್ನ ಭಾವನೆ. ಏಕೆಂದರೆ ಅದರಲ್ಲಿ ಈ ಹೆಣ್ಣುಮಕ್ಕಳು ಮುಂದೆ ಪತ್ನಿಯರಾಗಿ ಅಥವಾ ತಾಯಿಯರಾಗಿ ನಿರ್ವಹಿಸಬೇಕಾದ ವಿಷಯವನ್ನು ಕುರಿತು ಅತ್ಯಂತ ಬೆಲೆಬಾಳುವ, ಮನೆಯಲ್ಲಿ ಅವರಿಗೆಂದೂ ದೊರಕದ ಮಾಹಿತಿ ಇದೆ. ಉದಾಹರಣೆಗೆ ಅನೇಕ ಜನ ಹೆಣ್ಣುಮಕ್ಕಳು*

---

1 ದಿನಾಂಕ ಮೇ ೧೯, ೧೮೭೯ರಂದು ರೈಸರಿಗೆ ಬರೆದ ಪತ್ರ (Gen. No. 889/132).

2 ARPI, 1873–74, p - 21.

ಪ್ರಾಚೀನ ಬ್ರಿಟನ್ನಿನ ಚರಿತ್ರೆಯ ಬಗ್ಗೆ, ರೋಮನ್-ಸ್ಯಾಕ್ಸನ್ನರ ಬಗೆಗೆ ಅನೇಕ ವಿಷಯಗಳನ್ನು ತಿಳಿಸಿದರು. ಆದರೆ ಒಬ್ಬ ಹುಡುಗಿಯಾದರೂ ಆಕಸ್ಮಾತ್ತಾಗಿ ತನ್ನ ಬಟ್ಟೆಗೆ ಬೆಂಕಿ ಹೊತ್ತಿಕೊಂಡರೆ ಏನು ಮಾಡಬೇಕೆಂಬ ಪ್ರಶ್ನೆಗೆ ಉತ್ತರಿಸ ಲಿಲ್ಲ. ಇದನ್ನು ತಿಳಿಯಲು ಅಗತ್ಯವಾದ ಮಾಹಿತಿ ಪಠ್ಯಪುಸ್ತಕದಲ್ಲಿಯೇ ಇದೆ....... ಓದು, ಬರಹಗಳೊಂದಿಗೆ ಹೊಲಿಗೆ, ಕಸೂತಿ, ಹೆಣಿಗೆ ಮುಂತಾದ ಕರಕುಶಲಗಳಲ್ಲಿಯೂ ಇವರೆಲ್ಲ ಪರಿಣಿತರಾಗಿದ್ದು ಅನೇಕರು ಹಣ ಸಂಪಾದನೆಯ ಮೂಲಕ ತಮ್ಮ ಪೋಷಕರಿಗೆ ನೆರವಾಗುತ್ತಿದ್ದಾರೆ." [1]

ಖೈದಿಗಳ ಶಿಕ್ಷಣ:

ರೈಸರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥರಾಗಿದ್ದಾಗ ಜಾರಿಗೊಂಡ ಅತ್ಯಂತ ವಿನೂತನವಾದ ಕಾರ್ಯಕ್ರಮವೆಂದರೆ ಜೈಲಿನಲ್ಲಿರುವ ಖೈದಿಗಳು ಹಾಗೂ ಬಾಲಾಪರಾಧಿಗಳ ಪರಿವೀಕ್ಷಣಾಲಯ (ರಿಮ್ಯಾಂಡ್‌ಹೋಂ) ಗಳಲ್ಲಿರುವ ಬಾಲಾಪರಾಧಿಗಳಿಗೆ ವಿದ್ಯಾಭ್ಯಾಸ ವನ್ನು ನೀಡುವ ಯೋಜನೆ. ರೈಸರ ಉಳಿದೆಲ್ಲ ಶೈಕ್ಷಣಿಕ ಕಾರ್ಯಕ್ರಮಗಳಿಗಿಂತ ಇದು ಅತ್ಯಂತ ವಿಭಿನ್ನವಾಗಿದೆ. ಏಕೆಂದರೆ ಜೈಲಿನಲ್ಲಿರುವ ಖೈದಿಗಳನ್ನೂ ಮನುಷ್ಯರೆಂದು ಪರಿಗಣಿಸುವ ಪರಿಪಾಠ ಬೆಳೆದದ್ದೇ ೧೯ನೇ ಶತಮಾನದ ಉತ್ತರಾರ್ಧದಿಂದ ಈಚೆಗೆ. ಆ ಮೊದಲು

"ಅಪರಾಧಿಗಳಿಗೆ ನೀಡುವ ಶಿಕ್ಷೆಗಳನ್ನು ಕುರಿತು ಹೇಳುವುದಾದರೆ, ಎಲ್ಲ ಮೈಸೂರು ಅರಸರಿಂದ ಮೊದಲುಗೊಂಡು ಹೈದರಾಲಿ, ಮುಮ್ಮಡಿ ಕೃಷ್ಣರಾಜರ ವರೆಗೆ ಇಂತಹ ಒಂದು ನಿರ್ದಿಷ್ಟ ಅಪರಾಧಕ್ಕೆ ಇಂತಹುದೇ ಶಿಕ್ಷೆ ಎಂಬ ಸ್ಪಷ್ಟವಾದ ವ್ಯವಸ್ಥೆಯೇ ಇರಲಿಲ್ಲ..... ಜೈಲುಗಳ ನಿರ್ವಹಣೆ ಹಾಗೂ ಅದರಲ್ಲಿಯ ಸೌಕರ್ಯಗಳ ಬಗೆಗೆ ಯಾವ ಗಮನವನ್ನೂ ಕೊಟ್ಟಿರಲಿಲ್ಲ. ಖೈದಿಗಳನ್ನು ಯಾವುದೇ ರೀತಿಯಲ್ಲಿ ವರ್ಗೀಕರಿಸದೇ ಸಂಶಯಿತರು, ಆರೋಪಿಗಳು, ಅಪರಾಧಿಗಳು ಎಲ್ಲರನ್ನೂ ಒಂದೇ ಕಡೆ ಕೂಡಿಹಾಕಲಾಗುತ್ತಿತ್ತು." [2]

ಹೀಗಿರುವಾಗ ಬಂಧಿತರನ್ನೂ ಮಾನವೀಯ ದೃಷ್ಟಿಯಿಂದ ನೋಡಿ ಅವರಿಗೂ ವಿದ್ಯಾಭ್ಯಾಸದ ಅನುಕೂಲ ನೀಡುವಂತಹ ಯೋಜನೆಯೊಂದು ರೈಸರ ಕಾಲದಲ್ಲಿ

---

1 ARPI, 1868–69, p - 115 ರಲ್ಲಿಯ ಭಾಗದ ಅನುವಾದ

2 Rice. B.L., **Mysore Gazetteer**, Vol. I, 1897, p 633 & 637 ರಲ್ಲಿಯ ಭಾಗದ ಅನುವಾದ

ಜಾರಿಯಲ್ಲಿತ್ತು ಎನ್ನುವುದೇ ಅಚ್ಚರಿಯ ಸಂಗತಿಯಾಗಿದೆ. ಇಂತಹ ವಿಶಿಷ್ಟ ಯೋಜನೆಯ ಕಲ್ಪನೆ ಮೊದಲು ಯಾರಿಗೆ, ಹೇಗೆ ಬಂದಿತು ಎಂಬುದರ ಬಗ್ಗೆ ಈಗ ಯಾವುದೇ ಮಾಹಿತಿ ಲಭ್ಯವಿಲ್ಲವಾದರೂ ೧೮೬೭-೬೮ರ ಸುಮಾರಿಗೆ ಆರಂಭವಾದ ಈ ಯೋಜನೆ ೧೮೮೦ರ ದಶಕದವರೆಗಷ್ಟೇ ಜಾರಿಯಲ್ಲಿದ್ದುದನ್ನು ಗಮನಿಸಿದರೆ (ಇದು ರೈಸರು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಸ್ಥರಾಗಿದ್ದ ಸಮಯ) ಈ ಯೋಜನೆಯ ಪರಿಕಲ್ಪನೆ ರೈಸರದೇ ಆಗಿದ್ದಿರಬೇಕು ಎಂಬ ಊಹೆಗೆ ಅವಕಾಶವಿದೆ.

೧೮೬೪ರಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಕಾರಾಗೃಹದ ಸ್ಥಾಪನೆಯಾದ ನಾಲ್ಕೈದು ವರ್ಷಗಳಲ್ಲಿಯೇ ಈ ಯೋಜನೆ ಆರಂಭವಾಯಿತು. ೧೮೬೮-೬೯ರ ಇಲಾಖಾ ವರದಿಯು ಈ ಕಾರಾಗೃಹ ಶಾಲೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೀಗೆ ನೀಡಿದೆ:

> *"ಈ ವರ್ಷದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರುವ ಬಂದಿಗಳಿಗೆ ವಿದ್ಯೆಯನ್ನು ಕಲಿಸುವ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಇಲ್ಲಿರುವ ಸುಮಾರು ೨೦೦ ಜನ ವಯಸ್ಕ ಖೈದಿಗಳಿಗೆ ಅವರು ದಿನದ ಕೆಲಸಕಾರ್ಯಗಳನ್ನು ಮುಗಿಸಿದನಂತರ ಪ್ರತಿಸಂಜೆ ಅರ್ಧ ಗಂಟೆಯ ಕಾಲ ತರಗತಿಗಳನ್ನು ತೆಗೆದುಕೊಳ್ಳಲಾಗುವುದು. ಅವರವರ ವಾರ್ಡುಗಳನ್ನು ಆಧರಿಸಿ ತರಗತಿಗಳನ್ನು ವಿಂಗಡಿಸಿ ಮೊದಲಿಗೆ ಕನ್ನಡವರ್ಣಮಾಲೆಯನ್ನು ಹೇಳಿ ಕೊಡಲಾಗುವುದು. ಇಲ್ಲಿರುವರಲ್ಲಿ ಕೆಲವರು ಈ ಹಂತವನ್ನು ಈಗಾಗಲೇ ದಾಟಿದ್ದು ವಾಕ್ಯಗಳನ್ನು ಓದುವ ಮಟ್ಟಿಗೆ ಕಲಿತಿದ್ದಾರೆ. ಆದರೆ ಇಷ್ಟು ಕಡಿಮೆಕಾಲ ಕಲಿಯುವುದರಿಂದ ಹೆಚ್ಚಿನ ಪ್ರಗತಿಯೇನೂ ಸಾಧ್ಯವಿಲ್ಲ. ಇದರೊಂದಿಗೆ ಅವಧಿ ಮುಗಿದ ಖೈದಿಗಳ ಹೊರಹೋಗುವಿಕೆ ಹಾಗೂ ಹೊಸ ಖೈದಿಗಳ ಆಗಮನ ಎರಡೂ ಕಲಿಸುವ ಕಾರ್ಯಕ್ಕೆ ಅಡ್ಡಿಯಾಗಿವೆ...."*[1]

ಇದೇ ವರ್ಷದ ಪರಿವೀಕ್ಷಕರ ವರದಿಯು ತರಗತಿಯಲ್ಲಿ ನಡೆಯುತ್ತಿದ್ದ ಪಾಠದ ರೀತಿಯನ್ನು ಹೀಗೆ ವಿವರಿಸುತ್ತದೆ:

> *"ಇಲ್ಲಿ ಕಲಿಯುತ್ತಿರುವವರ ಸಂಖ್ಯೆ ಸುಮಾರು ೨೦೦. ಇವರಿಗೆಲ್ಲ ಕನ್ನಡವನ್ನು ಓದಲು ಕಲಿಸಲಾಗುತ್ತಿದ್ದು ಅನೇಕರು ವರ್ಣಮಾಲೆಯ ಹಂತದಿಂದ ಮುಂದಕ್ಕೇ ಹೋಗಿಲ್ಲ. ಪ್ರತಿಯೊಂದು ವಾರ್ಡಿನಲ್ಲಿಯೂ ಅನೇಕ ತರಗತಿಗಳಿದ್ದು ಅದರಲ್ಲಿ ಒಂದೊಂದರಲ್ಲಿಯೂ ಸುಮಾರು ೨೦ ಮಂದಿ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲ ಒಬ್ಬರ ಹಿಂದೆ ಒಬ್ಬರು ಎರಡು ಸಾಲುಗಳಲ್ಲಿ ಕುಳಿತು*

---

1 ಪು. ೨೮ರಲ್ಲಿಯ ಭಾಗದ ಅನುವಾದ

ಕೊಳ್ಳುತ್ತಾರೆ. ಪ್ರತಿಸಾಲಿನ ಮುಂಭಾಗದಲ್ಲಿ ಒಂದು ರಟ್ಟನ್ನು ಕಟ್ಟಲಾಗಿರುತ್ತದೆ. ಇದರ ಮೇಲೆ ಅಕ್ಷರಗಳಿರುತ್ತವೆ. ಒಬ್ಬ ವ್ಯಕ್ತಿ ಆ ಅಕ್ಷರವನ್ನು ಗುರುತಿಸಿ ಅದನ್ನು ಗಟ್ಟಿಯಾಗಿ ಓದಿದರೆ ಉಳಿದವರೆಲ್ಲ ಒಟ್ಟಾಗಿ ಅದನ್ನು ಪುನರುಚ್ಚರಿಸಬೇಕು. ಬೇರೆಯ ಸಮಯದಲ್ಲಿ ಖೈದಿಗಳಿಗೆ ಒಬ್ಬರು ಇನ್ನೊಬ್ಬರೊಟ್ಟಿಗೆ ಮಾತನಾಡುವ ಅನುಕೂಲವಿಲ್ಲದಿರುವುದರಿಂದ ಈ ಸಾಮೂಹಿಕ ಪುನರುಚ್ಚಾರದ ಕ್ರಮದಿಂದಾಗಿ ಅವರಿಗೆ ಒಂದು ರೀತಿಯ ವಿರಾಮ. ಇವರಲ್ಲಿ ಚೆನ್ನಾಗಿ ಕಲಿತವರು ವರ್ಣಮಾಲೆಯನ್ನು ಮುಗಿಸಿದ್ದು ಸದ್ಯವೇ ಪದಗಳನ್ನು ಕಲಿಯಲು ಆರಂಭಿಸಿದ್ದಾರೆ. ಇವರಿಗೆ ಬರೆಯಲು ಹಾಗೂ ಗಣಿತವನ್ನು ಕಲಿಸಲು ಯೋಚಿಸಲಾಗುತ್ತಿದೆ. ದೀರ್ಘಕಾಲದ ಜೈಲುವಾಸದ ಶಿಕ್ಷೆಗೆ ಒಳಗಾಗಿರುವವರು ತಾವು ವಯಸ್ಸಾದ ಮೇಲೆ ಅಕ್ಷರಾಭ್ಯಾಸವನ್ನು ಆರಂಭ ಮಾಡಿರುವುದನ್ನೂ ಮರೆತು ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಸಾಧ್ಯತೆಗಳಿವೆ.... ಬಹಳ ಅಪರೂಪವಾಗಿ ಓದುಬರಹಗಳನ್ನು ಬಲ್ಲ ವಿದ್ಯಾವಂತನೊಬ್ಬ ಅಪರಾಧಿಯಾಗಿ ಜೈಲನ್ನು ಸೇರಿದ್ದಾನೆಂದು ತಿಳಿದುಬಂದಿದೆ. ಜೈಲಿನಲ್ಲಿರುವ ವಿವಿಧ ಜಾತಿಯ ಅಪರಾಧಿಗಳಲ್ಲಿ ನೇಕಾರರು ಕಲಿಯುವುದರಲ್ಲಿ ಎಲ್ಲರಿಗಿಂತ ಮುಂದಿದ್ದರೆ ಲಂಬಾಣಿಗಳು ಅತ್ಯಂತ ಹಿಂದಿದ್ದಾರೆ." [1]

೧೮೬೯-೭೦ರಲ್ಲಿ ವಿದ್ಯೆಯನ್ನು ಕಲಿಯುತ್ತಿದ್ದ ಖೈದಿಗಳ ಸಂಖ್ಯೆ ಇದ್ದಕ್ಕಿದ್ದಂತೆ ಕುಸಿದಿದೆ. ಇದಕ್ಕೆ ಕಾರಣವೇನೋ ತಿಳಿಯುವುದಿಲ್ಲ. ಆದರೂ ಈ ವರ್ಷ ೨೮೯ ಜನ 'ಕನ್ನಡ ಮೊದಲನೇ ಪುಸ್ತಕ'ವನ್ನೂ, ೪೦ ಜನ 'ಕನ್ನಡ ಎರಡನೇ ಪುಸ್ತಕ'ವನ್ನೂ ಓದಬಲ್ಲವರಾಗಿದ್ದರು. ೩೦ ಮಂದಿ ಇಂಗ್ಲೀಷ್ ಕಲಿಯುತ್ತಿದ್ದರು.

ಮತ್ತೊಂದು ಪ್ರಮುಖ ಅಂಶವೆಂದರೆ ಈ ವರ್ಷದಲ್ಲಿ ಮಹಿಳಾ ಖೈದಿಗಳಿಗೂ ಶಿಕ್ಷಣವನ್ನು ನೀಡುವ ವ್ಯವಸ್ಥೆಯಾದದ್ದು. ಅವರಲ್ಲಿ ನಾಲ್ಕು ಜನ ಮೊದಲ ಪುಸ್ತಕವನ್ನೂ, ಆರು ಜನ ಎರಡನೇ ಪುಸ್ತಕ ವನ್ನೂ ಓದಿ ಬರೆಯಲು, ಅಲ್ಪಸ್ವಲ್ಪ ಮಗ್ಗಿಯನ್ನೂ ಹೇಳಲು ಶಕ್ತರಾದರು.[2]

ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಏರಿಳಿತವನ್ನು ಕಾಣುತ್ತೇವೆ. ಇದಕ್ಕೆ ಮುಖ್ಯವಾದ ಕಾರಣ ತರಗತಿಗಳಿಗೆ ಹಾಜರಿ ಕಡ್ಡಾಯವಲ್ಲದೇ ಇದ್ದದ್ದು. ಆದರೂ ಖೈದಿಗಳು ಸ್ವಂತ ಆಸಕ್ತಿಯಿಂದ ತರಗತಿಗಳಲ್ಲಿ ಕುಳಿತು ವಿದ್ಯೆಯನ್ನು ಕಲಿಯುತ್ತಿದ್ದುದನ್ನು

1 ARPI, 1868-69, p 93-94 ರಲ್ಲಿಯ ಅನುವಾದ

2 ARPI, 1869-70, p 107

ಅಧಿಕಾರಿಗಳು ದಾಖಲಿಸಿದ್ದಾರೆ. ಅಷ್ಟೇ ಅಲ್ಲದೆ ತಾವೂ ಶಿಕ್ಷಿತರು, ಅಕ್ಷರಸ್ಥರು ಎಂಬುದನ್ನು ಸಮಾಜಕ್ಕೆ ಸಾರಿಹೇಳಬೇಕೆನ್ನುವ ಅವರ ಹಂಬಲ ಎಷ್ಟಿರುತ್ತಿತ್ತು ಎಂಬುದನ್ನು ಬೆಂಗಳೂರಿನ ಕಾರಾಗೃಹದ ಸೂಪರಿಂಟೆಂಡೆಂಟ್ ಡಾ॥ ಹೆಂಡರ್‌ಸನ್ ಹೀಗೆ ವಿವರಿಸುತ್ತಾರೆ:

> *"ಕಳೆದ ವರ್ಷ ಜೈಲಿನಿಂದ ಬಿಡುಗಡೆಯಾದವರಲ್ಲಿ ೧೨೧ ಮಂದಿ ಹೊಸದಾಗಿ ಓದಲು, ಬರೆಯಲು ಕಲಿತವರು. ಜೈಲಿನಿಂದ ಹೊರಗೆ ಹೋದನಂತರ ಇವರಲ್ಲಿ ಎಷ್ಟು ಜನ ಓದುಬರಹಗಳನ್ನು ಮುಂದುವರೆಸಿ ಜ್ಞಾನಾರ್ಜನೆಯನ್ನು ಹೆಚ್ಚು ಮಾಡಿಕೊಳ್ಳುತ್ತಾರೆಯೋ ಗೊತ್ತಿಲ್ಲ. ಆದರೆ ಬಿಡುಗಡೆಯ ಸಂದರ್ಭದಲ್ಲಿ ಇವರೆಲ್ಲರೂ ಸಾಮಾನ್ಯವಾಗಿ ತಮ್ಮ ಪುಸ್ತಕ ಗಳನ್ನು ಹೊರಗೆ ಕೊಂಡೊಯ್ಯಲು ಅನುಮತಿಯನ್ನು ಕೋರುತ್ತಿದ್ದರು. ತಮ್ಮ ಅರಿವನ್ನು ಹೆಚ್ಚುಮಾಡಿಕೊಳ್ಳುವುದರೊಂದಿಗೆ ಜೈಲಿನಲ್ಲಿ ತಾವು ಸಾಧಿಸಿದ ಈ ಅದ್ಭುತವಾದ ಪ್ರಗತಿಯನ್ನು ಬಂಧುಮಿತ್ರರ ಮುಂದೆ ಪ್ರದರ್ಶಿಸುವುದೂ ಈ ಬೇಡಿಕೆಯ ಹಿಂದಿನ ಉದ್ದೇಶವಿರಬಹುದು."* [1]

ಕೇವಲ ವಯಸ್ಕರಾದ ಖೈದಿಗಳಿಗೆ ಮಾತ್ರವಲ್ಲದೆ ಬಾಲಾಪರಾಧಿಗಳಿಗೆ ಶಿಕ್ಷಣ ವನ್ನು ನೀಡುವುದರ ಬಗೆಗೂ ರೈಸ್ ಕಾರ್ಯಪ್ರವೃತ್ತರಾಗಿದ್ದರು. ೧೮೬೮-೬೯ರಲ್ಲಿ ಸುಮಾರು ೧೫ ಮಂದಿ ಮಕ್ಕಳು ನಾಲ್ಕು ತರಗತಿಗಳಲ್ಲಿ ಕಲಿಯುತ್ತಿದ್ದರು. ಇವರ ಹಿರೇಮಣಿಯು 'ಕನ್ನಡ ಮೂರನೆಯ ಪುಸ್ತಕ'ವನ್ನು ಓದಿ ಅದರಲ್ಲಿಯ ಕಥೆಗಳನ್ನು ಹೇಳಲು, ಉಕ್ತಲೇಖನ ವನ್ನು ತಪ್ಪಿಲ್ಲದೆ ಬರೆಯಲು ಹಾಗೂ ೧೨ರವರೆಗೆ ಮಗ್ಗಿಯನ್ನು ಹೇಳಲು ಶಕ್ತನಾಗಿದ್ದ. ಉಳಿದವರಲ್ಲಿ ಒಬ್ಬೊಬ್ಬರು ಒಂದೊಂದು ಕಲಿಕೆಯ ಹಂತದಲ್ಲಿದ್ದರು. ಶಾಲೆಯ ಪಾಠ ಗಳೊಂದಿಗೆ ಇವರು ಒಂದು ಹೂದೋಟವನ್ನೂ ಆಸಕ್ತಿಯಿಂದ ಬೆಳೆಸುತ್ತಿದ್ದರು ಎಂದು ತಿಳಿದುಬರುತ್ತದೆ. ಮುದ್ರಿತ ಕಾರ್ಡ್‌ಗಳು, ಮಣಿಕಟ್ಟುಗಳು ಹಾಗೂ ನೀತಿಬೋಧಕ ಪುಸ್ತಕಗಳನ್ನು ಈ ಮಕ್ಕಳ ಬೋಧನೆಯಲ್ಲಿ ಬಳಸಬೇಕೆಂದು ರೈಸ್ ಸಲಹೆಮಾಡಿದ್ದಾರೆ.[2]

೧೮೭೧-೭೨ನೇ ವರ್ಷಧಲ್ಲಿ ಕೈದಿಗಳಿಗೆ ಶಿಕ್ಷಣ ನೀಡುವ ಪರಿಸ್ಥಿತಿ ಇನ್ನಷ್ಟು ಸುಧಾರಿಸಿತು. ಈ ವರ್ಷ ೪೭೩ ಮಂದಿ ವಿದ್ಯಾರ್ಥಿಗಳು ೩೦ ತರಗತಿಗಳಲ್ಲಿ ಕಲಿಯು ತ್ತಿದ್ದರು. ಮರಳಿನ ಮೇಲೆ ಬರೆಯುವುದಕ್ಕೆ ಬದಲಾಗಿ ಹಲಗೆ ಬಳಪಗಳನ್ನು ಬಳಸುವ ಪದ್ಧತಿ ಜಾರಿಗೆ ಬಂದಿತು. ಖೈದಿಗಳ ಶಿಕ್ಷಣಕ್ಕೆಂದೇ ನಿರ್ದಿಷ್ಟವಾಗಿ ನಿಯಮಿತನಾದ ನಿರ್ದಿಷ್ಟ ಉಪಾಧ್ಯಾಯ ಇಲ್ಲದಿದ್ದರೂ ಫಲಿತಾಂಶ ಚೆನ್ನಾಗಿಯೇ ಇತ್ತು. ಖೈದಿಗಳ ಶಿಕ್ಷಣಕ್ಕೆಂದು ಈ ವರ್ಷದಲ್ಲಿ ಸರ್ಕಾರಕ್ಕೆ ಆದ ಖರ್ಚು ಕೇವಲ ೮ ರೂ. ೧೦ ಆಣೆ.[3]

1 ARPI, 1872-73, p 62 ರಲ್ಲಿಯ ಅನುವಾದ

2 ARPI, 1868-69, p 95 ರಲ್ಲಿಯ ಅನುವಾದ

3 ARPI, 1871-72, p 31

ಬೆಂಗಳೂರಿನ ಕೇಂದ್ರಕಾರಾಗೃಹದಲ್ಲಿನ ಖೈದಿಗಳ ಶಿಕ್ಷಣ ಯೋಜನೆ ಅತ್ಯಂತ ಯಶಸ್ವಿಯಾದುದನ್ನು ಕಂಡ ಸರ್ಕಾರ ಇತರ ಸ್ಥಳಗಳಲ್ಲಿನ ಉಪಕಾರಾಗೃಹಗಳಿಗೂ ಈ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಿತು. ಅದರಂತೆ ೧೮೭೨-೭೩ರಲ್ಲಿ ಮೈಸೂರು ಹಾಗೂ ಶಿವಮೊಗ್ಗಗಳ ಜೈಲುಗಳಲ್ಲಿಯೂ ಶಾಲೆಗಳನ್ನು ಆರಂಭಿಸಲಾಯಿತು. ಈ ಮೂರೂ ಶಾಲೆಗಳಲ್ಲಿ ಆ ವರ್ಷ ಕಲಿತವರ ಸಂಖ್ಯೆ ೬೯೬. ಮೂರು ವರ್ಷಗಳ ಕಾಲ ಈ ಸಂಖ್ಯೆ ಹೀಗೇ ಬೆಳೆಯಿತು:

ಬೆಂಗಳೂರು	-	३೯೨
ಮೈಸೂರು	-	೨೦೭
ಶಿವಮೊಗ್ಗ	-	೧೨೦
ಒಟ್ಟು	-	೭೨೧

೧೮೭೬-೭೭ರ ವೇಳೆಗೆ ಈ ಸಂಖ್ಯೆ ಮತ್ತೆ ೫೦೬ಕ್ಕೆ ಕುಸಿಯಿತು. ಈ ವರ್ಷದಲ್ಲಿ ಮಹಿಳಾ ಖೈದಿಗಳಿಗೆಂದೇ ಶಿಕ್ಷಕಿಯೊಬ್ಬರನ್ನು ನೇಮಕ ಮಾಡಲಾಯಿತು. ಅಷ್ಟೇ ಅಲ್ಲದೆ ಅಪರಾಧಿಗಳ ಮಕ್ಕಳಿಗೆ ಶಿಕ್ಷಣವನ್ನು ನೀಡುವುದರ ಬಗೆಗೂ ರೈಸರು ೧೮೭೩ರಲ್ಲೇ ಚಿಂತನೆ ನಡೆಸಿದ್ದಾರೆ.

ಮಾನವ ಹಕ್ಕುಗಳ ಬಗೆಗೆ ಯಾವುದೇ ಕಾಳಜಿ ಇರದಿದ್ದ ಆ ದಿನಗಳಲ್ಲಿಯೂ ಖೈದಿಗಳಿಗೆ ಶಿಕ್ಷಣವನ್ನು ನೀಡುವಂತಹ ಈ ಅಪರೂಪದ ಯೋಜನೆಯ ಎಲ್ಲ ಯಶಸ್ಸು ಅದರ ರೂವಾರಿಯಾದ ಲೂಯಿರೈಸರಿಗೆ ಸೇರಬೇಕಾದುದು ಎಂಬುದು ನಿರ್ವಿವಾದ.

ತಾಂತ್ರಿಕ ಶಿಕ್ಷಣ :

೧೮೬೨ರಷ್ಟು ಹಿಂದೆಯೇ ಮೈಸೂರು ಸಂಸ್ಥಾನದಲ್ಲಿ ಇಂಜನಿಯರಿಂಗ್ ಶಾಲೆಯೊಂದು ಅಸ್ತಿತ್ವದಲ್ಲಿತ್ತೆಂದು ದಾಖಲೆಗಳು ಹೇಳುತ್ತವೆ. ಕೇವಲ ಎರಡೇ ತರಗತಿಗಳಿದ್ದ ಈ ಶಾಲೆಯನ್ನು ಸಂಸ್ಥಾನಕ್ಕೆ ಬೇಕಾಗಿದ್ದ ತಂತ್ರಜ್ಞರನ್ನು ತರಬೇತುಗೊಳಿಸುವ ಉದ್ದೇಶದಿಂದಲೇ ಆರಂಭಿಸಲಾಯಿತು.

ಮೊದಲಿಗೆ ಈ ಶಾಲೆಯಲ್ಲಿ ಅಂಕಗಣಿತ, ಬೀಜಗಣಿತ, ರೇಖಾಗಣಿತ, ಕ್ಷೇತ್ರಗಣಿತ, ಹೈಡ್ರಾಲಿಕ್ಸ್, ಲೆವೆಲಿಂಗ್, ನೀರಾವರಿ ಕಾಮಗಾರಿ, ಡ್ರಾಯಿಂಗ್, ರಸ್ತೆ ಹಾಗೂ ಸೇತುವೆಗಳನ್ನು ಸರ್ವೆ ಮಾಡುವ ವಿಧಾನ, ನಿರ್ಮಾಣಕ್ಕೆ ಬೇಕಾಗುವ ಸಾಮಾನು ಹಾಗೂ ನಿರ್ಮಾಣದ ವೆಚ್ಚವನ್ನು ಅಂದಾಜು ಮಾಡುವ ಬಗೆ, ಮುಂತಾದವುಗಳನ್ನು ಕಲಿಸಲಾಗುತ್ತಿತ್ತು.[1] ಅನಂತರ

1 ARPI, 1868-69, p 92

ಪ್ಲೇನ್ ಟ್ರಿಗ್ನೋಮೆಟ್ರಿ ಹಾಗೂ ಥಿಯೊಡೊಲೈಟ್ ಸರ್ವೆ ವಿಧಾನಗಳನ್ನೂ ಸೇರಿಸಲಾಯಿತು. ೧೮೬೮ರವರೆಗೆ ಈ ವಿಷಯಗಳನ್ನೆಲ್ಲಾ ತರಗತಿಯಲ್ಲಿ ಸೈದ್ಧಾಂತಿಕವಾಗಿ ಕಲಿಸಲಾಗುತ್ತಿತ್ತೇ ವಿನಃ ಪ್ರಾಯೋಗಿಕವಾದ ವಿಧಾನಕ್ಕೆ ಅವಕಾಶವಿರಲಿಲ್ಲ. "ಮರಮುಟ್ಟುಗಳು ಹಾಗೂ ಉಪಕರಣಗಳಿಂದ ಕೂಡಿದ ಕಾರ್ಯಾಗಾರ (ವರ್ಕ್‌ಶಾಪ್) ಒಂದನ್ನು ಸ್ಥಾಪಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಮರಗೆಲಸ ಮುಂತಾದ ಸರಳ ತಾಂತ್ರಿಕ ವಿದ್ಯೆಗಳನ್ನು ಕಲಿಸಿ ಉತ್ತಮವಾದ ಫಲಿತಾಂಶವನ್ನು ಗಳಿಸಬಹುದು. ಇದರಿಂದಾಗಿ ಆಗುವ ಹೆಚ್ಚಿನ ವೆಚ್ಚವನ್ನು ನಿಭಾಯಿಸಲು ಒಬ್ಬ ಮೇಸ್ತ್ರಿ ಹಾಗೂ ಕೆಲವು ಕೆಲಸಗಾರರನ್ನು ನೇಮಿಸಿಕೊಂಡು ವಿದ್ಯಾಭ್ಯಾಸದ ಇಲಾಖೆಗೆ ಅಗತ್ಯವಿರುವ ಪೀಠೋಪಕರಣಗಳನ್ನು ನಾವೇ ತಯಾರಿಸಿಕೊಳ್ಳಬಹುದು" ಎಂದು ಶಾಲೆಯ ಮುಖ್ಯೋಪಾಧ್ಯಾಯರು ೧೮೬೮ರಲ್ಲಿ ರೈಸರಿಗೆ ವರದಿ ಸಲ್ಲಿಸಿದ್ದಾರೆ.[1] ಮದ್ರಾಸಿನಲ್ಲಿದ್ದ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರು, ಸಂಸ್ಥಾನದ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಪ್ರಮುಖ ಇಂಜಿನಿಯರ್‌ಗಳು, ಗಣಿತಶಾಸ್ತ್ರಜ್ಞರು ಮುಂತಾದವರುಗಳಿಂದ ಪ್ರಶ್ನೆಪತ್ರಿಕೆಗಳನ್ನು ತರಿಸಿಕೊಂಡು ವಿದ್ಯಾರ್ಥಿಗಳನ್ನು ಪರೀಕ್ಷಿಸ ಲಾಗುತ್ತಿತ್ತು. ಉತ್ತೀರ್ಣರಾದ 'ಅಪ್ಪರ್‌ಡಿವಿಷನ್'ನ ವಿದ್ಯಾರ್ಥಿಗಳನ್ನು ಸಹಾಯಕ ಇಂಜಿನಿಯರ್‌ಗಳನ್ನಾಗಿ ಹಾಗೂ 'ಲೋಯರ್ ಡಿವಿಷನ್'ನ ವಿದ್ಯಾರ್ಥಿಗಳನ್ನು ಉಪಮುಖ್ಯ ಓವರ್‌ಸೀಯರ್‌ಗಳನ್ನಾಗಿ ನೇಮಿಸಿಕೊಳ್ಳಲಾಗುತ್ತಿತ್ತು.[2]

ದೂರದ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳನ್ನು ಇಂಜಿನಿಯರಿಂಗ್ ಶಿಕ್ಷಣದ ಕಡೆಗೆ ಆಕರ್ಷಿಸಿ ಮರಾಮತ್ ಇಲಾಖೆಯಲ್ಲಿ (ಈಗಿನ ಲೋಕೋಪಯೋಗಿ ಇಲಾಖೆ) ಅವರು ಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲೆಂದು ವಿಶೇಷವಾದ ವಿದ್ಯಾರ್ಥಿವೇತನದ ವ್ಯವಸ್ಥೆ ಯನ್ನೂ ರೈಸರು ಪ್ರಭಾರಿ ನಿರ್ದೇಶಕರಾಗಿದ್ದಾಗ ಮಾಡಿದರು.

ಇಷ್ಟೆಲ್ಲ ಆದರೂ ೧೮೭೧-೭೨ರ ವೇಳೆಗೇ ಇಂಜನಿಯರಿಂಗ್ ಶಾಲೆಗೆ ವಿದ್ಯಾರ್ಥಿ ಗಳು ಬರುವುದು ಕಡಿಮೆಯಾದುದರಿಂದ ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಒದಗಿತು.[3] ಆದರೂ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ

---

1 ಅಲ್ಲೇ.,

2 ಉದಾಹರಣೆಗೆ ಟಿ. ಮುನಿಸ್ವಾಮಿ, ರಾಮಸ್ವಾಮಿ ಪಿಳ್ಳೈ, ಡಕ್‌ವರ್ತ್, ದುರ್ಗಿಯಾ ಪಿಳ್ಳೈ, ಕೆಂಗ್, ಫಿಲಿಪ್ ಮುಂತಾದವರು ೧೮೬೮ರಲ್ಲಿ ಉತ್ತೀರ್ಣರಾಗಿ ಮುಂದೆ ಸರ್ಕಾರದ ಸೇವೆಗೆ ಸೇರಿದವರು.

3 ಇದಕ್ಕೆ ಕಾರಣಗಳೇನೋ ತಿಳಿದು ಬರುವುದಿಲ್ಲ. ಮುಂದೆ ೧೯೦೩ರಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ವರದಿಯನ್ನು ನೀಡಿದ ಸರ್. ಪಿ.ಎನ್. ಕೃಷ್ಣಮೂರ್ತಿಯವರು ೧೯೧೧ರ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಭಿಪ್ರಾಯಪಟ್ಟಂತೆ ಬಹುಶಃ 'ಸಾಹಿತ್ಯಕ ಶಿಕ್ಷಣವು (Literary education) ಯುವಜನರನ್ನು ತಾಂತ್ರಿಕ ಶಿಕ್ಷಣದಿಂದ ವಿಮುಖರನ್ನಾಗಿ ಮಾಡಿ ಕೇವಲ ಸರಕಾರಿ ಗುಮಾಸ್ತೆ ಅಥವಾ ಶಾಲಾ ಶಿಕ್ಷಕರನ್ನು ರೂಪಿಸುವಲ್ಲಷ್ಟೇ ನಿರತವಾದದ್ದು' ಇದಕ್ಕೆ ಕಾರಣವಿರಬಹುದು. {R.P.E.M. (1911-16), p-56 ಇಲ್ಲಿ ಉದ್ಧೃತ}

ರೈಸರು ಆ ಶಾಲೆಯ ಕೆಲವು ತರಗತಿಗಳನ್ನು (ಉದಾಹರಣೆಗೆ: ಸರ್ವೆ ತರಗತಿಗಳು) ಜಿಲ್ಲಾ ಶಾಲೆಗಳಿಗೆ ವರ್ಗಾಯಿಸಿದರು. ಅಷ್ಟೇ ಅಲ್ಲದೆ ಇಂಜಿನಿಯರಿಂಗ್ ಶಾಲೆಯ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ವಿದ್ಯಾರ್ಥಿವೇತನವನ್ನು ಈ ತರಗತಿಗಳ ಹುಡುಗರಿಗೇ ಹಂಚಲಾಯಿತು. ೧೮೭೧-೭೨ರಲ್ಲಿ ತುಮಕೂರಿನ ಜಿಲ್ಲಾಶಾಲೆಯಲ್ಲಿ ಸರ್ವೆ ತರಗತಿಯನ್ನು ಆರಂಭಮಾಡಿ ಅಲ್ಲಿಯ ಇಬ್ಬರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿದ ದಾಖಲೆ ಇದೆ.[1]

ರೈಸರ ನಿರಂತರ ಪ್ರಯತ್ನದ ಫಲವಾಗಿ ೧೮೭೬-೭೭ರಲ್ಲಿ ಈ ಇಂಜಿನಿಯರಿಂಗ್ ಶಾಲೆಯು ಮತ್ತೆ 'School of Engineering and Natural Science' ಎಂಬ ಹೊಸ ಹೆಸರಿನೊಂದಿಗೆ ಪುನಃ ಪ್ರಾರಂಭವಾಯಿತು. ರೈಸರ ಪ್ರಸ್ತಾವನೆಯಂತೆ ಸರ್ಕಾರ ಆಗ ಮೂರನೆ ಸರ್ಕಲ್‌ನ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿದ್ದ ಗ್ರಮಾಟ್ಕಿ ಎಂಬುವ ವರನ್ನು ಮುಖ್ಯೋಪಾಧ್ಯಾಯರನ್ನಾಗಿ ನೇಮಿಸಿತು. ಹಂತಹಂತವಾಗಿ ಪ್ರಗತಿಯನ್ನು ಕಂಡ ಈ ಶಾಲೆಯಲ್ಲಿ ಮರಾಮತ್, ಭೌಗೋಳಿಕ ಹಾಗೂ ಕಂದಾಯ ಪರಿವೀಕ್ಷಣೆ ಮತ್ತು ಅರಣ್ಯಶಾಸ್ತ್ರವನ್ನೂ ಕಲಿಸಲಾಗುತ್ತಿತ್ತಲ್ಲದೇ ಡಿಪ್ಲೊಮಾ ಪದವಿಯನ್ನು ನೀಡುವ ಪದ್ಧತಿ ಯನ್ನು ೧೮೭೮ರ ವೇಳೆಗೆ ಆರಂಭಿಸಲಾಯಿತು.[2]

ಸ್ವತಃ ತಾಂತ್ರಿಕ ಶಿಕ್ಷಣವನ್ನೇನೂ ಪಡೆದಿರದಿದ್ದರೂ ರೈಸರಿಗೆ ಅದರ ಪ್ರಾಮುಖ್ಯದ ಅರಿವಿದ್ದುದರಿಂದ ವೈಯಕ್ತಿಕವಾಗಿ ಹೆಚ್ಚಿನ ಆಸಕ್ತಿ ವಹಿಸಿ ಈ ಶಾಲೆ ಚೆನ್ನಾಗಿ ನಡೆಯುವಂತೆ ಎಲ್ಲ ರೀತಿಯ ಪ್ರಯತ್ನವನ್ನೂ ಪಟ್ಟರು. ಉದಾಹರಣೆಗೆ ಸರ್ಕಾರ ಈ ಶಾಲೆಯ ಮುಖ್ಯೋಪಾಧ್ಯಾಯರನ್ನಾಗಿ ೨ನೇ ದರ್ಜೆಯ ಅಸಿಸ್ಟೆಂಟ್ ಇಂಜಿನಿಯರ್ ಒಬ್ಬರನ್ನು ನೇಮಿಸಲು ಯೋಚಿಸಿತ್ತು. ಆದರೆ ಗ್ರಮಾಟ್ಕಿ ೧ನೇ ದರ್ಜೆಯ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದರೂ ಶಾಲೆಯ ಮುಖ್ಯಸ್ಥನಾಗಲು ಎಲ್ಲ ಬಗೆಯ ಯೋಗ್ಯತೆಯನ್ನು ಹೊಂದಿದ್ದರಿಂದ ಯೋಜನಾವೆಚ್ಚ ಹೆಚ್ಚಾಗುವುದನ್ನೂ ಲೆಕ್ಕಿಸದೆ ರೈಸ್ ಆತನನ್ನೇ ಆಯ್ಕೆ ಮಾಡಿದರು.

ತಾಂತ್ರಿಕ ಶಿಕ್ಷಣವು ಸಮಾಜದ ಎಲ್ಲ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೂ ದೊರಕಬೇಕೆನ್ನುವುದು ರೈಸರ ಅಭಿಪ್ರಾಯವಾಗಿತ್ತು. ಆದರೆ ಇದಕ್ಕೆ ಬದಲಾಗಿ ಹೊಸದಾಗಿ ಆರಂಭವಾದ ಈ ತಾಂತ್ರಿಕ ಶಾಲೆಗೆ ಕೇವಲ ಪ್ರತಿಷ್ಠಿತರ ಮನೆಯ ಮಕ್ಕಳನ್ನು ಮಾತ್ರವೇ ಆಯ್ದುಕೊಳ್ಳಬೇಕು ಹಾಗೂ ಈ ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯ ಮುಖ್ಯ ಕಮೀಷನರ್‌ರಿಗೆ ಮಾತ್ರ ಇರಬೇಕು ಎಂದು ಆಗಿನ ಕಮೀಷನರ್ ಆಗಿದ್ದ ರಿಚರ್ಡ್

---

1 ARPI, 1871-72, p 31

2 ನಿದರ್ಶನಕ್ಕೆ, ೧೮೮೦ರ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಬಿ. ಸೀತಾರಾಮರಾವ್, ಬಿ. ರಂಗರಾವ್ ಹಾಗೂ ದಿ. ನಾರಾಯಣರಾವ್ ಎಂಬ ಮೂವರು ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಪದವಿ ನೀಡಬೇಕೆಂದು ರೈಸ್ ಚೀಫ್ ಕಮೀಷನರ್‌ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. (K.S.A., Ed. 3 of 1873 Sl. No. 1-8).

ಮೀಡ್ ಬ್ರಿಟಿಷ್ ಅಧಿಪತ್ಯಕ್ಕೆ ಸಲಹೆ ನೀಡಿದ್ದ.[1] ಅದನ್ನು ಒಪ್ಪದ ರೈಸ್ "No such condition was publicly announced in the notification calling for applications for the admission. There was thus an open and fair field for all candidates from whatever quarter subject only to the candidates as to age, physiche and readiness to serve in any part of Mysore" ಎಂದು ಘೋಷಿಸಿ ಎಲ್ಲರಿಗೂ ಮುಕ್ತ ಅವಕಾಶವನ್ನು ಕಲ್ಪಿಸಿದರು.[2]

ಇಷ್ಟೆಲ್ಲ ಆದರೂ ವಿಶ್ವವಿದ್ಯಾಲಯದ ಮಟ್ಟದ ಶಿಕ್ಷಣವನ್ನು ಸ್ಥಳೀಯವಾಗಿಯೇ ನೀಡಬೇಕೆನ್ನುವ ರೈಸರ ಪ್ರಸ್ತಾವನೆಯನ್ನು ಸರ್ಕಾರ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲದಿದ್ದುದರಿಂದ ಅನಿವಾರ್ಯವಾಗಿ ಈ ಶಾಲೆಯಲ್ಲಿಯ ಪಠ್ಯಕ್ರಮವನ್ನು ಸೀಮಿತಗೊಳಿಸಿಕೊಳ್ಳಬೇಕಾಗಿ ಬಂದಿತು. ೧೮೮೩-೮೪ರಲ್ಲಿ ಅಂತಿಮವಾಗಿ ಈ ಶಾಲೆಯನ್ನೂ 'ತಾಂತ್ರಿಕ ಕಾರಣ'ಗಳಿಗಾಗಿ ಮುಚ್ಚಲಾಯಿತು. ಇದೇ ವೇಳೆಯ ಸುಮಾರಿಗೆ ರೈಸರು ವಿದ್ಯಾಭ್ಯಾಸದ ಇಲಾಖೆಯ ಜವಾಬ್ದಾರಿಯಿಂದ ಬಹುಮಟ್ಟಿಗೆ ಹೊರಬಂದಿದ್ದರಿಂದ ಈ ನಿಟ್ಟಿನಲ್ಲಿ ಅವರು ಏನೂ ಮಾಡುವಂತಿರಲಿಲ್ಲ. ಹಾಗಾಗಿ ೧೯೦೩ರಲ್ಲಿ ಹೊಸ ಯೋಜನೆ ಜಾರಿಗೆ ಬರುವವರೆಗೆ ಸಂಸ್ಥಾನದಲ್ಲಿ ತಾಂತ್ರಿಕ ಶಿಕ್ಷಣದ ಪ್ರಗತಿ ಬಹುಮಟ್ಟಿಗೆ ಸ್ಥಗಿತಗೊಂಡಿತ್ತೆಂದೇ ಹೇಳಬಹುದು.

ಇಂಜಿನಿಯರಿಂಗ್ ಶಾಲೆಯಂತೆಯೇ ೧೮೭೩ರ ಸುಮಾರಿಗೇ ಬೆಂಗಳೂರಿನಲ್ಲಿ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಬೇಕೆಂಬ ಪ್ರಯತ್ನ ತೀವ್ರವಾಗಿ ಸಾಗಿತ್ತು. ಆದರೆ ಮೈಸೂರು ಸಂಸ್ಥಾನದ ವಿದ್ಯಾರ್ಥಿಗಳೆಲ್ಲ ಮದ್ರಾಸಿನಲ್ಲಿರುವ ಕಾಲೇಜಿಗೆ ಹೋಗುತ್ತಿದ್ದು ಏನೂ ತೊಂದರೆ ಇಲ್ಲದಿರುವುದರಿಂದ ಹೊಸ ಕಾಲೇಜಿನ ಅಗತ್ಯವಿಲ್ಲವೆಂದು ಸರ್ಕಾರ ಭಾವಿಸಿ ಯೋಜನೆಯನ್ನು ಕೈಬಿಟ್ಟಿತು.

ಉನ್ನತ ಶಿಕ್ಷಣ:

ಉನ್ನತ ಶಿಕ್ಷಣಕ್ಕೆಂದು ಕೇಂದ್ರೀಯ ಕಾಲೇಜು (Central College) ಒಂದರ ಅವಶ್ಯಕತೆ ಇದೆಯೆಂದು ಡೆವೊರೆ ೧೮೫೬ರಲ್ಲಿಯೇ ತನ್ನ ವರದಿಯಲ್ಲಿ ನಮೂದಿಸಿದ್ದಾರಾದರೂ ಅದು ಕಾರ್ಯರೂಪಕ್ಕೆ ಬಂದದ್ದು ೧೮೭೫ರಲ್ಲಿ, ರೈಸರು ವಿದ್ಯಾ ಇಲಾಖೆಯ ನಿರ್ದೇಶಕರಾಗಿದ್ದಾಗ.

ಅದಕ್ಕೂ ಮುನ್ನ ಎಂದರೆ ೧೮೬೩ರ ವರೆಗೆ ಸಂಸ್ಥಾನದಲ್ಲಿ ಉನ್ನತ ಶಿಕ್ಷಣದ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಬೆಂಗಳೂರಿನಲ್ಲಿ ಲಂಡನ್ ಮಿಷನ್ ಸ್ಕೂಲ್, ಬೆಂಗಳೂರು

1 Letter No. 1782-43 G dated June 5th, 1874.

2 K.S.A., Ed. 2 of 1876, 1–3, dated July 6th, 1876.

ಹೈಸ್ಕೂಲ್, ವೆಸ್ಲಿಯನ್ ಸ್ಕೂಲ್ ಹಾಗೂ ಮೈಸೂರಿನ ವೆಸ್ಲಿಯನ್ ಸ್ಕೂಲುಗಳಲ್ಲಿ ಮೆಟ್ರಿಕ್ಯುಲೇಷನ್ ಮಟ್ಟದ ವಿದ್ಯಾಭ್ಯಾಸವನ್ನು ನೀಡಲಾಗುತ್ತಿತ್ತಾದರೂ ಯಾರೊಬ್ಬರೂ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಲಿಲ್ಲ. ೧೮೬೩ರಲ್ಲಿ ರೈಸರು ಬೆಂಗಳೂರು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದಾಗ ಇಡಿಯ ಸಂಸ್ಥಾನದಲ್ಲಿ ಮೊತ್ತಮೊದಲ ಬಾರಿಗೆ ಆ ಶಾಲೆಯ ವಿದ್ಯಾರ್ಥಿಯೊಬ್ಬ ಮದ್ರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಉತ್ತೀರ್ಣನಾದ. ರೈಸರ ಕಾಲದಲ್ಲೇ, ಎಂದರೆ ೧೮೬೬ರಲ್ಲಿ ಪಿ.ಎನ್. ಕೃಷ್ಣಮೂರ್ತಿ, ಆರ್. ವೆಂಕಟರಾಮಯ್ಯ ಹಾಗೂ ಟಿ. ನರಹರಿರಾವ್ ಎಂಬ ಮೂವರು ವಿದ್ಯಾರ್ಥಿಗಳು ಮದ್ರಾಸು ವಿಶ್ವವಿದ್ಯಾಲಯದ ಎಫ್.ಎ. ಪರೀಕ್ಷೆಗಳಲ್ಲೂ ಪಾಸಾದರು.[1] ೧೮೬೫ರಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಬಿಷಪ್ ಕಾಟನ್ ಶಾಲೆ ಹಾಗೂ ಸೈಂಟ್ ಆಂಡ್ರೂಸ್ ಶಾಲೆಗಳಲ್ಲಿಯೂ ಮೆಟ್ರಿಕ್ಯುಲೇಷನ್ ಮಟ್ಟದ ಕಲಿಕೆ ಆರಂಭವಾಯಿತು. ಮುಂದೆ ಜಿಲ್ಲಾ ಕೇಂದ್ರಗಳಲ್ಲಿದ್ದ ಹೈಸ್ಕೂಲುಗಳಿಗೂ ಇದು ವಿಸ್ತರಿಸಿತು. ಆದರೂ ಬೆಂಗಳೂರು ಹೈಸ್ಕೂಲು ಈ ಶಾಲೆಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತಲ್ಲದೆ ಬಿ.ಎ. ಮಟ್ಟದ ವಿದ್ಯಾರ್ಥಿಗಳನ್ನೂ ಸಿದ್ಧಗೊಳಿಸುತ್ತಿತ್ತು.[2]

೧೮೭೨-೭೩ರಲ್ಲಿ ಮದ್ರಾಸು ವಿಶ್ವವಿದ್ಯಾಲಯವು ಪರೀಕ್ಷಾವಿಧಾನದಲ್ಲಿ ಕೆಲವು ಬದಲಾವಣೆಗಳನ್ನು ತರಲು ಯೋಚಿಸಿತು. ಈ ಬದಲಾವಣೆಗಳಿಂದಾಗಿ ಎಲ್ಲ ಹೈಸ್ಕೂಲುಗಳಲ್ಲಿಯೂ ಎಫ್.ಎ. ಮಟ್ಟದ ತರಗತಿಗಳನ್ನು ನಡೆಸುವುದು ಆರ್ಥಿಕವಾಗಿ ಸಾಧ್ಯವಾಗದ ಮಾತಾಯಿತು. ಹಾಗಾಗಿ ಮಿಷನರಿ ಶಾಲೆಗಳು ಮೆಟ್ರಿಕ್ಯುಲೇಷನ್‌ವರೆಗೆ ಮಾತ್ರ ತಮ್ಮಲ್ಲಿಯ ಶಿಕ್ಷಣವನ್ನು ಸೀಮಿತಗೊಳಿಸಿಕೊಂಡವು. ಮೈಸೂರಿನ 'ರಾಜರ ಹೈಸ್ಕೂಲ್' ಹಾಗೂ ಶಿವಮೊಗ್ಗದ ಹೈಸ್ಕೂಲುಗಳಲ್ಲಿ ಮಾತ್ರ ಎಫ್.ಎ. ಮಟ್ಟದ ವಿದ್ಯಾಭ್ಯಾಸ ದೊರಕುತ್ತಿತ್ತು. ಹಾಗೂ ಬೆಂಗಳೂರು ಹೈಸ್ಕೂಲನ್ನು 'ಸೆಂಟ್ರಲ್ ಕಾಲೇಜ್' ಆಗಿ ಪರಿವರ್ತಿಸಿ ಅಲ್ಲಿ ಬಿ.ಎ.ವರೆಗಿನ ಕಲಿಕೆಗೆ ಅವಕಾಶ ಕಲ್ಪಿಸಲಾಯಿತು.

ತಮ್ಮ ಮಾತೃ ಸಂಸ್ಥೆಯಾದ ಬೆಂಗಳೂರು ಹೈಸ್ಕೂಲನ್ನು ಸೆಂಟ್ರಲ್ ಕಾಲೇಜಿನ ಮಟ್ಟಕ್ಕೆ ಬೆಳೆಸಲು ರೈಸರು ಪಟ್ಟ ಶ್ರಮ ಗಣನೀಯವಾದದ್ದು. ಈ ಬಗ್ಗೆ ಅವರು ಸರ್ಕಾರಕ್ಕೆ ದಿನಾಂಕ ಸೆಪ್ಟೆಂಬರ್ ೧೭, (ಪತ್ರಸಂಖ್ಯೆ ೧೮೬೩) ೧೮೭೪ರಲ್ಲಿ ಹಾಗೂ ಮೇ ೧೪, ೧೮೭೫ರಲ್ಲಿ ಸುದೀರ್ಘವಾದ ಪ್ರಸ್ತಾವನೆಗಳನ್ನು ಮಂಡಿಸಿದ್ದಾರೆ. ಅದರಲ್ಲಿ ಶಾಲೆ ಕಾಲೇಜುಗಳ ಹೆಸರು, ಶುಲ್ಕದ ನಿಗದಿ, ವಿದ್ಯಾರ್ಥಿವೇತನದಲ್ಲಿ ಹೆಚ್ಚಳ, ಇತ್ಯಾದಿ ಅಂಶ

1 The Central College Calendar, 1904, p 14.

2 ಉದಾಹರಣೆಗೆ ೧೮೭೧ರಲ್ಲಿ ಈ ಶಾಲೆಯಲ್ಲಿ ೯ ಮಂದಿ ವಿದ್ಯಾರ್ಥಿಗಳು ಬಿ.ಎ., ೧೫ ಮಂದಿ ಎಫ್.ಎ., ಹಾಗೂ ೩೫ ಮಂದಿ ಮೆಟ್ರಿಕ್ಯುಲೇಷನ್ ತರಗತಿಗಳಲ್ಲಿ ಓದುತ್ತಿದ್ದರು. (A.C. Devegowda and T.R. Parameshwaran, ಪೂರ್ವೋಕ್ತ, ಪು. ೩೨೫)

ಗಳನ್ನು ಚರ್ಚಿಸಿದ್ದಾರೆ. ಆದರೆ ಅದಕ್ಕಿಂತ ಪ್ರಮುಖವಾಗಿ ಈ ಪ್ರಸ್ತಾವನೆಗಳಲ್ಲಿರುವ ಮೂರು ಪ್ರಮುಖ ಅಂಶಗಳೆಂದರೆ:

೧. ***ಸೆಂಟ್ರಲ್ ಕಾಲೇಜಿನಲ್ಲಿ ವಿಜ್ಞಾನ ಬೋಧನೆಗೆ ಹೆಚ್ಚಿನ ಅವಕಾಶ:***

ವೈಯಕ್ತಿಕವಾಗಿ ಇತಿಹಾಸ, ಸಂಸ್ಕೃತಿ ಮುಂತಾದ ಮಾನವಿಕ ವಿಷಯಗಳಲ್ಲಿ ಆಸಕ್ತಿ ಇದ್ದರೂ ರೈಸರಿಗೆ ತಮ್ಮ ಕಾಲದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ವೈಜ್ಞಾನಿಕ ಕ್ಷೇತ್ರದ ಪ್ರಗತಿಯ ಬಗೆಗೂ ಗಮನವಿತ್ತು. ಇದರೊಂದಿಗೆ ಸರ್ ಮಾರ್ಕ್ ಕಬ್ಬನ್ ಬೆಂಗಳೂರು ಹೈಸ್ಕೂಲಿಗೆ ಕೊಡುಗೆಯಾಗಿ ಕೊಟ್ಟಿದ್ದ ವೈಜ್ಞಾನಿಕ ಉಪಕರಣಗಳು ಉಪಯೋಗವಿಲ್ಲದೆ ಬಿದ್ದಿದ್ದರ ಬೇಸರವೂ ಇತ್ತು. ಹಾಗಾಗಿಯೇ ಅವರು ಈ ಪ್ರಸ್ತಾವನೆಯಲ್ಲಿ,

> *".... for this appointment, (for the post of Vice-Principal) I strongly recommend that a gentleman specially qualified to impart scientific instruction be obtained from England or from Aberdeen or Edinburgh..... for the physical science, we have no competent instructors. The want is more felt now that the attention of the university has been steadily directed to the cultivation of that invaluable branch of knowledge. The college here will offer peculiar facilities for its prosecution in the fine collection of scientific apparatus granted by Sir Mark Cubbon and but little used...." ಎಂದಿದ್ದಾರೆ.* [1]

೨. ***ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಯೋಜನೆ:***

ಆಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು ಆಂಗ್ಲೋ ವರ್ನಾಕ್ಯುಲರ್ ಅಥವಾ ಮಾಧ್ಯಮಿಕ ಶಾಲೆಯಲ್ಲಿ ಐದು ವರ್ಷ ಕಲಿತು ಮೈಸೂರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅನಂತರ ಮೂರು ವರ್ಷಗಳ (೪, ೫ ಹಾಗೂ ೬ನೇ ಫಾರಂ) ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಸೇರುತ್ತಿದ್ದರು. ಆರನೇ ಫಾರಂನ ಕಡೆಯಲ್ಲಿ ವಿದ್ಯಾರ್ಥಿ ಮದ್ರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂಡಬೇಕಿತ್ತು. ಆದರೆ ಈ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ವಿಜ್ಞಾನದ ವಿಷಯಗಳನ್ನು ಪರಿಗಣಿಸುತ್ತಿರಲಿಲ್ಲವಾದ್ದರಿಂದ ವಿದ್ಯಾರ್ಥಿಗಳು ವಿಜ್ಞಾನದ ಅಧ್ಯಯನವನ್ನು ನಿರ್ಲಕ್ಷಿಸುತ್ತಿದ್ದರು. ಹಾಗಾಗಿ

---

1 K.S.A., Ed. 1 of 1874, Sl. 1–5, dated May 14th, 1875.

ಉತ್ತಮ ದರ್ಜೆಯ ವೈಜ್ಞಾನಿಕ ಉಪಕರಣಗಳಿದ್ದರೂ ಅದನ್ನು ಉಪಯೋಗಿಸುವವರಿರಲಿಲ್ಲ. ಈ ಬಗ್ಗೆ ರೈಸ್ ತಮ್ಮ ಒಂದು ಹಿಂದಿನ ವರದಿಯಲ್ಲಿ:

> *'ಕೇವಲ ಸಾಹಿತ್ಯ ಕೃತಿಗಳನ್ನು ಪಠ್ಯಪುಸ್ತಕಗಳನ್ನಾಗಿ ಮಾಡುತ್ತಿರುವುದರಿಂದ ದಿನನಿತ್ಯದ ವ್ಯವಹಾರಕ್ಕೆ ಬೇಕಾದ ಸರಳ ಹಾಗೂ ಸಹಜವಾದ ವಾಕ್ಯರಚನೆಗೆ ಬದಲಾಗಿ ಅನವಶ್ಯಕವಾದ ಆಲಂಕಾರಿಕವಾದ ಮಾತುಗಳನ್ನು ಗಿಡಿದು ತುಂಬುವ ಪ್ರವೃತ್ತಿ ಈಗಿನ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿದೆ. ಅವರು ಜೀವನ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ಅತಿ ಸರಳ ಸಂಗತಿಗಳನ್ನು ತಿಳಿಯುವ ಪ್ರಯತ್ನ ಮಾಡದೆ ಕೇವಲ ಅಭಿಜಾತ ಮನೋಧರ್ಮದ, ಎಷ್ಟೋಬಾರಿ ನಿರುಪಯುಕ್ತವಾದ ಆಲಂಕಾರಿಕ ಚರ್ವಿತಚರ್ವಣದ ಉಕ್ತಿಗಳನ್ನೇ ಸದಾ ನೆನೆಯುತ್ತಿರುತ್ತಾರೆ'* ಎಂದು ಟೀಕಿಸಿದ್ದಾರೆ.[1]

ಪ್ರೌಢಶಿಕ್ಷಣದಲ್ಲಿ ಸಾಹಿತ್ಯದ ಭಾಗವನ್ನು ಕಡಿಮೆಮಾಡಿ ವೈಜ್ಞಾನಿಕ ಅಂಶಗಳನ್ನು ಹೆಚ್ಚಿಸುವುದರ ಮೂಲಕ ಈ ಸಮಸ್ಯೆಯನ್ನೂ ಬಗೆಹರಿಸಬಯಸಿದ ರೈಸರು 'ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್' ಎಂಬ ಹೊಸದೊಂದು ಯೋಜನೆಯನ್ನು ಜಾರಿಗೆ ತರಲು ಬಯಸಿದರು. ಈ ಯೋಜನೆಯ ಪ್ರಕಾರ ಹೈಸ್ಕೂಲ್ ಮಟ್ಟದ ಅಂತಿಮ ತರಗತಿಯಲ್ಲಿ ಎರಡು ವಿಭಾಗಗಳಿರಬೇಕು. ಒಂದು ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ಓದನ್ನು ಮುಂದುವರೆಸುವಂತಹವರಿಗಾಗಿ ಹಾಗೂ ಮತ್ತೊಂದು ವಾಣಿಜ್ಯ, ವಿಜ್ಞಾನ ಮುಂತಾದ ಸಾಹಿತ್ಯಕವಲ್ಲದ ಕ್ಷೇತ್ರಗಳನ್ನು ಆಯ್ದುಕೊಂಡು ಸರ್ಕಾರಿ ವೃತ್ತಿಗಳಿಗೆ ಸೇರಬಯಸುವವರಿಗಾಗಿ. ಮೊದಲನೆಯದನ್ನು ಆಯ್ದುಕೊಂಡವರು ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಬರೆಯಬೇಕು. ಆದರೆ ಎರಡನೆಯದನ್ನು ಆಯ್ದುಕೊಂಡವರಿಗೆ ಯಾವುದೇ ಪರೀಕ್ಷೆ ಇಲ್ಲ. ಬದಲಿಗೆ ಅವನ ಮೂರುವರ್ಷದ ಒಟ್ಟಾರೆಯಾದ ಪ್ರಗತಿ-ಸಂಬಂಧಗಳನ್ನು ಪರಿಗಣಿಸಿ ಶಾಲೆಯ ಮುಖ್ಯೋಪಾಧ್ಯಾಯರು 'ಈತ ಸರ್ಕಾರಿ ಸೇವೆಗೆ ಅರ್ಹ' ಎಂಬ ಸರ್ಟಿಫಿಕೇಟ್ ಒಂದನ್ನು ನೀಡಬೇಕು. ಇದೇ 'ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್' (ಎಸ್.ಎಸ್.ಎಲ್.ಸಿ.).

೩. *ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎ. ವರೆಗೆ ಕಲಿಯಲು ಅವಕಾಶ :*

ಆವರೆಗೆ ಕೇವಲ ಬಿ.ಎ.ವರೆಗೆ ಓದಲು ಅವಕಾಶವಿದ್ದ ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಆರಂಭಿಸಬೇಕು ಎಂದು ರೈಸ್ ಬಹಳ ದೃಢವಾಗಿ ಪ್ರತಿಪಾದಿಸಿದ್ದಾರೆ.[2] ಆ ಮೂಲಕ ಉನ್ನತ ಶಿಕ್ಷಣದ ವಿಷಯದಲ್ಲಿ ಮದ್ರಾಸ್ ಪ್ರಾಂತ್ಯದ ಮೇಲೆ ಅವಲಂಬಿತವಾಗುವುದು ತಪ್ಪಿ ಸಂಸ್ಥಾನದಲ್ಲಿ ಸ್ವತಂತ್ರವಾದ ಶೈಕ್ಷಣಿಕ ವ್ಯವಸ್ಥೆಯನ್ನು ರೂಪುಗೊಳಿಸಬಹುದೆಂಬ ಉದ್ದೇಶ ಅವರದು.

---

1 ೧೮೭೨-೭೩ರ ಇಲಾಖಾ ವಾರ್ಷಿಕ ವರದಿ ಪು. ೩೭ರಲ್ಲಿನ ಭಾಗದ ಅನುವಾದ.

2 ೧೭ ಸೆಪ್ಟೆಂಬರ್ ೧೮೭೪ರಂದು ಚೀಫ್ ಕಮೀಷನರ್‌ಗೆ ಬರೆದ ಪತ್ರದಲ್ಲಿ.

ರೈಸರ ಈ ಮೂರು ಪ್ರಮುಖ ಪ್ರಸ್ತಾವನೆಗಳನ್ನು ಬಿ. ಗೋಪಾಲಯ್ಯ ಎಂಬ ಉನ್ನತಾಧಿಕಾರಿಯೊಬ್ಬರು ಪರಿಶೀಲಿಸಿ ಸರ್ಕಾರಕ್ಕೆ ೧೮೭೫ರ ಜೂನ್ ೨೨ರಂದು ಸರ್ಕಾರಕ್ಕೆ 'Memorandum' ಎಂಬ ಶೀರ್ಷಿಕೆಯ ವರದಿಯನ್ನು ಸಲ್ಲಿಸಿದ್ದಾರೆ.[1] ಇದರಲ್ಲಿ ಅವರು ಸೆಂಟ್ರಲ್ ಕಾಲೇಜಿಗೆ ವಿಜ್ಞಾನದ ಅಧ್ಯಾಪಕರನ್ನು ಇಂಗ್ಲೆಂಡಿನಿಂದ ಕರೆಸಿಕೊಳ್ಳ ಬೇಕೆಂಬ ರೈಸರ ಪ್ರಸ್ತಾವನೆಯ ಬಗ್ಗೆ "I am not sure if a really competent person can be had for the salary (Rs. 300/-) sanctioned by the Government" ಎಂದು ಸಂದೇಹ ವ್ಯಕ್ತಪಡಿಸಿದರಾದರೂ ಚಾರ್ಲ್ಸ್ ವಾಟರ್ಸ್‌ರ ಆಗಮನದೊಂದಿಗೆ ಈ ಪ್ರಶ್ನೆ ಬಗೆಹರಿಯಿತು.

ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್‌ಗೆ ಸಂಬಂಧಿಸಿದಂತೆ ರೈಸರು ಮಾಡಿದ ಪ್ರಸ್ತಾವನೆಯನ್ನು ಗೋಪಾಲಯ್ಯ ಖಂಡತುಂಡವಾಗಿ ನಿರಾಕರಿಸಿದ್ದಾರೆ. 'ಮೆಟ್ರಿಕ್ಯುಲೇಷನ್ ತರಗತಿ ಮಟ್ಟದಲ್ಲಿ ಬೋಧಿಸುತ್ತಿರುವ ಪಠ್ಯಗಳ ಮಟ್ಟ ಹೆಚ್ಚು' ಎಂಬ ರೈಸರ ವಾದವನ್ನು ಒಪ್ಪದ ಆತ ಈ ರೀತಿಯ ಸರ್ಟಿಫಿಕೇಟ್‌ಗಳನ್ನು ಕೊಡುವುದರಿಂದ ತಾರತಮ್ಯ ಉಂಟಾಗುತ್ತದೆ, ಉದ್ಯೋಗ ಕ್ಕಾಗಿ ಹಂಬಲಿಸುವುವರ ಸಂಖ್ಯೆ ಹೆಚ್ಚಾಗುತ್ತದೆ ಇತ್ಯಾದಿಯಾದ ಕಾರಣಗಳನ್ನು ನೀಡಿ

> *"This is a policy which I consider every way objectionable and perhaps suicidal; we shall have to exclude men from other countries and discourage men-presecuting the University Studies, and for this and the foregoing reasons, I am not in favour of the institution of the examination"* ಎಂದು ಎಸ್.ಎಸ್.ಎಲ್.ಸಿ. ಪದ್ಧತಿಯನ್ನು ನಿರಾಕರಿಸಿದ್ದಾರೆ.[2]

೧೮೭೫ರಲ್ಲಿ ಹೀಗೆ ಮೈಸೂರು ಸಂಸ್ಥಾನದ ಮಟ್ಟದಲ್ಲಿ ತಿರಸ್ಕೃತವಾದ ರೈಸರ ಈ ಯೋಜನೆಗೆ ಕೆಲವು ದಶಕಗಳನಂತರ ಇಡಿಯ ದೇಶದಲ್ಲಿ ಮಾನ್ಯತೆ ದೊರೆಯಿತು! ಏಕೆಂದರೆ ರೈಸರು ಕಾರ್ಯದರ್ಶಿಯಾಗಿದ್ದ ೧೮೮೨ರ ಹಂಟರ್ ಆಯೋಗ ತನ್ನ ವರದಿಯಲ್ಲಿ "at the high school, there should be two avenues, one leading to the entrance examination of the university and the other of a more practical character, intended to fit youths of commercial or the other vocational non literary persuits"[3] ಎಂದು ಈ ಯೋಜನೆಯನ್ನು ಯಥಾವತ್ತಾಗಿ ಪುನರುಚ್ಚರಿಸಿತು. ೧೮೮೮ರಲ್ಲಿ ಮದ್ರಾಸಿನಲ್ಲಿ, ೧೮೯೭ರಲ್ಲಿ ಮುಂಬೈನಲ್ಲಿ ಹಾಗೂ ೧೮೯೪ರಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರುವ ಪ್ರಯತ್ನಗಳೂ ನಡೆದವು.

---

1 K.S.A., Ed. 3 of 1874, Sl. No. 1.

2 ಪೂರ್ವೋಕ್ತ, ಪು. ೧೧.

3 A Lakshman Swami Mudaliar, **Education in India**, 1960 ಇಲ್ಲಿ ಉದ್ಧೃತ, ಪು. ೨೫.

ಮೈಸೂರು ಸಂಸ್ಥಾನದಲ್ಲಿ ಈ ಪದ್ಧತಿ ಸಂಪೂರ್ಣವಾಗಿ ಜಾರಿಗೆ ಬಂದದ್ದು ೧೯೧೨ರಲ್ಲಿ.[1] ಅದಕ್ಕೆ ಕಾಲು ಶತಮಾನಕ್ಕೆ ಮುನ್ನವೇ ರೈಸ್ ಈ ಯೋಜನೆಯನ್ನು ರೂಪಿಸಿದ್ದರು ಎಂಬುದು ಅವರ ಮುಂದಾಲೋಚನೆಗೆ ಸಾಕ್ಷಿಯಾಗಿದೆ.

ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆಯೂ ಇದೇ ರೀತಿಯ ನಿರುತ್ಸಾಹಕರವಾದ ಪ್ರತಿಕ್ರಿಯೆಯನ್ನು ಗೋಪಾಲಯ್ಯ ತಮ್ಮ ವರದಿಯಲ್ಲಿ ನೀಡಿದ್ದಾರೆ. ಆ ಕಾಲದಲ್ಲಿ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಎಂ.ಎ. ತರಗತಿಗಳು ಇಲ್ಲದಿರುವುದು ಉಲ್ಲೇಖಿಸಿ ಆತ :

> *"Government cannot have for its object the teaching of students in the very highest branches of knowledge. The students may be supposed to have attained sufficient amount of knowledge when he takes the B.A. degree. It is absolutely necessary that at this stage he should be left to himself to workout the chief problems and questions, which he comes across in the higher books before him. I am afraid that in the present system of education there is too much of teaching given and the students are not called upon to exercise their minds sufficiently.... Under such circumstances, it would be absolutely injurious to continue the system of teaching even beyond the B.A. degree"* ಎಂದು ಸ್ಪಷ್ಟವಾಗಿ ಎಂ.ಎ. ತರಗತಿಗಳನ್ನು ಪ್ರಾರಂಭಿಸುವುದನ್ನು ಅಲ್ಲಗಳೆದಿದ್ದಾರೆ.[2]

ಗೋಪಾಲಯ್ಯನವರ ಈ ನಿರಾಕರಣೆಯ ಕಾರಣದಿಂದಾಗಿ ಸಂಸ್ಥಾನದಲ್ಲಿ ಉನ್ನತ ಶಿಕ್ಷಣಕ್ಕೆ ಭಾರಿ ಆಘಾತವೇ ಆಯಿತೆನ್ನಬಹುದು. ಏಕೆಂದರೆ ಆಗ ಕೈತಪ್ಪಿಹೋದ ಸ್ನಾತಕೋತ್ತರ ಶಿಕ್ಷಣದ ಅವಕಾಶ ಸುಮಾರು 45 ವರ್ಷಗಳಷ್ಟು ಮುಂದಕ್ಕೆ, ಎಂದರೆ ೧೯೧೯-೨೦ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಎಂ.ಎ. ತರಗತಿಗಳು ಆರಂಭವಾಗುವವರೆಗೆ ಮುಂದೂಡಲ್ಪಟ್ಟಿತು. ರೈಸರ ಪ್ರಸ್ತಾವನೆಯನ್ನು ಮನ್ನಿಸಿ ಸರ್ಕಾರವೇನಾದರೂ ೧೮೭೫ರ ಸುಮಾರಿಗೇ ಎಂ.ಎ. ತರಗತಿಗಳನ್ನು ಆರಂಭಿಸಿದ್ದಿದ್ದರೆ ನಂತರದ ವರ್ಷಗಳಲ್ಲಿ ಸಂಸ್ಥಾನದಲ್ಲಿ ಇಡಿಯ ದೇಶದಲ್ಲಿ ಇನ್ನೆಲ್ಲೂ ಆಗಿರದಷ್ಟು ಶೈಕ್ಷಣಿಕ ಪ್ರಗತಿ ಆಗಿರುತ್ತಿತ್ತೆಂಬುದು ನಿರ್ವಿವಾದ.

1 A.C. Devegowda and T.R. Parameshwaran, ಪೂರ್ವೋಕ್ತ, ಪು. ೨೭೭ ಹಾಗೂ ೨೭೮

ಹಂಟರ್ ಆಯೋಗದ ಕಾರ್ಯದರ್ಶಿಯಾಗಿ:

ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಅವರ ಪರಿಶ್ರಮಕ್ಕೆ ಸಂದ ಸೂಕ್ತ ಪ್ರತಿಫಲವೆಂದರೆ ಹಂಟರ್ ಆಯೋಗದ ಕಾರ್ಯದರ್ಶಿಯ ಹುದ್ದೆ. ಅದರ ವಿವರಗಳನ್ನಿಲ್ಲಿ ನೋಡಬಹುದು:

ಸರ್ಕಾರವು ತಾನೇ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ಭಾರತದಲ್ಲಿ ಶಿಕ್ಷಣದ ಪ್ರಸಾರಕ್ಕೆ ಅನುವು ಮಾಡಿಕೊಡಬೇಕೆಂದು ೧೮೫೪ರ 'ವುಡ್ಸರಪತ್ರ' (Wood's despatch) ಸಲಹೆ ಮಾಡಿತ್ತು. ಸರ್ಕಾರದ ಈ ನೇರವಾದ ಪಾಲುಗೊಳ್ಳುವಿಕೆಯಿಂದ ತಮ್ಮ ಪ್ರಾಮುಖ್ಯಕ್ಕೆ ಧಕ್ಕೆ ಬರುತ್ತದೆ ಎಂದು ಭಾವಿಸಿದ ಕೆಲವು ಮಿಷನರಿಗಳು ಇಂಗ್ಲೆಂಡಿನಲ್ಲಿ 'ಭಾರತದಲ್ಲಿನ ಶಿಕ್ಷಣದ ಸಾಮಾನ್ಯ ಸಲಹಾ ಸಮಿತಿ' (General Council of Education in India) ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಹೋರಾಡಲು ಆರಂಭಿಸಿದರು. ೧೮೮೨ರಲ್ಲಿ ಲಾರ್ಡ್ ರಿಪ್ಪನ್ ಭಾರತದ ವೈಸ್‌ರಾಯ್ ಆಗಿ ಇಂಗ್ಲೆಂಡಿನಿಂದ ಹೊರಟಾಗ ಈ ಸಂಘದ ಸದಸ್ಯರು ರಿಪ್ಪನ್‌ನನ್ನು ಭೇಟಿಮಾಡಿ ಭಾರತದಲ್ಲಿನ ಶಿಕ್ಷಣದ ವ್ಯವಸ್ಥೆಯ ನವೀಕರಣಕ್ಕಾಗಿ ಒಂದು ಆಯೋಗವನ್ನು ರಚಿಸಬೇಕೆಂದು ಕೋರಿದರು. ರಿಪ್ಪನ್‌ನಿಗೂ ವೈಯಕ್ತಿಕವಾಗಿ ಈ ವಿಷಯದಲ್ಲಿ ಆಸಕ್ತಿ ಇದ್ದುದರಿಂದ ಆತ ಭಾರತಕ್ಕೆ ಬಂದು ಅಧಿಕಾರ ವಹಿಸಿಕೊಂಡೊಡನೆಯೇ ೧೮೮೨ರಲ್ಲಿ ತನ್ನ ಸಹಾಯಕ ಮಂಡಲಿಯ (Viceroy's Executive Council) ಸದಸ್ಯರಲ್ಲಿ ಒಬ್ಬನಾದ ವಿಲಿಯಂ ಹಂಟರ್ ಎಂಬಾತನ ಅಧ್ಯಕ್ಷತೆಯಲ್ಲಿ ಭಾರತದ ಮೊಟ್ಟ ಮೊದಲ ಶಿಕ್ಷಣ ಆಯೋಗವನ್ನು ಸ್ಥಾಪಿಸಿದನು. ಇದೇ 'ಹಂಟರ್ ಆಯೋಗ'.

ಬಿ.ಎ., ಎಂ.ಎ., ಎಲ್.ಎಲ್.ಬಿ., ಮುಂತಾದ ವಿದ್ಯಾರ್ಹತೆಯನ್ನು ಹೊಂದಿದ್ದ, ಸಿ.ಪಿ.ಇ., ಸಿ.ಎಸ್., ಸಿ.ಎಸ್.ಐ., ರೈಟ್ ಆನರಬಲ್ ಮೊದಲಾದ ಬಿರುದುಗಳನ್ನು ಪಡೆದಿದ್ದ ದೇಶದ ಇಪ್ಪತ್ತು ಮಂದಿ ಗಣ್ಯರು ಈ ಸಮಿತಿಯ ಸದಸ್ಯರಾಗಿದ್ದರು.[1]

ಇಂತಹ ಪ್ರತಿಷ್ಠಿತ ಆಯೋಗಕ್ಕೆ ಕಾರ್ಯದರ್ಶಿಯಾಗಲು ಪೈಪೋಟಿ ಇದ್ದದ್ದು ಸಹಜ. ಇಂಗ್ಲೆಂಡಿನಿಂದ ಸರ್ ರೋಪರ್ ಲೆಥ್‌ಬ್ರಿಡ್ಜ್ ತಾನು ಕಾರ್ಯದರ್ಶಿಯಾಗಲು

1 ಅವರುಗಳೆಂದರೆ :

೧. ಸ್ಯೆಯದ್ ಅಹಮದ್ ಖಾನ್ ಬಹದ್ದೂರ್
೨. ಡಿ.ಎಂ. ಬರ್ಬರ್
೩. ರೆ.ಡಬ್ಲ್ಯೂ.ಆರ್. ಬ್ಲಾಕೆಟ್ಸ್
೪. ಆನಂದಮೋಹನ್ ಬೋಸ್
೫. ಎ.ಡಬ್ಲ್ಯೂ. ಕ್ರಾಫ್ಟ್
೬. ಕೆ. ಡೇಟನ್
೭. ಜೆ.ಟಿ. ಫೌಲರ್
೮. ಎ.ಪಿ. ಹೋವೆಲ್
೯. ಎಚ್.ಪಿ. ಜಾಕೋಬ್
೧೦. ಡಬ್ಲ್ಯೂ.ಲೀ. ವಾರ್ನರ್
೧೧. ಪಿ. ರಂಗಾನಂದ ಮೊದಲಿಯಾರ್
೧೨. ರೆ.ಡಬ್ಲ್ಯೂ. ಮಿಲ್ಲರ್
೧೩. ಬಾಬೂ ಭೂದೇವ ಮುಖರ್ಜಿ
೧೪. ಸಿ. ಪಿಯರ್‌ಸನ್
೧೫. ಮಹಾರಾಜ್ ಜ್ಯೋತೀಂದ್ರಮೋಹನ ಟ್ಯಾಗೋರ್
೧೬. ಕಾಶೀನಾಥ ತ್ರ್ಯಂಬಕ ತೆಲಂಗ್
೧೭. ಜಿ.ಇ. ವಾರ್ಡ್
೧೮. ರೆ.ಎ. ಜೀನ್
೧೯. ಕಾಲಿನ್ ಬೌರಿಂಗ್
೨೦. ಹಾಜಿ ಗುಲಾಂ

ಸಿದ್ಧ ಎಂದು ವೈರ್ ಕಳುಹಿಸಿದ್ದರು. ಮುಂಬೈನ ಲೀ ವಾರ್ನರ್‌ರಿಗೂ ಈ ಹುದ್ದೆಯ ಮೇಲೆ ಕಣ್ಣಿತ್ತು.[1] ಆದರೆ ಗೆಜೆಟಿಯರ್‌ಗಳ ಸಂಪಾದನೆಯ ಸಂದರ್ಭದಲ್ಲಿ ರೈಸರ ಕಾರ್ಯ ದಕ್ಷತೆಯನ್ನು ಗಮನಿಸಿದ ಹಂಟರ್ ಇವರಾರನ್ನೂ ಒಪ್ಪದೆ ಟೆಲಿಗ್ರಾಂ ಕೊಟ್ಟು ರೈಸರನ್ನು ಕಲ್ಕತ್ತೆಗೆ ಕರೆಸಿಕೊಂಡು ಆಯೋಗದ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು.

"೧೮೫೪ರ ಪತ್ರದ ಸಲಹೆಗಳನ್ನು ಹೇಗೆ ಅನುಷ್ಠಾನಕ್ಕೆ ತರಲಾಗಿದೆ ಎಂಬುದನ್ನು ವಿಚಾರಿಸುವುದು ಹಾಗೂ ಅದರಲ್ಲಿನ ನೀತಿಯನ್ನು ಪೂರ್ಣವಾಗಿ ಕಾರ್ಯಗತಮಾಡಲು ಅಗತ್ಯವೆಂದು ತೋರುವ ಕ್ರಮಗಳನ್ನು ಸಲಹೆ ಮಾಡುವುದು" ಈ ಆಯೋಗದ ಪ್ರಮುಖ ಕಾರ್ಯವಾಗಿತ್ತು.

ಆಯೋಗವು ಮೊದಲ ಏಳುವಾರಗಳ ಕಾಲ ನಿರಂತರವಾಗಿ ಸಭೆ ಸೇರುತ್ತಿತ್ತು. ಅನಂತರ ಆಯೋಗದ ಅಧ್ಯಕ್ಷರು ಎಂಟು ತಿಂಗಳುಗಳ ಕಾಲ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಪ್ರವಾಸಮಾಡಿ, ಇನ್ನೂರು ಜನ ಸಾಕ್ಷಿಗಳನ್ನು ಭೇಟಿಮಾಡಿದರು. ಮುನ್ನೂರಕ್ಕೂ ಹೆಚ್ಚು ನಿವೇದನೆಗಳನ್ನು ಸ್ವೀಕರಿಸಿದರು. ೧೮೮೨ರ ಡಿಸೆಂಬರಿನಿಂದ ೧೮೮೩ರ ಮಾರ್ಚಿನ ವರೆಗೆ ಮತ್ತೆ ಆಯೋಗ ಸದಸ್ಯರೆಲ್ಲರ ಸಭೆ ಸೇರಿಸಿ ೨೨೨ ನಿರ್ಣಯಗಳನ್ನು ಹೊರಡಿಸಿತಲ್ಲದೆ ೬೦೦ ಪುಟಗಳ ವರದಿಯನ್ನು ನೀಡಿತು.[2]

'ಇಡೀ ದಿನ ನಡೆಯುತ್ತಿದ್ದ ಭಾಷಣಗಳ ಟಿಪ್ಪಣಿ ಮಾಡಿಕೊಳ್ಳುವುದು, ಆಯಾ ದಿನದ ವರದಿಗಳನ್ನು ಸಿದ್ಧಪಡಿಸುವುದು, ಮರುದಿನದ ಚರ್ಚೆಗೆ ಬೇಕಾದ ವಿಷಯಗಳ ಮಂಡನೆಗೆ ಅಂಶಗಳನ್ನು ಸೂಚಿಸುವುದು, ದೈನಂದಿನ ವರದಿಗಳ ಪ್ರತಿಗಳನ್ನು ಬೇರೆಬೇರೆ ಊರಿನ ಸದಸ್ಯರಿಗೆ ತಲುಪಿಸುವ ವ್ಯವಸ್ಥೆ ಮಾಡುವುದು' ತಮ್ಮ ಕೆಲಸವಾಗಿತ್ತೆಂದು ರೈಸ್ ಜ್ಞಾಪಿಸಿಕೊಂಡಿದ್ದಾರೆ.[3]

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಈ ಆಯೋಗವು ಕೆಲವು ಅತ್ಯಂತ ಪ್ರಮುಖವಾದ ಸಲಹೆಗಳನ್ನು ನೀಡಿದೆ. ಅವುಗಳಲ್ಲಿ ಮುಖ್ಯವಾದುವೆಂದರೆ:[4]

೧. ಜೀವನಕ್ಕೆ ಅಗತ್ಯವೆನಿಸುವ ವಿಷಯಗಳನ್ನು ಬೋಧಿಸಲು ದೇಶೀಯಭಾಷಾ ಮಾಧ್ಯಮವನ್ನು ಪ್ರಾಥಮಿಕ ಶಿಕ್ಷಣದಲ್ಲಿ ಅನುಸರಿಸಬೇಕು.

೨. ಈ ಶಾಲೆಗಳ ಆಡಳಿತದ ಅಧಿಕಾರವನ್ನು ಜಿಲ್ಲಾ ಮತ್ತು ಪೌರಸಭಾ ಮಂಡಲಿಗಳಿಗೆ ವಹಿಸಿ ಕೊಡಬೇಕು.

---

1 Rice B.L., **Biographical Notes**, p-33.

2 Siqueira., S.J., **The Education of India. History and Problems.** Oxford Uni. Press. 1939. p___.

3 ಪೂರ್ವೋಕ್ತ, p-34.

4 ವೀರಪ್ಪ ಎನ್.ಎಸ್., **ಭಾರತೀಯ ಶಿಕ್ಷಣದ ಇತಿಹಾಸ**, ಮೈ. ವಿ.ವಿ. ೧೯೮೪, ಪು. ೩೧೪-೩೧೫ ಇಲ್ಲಿ ಉದ್ಧೃತ.

೩. ದೇಶೀಯ ಭಾಷೆಗಳಿಗೆ ಅನುದಾನ ನೀಡುವ ಮೂಲಕ ಅದಕ್ಕೆ ಪ್ರೋತ್ಸಾಹ ಕೊಡಬೇಕು.

೪. ಶಾಲೆಗಳಲ್ಲಿ ಬೋಧನೆ ಮಾತೃಭಾಷೆಯ ಮೂಲಕ ನಡೆಯಬೇಕು.

೫. ಪ್ರಾಥಮಿಕ ಶಿಕ್ಷಣಕ್ಕಾಗಿ ವಿಶೇಷ ನಿಧಿಯನ್ನು ರೂಪಿಸಬೇಕು.

೬. ರಾಜಕುಮಾರರಿಗೆ ಹಾಗೂ ಇತರ ರಾಜ ಕುಟುಂಬೀಯರಿಗೆ ವಿಶೇಷ ಶಾಲೆಗಳನ್ನು ತೆರೆಯಬೇಕು.

೭. ವಯಸ್ಕರಿಗಾಗಿ ರಾತ್ರಿ ಶಾಲೆಗಳನ್ನು ತೆರೆಯಬೇಕು.

ಇದೆಲ್ಲಕ್ಕಿಂತ ಹೆಚ್ಚಾಗಿ ಈ ಆಯೋಗವು ನೀಡಿದ್ದ ಅತ್ಯಂತ ಪ್ರಮುಖವಾದ ಶಿಫಾರಸ್ಸೆಂದರೆ ಪ್ರೌಢಶಾಲೆಗಳಲ್ಲಿ ವೃತ್ತಿಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡುವುದಕ್ಕೆ ಸಂಬಂಧಿಸಿದ್ದು.

> *'ಪ್ರೌಢಶಾಲಾ ಮಟ್ಟದಲ್ಲಿ ಎರಡು ಬಗೆಯ ಶಿಕ್ಷಣಕ್ಕೆ ಅವಕಾಶವಿರಬೇಕು. ಮೊದಲನೆಯದಾಗಿ ಪರೀಕ್ಷೆಗಳನ್ನು ಬರೆದು ಉತ್ತೀರ್ಣನಾಗಿ ವಿಶ್ವವಿದ್ಯಾಲಯಗಳಿಗೆ ಸೇರ್ಪಡೆಯಾಗುವುದು ಅಥವಾ ಎರಡನೆಯ ಮಾರ್ಗವು ಹೆಚ್ಚು ಪ್ರಾಯೋಗಿಕ ಸ್ವರೂಪದ್ದಾಗಿದ್ದು ಆಸಕ್ತ ವಿದ್ಯಾರ್ಥಿಗಳು ವ್ಯಾಪಾರ, ವಾಣಿಜ್ಯ, ಉದ್ದಿಮೆ ಮುಂತಾದ ಹೆಚ್ಚು ಸಾಹಿತ್ಯಕವಲ್ಲದ ಕ್ಷೇತ್ರಗಳಲ್ಲಿ ಪರಿಣತಿಯನ್ನು ಗಳಿಸಲು ಅವಕಾಶವಿರುವಂತಹುದು'.*

ಈ ಯೋಜನೆಯನ್ನು ಮೈಸೂರು ಸಂಸ್ಥಾನದಲ್ಲಿ ೧೮೭೫ರ ಸುಮಾರಿಗೇ ರೈಸರು ಜಾರಿಗೊಳಿಸಲು ಯತ್ನಿಸಿ ವಿಫಲವಾಗಿದ್ದನ್ನು ಸ್ಮರಿಸಬಹುದು.

ಆದರೆ ದುರಾದೃಷ್ಟವಶಾತ್ ಹಂಟರ್ ಆಯೋಗದ ಈ ಶಿಫಾರಸ್ಸನ್ನು ಸರ್ಕಾರಗಳು ಕೂಡಲೇ ಜಾರಿ ಮಾಡಲಿಲ್ಲ. ಮದ್ರಾಸ್ ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿಗಳಾಗಿದ್ದ ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್‌ನವರು ಹೇಳುವಂತೆ "ಹಂಟರ್ ಆಯೋಗದ ಎಲ್ಲ ಶಿಫಾರಸ್ಸುಗಳನ್ನು ಸರ್ಕಾರವು ಕೂಡಲೇ ಜಾರಿಮಾಡಿದ್ದಿದ್ದರೆ ಹಾಗೂ ಮೇಲೆ ವಿವರಿಸಿದ ಎರಡು ಬಗೆಯ ವಿಭಿನ್ನವಾದ ಶಿಕ್ಷಣಕ್ರಮಗಳಲ್ಲಿ ತಮ್ಮ ಆಸಕ್ತಿ ಅಭಿರುಚಿಗಳಿಗೆ ಹೊಂದುವಂತಹ ಒಂದನ್ನು ವಿದ್ಯಾರ್ಥಿಗಳು ಆಯ್ದುಕೊಂಡು ಅಭ್ಯಾಸಮಾಡುವಂತಹ ಶಿಕ್ಷಣಕ್ರಮ ಆಗಲೇ ಜಾರಿಗೆ ಬಂದಿದ್ದರೆ ಭಾರತದ ವಿದ್ಯಾಭ್ಯಾಸದ ಭವಿಷ್ಯ ಹೇಗಿರುತ್ತಿತ್ತು ಎಂಬುದನ್ನು ಊಹಿಸಿಕೊಂಡರೆ ಅಚ್ಚರಿಯಾಗುತ್ತದೆ. ಸುಮಾರು ೭೦ ವರ್ಷಗಳನಂತರ ಇಂತಹುದೇ ಶಿಫಾರಸ್ಸನ್ನು ಇತ್ತೀಚಿನ ಆಯೋಗ (೧೯೬೦) ನೀಡಿವೆ. ಆದರೆ ಈ ನಡುವಿನ ಅಮೂಲ್ಯವಾದ ಕಾಲಾವಧಿಯನ್ನು ನಾವು ವ್ಯರ್ಥವಾಗಿ ಕಳೆದಿದ್ದೇವೆ. ಇದರಿಂದಾಗಿ ಅರ್ಹ ವಿದ್ಯಾರ್ಥಿಗಳಿಗೆ

ನೀಡಬಹುದಾಗಿದ್ದ ಅವಕಾಶಗಳನ್ನು ನಾವು ಅಲಕ್ಷಿಸಿದ್ದೇವಲ್ಲದೆ ತರಪೇತಾದ ಇಂತಹ ವ್ಯಕ್ತಿಗಳ ಕಾರಣದಿಂದಾಗಿ ಉಂಟಾಗಬಹುದಿದ್ದ ರಾಷ್ಟ್ರದ ಪ್ರಗತಿಯನ್ನೂ ಕಡೆಗಣಿಸಿದ್ದೇವೆ."[1]

ಕೆಲವು ಲೋಪದೋಷಗಳಿದ್ದರೂ "The historical value of this document (report) is incalculable. The enquiry of the commission led to a great educational awakening in India and its main findings documented Indian Educational policy till 1902"[2] ಎಂಬ ಕೀರ್ತಿಗೆ ಪಾತ್ರವಾದ ಈ ವರದಿಯ ಸಿದ್ಧತೆಯ ಹಿನ್ನೆಲೆಯಲ್ಲಿ ರೈಸರ ಪರಿಶ್ರಮ ಎಷ್ಟಿದೆ ಎಂದರೆ ಭಾರತದಲ್ಲಿ ಆಂಗ್ಲ ಶಿಕ್ಷಣದ ಇತಿಹಾಸ ವನ್ನು ದಾಖಲಿಸಿರುವ ಸಿಕ್ವೆರಾ ಎಂಬ ವಿದ್ವಾಂಸರು ಈ ಆಯೋಗವನ್ನು "ಹಂಟರ್ - ರೈಸ್ ಆಯೋಗ" ಎಂದೇ ಕರೆದಿದ್ದಾರೆ.[3]

ಅಷ್ಟೇ ಅಲ್ಲದೆ ಈ ವರದಿಯಲ್ಲಿನ ಬಹುಪಾಲು ಅಂಶಗಳನ್ನು ರೈಸರು ೧೮೬೮ ರಿಂದ ೧೮೮೩ರ ವರೆಗಿನ ತಮ್ಮ ಹಂಗಾಮಿ ನಿರ್ದೇಶಕರ ಅಧಿಕಾರದ ಅವಧಿಯಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರಲು ಯತ್ನಿಸಿದ್ದರು ಎಂಬ ಅಂಶವೇ ಹಂಟರ್ ಆಯೋಗ ದಲ್ಲಿ ರೈಸರ ಪಾತ್ರ ಎಷ್ಟಿತ್ತು ಎಂಬುದನ್ನು ನಿರ್ವಿವಾದವಾಗಿ ಸಾಬೀತುಪಡಿಸುತ್ತದೆ.

ಪರಿಣಾಮ:

೧೮೬೮ ರಿಂದ ೧೮೮೩ರ ವರೆಗೆ, ಎಂದರೆ ಸುಮಾರು ೧೫ ವರ್ಷಗಳ ಕಾಲ ರೈಸರ ಮಾರ್ಗದರ್ಶನದಲ್ಲಿ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆ ಅತ್ಯಂತ ದಕ್ಷರೀತಿಯಲ್ಲಿ ಕಾರ್ಯ ನಿರ್ವಹಿಸಿತು. ಹಳ್ಳಿಹಳ್ಳಿಗಳಲ್ಲಿ ಶಾಲೆಗಳು ಆರಂಭವಾದವು. ತರಬೇತಾದ ಶಿಕ್ಷಕರ ನೇಮಕ, ಪಠ್ಯಪುಸ್ತಕಗಳೇ ಮೊದಲಾದ ಪಾಠೋಪಕರಣಗಳ ಲಭ್ಯತೆ, ಬಿಗಿಯಾದ ಮೇಲ್ವಿಚಾರಣೆ ಇವೆಲ್ಲರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿತು. ಉನ್ನತ ಶಿಕ್ಷಣಕ್ಕಾಗಿ ಆಶಿಸುವವರ ಸಂಖ್ಯೆ ಬೆಳೆಯಿತು. ಬಡವ-ಶ್ರೀಮಂತ, ಮೇಲು-ಕೀಳು, ಗಂಡು-ಹೆಣ್ಣು ಎನ್ನದೆ ಸಮಾಜದ ಎಲ್ಲ ವರ್ಗಗಳ ಹಾಗೂ ಸ್ತರಗಳ ಜನರಿಗೆ ವಿದ್ಯಾಭ್ಯಾಸ ದೊರಕುವಂತಾದದ್ದು ಈ ಕಾಲದ ಅತ್ಯಂತ ಮಹತ್ವದ ಬೆಳವಣಿಗೆ. ವಿದ್ಯೆಯು ಜಾತಿ-ಮತಗಳ ಎಲ್ಲೆಯನ್ನು ಮೀರಿ ಎಲ್ಲೆಡೆ ಪಸರಿಸುವ ಮೂಲಕ ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದ ಎಷ್ಟೋ ಜನರನ್ನು ಮೇಲೆತ್ತಿದ್ದನ್ನು ಈ ಕೆಳಗಿನ ವಿವರಣೆ ಸ್ಪಷ್ಟಪಡಿಸುತ್ತದೆ:

> *"…. almost every caste is represented among the pupils. Ludicrous efforts are sometimes made to retain a higher position*

---

1 ಪೂರ್ವೋಕ್ತ, p 25-27 ರಲ್ಲಿಯ ಅನುವಾದ.

2 Nurullah & Naik. **A History of Education in India**. p 226-227 (**Educational Documents in India**. Delhi. 1963 p 22) ಇಲ್ಲಿ ಉದ್ಧೃತ.

3 ಪೂರ್ವೋಕ್ತ, ಪು. ೨೧೭.

in the school classes in virtue of caste than can be made good by personal ability. The sub deputy inspector humourously describes the elongated face of the Shanbhog in a certain village when he sees his son always taken low at the public examinations by the younger boy of one of his peons...." [1]

ಹೀಗೆ ಸಮಾಜದಲ್ಲಿ ಅತ್ಯಂತ ದುರ್ಬಲ ವರ್ಗದವರೂ ತಮ್ಮ ವೈಯಕ್ತಿಕ ಪ್ರತಿಭೆ-ಸಾಧನೆಗಳಿಂದ ಮೇಲ್ವರ್ಗದ ಜನಗಳ ಎದುರು ತಲೆ ಎತ್ತಿ ನಿಲ್ಲುವಂತೆ ಆದದ್ದು ಮುಂದೆ ೧೯೦೦ರಲ್ಲಿ ಹುಸ್ಕೂರು, ನರಸಾಪುರಗಳಲ್ಲಿ ಹಾಗೂ ೧೯೦೧ರಲ್ಲಿ ಮೈಸೂರು, ಆನೇಕಲ್ಲು ಹಾಗೂ ಹಾಸನಗಳಲ್ಲಿ ಪಂಚಮರಿಗೆಂದೇ ಪ್ರತ್ಯೇಕವಾದ ಶಾಲೆಗಳು ಆರಂಭವಾಗುವಷ್ಟು ಕ್ರಾಂತಿಕಾರಕವಾದ ಬೆಳವಣಿಗೆಯಾಗಿತ್ತು.

ಇಂತಹುದೇ ಇನ್ನೊಂದು ಕ್ರಾಂತಿಕಾರಕ ಬೆಳವಣಿಗೆ ಎಂದರೆ ಸ್ತ್ರೀಶಿಕ್ಷಣದ್ದು. ಆವರೆಗೆ ವಿದ್ಯೆಯಿಂದ ವಂಚಿತರಾಗಿದ್ದ ಹೆಣ್ಣುಮಕ್ಕಳೂ ಗಂಡುಹುಡುಗರಿಗೆ ಸರಿಸಾಟಿಯಾಗಿ ಶಾಲೆಗಳಲ್ಲಿ ಕುಳಿತು ವಿದ್ಯೆಯನ್ನು ಕಲಿಯಲಾರಂಭಿಸಿದ್ದು ನಿಜಕ್ಕೂ ಅತಿದೊಡ್ಡ ಸಾಧನೆಯೇ ಸರಿ.

ಕುಂಠಿತವಾದ ಪ್ರಗತಿ:

೧೮೮೨ರಿಂದ ೧೮೯೦ರವರೆಗಿನ ೪ ವರ್ಷಗಳು ರೈಸರ ವೃತ್ತಿಜೀವನದ ಅತ್ಯಂತ ಕಠಿಣ ಕರವಾದ ಕಾಲಘಟ್ಟ. ಹಂಟರ್ ಆಯೋಗದ ಕಾರ್ಯದರ್ಶಿಯಾಗಿ ಕೆಲಸ ಮುಗಿಸಿಬಂದ ಕೂಡಲೇ ತೀವ್ರವಾದ ಅನಾರೋಗ್ಯ ಅವರನ್ನು ಹಣ್ಣುಮಾಡಿತು. ಇದರೊಂದಿಗೆ ಈಗಾಗಲೇ ಎರಡನೇ ಅಧ್ಯಾಯದಲ್ಲಿ ವಿಸ್ತೃತವಾಗಿ ವಿವರಿಸಿರುವಂತೆ ವೃತ್ತಿಯ ಮುಂದುವರಿಕೆಯೇ ದೊಡ್ಡ ಸಮಸ್ಯೆಯಾಯಿತು. ಈ ಮಧ್ಯೆ ೧೮೮೧ರ ಜನಗಣತಿಯ ವರದಿಯನ್ನು ಬರೆಯುವ ಕೆಲಸಕ್ಕೆ ೧೮೮೩ರ ಜುಲೈ ತಿಂಗಳಿನಲ್ಲಿ ರೈಸರು ಸರ್ಕಾರದಿಂದ ನಿಯೋಜಿತರಾದರು.

ರೈಸರನ್ನು ಮೈಸೂರು ಸಂಸ್ಥಾನದ ಸೇವೆಯಲ್ಲಿ ಉಳಿಸಿಕೊಳ್ಳುವುದಕ್ಕಾಗಿ ಸರ್ಕಾರ ೧೮೮೩ರ ಜುಲೈ ೧೨ರಂದು ವಿದ್ಯಾಭ್ಯಾಸದ ಹಾಗೂ ಇತರೆ ಪ್ರಾಮುಖ್ಯವಲ್ಲದ (Miscellaneous) ಇಲಾಖೆಗಳ ಕಾರ್ಯದರ್ಶಿಯಾಗಿ ನೇಮಿಸಿತು. ಇದಲ್ಲದೆ ಪೋಲಿಸ್ ಇಲಾಖೆಯ ಕಾರ್ಯದರ್ಶಿಯ ಜವಾಬ್ದಾರಿ ಹಾಗೂ ಬೆಂಗಳೂರಿನ ದಂಡುಪ್ರದೇಶದ ವಿದ್ಯಾ‌ಇಲಾಖೆಯ ಹುದ್ದೆ ಎರಡೂ ಇವರ ಪಾಲಿಗೆ ಬಂದಿತು. ಈ ಮಧ್ಯೆ ೧೮೮೧ರ ಜನಗಣತಿಯ ವರದಿಯನ್ನು ಬರೆಯುವ ಕೆಲಸವನ್ನೂ ಅವರು ೧೮೮೩ರ ಜುಲೈನಿಂದ ಹೆಚ್ಚುವರಿಯಾಗಿ ನಿರ್ವಹಿಸಬೇಕಾಯಿತು. ಇದೆಲ್ಲವುಗಳಿಗಿಂತ ಹೆಚ್ಚಾಗಿ ೧೮೮೭ರ ಏಪ್ರಿಲ್ ೧ರಿಂದ ಪುರಾತತ್ತ್ವ ಇಲಾಖೆಯ ನಿರ್ದೇಶಕನ ಕಾರ್ಯವನ್ನೂ ಅವರು ಒಪ್ಪಿಕೊಳ್ಳ ಬೇಕಾಯಿತು.

---

1 ARPI, 1870-71, p 70.

ಬಹುಶಃ ಈ ಎಲ್ಲ ಕೆಲಸಗಳ ಒತ್ತಡದಿಂದಾಗಿ ರೈಸರಿಗೆ ೧೮೮೨ರ ನಂತರ ವಿದ್ಯಾಭ್ಯಾಸದ ಇಲಾಖೆಯ ಕೆಲಸಕಾರ್ಯಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಹಾಗಾಗಿ ಈ ಅವಧಿಯಲ್ಲಿ ವಿದ್ಯಾಭ್ಯಾಸವು ಹೆಚ್ಚಿನ ಪ್ರಗತಿಯನ್ನೇನೂ ಕಾಣಲಿಲ್ಲ. ಪತ್ರಿಕೆಗಳು

> *"ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯು ಮೇ॥ ರೈಸ್ ಸಾಹೇಬರವರ ವಿಚಾರಣೆಯೊಳಿದ್ದ ಕಾಲದಲ್ಲಿ ಕಾಲದೇಶೋಚಿತಗಳಾದ ಅಭಿವೃದ್ಧಿಯನ್ನೈದಲಿಲ್ಲವೆಂಬುದಾಗಿ ಅನೇಕರು ಆಕ್ಷೇಪಿಸುತ ಅದನ್ನು ಸಮರ್ಥರಾದ ಬೇರೊಬ್ಬರಿಗೆ ಒಪ್ಪಿಸಿ ವಿಶೇಷ ಕಾರ್ಯಕ್ರಮಗಳನ್ನೇರ್ಪಡಿಸಬೇಕೆಂಬುದಾಗಿ ಆಗಿಂದಾಗ್ಯೆ ಗವರ್ನಮೆಂಟಿನವರನ್ನು ಬಲಾತ್ಕರಿಸುತ್ತಲಿದ್ದರು"* ಎಂದು ವರದಿಮಾಡಿದವು.[1]

ಮೇಲುನೋಟಕ್ಕೆ ಈ ಹೇಳಿಕೆ ಸತ್ಯವೆಂದು ಕಂಡುಬಂದರೂ ೧೮೮೨ ರಿಂದ ೧೮೯೦ರವರೆಗಿನ ವಿದ್ಯಾಭ್ಯಾಸದ ಪ್ರಗತಿಯು ಕುಂಠಿತಗೊಳ್ಳುವುದಕ್ಕೆ ಇತರ ಪ್ರಮುಖ ಕಾರಣಗಳೂ ಕೆಲವಿವೆ. ಅವುಗಳನ್ನು ಹೀಗೆ ಪಟ್ಟಿಮಾಡಬಹುದು:

೧. ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರ್‌ರವರು ೧೮೮೩ರಲ್ಲಿ ಹೋಬಳಿ ಸ್ಕೂಲ್‌ಗಳ ಮೇಲ್ವಿಚಾರಣೆಯನ್ನು 'ಲೋಕಲ್ ಬೋರ್ಡ್' ಹಾಗೂ 'ವಿಲೇಜ್ ಕಮಿಟಿ'ಗಳಿಗೆ ವರ್ಗಾಯಿಸಿದರು. ಈ ಸಂಸ್ಥೆಗಳು ಹೆಚ್ಚಿನ ಹಣ ಕಾಸನ್ನು ವಿದ್ಯಾಭ್ಯಾಸಕ್ಕೆ ವ್ಯಯಿಸುವ ಸ್ಥಿತಿಯಲ್ಲಿ ಇಲ್ಲದ್ದಿದ್ದುದರಿಂದ ಪ್ರಗತಿ ಸಹಜವಾಗಿಯೇ ಕುಂಠಿತವಾಯಿತು.

೨. ಈ ಪರಿಸ್ಥಿತಿ ಕೇವಲ ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿರದೆ ಇಡಿಯ ದೇಶವ್ಯಾಪಿ ಸಮಸ್ಯೆಯಾಯಿತು. ಈ ಬಗ್ಗೆ ಸುರೇಶ್‌ಚಂದ್ರ ಘೋಷ್ ಎಂಬ ತಜ್ಞರು ಹೀಗೆ ಅಭಿಪ್ರಾಯಪಡುತ್ತಾರೆ: ".... the progress of the primary education was not satisfactory between 1885-86 and 1901-02, the increase in the number of pupils was only 66,00,000 as compared to nearly 2,00,000 between 1870-71 and 1885-86. The slow progress may be explained partly by the inability of the government to carry primary education to inaccessible areas inhabited by a people indifferent to education and partly by the lack of adequate finances...."[2]

---

1 **ಕರ್ನಾಟಕ ಪ್ರಕಾಶಿಕಾ**, ಜೂನ್ ೧, ೧೮೯೧, ಪು-೨.

2 **The History of Education in Modern India**. (1757-1998) 2000, p-100.

೩. ೧೮೯೮ರಲ್ಲಿ ಮೈಸೂರಿನಲ್ಲಿ ತಲೆದೋರಿದ ಪ್ಲೇಗ್‌ನ ಪಿಡುಗು ವಿದ್ಯಾಭ್ಯಾಸದ ಪ್ರಗತಿಗೆ ಗಣನೀಯವಾಗಿ ಧಕ್ಕೆಯನ್ನುಂಟು ಮಾಡಿತು. ೧೮೯೮ ರಿಂದ ೧೯೦೩ರವರೆಗೆ ಇಡಿಯ ಸಂಸ್ಥಾನದಲ್ಲಿ ಸರಾಸರಿ ೧೯,೪೯೦ ಜನಗಳಿಗೆ ಪ್ಲೇಗ್‌ರೋಗ ತಗುಲಿ ಅವರಲ್ಲಿ ೧೪,೭೦೦ ಜನ ತೀರಿಹೋದರು. ಒಂದು ಮೈಲಿಗೆ ಶೇಕಡಾ ೨.೭೦ ಜನಸಂಖ್ಯೆ ಇದ್ದರೆ ಅವರಲ್ಲಿ ಸತ್ತವರು ಶೇಕಡಾ ೭೫.೪ ಮಂದಿ.[1] ಪ್ಲೇಗ್‌ಪೀಡಿತ ಪ್ರದೇಶಗಳಲ್ಲಿನ ಜನರು ತಮ್ಮ ಮನೆಗಳನ್ನು ಬಿಟ್ಟು ಊರಹೊರಗಿನ ಬಯಲು ಪ್ರದೇಶಗಳಲ್ಲಿ ತಾತ್ಕಾಲಿಕ ವಸತಿಗಳಿಗೆ ತಮ್ಮ ವಾಸ್ತವ್ಯವನ್ನು ಬದಲಿಸಬೇಕಾಗಿ ಬಂದದ್ದರಿಂದ ಶಾಲೆಗಳು ವ್ಯವಸ್ಥಿತವಾಗಿ ನಡೆಯುವುದು ಸಾಧ್ಯವಿರಲಿಲ್ಲ.

೪. ಆರಂಭದಲ್ಲಿ ಇಲಾಖೆಯ ಕಾರ್ಯಚಟುವಟಿಕೆಗಳು ಅತಿಹೆಚ್ಚಾಗಿ ಇರದಿದ್ದುದರಿಂದ ಅದರ ನೇರವಾದ ಮೇಲ್ವಿಚಾರಣೆ ಸಾಧ್ಯವಿತ್ತು. ಆದರೆ ವರ್ಷಗಳು ಕಳೆದಂತೆ ಇಲಾಖೆ ಬೃಹತ್ತಾಗಿ ಬೆಳೆದದ್ದರಿಂದ ಸಹಜವಾಗಿ ಹಿಂಗಿನಷ್ಟು ತೀವ್ರವಾದ ಮೇಲ್ವಿಚಾರಣೆ ಸಾಧ್ಯವಿಲ್ಲದೆ ಹೋಗಿರಬಹುದು.

ಒಟ್ಟಿನಲ್ಲಿ ಈ ಎಲ್ಲಾ ಕಾರಣಗಳು ಒಂದುಗೂಡಿ ರೈಸರ ಕಾರ್ಯಪ್ರಗತಿಗೆ ಸಾಕಷ್ಟು ತೊಂದರೆಯಾಯಿತು ಎಂದು ನಾವು ಊಹಿಸಬಹುದು.

ದುರದೃಷ್ಟದ ಸಂಗತಿಯೆಂದರೆ ಪ್ರಸ್ತುತ ರೈಸರು ಒಬ್ಬರು ಶ್ರೇಷ್ಠ ಪುರಾತತ್ತ್ವಶಾಸ್ತ್ರಜ್ಞ ಹಾಗೂ ಶಾಸನ ತಜ್ಞರೆಂದು ಪ್ರಖ್ಯಾತರಾಗಿದ್ದಾರೆಯೇ ವಿನಃ ಮೈಸೂರು ಸಂಸ್ಥಾನದಲ್ಲಿ ಆಧುನಿಕ ಶಿಕ್ಷಣದ ಪ್ರವರ್ತಕರೆಂದಲ್ಲ. ಆದರೆ ರೈಸರ ನಿವೃತ್ತಿಯ ಸಮಯದಲ್ಲಿ ಸರ್ಕಾರವೇ ಪ್ರಕಟಿಸಿದಂತೆ

> *"The value of his influence on the course of educational progress in Mysore would alone entitle him to the warmest recognition at the hands of His Highness's Government."* [2]

ಎಂಬ ಮಾತು ಅಕ್ಷರಶಃ ನಿಜ.

❀ ★ ❀

1 C. Hayavadana Rao, **Mysore Gazetteer,** Vol. IV, 1929, p-445.

2 ಸರ್ಕಾರದ ಪ್ರಕಟಣೆ : ಸಂಖ್ಯೆ G. 2337-8-G.M. 119-06-3 dated 11th Oct., 1906.

ಅನುಬಂಧ - 1

ಹೋಬಳಿ ಸ್ಕೂಲ್ ವರದಿ

ನಂಬರ ೭೪೫೦—೫೫.

ಮೈಸೂರು ಧೊರೆಗಳ ಸೀಮೆಯ ರಾಜ್ಯಭಾರದ ಕಮ್ಮಿಷನರ ಸಾಹೇಬರವರಿಂದ
ಫೋರ್ಟ ವಿಲಿಯಮ್ ಪೇಟೆನಲ್ಲಿ ಇಂಡ್ಯಾ ಗವರ್ನಮೆಂಟಿನ ಸೆಕರಟೇರಿ ಯವರಿಗೆ
ತಾರೀಖು ೨೩ನೇ ಮಾರ್ಚಿ ೧೮೬೮ನೇ ಇಸವಿ.

ಗವರ್ನಮೆಂಟಿನ ಸ್ಕೂಲು ಪಾಠಶಾಲೆಗಳು ಯಿಲ್ಲದೇ ಯಿರುವದನ್ನು ಕುರಿತು, ಮೈಸೂರು ಸೀಮೆಯಲ್ಲಿ ಸಾಮಾನ್ಯವಾಗಿ ಸರ್ವಜನಗಳ ವಿದ್ಯಾಭ್ಯಾಸದ ಬಗ್ಗೆ ದೇಶಭಾಷೆಯ ಪಾಠಶಾಲೆಗಳು ಯಿಲ್ಲದೇ ಯಿರುವದನ್ನು ಕುರಿತು ಇಂಡ್ಯಾ ಗವರ್ನಮೆಂಟಿನವರು ತಿಳಿಸಿದ ಅಭಿಪ್ರಾಯಗಳನ್ನು ತಿಳಿಯಪಡಿಸಿ, ಈ ವಿಷಯಕ್ಕೆ ಕ್ಷಿಪ್ರದಿಂದ ವೊಂದು ವುಪಾಯವನ್ನು ಕಲ್ಪಿಸ ತಕ್ಕದ್ದೆಂದು ಸೂಚಿಸಿ ಬರಿಯಲ್ಪಟ್ಟ, ಅಂಡರ ಸೆಕರಟೇರಿ ಲಿಸ್ಟರ್ ಸಾಹೇಬರವರ ಮೊದಲ ಗುದಸ್ತ ೧ನೇ ಮಾರ್ಚ ೧೮೬೮ನೇ ನಂಬರ ಲೆಟರ ಬಂದು ತಲುಪಿ ಯಿರುತ್ತೆ.

೨. ದೇಶಭಾಷಾಭ್ಯಾಸದ ವಿಷಯದಲ್ಲಿ ವಿದ್ಯಾಭ್ಯಾಸದ ಆಫೀಷಿಯೇಟಿಂಗ ಡೈರೆಕ್ಟರವರ ದೆಸೆಯಿಂದ ರಿಪೋರ್ಟು ಬಂದಿರುವದರಿಂದಲೂ, ಸದರೀ ಆಫೀಸರವರು ತಿಳಿಸಿದ ಅಭಿಪ್ರಾಯಗಳನ್ನು ಸಾವಕಾಶವಾಗಿ ನಾನು ಪರ್ಯಾಲೋಚಿಸಿದರಿಂದಲೂ, ಆ ಅಭಿಪ್ರಾಯಗಳನ್ನು ಹಿಸ ಯಕ್ಸಲೆನ್ಸಿ ಗವರ್ನರ ಜನರಲ ಇನ ಕೌನ್ಸಿಲ್ಲವರ ಅಂಗೀಕಾರದ ಬಗ್ಗೆ ನಾನು ಕಳುಹಿಸುತ್ತೇನೆ.

೩. ಈ ದೇಶ ಭಾಷಾಭ್ಯಾಸವನ್ನು ಈ ಸೀಮೆಯಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ ಯೋಚಿಸಲಾದ ವುಪಾಯಗಳ್ಯಾವವೆಂದರೆ, ಕನ್ನಡ ವುಪಾಧ್ಯಾಯರ ಬಗ್ಗೆ ವೊಂದು ತರಬೇತಿಯ ಮಾದರಿ ತಕ್ಕ ಪಾಠಶಾಲೆಯನ್ನು ಸ್ಥಾಪಿಸೋಣ, ಪಾಠಶಾಲೆಗೆ ವುಪಯೋಗಿಸ ತಕ್ಕ ಬಾಲ ಶಿಕ್ಷೆಯ ಪುಸ್ತಕಗಳನ್ನ ಪ್ರಕಟಿಸೋಣ, ಹೋಬಳಿ ಪಾಠಶಾಲೆಗಳನ್ನು ಯೇರ್ಪಡಿಸೋಣ, ಈ ಅಂಶಗಳು ಇವುಗಳು ಸಿವಾಯಿ ಈ ಸೀಮೆಯ ಆಯಾ ಪ್ರದೇಶಗಳಲ್ಲಿ ಮಿಷನ ಯೆಂಬ ಪಾದ್ರಿ ಸಂಘದವರಿಂದ ಪೋಷಿಸಲ್ಪಡುವ ಇತರ ಪಾಠಶಾಲೆಗಳಿರುತ್ತವೆ. ಗವರ್ನಮೆಂಟಿನವರ ಮತ್ತು ಮಿಷನಿನ ದೇಶ ಭಾಷಾ ಪಾಠಶಾಲೆಗಳಲ್ಲಿ ಹುಡುಗೀರು ಸಹಿತವಾಗಿ ಸುಮಾರು ೬೦೦೦ ಮಂದಿಯೂ, ಈ ದೇಶದ ಸಾಧಾರಣ ಮಠಗಳಲ್ಲಿ ೨೩೦೦೦ ಮಂದಿಯೂ ಅಂತು ವಿದ್ಯಾರ್ಥಿಗಳು ವಗೈರಾದು ೨೯೦೦೦ ಮಂದಿ ಇರುತ್ತಾರೆ.

೪. ಗಂಡುಸರಾದ ಪ್ರಜೆಗಳು ೨೮೭೬೯೮ ಮಂದಿ ಯೆಂತ ಎಣಿಗೆಸಿ ಈ ಸೈತಿ ವೊಂದುತ್ತರಲ್ಲಿ ವೊಂದು ಭಾಗ ಆದರೆ ೨೪೭೪೫ ಮಂದಿ ಪಾಠಶಾಲೆಗೆ ಹೋಗತಕ್ಕ ವಯಸ್ಸಿನ ಹುಡುಗರಾಗಿರುತ್ತಾರೆಂತ ಭಾವಿಸಿದರೆ ಅರ್ಧಮ ಲಕ್ಷ ೨೦೦೦೦ ಹುಡುಗರು ಪ್ರಾಯಶಃ ವಿದ್ಯಾಭ್ಯಾಸವಿಲ್ಲದವರಾಗಿರುತ್ತಾರೆಂದು ಸ್ಪಷ್ಟವಾಗುತ್ತೆ.

೫. ಮೆಸ್ಟರ ರೈಸ ಸಾಹೇಬರವರು ಈ ಸಂಗತಿಯನ್ನು ಯಿಷ್ಟು ಗಣನೆಯಿಂದ ಆಲೋಚಿಸಿದ ಬಳಿಕ ಇತರ ಕಾರಣಗಳು ಸಿವಾಯಿ ಖರ್ಚು ವಿಶೇಷ ತಗಲುತ್ತೆಂಬ ಕಾರಣದಿಂದಲೇ ಗವರ್ನಮೆಂಟಿನವರು ಸಮ್ಮತಿಸಿದ ಹಲ್ಕಾಬಂದಿ ದೇಶ ವಿದ್ಯಾಭ್ಯಾಸದ ತೆರಿಗೆಯ ಕ್ರಮವನ್ನು ಮೈಸೂರು ಸೀಮೆಯಲ್ಲಿ ಜಾರಿಗೆ ತರುವದಕ್ಕೆ ಆಗುವದಿಲ್ಲವೆಂದು ತಿಳಿಸುತ್ತಾರೆ. ಮತ್ತು ಸದರೀ ಕ್ರಮದ ಮೇಲೆಯೇ ಯೋಚಿಸಲಾದ ಮತ್ತು ಈ ದೇಶದ ವಿದ್ಯಮಾನಗಳಿಗೆ ವಿಶೇಷ ಯುಕ್ತವಾಗಿರುವಂತೆ ಕಾಣುವ ವೊಂದುಪಾಯವನ್ನು ಪ್ರಕಟಿಸುತ್ತಾರೆ.

೬. ಈಗ ತಿಳಿಸಲ್ಪಟ್ಟ ವುಪಾಯವ್ಯಾವದೆಂದರೆ, ವಿದ್ಯೆ ಕಲಿಸುವ ಬಗ್ಗೆಯೂ, ಮೇಲ್ವಿಚಾರಣೆ ಮಾಡುವ ಬಗ್ಗೆಯೂ ಉಪಾಧ್ಯಾಯರುಗಳನ್ನು ತರಬೇತಿ ಮಾಡುವ ಬಗ್ಗೆ ಬೇಕಾದ ಲವಾಜಮೆಯ ವಿಷಯವು.

೭. ಮೊದಲನೇ ಅಂತರದಲ್ಲಿ ಹದ್ನಾಲ್ಕರಿಂದ ಎಂಟು ಕ್ರಮ ಪ್ರಕಾರ ೧೨ ಸಲಮೈಲುಗಳ ಘಟಕಗಳಿಗೆ ಒಂದು ಸರ್ಕಲ್ ಯೆಂಬುದಕ್ಕೆ ಬದಲಾಗಿ ತಾಲ್ಲೂಕುಗಳ ವಿಭಾಗಗಳಾದ ಹೋಬಳಿಗಳನ್ನೇ ಯೋಜಿಸಬೇಕೆಂತಲೂ, ಅಂತಾ ಪ್ರತಿ ಹೋಬಳಿಯಲ್ಲಿಯೂ ಒಂದೊಂದು ಪಾಠಶಾಲೆಯನ್ನು ಸ್ಥಾಪಿಸತಕ್ಕದ್ದೆಂದು ತಿಳಿಸಲ್ಪಟ್ಟಿದೆ. ಹೋಬಳಿಗಳ ಸಂಖ್ಯೆ ೬೪೫. ಸರಾಸರಿ ಯಿದರ ವಿಸ್ತೀರ್ಣ ೪೧ ಸಲ ಮೈಲುಗಳು. ಪ್ರಜೆಗಳು ೬೦೦೦ ಮಂದಿ. ಇದರ ಪ್ರಯೋಜನವೇನೆಂದರೆ, ಕೇವಲ ದೂರವಾದ ಗ್ರಾಮವು ಒಂದು ಪಾಠಶಾಲೆಗೆ ೪½ ಮೈಲು ಫಾಸಲೆಗಿಂತ ಜಾಸ್ತಿಯಿಲ್ಲದೆ ನಾಲ್ಕು ಕಡೆಗೂ ಮಧ್ಯಸಂಗತವಿರುವದರಿಂದ ಆ ಹೋಬಳಿಯಲ್ಲಿರತಕ್ಕ ಹುಡುಗರೆಲ್ಲರಿಗೂ ಸಾಧ್ಯವಾಗಿರುತ್ತೆ. ಈ ಶೀಮೆಯಲ್ಲಿ ಈಗ ಯಿರುವ ಸಾಧಾರಣ ಮತದ ಪುರಾವ್ಯತ ವೃತ್ತಿ ವಿಶೇಷ ಟೆಕ್ಸ್ಟುವಂತಹವುಗಳೂ, ವ್ಯಾಪಕರಾಗಿಯೂ, ಯಿರುವಂಥಾವರನ್ನು ಉಪಾಧ್ಯರನ್ನಾಗಿ ಯೋಜಿಸತಕ್ಕದ್ದು. ಯಿವರುಗಳಿಗೆ ಯೇಳು ರೂಪಾಯಿಗಳ ತಲಬ ಯಿರತಕ್ಕದ್ದು. ಮತ್ತು ಯಿವರುಗಳು ೧೨ ರೂಪಾಯಿಗಳ ತಲಬುಳ್ಳ ತಾಲ್ಲೂಕು ಪಾಠಶಾಲೆಯ ಅಸಿಸ್ಟೆಂಟ್ ಉಪಾಧ್ಯ ಕೆಲಸಕ್ಕೆ ಬಡ್ತಿಯಾಗ ಬಹುದಾಗಿರುತ್ತೆ.

೮. ಮೇಲ್ವಿಚಾರಣೆ ಮಾಡತಕ್ಕ ಅಧಿಕಾರಿಗಳು ಪ್ರತಿ ಯೊಂಬತ್ತು ಅಥವಾ ಸರಾಸರಿ ೩೬೦ ಸಲ ಮೈಲುಗಳ ವಿಸ್ತೀರ್ಣವುಳ್ಳ ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬ ಸಬ್ ಡೆಪ್ಯುಟಿ ಇನ್ಸ್ಪೆಕ್ಟರ ಪ್ರಕಾರ ಯಿರತಕ್ಕದ್ದು. ಇವರುಗಳು ಯಿದ್ದರ ಒಂದೊಂದು ಪಾಠಶಾಲೆಯನ್ನು ಅಡಿಮ ವರ್ಷ ವರುಷಕ್ಕೆ ಮೂರುಸಲ ಪರೀಕ್ಷೆ ತೆಗೆದುಕೊಳ್ಳುವದಕ್ಕೆ ಆಗುವದು. ಈ ಜನಗಳಿಗೆ ಮಾಹೆಯಾನಾ ೪೦ ರೂಪಾಯಿಗಳ ತಲಬೂ ದಿನ ಒಂದಕ್ಕೆ ೮ ಆಣೆಗಳ ಮೇರೆ ಭತ್ತ ಸಹಾ ಯಿರತಕ್ಕದ್ದು.

೯. ಸಾಧಾರಣ ಮತದ ಪುರಾವ್ಯತಲ್ಲರಿಗೂ ಗಣಿತ, ಭೂಗೋಳ ವಿಷಯ ತಿಳಿಯದಾಗಿ, ಮತ್ತು ಶಾಲಾ ನಿರ್ವಹಣ ಕ್ರಮವೂ, ಶಿಕ್ಷಾಕ್ರಮ ಅಥವಾ ರೀತಿಯೂ, ಅವರಿಗೆ ತಿಳಿಯದು. ಅದ್ದರಿಂದ ಉಪಾಧ್ಯರನ್ನು ತಯಾರು ಮಾಡುವದಕ್ಕೋಸ್ಕರ ಒಂದು ಪಾಠಶಾಲೆಯು ಅತ್ಯಂತಾವಶ್ಯಕವಾಗಿರುವಂತೆ ತೋರುತ್ತೆ. ಮಾಹೆಯಾನಾ ೬೦ ರೂಪಾಯಿಗಳ ತಲಬಿನ ಡಿವಿಜನ್ನಿಗೆ ಒಬ್ಬೊಬ್ಬನ ಪ್ರಕಾರ ಮೂರು ಮಂದಿ ಉಪಾಧ್ಯರು ಬೇಕಾಗುವದು. ಇವರುಗಳು ಅದಾ ಡಿಸ್ಟ್ರಿಕ್ಟುಗಳಲ್ಲಿ ಸರ್ವೆ ಮೇರೆ ಆಯಾ ಕಾಲದ ಅವಶ್ಯಕತೆಗೆ ತಕ್ಕಂತೆ ಒಂದೊಂದು ವರುಷ ಯಿರತಕ್ಕದ್ದು. ಉಪಾಧ್ಯ ತನಕ್ಕೆ ತಯಾರು ಆಗುತ್ತಿರುವ ವಿದ್ಯಾರ್ಥಿಗಳಿಗೆ ಜೀವನಕ್ಕೋಸ್ಕರ ಮೊದಲು ೬ ತಿಂಗಳವರೆಗೆ ತಿಂಗಳಿಗೆ ೫ ರೂಪಾಯಿಗಳ ಪ್ರಕಾರವೂ, ಅವರುಗಳು ಮೊದಲು ಆರು ತಿಂಗಳಲ್ಲಿ ಯೋಗ್ಯತಾ ಪತ್ರಿಕೆಯನ್ನು ಪಡೆಯದೆ ಯಿದ್ದರೆ ಮರಳೀ ಆರು ತಿಂಗಳಿಗೆ ಮಾಹೆಯಾನಾ ೪ ರೂಪಾಯಿಗಳ ಪ್ರಕಾರ ಬೌನ್ಸ ಕೊಡಬಹುದು.

೧೦. ಪಾಠಶಾಲೆಗೆ ಬೇಕಾದ ಮನೆಯ ವಿಷಯದಲ್ಲಿ ಬಾಡಿಗೆ ಯಿಲ್ಲದೆ ದೊರೆಯುವಂಥಾ ಕಟ್ಟಡಗಳನ್ನಾಗಲಿ, ಗ್ರಾಮಸ್ಥರು ಸರಿ ಬಗ್ಗೆ ಯಾವ ಕಟ್ಟಡವನ್ನು ಕೊಡುತ್ತೇವೆಂದು ಹೇಳುವರೋ ಅಂಥಾ ಕಟ್ಟಡವನ್ನಾಗಲಿ, ಈಗಿನ ಉಪಾಯವಾಗಿ ಉಪಯೋಗಿಸುವ ಪರ್ಯಂತರವೂ ಉಪಯೋಗಿಸಿ ಕೊಳ್ಳತಕ್ಕದ್ದೆಂದು ತಿಳಿಸಲ್ಪಟ್ಟಿದೆ. ಹಾಗೆ ಸಫಲವಾದಾಗ ಪಾಠಶಾಲೆಗಳು ಕಟ್ಟಿಸಲ್ಪಡುವವು.

೧೧. ಪಾಠಶಾಲೆಗೆ ಬೇಕಾಗುವ ಸಾಮಾನುಗಳು ಯಾವವೆಂದರೆ,– ಕಪ್ಪು ಹಾಕಿ ಬಣ್ಣಿಸಿದ ಹಲಿಗೆಗಳು, ಸ್ಲೇಟು ಹಲಿಗೆಗಳು, ಮ್ಯಾಪುಗಳೂ ಭೂಗೋಳ ಪಟಗಳು ಇವುಗಳು ವಿಚಾರಣೆಕರ್ತರಾಗಿರತಕ್ಕವರು ಪುಸ್ತಕಗಳನ್ನು ಮುದ್ರಿಸಿ ಸರಬರಾಯಿ ಮಾಡುವರು.

೧೨. ಕನ್ನಡ ಒಂದರಲ್ಲಿಯೇ ವಿದ್ಯೆ ಹೇಳಲ್ಪಡುವದು. ಇದರಲ್ಲಿ ಓದುವದು ಬರೆಯುವದು ಬಾಲಶಿಕ್ಷೆ, ಯಾ ಗಣಿತ, ಭೂಗೋಳಶಾಸ್ತ್ರ ಈ ಪಾಠಗಳು ಇರತಕ್ಕದ್ದು.

೧೩. ಯಾವ ಹುಡುಗರ ಬಂಧುಗಳು ವಿದ್ಯಾಭ್ಯಾಸದ ಬಗ್ಗೆ ದ್ರವ್ಯ ಸಹಾಯ ಮಾಡುವದಿಲ್ಲವೋ ಅಂಥಾ ಹುಡುಗರಿಂದ ಮಾತ್ರವೇ ಪಾಠಶಾಲೆ ಸಂಬಳವನ್ನು ವಸೂಲು ಮಾಡಲ್ಪಡುವದು.

೧೪. ಹುಡುಗರಂತೆಯೇ ಹುಡುಗೀರು ಪಾಠಶಾಲೆಗೆ ಬರಬಹುದೆಂದು ತಿಳಿಸಲ್ಪಟ್ಟಿದೆ.

೧೫. ಸಾಮಾನ್ಯವಾಗಿ ಕೆಲಸ ಪ್ರಾರಂಭಕ್ಕೆ ಹೊತ್ತಿನಲ್ಲಿ ಪಾಠಶಾಲೆಗೆ ಬರುವದಕ್ಕೆ ಅಗದ ಇರತಕ್ಕವರೋ

ಸ್ಕರ ದಾತ್ರಿ ಪಾಠಶಾಲೆಯನ್ನು ಸ್ಥಾಪಿಸುವದಕ್ಕೆ ಶಿಫಾರಸ ಮಾಡಲ್ಪಟ್ಟಿದೆ. ಉಪಾಧ್ಯಾಯರ ಕಾಲವನ್ನು ಹೆಚ್ಚಾಗಿ ವಿನಿಯೋಗಿಸುವ ಬಗ್ಗೆ, ದೀರದ ಖರ್ಚು ನಡೆಯುತಕ್ಕ ಬಗ್ಗೆ ಒಂದು ಜಾಸ್ತಿ ರುಸುಂ ತೆಗೆದುಕೊಳ್ಳಲ್ಪಡುವದು.

೧೩. ತೋಟಗಳ ವೃತ್ತಿ ಗೌರವ ದಾರಿಗಳಾಗಿಯೂ, ವ್ಯಾಪಾರಗಾರರಾಗಿಯೂ ಇರುವ ನಿವಾಸಿಗಳು ಗ್ರಾಮ ಪ್ರತಿನಿಧಿಗಳು ಇವರುಗಳನ್ನು, ಯಲ್ಲಾ ಅಂಶಗಳ ಮೇಲೆ ವಿಚಾರಣೆ ತೆಗೆದುಕೊಳ್ಳುವ ಬಗ್ಗೆ ಆಯಾ ಸ್ಥಳದ ಸಂಘಗಳಾಗಿ ಯೋಜಿಸುವದರಿಂದ ಪಾಠಶಾಲೆಗಳು ಜನಗಳಲ್ಲಿ ಪ್ರಖ್ಯಾತಿಗೊಂಡು ಅವರುಗಳಿಗೆ ಸಮ್ಮತವಾಗುವದಕ್ಕೆ ಕಾರಣವಾಗುವದು.

೧೪. ಹಾಲಿ ತಿಳಿಸಲ್ಪಟ್ಟ ಪ್ರಕಾರಕ್ಕೆ ಯೆಷ್ಟು ಖರ್ಚು ಹಿಡಿಸುವದೆಂದರೆ,

645 ಮಂದಿ ಹೋಬಳಿ ಪಾಠಶಾಲೆಗಳ ಉಪಾಧ್ಯಾಯರು ದರ ೭ ರೂಪಾಯಿ ಪ್ರಕಾರ.	4515	ಅಥವಾ	54180
8 ಮಂದಿ ಸಬ್ ಡಿಪ್ಯುಟಿ ಇನ್ಸ್ಪೆಕ್ಟರುಗಳು ದರ ೪೦ ರೂಪಾಯಿ ಪ್ರಕಾರ.	320	ಅಥವಾ	3840
ಟ್ರಾವೆಲಿಂಗ್ ಅಲೋಯನ್ಸ್ ಭತ್ಯ	80	ಅಥವಾ	960
ತರಬೇತಾದ ಮಾಡುವ ಉಪಾಧ್ಯಾಯರಿಗೆ ದರ ೪೦ ರೂಪಾಯಿಗಳ ಪ್ರಕಾರ. ..	120	ಅಥವಾ	1440
ಸಾಮಾನುಗಳು..			2000
ಪುಸ್ತಕಗಳು ಕಾಗದ ಮುಂತಾದ್ದಕ್ಕೆ			3000
ಸಾದಿಲ್ವಾರ ಖರ್ಚು			1000
		ಸೇರಿ....	66420

೧೮. ಈ ವಿಷಯಗಳನ್ನು ಯೋಜಿಸಿದರೆ ಮೈಸೂರು ಸೀಮೆಯಲ್ಲಿ ಇರುವವರಿಗೆ ಸರಿಸುಮಾರು ಯಲ್ಲಿ ಕ್ರಮಪ್ರಕಾರ ಪ್ರಜೆಗಳಿಗೆ ಬೇಕಾದಷ್ಟು ಅಂಶಕ್ಕೆ ಇದು ಸಮನಾಗಿರುವದು. ವಿಶೇಷ. ಪಾಠಶಾಲೆಗಳಲ್ಲಿಯೂ ೩೦೦೦೦ ಮಂದಿ ಬಾಲಕರು ಬರುವದಕ್ಕೆ ಬರುವದಾಗಿ ಅಂದಾಜಾಗಿರುತ್ತೆ.

೧೯. ವಿದ್ಯಾಭ್ಯಾಸದ ಬಗ್ಗೆ, ಸ್ಥಳದ ಇತರ ವಿಷಯಗಳಿಗೂ ಅವಶ್ಯವಾಗಿ ಹಿಡಿಯುವ ಖರ್ಚುಗಳನ್ನು ನಡಿಸುವ ಬಗ್ಗೆ ಹಿಸ ಯೆಕ್ಸಲೆನ್ಸಿ ಇನ್ ಕೌನ್ಸಿಲ್ಲವರು ಸೂಚಿಸಿದಂತೆ ಮಿತವಾದ ಒಂದು ಶೇ.೧ ಸೆಸ್ಸನ್ನು ಮಾಡುವ ವಿಷಯವು ಸರ್ಕಾರ ಇಲಾಖೆಯವರಿಗೆ ತಿಳಿಸಲ್ಪಟ್ಟು ಈಗ ಆಲೋಚನೆಯಲ್ಲಿರುತ್ತೆ. ಪರಂತು, ಈ ಶೆಂಗ ಯಿಂದ ವಸೂಲಾಗುವ ಮೊಬಲಗು ಸದರಿ ಇಲಾಖೆಯವರಿಂದ ಪೈಸಲಾತಿ ಪೂರೈಸಿದ ಹೊರತು ಯಾವ ವಿನ್ಯಾಸಕ್ಕೆ ನಲ್ಲಿಯೂ ಉಪಯೋಗಿಸ ತಕ್ಕದ್ದಲ್ಲವು. ಅಂಥಾ ಮೊಬಲಗು ಜಮಾಬಂದಿ ಮೇಲೆ ಸುಮಾರು ಶೇಕಡಾ ೧೮ ಪ್ರಕಾರ ಅಥವಾ ೮೦,೦೦೦ ರೂಪಾಯಿಗಳಾಗುವದು.

೨೦. ಮೈಸೂರು ಸೀಮೆಯಲ್ಲಿ ಗವರ್ನಮೆಂಟಿನವರು ಸ್ತ್ರೀವಿದ್ಯಾ ಶಾಲೆಗಳನ್ನು ಸ್ಥಾಪಿಸುವ ಬಗ್ಗೆ ತಕ್ಕ ಉಪಾಯಗಳನ್ನು ಕುರಿತು ಇನ್ನೊಂದು ಲೆಟ್ಟರಿನಲ್ಲಿ ರಿಪೋರ್ಟು ಮಾಡಲಾದೀತು.

(Signed) L. BC RING,
Commissioner.

ನಂಬರು ೮೭೧

ಇಂಡ್ಯಾ ಗವರ್ನಮೆಂಟಿನ ಅಫಿಷಿಯೇಟಿಂಗ್ ಸೆಕ್ರೆಟರಿಯವರಿಂದ,
ಮೈಸೂರು ಕಮ್ಮಿಷನರವರಿಗೆ

ಫಾರಿನ್ ಡಿಪಾರ್ಟ್ಮೆಂಟ್ ಜನರಲ್.

ಮೈಸೂರು ಸೀಮೆಯಲ್ಲಿ ದೇಶಭಾಷಾಭ್ಯಾಸದ ಬಗ್ಗೆ ಒಂದು ಉಪಾಯವನ್ನು ತಿಳಿಸಿ ನೀವು ಬರೆದ ಕಳೆದ ಮಾರ್ಚಿ ತಿಂಗಳು ೨೩ನೇ ಮಿತಿ ೧೮೬೦–೨೯ನೇ ನಂಬರು ಕಾಗದ ಲೆಟರ ಕಾಪಿ ಅದನ್ನು, ನಾನು ವೈಸರಾಯಿ ವ, ಗವರ್ನರ ಜನರಲ ಇನ್ ಕೌನ್ಸಿಲ್ಲವರ ರೂಬರೂ ಯಿಟ್ಟೆನು.

೨. ಅದಕ್ಕೆ ಜವಾಬಾಗಿ ತಮಗೆ ತಿಳಿಸುವಂತೆ ನನಗೆ ಅಪ್ಪಣೆ ಆಗಿರುವದೇನಂದರೆ.–ಸದರಿ ಉಪಾಯ

ವನ್ನು ಹಿಸ್ ಯೆಕ್ಸಲೆನ್ಸಿ ಇನ್ ಕೌನ್ಸಿಲ್ಲವರು ಅಂಗೀಕರಿಸಿ ಸದರಿ ಬಗ್ಗೆ ಸಾಲಿಯಾನಾ ಹಿಡಿಯುವ ೬೩೬೦೦ ರೂಪಾಯಿಗಳ ಖರ್ಚನ್ನು ಮಂಜೂರ್ಮಾಡಿರುತ್ತಾರೆ.

೨. ಈ ಸಂವತ್ಸರ ಪೂರಾ ಕೆಲಸಕ್ಕೆ ಆಗುವಷ್ಟು ದೊಬಲಗು ಸಿಲ್ಕು ಇರುವದಿಲ್ಲವೆಂದು ತಿಳಿಯಬರುತ್ತೆ, ಆದರೆ, ಪುಸ್ತಕೋಶಕ್ಕರ ಪರಿಸಕತ್ತಕ್ಕಾಗಿ ಮಂಜೂರ್ಮಾಡಲ್ಪಟ್ಟಿರುವ ಸದರಿ ಪ್ರಮಾಣವನ್ನು ಪೂರಾ ಈಗಲೇ ನಡೆಸುವದರಿಂದ ಆಗಬೇಕಾದ ೬೩೬೦೦ ರೂಪಾಯಿಗಳ ವಿಶಿಷ್ಟ ಖರ್ಚನ್ನು ಈ ಸಂವತ್ಸರವೇ ಮಾಡಬೇಕೆಂಬ ಜರೂರಿರುವದಿಲ್ಲವು. ನಿಮ್ಮ ಲೆಟರಿನ ೧೫ನೇ ಕಲಂನಲ್ಲಿ ಸೂಚಿಸಿಯಿರುವ ಕೆಲಸಾ ನರ ಮೇರೆ ಖಾತಕ್ಕ ಜಾಸ್ತಿ ತರಿಗೆಯು ಡಿಸ್ಟ್ರಿಕ್ಟುಗಳಲ್ಲಿ ಸ್ವಸಿದ್ಧಾ ಪೂರೈಸಿದಾಗ ಮೊಕರರ್ಮಾಡಲ್ಪಟ್ಟ ಪಕ್ಷಕ್ಕೆ ಆ ಮೂಲಕ ೮೦,೦೦೦ ರೂಪಾಯಿಗಳು ಹುಟ್ಟುವಳಿಯಾಗುವದು ಈ ದೊಬಲಗು ಸದರಿ ಖರ್ಚಿಗೆ ಬೇಕಾದ್ದಕ್ಕಿಂತ ಜಾಸ್ತಿಯಾಗಿಯೇ ಯಿರುವದು.

೩. ಸನ್ ೧೮೬೮–೬೯ನೇ ಇಸವಿಯ ಅಂದಾಜ್ ಪೈಕಿ ಪ್ರಾಯಶಃ ಉಳಿಯುವ ೨೫,೭೭೦ ರೂಪಾಯಿಗಳನ್ನು ಈ ಬಗ್ಗೆ ಮಟ್ಟಿಗೆ ಖರ್ಚು ಮಾಡುವಂತೆ ತಮಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. ಮತ್ತು ಈ ದೊಬಲಗಿನ ಪೈಕಿ ಬಹಳ ಮಟ್ಟಿಗೆ ತಮ್ಮ ಲೆಟರಿನ ೯ನೇ ಕಲಂನಲ್ಲಿ ತಿಳಿಸಲ್ಪಟ್ಟ ಮೇರೆಗೆ ಆ ಕೀರ್ತಿಯ ಸಾಧಾರಣ ಮತಗಳ ಪ್ರಮಾಣವನ್ನು ತರಬೇತಿ ಮಾಡಿಸುವ ಬಗ್ಗೆ ಉಪಯೋಗಿಸ ತಕ್ಕದ್ದು.

೪. ನಾನು ತಿಳಿಸುವದೇನಂದರೆ, ನಿಮ್ಮ ಲೆಟರಿನಲ್ಲಿ ಕಂಡ ಪಾಠಶಾಲೆಗಳ ಮೇಲ್ವಿಚಾರಣೆಯ ಬಗ್ಗೆ ಸ್ಥಳದ ಕಮಿಟಿಗಳನ್ನು ಯೇರ್ಪಡಿಸಬೇಕೆಂದು ನೀವು ಶಿಫಾರಸ ಮಾಡಿದ ಅಂಶವು ಅತ್ಯಂತ ಶ್ಲಾಘ್ಯವಾದ ಪ್ರಾಯವೆಂದು ಗವರ್ನರ್ ಜನರಲ್ ಇನ್ ಕೌನ್ಸಿಲ್ಲವರು ಭಾವಿಸುತ್ತಾರೆಂತಲೂ, ಅದನ್ನು ನೆರವೇರಿಸುವಂತೆ ನಿಮಗೆ ಅಧಿಕಾರ ಕೊಟ್ಟಿರುತ್ತಾರೆಂತಲೂ ತಿಳಿಸುತ್ತೇನೆ.

೫. ಹೋಬಳಿ ಯೆಂಬ ದೇಶಭಾಷೆಯ ಮಾತಿಗೆ ಬದಲಾಗಿ ಸರ್ಕಾರಿ ಲೆಟರುಗಳಲ್ಲಿ ಯಾವ ಸಂಗತಿಯೊಳಗೂ ಉಪಯೋಗಿಸ ತಕ್ಕ ಯಾವದಾದರೊಂದು ಮಾತನ್ನು ಕಲ್ಪಿಸುವದು ಯುಕ್ತವೆಂದು ಸೂಚಿಸುತ್ತೇನೆ.

ಮೊಕಾಂ ಸಿಂಲಾ ತಾರೀಖು ೧೯ನೇ
ಮೇ ಸನ್ ೧೮೬೮ನೇ ಇಸವಿ.

(Signed) C. U. AITCHISON,
Offg. Secy. to the Govt. of India.

ಅನುಬಂಧ - 2

ಇಸ್ತಿಹಾರ ನಾಮಾ.

ಕೋಲಾರದ ಡಿಸ್ಟ್ರಿಕ್ಟಿನಲ್ಲಿರುವ ಹೋಬಳಿ ಮತ್ತು ಹಳ್ಳಿಗಳ ವಾಸಸ್ಥರಿಗೆಲ್ಲಾ ಇದರಿಂದ ತಿಳಿಸುವದೇನಂದರೆ—ಸದರೀ ಡಿಸ್ಟ್ರಿಕ್ಟಿನ ತಾಲ್ಲೂಕುಗಳಿಗೆ ಸೇರಿದ ಪ್ರತಿ ಹೋಬಳಿಯಲ್ಲಿಯೂ, ರೈತರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕೋಸ್ಕರ ಸರಕಾರದಿಂದ ಮಠವು ಸ್ಥಾಪಿಸಲ್ಪಡುವದು.

ಮೇಲೆ ನಮೂದಿಸಿರುವ ಪಾಠಶಾಲೆಗಳಲ್ಲಿ ಕೆಲಸ ಹೊಂದಲಪೇಕ್ಷೆಯುಳ್ಳವರಾಗಿದ್ದರೆ ಸದರೀ ಡಿಸ್ಟ್ರಿಕ್ಟಿನಲ್ಲಿ ಈಗ ಸ್ವಂತ ಮಠಗಳನ್ನು ಇಟ್ಟು ಇರುವ ಉಪಾಧ್ಯರು ಬರುವ ಜುಲೈ ತಿಂಗಳು ತಾರೀಖು ೧೫ನೇ ಸೋಮವಾರದ ಬೆಳಿಗ್ಗೆ ೧೦ ಘಂಟೆಗೆ ಸರಿಯಾಗಿ ಕೋಲಾರದಲ್ಲಿರುವ ಗವರ್ನಮೆಂಟು ಸ್ಕೂಲಿಗೆ ಬಂದು ಹಾಜರಾಗ ತಕ್ಕದ್ದು. ಅವರಲ್ಲಿ ಯೋಗ್ಯತೆಯುಳ್ಳವರನ್ನು ಆರಿಸಿ, ವಿದ್ಯೆ ಬೋಧಿಸುವ ಕ್ರಮದಲ್ಲಿಯೂ, ಅವರಿಗೆ ತಿಳಿಯದೆ ಇರುವಂಥಾ ಇತರ ಅಂಶಗಳಲ್ಲಿಯೂ, ತಿದ್ದುಪಾಟು ಮಾಡುವದಕ್ಕೋಸ್ಕರ ಸರಕಾರದ ಕಡೆಯಿಂದ ಒಬ್ಬ ನಾರ್ಮಲ್ ಟ್ರೇನಿಂಗ್ ಮಾಸ್ಟರ ನೇಮಿಸಲ್ಪಟ್ಟಿರುವನು. ಆತನ ಬಳಿಯಲ್ಲಿ ಶಿಕ್ಷೆ ಹೊಂದುವಾಗ ಪ್ರತಿ ಮನುಷ್ಯನಿಗು ತನ್ನ ಜೀವನಕ್ಕೋಸ್ಕರವಾಗಿ ತಿಂಗಳಿಗೆ ೫ ರೂಪಾಯಿ ಸರಕಾರದಿಂದ ಕೊಡಲ್ಪಟ್ಟೀತು. ಹೀಗೆ ತಿದ್ದಲ್ಪಟ್ಟವರು ಬರುವ ಡಿಸೆಂಬರ ತಿಂಗಳಲ್ಲಿ ಪರೀಕ್ಷೆ ಕೊಡಬೇಕಾಗಿರುವದು, ಮತ್ತು ಇವರೊಳಗೆ ಅರ್ಹರಾಗಿ ಕಾಣಬರುವವರು ಕ್ರಮೇಣ ತಿಂಗಳಿಗೆ ೭ ರೂಪಾಯಿ ಕಲಬ್ ವುಳ್ಳ ಹೋಬಳಿ ಸ್ಕೂಲ್ ಮಾಸ್ಟರ ಕೆಲಸವನ್ನು ಪಡೆಯುವರು.

ಮತ್ತು ಈ ಡಿಸೆಂಬರ್ ತಿಂಗಳು ಬರುವದಕ್ಕೆ ಮುಂಚೆ ಆಯಾ ಹೋಬಳಿಗೆ ಸೇರಿದ ಗ್ರಾಮಸ್ಥರು ಮಾಡತಕ್ಕ ಕೆಲಸವೇನಂದರೆ, ತಮ್ಮ ತಮ್ಮ ಹೋಬಳಿಯಲ್ಲಿ ಸ್ಕೂಲ್ ಇಡುವದಕ್ಕೋಸ್ಕರ ಸರಿಯಾದ ಮನೆಗಳನ್ನು ತಯಾರ್ಮಾಡುವದು.

ತಾರೀಖು ೨೦ನೇ ಮಾಹೆ ಜೂನ್ ಸನ್ ೧೮೬೮ನೇ ಇಸವಿ,
ದರಬಾರು ಬೆಂಗಳೂರು.

B. L. RICE,
ಆಫಿಷಿಯೇಟಿಂಗ್ ಡೈರೆಕ್ಟರ,
ಪಬ್ಲಿಕ್ ಇನ್ಸ್ಟ್ರಕ್ಷನ್.

—

4. ರೈಸ್ ಪೂರ್ವದಲ್ಲಿ ಪುರಾತತ್ತ್ವ ಶೋಧನೆ

ಶಿಕ್ಷಣ ಕ್ಷೇತ್ರದಲ್ಲಿನ ಸುಧಾರಣೆ, ಗೆಜೆಟಿಯರ್‌ಗಳ ರಚನೆ ಮುಂತಾದ ಪ್ರಮುಖ ಕಾರ್ಯಗಳನ್ನು ಲೂಯಿರೈಸರು ನಿರ್ವಹಿಸಿರುವವರಾದರೂ ಅವರು ಪ್ರಖ್ಯಾತರಾಗಿರುವುದು ಪುರಾತತ್ತ್ವ ಸಂಶೋಧಕರಾಗಿ, ಶಾಸನಾಧ್ಯಯನ, ಗ್ರಂಥಸಂಪಾದನೆ, ನಾಣ್ಯಶಾಸ್ತ್ರ, ವಾಸ್ತುಶಿಲ್ಪಾಧ್ಯಯನ ಮುಂತಾದ ಪ್ರಾಕ್ತನಶಾಸ್ತ್ರಸಂಬಂಧಿ ಕ್ಷೇತ್ರಗಳಿಗೆ ರೈಸರು ನೀಡಿರುವ ಕೊಡುಗೆಯನ್ನು ಗುರುತಿಸಿ, ವಿಶ್ಲೇಷಿಸುವ ಮೊದಲು ಅವರು ಈ ಕಾರ್ಯವನ್ನು ಕೈಗೊಳ್ಳುವ ಪೂರ್ವದಲ್ಲಿ ಇಡಿಯ ದಕ್ಷಿಣ ಭಾರತದಲ್ಲಿ ನಡೆಯುತ್ತಿದ್ದ ಇದೇ ತೆರನಾದ ಕಾರ್ಯಗಳ ಸ್ಥೂಲವಾದ ಪರಿಚಯ ಅತ್ಯಗತ್ಯ.

ದಕ್ಷಿಣಭಾರತದಲ್ಲಿ :

ದಕ್ಷಿಣಭಾರತದಲ್ಲಿ ಆರಂಭಿಕ ಹಂತಗಳಲ್ಲಿ ನಡೆದಿರಬಹುದಾದ ಪುರಾತತ್ತ್ವ ಶೋಧನೆಯ ಬಗೆಗೆ ನಮಗೆ ದೊರಕುವ ಮಾಹಿತಿಗಳು ಬಹಳ ಅಲ್ಪ. ಲಬ್ಧ ವಿವರಗಳನ್ನು ಒಟ್ಟುಗೂಡಿಸಿ ಹೇಳುವುದಾದರೆ ೧೮ನೇ ಶತಮಾನದ ಕಡೆಯ ವೇಳೆಗೆ ದಕ್ಷಿಣಭಾರತಕ್ಕೆ ಸಂಬಂಧಿಸಿದಂತೆ ವರದಿಯಾಗಿರುವ ಪುರಾತತ್ತ್ವ ಶೋಧನೆಯ ಪ್ರಮುಖ ಪ್ರಕರಣಗಳು ಕೇವಲ ನಾಲ್ಕು. ಅವೆಂದರೆ :

1. ನೆಲ್ಲೂರಿನ ಬಳಿ ಆಕಸ್ಮಿಕವಾಗಿ ದೊರೆತ ರೋಮನ್ ನಾಣ್ಯಗಳ ಬಗ್ಗೆ ಮದ್ರಾಸಿನ ಗೌರ್ನರ್ ಆಗಿದ್ದ ಅಲೆಕ್ಸಾಂಡರ್ ಡೇವಿಡ್‌ಸನ್ ಏಶಿಯಾಟಿಕ್ ಸೊಸೈಟಿಗೆ ಸಲ್ಲಿಸಿದ ವರದಿ (೧೭೮೮).
2. 'ಆರ್ಕಿಯಾಲಜಿಯ' ಪತ್ರಿಕೆಯ ೧೭೮೮ರ ಸಂಚಿಕೆಯಲ್ಲಿ ವಿಲಿಯಂ ಚೇಂಬರ್ಸ್ ಎಂಬಾತ ಮಹಾಬಲಿಪುರವನ್ನು ಕುರಿತಂತೆ ಪ್ರಕಟಿಸಿರುವ ಲೇಖನ.
3. ಕಲ್ಕತ್ತದ ಏಶಿಯಾಟಿಕ್ ರಿಸರ್ಚಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವ A Royal grant of land in Carnata ಎಂಬ ಬರಹ (೧೭೯೧).
4. 'ಆರ್ಕಿಯಾಲಜಿಯ' ಪತ್ರಿಕೆಯ ೧೭೯೨ರ ಸಂಚಿಕೆಯಲ್ಲಿ ಆ್ಯಡಮ್ ಬ್ಲಾಕ್‌ಡರ್ ಎಂಬ ವೈದ್ಯ ಮಧುರೆಯ ದೇವಾಲಯವನ್ನು ಕುರಿತು ಪ್ರಕಟಿಸಿರುವ ಲೇಖನ.

ಈ ಎಲ್ಲ ಪ್ರಯತ್ನಗಳು ಉಳಿದೆಡೆಗಳಂತೆಯೇ ವೈಯಕ್ತಿಕ ಮಟ್ಟದ್ದಾಗಿದ್ದು ಪ್ರಾಥಮಿಕ ಸ್ವರೂಪದ್ದಾಗಿದೆ. ದಕ್ಷಿಣ ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಕರ್ನಲ್ ಕಾಲಿನ್ ಮೆಕೆಂಜ್ಹಿಯ ಆಗಮನವಾಗುವವರೆಗೂ ಪುರಾತತ್ತ್ವ ಶೋಧನೆಯು ಹೆಚ್ಚು ವ್ಯವಸ್ಥಿತವಾಗಿ ಮುಂದುವರೆಯಲಿಲ್ಲ ಎಂದೇ ಹೇಳಬೇಕು.

ಕರ್ನಲ್ ಮೆಕೆಂಜ್ಹಿ ಯುಗ :

೧೭೯೯ ರಲ್ಲಿ ಟಿಪ್ಪುವಿನ ನಿಧನಾನಂತರ ಆಂಗ್ಲರ ಕೈವಶವಾದ ಮೈಸೂರು ಪ್ರದೇಶದ ಭೌಗೋಳಿಕ ಪರೀಕ್ಷಣಾಧಿಕಾರಿಯಾಗಿ ೧೮೧೦ರವರೆಗೆ ಕರ್ನಲ್ ಕಾಲಿನ್ ಮೆಕೆಂಜ್ಹಿ ಕಾರ್ಯ ನಿರ್ವಹಿಸಿದ.

ಭೂಮಾಪನದ ಕೆಲಸಕ್ಕಾಗಿ ಇಡಿಯ ದಕ್ಷಿಣಭಾರತವನ್ನು ಸುತ್ತಿದ ಮೆಕೆಂಜ್ಞಿ ಕೇವಲ ಅಷ್ಟಕ್ಕೆ ಮಾತ್ರ ತೃಪ್ತಿಗೊಳ್ಳಲಿಲ್ಲ. ಪ್ರಾಚೀನ ವಸ್ತುಗಳನ್ನು ಸಂಗ್ರಹಿಸುವ ಕಾರ್ಯಕ್ಕೂ ಕೈಹಾಕಿದ. ಈ ರೀತಿಯಾಗಿ ಅವನು ಸಂಗ್ರಹಿಸಿದ ವಸ್ತುಗಳೆಂದರೆ

ಹಸ್ತಪ್ರತಿಗಳು	-	೧೫೬೮
ಕೈಫಿಯತ್ತುಗಳು	-	೨೦೭೦
ಶಾಸನಪ್ರತಿಗಳು	-	೮೦೭೦
ನಕ್ಷೆಗಳು	-	೭೯
ನಾಣ್ಯಗಳು	-	೬೨೧೮
ಪ್ರಾಚೀನ ವಿಗ್ರಹಗಳು	-	೧೦೬
ಚಿತ್ರಗಳು	-	೨೬೩೦[1]

ಇವಲ್ಲದೆ ತಾನು ಸಂಚಾರ ಮಾಡಿದ ಪ್ರದೇಶಗಳಲ್ಲಿನ ವಿದ್ವಾಂಸರನ್ನು ಭೇಟಿಯಾಗಿ ಸ್ಥಳಪುರಾಣವನ್ನು ಸಂಗ್ರಹಿಸುತ್ತಿದ್ದನು.

ಮೆಕೆಂಜ್ಞಿಯು ಕರ್ನಾಟಕದ ಪುರಾತತ್ತ್ವ ಶೋಧನೆಗೆ ನೀಡಿದ ಬಲುದೊಡ್ಡ ಕೊಡುಗೆಯೆಂದರೆ ಶಾಸನಗಳ ಅಧ್ಯಯನಕ್ಕೆ ವಿದ್ವಾಂಸರನ್ನು ಹುರಿದುಂಬಿಸಿದ್ದು. ಮೆಕೆಂಜ್ಞಿಯ ಸಹಾಯಕನಾಗಿದ್ದ ಕವೆಲ್ಲಿ ಬೋರ್‍ರೈಯನೆಂಬ ದೇಶೀಯ ವಿದ್ವಾಂಸ ಶ್ರವಣಬೆಳಗೊಳದ ಪ್ರಸಿದ್ಧವಾದ ಬುಕ್ಕರಾಯನ ಶಾಸನವನ್ನು ಅನುವಾದಿಸಿ ಏಶಿಯಾಟಿಕ್ ರಿಸರ್ಚಸ್ ಪತ್ರಿಕೆಯ ೯ನೇ ಸಂಪುಟದಲ್ಲಿ (೧೮೦೭) ಅನುವಾದಿಸಿ ಪ್ರಕಟಿಸಿದ್ದಾನೆ. ಹಾಗಾಗಿ ಕವೆಲ್ಲಿ ಬೋರ್‍ರೈಯನೇ 'ಕರ್ನಾಟಕದ ಶಾಸನಗಳ ಅಧ್ಯಯನದ ವಿಷಯದಲ್ಲಿ ಮೊತ್ತ ಮೊದಲು ಆಸಕ್ತಿವಹಿಸಿದ ಭಾರತೀಯ ವಿದ್ವಾಂಸ' ಎಂದು ಎಂ. ಚಿದಾನಂದ ಮೂರ್ತಿ ಭಾವಿಸುತ್ತಾರೆ.[2] 'ಕನ್ನಡ ಶಾಸನವನ್ನು ಮೊದಲು ಓದಿದ ಕೀರ್ತಿ ಬೋರ್‍ರೈಯನಿಗೆ ಸಲ್ಲುವಂತೆ ಕಾಣುತ್ತದೆ' ಎಂದು ಎಂ.ಎಂ. ಕಲಬುರ್ಗಿ ಅಭಿಪ್ರಾಯಪಡುತ್ತಾರೆ.[3] ಇದಕ್ಕೆ ಮುಂಚೆಯೆ, ಎಂದರೆ ೧೮೦೪ರ ವೇಳೆಗೇ ದೇವಚಂದ್ರನು ತನ್ನ ರಾಜಾವಳಿ ಕಥಾಸಾರವನ್ನು ರಚಿಸುವಾಗ ಅನೇಕ ಶಾಸನಗಳನ್ನು ಆಧಾರವಾಗಿ ಇರಿಸಿಕೊಂಡಿದ್ದನಲ್ಲದೆ ಅವುಗಳಲ್ಲಿ ಕೆಲವು ಶಾಸನಗಳ ಪಾಠವನ್ನು ಯಥಾವತ್ತಾಗಿ ನೀಡಿದ್ದಾನೆ. ಹಾಗಾಗಿ ದೇವಚಂದ್ರನೇ "ಕನ್ನಡದ ಮೊತ್ತಮೊದಲ ದೇಶೀ ಶಾಸನತಜ್ಞ" ಎಂಬುದು ಕೆಂಗೇರಿ ಚಕ್ರಪಾಣಿಯವರ ಅಭಿಪ್ರಾಯವಾಗಿದೆ.[4] ಆದರೆ ಫ್ಲೀಟ್‌ರಂತಹ ಹಿರಿಯ ಸಂಶೋಧಕರು ರಾಜಾವಳಿ ಕಥಾಸಾರವನ್ನು ಕೃತಕ ಚಾರಿತ್ರಿಕ ದಾಖಲೆ ಎಂದು ಪರಿಗಣಿಸಿರುವುದರಿಂದ[5] ನಂತರದ ಪೀಳಿಗೆಯ ಬಹುಪಾಲು ಸಂಶೋಧಕರು ಪ್ರಧಾನವಾಗಿ ಕವೆಲ್ಲಿ ಬೋರ್‍ರೈಯನನ್ನೇ ಆದ್ಯ ದೇಶೀಯ ಶಾಸನತಜ್ಞ ಎಂದು ಭಾವಿಸಿದ್ದಾರೆ.

---

1 ಕಲಬುರ್ಗಿ ಎಂ.ಎಂ., (ಸಂ.) **ಕರ್ನಾಟಕದ ಕೈಫಿಯತ್ತುಗಳು** (೧೯೯೪, ಹಂಪಿ) ಪು. X

2 **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ಪು. ೧೯

3 **ಶಾಸನ ವ್ಯಾಸಂಗ** (೧೯೭೪, ಕ.ವಿ.ವಿ.) ಪು. ೧೩೨

4 ಕನ್ನಡದ ಮೊದಲ ದೇಸೀ ಶಾಸನತಜ್ಞ, ಕವಿ ದೇವಚಂದ್ರ **ಇತಿಹಾಸ ದರ್ಶನ**, ಸಂ. ೧೧, ಪು. ೧೪೪-೪೯.

5 "... ***Pseudo Historical*** *Records like Kongu Desha Rajakkal and Rajavali Kathasara..*" (J.F. Fleet *'Spurious Indian Records'* **Ind. Ant.** Vol XXX, P 201)

ಆದರೆ ಕವೆಲ್ಲಿ ಬೋರೈಯನ ಕಾಲದಲ್ಲಿಯೇ ಕರ್ನಾಟಕದ ಇತರ ಸ್ಥಳಗಳಲ್ಲಿನ ಅನೇಕ ದೇಶೀ ವಿದ್ವಾಂಸರು ಕನ್ನಡ ಶಾಸನಗಳನ್ನು ಓದಿ ಅರ್ಥೈಸಿಕೊಳ್ಳುವ, ಪ್ರತಿಮಾಡುವ ಸಾಮರ್ಥ್ಯವನ್ನು ಹೊಂದಿದ್ದರು ಎಂಬುದಕ್ಕೆ ಮೆಕೆಂಜಿಯು ಸಂಗ್ರಹಿಸಿರುವ ವಿವಿಧ ಕೈಫಿಯತ್ತುಗಳೇ ಸಾಕ್ಷಿಯಾಗಿವೆ.

ವಾಲ್ಟರ್ ಎಲಿಯಟ್ ಮತ್ತು ಮೇಜರ್ ಡಿಕ್ಸನ್ ಯುಗ :

ಕನ್ನಡ ಶಾಸನಗಳ ವ್ಯವಸ್ಥಿತ ಅಧ್ಯಯನಕ್ಕೆ ಮೊದಲಿಗನೆಂದರೆ ಸರ್. ವಾಲ್ಟರ್ ಎಲಿಯಟ್. ಮದ್ರಾಸ್ ಸಿವಿಲ್ ಸರ್ವೀಸಿನ ಅಧಿಕಾರಿಯಾಗಿದ್ದ ಈತ ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಪಶ್ಚಿಮ ಭಾಗ ಮತ್ತು ಹಳೆಯ ಮೈಸೂರು ಪ್ರಾಂತ್ಯದ ಉತ್ತರ ಭಾಗಗಳಿಂದ ಸುಮಾರು ೧೩೦೦ ಶಾಸನಗಳನ್ನು ಸಂಗ್ರಹಿಸಿದನು. ಇದರಲ್ಲಿ ೫೯೫ ಶಾಸನಗಳನ್ನು ಆಯ್ದುಕೊಂಡು Karnatak Desh Inscriptions ಎಂಬ ಕೈಬರಹದ ಹೊತ್ತಿಗೆಯನ್ನು ಸಿದ್ಧಪಡಿಸಿದನು. ಇದರ ಪರಿಷ್ಕೃತ ರೂಪವೇ ರಾಯಲ್ ಏಷಿಯಾಟಿಕ್ ಸೊಸೈಟಿಗೆ ಆತ ಸಾದರಪಡಿಸಿದ 'Hindu Inscriptions' ಎಂಬ ವಿಸ್ತೃತ ಪ್ರಬಂಧ (೧೮೩೭). ಇದೇ ಸುಮಾರಿಗೆ ಬೆಳಗಾವಿಯ ಕೆಲವು ಕನ್ನಡ ಮತ್ತು ಸಂಸ್ಕೃತ ಶಾಸನಗಳ ಸಾರಾಂಶವನ್ನು ಹೆನ್ರಿ ವಥೆನ್ (೧೮೩೯) ಮತ್ತು ಕೊಲ್ಲಾಪುರಪ್ರದೇಶದ ಏಳು ಕನ್ನಡ ಶಾಸನಗಳನ್ನು ಭಾರತೀಯರಾದ ಬಾಲಗಂಗಾಧರ ಶಾಸ್ತ್ರಿಯವರು ಪ್ರಕಟಿಸಿದರು (೧೮೪೫). ಜೇವರಗಿ, ಹರಟಗಿ, ಮಾಲಗತ್ತಿ, ಹಲಸೋಗಿ ಮುಂತಾದ ಪ್ರದೇಶಗಳಲ್ಲಿನ ಬೃಹತ್ ಶಿಲಾಯುಗದ ಅವಶೇಷಗಳನ್ನು ಅಭ್ಯಸಿಸಿದ ಮೆಡೋಸ್ ಟೇಲರನೂ ಈ ಕಾಲದವನೇ.

ವಾಲ್ಟರ್ ಎಲಿಯಟ್ ಮತ್ತು ಅವನ ಸಂಗಡಿಗರ ಕನ್ನಡ ಶಾಸನಾಧ್ಯಯನವು ಈಗಿನ ಉತ್ತರ ಕರ್ನಾಟಕವೆಂದು ಕರೆಯಲ್ಪಡುವ ಭಾಗಕ್ಕೆ ಮಾತ್ರ ಸೀಮಿತವಾದುದಾಗಿದೆ. ಇದೇ ಕಾಲಘಟ್ಟದಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿ ವ್ಯಾಪಕವಾಗಿ ಸಂಚರಿಸಿ ಶಾಸನ ಗಳ ಛಾಯಾಚಿತ್ರಗಳನ್ನು ತೆಗೆಯುವುದರ ಮೂಲಕ ಅವುಗಳ ಅಧ್ಯಯನಕ್ಕೆ ದಾರಿಮಾಡಿ ಕೊಟ್ಟವನೆಂದರೆ ಮೇಜರ್ ಹೆನ್ರಿ ಡಿಕ್ಸನ್. ಮೇಜರ್ ಹೆನ್ರಿ ಡಿಕ್ಸನ್ ೧೮೬೦ರ ಸುಮಾರಿಗೆ ಮದ್ರಾಸ್ ನೇಟಿವ್ ಇನ್‌ಫೆಂಟ್ರಿಯ ೨೨ನೇ ದಳದಲ್ಲಿದ್ದ ಒಬ್ಬ ಅಧಿಕಾರಿ. ಪ್ರವೃತ್ತಿಯಿಂದ ಛಾಯಾಗ್ರಾಹಕ. ಪುರಾತತ್ತ್ವ ಯೋಜನೆಯಲ್ಲಿ ಆಸಕ್ತಿ ಇದ್ದಾತ. ಮುಮ್ಮಡಿ ಕೃಷ್ಣರಾಜ ಒಡೆಯರ್‌ರ ಆಹ್ವಾನದ ಮೇರೆಗೆ ಹರಿಹರ, ಚಿತ್ರದುರ್ಗ, ಬಳ್ಳಿಗಾವೆ, ದಾವಣಗೆರೆ, ಸೊರಬ, ಟೇಕಲ್, ಬೇಗೂರು ಮುಂತಾದ ಸ್ಥಳಗಳಲ್ಲಿನ ೧೧೩ ಶಿಲಾಶಾಸನಗಳು ಹಾಗೂ ೧೯ ತಾಮ್ರಪಟಗಳನ್ನು ಛಾಯಾಗ್ರಹಿಸಿದ್ದಾನೆ.* ಈತ ತೆಗೆದ ಶಾಸನಗಳ ಛಾಯಾಚಿತ್ರ ಗಳು ಕರ್ನಾಟಕದ ಶಾಸನವ್ಯಾಸಂಗದಲ್ಲಿ ಪ್ರಮುಖ ಮೈಲಿಗಲ್ಲಾಗಿವೆ. ಏಕೆಂದರೆ ಇವೇ ಬಿ.ಎಲ್. ರೈಸರಲ್ಲಿ ಶಾಸನಗಳ ಬಗೆಗೆ ಆಸಕ್ತಿ ಮೂಡಲು ಮೂಲಕಾರಣ.

ಈ ಕುರಿತು ರೈಸರು *"It was 1865 When L. Bowring C.S.I. was Chief Commissioner of Mysore and Coorg, that the*

* ಕನ್ನಡ ಶಾಸನಗಳ ವ್ಯಾಸಂಗಕ್ಕೆ ಹೆನ್ರಿ ಡಿಕ್ಸನ್ ನೀಡಿದ ಕೊಡುಗೆಯನ್ನು ಕುರಿತಾದ ವಿವರಗಳಿಗೆ ನೋಡಿ - ಶ್ರೀನಿವಾಸಮೂರ್ತಿ ಎಸ್.ಎಲ್., *'ಮೇಜರ್ ಡಿಕ್ಸನ್ ಮತ್ತು ಕರ್ನಾಟಕದಲ್ಲಿ ಶಾಸನವ್ಯಾಸಂಗ'*, **ಇತಿಹಾಸದರ್ಶನ**, ಸಂ. ೧೪, ಪು. ೩೧೧-೧೩

services of Major Dixon, an officer skilled in the new art of Photography, were engaged to obtain copies by that process of inscriptions in various places.... The Photographs however, were eventually after other efforts to deal with them, placed in my hands for decipherment of the ancient characters and for translation" ಎಂದಿದ್ದಾರೆ.[1]

ಡಿಕ್ಸನ್ ಕೈಗೊಂಡ ಈ ಕಾರ್ಯಗಳಿಂದ ಉಂಟಾದ ಪ್ರಭಾವವೆಂದರೆ ಮೊದಲನೆಯದಾಗಿ ಆಡಳಿತಗಾರರಲ್ಲಿ ಪ್ರಾಚೀನ ಸ್ಮಾರಕಗಳ ಬಗ್ಗೆ ಆಸಕ್ತಿ ಹುಟ್ಟಿದ್ದು. ಉದಾಹರಣೆಗೆ, ತುಮಕೂರು ಜಿಲ್ಲೆಯ ನಾಗಾಲಾಪುರದ ದೇವಾಲಯದ ಛಾಯಾಚಿತ್ರವನ್ನು ಡಿಕ್ಸನ್ ತೆಗೆಯದೆ ಬಿಟ್ಟಾಗ ಆಗಿನ ಅಲ್ಲಿನ ಜಿಲ್ಲಾಧಿಕಾರಿ ಆ ದೇವಾಲಯದ ಛಾಯಾಗ್ರಹಣ ಯೋಗ್ಯವಾದದ್ದೆಂದೂ ಡಿಕ್ಸನ್‌ರಿಂದಲ್ಲದಿದ್ದರೆ ಬುಚರ್‌ನಿಂದಲಾದರೂ ಫೋಟೋ ತೆಗೆಸಬೇಕೆಂದು ನಂದೀದುರ್ಗ ಡಿವಿಷನ್ನಿನ ಸೂಪರಿಂಟೆಂಡೆಂಟರಿಗೆ ಪತ್ರ ಬರೆದಿದ್ದಾರೆ.[2] ದುರವಸ್ಥೆಯಲ್ಲಿದ್ದ ಕೋಲಾರದ ಕೋಲಾರಮ್ಮನ ದೇವಾಲಯವನ್ನು ದುರಸ್ತಿ ಮಾಡಲೆಂದು ಅಲ್ಲಿನ ಜಿಲ್ಲಾಧಿಕಾರಿ ಬಿ. ಕೃಷ್ಣ ಅಯ್ಯಂಗಾರ್ ಅವರು ೪೦೦ ರೂ.ಗಳ ಧನಸಹಾಯ ಕೋರಿದ್ದಾರೆ[3] .... ಇತ್ಯಾದಿ.

ಡಿಕ್ಸನ್‌ನಿಂದ ಪ್ರೇರಿತರಾದ ಬುಚರ್, ಲಯ್ನ್ ಮುಂತಾದವರು ಕರ್ನಾಟಕದ ಇತರ ಭಾಗಗಳಲ್ಲಿ ಛಾಯಾಗ್ರಹಣಕ್ಕೆ ತೊಡಗಿದ್ದು ಎರಡನೆಯ ಅಂಶ. ಆದರೆ ಇವರುಗಳ ಆಸಕ್ತಿ ಕೇವಲ ಛಾಯಾಗ್ರಹಣಕ್ಕೆ ಮಾತ್ರ ಸೀಮಿತವಾಗಿದ್ದಂತೆ ತೋರುತ್ತದೆ. ಇವರಾರೂ ಶಾಸನವ್ಯಾಸಂಗದ ಕಡೆಗೆ ಗಮನಹರಿಸಿದಂತೆ ತೋರುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಸುಮಾರು ೧೮ನೇ ಶತಮಾನದ ಆದಿಭಾಗದಲ್ಲಿ ಪುರಾತತ್ತ್ವ ಸಂಶೋಧನೆಯ ವಿಷಯದಲ್ಲಿ ಮೂಡಿಕೊಂಡ ಆಸಕ್ತಿ ನಿಧಾನವಾಗಿ ಹೆಚ್ಚುತ್ತ ಬಂದು ೧೯ನೇ ಶತಮಾನದ ಪೂರ್ವಾರ್ಧದ ಕಡೆಯ ವೇಳೆಗೆ ಒಂದು ಹಂತವನ್ನು ತಲುಪಿತೆನ್ನಬಹುದು. ಐರೋಪ್ಯ ವಿದ್ವಾಂಸರ ವೈಯಕ್ತಿಕ ಆಸಕ್ತಿಯ ಫಲವಾಗಿ ಆರಂಭವಾದ ಈ ಬಗೆಯ ವ್ಯಾಸಂಗ ದೇಶೀಯ ವಿದ್ವಾಂಸರ ಸಹಕಾರದಿಂದ ಹೆಚ್ಚು ಪುಷ್ಟವಾಯಿತು. ಶಾಸನಗಳು, ಪ್ರಾಚೀನ ಸ್ಮಾರಕಗಳು, ನಾಣ್ಯಗಳು, ಹಸ್ತಪ್ರತಿಗಳೇ ಮೊದಲಾದ ಚಾರಿತ್ರಿಕ ವಸ್ತುಗಳ ಸಂರಕ್ಷಣೆಯ ಬಗೆಗೆ ಜನಸಾಮಾನ್ಯರಲ್ಲಿ ಕಾಳಜಿ ಮೂಡಲು ಆರಂಭವಾದದ್ದು ಈ ಯುಗದ ಪ್ರಮುಖ ಲಕ್ಷಣಗಳಲ್ಲೊಂದು. ಈ ಕಾಲಘಟ್ಟದಲ್ಲಿ ಆದ ಸಂಶೋಧನೆಗಳು ಹೆಚ್ಚು ವ್ಯಾಪಕವೂ ಮಹತ್ವಪೂರ್ಣವಾದವೂ ಎನ್ನುವಂತಿಲ್ಲವಾದರೂ ಮುಂದೆ ರೈಸ್, ಫ್ಲೀಟ್ ಮುಂತಾದವರ ಕಾಲದಲ್ಲಿ ಆದ ಮಹತ್ವದ ಶೋಧನೆಗಳಿಗೆ ಇವೇ ಅಡಿಪಾಯ ಎಂಬುವುದನ್ನು ಮರೆಯುವಂತಿಲ್ಲ.

★ ✵ ★

1 **Mysore and Coorg From Inscriptions**, P. IX
2 ಅದೇ., ನಂ. ೪೨೪/೨೧೨
3 ಅದೇ., ನಂ. ೮೭೧/೩/೯

5. ಶಾಸನ ಪಿತಾಮಹ

ವಿದ್ಯಾಭ್ಯಾಸ, ಗ್ರಂಥಸಂಪಾದನೆ, ಗೆಜೆಟಿಯರ್‌ಗಳ ರಚನೆ ಮುಂತಾದ ಅನೇಕ ಕ್ಷೇತ್ರಗಳಿಗೆ ಅಪಾರವಾದ ಸೇವೆಯನ್ನು ರೈಸ್ ಸಲ್ಲಿಸಿದ್ದಾರಾದರೂ ಅವರು ವಿದ್ವತ್ ಪ್ರಪಂಚದಲ್ಲಿ ಹೆಚ್ಚು ಪರಿಚಿತರಾಗಿರುವುದು ಪುರಾತತ್ತ್ವಶಾಸ್ತ್ರಜ್ಞರಾಗಿ, ಅದರಲ್ಲೂ ವಿಶೇಷವಾಗಿ ಶಾಸನತಜ್ಞರಾಗಿ. ಅವರು ಮೊದಲು ಸಂಪಾದಿಸಿ ಪ್ರಕಟಿಸಿದ 'Mysore Inscriptions' ಹಾಗೂ ಅನಂತರದ ಹನ್ನೆರಡು ಸಂಪುಟಗಳ 'ಎಪಿಗ್ರಾಫಿಯ ಕರ್ನಾಟಿಕ' ದಲ್ಲಿಯ ಮಾಹಿತಿಗಳೇ ಇಂದಿಗೂ ಮೈಸೂರು ಸಂಸ್ಥಾನದ ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಇತಿಹಾಸರಚನೆಯ ಮೂಲ ಆಕರಗಳಾಗಿವೆ.

ಆರಂಭದ ದಿನಗಳು :

ರೈಸರು ಶಾಸನಾಧ್ಯಯನವನ್ನು ಆರಂಭಿಸಿದ ಕಾಲದಲ್ಲಿ ಪ್ರಾಚ್ಯಲಿಪಿಶೋಧನೆಯ ಕ್ಷೇತ್ರವೇ ಇನ್ನೂ ಶೈಶವದ ಸ್ಥಿತಿಯಲ್ಲಿತ್ತು. ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ನಿರೂಪಿತವಾಗಿರುವಂತೆ ದೇಶದಲ್ಲಿ ಅಲ್ಲಲ್ಲಿ ಕೆಲವೇ ಕೆಲವು ಆಸಕ್ತ ವಿದ್ವಾಂಸರು ಶಾಸನಗಳನ್ನು ಅಭ್ಯಸಿಸುವತ್ತ ತಮ್ಮ ಗಮನವನ್ನು ಹರಿಸಿದ್ದರೇ ವಿನಃ ಅದೊಂದು ಪರಿಪೂರ್ಣವಾಗಿ ಬೆಳೆದುನಿಂತಿದ್ದ ಅಧ್ಯಯನ ವಿಧಾನವಾಗಿರಲಿಲ್ಲ. ಹಾಗಾಗಿಯೇ Indian Antiquery ಯಂತಹ ಗಣ್ಯ ಸಂಶೋಧನ ಪತ್ರಿಕೆಗಳಲ್ಲಿಯೂ ಶಾಸನಗಳ 'ಕೊಳೆ ತೆಗೆಯುವುದು ಹೇಗೆ?'[1] 'ಅದರ ಪ್ರತಿಗಳನ್ನು ಸಿದ್ಧಗೊಳಿಸುವುದು ಹೇಗೆ?'[2] ಇತ್ಯಾದಿಯಾದ ವಿಷಯಗಳನ್ನು ಕುರಿತು ವಿಚಾರಣಾ ಪತ್ರಗಳು, ವಿವರಗಳನ್ನು ನೀಡುವ ಲೇಖನಗಳು ಪ್ರಕಟವಾಗುವುದು ಆಗ ಸಾಮಾನ್ಯ ಸಂಗತಿಯಾಗಿತ್ತು. ಛಾಯಾಗ್ರಹಣ ತಂತ್ರವನ್ನು ಬಳಸಿ ಶಾಸನಗಳನ್ನು ಅಭ್ಯಸಿಸುವ ವಿಧಾನವಂತೂ ಕಲ್ಪನೆಗೂ ಎಟುಕುವ ಸ್ಥಿತಿಯಲ್ಲಿರಲಿಲ್ಲ. ಪ್ರತಿಯೊಬ್ಬರೂ ತಮಗೆ ತಿಳಿದಂತೆ ಶಾಸನಗಳನ್ನು ಹುಡುಕುವ, ಶುದ್ಧಗೊಳಿಸುವ ಹಾಗೂ ಪ್ರತಿಮಾಡುವ ವಿಧಾನಗಳನ್ನು ಕಂಡುಕೊಂಡು ಸಾಧ್ಯವಾದಾಗ ಅದನ್ನು ಇತರ ವಿದ್ವಾಂಸರೊಂದಿಗೆ ಹಂಚಿಕೊಳ್ಳುತ್ತಿದ್ದರು.

ಇಂತಹುದೊಂದು ವಿಲಕ್ಷಣ ಸನ್ನಿವೇಶದಲ್ಲಿ ಮೇಜರ್ ಡಿಕ್ಸನ್ ತೆಗೆದ ಶಾಸನಗಳ ಛಾಯಾಚಿತ್ರಗಳನ್ನು ಅಭ್ಯಸಿಸಿ ಅವುಗಳನ್ನು ಪ್ರಕಟಿಸುವ ಹೊಣೆಗಾರಿಕೆ ರೈಸರದಾಯಿತು. ಆರಂಭದ ಆ ದಿನಗಳಲ್ಲಿ ಶಾಸನಗಳನ್ನು ಓದಲು ತಾವು ಪಟ್ಟ ಶ್ರಮವನ್ನು ರೈಸ್ 'Mysore Inscriptions'ನ ಮುನ್ನುಡಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ :

---

1 a) Fleet, J.F., 'Clearing of Inscriptions' Vol. I. P–64.
b) DSK (Bombay), 'Clearing of Inscriptions' Vol. I. P–64.

2 Burgess Jas, 'On Copying Inscriptions' – Vol. II. P–183-187.

> *"..... though familiar with the language of the country, the subject of Inscriptions was one I had paid any attention to. I also found no one who could read ancient characters, and had besides little time to give to the matter. However, gradually setting to work, after many repeated attempts, I had at length the satisfaction of deciphering the whole of the obsolete characters; and continued practice not only gave me facility in reading inscriptions but familiarized me with their general style and method of arrangement, so that on meeting with any, during tours of inspection in the country, I was enabled to pick out the essential historical facts they contained".*[1]

ಮೇಲಿನ ಈ ಹೇಳಿಕೆ ಸಾರ್ವತ್ರಿಕವಾಗಿದ್ದು ಯಾವುದೇ ಒಂದು ನಿರ್ದಿಷ್ಟ ಶಾಸನಕ್ಕೆ ಸಂಬಂಧಿಸಿದ್ದಲ್ಲ. ಆದರೆ ನಿರ್ದಿಷ್ಟ ಉದಾಹರಣೆಯಾಗಿ ಶ್ರವಣಬೆಳಗೊಳದ ಇಂದ್ರಗಿರಿ ಯಲ್ಲಿನ ಶಿಲಾಶಾಸನ ಒಂದನ್ನು ಓದಲು ರೈಸ್ ಪ್ರಯತ್ನಿಸಿ ಸಫಲರಾಗಿದ್ದ ವಿವರಗಳನ್ನು 1873ರ ಇಂಡಿಯನ್ ಆಂಟಿಕ್ವೆರಿಯ ಎರಡನೆಯ ಸಂಪುಟದಲ್ಲಿಯೇ ನಾವು ಕಾಣಬಹುದು:

> *"ಜೈನರ ಕ್ಷೇತ್ರವಾದ ಶ್ರವಣಬೆಳಗೊಳ ಎಂಬ ಹಳ್ಳಿಯಲ್ಲಿ, ಗೊಮ್ಮಟೇಶ್ವರನ ಎತ್ತರವಾದ ಶಿಲ್ಪವಿರುವ ಚಂದ್ರಗಿರಿ ಎಂಬ ದೊಡ್ಡ ಬೆಟ್ಟದ ಎದುರಿಗಿರುವ ಇಂದ್ರಗಿರಿ ಎಂಬ ಹೆಸರಿನ ಚಿಕ್ಕ ಬೆಟ್ಟದ ಬಂಡೆಗಳ ಮೇಲೆ ಅನೇಕ ಶಾಸನಗಳನ್ನು ಕಲ್ಲಿನ ಮೇಲೆ ಕೊರೆಯಲಾಗಿದೆ ...... ಈ ಶಾಸನಗಳು ಬಹುಪಾಲು ಮೂರು ಅಥವಾ ನಾಲ್ಕು ಸಾಲಿನ ಬರಹಗಳಾಗಿ[illegible] ಇವುಗಳನ್ನು ಬದ[illegible]ತ್ತೆ, ಎಲ್ಲೆಲ್ಲೋ ಕೊರೆಯಲಾಗಿದೆ. ಅಲ್ಲಿಯ [illegible]ದ ವಿದ್ವಾಂಸರು ಈ [illegible] ಲಿಪಿಯನ್ನು ಓದಲೂ ಆರರು, ಅವುಗಳ ಅರ್ಥವನ್ನೂ ವಿವರಿಸಲಾರರು. ಅನೇಕ ಬಾರಿ ಪ್ರಯತ್ನಿಸಿದನಂತರ ಈ ಅಕ್ಷರಗಳನ್ನು ಓದುವ ವಿಧಾನ ಒಂದು ನನಗೆ ಹೊಳೆಯಿತು. ಅಲ್ಲಿಯ ಅಕ್ಷರಗಳಲ್ಲಿ ಕೆಲವು ಈಗಿನ ಕನ್ನಡ ಅಕ್ಷರಗಳನ್ನು ಹೋಲುತ್ತವೆ. ಅವುಗಳನ್ನು ಮೂಲವಾಗಿಟ್ಟುಕೊಂಡು ಪ್ರಯತ್ನಿಸಿದಾಗ ಶಾಸನ ಗಳನ್ನು ಹಳೆಯ ಕನ್ನಡದಲ್ಲಿ ಬರೆದಿರುವುದು ಪತ್ತೆಯಾಯಿತು......"*[2]

ಈ ಹೇಳಿಕೆಯೊಂದಿಗೆ ಅವರು "ಸುರಚಾಪಂಬೊಲೆ ವಿದ್ಯುಲ್ಲತೆಗಳ ತೆಲವ್ನೋಲ್...." ಎಂದು ಆರಂಭವಾಗುವ ಅತ್ಯಂತ ಪ್ರಸಿದ್ಧವಾದ ಶಾಸನದ ಕಣ್ಣಚ್ಚನ್ನು (Eye Copy) ಕೊಟ್ಟಿದ್ದಾರೆ. ಬಹುಶಃ ಇದು ರೈಸರ ಸ್ವಹಸ್ತದ ಬರವಣಿಗೆಯಾಗಿದೆ. ಅಷ್ಟೇ ಅಲ್ಲದೆ 1884ರಲ್ಲಿ ತಾವು ಸಂಪಾದಿಸಿದ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ಕ್ಕೆ ಬರೆದ ಪ್ರಸ್ತಾವನೆಯಲ್ಲಿ ರೈಸರು ಕನ್ನಡ ಲಿಪಿಯ ಉಗಮ ಮತ್ತು ವಿಕಾಸವನ್ನು ಬಿಂಬಿಸುವ ಕೋಷ್ಟಕ ಒಂದನ್ನು ಸಿದ್ಧಪಡಿಸಿ ಪ್ರಕಟಿಸಿದ್ದಾರೆ.

---

1 My. Ins. P – V.

2 IA. II (1873) P. 266 ನಲಿಯ ಬಾಗದ ಅನುವಾದ.

ಈ ಎಲ್ಲ ನಿದರ್ಶನಗಳಿಂದ ಸ್ಪಷ್ಟವಾಗುವ ಅಂಶವೆಂದರೆ ರೈಸ್ ಶಾಸನ ಪಾಠಗಳನ್ನು ಓದುವ ಕಲೆಯನ್ನು ತಾವಾಗಿಯೇ ಸ್ವತಂತ್ರವಾಗಿ ರೂಢಿಸಿಕೊಂಡರೇ ವಿನಃ ಇತರರಿಂದ ಕಲಿಯಲಿಲ್ಲ ಎನ್ನುವುದು.

ಆದರೆ ಜನಸಾಮಾನ್ಯರನೇಕರು 'ರೈಸ್, ಫ್ಲೀಟ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ತಮ್ಮ ಕೈಕೆಳಗಿನ ದೇಶೀಯ ವಿದ್ವಾಂಸರುಗಳಿಂದ ಶಾಸನಗಳನ್ನು ಓದಿಸಿ, ಅದರ ಅರ್ಥ ಇತ್ಯಾದಿಗಳನ್ನು ಅವರಿಂದಲೇ ತಿಳಿದುಕೊಂಡು ತಮ್ಮ ಹೆಸರಿನಲ್ಲಿ ಪ್ರಕಟಿಸಿಗೊಳ್ಳುತ್ತಿದ್ದರು' ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ.[1]

ಆದರೆ ವಸ್ತುಸ್ಥಿತಿಯೆಂದರೆ ಶಿಲಾಶಾಸನ, ತಾಮ್ರಶಾಸನ ಮುಂತಾದ ಪ್ರಾಚೀನ ಬರಹಗಳನ್ನು ಓದಿ ಅರ್ಥೈಸಬಲ್ಲ ವಿದ್ವಾಂಸರು ಆಗ ಮೈಸೂರು ಸಂಸ್ಥಾನದಲ್ಲಿ ಬಹುಮಟ್ಟಿಗೆ ಇರಲೇ ಇಲ್ಲವೆಂದು ಹೇಳಬಹುದು. ಏಕೆಂದರೆ ಡಿಕ್ಸನ್ ತೆಗೆದ ಛಾಯಾಚಿತ್ರಗಳನ್ನು ಓದಲೆಂದು ರೈಸರಿಗೆ ಕೊಡುವ ಮೊದಲು ಅನೇಕ ದೇಶೀಯ ಅಧಿಕಾರಿಗಳು ಸ್ಥಳೀಯ ವಿದ್ವಾಂಸರ ನೆರವಿನಿಂದ ಅವನ್ನು ಓದಿ ಅರ್ಥೈಸಲು ಯತ್ನಿಸಿ ವಿಫಲರಾಗಿದ್ದ ವಿಷಯವನ್ನು ರೈಸರು ದಾಖಲಿಸಿದ್ದಾರೆ.[2] ಈ ಶಾಸನಗಳು ರೈಸರ ಕೈಗೆ ಹೋದಮೇಲೆ ಅವುಗಳನ್ನು ಸಂಕಲಿಸಲು ನೆರವಾಗಲೆಂದು ಸೋಮಯಾಜಿ ಶಿವರಾಮಶಾಸ್ತ್ರಿ ಎಂಬ ವಿದ್ವಾಂಸರನ್ನು ರೈಸರ ಸಹಾಯಕರನ್ನಾಗಿ ನೇಮಿಸಲಾಯಿತು. ಅವರಿಗೂ ಶಾಸನಗಳನ್ನು ಓದಲು ಬರುತ್ತಿರಲಿಲ್ಲ ಎಂಬುದನ್ನು ರೈಸರೇ ಹೀಗೆ ಹೇಳಿಕೊಂಡಿದ್ದಾರೆ :

> *"The Pandit placed at my disposal, Somayaji Shivarama Sastri (since, I regret to say, deceased) was a clever man and excellent Sanskrit and Kannada scholar, but he did not know old characters and took feeble interest in transcribing inscriptions"*[1]

ಮೇಲಿನ ಮಾತುಗಳಿಂದ ದೇಶೀಯ ವಿದ್ವಾಂಸರು ರೈಸರಿಗೆ ಪ್ರಾಚೀನ ಲಿಪಿಯನ್ನು ಓದುವುದನ್ನು ಕಲಿಸುವ ಬದಲಿಗೆ ರೈಸರೇ ಇವರುಗಳಿಗೆ ಶಾಸನಗಳನ್ನು ಓದಲು ತರಬೇತಿ ನೀಡಿದಂತೆ ತೋರುತ್ತದೆ. ಮುಂದೆ ಪುರಾತತ್ತ್ವ ಇಲಾಖೆಯು ಆರಂಭವಾದ ಮೇಲೆಯೂ ಪರಿಸ್ಥಿತಿ ಹೆಚ್ಚೇನೂ ಬದಲಾಗಲಿಲ್ಲ. ಇಲಾಖೆಯಲ್ಲಿ ಮುನ್ಷಿಯಾಗಿ ಮೊತ್ತ ಮೊದಲಿಗೆ

---

1 ವಿಚಿತ್ರವೆಂದರೆ, ಜನಸಾಮಾನ್ಯರು ಮಾತ್ರವಲ್ಲದೆ ಶಾಸನಕ್ಷೇತ್ರದಲ್ಲಿ ಪರಿಣತರೆನಿಸಿಕೊಂಡ ವಿದ್ವಾಂಸರಲ್ಲಿಯೂ ಕೆಲವರು ಇಂತಹುದೇ ಅಭಿಪ್ರಾಯವನ್ನು ಹೊಂದಿರುವುದು. ಭಾರತ ಸರ್ಕಾರದ ಕೇಂದ್ರೀಯ ಶಾಸನ ಇಲಾಖೆಯ ಮುಖ್ಯ ಶಾಸನತಜ್ಞರೊಬ್ಬರನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಸಂದರ್ಶಿಸುತ್ತಿದ್ದಾಗ ಅವರು ಖಂಡತುಂಡವಾಗಿ ಪಾಶ್ಚಾತ್ಯ ವಿದ್ವಾಂಸರಿಗ್ಯಾರಿಗೂ ಲಿಪಿಶಾಸ್ತ್ರದ ಪರಿಚಯವೇ ಇರಲಿಲ್ಲವೆಂದೂ, ಅವರೆಲ್ಲಾ ದೇಶೀಯ ಪಂಡಿತರ ಪರಿಣತಿಯನ್ನು ಬಳಸಿಕೊಂಡು ತಾವು ಅದರ ಸಾರಾಂಶವನ್ನಷ್ಟನ್ನೇ ಇಂಗ್ಲಿಷಿನಲ್ಲಿ ಪ್ರಕಟಿಸಿದರೆಂದೂ ಘಂಟಾಘೋಷವಾಗಿ ಸಾರಿದರು! ಆದರೆ ಅವರ ಮಾತಿಗೆ ಸಮರ್ಥನೆಯಾದ ಯಾವ ಆಧಾರಗಳೂ ಅವರಲ್ಲಿ ಇರಲಿಲ್ಲ.

2 Mys. Ins. P–V.

3 ಅಲ್ಲೇ.,

ನಿಯೋಜಿತರಾದ ಬಿ. ಶ್ರೀನಿವಾಸ ಅಯ್ಯಂಗಾರರೂ ಮೊದಮೊದಲಿಗೆ ಶಾಸನಗಳನ್ನು ಓದುವುದರಲ್ಲಿ ನಿರಾಸಕ್ತರಾಗಿದ್ದರೆಂದೂ, ಈಗ ಕ್ರಮೇಣ ಆ ಕಾರ್ಯದಲ್ಲಿ ಆಸಕ್ತಿಯನ್ನು ತೋರಿಸಲು ಪ್ರಾರಂಭಿಸಿದ್ದಾರೆಂದೂ ರೈಸ್ ಇಲಾಖೆಯ ಮೊತ್ತಮೊದಲ ವಾರ್ಷಿಕ ವರದಿಯಲ್ಲಿ ದಾಖಲಿಸಿದ್ದಾರೆ.[1]

ಹಾಗಾಗಿ ಚಿದಾನಂದಮೂರ್ತಿಯವರ "..... ದೇಶೀಯ ವಿದ್ವಾಂಸರ ಸಹಾಯ ಏನಿದ್ದರೂ ಭಾಷೆಯ ವಿಷಯದಲ್ಲಿ; ಲಿಪಿಯನ್ನು ಓದುವುದರಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನವೇ ಮುಖ್ಯವಾದುದು" ಎಂಬ ಅಭಿಪ್ರಾಯ[2] ಹಾಗೂ ".....ರೈಸ್ ಅವರು ಮಾಡಿದ ಕೆಲಸ ಹಿಂದೂ ಪಂಡಿತರ ಸಹಾಯದಿಂದ ಆದದ್ದೇ. ಆದರೆ ನಮ್ಮ ಪಂಡಿತರು ಕೊಟ್ಟ ಸಹಾಯ ಕೇವಲ ಶಬ್ದಾರ್ಥಗಳ ಸಂಬಂದದ್ದು. ರೈಸ್ ಅವರು ಪಾಂಡಿತ್ಯದಲ್ಲಿ ಕಡಿಮೆಯಾದವರಲ್ಲ...." ಎಂಬ ಡಿ.ವಿ. ಗುಂಡಪ್ಪನವರ ಹೇಳಿಕೆಗಳು[3] ಪರಿಗ್ರಾಹ್ಯವಾಗಿವೆ. ಮುಂದೆ ಆರ್. ನರಸಿಂಹಾಚಾರ್ಯರಂತಹ ಸಹಾಯಕರು ದೊರೆತ ಮೇಲೆಯೂ ರೈಸರು ಸ್ವತಃ ಶಾಸನಾನ್ವೇಷಣೆಗೆ ಹೋದದ್ದಿದೆ. ಉದಾಹರಣೆಗೆ 1892ರಲ್ಲಿ ಸಿದ್ಧಾಪುರದ ಬಳಿಯಲ್ಲಿ ಕಂಡುಹಿಡಿದ ಅಶೋಕನ ಬ್ರಾಹ್ಮೀ ಲಿಪಿಯ ಶಾಸನದ ಬಗೆಗೆ ಅವರಾಡಿರುವ ಮಾತುಗಳನ್ನು ಗಮನಿಸಬಹುದು :

> *"With the assistance of the translations published by Dr. Buhler and Mr. Senat ...... in the Indian Antiquary and General Sir. A. Cunningham's volume of the Corpus Inscriptionism Indicarum, I have deciphered and translated them to the best of my ability. I cannot hope that my version is entirely free from errors, or that I have succeeded in clearing up difficulties that are still subjects of discussion among the most eminent scholars, but I have endeavoured to give as accurate and close as a rendering as possible of these most ancient and highly interesting records......"*[4]

ಮೇಲ್ಕಂಡ ಎಲ್ಲ ಅಂಶಗಳು ರೈಸರು ಸ್ವತಃ ಶಾಸನಗಳನ್ನು ಓದಬಲ್ಲವರಾಗಿದ್ದರೆಂಬುದನ್ನು ನಿರ್ವಿವಾದವಾಗಿ ಸಿದ್ಧಪಡಿಸುತ್ತವೆ.

---

1 A.R.A.D., 1885-86. P - 2.

2 ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** 1966. ಪು. 23.

3 ಗುಂಡಪ್ಪ ಡಿ.ವಿ., **ಜ್ಞಾಪಕಚಿತ್ರಶಾಲೆ-3**, ಡಿವಿಜಿ ಸಮಗ್ರ ಕೃತಿ ಶ್ರೇಣಿ, ಸಂ. 6. ಪು. 333.

4 Rice, B.L., **Edicts of Asoka in Mysore**. 1892. P. 3.

ಮೊದಲ ಪ್ರಕಟಣೆಗಳು :

1879ರಲ್ಲಿ ಪ್ರಕಟವಾದ Mysore Inscriptions ರೈಸರ ಮೊದಲ ಶಾಸನ ಸಂಬಂಧೀ ಕೃತಿ. ಆದರೆ ಅದಕ್ಕೂ ಮುಂಚೆ ಅವರು 'ಇಂಡಿಯನ್ ಆಂಟಿಕ್ವೈರಿ' ಪತ್ರಿಕೆಯಲ್ಲಿ ಏಳು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವೆಂದರೆ :

1. The Mercara Plates (Vol I, P. 360–65, 1872) :


ಮೂರು ತಾಮ್ರದ ಹಾಳೆಗಳ ಈ ಶಾಸನವನ್ನು ರೈಸರ ಗಮನಕ್ಕೆ ತಂದವನು ಗ್ರೇಟರ್ ಎಂಬ ವ್ಯಕ್ತಿ. ರೆವರೆಂಡ್ ಜಿ. ರಿಕ್ಟರನ ಸಹಾಯದಿಂದ ಅದು ರೈಸರಿಗೆ ದೊರೆಯಿತು. ಪೂರ್ವದ ಹಳೆಗನ್ನಡ ಲಿಪಿಯಲ್ಲಿರುವ ಈ ಶಾಸನವು ಕ್ರಿ.ಶ. 466ರಲ್ಲಿ ರಚಿತವಾದದ್ದಾಗಿದ್ದು ಚೇರ ಅಥವಾ ಕೊಂಗುವಂಶಕ್ಕೆ ಸೇರಿದ್ದಾಗಿದೆ ಎಂದು ಅವರು ಊಹಿಸಿದ್ದಾರೆ.

2. Nagamangala Copper Plate Inscription (Vol. II, P. 155–161,1873) :

ಕ್ರಿ.ಶ. 777ರಲ್ಲಿ ರಚಿತವಾದದ್ದು ಎಂದು ಊಹಿಸಲಾದ, ಆರು ಹಾಳೆಗಳನ್ನುಳ್ಳ ಈ ತಾಮ್ರಶಾಸನವನ್ನು ವಿಜಯಸ್ಕಂದಾವಾರದ ಪೃಥ್ವಿಕೊಂಙ್ಗಣಿ ಮಹಾರಾಜನು ತನ್ನ ಐವತ್ತನೆಯ ವರ್ಷದಲ್ಲಿ ನೀಡಿದ್ದು ಎನ್ನಲಾಗಿದೆ. ಇದೂ ಕೂಡಾ ಕೊಂಗು ಅಥವಾ ಚೇರ ವಂಶಕ್ಕೆ ಸಂಬಂಧಿಸಿದ ಶಾಸನ ಎಂದು ರೈಸ್ ಊಹಿಸಿದರು.

3. Jaina Inscriptions at Sravanabelgola (Vol. II, P. 265–68, 322-24, 1873) :

ಶ್ರವಣಬೆಳಗೊಳದ ಚಿಕ್ಕಬೆಟ್ಟ (ಇಂದ್ರಗಿರಿ)ಯ ಮೇಲಿರುವ ಅನೇಕ ಬಂಡೆಗಲ್ಲಿನ ಶಾಸನಗಳಲ್ಲಿ ಎರಡನ್ನು ರೈಸ್ ಈ ಲೇಖನದಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಮೊದಲನೆಯದು ಈಗಾಗಲೇ ಪ್ರಸ್ತಾಪಿತವಾಗಿರುವ "ಸುರಚಾಪಂಬೊಲೆ......" ಎಂದು ಆರಂಭವಾಗುವ



ನಂದಿಸೇನ ಮುನಿಯನ್ನು ಕುರಿತಾದ ಶಾಸನ ಪದ್ಯ. ನಾಲ್ಕು ಸಾಲಿನ ಈ ಪದ್ಯವನ್ನು ಓದಲು ತಾವು ಪಟ್ಟ ಶ್ರಮವನ್ನು ರೈಸ್ ಈ ಮೊದಲೇ ನಿರೂಪಿತವಾಗಿರುವಂತೆ ವಿವರಿಸಿದ್ದಾರೆ. ಅನಂತರ ಶಾಸನಪಾಠದ ಲಿಪ್ಯಂತರವನ್ನು ಕೊಟ್ಟು ಅದರ ಅಡಿಯಲ್ಲಿ ಇಂಗ್ಲಿಷ್ ಅನುವಾದವನ್ನು ನೀಡಲಾಗಿದೆ. ರೈಸರು ಈ ಶಾಸನದ ಪಾಠವನ್ನು ಅದೆಷ್ಟು ಸರಿಯಾಗಿ ಓದಿರುವರೆಂದು ತಿಳಿಯಲು ಅವರ ಪಾಠವನ್ನು ಇತ್ತೀಚೆಗೆ ಪ್ರಕಟವಾಗಿರುವ ಪಾಠದೊಂದಿಗೆ ಹೋಲಿಸಿ ನೋಡಬಹುದು :

ರೈಸ್ ಪಾಠ :

> ಸುರ ಚಾಪಂಬೊಲೆ ವಿದ್ಯುಲ್ ಲತೆಗಳ ತೆಱವೊಲ್ ಮಂಜುವೋಲ್ ತೋಂಱುಬೇಗಂ
> ಪಿರಿಧು ಶ್ರೀ ರೂಪ ಲೀಲಾಧನ ವಿಭವ ಮಹಾ ರಸಿಶಿಗಳ್ ನಿಲ್ಲವಾರ್ಗ್ಗೆ
> ಪರಮಾರ್ತ್ಥ ಮೆಚ್ಚೆ ನಾನ್ ಈ ಧರಣಿಯುಳ್ ಇರವಾನೆಂದು ಸನ್ಯಸನ ಗ
> ಯ್ದುರು ಸತ್ವನಂದಿ ಸೇನ ಪ್ರವರ ಮುನಿವರ ದೇವಲೋಕಕ್ಕೆ ಸಂದಾರ್.[1]

ಇತ್ತೀಚಿನ ಪಾಠ :

1. ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜು ವೋಲ್ತೋಱಿಬೇಗಂ
2. ಪಿರಿಗುಂ ಶ್ರೀರೂಪಲೀಲಾಧನ ವಿಭವಮಹಾರಾಶಿಗಳ್ನಿಲ್ಲವಾರ್ಗಂ
3. ಪರಮಾರ್ತ್ಥಂ ಮೆಚ್ಚೆ ನಾಗೀಧರಣಿಯುಳಿರವಾನೆನ್ದು ಸನ್ಯಸನಂ ಗೆ
4. ಯ್ದುರುಸತ್ವನ್ನನ್ದಿ ಸೇನಪ್ರವರಮುನಿವರನ್ದೇವಲೋಕಕ್ಕೆ ಸನ್ದಾನ್.[2]

ಈ ಎರಡೂ ಪಾಠಗಳನ್ನು ಹೋಲಿಸಿದಾಗ - ಎರಡನೇ ಸಾಲಿನ ಮೊದಲಿನಲ್ಲಿರುವ ಪದವನ್ನು ರೈಸ್ 'ಪಿರಿದು' ಎಂದು ಓದಿದ್ದಾರೆ. ಅದನ್ನು ಈಚಿನ ವಿದ್ವಾಂಸರು 'ಪಿರಿಗುಂ' ಎಂದು ಪರಿಗಣಿಸಿದ್ದಾರೆ. ಅಂತೆಯೇ ಅದೇ ಸಾಲಿನ 'ರಶಿ'ಯನ್ನು 'ರಾಶಿ' ಎಂದೂ, 'ಆರ್ಗ್ಗೆ'ಯನ್ನು 'ಆರ್ಗ್ಗಂ' ಎಂದೂ ಈಗ ಬದಲಿಸಲಾಗಿದೆ. ಮೂರನೇ ಸಾಲಿನಲ್ಲಿರುವ 'ಪರಮಾರ್ತ್ಥ'ವನ್ನು 'ಪರಮಾರ್ತ್ಥಂ' ಎಂದು ಮತ್ತು ನಾಲ್ಕನೇ ಸಾಲಿನ 'ಸನ್ದರ್' ಎಂದಿರುವುದನ್ನು 'ಸನ್ದನ್' ಎಂದೂ ತಿದ್ದಲಾಗಿದೆ. ಪದ ವಿಭಜನೆಯಲ್ಲಾದ ಗೊಂದಲದಿಂದಾಗಿ ಮುನಿಯ ಹೆಸರನ್ನು ರೈಸ್ 'ಸೇನಪ್ರವರ' ಎಂದು ತಪ್ಪಾಗಿ ಭಾವಿಸಿದ್ದಾರೆ. ಈಗ ಅದು 'ನಂದಿಸೇನ' ಎಂಬ ಜೈನಯತಿಗೆ ಸಂಬಂಧಿಸಿದ್ದು ಎನ್ನುವುದು ಖಚಿತವಾಗಿದೆ. ನಗಣ್ಯವಾದ ಈ ಕೆಲವು ಬದಲಾವಣೆಗಳನ್ನು ಬಿಟ್ಟರೆ ತಮ್ಮ ಶಾಸನಾಧ್ಯಯನದ ಪ್ರಾರಂಭದ

---

1 I.A. P. 266ರಲ್ಲಿಯ ರೋಮನ್ ಲಿಪಿಯ ಪಾಠದ ಕನ್ನಡ ರೂಪ.

2 ಎಪಿಗ್ರಾಫಿಯ ಕರ್ನಾಟಿಕದ ಪರಿಷ್ಕೃತ ಆವೃತ್ತಿ. ಮೈ.ವಿವಿ. ಶಾಸನ ಸಂಪುಟ 98(88). ಪು. 70.

ದಿನಗಳಲ್ಲಿಯೇ ರೈಸರು ಎಷ್ಟು ನಿಶಿತವಾಗಿ ಶಾಸನಪಾಠವನ್ನು ಗುರುತಿಸಬಲ್ಲವರಾಗಿದ್ದರು ಎಂಬುದು ಇದರಿಂದ ಅರಿವಾಗುತ್ತದೆ.

4. **Bhadra Bahu & Sravana Belogola (Vol. III, P. 153–58, 1879):**

ವಿದ್ವದ್ವಲಯದಲ್ಲಿ ಅಪಾರವಾದ ಕುತೂಹಲ, ಜಿಜ್ಞಾಸೆಗಳನ್ನು ಹುಟ್ಟಿಸಿದ ಈ ಶಾಸನವು ಶ್ರವಣ ಬೆಳಗೊಳದ ಅತ್ಯಂತ ಪ್ರಾಚೀನತಮ ಶಾಸನವಾಗಿದ್ದು ಪಾರ್ಶ್ವನಾಥ ಬಸದಿಯ ಬಲಬದಿಯ ಬಂಡೆಯ ಮೇಲಿದೆ. ಪ್ರಭಾಚಂದ್ರ ಎಂಬ ಜೈನಯತಿಯ ಸಮಾಧಿಯನ್ನು ವಿವರಿಸುವ ಈ ಶಾಸನದಲ್ಲಿ ಮಹಾವೀರನ ನಿರ್ವಾಣಾನಂತರ ಗೌತಮಗಣಧರ ಮುಂತಾದ ಅನೇಕ ಜೈನ ಗುರುಗಳಿದ್ದ ಕಾಲದಲ್ಲಿ ಅವರಲ್ಲಿ ಒಬ್ಬನಾದ ಭದ್ರಬಾಹುವೆಂಬ ಯತಿಯು ಉಜ್ಜಯಿನಿಯಲ್ಲಿದ್ದಾಗ ಈ ಪ್ರಾಂತ್ಯವನ್ನು ಹನ್ನೆರಡು ವರ್ಷಗಳ ಕಾಲ ಬರಗಾಲವು ಕಾಡುತ್ತದೆ ಎಂದು ಭವಿಷ್ಯ ನುಡಿದನು. ಆದ್ದರಿಂದ ಆ ಜೈನಯತಿಗಳ ಗುಂಪು ಉತ್ತರಾಪಥದಿಂದ ದಕ್ಷಿಣಾಪಥಕ್ಕೆ ವಲಸೆಬಂದರೆಂದೂ ಆಗ ಅವರಲ್ಲಿ ಒಬ್ಬನಾದ ಪ್ರಭಾಚಂದ್ರ ಎಂಬ ಆಚಾರ್ಯನು ತನ್ನ ಅವಸಾನಕಾಲ ಸಮೀಪಿಸುತ್ತಿರುವುದನ್ನು ತಿಳಿದು ಸಂಘವನ್ನು ಬಿಟ್ಟು ಒಬ್ಬನೇ ಒಬ್ಬ ಶಿಷ್ಯನ ಜೊತೆಗೆ ಕಟವಪ್ರವೆಂದು ಹೆಸರಾಗಿದ್ದ ಶ್ರವಣ ಬೆಳಗೊಳಕ್ಕೆ ಬಂದು ಇಲ್ಲಿಯ ಬೆಟ್ಟದ ಮೇಲೆ ಪ್ರಾಣತ್ಯಾಗ ಮಾಡಿದನು ಎಂಬ ವಿವರಗಳಿವೆ. ಈ ಶಾಸನದಲ್ಲಿ ಉಕ್ತವಾಗಿರುವ ಭದ್ರಬಾಹು, ಪ್ರಭಾಚಂದ್ರ ಮತ್ತು ಅವನ ಶಿಷ್ಯ ಯಾರು ಎಂಬುದು ಜಿಜ್ಞಾಸೆಯ ಪ್ರಶ್ನೆಯಾಗಿದ್ದು ಈವರೆಗೆ ನಡೆದಿರುವ ಚರ್ಚೆಯ ಸಾರವಿದು :

ರೈಸರು ಶಾಸನದ ಆರನೇ ಸಾಲಿನಲ್ಲಿನ ಒಂದು ವಾಕ್ಯಖಂಡವನ್ನು "ಆಚಾರ್ಯ್ಯಃ ಪ್ರಭಾಚಂದ್ರೇಣಾ ಮಾನನಿತಲಲಾಮ ಭೂತೇ" ಎಂದು ಓದಿಕೊಂಡು ಇಲ್ಲಿ ಆಚಾರ್ಯ ಎಂಬ ಶಬ್ದವು ಭದ್ರಬಾಹುವನ್ನೂ ಪ್ರಭಾಚಂದ್ರ ಎಂಬ ಹೆಸರು ಮೌರ್ಯರ ಚಂದ್ರಗುಪ್ತ ಮೌರ್ಯನು ಸನ್ಯಾಸದ ಸಮಯದಲ್ಲಿ ಇಟ್ಟುಕೊಂಡ ಹೆಸರೆಂದು ತೀರ್ಮಾನಿಸಿದರು.[1] ಫ್ಲೀಟ್‌ರ ಪ್ರಕಾರ ಶಾಸನೋಕ್ತ ಭದ್ರಬಾಹುವು ಕ್ರಿ.ಪೂ. 380ರಲ್ಲಿ ಗತಿಸಿದ ಶ್ರುತ ಕೇವಲಿ ಭದ್ರಬಾಹುವಲ್ಲ. ಬದಲಿಗೆ ಕ್ರಿ.ಪೂ. 30 ಅಥವಾ 31ರಲ್ಲಿದ್ದ ಇಮ್ಮಡಿ ಭದ್ರಬಾಹು ಮತ್ತು ಇಲ್ಲಿ ಉಕ್ತನಾಗಿರುವ ಚಂದ್ರಗುಪ್ತನು ಮೌರ್ಯರವನಾಗಿರದೆ ಇಮ್ಮಡಿ ಭದ್ರಬಾಹುವಿನ ಶಿಷ್ಯನಾದ ಗುಪ್ತಿಗುಪ್ತ.[2] ಆರ್. ನರಸಿಂಹಾಚಾರ್ಯರು ಫ್ಲೀಟ್‌ರ ಪಾಠವನ್ನೂ, ರೈಸರ ಅಭಿಪ್ರಾಯವನ್ನೂ ಒಪ್ಪಿದ್ದಾರೆ![3] ಆರ್. ಶಾಮಾಶಾಸ್ತ್ರಿಗಳ ಪ್ರಕಾರ ಈ ಅರಸು ಗುಪ್ತವಂಶಕ್ಕೆ ಸೇರಿದ ಚಂದ್ರಗುಪ್ತ ವಿಕ್ರಮಾದಿತ್ಯ.[4] ಶಾಸ್ತ್ರಿಗಳ ಅಭಿಪ್ರಾಯವನ್ನು ಹುಲ್ಲೂರು ಶ್ರೀನಿವಾಸ

---

1 E.C. II Intro. P. 6–7.

2 EI. Vol. IV. P. 22.

3 EC II (revised) P. 35–42.

4 MAR. 1929. P. 26

ಜೋಯಿಸರು ಅನುಮೋದಿಸಿದ್ದಾರೆ.[1] ಅಂತಿಮವಾಗಿ ಬಾ.ರಾ. ಗೋಪಾಲ್ ರೈಸರ ಅಭಿಪ್ರಾಯವನ್ನೇ ಎತ್ತಿಹಿಡಿದಿದ್ದಾರೆ.[2*]

5. The Nagamangala Copper Plates (Vol. III, P. 262–265, 1874):

ಈ ಲೇಖನವು ಎರಡನೇ ಸಂಪುಟದಲ್ಲಿ ಪ್ರಕಟವಾದ 'ಇದೇ ಶೀರ್ಷಿಕೆಯ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಪ್ರೊ॥ ಈಗ್ಲಿಂಗ್ ಎಂಬಾತ 'ಇಂಡಿಯನ್ ಆಂಟಿಕ್ವೆರಿಯ ಮೂರನೇ ಸಂಪುಟದಲ್ಲಿ ಪ್ರಕಟಿಸಿದ ಲೇಖನಕ್ಕೆ ನೀಡಿದ ಉತ್ತರವಾಗಿದೆ.

6. Two Konga or Chera grants of AD 454 & 513 (Vol. V, P. 133–140, 1876):

ಈ ತಾಮ್ರಪಟಗಳಿಗೆ 'ಮಲ್ಲೋಹಳ್ಳಿಯ ತಾಮ್ರಪಟಗಳು' ಎಂದೂ ಹೆಸರಿದೆ. ಕಾರಣ ಮಲ್ಲೋಹಳ್ಳಿ ಎಂಬಲ್ಲಿ ದೊರೆತದ್ದು. 'ಇದರ ಪಾಠವನ್ನು ಓದಿ ವಿವರಿಸಲು ಕೋರ್ಟ್ ಒಮ್ಮೆ ರೈಸರಿಗೆ ತಲುಪಿಸಿತು. ಅದರ ವಿವರಗಳೇ ಈ ಲೇಖನದ ಮೂಲವಸ್ತು. ಈ ಎರಡೂ ತಾಮ್ರಪಟಗಳು ಕೊಂಗು ಅಥವಾ ಚೇರವಂಶಕ್ಕೆ ಸೇರಿದ್ದೆಂದು ರೈಸ್ ಭಾವಿಸಿದರು. 'ಇದರಲ್ಲಿ ಒಂದು ಮೊದಲು ಪ್ರಸ್ತಾಪಿಸಿದ ಮಡಿಕೇರಿಯ ತಾಮ್ರಪಟಗಳಿಗಿಂತ 125 ವರ್ಷಗಳಷ್ಟು ಹಳೆಯದು ಮತ್ತು 'ಇನ್ನೊಂದು 47 ವರ್ಷ ಈಚಿನದೆಂದು ಅವರು ಆಂತರಿಕ ಆಧಾರಗಳಿಂದ ತೀರ್ಮಾನಿಸಿದ್ದರು.

7. Chera or Ganga grants of AD 350 and 481 (Vol. VII, P. 168–176, 1878):

ಮೇಲೆ ಪ್ರಸ್ತಾಪಿಸಲಾದ ಎಲ್ಲ ತಾಮ್ರಪಟಗಳೂ ಕೊಂಗು ಅಥವಾ ಚೇರವಂಶಕ್ಕೆ ಸೇರಿದ್ದು ಎಂದು ರೈಸರು ಭಾವಿಸಲು ಕಾರಣ ಅದರಲ್ಲಿ ಪ್ರಧಾನವಾಗಿ ಕಾಣುತ್ತಿದ್ದ 'ಕೊಂಙ್ಗಣಿ ವರ್ಮ' ಎಂಬ ಹೆಸರು. ಆದರೆ ಈ ಲೇಖನದ ವೇಳೆಗೆ ಅವರಿಗೆ ಈ ಶಾಸನಗಳು ಕೊಂಗು ಅಥವಾ ಚೇರ ರಾಜವಂಶಕ್ಕೆ ಬದಲಾಗಿ ಗಂಗವಂಶಕ್ಕೆ ಸೇರಿರುವುದು ಎಂಬ ಅಂಶ ಸ್ಪಷ್ಟವಾಯಿತು. ಈ ಬಗ್ಗೆ ಅವರೇ "What have been denominated the Chera kings, but whom it seems more correct to call the Ganga kings – a designation given to them in all the inscriptions" ಎಂದಿದ್ದಾರೆ.[3]

1 ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು. ಪು. 287-290.

2 ಎ.ಕ. II (ಪರಿ. ಮುದ್ರ) ಪು. XLIV.

* ಈ ವಿಷಯವನ್ನು ಕುರಿತಾದ ಚರ್ಚೆಯ ವಿವರಗಳಿಗೆ ಎ.ಕ. ಸಂಪುಟ 2ರ ಪರಿಷ್ಕೃತ ಮುದ್ರಣ (ಮೈ.ವಿ.ವಿ. 1973)ದ ಪ್ರಸ್ತಾವನೆಯನ್ನು ನೋಡಿ.

3 I.A. Vol. VII. P. 168.

ಇಲ್ಲಿಯ ಎರಡು ತಾಮ್ರಪಟಗಳಲ್ಲಿ ಮೊದಲನೆಯದು ಹರಿಹರದಲ್ಲಿ ಇನಾಂ ಕಛೇರಿಯ ಮುಂದೆ ಹಾಜರುಪಡಿಸಿದ್ದಾಗಿದೆ. ಈ ಶಾಸನವು ತಲವನಪುರದ ಆಳ್ವಿಕೆಯಲ್ಲಿದ್ದ ಕರೆನಾಡು ಸೀಮೆಗೆ ಸೇರಿದ ದೇವನೂರು ಎಂಬ ಗ್ರಾಮದಲ್ಲಿನ ಜಮೀನನ್ನು ವಿಷ್ಣುಗೋಪನ ಮಹಾರಾಜನ ಮಗನಾದ ರಾಜಮಲ್ಲನು ಎರಕುಲದ ಮಾಧಿಗೌಡನ ಮಗನಾದ ರಾಮದೇವ ಎನ್ನುವನಿಗೆ ದಾನವನ್ನು ಕೊಟ್ಟಿದ್ದನ್ನು ಹೇಳುತ್ತದೆ.

ಎರಡನೆಯ ತಾಮ್ರಶಾಸನವು ಐದು ಹಾಳೆಗಳುಳ್ಳದ್ದಾಗಿದ್ದು ಬೆಂಗಳೂರಿನ ಅಸಿಸ್ಟೆಂಟ್ ಕಮೀಷನರರ ಕಛೇರಿಯ ದಾಖಲೆಗಳ ಮಧ್ಯೆ ದೊರೆತದ್ದಾಗಿದೆ. ಈ ಶಾಸನವು 'ಕೊಂಙ್ಗಣಿಮಹಾರಾಜ', 'ಕೊಂಙ್ಗಣಿ ವೃದ್ಧ' ಎಂದು ಪ್ರಸಿದ್ಧನಾದ ಅವಿನೀತ ಅಥವಾ ದುರ್ವಿನೀತನದು ಎಂದು ರೈಸ್ ನಿರ್ಧರಿಸಿದ್ದಾರೆ. ಆತನು ತನ್ನ ಆಳ್ವಿಕೆಯ ಮೂರನೆಯ ವರ್ಷದಲ್ಲಿ (ಕ್ರಿ.ಶ. 481) ಮಹಾಸೇನಪುರದ ಸೋಮಯಾಜಿ ವಾಸಶರ್ಮನ್ ಎಂಬುವನಿಗೆ ದಾನಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ. ಈ ಶಾಸನವು ಬಹಳ ಹಾಳಾಗಿರುವುದರಿಂದ ದಾನದ ವಿವರಗಳು ಕಾಣುವುದಿಲ್ಲವೆಂದು ರೈಸ್ ಅಭಿಪ್ರಾಯಪಟ್ಟಿದ್ದಾರೆ.

ಮೇಲೆ ಉಲ್ಲೇಖಿಸಲಾಗಿರುವ ಏಳು ಲೇಖನಗಳಲ್ಲಿ ಮೂರು ಮತ್ತು ನಾಲ್ಕನೆಯ ಕ್ರಮಸಂಖ್ಯೆಯ ಶ್ರವಣಬೆಳಗೊಳದ ಶಾಸನಗಳಿಗೆ ಸಂಬಂಧಿಸಿದ ಲೇಖನಗಳನ್ನು ಬಿಟ್ಟರೆ ಉಳಿದೆಲ್ಲವೂ ತಾಮ್ರಶಾಸನಗಳು, ಕೊಂಗು ಅಥವಾ ಚೇರ ಎಂದು ಭಾವಿಸಿ ನಂತರ ಗಂಗವಂಶದ್ದೆಂದು ನಿರ್ಧರಿತವಾದವು. ಈ ಎಲ್ಲ ಶಾಸನಗಳೂ ಕೃತಕ ಅಥವಾ ಕೂಟ ಶಾಸನಗಳು ಎಂದು ವಿದ್ವಾಂಸರುಗಳಿಂದ ದೂಷಿಸಲ್ಪಟ್ಟವು. ಅದರ ವಿವರಗಳನ್ನು ಕೂಟ ಶಾಸನಗಳಿಗೆ ಸಂಬಂಧಿಸಿದ ಭಾಗದಲ್ಲಿ ನೋಡಬಹುದು.

Mysore Inscriptions :

ಮೇಜರ್ ಡಿಕ್ಸನ್ ತೆಗೆದ 150 ಶಾಸನಗಳ ಛಾಯಾಚಿತ್ರಗಳ ಶಾಸನಗಳೊಂದಿಗೆ ತಾವು ಗಮನಿಸಿದ 25 ಶಾಸನಗಳನ್ನೂ ಸೇರಿಸಿ ರೈಸರು ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ. 1879ರಲ್ಲಿ ಇದು ಮೈಸೂರು ಸರ್ಕಾರದ ವತಿಯಿಂದ ಮೊದಲ ಬಾರಿಗೆ ಮುದ್ರಿತ ವಾಗಿದೆ.[1] ಕೃತಿಯ ಮುನ್ನುಡಿಯಲ್ಲಿ ತಾವು ಈ ಗ್ರಂಥವನ್ನು ಸಂಪಾದಿಸಬೇಕಾಗಿ ಬಂದ ವಿವರಗಳನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಈ ಮೊದಲೇ ಉಲ್ಲೇಖಿಸಿದಂತೆ ಬಹಳ ಕಷ್ಟದಿಂದ ಶಾಸನಗಳನ್ನು ಓದುವುದನ್ನು ರೂಢಿಸಿಕೊಂಡಿದ್ದನ್ನು ಹೇಳಿಕೊಂಡಿದ್ದಾರೆ. ಈ

---

1 ದೆಹಲಿಯ ನವರಂಗ್ ಪ್ರಕಾಶನದವರು ಇದನ್ನು 1983ರಲ್ಲಿ ಮರುಮುದ್ರಿಸಿದ್ದಾರೆ.

ಸಂಪುಟದಲ್ಲಿ ತಮ್ಮ ಸಂಗ್ರಹದ ಶಾಸನಗಳ ಅನುವಾದವನ್ನು ಸೇರಿಸಿರುವುದಕ್ಕೆ ಅವರು ಕೊಟ್ಟಿರುವ ಸಮರ್ಥನೆ ಇದು :

".....ಶಾಸನಗಳನ್ನು ಓದುವುದರಲ್ಲಿ ದೊರೆತ ಸಫಲತೆ ನನ್ನಲ್ಲಿ ಆ ವಿಷಯದ ಬಗೆಗಿನ ಆಸಕ್ತಿಯನ್ನು ಹೆಚ್ಚು ಮಾಡಿತು. ಆದರೆ ಗೆಜೆಟಿಯರ್ ಸಂಪಾದನೆ ಮೊದಲಾದ ಇತರ ಅಧಿಕೃತ ಕಾರ್ಯಗಳ ಒತ್ತಡದಿಂದಾಗಿ ನಾನು ಈ ಕೆಲಸವನ್ನು ಎಷ್ಟೋ ಬಾರಿ ತಿಂಗಳುಗಟ್ಟಲೆ ಬದಿಗೆ ಸರಿಸಬೇಕಾಯಿತು. ಆದರೂ ಸಂಸ್ಥಾನದ ಬೇರೆಬೇರೆ ಪ್ರಾಂತ್ಯಗಳಲ್ಲಿ ಶಾಸನಗಳ ಲಭ್ಯತೆಯನ್ನು ಕುರಿತಂತೆ ನಾನು ಟಿಪ್ಪಣಿಗಳನ್ನು ಮಾಡಿಕೊಳ್ಳುವುದನ್ನು ಬಿಡದೆ ಮುಂದುವರೆಸಿದಾಗ ಈವರೆಗೆ ದಾಖಲಾಗಿರುವ ಶಾಸನಗಳ ವಿವರಗಳು ಬಹಳ ಸೀಮಿತ ಮತ್ತು ಅಪೂರ್ಣ ಎಂಬ ಅಂಶ ಸ್ಪಷ್ಟವಾಯಿತು. ಆದ್ದರಿಂದ ನಾನೊಂದು ಕೋಷ್ಟಕ ವನ್ನು ತಯಾರಿಸಿ ಸರ್ಕಾರದ ಆದೇಶದೊಂದಿಗೆ ಅದರ ಪ್ರತಿಗಳನ್ನು ತಮ್ಮ ತಮ್ಮ ತಾಲ್ಲೂಕುಗಳಿರುವ ಶಾಸನಗಳ ವಿವರಗಳನ್ನು ತುಂಬಿ ಹಿಂದಿರುಗಿಸ ಬೇಕೆಂಬ ಸೂಚನೆಯೊಂದಿಗೆ ಪ್ರತಿಯೊಬ್ಬ ಅಮಲ್ದಾರನಿಗೂ ರವಾನಿಸಿದೆ.

ಮಾಹಿತಿ ಸಹಿತವಾಗಿ ಹಿಂದಿರುಗಿ ಬಂದ ಈ ನಮೂನೆಗಳಿಂದ ಸಂಸ್ಥಾನದ ವಿವಿಧ ತಾಲ್ಲೂಕುಗಳಲ್ಲಿ ಕನಿಷ್ಟಪಕ್ಷ 3,722 ಶಾಸನಗಳಿರ ಬಹುದೆಂಬ ಚಿತ್ರಣ ದೊರಕಿತು. (ಕೊಡಗಿನ ಶಾಸನಗಳನ್ನು ಇದಕ್ಕೆ ಸೇರಿಸಿಲ್ಲ) ಆದರೆ ಅವುಗಳು ಒಳಗೊಂಡಿರುವ ವಿಷಯವನ್ನು ಕುರಿತಾದ ಮಾಹಿತಿಯು ಬಹಳ ತಪ್ಪುಗಳಿಂದ ಕೂಡಿತ್ತು. ಬಹುತೇಕ ನಮೂನೆಗಳಲ್ಲಿ ಅನೇಕ ಕಾಲಂಗಳು 'ಗೊತ್ತಿಲ್ಲ', 'ಸ್ಪಷ್ಟವಿಲ್ಲ', 'ಅರ್ಥವಾಗುವುದಿಲ್ಲ' ಮುಂತಾದ ಪದಗಳಿಂದ ತುಂಬಿಹೋಗಿವೆ. ಈ ನಮೂನೆಗಳಿಂದ ಆದ ಒಂದು ಉಪಯೋಗವೆಂದರೆ ಸಂಸ್ಥಾನದ ಎಲ್ಲ ಭಾಗಗಳಲ್ಲಿನ ಶಾಸನಗಳ ಅಧ್ಯಯನದ ಕಾರ್ಯಗಳಿಗೆ ಸುಲಭವಾಯಿತು ಮತ್ತು ಹಾಗೆ ಮಾಡಿದಾಗ ನನಗೆ ಒದಗಿಸಲಾಗಿದ್ದ ಪಟ್ಟಿಯಲ್ಲಿ ಇದ್ದವುಗಳಿಗಿಂತಲೂ ಹೆಚ್ಚು ಮಹತ್ತ್ವ ಪೂರ್ಣವಾದ ಶಾಸನಗಳು ಕಾಲದಿಂದ ಕಾಲಕ್ಕೆ ನನ್ನ ಕಣ್ಣಿಗೆ ಬಿದ್ದವು. ಇವುಗಳಲ್ಲಿ ಕೆಲವನ್ನಾದರೂ ಪ್ರಕಟಿಸಬೇಕೆಂದು ನಾನು ನಿರ್ಧರಿಸಿದೆ. ಅದರಂತೆಯೇ ಕೆಲವು ಶಾಸನಗಳು ಮೂಲದ ಪಡಿಯಚ್ಚುಗಳ ಸಹಿತ 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಕೆಲವನ್ನು ಈ ಗ್ರಂಥದ ಮೂರನೇ ಭಾಗದಲ್ಲಿ ಜೋಡಿಸಲಾಗಿದೆ." [1]

1 Mysore Inscriptions. P. VIರ ಭಾಗದ ಅನುವಾದ.

ಪ್ರಸ್ತುತ ಕೃತಿಯ ಆರಂಭದಲ್ಲಿ 51 ಪುಟಗಳ ವಿಸ್ತಾರವಾದ ಪ್ರಸ್ತಾವನೆ ಇದೆ. ಇದರಲ್ಲಿ ಐದು ಉಪಭಾಗಗಳಿವೆ. ಅವುಗಳೆಂದರೆ :

1. ಶಾಸನ ಪರಿಚಯ :

ಈ ವಿಭಾಗದಲ್ಲಿ ವಿವಿಧ ಬಗೆಯ ಶಾಸನಗಳ ಬಾಹ್ಯ ಮತ್ತು ಆಂತರಿಕ ವಿಷಯಗಳನ್ನು ಓದುಗರಿಗೆ ಪರಿಚಯಿಸಲಾಗಿದೆ. 'ಶಾಸನ' ಎಂಬ ಶಬ್ದಕ್ಕೆ 'ಆಜ್ಞೆ', 'ಶಿಕ್ಷಿಸು', 'ನಿಯಂತ್ರಿಸು' ಎಂಬೆಲ್ಲಾ ಅರ್ಥಗಳಿರುವುದು, ಸಾಧಾರಣವಾಗಿ ಕಲ್ಲಿನ ಮೇಲೆ ಅಥವಾ ತಾಮ್ರದ ಹಾಳೆಗಳ ಮೇಲೆ ಇವುಗಳನ್ನು ಕೊರೆಯಲಾಗಿರುವುದು ಮುಂತಾದವುಗಳನ್ನು ವಿವರಿಸಿ ಅವುಗಳ ಸ್ವರೂಪವನ್ನು ಪ್ರತ್ಯೇಕವಾಗಿ ಮುಂದೆ ವಿಸ್ತಾರವಾಗಿ ಪರಿಚಯಿಸಲಾಗಿದೆ.

ಶಿಲಾಶಾಸನಗಳಲ್ಲಿ ಬಹುಪಾಲು ದಾನಶಾಸನಗಳಾಗಿರುತ್ತವೆ ಎಂಬುದನ್ನು ಮೊದಲಿಗೆ ಹೇಳಿದೆ. 'ಇವುಗಳಲ್ಲಿ ಸಾಧಾರಣವಾಗಿ ಮೂರು ಹಂತಗಳಿರುತ್ತವೆ. ಮೊದಲ ಹಂತದಲ್ಲಿ ಶೈವ ಶಾಸನಗಳಾದರೆ 'ನಮಸ್ತುಂಗ ಶಿರಶ್ಚುಂಬಿ......' ಎಂದು ಆರಂಭವಾಗುವ ಶ್ಲೋಕವೂ, ವೈಷ್ಣವ ಶಾಸನಗಳಲ್ಲಿ 'ಜಯತ್ಯಾ ವಿಷ್ಟ್ವತಂ......' ಎಂಬ ಶ್ಲೋಕವೂ, ಜೈನರಲ್ಲಿ 'ಶ್ರೀಮತ್ಪರಮಗಂಭೀರ.....' ಎಂಬ ಶ್ಲೋಕವೂ ಇರುತ್ತದೆ. ಎರಡನೇ ಹಂತದಲ್ಲಿ ರಾಜವಂಶದ ವಿವರಗಳು, ಅವರುಗಳ 'ಪಾದಪದ್ಮೋಪಜೀವಿಗಳಾದ ಸಾಮಂತರ ಪ್ರಸ್ತಾಪ, ಅವರ ವಂಶಾವಳಿ, ಅನಂತರ ದಾನದ ವಿವರಗಳಿರುತ್ತವೆ' ಎಂಬುದನ್ನು ಅವರು ವಿವರಿಸಿದ್ದಾರೆ.[1]

ಕೊನೆಯ ಹಂತದಲ್ಲಿ ಶಾಸನದ ಸ್ಥಾಪನೆಯ ಸೂಚನೆ ಇರುತ್ತದೆ ಎಂಬುದನ್ನು ಪ್ರಸ್ತಾಪಿಸಿ ಕಾಲ ಸೂಚನೆಗಾಗಿ ಅಂಕಿಗಳಿಗೆ ಪರ್ಯಾಯವಾಗಿ ಅನೇಕ ಸಂಕೇತಗಳನ್ನು ಬಳಸುವುದರ ಬಗ್ಗೆ ಗಮನ ಸೆಳೆದಿದ್ದಾರೆ. ಮುಹೂರ್ತದೀಪಿಕೆ, ಕವಿ(ಕಾವ್ಯ)ಕಲ್ಪಲತಾ ಮತ್ತು ಸಂಖ್ಯಾರತ್ನಕೋಶ ಎಂಬ ಮೂರು ಹಸ್ತಪ್ರತಿಗಳಲ್ಲಿ ದೊರಕುವ 1 ರಿಂದ 20 ಮತ್ತು 100 ಹಾಗೂ 1,000ಗಳಿಗೆ ಸಂವಾದಿಯಾಗಿ ಬಳಕೆಯಾಗುವ ಶಬ್ದಗಳ ಸುದೀರ್ಘವಾದ ಪಟ್ಟಿಯನ್ನೇ ಅವರು ನೀಡಿದ್ದಾರೆ.[2] ಉದಾಹರಣೆಗೆ :

1 - ಶಶಿ, ರಾಜ, ಆತ್ಮ ಇಂದ್ರ, ಹಸ್ತಿ, ಅಶ್ವ, ಗಜ, ಇತ್ಯಾದಿ.
2 - ಅಕ್ಷಿ, ಕರ, ಬಾಹು, ಕರ್ಣ, ದೃಷ್ಟಿದ್ವಯ, ಯುಗ್ಮ ಮುಂತಾದವು.
3 - ವಹ್ನಿ, ಲೋಕ, ಗುಣ, ಕಾರ್ತ್ವ, ಪುರ, ಪುಷ್ಕರ, ಭಾಷ್ಯ ಮೊದಲಾದವು.
20 - ವಿಂಶತಿ, ರಾವಣಭುಜ, ಅಂಗುಲಿ ..... ಹೀಗೆ.
100 - ಶತ, ಧಾರ್ತರಾಷ್ಟ್ರ, ಪುರುಷಾಯಸ್, ರಾವಣಾಂಗುಲೀ, ಮೊದಲಾಗಿ.

1 P. XVIII, XIX.

2 P. XXI.

ಕಟಪಯಾದಿ ಸೂತ್ರವನ್ನು ಅಂಕೆಗಳನ್ನು ಸೂಚಿಸಲು ಹೇಗೆ ಬಳಸಲಾಗುತ್ತದೆ ಎಂಬ ವಿವರಗಳೂ ಇಲ್ಲಿವೆ.

ಶಾಸನಗಳ ಕೊನೆಯಲ್ಲಿ 'ಶಾಪಾಶಯ'ಗಳೆಂಬ ಭಾಗಗಳಿದ್ದು ಅವು ಸಾಧಾರಣ ವಾಗಿ 'ಸ್ವದತ್ತಂ ಪಾರದತ್ತಂವಾ.....', 'ದಾನ ಪಾಲನಯೋರ್ಮಧ್ಯೇ....' ಅಥವಾ 'ನವಿಷಂವಿಷಮಿತ್ಯಾಹುಹುಃ....' ಮುಂತಾದ ಶ್ಲೋಕಗಳನ್ನು ಒಳಗೊಂಡಿರುತ್ತವೆ. ಇವು ದೇವ-ಬ್ರಾಹ್ಮಣರಿಗೆ ಕೊಟ್ಟ ದಾನವನ್ನು ಇತರರು ಅಪಹರಿಸದಿರಲೆಂಬ ಎಚ್ಚರಿಕೆಯ ಮಾತುಗಳಾಗಿವೆ ಎಂಬ ವಿವರಣೆಯೊಂದಿಗೆ ಅವರು ದಾನ ಶಾಸನಗಳ ಸ್ವರೂಪದ ಪರಿಚಯವನ್ನು ಮುಗಿಸಿದ್ದಾರೆ. ದಾನಶಾಸನಗಳನಂತರ ವೀರಗಲ್ಲುಗಳು, ಮಾಸ್ತಿಗಲ್ಲುಗಳು ಮತ್ತು ನಿಸದಿಗಲ್ಲುಗಳ ಸ್ವರೂಪ ಹಾಗೂ ಶಿಲ್ಪವೈವಿಧ್ಯಗಳನ್ನು ವಿವರಿಸಲಾಗಿದೆ.

2. ಇತಿಹಾಸ :

ಶಾಸನಗಳಿಂದ ಲಭ್ಯವಾಗುವ ಮೈಸೂರು ಮತ್ತು ಕೊಡಗು ಪ್ರಾಂತ್ಯದ ಇತಿಹಾಸವನ್ನು ಈ ವಿಭಾಗ ದಲ್ಲಿ ಕೊಟ್ಟಿದೆ. ತಾವೇ ಸಂಪಾದಿಸಿದ ಮೈಸೂರು ಸಂಸ್ಥಾನದ ಗೆಜ಼ೆಟಿಯರ್‌ನ ಮೊದಲ ಸಂಪುಟದಲ್ಲಿರುವ ಇತಿಹಾಸದ ಅಧ್ಯಾಯದ ಮೊದಲಲ್ಲಿರುವ ಜೈನರಾಮಾಯಣ, ಮಹಾಭಾರತ ಮುಂತಾದವುಗಳಿಂದ ಸಂಗ್ರಹಿಸಿದ ಐತಿಹ್ಯದ ವಿವರಗಳನ್ನೇ ಇಲ್ಲಿಯೂ ರೈಸ್ ಪುನಃ ಪ್ರಸ್ತಾಪಿಸಿದ್ದಾರೆ. ಅನಂತರ ಕದಂಬ, ಗಂಗ, ಮಹಾವಲಿ, ಪಲ್ಲವ, ಚಾಲುಕ್ಯ, ಕಳಚೂರ್ಯ, ಹೊಯ್ಸಳ, ಮತ್ತು ವಿಜಯನಗರದ ಅರಸರ ಬಗೆಗೆ ಆವರೆಗೆ ಲಭ್ಯವಿರುವ ಸಾಧ್ಯವಿದ್ದಷ್ಟು ಮಾಹಿತಿಯನ್ನು ಕೊಟ್ಟಿದ್ದಾರೆ. ಮಡಿಕೇರಿ, ಮಲ್ಲೋಹಳ್ಳಿ, ನಾಗಮಂಗಲ ಮುಂತಾದ ಸ್ಥಳಗಳಲ್ಲಿ ದೊರೆತ ತಾಮ್ರಪಟಗಳನ್ನು ಇಂಡಿಯನ್ ಆಂಟಿಕ್ವೆರಿಯಲ್ಲಿ ವಿಶ್ಲೇಷಿಸುವಾಗ ಬಂದಿದ್ದ 'ಇವೆಲ್ಲಾ ಕೊಂಗು ಅಥವಾ ಚೇರ ವಂಶಕ್ಕೆ ಸೇರಿದವು' ಎಂಬ ನಿರ್ಣಯವನ್ನು ಕೈಬಿಟ್ಟು ಇವೆಲ್ಲಾ ಗಂಗವಂಶದವು ಎಂದು ತಿದ್ದಿಕೊಂಡಿರುವುದು ಇಲ್ಲಿಯ ವಿಶೇಷ. ಈ ಬಗ್ಗೆ ಬಹಳ ಸ್ಪಷ್ಟವಾಗಿ,

> *"The true history of this (Ganga) importantant line of Kings – appearently purely Mysorean in their origin – may be said to have been entirely brought to light and authenticated by the inscriptions No. 151-157 included in this volume. They were previously supposed to be identical with the Chera kings mentioned in the earliest traditions of the South, but not one of their various grants so far known contains any reference to Cheras"*
> ಎಂಬ ಮಾತುಗಳನ್ನಾಡಿದ್ದಾರೆ. [1]

1 ಅಲ್ಲೇ. ಪು. XI.

56 ಪುಟಗಳ ಈ ಭಾಗವನ್ನು ಬರೆಯಲು ರೈಸರು ಕೇವಲ ಶಾಸನಾಧಾರಿತ ಮಾಹಿತಿಯಲ್ಲದೆ ಕಾಲ್ಡ್‌ವೆಲ್‌ನ A Comparative Grammar of the Dravidian or South Indian Family of Languages, ಜಾರ್ಜ್ ಸ್ಮಿತ್‌ನ History of Babylonia from the ancient monuments, ಡಬ್ಲ್ಯೂ. ಡಬ್ಲ್ಯೂ. ಹಂಟರನ Orissa, ಫರ್ಗೂಸನ್ನನ 'History of Indian Architecture' ಮತ್ತು 'Tree and Serpent Worship', ಕ್ಯಾಪ್ಟನ್ ಕರ್‌ನ 'Seven Pagodas', ವಿಲ್ಸನ್ನನ ವಿಷ್ಣು ಪುರಾಣ, ಮೆಕೆಂಜಿಯ ಸಂಗ್ರಹ, ಮುಂತಾದ ಕೃತಿಗಳಿಂದ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ಅನೇಕ ವಿದ್ವತ್ಪತ್ರಿಕೆಗಳಿಂದ ಲಭ್ಯವಾಗುವ ಮಾಹಿತಿಗಳನ್ನು ಒಟ್ಟುಗೂಡಿಸಿ ಸಮಗ್ರವಾದ ಚಿತ್ರಣವನ್ನು ನೀಡಲು ಯತ್ನಿಸಿದ್ದಾರೆ.

3. ಭೌಗೋಳಿಕ ವಿವರಗಳು :

ಮೈಸೂರು ಸಂಸ್ಥಾನವನ್ನಾಳಿದ ವಿವಿಧ ರಾಜ ಮನೆತನಗಳ ಆಳ್ವಿಕೆಯ ಪ್ರದೇಶ ಗಳನ್ನು ಸೂಚಿಸುವಂತಹ ನಕ್ಷೆಯೊಂದನ್ನು ಪ್ರಸ್ತುತ ಕೃತಿಯಲ್ಲಿ ಜೋಡಿಸಲಾಗಿದೆಯೆಂದೂ, ಇದಕ್ಕೆ ಸಂವಾದಿಯಾದ ಇನ್ನೂ ಕೆಲವು ಭೂಪಟಗಳು ತಮ್ಮ ಗೆಜೆಟಿಯರ್‌ನ ಮೊದಲ ಸಂಪುಟದಲ್ಲಿ ಇರುವುದಾಗಿಯೂ ರೈಸ್ ಇಲ್ಲಿ ದಾಖಲಿಸಿದ್ದಾರೆ.

4. ಭಾಷೆ :

ಕನ್ನಡ ಭಾಷೆ ಮತ್ತು ಲಿಪಿಯ ಸ್ಥಿತ್ಯಂತರಗಳನ್ನು ಶಾಶ್ವತವಾಗಿ ದಾಖಲಿಸುವ ಆಕರಗಳಾಗಿ ಶಾಸನಗಳನ್ನು ಬಳಸಿಕೊಳ್ಳಬಹುದೆಂದು ಈ ಭಾಗದಲ್ಲಿ ರೈಸ್ ವಿವರಿಸಿದ್ದಾರೆ. ತಾವು ನಾಗವರ್ಮನ ಕರ್ಣಾಟಕ ಭಾಷಾಭೂಷಣ ಮತ್ತು ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನದ ಪರಿಷ್ಕರಣದ ಕಾರ್ಯವನ್ನು ಕೈಗೆತ್ತಿ ಕೊಂಡುದುದರಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುವುದು ಸ್ವಲ್ಪಮಟ್ಟಿಗೆ ಸುಲಭವಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ.[1] ಪ್ರಸ್ತುತ ಕೃತಿಯ ಪುಟಗಳಲ್ಲಿ ಅಡಿಟಿಪ್ಪಣಿಗಳಾಗಿ ಕೊಟ್ಟಿರುವ ಶಾಸನದ ಮೂಲ ಭಾಗಗಳ ಲಿಪ್ಯಂತರಗಳನ್ನು ಗಮನಿಸಿ ಕನ್ನಡ ಭಾಷೆಯ ಅವಸ್ಥಾಂತರಗಳನ್ನು ಗುರುತಿಸಬಹುದೆಂದು ಹೇಳಿ ಪ್ರತಿ ಶತಮಾನದ ಭಾಷೆಯೂ ವೈಶಿಷ್ಟ್ಯಗಳನ್ನು ವ್ಯಕ್ತಪಡಿಸುವ ಶಾಸನಗಳ ಲಿಪ್ಯಂತರವಿರುವ ಪುಟಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ನಿದರ್ಶನಕ್ಕೆ

for the 9th Century, See Pg. 209–210.
for the 10th Century, P–187.
for the 11th Century, PP : 149–150, 145–146, 143, 131, 107.
for the 12th Century, PP : 81, 83, 85, ...
for the 13th Century, PP : 30, 33, 308, 323, 45, 219. ಇತ್ಯಾದಿ.[2]

---

1 P – LXXV

2 ಅಲ್ಲೇ.

5. ಧರ್ಮ :

ಶ್ರವಣಬೆಳಗೊಳದ ಇಂದ್ರಗಿರಿಯ ಮೇಲಿನ ಭದ್ರಬಾಹುವಿನ ಶಾಸನದ ಕಾರಣದಿಂದ ಸಹಜವಾಗಿಯೇ ಈ ಅಧ್ಯಾಯಕ್ಕೆ ಹೆಚ್ಚಿನ ಮಹತ್ತ್ವ ದೊರೆತಿದೆ. ಇತರ ಜೈನ ದಾಖಲೆಗಳಲ್ಲಿ ಲಭ್ಯವಿರುವ ಭದ್ರಬಾಹುವಿನ ಆಗಮನದ ವಿವರಗಳನ್ನೂ ಪರಿಗಣಿಸಿ ಈ ಶಾಸನದ ಪ್ರಾಮುಖ್ಯವನ್ನು ವಿವರಿಸಲು ರೈಸ್ ಇಲ್ಲಿ ಯತ್ನಿಸಿದ್ದಾರೆ. ಅಂತೆಯೇ ಶ್ರವಣಬೆಳಗೊಳದ ಗೊಮ್ಮಟ ಶಿಲ್ಪದ ಕಂಡರಣೆಯ ಕಾಲ ಯಾವುದು? ಬಾಹುಬಲಿಗೆ ಗೊಮ್ಮಟನೆಂಬ ಹೆಸರುಬರಲು ಕಾರಣವೇನು ಎಂಬ ಪ್ರಶ್ನೆಗಳನ್ನೂ ಅವರು ಎತ್ತಿದ್ದಾರೆ. ಅಂತೆಯೇ ಪರ್ಶಿಯನ್ ಕ್ಯೂನಿಫಾರಂ ಶಾಸನಗಳಲ್ಲಿ, Gomates ಎಂಬ ವ್ಯಕ್ತಿಯ ಹೆಸರಿರುವುದನ್ನೂ, ಆತನೂ ಬಾಹುಬಲಿಯಂತೆಯೇ ತನ್ನ ಸೋದರನೊಂದಿಗೆ ಹೋರಾಡಿದನೆಂದೂ ವರ್ಕ್ಸ್‌ನ 'History of Persia from ancient Monuments' ಎಂಬ ಕೃತಿಯನ್ನು ಆಧರಿಸಿ ಉಲ್ಲೇಖಿಸಿದ್ದಾರೆ![1] ಜೈನ ಕಲಿಯುಗ ವರ್ಷ 600 ಅಥವಾ ಕ್ರಿ.ಪೂ. 50ರಲ್ಲಿ ಗೊಮ್ಮಟನ ಶಿಲ್ಪವನ್ನು ಕೆತ್ತಲಾಗಿದೆ ಎಂಬುದು ಅವರ ಅಭಿಮತ. ಮೈಸೂರು ಸಂಸ್ಥಾನದಲ್ಲಿ ಬೌದ್ಧಧರ್ಮವು ಇದ್ದುದರ ಕುರುಹು; ಬಳ್ಳಿಗಾವೆ, ಬೇಲೂರು ಮುಂತಾದ ಕಡೆ ಕಂಡುಬರುವ ಧಾರ್ಮಿಕ ಸಾಮರಸ್ಯದ ಅಂಶಗಳು ಮುಂತಾದವುಗಳ ಬಗ್ಗೆಯೂ ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೃತಿಯ ಸ್ವರೂಪ :

ಪ್ರಸ್ತುತ ಕೃತಿಯ ಮೂಲಪಠ್ಯದ ಸ್ವರೂಪವನ್ನು ಹೀಗೆ ಪಟ್ಟಿಮಾಡಬಹುದು :

- ಇಲ್ಲಿಯ ಮೂಲಪಠ್ಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಎರಡು ಭಾಗಗಳೂ ಮೇಜರ್ ಡಿಕ್ಸನ್ನನು ತೆಗೆದ ಛಾಯಾಚಿತ್ರಗಳಿಗೆ ಸಂಬಂಧಪಟ್ಟಿದ್ದು, ಮೊದಲ ಭಾಗವು ಶಿಲಾಶಾಸನಗಳ ಮತ್ತು ಎರಡನೇ ಭಾಗವು ತಾಮ್ರಶಾಸನಗಳ ವಿವರಗಳನ್ನು ಒಳಗೊಂಡಿದೆ. ಮೂರನೆಯ ಭಾಗಕ್ಕೆ 'Various Inscriptions from original sources' ಎಂಬ ಶೀರ್ಷಿಕೆ ಇದೆ.
- ಮೊದಲ ಭಾಗದಲ್ಲಿ ಒಟ್ಟು 129 ಶಿಲಾಶಾಸನಗಳಿಗೆ ಸಂಬಂಧಿಸಿದ ವಿವರಗಳಿವೆ.
- ಶಿಲಾಶಾಸನವು ದೊರೆತಿರುವ ಸ್ಥಳದಿಂದ ಆಯಾ ಶಾಸನಗಳನ್ನು ನಿರ್ದೇಶಿಸಿದೆ. ಉದಾಹರಣೆಗೆ Silasasana at Chitaldroog, Silasasana at Davanagere ಇತ್ಯಾದಿ.

---

1 P – LXXXVIII.

- ಒಂದೇ ಊರಿನಲ್ಲಿ ಒಂದಕ್ಕಿಂತ ಹೆಚ್ಚಿನ ಶಾಸನ ದೊರೆತಿದ್ದರೂ ಅವುಗಳ ನಿರ್ದೇಶನದ ರೀತಿ ಒಂದೇ ಆಗಿದೆ. ನಿದರ್ಶನಕ್ಕೆ ಮೊದಲ ಭಾಗದಲ್ಲಿನ ಮೊದಲ ಆರು ಶಾಸನಗಳೂ ಚಿತ್ರದುರ್ಗಕ್ಕೆ ಸಂಬಂಧಿಸಿದವೇ ಆದರೂ ಎಲ್ಲವು ಗಳಿಗೂ 'Sila sasana at Chital-droog' ಎಂಬ ಶೀರ್ಷಿಕೆಯೇ ಇದೆ.
- ಡಿಕ್ಸನ್ ತೆಗೆದ ಶಾಸನಗಳಿಗೆ 1 ರಿಂದ 150ರವರೆಗೆ ಕ್ರಮಸಂಖ್ಯೆಯನ್ನು ಕೊಟ್ಟಿದೆ. ಆದರೆ ತಾಮ್ರಶಾಸನಗಳನ್ನು ಸೂಚಿಸುವಾಗ ಅವುಗಳಿಗೆ ಪ್ರತ್ಯೇಕ ವಾದ ಕ್ರಮಸಂಖ್ಯೆಯನ್ನು ಹಿಂದಿನ ಕ್ರಮಸಂಖ್ಯೆಯ ಪಕ್ಕದಲ್ಲಿಯೇ ಕಂಸ ಗಳಲ್ಲಿನ ರೋಮನ್ ಅಂಕಿಗಳ ಮೂಲಕ ಸೂಚಿಸಿದೆ.
- ಶೀರ್ಷಿಕೆಯನಂತರ ಆಯಾ ಶಾಸನದ ಸಂಭಾವ್ಯ ಕಾಲವನ್ನು ಇಂಗ್ಲಿಷ್ ಪದ್ಧತಿಯಲ್ಲಿ ಕೊಟ್ಟಿದೆ.

  ಉದಾಹರಣೆಗೆ : Sila s'asana at Harihara, date A.D. 1424.

  ಶಾಸನದಲ್ಲಿ ಕಾಲ ನಮೂದಾಗಿಲ್ಲದಿದ್ದರೆ date ಎಂದು ಮುದ್ರಿಸಿ ಮುಂದಿನ ಭಾಗವನ್ನು ಖಾಲಿಬಿಟ್ಟಿದೆ,[1] ಅಥವಾ 'date unknown' ಎಂದು ಸೂಚಿಸಿದೆ[2] ಹಾಗೂ ಕಾಲದ ವಿಷಯದಲ್ಲಿ ಅನುಮಾನವಿದ್ದಲ್ಲಿ 'date' ಎಂಬ ಪದದನಂತರ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ ಅನಂತರ ಸಂಭಾವ್ಯ ಕಾಲವನ್ನು ಸೂಚಿಸಿದೆ.[3]
- ಅನಂತರ ಚಿಕ್ಕ ಅಕ್ಷರಗಳಲ್ಲಿ ಅಡಿಗಳಲ್ಲಿ ಶಾಸನದ ಉದ್ದಗಲ ಮತ್ತು ಯಾವ ಲಿಪಿ ಎಂಬುದನ್ನು ದಾಖಲಿಸಿದೆ. ಅನಂತರ ಚಿಕ್ಕದೊಂದು ಅಡ್ಡಗೆರೆಯನ್ನೆಳೆದು ಅದರ ಕೆಳಗೆ ಶಾಸನದ ಮೇಲ್ಭಾಗದಲ್ಲಿರುವ ಶಿಲ್ಪಗಳ ವಿವರಗಳನ್ನು ಅವುಗಳು ಶಾಸನದಲ್ಲಿರುವ ಕ್ರಮದಲ್ಲಿಯೇ ಸೂಚಿಸಲು ಯತ್ನಿಸಲಾಗಿದೆ. ನಿದರ್ಶನಕ್ಕೆ :

Size ft. 4.11' × ft. 2.6' – Hale Kannada Characters.

Sun			Moon
Table or Book rest	Crooked S word	A Tirtankara enthroned with chamaras on each side	Cow suckling a calf[4]

1 ಉದಾ: P – 8, ಶಾಸನದ ಕ್ರ.ಸಂ. 4 P – 8.

2 ಶಾಸನದ ಕ್ರ.ಸಂ. 51 P – 113 ಮೊದಲಾದವುಗಳಲ್ಲಿ.

3 ಶಾಸನದ ಕ್ರ.ಸಂ. 50 P – 113 ಮೊದಲಾದವುಗಳಲ್ಲಿ.

4 ಶಾಸನದ ಕ್ರ.ಸಂ. 12 P – 20 ಮೊದಲಾದವುಗಳಲ್ಲಿ.

- ಶಾಸನವು ಅಸ್ಪಷ್ಟವಾಗಿದ್ದರೆ, ಒಡೆದುಹೋಗಿದ್ದರೆ ಅಥವಾ ಅಳಿಸಿಹೋಗಿದ್ದರೆ ಅದರ ವಿವರಗಳನ್ನು ಶಿಲ್ಪದ ವಿವರಗಳ ಮೇಲ್ಭಾಗದಲ್ಲಿ ಅಥವಾ ಕೆಳಭಾಗ ದಲ್ಲಿ ಕಂಸಗಳಲ್ಲಿ (Much of this Sasana is illegible and obscure) (Indistinct and partly broken), (very indistinct) ಮುಂತಾಗಿ ಸೂಚಿಸಲಾಗಿದೆ.

- ಅನಂತರ ಶಾಸನ ಪಾಠದ ಭಾಷಾಂತರವನ್ನು ಮೂಲಪಾಠದ ಅನುಕ್ರಮಣಿಕೆಯ ಕ್ರಮದಲ್ಲಿಯೇ ಕೊಟ್ಟಿದೆ. ಶಾಸನದಲ್ಲಿ ಓದಲು ಸಾಧ್ಯವಾಗದಿರುವ ಅಥವಾ ಕೆತ್ತಿಹೋಗಿರುವ ಅಕ್ಷರ ಅಥವಾ ಪದಗಳ ಅನುವಾದವನ್ನೂ ಚುಕ್ಕಿಗಳ ಸಾಲಿನಿಂದ ಸೂಚಿಸಿದೆ.

- ಶಾಸನ ಪಾಠವನ್ನು ಅನುವಾದಿಸುವಾಗ ಮೊದಲಿಗೆ ಪದಶಃ ಅನುವಾದ ವನ್ನು ನೀಡಿದರೂ ಅನಂತರ ಅರ್ಥಸ್ಪಷ್ಟತೆಗಾಗಿ ದುಂಡುಕಂಸಗಳಲ್ಲಿ ಕೆಲವು ಮುಖ್ಯವಾದ ಪದಗಳ ಆಂಗ್ಲ ಭಾವಾರ್ಥವನ್ನು ಅಥವಾ ಮೂಲಶಬ್ದವನ್ನು ಕೊಟ್ಟಿದೆ. ಕೆಲವೊಮ್ಮೆ ಸೂಚನೆಗಳನ್ನು ಕೊಡಲೂ ಈ ರೀತಿಯ ದುಂಡು ಕಂಸದೊಳಗಿನ ಬರಹಗಳನ್ನು ನೀಡಲಾಗಿದೆ. ತಾಮ್ರಶಾಸನಗಳ ಅನುವಾದ ವನ್ನು ನೀಡುವಾಗಲೂ ಬಹುಮಟ್ಟಿಗೆ ಇದೇ ಕ್ರಮವನ್ನು ಅನುಸರಿಸಿದೆ.

- ಯಾವುದಾದರೊಂದು ವಿಷಯ ಅಥವಾ ವ್ಯಕ್ತಿಯ ಬಗೆಗೆ ಹೆಚ್ಚಿನ ವಿವರಗಳನ್ನು ನೀಡಬೇಕಾದಲ್ಲಿ ಅವುಗಳ ಮೇಲೆ ನಕ್ಷತ್ರ, ಕಠಾರಿ ಮುಂತಾದ ಗುರುತುಗಳನ್ನು ಸೂಚಿಸಿ ಅಡಿಟಿಪ್ಪಣಿಯಲ್ಲಿ ಅವುಗಳ ವಿವರಗಳನ್ನು ಕೊಟ್ಟಿದೆ.

- ಅನೇಕ ಕಡೆ ಶಾಸನದ ಅತ್ಯಂತ ಪ್ರಮುಖವೆನಿಸಿದ ಭಾಗಗಳನ್ನು ಅಡಿ ಟಿಪ್ಪಣಿಯಲ್ಲಿ ಯಥಾವತ್ತಾಗಿ ಲಿಪ್ಯಂತರ ಮಾಡಿಕೊಟ್ಟಿದೆ.

- ವೀರಗಲ್ಲುಗಳಲ್ಲಿ ಮೂರ್ನಾಲ್ಕು ಹಂತಗಳಲ್ಲಿ ಹೋರಾಟವನ್ನು ಚಿತ್ರಿಸಿ ಅವುಗಳ ನಡುವಣ ಪಟ್ಟಿಕೆಗಳಲ್ಲಿ ಶಾಸನವನ್ನು ಕಂಡರಿಸಲಾಗಿರುತ್ತದೆ. ಶಿಲ್ಪಗಳ ಈ ವಿವರಗಳನ್ನು ಅನುವಾದದ ಜೊತೆಗೇ ಸೇರಿಹೋಗದಂತೆ ಸಣ್ಣಅಕ್ಷರಗಳಲ್ಲಿ ಪಠ್ಯದ ಮಧ್ಯಭಾಗಕ್ಕೆ ಬರುವಂತೆ ಮುದ್ರಿಸಲಾಗಿದೆ.

  ಮೇಲ್ಕಂಡ ಎಲ್ಲ ಲಕ್ಷಣಗಳನ್ನು ಬಹುಮಟ್ಟಿಗೆ ಒಳಗೊಂಡ ಶಾಸನದ ಮಾದರಿಯಾಗಿ ಬಳ್ಳಿಗಾವೆಯ ಶಾಸನವೊಂದರ ಅನುವಾದ ಪ್ರಕಟವಾಗಿರುವ ರೀತಿಯನ್ನು ಗಮನಿಸಬಹುದು. (Copy Sl. No. 67, P–138).

67. Virakal at Balagami, date A. D. 1160.

Size ft. 5 [illegible] ft. 2 [illegible]—Hale Kannada Characters.

Sun — Moon.

The hero in [illegible] — Linga with Priest — Nandi.

Om. Praise to Siva. May it be well.—In the reign of the *Kalachurya* emperor, *Ahava Malla Deva*, the year Sarvari, the month Phalguna, new moon day, Monday. While the great minister *Kesimaya Dandanayaka*, chief of the female apartments†, great . . punishing the evil and protecting the good in the Banavase Twelve Thousand, was carrying on the government in the great royal city of Balligrame in peace and wisdom, one day,

The hero [illegible] to heaven in a car attending by celestial nymphs waving chamaras.

the punisher of those who . the head of great commanders, . his head placed at the feet of Siva, the great lord Talari Keta Malla N[illegible] and others, when [illegible] were going to the Mayile war‡, marching so that all stooped down and cried out, in front of all killing many and carrying out his master's orders, he went to the world of gods. On the day of his disappearance§ his brother-in-law Kalaya Nayaka, his son Malidera Nayaka, and Padmavve Nayakiti erected this *vira s'asana*. Great good fortune. Prosperity.

A fight between men armed with spears and shields, one of them carrying a banner, and [illegible] armed with bows and arrows. A figure in the centre begging for mercy.

---

* *[illegible] bira galla.*

† *S'rimann [illegible] pradhanam antahpura verggade mahapasakkatem* (?). Cf. No. 47.

‡ *[illegible] kanmakke holaram [illegible].*

§ *[illegible] kondu svami karyyaram nadahi sura loka praptanadan atange paroksha dina.*

✦ ಗ್ರಂಥದ ಮೊದಲಲ್ಲಿ ಶಾಸನಗಳ ಕಾಲಕ್ರಮವಾದ ಮತ್ತು ವಂಶಾನುಕ್ರಮವಾದ ಪಟ್ಟಿಯೂ ಕಡೆಯಲ್ಲಿ ಪ್ರಮುಖ ಪದಗಳ ಅಕಾರಾದಿಯೂ ಇವೆ.

ರೈಸರ ಈ ಸಂಪುಟವು ಗುಣದೋಷಗಳೆರಡರಿಂದಲೂ ಕೂಡಿದ್ದು ಅವುಗಳನ್ನು ಹೀಗೆ ಪಟ್ಟಿಮಾಡಬಹುದು :

ಗುಣಗಳು :

1) ಮೈಸೂರು ಸಂಸ್ಥಾನದಲ್ಲಿನ ಶಾಸನದ ಅಧ್ಯಯನಕ್ಕೆ ಇದು ಉತ್ತಮ ನಾಂದಿಯಾಯಿತು.

2) ನೂರಎಪ್ಪತ್ತೈದು ಶಾಸನಗಳಷ್ಟು ದೊಡ್ಡ ಪ್ರಮಾಣದ ಕನ್ನಡ ಶಾಸನಗಳು ಆವರೆಗೆ ಒಟ್ಟಿಗೆ ಪ್ರಕಟವಾಗಿರಲಿಲ್ಲ.

3) ಪ್ರಸ್ತುತ ಕೃತಿಯಲ್ಲಿನ ಪ್ರಸ್ತಾವನೆಯಿಂದಾಗಿ ಶಾಸನಗಳ ಸ್ವರೂಪ, ಅವುಗಳ ಹಂತಗಳು, ಅವುಗಳ ವಿಷಯವ್ಯಾಪ್ತಿ ಮುಂತಾದ ವಿವರಗಳು ಸ್ಥೂಲವಾಗಿಯಾದರೂ ಮೊತ್ತ ಮೊದಲ ಬಾರಿಗೆ ಓದುಗರಿಗೆ ಪರಿಚಯವಾಯಿತು.

4) ಕೃತಿಯು ಇಂಗ್ಲಿಷ್ ಭಾಷೆಯಲ್ಲಿರುವುದರಿಂದ ಮೈಸೂರು ಸಂಸ್ಥಾನದ ಶಾಸನ ಸಂಪತ್ತು ಆ ಮೂಲಕ ಕನ್ನಡೇತರರಿಗೂ ಪರಿಚಿತವಾಯಿತು.

5) ಒಂದು ಪ್ರದೇಶದ ಚರಿತ್ರೆಯ ರಚನೆಗೆ ಶಾಸನಗಳು ಹೇಗೆ ಮೂಲ ಆಕರಗಳಾಗಬಲ್ಲವು ಎಂಬುದಕ್ಕೆ ಈ ಕೃತಿ ಉತ್ತಮ ಉದಾಹರಣೆಯಾಗಿದೆ.

ಕೊರತೆಗಳು :

1) ಶಾಸನಗಳ ಮೂಲಪಾಠವನ್ನು ಕೊಡದೆ ಕೇವಲ ಅನುವಾದವನ್ನು ಮಾತ್ರವೇ ನೀಡಿರುವುದು ಒಂದು ಮುಖ್ಯವಾದ ಕೊರತೆಯಾಗಿದೆ. ಇದರಿಂದಾಗಿ ಸಂಪಾದಕರು ಶಾಸನದ ಅರ್ಥವನ್ನು ಸರಿಯಾಗಿ ಗ್ರಹಿಸಿದ್ದಾರೆಯೇ ಇಲ್ಲವೇ ಎನ್ನುವುದು ತಿಳಿಯುವುದಿಲ್ಲ. ಸಂಪಾದಕರು ಕೊಟ್ಟಿರುವ ಅರ್ಥವನ್ನು ಕಣ್ಣು ಮುಚ್ಚಿಕೊಂಡು ಸ್ವೀಕರಿಸಬೇಕಾಗುತ್ತದೆ.

2) ಶಾಸನಗಳ ಮೂಲದ ನಕಲನ್ನು (Fas-similie) ಕೊಟ್ಟಿದ್ದಿದ್ದರೆ ಲಿಪಿಯ ಸ್ವರೂಪ, ಅದರ ಸಂಭಾವ್ಯ ಕಾಲ ಇತ್ಯಾದಿಗಳನ್ನು ಇತರ ವಿದ್ವಾಂಸರೂ ಅಭ್ಯಸಿಸಿ ಚರ್ಚಿಸುವ ಅವಕಾಶವಿರುತ್ತಿತ್ತು.

3) ಶಾಸನಗಳಲ್ಲಿ ಕೇವಲ ಒಂದು ಊರಿನ ಸ್ಥಳದ ಹೆಸರಿನಿಂದ ನಿರ್ದೇಶಿಸಲಾಗಿದೆಯೇ ವಿನಃ ಅದು ಎಲ್ಲಿ ನಿರ್ದಿಷ್ಟವಾಗಿ ಲಭ್ಯವಿದೆ ಎಂಬ ಸೂಚನೆ ಎಲ್ಲೂ ಇಲ್ಲ. ಪ್ರಸ್ತುತ ಕೃತಿಯನ್ನು ಆಧರಿಸಿ ಮುಂದಿನ ಅಧ್ಯಯನವನ್ನು ಕೈಗೊಳ್ಳಬಯಸುವವರಿಗೆ ಈ ಮಾಹಿತಿ ಅತ್ಯಗತ್ಯ.

4) ಶಾಸನಗಳ ಪಾಠಕ್ಕೆ ನೀಡಿರುವಷ್ಟೇ ಪ್ರಾಮುಖ್ಯವನ್ನು ಅದರ ಶಿಲ್ಪದ ವಿವರಗಳಿಗೆ ನೀಡಿಲ್ಲ. ಹಾಗಾಗಿ ಅವುಗಳ ಸ್ವರೂಪದ ಪರಿಚಯ ಓದುಗರಿಗೆ ದೊರೆತಿಲ್ಲ.

'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳ ಪ್ರಕಟಣೆಯ ಪೂರ್ವದ ಸ್ಥಿತಿ :

'ಮೈಸೂರು ಇನ್ಸ್‌ಕ್ರಿಪ್ಷನ್' ಪ್ರಕಟವಾದ ಏಳು ವರ್ಷಗಳನಂತರ ಹೊರಬಂದದ್ದು 'Coorg Inscriptions' ಎಂಬ ಹೆಸರಿನ ಕೊಡಗಿನ ಶಾಸನಗಳ ಸಂಪುಟ (1886). ಈ ಸಂಪುಟವನ್ನು 'ಎಪಿಗ್ರಾಫಿಯ ಕರ್ನಾಟಿಕ' ಮಾಲೆಯ ಮೊದಲ ಸಂಪುಟವೆಂದು ಪರಿಗಣಿಸಲಾಗುತ್ತದೆ. ರೈಸರ ನೇತೃತ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ಪುರಾತತ್ತ್ವ ಇಲಾಖೆ ಆರಂಭವಾದ ಒಂದೇ ವರ್ಷದಲ್ಲಿ ಈ ಸಂಪುಟ ಹೊರಬಂದಿತು. ಅನಂತರದ 19 ವರ್ಷಗಳಲ್ಲಿ (1905ರ ವರೆಗೆ) ಈ ಮಾಲೆಯಲ್ಲಿ 12 ಸಂಪುಟಗಳಲ್ಲಿ ಸುಮಾರು 9000 ಶಾಸನಗಳು ಪ್ರಕಟವಾಗಿ ದೇಶವಿದೇಶಗಳ ವಿದ್ವಾಂಸರ ಗಮನವನ್ನು ಸೆಳೆದುವು. ದೇಶದ ಬಹುಭಾಗದ ಆಡಳಿತ ಸೂತ್ರವನ್ನು ತನ್ನ ಕೈಯಲ್ಲಿ ಹಿಡಿದಿದ್ದ ಬ್ರಿಟಿಷ್ ಅಧಿಪತ್ಯವಾಗಲೀ ಅಥವಾ ಇತರ ಸಂಸ್ಥಾನದ ಆಡಳಿತ ವರ್ಗವಾಗಲೀ ಕೈಗೆತ್ತಿಕೊಳ್ಳಲು ಯೋಚಿಸದಿದ್ದ

ಇಂತಹುದೊಂದು ಯೋಜನೆಯನ್ನು ರೈಸರು ಕಾರ್ಯರೂಪಕ್ಕೆ ತರಲು ಹೊರಟಾಗ ಆಡಳಿತಾತ್ಮಕವಾಗಿ ಎದುರಿಸಬೇಕಾದ ಸಮಸ್ಯೆಗಳ ಬಗೆಗೆ ಕರ್ನಾಟಕ ರಾಜ್ಯ ಪತ್ರಾಗಾರ ದಲ್ಲಿ ಕೆಲವು ದಾಖಲೆಗಳು ಲಭ್ಯವಿದ್ದು ಅದರ ವಿವರಗಳನ್ನು ಮುಂದೆ ಪ್ರಸ್ತುತಪಡಿಸಿದೆ.

ದೇಶದ ವಿವಿಧ ಭಾಗಗಳಲ್ಲಿನ ಪ್ರಾಚೀನ ವಾಸ್ತುಶಿಲ್ಪಗಳ ಯಾದಿಯನ್ನು ತಯಾರಿಸುವ ಮತ್ತು ಅವುಗಳ ಸಂರಕ್ಷಣೆಯ ಕೆಲಸವನ್ನು ಕೈಗೊಳ್ಳುವುದಕ್ಕೆ ಸಂಬಂಧಿಸಿ ದಂತೆ ಬ್ರಿಟಿಷ್ ಅಧಿಪತ್ಯವು 1867ರಷ್ಟು ಹಿಂದೆಯೇ ಯೋಚಿಸಿದ್ದಿದೆ. ಬ್ರಿಟಿಷ್ ಚಕ್ರಾಧಿಪತ್ಯದ ವಿಜ್ಞಾನ ಮತ್ತು ಕಲಾ ಇಲಾಖೆಯ ಸಹಾಯಕ ಕಾರ್ಯದರ್ಶಿಯಾಗಿದ್ದ ನಾರ್ಮನ್ ಮ್ಯಾಕ್ಲಿಡ್ ಎಂಬುವನು 1867ರ ಜುಲೈ 30ರಂದು ಲಂಡನ್ನಿನ ದಕ್ಷಿಣ ಕೆನ್ಸಿಗ್ಟನ್‌ನಿಂದ ಅದೇ ಊರಿನಲ್ಲಿದ್ದ ಇಂಡಿಯಾ ಆಫೀಸಿನ ಮುಖ್ಯಸ್ಥನಾದ ಸರ್ ಸ್ಟಾಫೋರ್ಡ್ ಎಚ್. ನಾರ್ತ್‌ಕೂಟ್ ಬಾರ್ಟ್ ಎಂಬುವನಿಗೆ ಪತ್ರ ಒಂದನ್ನು ಬರೆದು 'Lord of the Committee of Council of Education' ಭಾರತದಲ್ಲಿಯ ಪ್ರಾಚ್ಯವಾಸ್ತು ಶಿಲ್ಪಗಳ ಛಾಯಾಚಿತ್ರ, ನಕಾಶೆ, ತಳಪಾಯದ ನಕ್ಷೆ ಮುಂತಾದವುಗಳನ್ನು ಅಧ್ಯಯನದ ದೃಷ್ಟಿಯಿಂದ ಸಂಗ್ರಹಿಸಲು ನಿರ್ಧರಿಸಿದೆಯೆಂದೂ ಇದರ ಖರ್ಚು ವೆಚ್ಚಗಳನ್ನು ಸರ್ಕಾರದ ವಿಜ್ಞಾನ ಮತ್ತು ಕಲಾ ಇಲಾಖೆ ಮತ್ತು ಭಾರತದಲ್ಲಿ ಇದಕ್ಕೆ ಸಂಬಂಧಿಸಿದ ಯಾವುದಾದರೊಂದು ಸಂಸ್ಥೆ - ಎರಡೂ ಹಂಚಿಕೊಳ್ಳಲು ಸಾಧ್ಯವೇ ಎಂಬುದನ್ನು ಸೂಚಿಸಲು ಕೋರಿದ್ದಾನೆ.[1]

ಇದಕ್ಕೆ ಪ್ರತಿಯಾಗಿ ಇಂಡಿಯಾ ಆಫೀಸಿನಲ್ಲಿನ ಮತ್ತೊಬ್ಬ ಮುಖ್ಯಾಧಿಕಾರಿಯಾದ ಎಚ್. ಮೆರಿಮ್ ಡಿಸೆಂಬರ್ 6ರಂದು ಉತ್ತರಿಸಿ ಭಾರತ ಸರ್ಕಾರಕ್ಕೆ ಹಿಂದೆಯೇ ಈ ಬಗ್ಗೆ ಸೂಚನೆಯನ್ನು ನೀಡಲಾಗಿದ್ದು ಅದು ಕಾರ್ಯಪ್ರವೃತ್ತವಾಗಿದೆ ಎಂದಿದ್ದಾನೆ.[2] ಇದಕ್ಕೆ ಸಂಬಂಧಿಸಿದಂತೆ ಭಾರತದ ಎಲ್ಲ ಬ್ರಿಟಿಷ್ ಪ್ರಾಂತ್ಯ ಗಳಿಗೆ ಮತ್ತು ಸ್ಥಳೀಯ ಸಂಸ್ಥಾನಗಳಿಗೆ ಗೃಹಖಾತೆಯಿಂದ ಸುತ್ತೋಲೆಯೊಂದನ್ನು 1868ರ ಫೆಬ್ರವರಿ 24ರಂದು ಹೊರಡಿಸ ಲಾಯಿತು.[3] ಅದರಲ್ಲಿ ಕೇವಲ ನಕಾಶೆ ಮತ್ತು ಛಾಯಾಚಿತ್ರಗಳನ್ನು ಮಾತ್ರವಲ್ಲದೆ ಪ್ರಮುಖ ವಾಸ್ತುಶಿಲ್ಪಗಳ 'ಪ್ಲಾಸ್ಟರ್ ಆಫ್ ಪ್ಯಾರೀಸ್'ನ ಅಚ್ಚುಗಳನ್ನು ತಯಾರಿಸಲೂ ಆದೇಶಿಸಲಾಗಿದೆ. ಈ ಆದೇಶದ ಪರಿಣಾಮವಾಗಿ ಇಡಿಯ ರಾಷ್ಟ್ರದಲ್ಲಿ ಏನೆಲ್ಲಾ ಮಾಹಿತಿ ಗಳು ಸಂಗ್ರಹವಾದವು ಎಂಬ ಅಂಶ ಸ್ಪಷ್ಟವಿಲ್ಲ. ಆದರೆ ಪ್ರಾಚ್ಯವಾಸ್ತುಶಿಲ್ಪಗಳಿಗೆ ಸಂಬಂಧಿಸಿದಂತೆ ಇದು ಸದ್ಯಕ್ಕೆ ಲಭ್ಯವಿರುವ ಮೊದಲ ದಾಖಲೆಯಾಗಿದೆ.

1875ರಲ್ಲಿ ಇಂತಹುದೇ ಒಂದು ಆದೇಶ ಮತ್ತೆ ಹೊರಬಂದಿದೆ. ಇದಕ್ಕೆ ಕಾರಣ ಪಂಜಾಬ್ ಸರ್ಕಾರದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಮೇಜರ್

---

1 KSA GM. 6 of 1864. Sl. No. 61.

2 ಅಲ್ಲೇ. (1862ರಲ್ಲಿ ಈ ಉದ್ದೇಶದಿಂದಲೇ ಕನ್ನಿಂಗ್‌ಹ್ಯಾಂನನ್ನು 'ಭಾರತ ಸರ್ಕಾರದ ಪುರಾತತ್ತ್ವ ಸರ್ವೇಕ್ಷಕ' ನೆಂದು ನೇಮಕ ಮಾಡಲಾಗಿತ್ತು. ಈ ಹುದ್ದೆಯನ್ನೇ ಮುಂದೆ 'ಉತ್ತರ ಭಾರತದ ಪುರಾತತ್ತ್ವ ಸರ್ವೇಕ್ಷಣೆಯ ಮಹಾನಿರ್ದೇಶಕ' ಎಂದು ಬದಲಿಸಲಾಯಿತು.)

3 ಅಲ್ಲೇ, ಸುತ್ತೋಲೆ ಸಂಖ್ಯೆ 14/930.

ಜನರಲ್ ಆರ್. ಮೆಕ್‌ಲಗನ್ ಎಂಬಾತ ಭಾರತ ಸರ್ಕಾರದ ಪ್ರಭಾರಿ ಕಾರ್ಯದರ್ಶಿಯಾಗಿದ್ದ ಆರ್ಥರ್ ಹೊವೆಲ್ಲನಿಗೆ 1875ರ ಸೆಪ್ಟೆಂಬರ್ 21ರಂದು ಕಳುಹಿಸಿದ ಪಂಜಾಬಿನ ಪ್ರಾಚೀನ ಸ್ಮಾರಕಗಳ ಪಟ್ಟಿ. ಈ ಕುರಿತು ಹೋವೆಲ್ ನವೆಂಬರ್ 12ರಂದು ಎಲ್ಲ ಪ್ರಾಂತೀಯ ಆಡಳಿತಗಳಿಗೆ ಆದೇಶವನ್ನು ಹೊರಡಿಸಿ 'ಪಂಜಾಬಿನಂತೆಯೇ ಇತರ ಪ್ರಾಂತ್ಯಗಳಲ್ಲಿಯೂ ಇಂತಹ ಪಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಂಡಿರುವ ಸಾಧ್ಯತೆ ಇದೆ. ಆದರೆ ಅವೆಲ್ಲವೂ ಒಂದೆಡೆಗೆ ಸಂಗ್ರಹಿತವಾಗಿಲ್ಲದಿರುವುದರಿಂದ ಅವುಗಳ ಅಧ್ಯಯನ ಈವರೆಗೆ ನಡೆದಿಲ್ಲ. ಪ್ರಸ್ತುತ ಇಂತಹ ಪಟ್ಟಿಯನ್ನು ಎಲ್ಲ ಪ್ರಾಂತ್ಯಗಳಿಂದ ಸಂಗ್ರಹಿಸಲು ಯೋಜಿಸಿದೆ. ಹಾಗಾಗಿ ನಿಮ್ಮಲ್ಲಿಯ ಪ್ರಾಂತ್ಯಗಳ ಸ್ಮಾರಕಗಳ ಪಟ್ಟಿಯನ್ನೂ ಕನ್ನಿಂಗ್‌ಹ್ಯಾಂನ ವಿಂಗಡಣೆಯ ಪ್ರಕಾರ* ವಿಂಗಡಿಸಿ ಕಳುಹಿಸಿ' ಎಂದಿದ್ದಾನೆ.[1]

ಈ ಆದೇಶವು ಮೈಸೂರಿನ ಚೀಫ್ ಕಮೀಷನರರ ಮೂಲಕ ಆಗಿನ ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿದ್ದ ರೈಸರಿಗೆ ಬಂದಿದ್ದು ಅವರು 1876ರ ಜನವರಿ 11ರಂದು ಪ್ರತಿಯಾಗಿ ಉತ್ತರಿಸಿದ್ದಾರೆ.[2] ಈ ಪತ್ರದಲ್ಲಿ ಅವರು ಮೈಸೂರು ಸಂಸ್ಥಾನದಲ್ಲಿನ ಒಟ್ಟು 72 ಪ್ರಮುಖ ಸ್ಮಾರಕಗಳ ಪಟ್ಟಿಯನ್ನು (ಬೆಂಗಳೂರು ಜಿಲ್ಲೆ - 7, ಕೋಲಾರ - 7, ತುಮಕೂರು - 6, ಹಾಸನ - 3, ಶಿವಮೊಗ್ಗ - 29) ಕೊಟ್ಟಿದ್ದಾರೆ. ಇವುಗಳ ನಿರ್ಮಾಣ ಕಾಲಕ್ಕೆ ಸಂಬಂಧಿಸಿದಂತೆ "ಈ ಕಟ್ಟಡಗಳ ಖಚಿತವಾದ ನಿರ್ಮಾಣ ಕಾಲ ತಿಳಿದಿಲ್ಲ. ಒಬ್ಬೊಬ್ಬರೂ ಒಂದೊಂದು ಕಾಲವನ್ನು ಹೇಳುತ್ತಾರೆ. ಹಾಗಾಗಿ ಸಾಮಾನ್ಯ ವಿವರಗಳನ್ನಷ್ಟನ್ನೇ ಕೊಟ್ಟಿದೆ' ಎಂದು ಹೇಳಿದ್ದಾರೆ. ಅಲ್ಲದೆ, "If I may presume to indicate any particular subjects to which attention may profitably be directed, I should recommend the following" ಎಂದು ಹೇಳಿ ಕಲ್ಲಿನಗೂಡು, ಡಾಲ್ಮನ್ ಹಾಗೂ ವೃತ್ತಗಳು; ಮಾಸ್ತಿಕಲ್ಲು, ವೀರಗಲ್ಲು, ಶಾಸನಗಳು, ನಾಣ್ಯಗಳು, ಹಸ್ತಪ್ರತಿಗಳು, ಜಾತಿಗಳು, ಸರ್ಪಾರಾಧನೆ ಹಾಗೂ ಹಬ್ಬಗಳನ್ನು ಕುರಿತಾದ ಮಾಹಿತಿಗಳನ್ನು ಸಂಗ್ರಹಿಸ ಬಹುದೆಂದು ಸೂಚಿಸಿದ್ದಾರೆ.

ರೈಸ್ ಈ ಸೂಚನೆಗೆ ಅನುಗುಣವಾಗಿಯೇ ಶಾಸನಗಳನ್ನು ಕುರಿತಾದ ಮಾಹಿತಿ ಯನ್ನು ಸಂಗ್ರಹಿಸಲು ನಮೂನೆಯನ್ನು ಎಲ್ಲ ತಾಲ್ಲೂಕುಗಳ ಅಮಲ್ದಾರರಿಗೆ ಕಳುಹಿಸ ಲಾಯಿತು. ಇದರ ಫಲವಾಗಿಯೇ 3722 ಶಾಸನಗಳ ಮಾಹಿತಿಗಳು ಲಭ್ಯವಾದವು. ಇವು

* ಕನ್ನಿಂಗ್‌ಹ್ಯಾಂ ಭಾರತೀಯ ವಾಸ್ತುಶಿಲ್ಪವನ್ನು ಹಿಂದೂ (ಕ್ರಿ.ಶ. 1000 ದಿಂದ 1200) ಮತ್ತು ಮುಸಲ್ಮಾನ್ (1200 ರಿಂದ 1750) ಎಂದು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಿದ್ದಾನೆ. ಹಿಂದೂ ವಿಭಾಗದಲ್ಲಿ ಪ್ರಾಚೀನ, ಇಂಡೋ-ಜೆಸಿಯಾನ್, ಇಂಡೋ-ಸಿಥಿಯನ್, ಇಂಡೋ-ಸಸ್ಸೇನಿಯನ್, ಮಧ್ಯಕಾಲೀನ ಬ್ರಾಹ್ಮಣಿಕ, ಆಧುನಿಕ ಬ್ರಾಹ್ಮಣಿಕ ಎಂಬ ಉಪವಿಭಾಗಗಳನ್ನು; ಮುಸಲ್ಮಾನರಲ್ಲಿ ಘೋರಿ, ಖಿಲ್ಜಿ, ತುಘಲಕ್, ಆಫ್‌ಘನ್, ಬೆಂಗಾಲಿ ಮುಂತಾದ ಉಪವಿಭಾಗಗಳನ್ನೂ ಸೂಚಿಸಿದ್ದಾನೆ.

1 KSA GM. 11 of 1875. (1-28) No. 34/1895.

2 ಅಲ್ಲೇ.

ಗಳಲ್ಲಿ ಪ್ರಮುಖವೆನಿಸಿದ ಶಾಸನಗಳನ್ನು ರೈಸರು ಅಭ್ಯಸಿಸಿ 'ಇಂಡಿಯನ್ ಆಂಟಿಕ್ವೆರಿ' ಯಲ್ಲಿ ಪ್ರಕಟಿಸಿದರು.

ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಂನು ಪುರಾತತ್ತ್ವ ಇಲಾಖೆಯ ಮಹಾನಿರ್ದೇಶಕನಾಗಿದ್ದ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿನ ಈ ಸಂಬಂಧದ ಕಾರ್ಯ ಚಟುವಟಿಕೆಗಳಲ್ಲಿ ಆತನ ಕೈವಾಡವೇನೂ ಹೆಚ್ಚಿಗೆ ಇರಲಿಲ್ಲವೆಂದು ತೋರುತ್ತದೆ. ಆದರೆ 1886ರಲ್ಲಿ ಆತ ನಿವೃತ್ತನಾಗಿ ಆ ಸ್ಥಾನಕ್ಕೆ ಬರ್ಗೆಸ್ ಬಂದನಂತರ ಪರಿಸ್ಥಿತಿ ಸಾಕಷ್ಟು ಬದಲಾಯಿತು. ಆವರೆಗೆ ಕೇವಲ ಉತ್ತರಭಾರತಕ್ಕೆ ಮಾತ್ರ ಸೀಮಿತವಾಗಿದ್ದ ಕೇಂದ್ರ ಪುರಾತತ್ತ್ವ ಇಲಾಖೆಯ ಕಾರ್ಯಚಟುವಟಿಕೆಗಳನ್ನು ದಕ್ಷಿಣಭಾರತಕ್ಕೂ ವಿಸ್ತರಿಸಲು ಆತ ನಿರ್ಧರಿಸಿದ. ಈತ 1886ರ ಆಗಸ್ಟ್ 12ರಂದು ಭಾರತ ಸರ್ಕಾರದ ಕಾರ್ಯದರ್ಶಿಗೆ ಪತ್ರ ಒಂದನ್ನು ಬರೆದು

> *"ಭಾರತದಲ್ಲಿ ಶಾಸನಗಳ ಸಂಖ್ಯೆ ಬಹಳ ಹೆಚ್ಚಿದೆ. ಅವುಗಳ ಪ್ರತಿಗಳು ಐತಿಹಾಸಿಕ ಅಧ್ಯಯನಕ್ಕೆ ಅವುಗಳು ಅತ್ಯಗತ್ಯ. ಆದರೆ ಈ ಶಾಸನಗಳನ್ನು ಸಂಗ್ರಹಿಸುವ ಮೊದಲಿಗೆ ಅವುಗಳದ್ದೊಂದು ಪಟ್ಟಿ ಸಿದ್ಧವಾಗಬೇಕು. ಏಕೆಂದರೆ ಇಂತಹುದೊಂದು ಸಂಪೂರ್ಣವಾದ ಪಟ್ಟಿ ಇಲ್ಲದಿದ್ದರೆ ಶಾಸನಗಳ ಆಯ್ಕೆ, ಅವುಗಳ ಭಾಷಾಂತರ ಮುಂತಾದ ಕೆಲಸಗಳನ್ನು ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ನಾನು ದೇಶದಾದ್ಯಂತ ಇರುವ ಪುರಾತತ್ತ್ವ ಇಲಾಖೆಯ ಸರ್ವೇಕ್ಷಕರುಗಳಿಗೆ ಕಾಗದವನ್ನು ಬರೆದು ಎಲ್ಲಾ ಪ್ರಕಟಿತ ಹಾಗೂ ಅಪ್ರಕಟಿತ ಶಾಸನಗಳ ಪಟ್ಟಿಯನ್ನು ಕಳುಹಿಸುವಂತೆ ಸೂಚಿಸಿದ್ದೇನೆ"*
> ಎಂದಿದ್ದಾನೆ.[1]

ಇದೇ ಪತ್ರದಲ್ಲಿ ಲೂಯಿರೈಸರು 'Mysore Inscription' ಅನ್ನು ಕುರಿತು ಆತ ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ :

> *"...... ಕೆಲವು ವರ್ಷಗಳ ಹಿಂದೆ ಶ್ರೀ. ಎಲ್. ರೈಸರು ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ 3722 ಶಾಸನಗಳ ಪಟ್ಟಿಯಲ್ಲಿ ಕಳುಹಿಸಿಕೊಟ್ಟಿದ್ದರು. ಈ ಶಾಸನಗಳು ಎಲ್ಲಿ ಕಾಣಸಿಗುತ್ತವೆ ಎಂಬ ಅಂಶವನ್ನು ಬಿಟ್ಟರೆ ಇಲ್ಲಿಯ ಮಾಹಿತಿ ಸಂಪೂರ್ಣವಾಗಿ ತಪ್ಪಾಗಿದೆ. ಆದರೂ ಮೈಸೂರು ಪ್ರಾಂತ್ಯದ ಹೆಚ್ಚು ವ್ಯಾಪಕವಾದ ಮತ್ತು ಸಮಗ್ರವಾದ ಪಟ್ಟಿಯನ್ನು ತಯಾರಿಸಲು ಇದು ಭೂಮಿಕೆಯಾಗಬಹುದು. 1865ರಲ್ಲಿ ಮೈಸೂರು ಸರ್ಕಾರವು ಮೇಜರ್ ಡಿಕ್ಸನ್ ತೆಗೆದ 150 ಕಲ್ಲಿನ ಮತ್ತು ತಾಮ್ರ ಶಾಸನಗಳ ಮತ್ತು 25 ಇತರ ಶಾಸನಗಳನ್ನು ರೈಸ್ ಅನುವಾದಿಸಿರುವುದನ್ನು ಪ್ರಕಟಿಸಿದೆ. ಆದರೆ ಇದರಲ್ಲಿ*

---

1 KSA GM. 15 of 1886ರಲ್ಲಿಯ ಭಾಗದ ಅನುವಾದ.

ಶಾಸನಗಳ ಮೂಲಪಾಠವಾಗಲೀ ಅಥವಾ ಅವುಗಳ ಪಡಿಯಚ್ಚಾಗಲೀ ಪ್ರಕಟವಾಗಿಲ್ಲವಾದ್ದರಿಂದ ಅನುವಾದದ ಗುಣಮಟ್ಟವನ್ನು ಪರೀಕ್ಷಿಸುವ ಯಾವುದೇ ಮಾರ್ಗವಿಲ್ಲ....." [1]

ಈ ಮಧ್ಯೆ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಪುರಾತತ್ತ್ವ ಸಂಶೋಧನೆಯ ಎಲ್ಲ ಫಲಿತಗಳನ್ನೂ ಕೇಂದ್ರೀಯ ಪುರಾತತ್ತ್ವ ಇಲಾಖೆಯ ಸರಣಿಗೇ ಸೇರಿಸಿಕೊಂಡು ಆ ಮೂಲಕ ರೈಸರ ಖ್ಯಾತಿಯನ್ನು ತಗ್ಗಿಸಬೇಕೆಂಬ ದೊಡ್ಡ ಹುನ್ನಾರಕ್ಕೆ ಆತ ಕೈಹಾಕಿದ. ಆತ ನಿರ್ದೇಶಕನಾಗಿ ಅಧಿಕಾರವನ್ನು ವಹಿಸಿಕೊಂಡ ಹೊಸತರಲ್ಲಿಯೇ (ಆಗಸ್ಟ್ 12, 1886 ರಂದು) ದೇಶದ ಎಲ್ಲ ಪುರಾತತ್ತ್ವ ಸರ್ವೇಕ್ಷಕರಿಗೆ ಸುತ್ತೋಲೆಯೊಂದನ್ನು ಕಳುಹಿಸಿದ. ಅದರಲ್ಲಿ ಹೊಸದಾಗಿ ಪತ್ತೆಯಾಗುವ ಶಾಸನಗಳ ಬಗೆಗೆ ಮಾಹಿತಿಯನ್ನು ತುಂಬುವುದಕ್ಕೆ ಬೇಕಾದ ನಮೂನೆಯೊಂದನ್ನು ನೀಡಿದ್ದಾನಲ್ಲದೆ ಕೆಳಗಿನ ಸೂಚನೆಗಳನ್ನೂ ಕೊಟ್ಟಿದ್ದಾನೆ:

1) ಯಾವ ಒಂದು ಶಾಸನವನ್ನೂ ಕೇಂದ್ರೀಯ ಶಾಸನತಜ್ಞನ ಅರಿವಿಗೆ ತಾರದೆ ದೇಶದಿಂದ ಹೊರಕ್ಕೆ ಕಳುಹಿಸುವಂತಿಲ್ಲ. ಪ್ರಾಂತೀಯ ಸರ್ಕಾರಗಳು ಈ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳತಕ್ಕದ್ದು.

2) ಸರ್ವೇಕ್ಷಕರು ಶಾಸನಗಳನ್ನು ಪೂರ್ತಿಯಾಗಿ ಓದಬೇಕಾದ ಅವಶ್ಯಕತೆ ಇಲ್ಲ. ಕೇವಲ ಅವನ್ನು ದಾಖಲಿಸಿ ಮಹಾನಿರ್ದೇಶಕನಾದ ನನಗೆ ವರದಿ ಮಾಡಿದರೆ ಸಾಕು.

3) 1886ರ ಮಾರ್ಚ್ 16ರಂದು ಭಾರತ ಸರ್ಕಾರವು ಒಂದು ನಿರ್ಣಯ ವನ್ನು ಕೈಗೊಂಡಿದ್ದು ಅದರ ಪ್ರಕಾರ ಜೆ.ಎಫ್. ಫ್ಲೀಟ್ ಇನ್ನು ಮುಂದೆ ಶಾಸನ ಇಲಾಖೆಯ ಕಾರ್ಯಗಳನ್ನು ನೋಡಿಕೊಳ್ಳುವುದಿಲ್ಲ. ಹಾಗಾಗಿ ಎಲ್ಲ ವಿವರಗಳನ್ನೂ ನನಗೇ ಕಳುಹಿಸಬೇಕು. ನಾನು ಶಾಸನಗಳನ್ನು ಯುರೋಪಿನ ಅಥವ ಬೇರೆ ಕಡೆಯ ವಿದ್ವಾಂಸರಿಂದ ಅದನ್ನು ಓದಿಸುತ್ತೇನೆ. ಎಲ್ಲ ಸ್ಥಳೀಯ ಸರ್ಕಾರಗಳು ಮತ್ತು ಅಧಿಕಾರಿಗಳೂ ಈವರೆಗೆ ಫ್ಲೀಟರಿಗೆ ನೀಡಿದಂತೆಯೇ ಡಾ॥ ಬರ್ಗೆಸ್‌ರಿಗೂ ಸಹಕಾರವನ್ನು ನೀಡುತ್ತದೆಂದು ಭಾರತ ಸರ್ಕಾರವು ಭಾವಿಸುತ್ತದೆ. [2]

ಬರ್ಗೆಸ್‌ನ ಈ ಪತ್ರವು ಪ್ರಾಂತೀಯ ಸರ್ಕಾರದ ಅಧೀನ ಅಧಿಕಾರಿಗಳ ಅಧಿಕಾರ ವನ್ನು ಕಸಿದುಕೊಂಡು ಅವರನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳುವ ಉದ್ದೇಶದಿಂದ ಹೊರಬಿದ್ದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಬರ್ಗೆಸ್ ತಮ್ಮ ಮೇಲೆ ದಬ್ಬಾಳಿಕೆ

1 ಅಲ್ಲೇ. ಅನುವಾದಿತ ಭಾಗ.

2 ಬರ್ಗೆಸ್, **ಪೂರ್ವೋಕ್ತ**ದಲ್ಲಿನ ಭಾಗದ ಅನುವಾದ.

ನಡೆಸಲು ಯತ್ನಿಸಿದನೆಂಬ ಅಂಶವನ್ನು ರೈಸ್ ತಮ್ಮ ಆತ್ಮಕಥನದಲ್ಲಿಯೂ ಬರೆದುಕೊಂಡಿದ್ದಾರೆ. ಅದು ಹೀಗೆ :

> *"ಈಗ ಇಷ್ಟೆಲ್ಲಾ ಖ್ಯಾತಿಯನ್ನು ಪಡೆದಿರುವ ಪುರಾತತ್ತ್ವ ಇಲಾಖೆಯ ಕೆಲಸ ಪ್ರಾರಂಭದಲ್ಲೇನೂ ಬಹಳ ಸುಗಮವಾಗಿ ಸಾಗಲಿಲ್ಲ. ಮುಂಬೈಯ ಡಾ॥ ಬರ್ಗೆಸ್‌ನನ್ನು ಪುರಾತತ್ತ್ವ ಇಲಾಖೆಯ ಡೈರೆಕ್ಟರ್ ಜನರಲ್ ಆಗಿ ನೇಮಿಸಲಾಯಿತು. ಆತ ದಕ್ಷಿಣ ಭಾರತ ವಿಭಾಗ ಒಂದನ್ನು ಆಯೋಜಿಸಿದ. ವಾಸ್ತವವಾಗಿ ಮದ್ರಾಸ್ ಪ್ರೆಸಿಡೆನ್ಸಿನಷ್ಟನ್ನೇ ಹೊಂದಿದ್ದ ಅದಕ್ಕೆ ಮೈಸೂರು ಮತ್ತು ಕೊಡಗುಗಳನ್ನೂ ಸೇರಿಸಿಕೊಳ್ಳಬೇಕೆಂಬುದು ಅವನ ಆಸೆಯಾಗಿತ್ತು. ಈ ವ್ಯವಸ್ಥೆಯನ್ನು ಜಾರಿಮಾಡುವ ಸಲುವಾಗಿ ಆತ ಬೆಂಗಳೂರಿಗೆ ಬಂದು ರೆಸಿಡೆಂಟರ ಭವನ (ರೆಸಿಡೆನ್ಸಿ)ಯಲ್ಲಿ ಉಳಿದುಕೊಂಡಿದ್ದ. ಆತನನ್ನು ಊಟದ ಸಮಯದಲ್ಲಿ ಭೇಟಿಯಾಗಲೆಂದು ರೆಸಿಡಂಟರಾದ ಸರ್. ಜೇಮ್ಸ್ ಲೆಯಲ್ ನನ್ನನ್ನು ಆಹ್ವಾನಿಸಿದರು. ನನಗೆ ಆತನ ಯೋಜನೆಗಳೇನೂ ಗೊತ್ತಿರಲಿಲ್ಲ, ಊಟದ ಸಮಯದಲ್ಲಿ ನನ್ನ ಪಕ್ಕದಲ್ಲಿಯೇ ಕುಳಿತಿದ್ದ ಆತನೂ ಈ ಬಗ್ಗೆ ತುಟಿಬಿಚ್ಚಲಿಲ್ಲ. ತಾನಾಗಿ ಆ ಯೋಜನೆಯನ್ನು ಪ್ರಸ್ತಾಪಿಸಿ ಮುಖಭಂಗ ಪಟ್ಟುಕೊಳ್ಳುವುದಕ್ಕಿಂತ ಲಯೆಲ್‌ರ ಮೂಲಕ ನನಗೆ ಹೇಳಿಸುವುದು ಆತನ ಉದ್ದೇಶವಾಗಿತ್ತು. ಆದರೆ ಆತ ಮರುದಿನ ನನ್ನ ಮೇಲಧಿಕಾರಿಯೋ ಎಂಬಂತೆ ನನಗೆ ಆ ಬಗ್ಗೆ ಆದೇಶ ಒಂದನ್ನು ನೀಡಿ ಹೊರಟುಹೋದ. ಪುಣ್ಯವಶಾತ್ ಇದೇ ಸಂದರ್ಭಕ್ಕೆ ಸರ್. ಡೆನ್ನಿಸ್ ಫಿಡ್ಜ್ ಪ್ಯಾಟ್ರಿಕ್ ರೆಸಿಡೆಂಟರಾಗಿ ನೇಮಕವಾದರು. ಅವರು ಈ ಬಗ್ಗೆ ವಿಚಾರಿಸಲೆಂದು ನನ್ನನ್ನು ಕರೆಸಿದರು. 'ಡಾ॥ ಬರ್ಗೆಸ್‌ನಿಗೆ ನನ್ನಿಂದ ಆಗಬಹುದಾದ ಎಲ್ಲ ಸಹಕಾರವನ್ನೂ ನೀಡಲು ನಾನು ಸಿದ್ಧ. ಆದರೆ ಅವನ ಕೈಕೆಳಗಿನ ಒಬ್ಬ ನೌಕರನಂತೆ ಕೆಲಸಮಾಡುವುದು ಸಾಧ್ಯವಿಲ್ಲ. ಏಕೆಂದರೆ ಕೂಲಿಕೆಲಸವನ್ನೆಲ್ಲಾ ನಾನು ಮಾಡಿ ಅದರ ಪ್ರತಿಫಲವನ್ನು ಆತನಿಗೆ ಬಿಟ್ಟುಕೊಡುವುದು ನನಗೆ ಇಷ್ಟವಿಲ್ಲ' ಎಂದು ನಾನು ರೆಸಿಡೆಂಟರಿಗೆ ಸ್ಪಷ್ಟಪಡಿಸಿದೆ. ಆತನೂ ನನ್ನ ವಾದವನ್ನು ಒಪ್ಪಿ ನನ್ನ ಬೆಂಬಲಕ್ಕೆ ನಿಂತಿದ್ದರಿಂದ ಬರ್ಗೆಸ್‌ನ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ. ಆದರೂ ಹೇಗಾದರೂ ಮಾಡಿ ತನ್ನ ಮಾತೇ ಗೆಲ್ಲಬೇಕೆಂಬ ಹಟದಿಂದ ಬರ್ಗೆಸ್ ಮದ್ರಾಸ್ ಪ್ರಾಂತ್ಯದ ಇಬ್ಬರು ಸೂಪರಿಂಟೆಂಡೆಂಟರಾದ ಡಾ॥ ಹುಲ್ಷ್ (ಪುರಾತತ್ತ್ವ ಶೋಧನೆ ಮತ್ತು ಶಾಸನಶಾಸ್ತ್ರ) ಹಾಗೂ ಶ್ರೀ ರಿಯ (ವಾಸ್ತುಶಿಲ್ಪ)ರ ಕೇಂದ್ರ ಕಛೇರಿಯನ್ನು ಬೆಂಗಳೂರಿನ ದಂಡು ಪ್ರದೇಶದಲ್ಲಿಯೇ ಉದ್ದೇಶಪೂರ್ವಕವಾಗಿ ಸ್ಥಾಪಿಸಿದ. ಅವರಿಬ್ಬರೂ*

ಮೊದಮೊದಲು ನನ್ನನ್ನು ಗಣನೆಗೇ ತೆಗೆದುಕೊಳ್ಳದವರಂತೆ ವರ್ತಿಸಿದರು. ಆದರೆ ಮೈಸೂರು ಸರ್ಕಾರದ ತೀವ್ರ ಆಕ್ಷೇಪಣೆಯನಂತರ ಅವರ ಕಛೇರಿಯು ಉದಕಮಂಡಲಕ್ಕೆ ವರ್ಗಾವಣೆಗೊಂಡ ಮೇಲೆ ಅವರಿಬ್ಬರೂ ನನ್ನೊಂದಿಗೆ ಸ್ನೇಹದಿಂದ ಇದ್ದಾರೆ. ಅನಂತರದ ಸಮಯದಲ್ಲಿ ಅಶೋಕನ ಶಾಸನದ ಪತ್ತೆಯಂತಹ ಅನೇಕ ಗಣನೀಯ ಸಂಶೋಧನೆಗಳು ನನಗೆ ಸ್ವತಂತ್ರವಾದ ಅಸ್ತಿತ್ವವನ್ನು ತಂದುಕೊಟ್ಟವೆ.'' [1]

ಇಷ್ಟೆಲ್ಲಾ ಒತ್ತಡಗಳ ನಡುವೆಯೇ 1886ರಲ್ಲಿ ರೈಸರು ಸಂಪಾದಿಸಿದ ಕೊಡಗಿನ ಶಾಸನಗಳ ಸಂಪುಟವಾದ 'Coorg Inscriptions' ಹೊರಬಂದಿತು. ಮೈಸೂರಿನ ಶಾಸನಗಳಿಗೆ ಸಂಬಂಧಿಸಿದಂತೆ ಬರ್ಗೆಸ್ ಮಾಡಿದ ಕೆಲವು ಟೀಕೆಗಳು ಸಕಾರಣವಾಗಿದ್ದರೂ ಆತನ ಪತ್ರ ಬರುವ ವೇಳೆಗೆ ಕೊಡಗಿನ ಸಂಪುಟ ಪ್ರಕಟವಾಗಿ ಆಗಿತ್ತಾದ್ದರಿಂದ ಅದೂ ಹಿಂದಿನ ಸಂಪುಟವನ್ನೇ ಹೋಲುತ್ತದೆ.

ಈ ಮಧ್ಯೆ ಸಂಸ್ಥಾನದ ಎಲ್ಲ ಜಿಲ್ಲೆಗಳ ಪ್ರಾಚೀನ ಸ್ಮಾರಕಗಳು ಮತ್ತು ಶಾಸನಗಳ ಪಟ್ಟಿಯನ್ನು ಸಲ್ಲಿಸುವಂತೆ ಬರ್ಗೆಸ್‌ನ ಕಡೆಯಿಂದ ಒತ್ತಡ ತೀವ್ರವಾಯಿತು. ಬಹುಶಃ ಆ ಆಕರಗಳನ್ನು ಬಳಸಿಕೊಂಡು ಹುಲ್ಷ್ ಮತ್ತು ರಿಯರು ಕಾರ್ಯ ನಿರ್ವಹಿಸಲು ಅನುಕೂಲವಾಗಲಿ ಎಂಬುದು ಆತನ ಉದ್ದೇಶವಾಗಿತ್ತೆಂದು ತೋರುತ್ತದೆ. 1887-90ರವರೆಗೆ ಈ ಬಗ್ಗೆ ಅನೇಕ ಬಾರಿ ರೆಸಿಡೆಂಟನ ಮೂಲಕ ಪತ್ರಗಳು ಬಂದವು. ಆಗ ಪದೇಪದೇ ರೈಸ್ ತಮ್ಮ ಕಾರ್ಯಚಟುವಟಿಕೆಗಳ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಯಿತು. 1887ರ ಡಿಸೆಂಬರ್ 22ರಂದು ಅವರು ರೆಸಿಡೆಂಟರಿಗೆ ಬರೆದ ಪತ್ರದಲ್ಲಿ "A list of ancient monuments in Mysore will be furnished on the Completion cf Archaeological Survey now in progress" ಎಂದು ಉತ್ತರಿಸಿದ್ದಾರೆ.[2] 1889ರ ಆಗಸ್ಟ್ 3ರಂದು ಬರೆದ ಮತ್ತೊಂದು ಪತ್ರದಲ್ಲಿ

"ಈಗ ಭಾರತದಾದ್ಯಂತ ಸಂಗ್ರಹಿಸಲು ಯತ್ನಿಸುತ್ತಿರುವ ಶಾಸನಗಳ ಮಾಹಿತಿಯನ್ನು ನಾನು 1871ರಷ್ಟು ಹಿಂದೆಯೇ ಈಗ ಬರ್ಗೆಸ್ ಹೇಳುತ್ತಿರುವ ರೀತಿಯಲ್ಲೇ ಸಂಗ್ರಹಿಸಿದ್ದೇನೆ. ಮೂರು ವರ್ಷಗಳ ಹಿಂದೆ ನನಗೆ ವಹಿಸಲಾಗಿದ್ದ ಪೋಲಿಸ್ ಇಲಾಖೆಯ ಹೆಚ್ಚುವರಿ ಜವಾಬ್ದಾರಿಯನ್ನು ಹಿಂದಕ್ಕೆ ಪಡೆದು ಆದಕ್ಕೆ ಬದಲಾಗಿ ಶಾಸನಗಳನ್ನು ಓದಿ ಅರ್ಥೈಸುವಂತೆ ಹೇಳಲಾಯಿತು. ಉತ್ತರೋತ್ತರದಲ್ಲಿ ನನ್ನನ್ನು ಮೈಸೂರಿನ ಪುರಾತತ್ತ್ವ ಇಲಾಖೆಯ ನಿರ್ದೇಶಕನನ್ನಾಗಿಯೂ ನೇಮಿಸಲಾಯಿತು. ಈ ಸ್ಥಾನದ ಅಧಿಕಾರದಿಂದ

---

1 Rice B.L., **Biographical Notes**. P-43ರ ಭಾಗದ ಅನುವಾದ.

2 KSA GM 15 of 1886.

ನಾನು ಈಗಾಗಲೇ ಜೈನರ ಪ್ರಮುಖ ಧಾರ್ಮಿಕ ಕೇಂದ್ರವಾದ ಶ್ರವಣ ಬೆಳಗೊಳದಲ್ಲಿಯ ಶಾಸನಗಳ ಸಂಪುಟವನ್ನು ಸಿದ್ಧಪಡಿಸಿದ್ದು ಅದು ಅಚ್ಚಿನಲ್ಲಿದೆ. ಅಷ್ಟೇ ಅಲ್ಲದೆ ತಲಕಾಡು, ಹಳೇಬೀಡು ಮುಂತಾದ ಪ್ರಾಚೀನ ರಾಜಧಾನಿಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಅನೇಕ ಶಾಸನಗಳ ಪ್ರತಿಗಳನ್ನು ಸ್ಥಳದಲ್ಲಿಯೇ ತಯಾರಿಸಿಕೊಂಡಿದ್ದೇನೆ. ಇತರ ತಾಲ್ಲೂಕುಗಳಲ್ಲಿಯೂ ಎರಡು ಸಾವಿರಕ್ಕಿಂತ ಹೆಚ್ಚಿನ ಶಾಸನಗಳನ್ನು ಪತ್ತೆಹಚ್ಚಲಾಗಿದೆ. ಈ ಕೆಲಸವನ್ನು ಮುಂದೆಯೂ ಮುಂದುವರೆಯಲಿದೆ.

ಮೈಸೂರು ಸಂಸ್ಥಾನದಲ್ಲಿ ಪುರಾತತ್ತ್ವ ಶೋಧನೆಯು ಸ್ಥಳೀಯವಾಗಿ ಮತ್ತು ಸಮರ್ಪಕವಾಗಿ ನಡೆಯಲು ಬೇಕಾದ ಎಲ್ಲ ವ್ಯವಸ್ಥೆಯೂ ನಮ್ಮಲ್ಲಿದೆ ಎನ್ನುವುದು ಮೇಲಿನ ಎಲ್ಲ ವಿವರಗಳಿಂದ ಸ್ಪಷ್ಟವಾಗುತ್ತದೆ'' ಎಂದಿದ್ದಾರೆ.[1]

1889ರಲ್ಲಿ ಬರ್ಗೆಸ್ ಮಹಾನಿರ್ದೇಶಕನ ವೃತ್ತಿಯಿಂದ ನಿವೃತ್ತನಾದ ಮೇಲೂ ಮೈಸೂರು ಸಂಸ್ಥಾನದ ಮೇಲಿನ ಒತ್ತಡ ತಪ್ಪಲಿಲ್ಲ. ರೈಸರು ಪುರಾತತ್ತ್ವ ಪರಿವೀಕ್ಷಣೆಯನ್ನು ಇನ್ನೂ ಕೈಗೊಳ್ಳದಿದ್ದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಪ್ರಾಚೀನ ಸ್ಮಾರಕಗಳ ಪಟ್ಟಿಯನ್ನು ಕಳುಹಿಸುವಂತೆ ಪದೇಪದೇ ಪತ್ರಗಳು ಬರುತ್ತಿದ್ದವು. ಒಮ್ಮೆ ರೈಸರು 'ಈ ಸಂಬಂಧದ ಎಲ್ಲ ಕಾಗದ ಪತ್ರಗಳನ್ನೂ 1887ರಷ್ಟು ಹಿಂದೆಯೇ ತಮಗೆ ಕಳುಹಿಸ ಲಾಗಿದ್ದು ನಮ್ಮಲ್ಲಿ ಯಾವ ವಿವರವೂ ಉಳಿದಿಲ್ಲ' ಎಂದು ಉತ್ತರಿಸಿದರೂ[2] ಬಿಡದೆ ಒತ್ತಾಯಿಸಿದಾಗ 1894 ಮೇ 8ರಂದು ರೈಸ್‌ರು ಒಂದು ಪಟ್ಟಿಯನ್ನು ಕಳುಹಿಸಿದರು. ಆದರೆ ಅದು ಕೋಲಾರ ಮತ್ತು ಬೆಂಗಳೂರಿಗೆ ಸಂಬಂಧಿಸಿದ್ದಾಗಿರದೆ ಮೈಸೂರು ಜಿಲ್ಲೆಯ ಉತ್ತರ ತಾಲ್ಲೂಕುಗಳಿಗೆ ಸಂಬಂಧಿಸಿದ್ದಾಗಿತ್ತು! ಬಹುಶಃ ರೈಸರು ಹಾಗೆ ಮಾಡಲು ಕಾರಣವೆಂದರೆ ಆ ವೇಳೆಗೆ ಮೈಸೂರು ಜಿಲ್ಲೆಯ ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಪ್ರಕಟವಾಗಿದ್ದುದರಿಂದ ಹುಲ್ಟ್ಷ್ ಮುಂತಾದವರು ಇನ್ನೇನೂ ಮಾಡುವಂತಿರಲಿಲ್ಲ!!

ಅಷ್ಟೇ ಅಲ್ಲದೆ, ಅವರು ಕಳುಹಿಸಿದ ಯಾದಿಯಲ್ಲಿ ಬಸರಾಳು, ಸೋಮನಾಥಪುರ, ಶ್ರೀರಂಗಪಟ್ಟಣ, ಗಂಜಾಂ, ಶ್ರವಣಗುಟ್ಟ ಹಾಗೂ ತಲಕಾಡುಗಳ ಪ್ರಾಚೀನ ಸ್ಮಾರಕಗಳ ಹೆಸರುಗಳಿದ್ದರೂ ವಿವರ ಗಳಿಗೆ "See Inscriptions of Mysore District part" ಅಥವಾ "See Mysore Gazetteer" ಎಂಬ ಎರಡೇ ವಾಕ್ಯಗಳ ಸೂಚನೆ ಇದೆ!!

ಇಷ್ಟಾದರೂ ಮತ್ತೆ 1894ರ ಆಗಸ್ಟ್ 14ರಂದು ಬಂದ ಪತ್ರದಲ್ಲಿ "ನಾವು ಬೆಂಗಳೂರು, ಕೋಲಾರದ ಪಟ್ಟಿಯನ್ನು ಕೇಳಿದರೆ ನೀವು ಮೈಸೂರಿನದನ್ನು ಕಳುಹಿಸಿದ್ದೀರಿ,

1 ಅಲ್ಲೇ (ಅನುವಾದ).

2 ಅಲ್ಲೇ. 1890, ಆಗಸ್ಟ್ 15ರ ಪತ್ರ.

..... I am intend to request you to be good enough to send the record in this office copies of similar lists which you appear to have already furnished to the residency" ಎಂಬ ಒಕ್ಕಣೆ ಇದೆ.[1]

ಈ ಬಾರಿ ಅನಿವಾರ್ಯವಾಗಿ ರೈಸ್ ಬೆಂಗಳೂರು ಮತ್ತು ಕೋಲಾರಕ್ಕೆ ಸಂಬಂಧಿಸಿದ ಪಟ್ಟಿಯನ್ನು ಕಳುಹಿಸಬೇಕಾಯಿತು. 1894ರ ಆಗಸ್ಟ್ 28ರಂದು ಅದನ್ನು ರವಾನಿಸಿದಾಗ ದಿನಾಂಕ 24 ಸೆಪ್ಟೆಂಬರ್ 1894ರಂದು ರೆಸಿಡೆಂಟ್‌ನ ಮೊದಲ ಸಹಾಯಕನು ದಿವಾನರಿಗೆ ಪತ್ರವನ್ನು ಬರೆದು[2] ಎರಡು ವಿಷಯಗಳನ್ನು ಪ್ರಸ್ತಾಪಿಸಿದ್ದಾನೆ :

೧. ಶಾಸನಗಳ ವಿವರಗಳನ್ನು ಬ್ರಿಟಿಷ್ ಅಧಿಪತ್ಯವು ಸೂಚಿಸಿರುವ ಮಾದರಿಯಲ್ಲಿಯೇ ಕಳುಹಿಸಬೇಕಾಗಿದ್ದದ್ದು ಅತ್ಯವಶ್ಯಕ. ಈ ಬಗ್ಗೆ ರೈಸರಿಗೆ ಈ ಮೊದಲೇ ಸುತ್ತೋಲೆಯನ್ನು ಕಳುಹಿಸಿದ್ದರೂ ಪಟ್ಟಿಯನ್ನು 'ಇಂಪೀರಿಯಲ್ ಸೀರಿಸ್'ನ ಮಾದರಿಗೆ ಅನುಗುಣವಾಗಿ ಕಳುಹಿಸಿಲ್ಲ.

೨. ದರ್ಬಾರಿಗೆ ಆಕ್ಷೇಪಣೆ ಇಲ್ಲದಿದ್ದರೆ ಭಾರತ ಸರ್ಕಾರವು ನೀವು ಕಳುಹಿಸಿರುವ ಪಟ್ಟಿಯನ್ನು ಹಾಗೂ ನೀವು ಪ್ರಕಟಿಸಿರುವ ಶಾಸನ ಸಂಪುಟಗಳನ್ನು ಭಾರತ ಸರ್ಕಾರದ ಕಂದಾಯ ಮತ್ತು ಕೃಷಿ ಇಲಾಖೆಗಳ ಸುತ್ತೋಲೆ ಸಂಖ್ಯೆ 40/49 (ದಿನಾಂಕ 5, ಜುಲೈ 1893)ಯ ಪ್ರಕಾರ 'ಇಂಪೀರಿಯಲ್ ಸರಣಿಯ ಕೃತಿಗಳು' ಎಂದು ಪರಿಗಣಿಸಿ ಅದಕ್ಕೆ ನಮ್ಮದೇ ಆದ ಕ್ರಮಸಂಖ್ಯೆಯನ್ನು ಕೊಡಲು ಬಯಸುತ್ತದೆ.

ಕೇವಲ ಔಪಚಾರಿಕವಾಗಿ 'ದರ್ಬಾರಿಗೆ ಆಕ್ಷೇಪಣೆ ಇಲ್ಲದಿದ್ದರೆ' ಎಂಬ ಮಾತು ಪತ್ರದಲ್ಲಿದ್ದರೂ ಬಲಾತ್ಕಾರವಾಗಿ ಎಪಿಗ್ರಾಫಿಯಾ ಸಂಪುಟಗಳನ್ನು ತಮ್ಮ ಸಾಧನೆಗಳೆಂದು ತೋರಿಸಿಕೊಳ್ಳಲು ಬ್ರಿಟಿಷ್ ಅಧಿಪತ್ಯ ಉತ್ಸುಕವಾಗಿತ್ತು.

ನುಂಗಲೂ ಆಗದ, ಉಗುಳಲೂ ಆಗದ ಬಿಸಿತುಪ್ಪದಂತಹ ಈ ಪರಿಸ್ಥಿತಿಯನ್ನು ರೈಸ್ ಬಹಳ ಚಾಣಾಕ್ಷತೆಯಿಂದ ಬಗೆಹರಿಸಿಕೊಂಡಿದ್ದಾರೆ. ಅವರು ನವೆಂಬರ್ 5ರಂದು ಮೇಲಿನ ಪತ್ರಕ್ಕೆ

"ಮೈಸೂರು ಸಂಸ್ಥಾನದ ಶಾಸನ ಸಂಪುಟಗಳನ್ನು 'ಇಂಪೀರಿಯಲ್ ಸರಣಿ'ಯಲ್ಲಿ ಸೇರಿಸಿಕೊಂಡರೆ ತಪ್ಪಿಲ್ಲ. ಆದರೆ ಸದ್ಯದಲ್ಲಿ ಮೈಸೂರಿನಲ್ಲಿ ಇನ್ನೂ ಸರ್ವೇಕ್ಷಣೆಯ ಕಾರ್ಯ ಮುಂದುವರೆಯುತ್ತಿದೆ. ಈಗ ಎರಡು ಸಂಪುಟ ಮುದ್ರಿತವಾಗಿದ್ದು ಉಳಿದ ಏಳು ಬೇರೆಬೇರೆ ಹಂತಗಳಲ್ಲಿವೆ. ಭಾರತ ಸರ್ಕಾರವು ಈ ಸಂಪುಟಗಳನ್ನು ತನ್ನ ಸರಣಿಗೆ ಸೇರಿಸಿಕೊಂಡು ಅದಕ್ಕೆ

1 ಅಲ್ಲೇ. ಪತ್ರಸಂಖ್ಯೆ 2631/8756-93.

2 ಅಲ್ಲೇ. ಪತ್ರಸಂಖ್ಯೆ 3348/118-852. (ಅನುವಾದ).

> *ತಮ್ಮ ಅನುಕ್ರಮ ಸಂಖ್ಯೆಯನ್ನು ಕೊಡಬೇಕಾದರೆ ಅದರಲ್ಲಿ ಸಾರ್ವಜನಿಕ ಹಿತ ಅಡಗಿರಬೇಕು(!)*[1] *ಕೊಡಗಿನ ಸಂಪುಟವನ್ನು ಬೇಕಾದರೆ ಸರಣಿಗೆ ಸೇರಿಸಿಕೊಳ್ಳಬಹುದು. ಆದರೆ ನಿಮ್ಮ ಸರಣಿಯ ಕೃತಿಗಳು ರಾಯಲ್ ಕ್ವಾಟ್ರೋ ಅಳತೆಯಲ್ಲಿವೆ. ನಮ್ಮದು ಡೆಮಿ ಕ್ವಾಟ್ರೋ ಅಳತೆಯವು. ಹಾಗಾಗಿ ಎರಡೂ ಹೊಂದಿಕೊಳ್ಳಲಾರವು. ಆದರೆ ನಮ್ಮವೆಲ್ಲವೂ ಒಂದೇ ಅಳತೆಯ ದಾಗಿರುವುದರಿಂದ ಅವು ಸಹಜವಾಗಿಯೇ ಒಂದು ಸೆಟ್ ಆಗಲಿವೆ. ಇದಕ್ಕಿಂತ ಹೆಚ್ಚಿನ ಆಕ್ಷೇಪವೇನೂ ಇಲ್ಲ''*

ಎಂಬ ಜಾಣತನದ ಉತ್ತರವನ್ನು ಬರೆದಿದ್ದಾರೆ.[2]

ಅಂತಿಮವಾಗಿ ಬ್ರಿಟಿಷ್ ಚಕ್ರಾಧಿಪತ್ಯವು ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ತನ್ನ ಇಂಪೀರಿಯಲ್ ಸರಣಿಗೆ ಸೇರಿಸಿಕೊಳ್ಳುವ ಯತ್ನವನ್ನು ಕೈಬಿಟ್ಟು ತನ್ನ ನೇರ ಆಡಳಿತ ವ್ಯಾಪ್ತಿಯಲ್ಲಿನ ಕೊಡಗಿನ ಸಂಪುಟವನ್ನು ಮಾತ್ರ ಸರಣಿಗೆ ಸೇರಿಸಿಕೊಂಡಿತು. 1914ರಲ್ಲಿ ಇದು ರೈಸರಿಂದಲೇ ಪುನಃ ಪರಿಷ್ಕರಣೆಗೆ ಒಳಪಟ್ಟು 'Archaeological Survey of India New Imperial Series'ನ 39ನೆಯ ಸಂಪುಟವಾಗಿ ಹೊರಬಂದಿದೆ.

ಸಂಪುಟಗಳ ಪರಿಕಲ್ಪನೆಯ ಆಕರ :

8869 ಶಾಸನಗಳನ್ನು ಒಳಗೊಂಡ ಎಪಿಗ್ರಾಫಿಯ ಸಂಪುಟಗಳು ಕೇವಲ ಅವುಗಳ ವಿಷಯ ವೈವಿಧ್ಯ ಮತ್ತು ಸಂಖ್ಯಾಬಾಹುಳ್ಯದಿಂದ ಮಾತ್ರವಲ್ಲದೆ ಸ್ವರೂಪದ ದೃಷ್ಟಿಯಿಂದಲೂ ಅನನ್ಯವಾದದ್ದಾಗಿವೆ. 19ನೇ ಶತಮಾನದಲ್ಲಿ ಪ್ರಕಟವಾದ ಯಾವ ಸಂಪುಟವೂ ಈ ಸ್ವರೂಪ ದಲ್ಲಿ ಇಲ್ಲದಿರುವಾಗ ಈ ವಿಧಾನದಲ್ಲಿ ಶಾಸನಗಳನ್ನು ಜೋಡಿಸಿ ಪ್ರಕಟಿಸುವ ಕಲ್ಪನೆ ರೈಸರಿಗೆ ಮೂಡಿದ್ದು ಹೇಗೆ ಎನ್ನುವುದನ್ನು ಕುರಿತು ಚರ್ಚಿಸಬೇಕಾದ ಅವಶ್ಯಕತೆ ಇದೆ.

ಎಪಿಗ್ರಾಫಿಯಾ ಸಂಪುಟಗಳನ್ನು ಈಗಿರುವ ಸ್ವರೂಪದಲ್ಲಿ ಪ್ರಕಟಿಸುವುದಕ್ಕೆ ಕಾರಣವೇನು ಎನ್ನುವುದನ್ನು ಸ್ಪಷ್ಟವಾಗಿ ನಿರೂಪಿಸುವ ಯಾವುದೇ ದಾಖಲೆಗಳು ಸದ್ಯಕ್ಕೆ ಲಭ್ಯವಿಲ್ಲವಾದರೂ ಇತರ ಆನುಷಂಗಿಕ ಆಕರಗಳ ನೆರವಿನಿಂದ ಸಂಭಾವ್ಯವಾದ ಕಾರಣ ಗಳನ್ನು ಊಹಿಸಬಹುದು.

ಈಗಾಗಲೇ ಗಮನಿಸಿರುವಂತೆ ಶಾಸನಗಳನ್ನು ಕುರಿತಾದ ರೈಸರ ಮೊದಲ ಶಾಸನ ಸಂಬಂಧಿ ಕೃತಿಯಾದ 'ಮೈಸೂರು ಇನ್ಸ್‌ಕ್ರಿಪ್ಷನ್ಸ್' ಕೇವಲ ಶಾಸನಗಳ ಭಾಷಾಂತರವನ್ನು ಮಾತ್ರ ಒಳಗೊಂಡಿತ್ತೇ ವಿನಃ ಮೂಲಪಾಠವನ್ನಾಗಲೀ ಅಥವಾ ಲಿಪ್ಯಂತರವನ್ನಾಗಲೀ ಅಲ್ಲ.

---

1 ಮೂಲದಲ್ಲಿ ಹೀಗಿದೆ : "If the Government of India would assign numbers to these volumes and include them in the imperial series, the measure would be in the interest of the public."

2 ಅಲ್ಲೇ. ಪತ್ರಸಂಖ್ಯೆ 71. (ಅನುವಾದ).

ಇದನ್ನು ಬರ್ನೆಲ್ ಟೀಕಿಸಿದ್ದನ್ನೂ ಹಿಂದೆಯೇ ಗಮನಿಸಿದೆ. ಬರ್ನೆಲನ ಟೀಕೆ 1886ರಲ್ಲಿ ಬಂದಿದ್ದಾದ್ದರಿಂದ ಅದೇ ಸಮಯಕ್ಕೆ ಹೊರಬಂದ ರೈಸರ ಕೂರ್ಗ್ ಇನ್ಸ್‌ಕ್ರಿಪ್ಷನ್ಸ್ ಕೂಡಾ ಯಾವುದೇ ಬದಲಾವಣೆ ಇಲ್ಲದೆ ಮೈಸೂರಿನ ಸಂಪುಟದ ಮಾದರಿಯಲ್ಲಿಯೇ ಹೊರ ಬಂದಿದೆಯಾದರೂ ಒಂದೆರಡು ಶಾಸನಗಳ ಲಿಪ್ಯಂತರವನ್ನು ಒಳಗೊಂಡಿದೆ.

ಇದೇ ವರ್ಷ ಪ್ರಕಟವಾದ ಬರ್ನೆಲ್ ಸಂಪಾದಿಸಿದ ಒಂದು ಕೃತಿ ಪರಿಶೀಲನೆಗೆ ಯೋಗ್ಯವಾಗಿದೆ. ಅದೆಂದರೆ "Archeological survey of South India" ಎಂಬ ಸರಣಿಯ 16ನೇ ಸಂಪುಟ. ಇದರ ಸಂಪೂರ್ಣ ಶೀರ್ಷಿಕೆ "Tamil and Sanskrit Inscriptions with some notes on village antiquities collected chiefly in the south of Madras presidency". ಈತನೇ 1874ರಲ್ಲಿ "Report of the 1st sessions operations in the Belgaum and Kaladagi Districts, January to May 1875" ಎಂಬ ವರದಿಯನ್ನು ಬರೆದಿದ್ದಾನೆ. ಇದರಲ್ಲಿ ಬಾದಾಮಿ, ಪಟ್ಟದಕಲ್ಲು ಮುಂತಾದ ಸ್ಥಳಗಳಿಗೆ ಭೇಟಿ ನೀಡಿದ ವಿವರಗಳು, ರೇಖಾಚಿತ್ರಗಳು ಶಾಸನ ಗಳ ಮತ್ತು ಸ್ಮಾರಕಗಳ ಛಾಯಾಚಿತ್ರಗಳು ಎಲ್ಲವೂ ಇವೆ. ಆದರೆ ಶಾಸನಗಳನ್ನು ಇಲ್ಲಿ ವಾಸ್ತುಶಿಲ್ಪದ ಒಂದು ಭಾಗವಾಗಿ ಪರಿಗಣಿಸಲಾಗಿದೆಯೇ ವಿನಃ ಆಕರ ಸಾಮಗ್ರಿಯಾಗಿ ಅಲ್ಲ. ಇಡಿಯ ಪುಸ್ತಕವು ಬರ್ಗೆಸನೇ ಹಿಂದೆ ಪ್ರಸ್ತಾಪಿಸಿದ ಜಿಲ್ಲೆಗಳ ಸ್ಮಾರಕಗಳ ವಿವರಣಾತ್ಮಕ ಸೂಚಿ (Descriptive Index) ಯ ಮಾದರಿಯಲ್ಲಿ ರಚಿತವಾಗಿದೆ. ಆದರೆ ಆತನ ಎರಡನೆಯದಾದ ಶಾಸನಗಳ ಸಂಪುಟವು ಬಹುಶಃ ಬರ್ಗೆಸ್ ಪ್ರಕಟಿಸಿದ ಈ ಮಾದರಿಯ ಮೊತ್ತಮೊದಲ ಕೃತಿಯಾಗಿದೆ. ಮದ್ರಾಸಿನಿಂದ ಪ್ರಕಟವಾಗಿರುವ ಈ ಕೃತಿ ಯಲ್ಲಿನ ತಮಿಳುಶಾಸನಗಳನ್ನು ಪಂಡಿತ ನಟೇಶಶಾಸ್ತ್ರಿ ಎಂಬುವರು ಅನುವಾದಿಸಿದ್ದಾರೆ.[1] ಸರಣಿಯಲ್ಲಿ ಇದು 16ನೇ ಕೃತಿಯಾದರೂ ದಕ್ಷಿಣಭಾರತದ ಶಾಸನಗಳಿಗೆ ಸಂಬಂಧಿಸಿ ದಂತೆ ಮೊದಲ ಸಂಪುಟ.

ಈ ಕೃತಿಯಲ್ಲಿ ಮೂರು ಭಾಗಗಳಿವೆ, ಅವೆಂದರೆ :

Part I :

Notes and Inscriptions from temples in the Madura District.

Part II :

Copies of Inscription Tamil from temples in the Ramanad Zamindari.

Part III :

Copper plate grants in the Madras Musium and elsewhere.

---

1 ಈ ನಟೇಶಶಾಸ್ತ್ರಿ ಎನ್ನುವರು 1886-87ರಲ್ಲಿ ಆರು ತಿಂಗಳುಗಳ ಕಾಲ ರೈಸರ ಸಹಾಯಕರಾಗಿ ಕೆಲಸ ಮಾಡಿದ್ದೂ ಇದೆ. ನೋಡಿ ARAD P. 4.

ಮೊದಲ ಭಾಗದಲ್ಲಿ ವಡಪ್ಪಲಂಜೈ, ಕೋಡಿಮಂಗಲಂ ಮತ್ತು ತೆಂಕರೈ ಎಂಬಲ್ಲಿಯ ಶಾಸನಗಳನ್ನು ಟಿಪ್ಪಣಿಗಳ ಸಮೇತ ಪ್ರಕಟಿಸಲಾಗಿದೆ. ಒಂದು ಊರಿಗೆ ಒಂದು ಶಾಸನ ವನ್ನು ಹೇಗೆ ಪ್ರಕಟಿಸಲಾಗಿದೆ ಎಂಬುದನ್ನು ಕೃತಿಯ ಮೊದಲ ಪುಟದ ಈ ಮಾದರಿಯಲ್ಲಿ ನೋಡಬಹುದು :

NOTE AND INSCRIPTIONS FROM TEMPLES IN THE MADURA DISTRICT

The first portion of the following notes were made during a tour of eleven days in the district to the west and North west of Madura in the early part of December 1882 and the Second portion during the following month at Rameshwaram. They are printed mainly to presume the inscriptions copied, together with their translation.

VADAPPALANJAI

Vadappalanjai is a very small village about $8^1/_2$ miles west of Madura. It has no architectural remains, the 'small temple of ganesha' inserted in Mr. Sewell's list being only a mud erection. But near it stands a stone about 5 feet high, which bears the following inscription. The stone has been only roughly dressed before incising and the letters in some cases injured or chipped off. But otherwise it is quite legible.

– *on a stone near the temple of Ganapati at Vadappalanjai*

ಶಾಸನದ ತಮಿಳುಪಾಠ		*ರೋಮನ್ ಲಿಪ್ಯಂತರ*
....	1	....
	2	....
	3	....
	4	....
	5	....

Translation

ಈ ಮಾದರಿಯ ಅಧ್ಯಯನದಿಂದ ಖಚಿತವಾಗುವ ಅಂಶಗಳೆಂದರೆ

1. ಸ್ಥಳದ ಬಗ್ಗೆ ಸ್ಥೂಲವಾದ ಟಿಪ್ಪಣಿಯನ್ನು ಕೊಡುವುದು : ಅದರಲ್ಲಿ ಆ ಊರಿನ ಪ್ರಾಚೀನ ಸ್ಮಾರಕಗಳ ಸ್ಥೂಲನೋಟ, ಕೆಲವೊಮ್ಮೆ ಇರುವ ಚಿಕ್ಕಪುಟ್ಟ ಶಾಸನಗಳ ವಿವರಗಳು, ಅನಂತರ ಪ್ರಸ್ತುತ ಶಾಸನ ದೊರೆತಿರುವ ಸ್ಥಳ - ಇಷ್ಟು ಮಾಹಿತಿಯನ್ನು ಶಾಸನಗಳ ಮೇಲ್ಭಾಗದ ಟಿಪ್ಪಣಿಗಳಲ್ಲಿ ಕಾಣಬಹುದು.
2. ಶಾಸನಪಾಠವು ಹೆಚ್ಚು ಅಗಲವಿಲ್ಲದಿದ್ದರೆ ಪುಟದ ಎಡಬದಿಯಲ್ಲಿ ಅದರ ಮೂಲಪಾಠವನ್ನು ಮತ್ತು ಬಲಬದಿಯಲ್ಲಿ ಲಿಪ್ಯಂತರವನ್ನು ಕೊಟ್ಟಿದೆ. ದೀರ್ಘವಾದ ಶಾಸನಗಳಾದಲ್ಲಿ ಮೊದಲಿಗೆ ಅದನ್ನು ಮುದ್ರಿಸಿ ಅನಂತರ ರೋಮನ್ ಲಿಪ್ಯಂತರ, ಅನಂತರ ಅನುವಾದ - ಈ ಕ್ರಮವನ್ನು ಅನುಸರಿಸಿದೆ.
3. ಶಾಸನಪಾಠ ಅಸ್ಪಷ್ಟವಿದ್ದಲ್ಲಿ ಅದನ್ನು ಚುಕ್ಕಿಗಳಿಂದ ತೋರಿಸಿದೆ.
4. ಸಂಪುಟದ ಒಟ್ಟು ಶಾಸನಗಳಿಂದ ವ್ಯಕ್ತವಾಗುವ ಚಾರಿತ್ರಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕವಾದ ಅಂಶಗಳನ್ನು ಚರ್ಚಿಸುವ ಪ್ರಸ್ತಾವನೆ, ಮೂಲ ಶಾಸನಗಳ ಪಡಿಯಚ್ಚು ಇತ್ಯಾದಿಗಳಾವುವೂ ಇದರಲ್ಲಿಲ್ಲ.

ಈ ಮಾದರಿಯನ್ನು ರೈಸರು ಗಮನಿಸಿರುವ ಸಾಧ್ಯತೆ ಇದೆ. ಏಕೆಂದರೆ ದಕ್ಷಿಣ ಭಾರತದ ಶಾಸನಗಳಿಗೆ ಸಂಬಂಧಿಸಿದಂತೆ ಆ ವೇಳೆಗೆ ಪ್ರಕಟವಾದ ಅತ್ಯಂತ ಪ್ರಮುಖ ಕೃತಿ ಇದಾಗಿರುವುದರಿಂದ ಇದು ಅವರ ಕಣ್ಣನ್ನು ತಪ್ಪಿಸಲು ಸಾಧ್ಯವಿಲ್ಲ. ಮತ್ತೊಂದು ಪ್ರಮುಖವಾದ ಅಂಶವೆಂದರೆ ಬರ್ಗೆಸ್‌ನ ಬಳಿ ಕೆಲಸ ನಿರ್ವಹಿಸಿ ಈ ಸಂಪುಟವನ್ನು ಸಿದ್ಧಪಡಿಸಿದ ಮದ್ರಾಸಿನ ನಟೇಶಶಾಸ್ತ್ರಿಯವರು ಅದು ಪ್ರಕಟವಾದ ವರ್ಷದಲ್ಲಿಯೇ ರೈಸರ ಸಹಾಯಕರಾಗಿ ನೇಮಕರಾದುದರಿಂದ ಅವರ ಮೂಲಕವಾದರೂ ಈ ಕೃತಿ ರೈಸರನ್ನು ತಲುಪಿರಲೇಬೇಕು.

ಈ ಕೃತಿ ಮೂಲ ಶಾಸನಪಠ್ಯ, ಅದರ ಲಿಪ್ಯಂತರ ಮತ್ತು ಭಾಷಾಂತರಗಳನ್ನು ಒಳಗೊಂಡು ಉಪಯುಕ್ತವಾಗಿದೆಯಾದರೂ ಕಡಿಮೆ ಸಂಖ್ಯೆಯ ಶಾಸನಗಳ ಪ್ರಕಟಣೆಗೆ ಈ ವಿಧಾನ ಸರಿಯೇ ಹೊರತು ಬೃಹತ್ ಸಂಖ್ಯೆಗಳಿಗಲ್ಲ. ಇದರ ಮತ್ತೊಂದು ಮಿತಿಯೆಂದರೆ ಏಕರೂಪತೆಯ ಕೊರತೆ. ಶಾಸನ ಚಿಕ್ಕದಿರುವಾಗ ಒಂದು ರೀತಿ, ದೊಡ್ಡದಿದ್ದಾಗ ಬೇರೊಂದು ರೀತಿ - ಈ ವಿಧಾನದಲ್ಲಿ ಕೃತಿಯನ್ನು ಪ್ರಕಟಿಸುವುದು ಅತ್ಯಂತ ತ್ರಾಸದಾಯಕ. ಹಾಗಾಗಿ ಬಹುಶಃ ಈ ಕೃತಿಯನ್ನು ಮಾದರಿಯಾಗಿಟ್ಟುಕೊಂಡರೂ ತಾಲ್ಲೂಕುವಾರು ಶಾಸನಗಳ ವಿಂಗಡಣೆ, ಗ್ರಂಥ ಮತ್ತು ಅರವ ಅಕ್ಷರಗಳಿಗೆ ಬೇರೆ ವಿಭಾಗ, ಪಡಿಯಚ್ಚುಗಳ ಬಳಕೆ, ವಿಸ್ತಾರವಾದ ಪ್ರಸ್ತಾವನೆಯ ಅಳವಡಿಕೆ, ಲಿಪ್ಯಂತರ ಮತ್ತು ಪಾಠಾಂತರಗಳ ಪ್ರತ್ಯೇಕವಾದ ವಿಂಗಡಣೆ ಮುಂತಾದ ತಮಗೆ ಆವಶ್ಯಕವಾದ ಕೆಲವು ತಿದ್ದುಪಾಟುಗಳನ್ನು ಮಾಡಿಕೊಳ್ಳುವುದರ ಮೂಲಕ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳನ್ನು ಸ್ವತಂತ್ರ ಸ್ವರೂಪದಲ್ಲಿ ರೈಸರು ವಿನ್ಯಾಸಗೊಳಿಸಿದ್ದಾರೆ ಎಂದು ಸಾಧಾರವಾಗಿ ಊಹಿಸಬಹುದು.

ಜಿಲ್ಲಾವಾರು ಶಾಸನಸಂಪುಟಗಳ ಯೋಜನೆ :

'ಮೈಸೂರು ಇನ್ಸ್‌ಕ್ರಿಪ್ಷನ್ಸ್' ಸಂಪುಟದಿಂದ ಹೊರಬಂದ ಅಪೂರ್ವವಾದ ಚಾರಿತ್ರಿಕ ವಿವರಗಳಿಂದಾಗಿ ಉತ್ತೇಜಿತವಾದ ಮೈಸೂರು ಸರ್ಕಾರ ಸಂಸ್ಥಾನದ ಎಲ್ಲ ಶಾಸನಗಳನ್ನೂ ಸಂಗ್ರಹಿಸಿ ಪ್ರಕಟಿಸುವ ಉದ್ದೇಶದಿಂದ 1885ರಲ್ಲಿ ಪುರಾತತ್ತ್ವ ಇಲಾಖೆಯನ್ನು ಆರಂಭಿಸಿ ರೈಸರನ್ನು ಅದರ ಮುಖ್ಯಸ್ಥರನ್ನಾಗಿ ಮಾಡಿತು. ಈ ಬಗ್ಗೆ ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್‌ರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾಡಿದ ಘೋಷಣೆ ಹೀಗಿದೆ :

> *"Systematic archaeological research began in Mysore in the beginning of the last year. The arrangements made provide for a complete examination throughout the province of ancient inscriptions which are very numerous, and which, to judge from what have already been decifhered, promise to yield important results.... We have entrusted this important work to Mr. L. Rice, C.I.E., who by his high scholary attainments and varied researches in Indian antiquities is specially qualified to do justice to it. Upto the present time he has surveyed 18 taluks more or less completely and collected upwards of 1,500 inscriptions. The results of what have been found will from time to time to issued from press where special arrangements have been made for the purpose. The Government feel confident that the researches now in progress will be the means of throwing much new and valuable light upon the interesting ancient history of Mysore."*[1]

ದಿವಾನರ ಪ್ರಕಾರ ಯೋಜನೆಯ ಪ್ರಮುಖ ಅಂಗಗಳು ಎರಡು. (1) ಶಾಸನಗಳ ಸಂಗ್ರಹಣೆ ಮತ್ತು ಪರಿಷ್ಕರಣೆ, (2) ಮುದ್ರಣ. ಇವೆರಡೂ ಭಾಗಗಳ ಕೆಲಸಗಳನ್ನು ರೈಸರು ನಿರ್ವಹಿಸಿದ ರೀತಿಯನ್ನು ಮುಂದೆ ಗಮನಿಸಬಹುದು.

I. ಶಾಸನಗಳ ಸಂಗ್ರಹಣೆ :

ಶಾಸನಗಳನ್ನು ಸಂಗ್ರಹಿಸುವ ಮೊದಲ ಹಂತದ ಕಾರ್ಯವಾಗಿ ರೈಸರು ಪ್ರತಿ ತಾಲ್ಲೂಕಿನಲ್ಲಿ ಲಭ್ಯವಿರುವ ಶಾಸನಗಳ ವಿವರಗಳನ್ನು ಕಳುಹಿಸುವಂತೆ ಅಲ್ಲಿಯ ಅಮಲ್ದಾರರಿಗೆ ಸೂಚಿಸಿದ್ದನ್ನು ಈಗಾಗಲೇ ಪ್ರಸ್ತಾಪಿಸಿದೆ. ಈ ರೀತಿ ಲಭ್ಯವಾದ ಮಾಹಿತಿ ಅಪರಿಪೂರ್ಣ

1 Address of the Dewan of Mysore to the representive Assembly of Mysore, on Saturday, the 9th October 1886. P–16.

ಮತ್ತು ಅಸ್ಪಷ್ಟ ಎಂದು ಕಂಡುಬಂದದ್ದರಿಂದ ರೈಸ್ ಪ್ರತಿ ತಾಲ್ಲೂಕಿಗೂ ತಾವೇ ಖುದ್ದಾಗಿ ಭೇಟಿಯಿತ್ತು ಅಲ್ಲಿಯ ಶಾಸನಗಳ ಪರೀಕ್ಷಿಸಿ ಅವುಗಳನ್ನು ಪ್ರತಿಮಾಡಿಕೊಳ್ಳುವ ಕಾರ್ಯವನ್ನು ಆರಂಭಿಸಿದರು. ಅದಕ್ಕೆ ಪೂರ್ವಸಿದ್ಧತೆಯಾಗಿ ಅನೇಕ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಅವರಿಗೆ ಒದಗಿತು. ಉದಾಹರಣೆಗೆ ಚೋಳರು ಮತ್ತು ಹೊಯ್ಸಳರು ಸಂಸ್ಥಾನದ ಪೂರ್ವಭಾಗದಲ್ಲಿನ ಜಿಲ್ಲೆಗಳಲ್ಲಿ ಹಾಕಿಸಿರುವ ತಮಿಳು ಮತ್ತು ಗ್ರಂಥಲಿಪಿಗಳ ಶಾಸನಗಳನ್ನು ಓದುವ ಸಲುವಾಗಿ ತಾವು ಮಾಡಿಕೊಂಡ ಪೂರ್ವಸಿದ್ಧತೆಯ ಬಗ್ಗೆ ಅವರು ಹೀಗೆ ಹೇಳಿದ್ದಾರೆ :

> *".... It may be mentioned here that for the purpose of this tour, I had to learn the Grantha and Tamil characters, which I am now able to read easily. But for interpretations of the old Tamil language I have not been able as yet to secure the aid that is requirable."*[1]

ಪ್ರತಿವರ್ಷದ ಇಲಾಖೆಯ ವರದಿಯ ಮೊದಲಿಗೆ ತಾವು ಆಯಾವರ್ಷ ಭೇಟಿ ನೀಡಿದ ಒಟ್ಟು ತಾಲ್ಲೂಕುಗಳು ಮತ್ತು ಅಭ್ಯಸಿಸಿದ ಶಾಸನಗಳ ಸಂಖ್ಯೆಯನ್ನು ರ[illegible] ನಮೂದಿಸಿದ್ದಾರೆ. ಅದರ ಕ್ರೋಢೀಕೃತ ರೂಪ ಹೀಗಿದೆ :

ವರ್ಷ	*ಸಂಚರಿಸಿದ ತಾಲ್ಲೂಕುಗಳ ಸಂಖ್ಯೆ*	*ಅಭ್ಯಸಿಸಿದ ಶಾಸನಗಳ ಸಂಖ್ಯೆ*
1885	18	1500
1886	4	430
1887	9	1000 ಕ್ಕಿಂತ ಹೆಚ್ಚು
1888	9	900 ಕ್ಕಿಂತ ಹೆಚ್ಚು
1889	7	1200
1890	7	1500 ಕ್ಕಿಂತ ಹೆಚ್ಚು
1891	8	860
1892	9	850
1893	5	520
ಒಟ್ಟು	76	8760 ಕ್ಕಿಂತ ಹೆಚ್ಚು

1 A.R.A.D. – P–1.

ಕ್ಷೇತ್ರಕಾರ್ಯದ ಅನುಭವಗಳು :

ಶಾಸನಗಳ ಸಂಗ್ರಹಣೆಯಲ್ಲಿ ಕ್ಷೇತ್ರಕಾರ್ಯವು ಅತ್ಯಂತ ಪ್ರಮುಖವಾದ ಅಂಗ. ಬೆಟ್ಟದ ತುದಿಯಲ್ಲಿಯೋ, ಕಾಡಿನ ಮಧ್ಯದಲ್ಲಿಯೋ ಅಥವಾ ಮಣ್ಣಿನಲ್ಲಿ ಸಂಪೂರ್ಣವಾಗಿ ಹುದುಗಿ ಹೋಗಿಯೋ ಇರುವ ಶಾಸನಗಳನ್ನು ಗುರುತಿಸಿ, ಸ್ವಚ್ಛಗೊಳಿಸಿ, ಅದರ ಕಣ್ಣಚ್ಚು (Eye Copy), ಪಡಿಯಚ್ಚು (Estampage) ಅಥವಾ ಛಾಯಾಚಿತ್ರಗಳನ್ನು ಸಿದ್ಧಗೊಳಿಸುವುದು ಅಪಾರವಾದ ತಾಳ್ಮೆ ದೈಹಿಕ ಸಾಮರ್ಥ್ಯ ಮತ್ತು ಅತ್ಯುತ್ತಮ ಕಾರ್ಯಕುಶಲತೆಗಳನ್ನು ಬೇಡುತ್ತದೆ. ವರ್ಷದ ಆರು ತಿಂಗಳುಗಳ ಕಾಲ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಲಭ್ಯ ಶಾಸನಗಳನ್ನು ಉಳಿದ ಸಮಯದಲ್ಲಿ ಸಂಪಾದಿಸುತ್ತಿದ್ದುದಾಗಿ ರೈಸರೇ ಒಂದೆಡೆ ಹೇಳಿಕೊಂಡಿದ್ದಾರೆ. ಆರಂಭದ ದಿನಗಳಲ್ಲಿ ಕ್ಷೇತ್ರಕಾರ್ಯದ ಸಂಪೂರ್ಣ ಜವಾಬ್ದಾರಿ ಅವರದೇ ಆಗಿತ್ತು. ಅನಂತರದಲ್ಲಿ ಆ ಕಾರ್ಯವನ್ನು ಸಹಾಯಕರಿಗೆ ವಹಿಸಿದ ಮೇಲೆಯೂ ರೈಸರು ಪದೇಪದೇ ಸರ್ವೇಕ್ಷಣೆಗೆ ಹೋಗಿದ್ದರ ದಾಖಲೆಗಳಿವೆ.

ಸುಲಭವಾದ ಸಾರಿಗೆವ್ಯವಸ್ಥೆ, ಸೂಕ್ತವಾದ ವಸತಿ ಮತ್ತು ಆಹಾರದ ಸೌಲಭ್ಯ ಮುಂತಾದ ಪ್ರಾಥಮಿಕ ಅವಶ್ಯಕತೆಗಳೂ ದೊರೆಯದಿದ್ದ ಆ ಕಾಲದಲ್ಲಿ ಇಡಿಯ ಸಂಸ್ಥಾನವನ್ನು ಅವರು ಕೆಲವೊಮ್ಮೆ ಕುದುರೆಯನ್ನೇರಿ, ಮತ್ತೆ ಕೆಲವು ಬಾರಿ ಎತ್ತಿನ ಬಂಡಿಯಲ್ಲಿ ಪಯಣಿಸಿ, ಮತ್ತೂ ಅನೇಕ ಬಾರಿ ಕಾಲ್ನಡಿಗೆಯಲ್ಲಿಯೇ ನಡೆಸಿರುವುದುಂಟು, ಕಾಡುಪ್ರಾಣಿಗಳ ಭೀತಿ, ಜನರ ಅಪೂರ್ವ ಸಹಕಾರ-ಅಸಹಕಾರ ಗಳೆರಡನ್ನೂ ಅನುಭವಿಸಿದ್ದಿದೆ. ಅಂತಹ ಕೆಲವು ರೋಚಕ ಪ್ರಸಂಗಗಳನ್ನು ರೈಸರು ಇಲಾಖಾ ವರದಿಗಳಲ್ಲಿ ಮತ್ತು ತಮ್ಮ ಆತ್ಮವೃತ್ತಾಂತದ ಟಿಪ್ಪಣಿಗಳಲ್ಲಿ ನಿರೂಪಿಸಿದ್ದಾರೆ. ಶಾಸನಾಧ್ಯಯನದಲ್ಲಿ ಅವರಿಗಿದ್ದ ಶ್ರದ್ಧೆ-ಆಸಕ್ತಿಗಳನ್ನು ನಿರೂಪಿಸಲೆಂದು ಅವುಗಳಲ್ಲಿ ಕೆಲವನ್ನು ಆಯ್ದು ಮುಂದೆ ಅನುವಾದಿಸಿದೆ.

1. ನೈಸರ್ಗಿಕ ಅಡಚಣೆಗಳು :

ಶಾಸನಗಳ ಸಂಗ್ರಹಣೆಯ ಸಂದರ್ಭದಲ್ಲಿ ಅನೇಕ ನೈಸರ್ಗಿಕ ಅಡಚಣೆಗಳ ಕಾರಣ ದಿಂದಾಗಿ ರೈಸ್ ಮತ್ತು ಅವರ ತಂಡ ತೊಂದರೆಗೆ ಈಡಾದಿದ್ದಿದೆ. ಅವುಗಳಲ್ಲಿ ಕೆಲವೆಂದರೆ:

ಅ) "ಸಕಲೇಶಪುರ ತಾಲ್ಲೂಕಿನ ಮಂಜಿರಾಬಾದ್‌ನಲ್ಲಿ ಜನಬಳಕೆ ಬಹಳ ಮಿತವಾಗಿದ್ದ ದೇವಾಲಯವೊಂದಿತ್ತು. ಅದರಲ್ಲಿ ಒಂದು ಶಾಸನವಿದ್ದು ಅದರ ಅರ್ಧದಷ್ಟು ಮಣ್ಣಿನಲ್ಲಿ ಹೂತುಹೋಗಿತ್ತು. ಆ ಶಾಸನವನ್ನು ಹೊರ ತೆಗೆಯಲು ಯತ್ನಿಸಿದಾಗ ದೊಡ್ಡದೊಂದು ನಾಗರಹಾವು ಕಂಡುಬಂದಿತು. ಆ ಹಾವು ದೇವಾಲಯವನ್ನು ರಕ್ಷಿಸುವಂತೆ ಎಷ್ಟೋ ವರ್ಷಗಳಿಂದ ಅಲ್ಲೇ ವಾಸವಾಗಿತ್ತಂತೆ. ಚಿಕ್ಕದೊಂದು ನಾಯಿ ಸಮಯಕ್ಕೆ ಸರಿಯಾಗಿ ಭಯಂಕರ ವಾಗಿ ಬೊಗಳಿದ್ದರಿಂದ ನಮ್ಮ ಗಮನ ಆ ಹಾವಿನ ಕಡೆಗೆ ಹರಿಯಿತು.

ಇಲ್ಲದಿದ್ದರೆ ಭಕ್ತಾದಿಗಳ ಓಡಾಟ ಅದಕ್ಕೆ ಎಷ್ಟೇ ಬಳಕೆಯಾಗಿದ್ದಿದ್ದರೂ ಅನೇಕ ಅಪರಿಚಿತರು ತನ್ನ ವಾಸದ ನೆಲೆಗೆ ನುಗ್ಗಿರುವುದನ್ನು ಬಹುಶಃ ಅದು ಸಹಿಸುತ್ತಿರಲಿಲ್ಲ."[1]

ಆ) "......ಒಂದು ಸಂದರ್ಭದಲ್ಲಿ ಒಂದು ದಟ್ಟ ಅರಣ್ಯದ ಒಳಗಿನ ನದಿಯನ್ನು ಅವುಗಳಲ್ಲಿ ಕತ್ತರಿಸಿ ಬಿದ್ದಂತಿದ್ದ ದೊಡ್ಡ ಮರದ ದಿಮ್ಮಿಗಳ ಮೇಲೆ ನಡೆದು ದಾಟಲು ಯತ್ನಿಸುತ್ತಿದ್ದೆವು. ನಾವು ನಡಿಗೆಯನ್ನು ಆರಂಭಿಸಿದ ಕೆಲವೇ ಕ್ಷಣ ಗಳಲ್ಲಿ ನಮ್ಮ ಮುಂದಿದ್ದ ಅನೇಕ ದಿಮ್ಮಿಗಳಲ್ಲಿ ಒಂದಕ್ಕೆ ಇದ್ದಕ್ಕಿದ್ದಂತೆ ಕಾಲುಗಳು ಮೂಡಿ ಆ ವಸ್ತು ನೀರಿನಲ್ಲಿ ಧುಮುಕಿದ್ದು ಕಂಡುಬಂದಿತು. ಅನಂತರ ಅದೊಂದು ದೊಡ್ಡ ಮೊಸಳೆ ಎಂದು ತಿಳಿಯಿತು. ಅಲ್ಲಿಂದ ಸ್ವಲ್ಪ ಮುಂದೆ ಹೋದ ಮೇಲೆ ದೊಡ್ಡದೊಂದು ಕಾಳಿಂಗಸರ್ಪವು ಸುರುಳಿ ಸುತ್ತಿಕೊಂಡು ಮಲಗಿರುವುದನ್ನು ನೋಡಿದೆವು. ಅದು ನಮ್ಮನ್ನೇನೂ ಮಾಡದಷ್ಟು ದೂರ ದಿಂದ ಆ ಸ್ಥಳವನ್ನು ದಾಟಿ ಆ ಕ್ರೂರ ಪ್ರಾಣಿಯಿಂದ ಪಾರಾದೆವು".[2]

ಇ) ".... ಪ್ರಾಚೀನ ರಾಜಧಾನಿಗಳಲ್ಲಿ ಒಂದಾಗಿದ್ದ ತಲಕಾಡು ಈಗ ಮರಳಿನಿಂದ ಆವೃತವಾಗಿದೆ. ಇಲ್ಲಿನ ಒಂದು ಪ್ರಮುಖ ದೇವಾಲಯವೊಂದರ ಒಳಗಿನ ಭಾಗವನ್ನು ನೋಡಲು ನನಗೆ ಅನುಕೂಲವಾಗುವಂತೆ ದೊಡ್ಡದಾದ ಕುಳಿಯನ್ನು ಅಗೆಯಲಾಯಿತು. ನಾನು ಮರಳಿನ ಮೇಲೆ ಕುಳಿತು ಜಾರುಬಂಡೆಯ ಮೇಲೆ ಜಾರಿದಂತೆ ಮರಳಿನ ಮೇಲೆ ಜಾರಿ ದೇವಾಲಯದ ಒಳಭಾಗದ ಅರ್ಧದವರೆಗಷ್ಟೇ ಹೋಗಲು ಸಾಧ್ಯವಾಯಿತು. ಅಲ್ಲಿದ್ದ ಕೆಲವು ಶಾಸನ ಗಳನ್ನು ಪ್ರತಿಮಾಡಿಕೊಂಡೆನಾದರೂ ಅಲ್ಲಿ ಎಲ್ಲೆಲ್ಲಿಯೂ ಮರಳೇ ತುಂಬಿದ್ದ ರಿಂದ ಹೆಚ್ಚಿನ ಅನ್ವೇಷಣೆಗೆ ಅವಕಾಶವಾಗಲಿಲ್ಲ."[3]

2. ಜನರ ಮೂಢನಂಬಿಕೆಗಳು :

"..... ಒಂದು ಕಡೆ ನಾವು ತಳಭಾಗವು ನೆಲದಲ್ಲಿ ಹೂತುಹೋಗಿದ್ದ ಶಾಸನ ಒಂದನ್ನು ಪ್ರತಿಮಾಡುವ ಕೆಲಸದಲ್ಲಿ ಮಗ್ನರಾಗಿದ್ದೆವು. ಈ ಶಾಸನವನ್ನು ಅಗೆದು ತೆಗೆಯಲು ಹೋದರೆ ಅದನ್ನು ಕಾಪಾಡುತ್ತಿರುವ ದೆವ್ವ-ಭೂತಗಳು ನಮ್ಮ ಮೇಲೆ ಧಾಳಿ ನಡೆಸುತ್ತವೆ ಎಂದು ಹೆದರಿದ್ದ ಸುತ್ತಲೂ ಇದ್ದ ಯಾರೊಬ್ಬರೂ ಅದನ್ನು ಅಗೆದು ಹೊರತೆಗೆಯಲು ಮುಂದೆ ಬರಲಿಲ್ಲ. ಜನರ ನಡವಳಿಕೆಯಿಂದ ಸಿಟ್ಟಾದ ಅಲ್ಲಿನ ಬ್ರಾಹ್ಮಣ ಶೇಕ್ದಾರ್

1 ARAD–P–9ರಲ್ಲಿಯ ಭಾಗದ ಅನುವಾದ.

2 Biographical Notes, P–49ರ ಭಾಗದ ಅನುವಾದ.

3 ಅಲ್ಲೇ. P–44.

'ಯಾರೂ ಮುಂದೆ ಬರದಿದ್ದರೆ ನಾನೇ ಅದನ್ನು ಅಗೆಯುತ್ತೇನೆ' ಎಂದೆಲ್ಲಾ ಕೂಗಾಡಿದ ಮೇಲೆ ತನ್ನ ಹೆದರಿಕೆಗೆ ತಾನೇ ನಾಚಿದ ಹಳ್ಳಿಯ ಯುವಕನೊಬ್ಬ ತಾನು ಅಗೆಯುವುದಾಗಿ ನಡುಗುತ್ತ ಮುಂದೆ ಬಂದ. ಹೆದರಿಕೆಯಿಂದ ಅವನು ಪಿಕಾಸಿಯನ್ನು ಮೇಲೆತ್ತಿದಾಗ ಅವನ ನಡುಗುವಿಕೆಯಿಂದಾಗಿ ಅದರ ಮೊನೆ ಅವನ ಹಣೆಗೆ ಬಡಿದು ಗಾಯವಾಯಿತು. ವಿಕಾರ ವಾದ ಕೂಗಿನೊಂದಿಗೆ ಪಿಕಾಸಿಯನ್ನು ನೆಲಕ್ಕೆಸೆದ ಆತ ಒಂದೇ ಉಸುರಿನಲ್ಲಿ ಅಲ್ಲಿಂದ ಹುಚ್ಚುಹಿಡಿದವನಂತೆ ಓಡಿಹೋದ. ಅಲ್ಲಿದ್ದವರೆಲ್ಲಾ ತಾವು ಹಿಂದಿನಿಂದ ನಂಬಿಕೊಂಡು ಬಂದಿದ್ದ ನಂಬಿಕೆಯನ್ನು ಕದಲಿಸಲು ಹೊರಟ ಅವನಿಗೆ ತಕ್ಕ ಶಾಸ್ತಿಯಾಯ್ತೆಂದೇ ಭಾವಿಸಿದರು.''[1]

3. ಇತರ ರೋಚಕ ಅನುಭವಗಳು :

''ಶ್ರವಣಬೆಳಗೊಳದ ಅತ್ಯಂತ ಪ್ರಸಿದ್ಧವಾದ ಭದ್ರಬಾಹುವಿನ ಶಾಸನವನ್ನು ಓದಿ ಅರ್ಥೈಸಿದ ಬಳಿಕ ನಾನೊಂದು ಸಾಹಸವನ್ನು ಮಾಡಿದೆ. ಹಳ್ಳಿಗಾಡಿನ ರಸ್ತೆಯ ಮೂಲಕ ನಾಗಮಂಗಲಕ್ಕೆ ಹೋಗುವ ಉದ್ದೇಶದಿಂದ ನನ್ನ ಸುಂದರವಾದ ಕುದುರೆಯನ್ನು ಮಾತ್ರ ಉಳಿಸಿಕೊಂಡು ಸಿಬ್ಬಂದಿ, ಬಿಡದಿಯ ಸಾಮಾನುಗಳು ಮುಂತಾದ ಸಮಸ್ತವನ್ನೂ ರಸ್ತೆಯ ಮೂಲಕ ಹಿಂದಿರುಗುವಂತೆ ಆ ಮೊದಲೇ ಕಳುಹಿಸಿಬಿಟ್ಟಿದ್ದೆ. ಇದುವರೆಗೆ ಯಾರೂ ಓದಿರದ ಇಷ್ಟು ಪ್ರಮುಖವಾದ ಶಾಸನವನ್ನು ಪತ್ತೆಹಚ್ಚಿದ ಉತ್ಸಾಹ ಮತ್ತು ಇನ್ನಾರಾದರೂ ಇದಕ್ಕೆ ಕೈಹಾಕುವುದಕ್ಕೆ ಮುನ್ನ ಅದರ ಪ್ರತಿಯೊಂದನ್ನು ತೆಗೆಯಲೇಬೇಕೆಂಬ ಹುಮ್ಮಸ್ಸು - ಇವೆರಡೂ ಕತ್ತಲಾಗುವವರೆಗೂ ನಾನು ಬೆಟ್ಟದ ಮೇಲೆಯೇ ಉಳಿಯಲು ಕಾರಣವಾದವು. ಇಷ್ಟೇ ಉತ್ಸಾಹ ಮತ್ತು ಅಚ್ಚರಿ ಅಲ್ಲಿ ನೆರೆದಿದ್ದ ಜನರಲ್ಲಿಯೂ ಕಂಡುಬರುತ್ತಿತ್ತು. ಬಹುಮಟ್ಟಿಗೆ ಜೈನರೇ ಆಗಿದ್ದ ಅವರೆಲ್ಲಾ ನಾನು ಒಂದೊಂದೇ ಪದವನ್ನು ಓದುತ್ತಿದ್ದಂತೆ ನನ್ನ ಸುತ್ತಾ ಕುತೂಹಲದಿಂದ ನೆರೆಯಲಾರಂಭಿಸಿದರು. ಇಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ಅರಿತಿದ್ದ ಅಲ್ಲಿಯ ಅಮಲ್ದಾರ ನಾನು ಬಹಳ ದೂರಪ್ರಯಾಣ ಮಾಡಬೇಕಿದ್ದುದರಿಂದ ನನಗೆಂದು ಸ್ವಲ್ಪ ಆಹಾರವನ್ನು ತಂದಿದ್ದು ನನಗೆ ಸಂತೋಷವನ್ನುಂಟುಮಾಡಿತು.

ಆ ವೇಳೆಗಾಗಲೇ ಕತ್ತಲಾಗುತ್ತಿದ್ದುದರಿಂದ ನಾನು ಅಲ್ಲಿಂದ ಕೂಡಲೆ ಹೊರಟೆ. ಆದರೆ ಸ್ವಲ್ಪದೂರ ಹೋಗುವ ವೇಳೆಗೆ ನಾನು ದಾರಿತಪ್ಪಿ ಭತ್ತದ ಗದ್ದೆಗಳ ನಡುವೆ ಸಿಲುಕಿಕೊಂಡಿದ್ದದ್ದು ಅರಿವಾಯಿತು. ಪುಣ್ಯವಶಾತ್ ನನಗೆ ಕನ್ನಡ ಚೆನ್ನಾಗಿ ಮಾತನಾಡಲು ಬರುತ್ತಿದ್ದುದರಿಂದ ಸಮೀಪದ ಹಳ್ಳಿಗೆ ಹೋಗಿ ನನ್ನ ಸ್ಥಿತಿಯನ್ನು ವಿವರಿಸಿದೆ. ಆ ಹಳ್ಳಿಯ ಮುಖ್ಯ ರೈತರೆಲ್ಲಾ ತಮ್ಮತಮ್ಮಲ್ಲಿ ಚರ್ಚಿಸಿ ಮೇಲುಕೋಟೆ ಎಂಬ ಬ್ರಾಹ್ಮಣರ ಬೆಟ್ಟಕ್ಕೆ ನನ್ನನ್ನು ತಲುಪಿಸಲು ನಿರ್ಧರಿಸಿದರು. ದೀವಟಿಗೆಗಳನ್ನು ಹಿಡಿದು ಅವರೆಲ್ಲಾ ಕಾಡಿನ

---

1 ಅಲ್ಲೇ. P. 46ರ ಭಾಗದ ಅನುವಾದ.

ದಾರಿಯಲ್ಲಿ ನಡೆಯುತ್ತಾ ತಾವೆಲ್ಲರೂ ಇದ್ದೇವೆಂದು ಖಾತ್ರಿ ಪಡಿಸಿಕೊಳ್ಳಲು ಮತ್ತು ದುಷ್ಟಶಕ್ತಿಗಳನ್ನು ದೂರ ಓಡಿಸಲು ಹೋ! ಮರಿಗೌಡಾsss!! ಮುಂತಾಗಿ ಕೂಗುತ್ತಿದ್ದರು. ಆ ಭತ್ತದ ಗದ್ದೆಗಳನ್ನು ದಾಟಿ, ಅನೇಕ ತೊಂದರೆಗಳನ್ನು ನಿವಾರಿಸಿಕೊಂಡು ಮೇಲುಕೋಟೆಯ ಬೆಟ್ಟದ ಮೆಟ್ಟಿಲುಗಳನ್ನು ತಲುಪಿದೆವು. ಈ ದಿನದ ಪ್ರಯಾಣ ಮುಗಿಯಿತೆಂಬ ಸಂತಸ ದಿಂದ ನನ್ನ ಕುದುರೆ ಬೇಗ ಬೇಗ ಮೆಟ್ಟಿಲುಗಳನ್ನು ಏರಿ ಬೆಟ್ಟದ ಮೇಲ್ಭಾಗವನ್ನು ತಲುಪಿತು.

ಆಗ ಬೆಳಗಿನ ಝಾವ ಎರಡು ಗಂಟೆಯಾಗಿತ್ತು. ನಾವು ಅನಿವಾರ್ಯವಾಗಿ ಅಲ್ಲಿನ ಕೆಲವು ಪುರೋಹಿತರನ್ನು ನಿದ್ರೆಯಿಂದ ಎಬ್ಬಿಸಬೇಕಾಯಿತು. ಅವರಿಗೆಲ್ಲಾ ಪರಿಚಿತನಾಗಿದ್ದ ನಾನು ಆ ಅಪರಾತ್ರಿಯಲ್ಲಿ ಆ ರೀತಿ ಅಲ್ಲಿ ಏಕಾಏಕಿ ಹಾಜರಾದುದನ್ನು ಕಂಡು ಆಶ್ಚರ್ಯ ಚಕಿತರಾಗಿ ದೇವಾಲಯದ ಒಂದು ಭಾಗದಲ್ಲಿ ಮಲಗುವ ವ್ಯವಸ್ಥೆ ಮಾಡಿಕೊಟ್ಟರು. ದಿನವಿಡೀ ದಣಿದಿದ್ದ ನಾನು ಮೈಮರೆತು ನಿದ್ರಿಸಿದೆ. ಬೆಳಗ್ಗೆ ನನ್ನನ್ನು ಒಂದು ಕೊಠಡಿಯಲ್ಲಿ ಕೂಡಿಸಿ ನನ್ನ ಮುಂದೆ ಒಂದು ಕಂಚಿನ ಹರಿವಾಣದಲ್ಲಿ ರಾಶಿಯಾಗಿ ಪೇರಿಸಿದ್ದ ಬಾಳೆಯ ಹಣ್ಣು, ಇನ್ನೊಂದು ತಟ್ಟೆಯಲ್ಲಿ ಸಕ್ಕರೆಯ ರಾಶಿ ಮತ್ತು ದೊಡ್ಡದೊಂದು ಹಿತ್ತಾಳೆಯ ಗಡಿಗೆಯ ತುಂಬಾ ಹಾಲು ಇವೆಲ್ಲವೂ ಔತಣದ ರೂಪದಲ್ಲಿ ತಂದಿರಿಸಿದರು. ನಾನು ಅಲ್ಲಿಂದ ಹೊರಡಲೆಂದು ಸಿದ್ಧವಾದಾಗ ಅವರು ನೀಡಿದ್ದ ಆಹಾರದ ರಾಶಿಯಲ್ಲಿ ಸ್ವಲ್ಪ ಮಾತ್ರವೇ ಖಾಲಿಯಾಗಿದ್ದದ್ದನ್ನು ನೋಡಿ ಅವರಿಗೆಲ್ಲ ಸ್ವಲ್ಪ ಆಶ್ಚರ್ಯವೂ, ಬೇಸರವೂ ಆದವು. ನಾನು ನಾಗಮಂಗಲವನ್ನು ತಲುಪಿದರೂ ನನ್ನ ಕಛೇರಿಯ ಇತರರು ಬರುವವರೆಗೆ ಕಾಯಬೇಕಾಯಿತು. ಏಕೆಂದರೆ ಅವರೆಲ್ಲ ಮಾರ್ಗಮಧ್ಯದಲ್ಲಿ ತೊಂದರೆಗೆ ಸಿಲುಕಿದ್ದರು."[1]

ಆ. "....ಒಮ್ಮೆ ನಾನು ಕೊಡಗಿನ ದಕ್ಷಿಣಭಾಗದಲ್ಲಿದ್ದ ಒಂದು ದೂರದ ಸ್ಥಳಕ್ಕೆ ಭೇಟಿಕೊಡಲು ನಿರ್ಧರಿಸಿದೆ. ನನ್ನೊಂದಿಗೆ ದಾರಿತೋರಿಸಲೆಂದು ಒಬ್ಬ ಕೊಡವನೂ ಕುದುರೆಯೇರಿ ಬಂದ. ಸಾಕಷ್ಟು ದೂರ ಸವಾರಿ ನಡೆಸಿದ ಮೇಲೆ ನಾವು ಚಕ್ರಾಕಾರವಾಗಿ ಸುತ್ತಿ ಮತ್ತೆ ಹೊರಟಿದ್ದಲ್ಲಿಗೇ ಬಂದಿದ್ದೇವೆಂಬುದನ್ನು ನಾನು ಪತ್ತೆಮಾಡಿದೆ. ಮೊದಲಿಗೆ ಆ ಮಾರ್ಗದರ್ಶಕ ನನ್ನ ಮಾತನ್ನು ನಿರಾಕರಿಸಿದನಾದರೂ ಅಲ್ಲಲ್ಲಿ ವಿಚಾರಿಸಿದ ಮೇಲೆ ನಾನು ಹೇಳಿದ್ದು ಸರಿಯೆಂದು ಅವನಿಗೂ ತಿಳಿಯಿತು. ನನ್ನನ್ನು ಹಿಂಬಾಲಿಸುವ ಭರದಲ್ಲಿ ನನ್ನ ಬೆಳಗಿನ ತಿಂಡಿಯ ಬುಟ್ಟಿ ದಾರಿತಪ್ಪಿಹೋಗಿತ್ತು. ಹಾಗಾಗಿ ಊಟತಿಂಡಿಗಳೊಂದೂ ಇಲ್ಲದೆ ನಾನು ಬಹುದೂರ ಪಯಣಿಸಬೇಕಾಯಿತು. ಅನೇಕ ಮೈಲಿಗಳ ಕಾಲ ಆ ಆನೆಗಳ ಕಾಡಿನಲ್ಲಿ ನಾವು ಮುಂದುವರೆಯುವ ವೇಳೆಗೆ ಕತ್ತಲೆ ಕಾಲಿಟ್ಟಿತು. ಪಂಜುಗಳನ್ನು ಹಚ್ಚಲಾಯಿತು. ಆದರೆ ಮರಗಳ ಬೇರುಗಳು ನೆಲದ ಮೇಲೆ ಎಷ್ಟು ದಪ್ಪವಾಗಿ ಹಾಗೂ

1 Biographical Notes P - 47.

ಅಡ್ಡಡ್ಡವಾಗಿ ಚದುರಿದ್ದವೆಂದರೆ ಕುದುರೆಯ ಸವಾರಿ ಅಸಾಧ್ಯವಾಗಿತ್ತು. ನಾನೂ ನಡೆಯುತ್ತಾ ಕುದುರೆಯನ್ನೂ ನಡೆಸಿಕೊಂಡು ಹೋಗಬೇಕಾಯಿತು. ಅನೇಕ ಚಿಕ್ಕಪುಟ್ಟ ಆದಿವಾಸಿಗಳ ಹಟ್ಟಿಗಳನ್ನು ಹಾದು ನಾವು ಮಾರುಕಟ್ಟೆಯಿದ್ದ ಒಂದು ಗ್ರಾಮವನ್ನು ತಲುಪಿದೆವು. ಆ ಅಪವೇಳೆಯಲ್ಲಿ ನನಗೆ ತಿನ್ನಲು ಸಿಕ್ಕಿದ್ದು ಎರಡೇಎರಡು ಬಾಳೆಯಹಣ್ಣುಗಳಾದರೂ ಅವು ಉಡುಗಿ ಹೋಗಿದ್ದ ನನ್ನ ಚೈತನ್ಯವನ್ನು ಉತ್ತೇಜನಗೊಳಿಸಿದವು. ಆದರೆ ವಿಧಿಯ ಕೃಪೆಯೋ ಎಂಬಂತೆ ಅಲ್ಲಿನ ಮೋರಿಯೊಂದರಲ್ಲಿ ಗಂಗರ ಕಾಲದ ಅತ್ಯಂತ ಪ್ರಮುಖ ಶಾಸನವೊಂದು ನನ್ನ ಕಣ್ಣಿಗೆ ಬಿದ್ದಿತು. ಆ ಕಾರ್ಗತ್ತಲಿನಲ್ಲಿ ಅದು ಗಂಗರ ಶಾಸನ ಎಂದು ಪತ್ತೆಹಚ್ಚುವುದನ್ನು ಬಿಟ್ಟರೆ ಮತ್ತೇನೂ ಮಾಡುವಂತಿರಲಿಲ್ಲ. ಭಾರವಾದ ಹೆಜ್ಜೆಗಳಿಂದ ಅನೇಕ ಮೈಲಿಗಳ ದೂರ ನಡೆದು ನನ್ನ ಬಿಡದಿಯನ್ನು ತಲುಪಿ ಕ್ಯಾಂಪ್‌ಬೇರಿನ ಮೇಲೆ ಸಂಪೂರ್ಣವಾಗಿ ಬಸವಳಿದು ಬಿದ್ದೆ. ಕುಡಿಯಲು ಸ್ವಲ್ಪ ದೊರೆತ ಮೇಲೆ ನಿಧಾನವಾಗಿ ಚೇತರಿಸಿಕೊಂಡೆ."[1]

ಸರಣಿಯ ಶೀರ್ಷಿಕೆ :

ಮೈಸೂರು, ಕೊಡಗು ಮತ್ತು ಶ್ರವಣಬೆಳಗೊಳದ ಶಾಸನ ಸಂಪುಟಗಳನ್ನು ಕ್ರಮವಾಗಿ 'Mysore Inscriptions', 'Coorg Inscriptions' ಮತ್ತು 'Inscriptions at Sravanabelgola' ಎಂದು ಕರೆಯಲಾಗಿದೆ. ಆದರೆ ಮೈಸೂರು ಜಿಲ್ಲೆಯ ಸಂಪುಟದೊಂದಿಗೆ ಸಂಸ್ಥಾನದ ಎಲ್ಲ ಜಿಲ್ಲೆಗಳ ಶಾಸನಗಳನ್ನೂ ಪ್ರಕಟಿಸುವ ಯೋಜನೆ ಆರಂಭವಾದಾಗ ಇಡಿಯ ಸರಣಿಗೆ ಒಂದು ಹೆಸರನ್ನು ಇಡುವುದು ಆವಶ್ಯಕ ವಾಗಿತ್ತು. ಅದೇ ವೇಳೆಗೆ (1888) ಬ್ರಿಟಿಷ್ ಚಕ್ರಾಧಿಪತ್ಯವು ತನ್ನ ಪ್ರಕಟಣೆಯ ಶೀರ್ಷಿಕೆ ಯನ್ನು "Corpus Inscriptions Indicarum" ಎಂಬುದಕ್ಕೆ ಬದಲಾಗಿ "Epigraphia Indica" ಎಂದು ಬದಲಾಯಿಸಿದ್ದರಿಂದ ರೈಸ್ ಅದೇ ಧಾಟಿಯಲ್ಲಿ ಮೈಸೂರು ಸಂಸ್ಥಾನದ ಶಾಸನಗಳ ಸಂಪುಟಗಳ ಸರಣಿಗೆ 'Epigraphia Carnatica' ಎಂದು ನಾಮಕರಣ ಮಾಡಿದರು. ಹಾಗಾಗಿ 1894ರಿಂದ ಪ್ರಕಟವಾದ ಎಲ್ಲ ಸಂಪುಟಗಳ ಒಳಮುಖಪುಟದ ಮೇಲೆ ಈ ಶೀರ್ಷಿಕೆ ಕಾಣಸಿಗುತ್ತದೆ. ಅದಕ್ಕಿಂತಲೂ ಹಿಂದಿನ ಕೊಡಗು ಮತ್ತು ಶ್ರವಣ ಬೆಳಗೊಳದ ಸಂಚಿಕೆಗಳಲ್ಲಿ ಇದನ್ನು ಪ್ರತ್ಯೇಕವಾಗಿ ಮುದ್ರಿಸಿ ಅಂಟಿಸಲಾಗಿದೆ.

II. ಮುದ್ರಣ :

ಶಾಸನಸಂಪುಟಗಳ ಮುದ್ರಣ ಸಾಮಾನ್ಯ ಕೃತಿಗಳ ಮುದ್ರಣದಂತಲ್ಲ. ವಿವಿಧ ಗಾತ್ರದ ಅಕ್ಷರಗಳು, ಅನೇಕ ಸಂಕೇತಗಳು, ಕನ್ನಡ ತಮಿಳು ಮುಂತಾದ ಭಾಷೆಗಳ ಪಠ್ಯ ಇವೆಲ್ಲವುಗಳಿಂದಾಗಿ ಮುದ್ರಣ ಕಾರ್ಯ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ.

1 ಅಲ್ಲೇ. P. 49ರ ಭಾಗದ ಅನುವಾದ.

ಆದರೂ ರೈಸರು 20 ವರ್ಷಗಳ ಅವಧಿಯಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪುಟಗಳುಳ್ಳ 14 ಭಾಗಗಳ, ಹನ್ನೆರಡು ಸಂಪುಟಗಳನ್ನು ಹೊರತಂದಿದ್ದು ಹೇಗೆ ಎನ್ನುವುದರ ಬಗ್ಗೆ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಅಲ್ಲಲ್ಲಿ ಕೆಲವು ವಿವರಗಳಿವೆ. ಅದರ ಪ್ರಕಾರ ಆರಂಭದ ದಿನಗಳಲ್ಲಿ ಮುದ್ರಣ ಕಾರ್ಯ ಸಾಕಷ್ಟು ಚುರುಕಾಗಿ ನಡೆಯುತ್ತಿರಲಿಲ್ಲ. ಈ ಬಗ್ಗೆ 1886-87ರ ವಾರ್ಷಿಕ ವರದಿಯಲ್ಲಿ ಅವರು "There is a great delay in the press. Some better arrangements for printing are urgently needed" ಎಂದು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.[1]

ರೈಸರ ಈ ಅಭಿಪ್ರಾಯವನ್ನು ಪರಿಗಣಿಸಿದ ಸರ್ಕಾರವು ಮರುವರ್ಷವೇ ಸಂಪುಟಗಳ ಮುದ್ರಣದ ಕೆಲಸಕ್ಕೆಂದು ಹೆಚ್ಚುವರಿ ನೌಕರರನ್ನು ನೇಮಿಸಿತು.[2] ಅಷ್ಟಾದರೂ ಕೆಲಸ ತೃಪ್ತಿಕರವಾಗಿ ಆಗದಿದ್ದಾಗ ಮತ್ತೆ 1888-89ರ ವರದಿಯಲ್ಲಿ ಅವರು "The rate at which the press is working as regards archaeology is, however, very slow. No doubt the work is of a difficult nature, but an increase to the numbers of hands seems absolutely necessary to ensure more rapid progress" ತಮ್ಮ ಬೇಸರವನ್ನು ವ್ಯಕ್ತಪಡಿಸಬೇಕಾಯಿತು.[3]

ಈ ಮಧ್ಯೆ 'ಬಿಬ್ಲಿಯಾಥೆಕಾ ಕರ್ಣಾಟಿಕ' ಮಾಲೆಯ ಕೃತಿಗಳೂ ಹೊರಬರಲು ಆರಂಭಿಸಿದ್ದರಿಂದ ಸರ್ಕಾರಿ ಮುದ್ರಣಾಲಯ ಒಂದನ್ನೇ ನೆಚ್ಚಿಕೊಂಡು ಎಪಿಗ್ರಾಫಿಯಾ ಸಂಪುಟಗಳನ್ನು ಹೊರತರಲು ಸಾಧ್ಯವಿರಲಿಲ್ಲ. ಇದರೊಂದಿಗೆ ಎದುರಾದ ಮತ್ತೊಂದು ದೊಡ್ಡ ಸಮಸ್ಯೆಯೆಂದರೆ ಬೇರೆಬೇರೆ ಭಾಷೆಯ ಅಚ್ಚಿನ ಮೊಳೆಗಳನ್ನು ಜೋಡಿಸಲು ಸರ್ಕಾರಿ ಮುದ್ರಣಾಲಯದಲ್ಲಿದ್ದ ಅಸೌಕರ್ಯ. ಇಲ್ಲಿನ ಮುದ್ರಣಾಲಯದಲ್ಲಿ ಗ್ರಂಥ, ತಮಿಳು, ಅರಾಬಿಕ್ ಮತ್ತು ಪರ್ಷಿಯನ್ ಭಾಷೆಯನ್ನು ಮುದ್ರಿಸುವ ವ್ಯವಸ್ಥೆ ಇಲ್ಲದಿದ್ದುದರಿಂದ ಬೇರೆಯವರನ್ನು ಆಶ್ರಯಿಸುವುದು ಅನಿವಾರ್ಯವಾಯಿತು.

ಈ ಸಂದರ್ಭವನ್ನು ಬಳಸಿಕೊಂಡ ರೈಸರು ಮಂಗಳೂರು, ಮೈಸೂರು, ಬೆಂಗಳೂರು ಮತ್ತು ಮದ್ರಾಸುಗಳಲ್ಲಿನ ಖಾಸಗಿ ಮುದ್ರಣಾಲಯಗಳಲ್ಲಿ ಏಕಕಾಲಕ್ಕೆ ಶಾಸನಸಂಪುಟಗಳ ಭಾಗಗಳು ಮುದ್ರಣಗೊಳ್ಳುವ ವ್ಯವಸ್ಥೆ ಮಾಡಿದರು. 1891-92ರ ಸಾಲಿನಲ್ಲಿ ಹೀಗೆ ಮುದ್ರಿತವಾದ ಭಾಗಗಳ ಬಗ್ಗೆ ಅವರ ವಿವರಣೆ ಹೀಗಿದೆ :

> *".....The printing of inscriptions was actively carried on. Those of Mysore district are going through the*

1 A.R.A.D. P–4.

2 ಅಲ್ಲೇ., P–6.

3 ಅಲ್ಲೇ., P–11.

Government press; Hassan District is being printed at the Basel Mission Press, Mangalore; Kadur District in the Coxton press; Arabic and Persian, Grantha and Tamil inscriptions at the S.P.C.K. Press, Madras. Shimoga District is being commenced at the Government Branch Press, Mysore; and Bangalore District in the Vichara Darpana Press....." [1]

ಇದರೊಂದಿಗೆ ಕೋಲಾರ ಜಿಲ್ಲೆಯ ಶಾಸನಗಳನ್ನು ಬೆಂಗಳೂರಿನ ರುದ್ರಪ್ಪನವರ ಚಾಮುಂಡೇಶ್ವರಿ ಮುದ್ರಣಾಲಯದಲ್ಲಿ,[2] ಮತ್ತು ತುಮಕೂರು ಹಾಗೂ ಚಿತ್ರದುರ್ಗಗಳ ಸಂಪುಟಗಳನ್ನು ಭಾರತೀಭವನ ಮುದ್ರಣಾಲಯದಲ್ಲಿಯೂ ಅಚ್ಚು ಮಾಡಿಸಲಾಗಿದೆ.[3]

ಬೇರೆಬೇರೆ ಕಡೆಗಳಲ್ಲಿ ಏಕಕಾಲಕ್ಕೆ ಕೆಲಸ ನಡೆಯುತ್ತಿದ್ದುದರಿಂದ ಮುದ್ರಣದ ವೇಗ ಚುರುಕಾಯಿತು. ಹಾಗಾಗಿ 1893ರ ಮಾರ್ಚ್‌ನಲ್ಲಿ ಸಲ್ಲಿಸಲಾದ ವರದಿಯಿಂದ ಮೊದಲುಗೊಂಡು 1904ರವರೆಗೆ ಪ್ರತಿವರ್ಷವೂ ವಿವಿಧ ಮುದ್ರಣಾಲಯಗಳಲ್ಲಿ ಮುದ್ರಿತಗೊಂಡ ಒಟ್ಟು ಪುಟಗಳ ವಿವರಗಳನ್ನು ಕೋಷ್ಟಕದ ರೂಪದಲ್ಲಿ ಪ್ರಕಟಿಸುವ ಅಭ್ಯಾಸ ರೂಢಿಗೆ ಬಂದಿತು. ಅದರ ಮಾದರಿಗೆ 1895-96ರ ವರದಿಯ ಭಾಗ ಹೀಗಿದೆ :[4]

Vol.	District	No. of Inscriptions Printed	Kannada Pages	Roman Pages	Press
V	Hassan	510	456	80	Basel Mission Press, Mangalore.
VI	Kaduru	292	204	96	Coxton Press & Govt. Press, Bangalore.
VII	Shimoga Part I	345	300	12	Government Press, Mysore.
VII	Shimoga Part II	—	—	—	Government Press, Mysore.
IX	Bangalore	200	76	—	Vichara Darpana Press, Bangalore.
X	Kolar	249	60	—	Chamundeshwari Press, Bangalore.
XI	Chitradurga	79	48	—	Bharathi Bhavana Press, Bangalore.
XII	Tumkur	13	20	—	Bharathi Bhavana Press, Bangalore

1 ಅಲ್ಲೇ, ಪು.-27.
2 ಅಲ್ಲೇ, ಪು.-31.
3 ಅಲ್ಲೇ, ಪು.-39.
4 ಅಲ್ಲೇ, ಪು.-43.

ಈ ಖಾಸಗೀ ಮುದ್ರಣಾಲಯಗಳೂ ಸಾಕಷ್ಟು ಚುರುಕಾಗಿ ಕೆಲಸ ಮಾಡುತ್ತಿಲ್ಲವೆಂಬ ಅಸಮಾಧಾನವನ್ನು ಅವರು ಒಮ್ಮೆ ವ್ಯಕ್ತಪಡಿಸಿದ್ದಾರೆ.[1]

ಮುದ್ರಣದ ವೇಗವನ್ನು ವೃದ್ಧಿಸಿಕೊಳ್ಳುವ ಮೂಲಕ ಸಂಪುಟಗಳನ್ನು ಶೀಘ್ರವಾಗಿ ಹೊರತರುವ ರೈಸರ ಯೋಜನೆಗೆ ಅಡ್ಡಗಾಲು ಹಾಕಿದ್ದು 1898ರ ಸುಮಾರಿಗೆ ಸಂಸ್ಥಾನದಾದ್ಯಂತ ಹರಡಿದ ಪ್ಲೇಗ್‌ನ ಹಾವಳಿ. ಇದರಿಂದಾಗಿ ಸರ್ಕಾರ ತನ್ನೆಲ್ಲ ಶಕ್ತಿಯನ್ನು ಪರಿಹಾರ ಕಾರ್ಯಗಳ ಕಡೆಗೆ ವಿನಿಯೋಗಿಸಿದ್ದರಿಂದ ಶಾಸನ ಸಂಪುಟಗಳ ಕೆಲಸ ಕುಂಠಿತವಾಯಿತು. ಈ ಬಗ್ಗೆ ರೈಸರು ನೀಡಿರುವ ವಿವರಗಳಿವು :

> *"..... ಪ್ರಸ್ತುತ ಶಾಸನ ಸಂಪುಟ (ಕಡೂರು) ಮತ್ತು ಅದರ ಜೊತೆಯ ಅನೇಕ ಸಂಪುಟಗಳ ಪ್ರಕಟಣೆಯ ಕಾರ್ಯ ಪ್ಲೇಗ್‌ನ ಕಾರಣದಿಂದಾಗಿ ಕುಂಠಿತ ವಾಗಿದೆ. 1898ರಲ್ಲಿ ಮೊತ್ತಮೊದಲ ಬಾರಿಗೆ ಕಾಣಿಸಿಕೊಂಡ ಈ ಜಾಡ್ಯ ಪದೇ ಪದೇ ಮರುಕಳಿಸುತ್ತಲೇ ಇದೆ. ಇದರಿಂದಾಗಿ ಕಛೇರಿಯ ಮತ್ತು ಮುದ್ರಣ ಕಾರ್ಯಕ್ಕೆ ಉಂಟಾಗಿರುವ ತೊಂದರೆ ಎದೆಗೆಡಿಸುವಂತಹುದು. ಅದೃಷ್ಟದ ಸಂಗತಿಯೆಂದರೆ ಈ ಪ್ರಾಣಾಂತಿಕವಾದ ವ್ಯಾಧಿ ವ್ಯಾಪಿಸುವ ಮುನ್ನವೇ ನಾನು ಕ್ಷೇತ್ರಕಾರ್ಯದ ಕೆಲಸವನ್ನೆಲ್ಲ ಮುಗಿಸಿ ಆಗಿತ್ತು. ಇಲ್ಲದಿದ್ದರೆ ಶಾಸನಗಳನ್ನು ಪ್ರತಿಮಾಡಿಕೊಳ್ಳುವ ಸಲುವಾಗಿ ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿ ಸಂಚರಿಸುವುದು ಸಾಧ್ಯವೇ ಇರಲಿಲ್ಲ....."*[2]

1903ರ ವೇಳೆಗೆ ಕಡೆಯ ಸಂಪುಟದ ಲೇಖನ ಕಾರ್ಯ ಮುಗಿದು ಕೇವಲ ಮುದ್ರಣದ ಕಾರ್ಯವಷ್ಟೇ ಉಳಿದಾಗ ರೈಸ್ ಸಮಾಧಾನದ ಮನಸ್ಸಿನಿಂದ ವರದಿಯಲ್ಲಿ ಈ ಮಾತುಗಳನ್ನು ಬರೆದಿದ್ದಾರೆ:

> *"..... ಈಗ ಹಸ್ತಪ್ರತಿಯು ಮುದ್ರಣಕ್ಕೆ ಸಿದ್ಧವಾಗಿದ್ದು ಸರಣಿಯು ಸಂಪೂರ್ಣ ಗೊಳ್ಳುವುದು ಮುದ್ರಣಾಲಯಗಳ ಕೆಲಸದ ವೇಗ ವನ್ನಷ್ಟೇ ಅವಲಂಬಿಸಿದೆ. ಈ ಸರಣಿಯು ಪರಿಪೂರ್ಣವಾದಾಗ ಭಾರತದ ಯಾವ ಪ್ರಾಂತ್ಯವೂ ತನ್ನಲ್ಲಿದೆ ಎಂದು ಹೇಳಿಕೊಳ್ಳ*

---

1 ಅಲ್ಲೇ, ಪು.-58.

2 EC. VI., Prefaceನ ಭಾಗದ ಅನುವಾದ.

ಲಾರದಷ್ಟು ಚರಿತ್ರೆಯ ವಿವಿಧ ಕಾಲಘಟ್ಟಗಳ ಅಧಿಕೃತ ದಾಖಲೆ ಗಳನ್ನು ಮೈಸೂರು ಸಂಸ್ಥಾನವು ಹೊಂದಿರುತ್ತದೆ....'' [1]

1905ರಲ್ಲಿ ಸರಣಿಯಲ್ಲಿ 9ನೆಯದಾದ ಬೆಂಗಳೂರಿನ ಶಾಸನ ಸಂಪುಟವು ಪ್ರಕಟವಾಗುವುದರೊಂದಿಗೆ 'ಎಪಿಗ್ರಾಫಿಯ ಕರ್ನಾಟಿಕ' ಮಾಲೆಯ ಪ್ರಕಟಣೆ ಅಂತಿಮ ಘಟ್ಟವನ್ನು ಮುಟ್ಟಿತು. ಈ ಹಂತದಲ್ಲಿ ರೈಸರನ್ನು ಆವರಿಸಿದ ಕೃತಜ್ಞತಾ ಭಾವ ಅವರ ಮಾತುಗಳಲ್ಲಿ ಹೀಗೆ ಪ್ರತಿಬಿಂಬಿಸಿದೆ :

"ಸಾಂದರ್ಭಿಕ ಕಾರಣಗಳಿಂದಾಗಿ ಒಂಬತ್ತನೆಯದಾದ ಈ ಸಂಪುಟವು ಹನ್ನೆರಡು ಸಂಪುಟಗಳ ಸರಣಿಯಲ್ಲಿ ಕಡೆಯದಾಗಿ ಪ್ರಕಟವಾಗುತ್ತಿದೆ. ಈ ಹನ್ನೆರಡು ಸಂಪುಟಗಳಲ್ಲಿ ಒಟ್ಟು 8869 ಶಾಸನಗಳನ್ನು ಸ್ಥಳದಲ್ಲಿಯೇ ಪ್ರತಿ ಮಾಡಿಕೊಂಡು ಪ್ರಕಟಿಸಲಾಗಿದೆ ಮತ್ತು ಇಂತಹುದೊಂದು ಬೃಹತ್ ಕಾರ್ಯವನ್ನು ಅಂತಿಮ ಹಂತಕ್ಕೆ ತಲುಪಿಸಲು ನನಗೆ ನೀಡಿದ ಅವಕಾಶಕ್ಕಾಗಿ ಅನಂತ ಧನ್ಯವಾದಗಳನ್ನು ಅರ್ಪಿಸದಿರಲಾರೆ. ವಿವಿಧ ಜಿಲ್ಲೆಗಳ ಶಾಸನಗಳ ಪರಿವೀಕ್ಷಣೆಯು ನಿಜಕ್ಕೂ ಪ್ರಾಯೋಗಿಕವಾಗಿ ಬಹಳ ವ್ಯಾಪಕವಾದ ಕಾರ್ಯಾಚರಣೆಯಾಗಿದೆ.

ಪ್ರಸ್ತುತ ಕಾರ್ಯವನ್ನು ಮೊದಲಿಗೆ ಆರಂಭಿಸಿದಾಗ ನನಗಾಗಲೀ ಅಥವಾ ಸರ್ಕಾರಕ್ಕಾಗಲೀ ಕೆಲಸದ ಅಗಾಧತೆಯ ಅರಿವಾಗಲೀ ಅಥವಾ ಅದನ್ನು ಆರಂಭಿಸಬೇಕೇ ಬೇಡವೇ ಎಂಬ ಸಂದಿಗ್ಧವಾಗಲೀ ಇರಲಿಲ್ಲ. ಈಗ ಯೋಜನೆಯು ಸಂಪೂರ್ಣವಾಗಿ ಫಲಿತಾಂಶ ಇಷ್ಟು ಫಲಪ್ರದವಾಗಿರುವುದ ರಿಂದ ನಮ್ಮನ್ನು ನಾವೇ ಅಭಿನಂದಿಸಿಕೊಳ್ಳಬಹುದು. ಏಕೆಂದರೆ ಇದ ರಿಂದಾಗಿ ಸಂಸ್ಥಾನದ ಇತಿಹಾಸವು ಕ್ರಿ.ಪೂ. 3ನೇ ಶತಮಾನದಷ್ಟು ಹಿಂದಿ ನಿಂದ ಲಭ್ಯ ವಾದದ್ದು ಮಾತ್ರವಲ್ಲದೆ ಇಡಿಯ ಭಾರತೀಯ ಪುರಾತತ್ತ್ವ ಶೋಧನೆಯಲ್ಲಿ ಹೊಸದೊಂದು ಯುಗವೇ ಆರಂಭವಾಗಿದೆ.'' [2]


---

1 A.R.A.D. P–73ರ ಭಾಗದ ಅನುವಾದ.


2 E.C. IX, Prefaceನ ಭಾಗದ ಅನುವಾದ.



ಬೆಂಜಮಿನ್ ರೈಸ್ ದಂಪತಿಗಳು



ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ ರೈಸ್ ಸ್ಮಾರಕ ದೇವಾಲಯ



ಜಾರ್ಜ್ ಪೀಬಡಿ, ಲೂಯಿರೈಸರ ಮೊದಲ ಉದ್ಯೋಗದಾತ




ಜೆ. ಗ್ಯಾರೆಟ್, ರೈಸರನ್ನು ಭಾರತಕ್ಕೆ ಕರೆಸಿಕೊಂಡ ಶಿಕ್ಷಣಾಧಿಕಾರಿ




ಅಧಿಕಾರಿ



ಬೆಂಗಳೂರು ಹೈಸ್ಕೂಲು (ಈಗಿನ ಸೆಂಟ್ರಲ್ ಕಾಲೇಜು)



ಅಧ್ಯಯನಶೀಲ



ಕ್ಷೇತ್ರಕಾರ್ಯ ನಿರತ




ಪತ್ನಿ ಮೇರಿ ಸೋಫಿಯಾರೊಂದಿಗೆ



ಕುಟುಂಬದ ಸದಸ್ಯರೊಂದಿಗೆ



ಲೂಯಿರೈಸರ ಅಂತ್ಯಸಂಸ್ಕಾರ ನಡೆದ ಪಿನ್ನರ್ ರಸ್ತೆಯ ಸಮಾಧಿ ಸ್ಥಳ, ಹ್ಯಾರೋ




ಲೂಯಿ ರೈಸರ ಸಮಾಧಿ (ಈಗ ಅಸ್ತಿತ್ವದಲ್ಲಿಲ್ಲ)




ಬೆಂಗಳೂರಿನಲ್ಲಿ ರೈಸರ ಮನೆ, ‘ಪೆನ್‌ರ್‍ಹ್ಯೂ’



ಲೂಯಿರೈಸರ ನಾಲ್ಕು ಮತ್ತು ಐದನೇ ಪೀಳಿಗೆಯವರಾದ
ಡಗ್ಲಸ್ ರೈಸ್ ಹಾಗೂ ರಿಚರ್ಡ್ ರೈಸ್, ಲೇಖಕರೊಂದಿಗೆ



ಎಡ್ವರ್ಡ್ ಪೀಟರ್‌ರೈಸ್, ಲೂಯಿ ರೈಸರ ತಮ್ಮ



ಹೆರಾಲ್ಡ್ ಡಗ್ಲಸ್ ರೈಸರ ಮೇಲ್ವಿಚಾರಣೆಯಲ್ಲಿ ನಿರ್ಮಾಣಗೊಂಡ
ವಾಣಿವಿಲಾಸ ಸಾಗರ ಜಲಾಶಯ

ಈ ರೀತಿಯಾಗಿ ಪ್ರಕಟವಾದ ಎಪಿಗ್ರಾಫಿಯ ಸಂಪುಟಗಳ ಒಟ್ಟುನೋಟವಿದು.[1]

ಸಂಪುಟ	ಸ್ಥಳ/ಜಿಲ್ಲೆ	ಒಟ್ಟು ಶಾಸನಗಳು	ಪ್ರಕಟಿತ ವರ್ಷ
I	ಕೊಡಗು	23	1886
II	ಶ್ರವಣಬೆಳಗೊಳ	144	1889
III	ಮೈಸೂರು (1)	803	1894
IV	ಮೈಸೂರು (2)	964	1898
V	ಹಾಸನ	941	1902
VI	ಕಡೂರು	626	1901
VII	ಶಿವಮೊಗ್ಗ (1)	658	1902
VIII	ಶಿವಮೊಗ್ಗ (2)	938	1902
IX	ಬೆಂಗಳೂರು	1069	1905
X	ಕೋಲಾರ	1347	1905
XI	ಚಿತ್ರದುರ್ಗ	623	1902
XII	ತುಮಕೂರು	733	1904

ಈ ಸಂಪುಟಗಳ ಸಾಮಾನ್ಯ ರೂಪುರೇಷೆ ಹೀಗಿರುತ್ತದೆ :

ಎಪಿಗ್ರಾಫಿಯ ಸಂಪುಟಗಳ ಸಾಮಾನ್ಯ ರೂಪುರೇಷೆ

ಮೈಸೂರು ಸಂಸ್ಥಾನದ ಶಾಸನಗಳೆಲ್ಲವನ್ನೂ ಜಿಲ್ಲೆಗಳಿಗೆ ಅನುಗುಣವಾಗಿ ಪ್ರಕಟಿಸುವ ಯೋಜನೆಯಲ್ಲಿ ರೈಸರು ಹೊರತಂದಿರುವ ಸಂಪುಟಗಳ ಒಟ್ಟು ಸಂಖ್ಯೆ ಹತ್ತು. ಅದರೊಂದಿಗೆ ಕೊಡಗಿನ ಮತ್ತು ಶ್ರವಣಬೆಳಗೊಳದ ಶಾಸನಗಳನ್ನೊಳಗೊಂಡ ತಲಾ ಒಂದೊಂದು ಸಂಪುಟಗಳನ್ನು ಸೇರಿಸಿ ಎಲ್ಲ ಹನ್ನೆರಡು ಸಂಪುಟಗಳನ್ನು ಒಟ್ಟಾಗಿ 'ಎಪಿಗ್ರಾಫಿಯ ಕರ್ನಾಟಿಕ ಸಂಪುಟ'ಗಳೆಂದು ನಿರ್ದೇಶಿಸುವುದು ರೂಢಿ. ಮೊದಲೇ ಪ್ರಸ್ತಾಪಿಸಿದಂತೆ ಕೊಡಗಿನ ಸಂಪುಟವು ಬಹುಮಟ್ಟಿಗೆ 'Mysore Inscriptions' ಮಾದರಿಯಲ್ಲಿಯೇ ಸಿದ್ಧವಾಗಿದ್ದು ಸ್ವರೂಪದ ದೃಷ್ಟಿಯಿಂದ ಉಳಿದ ಹನ್ನೊಂದು ಸಂಪುಟಗಳಿಗಿಂತ ಭಿನ್ನವಾಗಿದೆ. ಉಳಿದ ಎಲ್ಲ ಸಂಪುಟಗಳ ಪ್ರಕಟಣೆಯಲ್ಲಿ ಒಂದು ನಿರ್ದಿಷ್ಟ ಮಾದರಿಯನ್ನು ಅನುಸರಿಸಲಾಗಿದೆ. ಅದರ ಸ್ವರೂಪವನ್ನು ಹೀಗೆ ಪಟ್ಟಿ ಮಾಡಬಹುದು :

1. ಮುನ್ನುಡಿ : ಪ್ರತಿಸಂಪುಟದ ಮೊದಲಿಗೆ ಒಂದೆರಡು ಪುಟಗಳ ಮುನ್ನುಡಿ (Preface) ಇರುವುದು ವಾಡಿಕೆ. ಇದರಲ್ಲಿ ಆಯಾ ಸಂಪುಟದ ಸಿದ್ಧತೆಗೆ ತಾವು ಪಟ್ಟ ಶ್ರಮ, ತಮಗೆ ಸಹಕಾರಿಗಳಾದ ಕೈಕೆಳಗಿನ ಅಧಿಕಾರಿಗಳ ವಿವರ, ಆಯಾ ಸಂಪುಟದಲ್ಲಿರುವ ಅತ್ಯಂತ ಪ್ರಮುಖವಾದ ಶಾಸನಗಳ ನಿರ್ದೇಶನ, ಮುಂತಾದ ವಿವರಗಳಿರುತ್ತವೆ.

1 Mysore & Coorg from Inscriptions, P-V.

ಹಾಸನ ಮತ್ತು ಕೋಲಾರ ಜಿಲ್ಲೆಯ ಶಾಸನಗಳು ತಲಾ ಎರಡೆರಡು ಸಂಪುಟಗಳಲ್ಲಿ ಮುದ್ರಿತವಾಗಿದ್ದರೂ ಇಂಗ್ಲಿಷ್ ಅನುವಾದ ಮತ್ತು ಲಿಪ್ಯಂತರವಿರುವ ಮೊದಲ ಭಾಗಗಳ ಆರಂಭದಲ್ಲಿ ಮಾತ್ರವೇ ಮುನ್ನುಡಿಗಳಿವೆ.

2. ಮುನ್ನುಡಿಯನಂತರ ಪ್ರತಿ ಸಂಪುಟದಲ್ಲಿಯೂ 'List of Illustrations' ಎಂಬ ಶೀರ್ಷಿಕೆಯಡಿಯಲ್ಲಿ ಆಯಾ ಸಂಪುಟದಲ್ಲಿ ಪ್ರಕಟವಾಗಿರುವ ಚಿತ್ರಗಳ ಪಟ್ಟಿಯನ್ನು ಕೊಟ್ಟಿದೆ.

3. ಪ್ರಸ್ತಾವನೆ : ಮುನ್ನುಡಿ ಮತ್ತು ಚಿತ್ರಗಳ ಪಟ್ಟಿಯನಂತರ ಬರುವುದೇ ಪ್ರಸ್ತಾವನೆ (Introduction). ಹತ್ತಾರು ಪುಟಗಳಷ್ಟು ವಿಸ್ತಾರವೂ ಅಡಿಟಿಪ್ಪಣಿ, ಉಲ್ಲೇಖನ ಮುಂತಾದವುಗಳಿಂದ ಒಡಗೂಡಿದುದೂ ಆದ ಈ ಪ್ರಸ್ತಾವನೆ ಇಡಿಯ ಸಂಪುಟದ ಸಾರ ಸಂಗ್ರಹವೆಂದರೆ ತಪ್ಪಿಲ್ಲ. ಪ್ರಸ್ತಾವನೆಯು ಒಳಗೊಳ್ಳುವ ಪ್ರಮುಖ ಅಂಶಗಳಿವು :

- ಇದರಲ್ಲಿ ಮೊದಲಿಗೆ ಆ ಜಿಲ್ಲೆಯಲ್ಲಿರುವ ಒಟ್ಟು ಶಾಸನಗಳನ್ನು ನಮೂದಿಸಲಾಗುತ್ತದೆ.
- ಅನಂತರ ಆಯಾ ಜಿಲ್ಲೆಯಲ್ಲಿ ಯಾವಯಾವ ರಾಜಮನೆತನಗಳ ಎಷ್ಟೆಷ್ಟು ಶಾಸನಗಳು ದೊರೆತಿವೆ ಎಂಬುದನ್ನು ಪಟ್ಟಿಮಾಡಲಾಗಿರುತ್ತದೆ. ಉದಾಹರಣೆಗೆ :

Mahavalis	26	AD	338 to 961
Gangas	70		360 to 1336
Kadambas	4		390 to 890
Chalukyas	2		640 to 757
Pallavas	77		733 to 1049
Kaduvetti	11		780 to 1297 ಇತ್ಯಾದಿ.[1]

- ಪಟ್ಟಿಯಲ್ಲಿ ನಮೂದಾಗಿರುವ ಕ್ರಮದಲ್ಲಿಯೇ ಒಂದೊಂದೇ ರಾಜವಂಶಗಳ ವಿವರಗಳನ್ನು ಮುಂದೆ ಪ್ರತ್ಯೇಕವಾಗಿ ಚರ್ಚಿಸಲಾಗುತ್ತದೆ. ಹಾಗೆ ಚರ್ಚಿಸುವಾಗ ಪ್ರಧಾನವಾಗಿ ಆಯಾ ಜಿಲ್ಲೆಯಲ್ಲಿನ ಶಾಸನಗಳ ಮಾಹಿತಿಯನ್ನು ಬಳಸುವುದು ರೂಢಿ. ಅದರೊಂದಿಗೆ ಹಿಂದಿನ ಸಂಪುಟಗಳ ಶಾಸನಗಳ ವಿವರಗಳನ್ನು, ಅಪರೂಪವಾಗಿ ಮುಂದಿನ ಸಂಪುಟಗಳಲ್ಲಿ ಪ್ರಕಟವಾಗಲಿರುವವನ್ನೂ ಬಳಸಿಕೊಂಡಿರುವುದುಂಟು.
- ಶಾಸನಗಳನ್ನು ತಾಲ್ಲೂಕಿನ ಹ್ರಸ್ವಾಕ್ಷರಗಳು ಮತ್ತು ಅದರ ಕ್ರಮಸಂಖ್ಯೆಯೊಂದಿಗೆ ಸೂಚಿಸಲಾಗಿದೆ.
  ಉದಾ: Kl = ಕೋಲಾರ, Ml = ಮುಳಬಾಗಿಲು, ಇತ್ಯಾದಿ.

---
1 EC. X, P–I.

- ವಿಷಯದ ಪರ ಅಥವಾ ವಿರೋಧವಾಗಿ ಇತರ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹ್ರಸ್ವವಾಗಿದ್ದರೆ ಅದನ್ನು ನಿರೂಪಣೆಯ ಮುಖ್ಯ ಭಾಗ ದಲ್ಲಿಯೂ, ದೀರ್ಘವಾಗಿದ್ದಲ್ಲಿ ಅಡಿಟಿಪ್ಪಣಿಗಳಲ್ಲಿಯೂ ನಮೂದಿಸಿ ಅವು ಗಳಿಗೆ ಪ್ರತಿಯಾಗಿ ತಮ್ಮ ಅಭಿಪ್ರಾಯವನ್ನೂ ರೈಸ್ ಅಲ್ಲಿಯೇ ಸೂಚಿಸಿದ್ದಾರೆ.
- ಅಪರೂಪದ ಸಂದರ್ಭಗಳಲ್ಲಿ ಇತರ ಬರಹಗಳು ಅಥವಾ ಹಿಂದಿನ ಸಂಪುಟಗಳ ಪ್ರಸ್ತಾವನೆಯಲ್ಲಿ ಚರ್ಚಿಸಲಾದ ಸಂಗತಿಗಳ ಬಗೆಗೆ ಬೇರೆ ವಿದ್ವಾಂಸರು ಅನಂತರ ಪ್ರಕಟಿಸಿದ ಅಭಿಪ್ರಾಯಗಳಿಗೆ ಉತ್ತರವನ್ನು ನೀಡಲು ಅನಂತರದ ಸಂಪುಟಗಳ ಪ್ರಸ್ತಾವನೆಯನ್ನು ಬಳಸಿಕೊಂಡದ್ದಿದೆ.

  ಉದಾಹರಣೆಗೆ: ಗಂಗರ ತಾಮ್ರಪಟಗಳನ್ನು ಕುರಿತಂತೆ ಫ್ಲೀಟರು ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯ ಇಂಡಿಕ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಪಡಿಸಿ ರುವ ಅಭಿಪ್ರಾಯಗಳಿಗೆ ಕಡೂರಿನ ಶಾಸನ ಸಂಪುಟ (ಸಂಖ್ಯೆ 6)ದಲ್ಲಿ, ಭದ್ರಬಾಹು ಮತ್ತು ಚಂದ್ರಗುಪ್ತರ ಬಗೆಗಿನ ಅವರ ಟೀಕೆಗೆ ಮೈಸೂರಿನ ಸಂಪುಟ (ಸಂಖ್ಯೆ 3)ದಲ್ಲಿ ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ.
- ಕೆಲವು ಸಂಪುಟಗಳ ಪ್ರಸ್ತಾವನೆಯ ಕೊನೆಯಲ್ಲಿ ಆಯಾ ಜಿಲ್ಲೆಯ ವಾಸ್ತುಶಿಲ್ಪ ವನ್ನು ಕುರಿತಾದ ಒಂದೆರಡು ಪುಟಗಳ ಮಾಹಿತಿ ಇದೆ.

4. ಪ್ರಸ್ತಾವನೆಯನಂತರ 'Classified list of the Inscriptions, arranged in chronological order' ಎಂಬ ಶೀರ್ಷಿಕೆಯಲ್ಲಿ ಶಾಸನಗಳನ್ನು ಹಾಕಿಸಿದ ರಾಜವಂಶ, ಅದನ್ನು ಹೊರಡಿಸಿದ ರಾಜ, ಲಭ್ಯವಾದ ತಾಲ್ಲೂಕು, ಶಾಸನದ ಕ್ರಮಸಂಖ್ಯೆ - ಈ ಕ್ರಮ ದಲ್ಲಿ ಪಟ್ಟಿ ಮಾಡಲಾಗಿದೆ. ನಿದರ್ಶನಕ್ಕೆ :

Date A. D	Name of Ruler	Taluq No.		Date A. D.	Name of Ruler	Taluq No.	
? 1747	Tirumalappa-Nâyini	Sp	80	? 1752	Râma-Nâyini	Sp	49
? c 1750	...	"	48	1755	Venkatappa-Nâyini	"	102
1751	Râmappa-Nâyini	"	72	1767	...	"	76
1751	"	"	73				
			Kottapâḷya.				
1735	...	Sp	110	? 1764	Nârasimha-Nâyini	Sp	84
c 1750	Kadirappa-Nâyini	"	83	1776	Rangappa- "	Ct	1
	Bâlapâḍi				Iṭikodurga.		
1765	Râmappa-Nâyini	Sp	107	1770	Ismâl-sâhêb	Bg	52
			Halakûr.				
1793	Mîr Husên	Gd	43	1798	Mîr Husên	Gd	44
			Mysore.				
1786	Ṭîpu Sultân	Kl	119	1798	Ṭîpu Sultân	Gd	44

5. ಶಾಸನಗಳ ಜೋಡಣೆ : ಪ್ರತಿಸಂಪುಟದಲ್ಲಿಯೂ ಶಾಸನಗಳನ್ನು (ಅ) ರೋಮನ್ ಲಿಪ್ಯಂತರ, (ಆ) ಆಂಗ್ಲ ಭಾಷಾಂತರ ಮತ್ತು (ಇ) ಮೂಲಪಾಠ - ಈ ಕ್ರಮದಲ್ಲಿ ಜೋಡಿಸಲಾಗಿದೆ. ಅವು ಪ್ರತಿಯೊಂದರ ಸ್ವರೂಪ ಹೀಗಿದೆ :

ಅ) *ರೋಮನ್ ಲಿಪ್ಯಂತರ :* ಇದು ಮೂಲಪಾಠದ ತದ್ವತ್ ಲಿಪ್ಯಂತರವಾಗಿರುತ್ತದೆ. ವಾಕ್ಯ ರಚನೆ, ವ್ಯಾಕರಣ, ಕಾಗುಣಿತ ಮುಂತಾದ ಯಾವ ಭಾಗದಲ್ಲಿ ತಪ್ಪಿದ್ದರೂ ಅದನ್ನು ತಿದ್ದಲು ಯತ್ನಿಸದೆ, ತ್ರುಟಿತವಾದ ಭಾಗಗಳಲ್ಲಿ ಊಹಾ ಪಾಠವನ್ನು ಸೂಚಿಸದೆ ಮೂಲದಲ್ಲಿ ಹೇಗಿದೆಯೋ ಹಾಗೆಯೇ ಪಾಠವನ್ನು ಮುದ್ರಿಸಲಾಗಿದೆ.

ಮೊದಲಿಗೆ ಶಾಸನದ ಮೇಲ್ಭಾಗದಲ್ಲಿ ಮಧ್ಯಕ್ಕೆ ಬರುವಂತೆ ಕ್ರಮಸಂಖ್ಯೆಯನ್ನು ಸೂಚಿಸುವುದು; ಮುಂದಿನ ಸಾಲಿನಲ್ಲಿ ದಪ್ಪಅಕ್ಷರಗಳಲ್ಲಿ ಹಳ್ಳಿಯ ಹೆಸರು, ಹೋಬಳಿ, ಶಾಸನ ದೊರೆತ ಸ್ಥಳ - ಇವುಗಳನ್ನು ಮುದ್ರಿಸುವುದು; ಶಾಸನದ ಭಾಷೆ ಮತ್ತು ಲಿಪಿಗಳು ಕನ್ನಡಕ್ಕಿಂತ ಭಿನ್ನವಾದರೆ ಅವುಗಳನ್ನು ಮುಂದಿನ ಸಾಲಿನಲ್ಲಿ ಕಂಸದಲ್ಲಿ ಸೂಚಿಸುವುದು; ಅನಂತರ ಶಾಸನ ಪಾಠವನ್ನು ಉಚ್ಚಾರಚಿಹ್ನೆ (Diacritical marks)ಗಳ ಸಮೇತ ನೀಡುವುದು - ಇದು ರೈಸರು ಅನುಸರಿಸಿರುವ ಕ್ರಮ. ಅಪರೂಪಕ್ಕೆ ಅಡಿಟಿಪ್ಪಣಿಯಲ್ಲಿ ಸಂಪಾದಕೀಯ ಸೂಚನೆಗಳು ಇರುವುದುಂಟು. ಲಿಪ್ಯಂತರದ ಮಾದರಿಯೊಂದು ಹೀಗಿದೆ[1] :

At Tirumalakuppe (same hobli), on a stone in kodige-field, north of the village.

svasti srî vijayâbhyudaya-Sâlivâhana-śakâbdâḥ 1668 nê Akshaya-saṁvatsara-Jêshṭa-śu 7 llu śrimatu Vakkalêri Channappaiahvaru Dyâvarapa-gauḍage hâki koṭa surage-mânya-śâsana Kôḷâla-râjadhânigo saluva Vakkalêri-hôbaḷi-voḷagaṇa Tirumalakupa-grâma koḍagi-mânya-hola 3 mûgaḷa gade 3 mûgaḷa yi-prakâra putra-pautra-pâramparavu anubhavisikoṇḍu yiruvadu

ಆ) *ಭಾಷಾಂತರ :* ರೋಮನ್ ಲಿಪ್ಯಂತರದನಂತರ ಭಾಷಾಂತರದ ಭಾಗವಿರುತ್ತದೆ. ಇದರಲ್ಲಿ ಮೊದಲಿಗೆ ಕ್ರಮಸಂಖ್ಯೆ ಮುಂದಿನ ಸಾಲಿನಲ್ಲಿ ಶಾಸನದ ಕಾಲವನ್ನು ಕ್ರಿ.ಶ.ದಲ್ಲಿ ಸೂಚಿಸಲಾಗಿದೆ. ಶಾಸನದ ಪ್ರತಿ ಅಕ್ಷರವನ್ನೂ ಅನುವಾದಿಸುವುದರ ಬದಲಾಗಿ ಅದರ ಸಾರಾಂಶ ತಿಳಿಯುವಂತೆ ಪ್ರಮುಖ ಭಾಗಗಳನ್ನು ಮಾತ್ರ ಅನುವಾದಿಸಲಾಗಿದೆ. ಹಾಗಾಗಿ ಇದು ಭಾಷಾಂತರವೂ

1 EC X. Kl 3.

ಹೌದು, ಸಾರಾಂಶವೂ ಹೌದು. ಹಲವಾರು ಶಾಸನಗಳಲ್ಲಿ ಕಂಡುಬರುವ ದೇವತಾ ಪ್ರಾರ್ಥನೆಯ ಮತ್ತು ಶಾಪಾಶಯದ ಭಾಗಗಳು, ದಾನಶಾಸನ ಗಳಲ್ಲಿನ ಭೂಮಿಯ ಉದ್ದಗಳು ಮುಂತಾದವನ್ನು usual final imprecatory sentence, on the date specified, land specified ಮುಂತಾದ ನಿರ್ದೇಶನಗಳನ್ನು ಕಂಸಗಳಲ್ಲಿ ಕೊಡುವುದರ ಮೂಲಕ ಸೂಚಿಸ ಲಾಗಿದೆ. ಮುಖ್ಯ ಪಾಠದಂತೆಯೇ ಇಲ್ಲಿಯೂ ಅಸ್ಪಷ್ಟ ಭಾಗಗಳನ್ನು ಚುಕ್ಕಿ ಗಳಿಂದ ಗುರುತಿಸಿದೆ.

ಇ) ಮೂಲಪಠ್ಯ :

★ ಕನ್ನಡ, ತಮಿಳು, ಉರ್ದು ಮುಂತಾದ ಭಾಷೆಗಳ ಶಾಸನಗಳನ್ನು ಒಂದೊಂದು ಗುಂಪಾಗಿ ವಿಂಗಡಿಸಿದೆ.

★ ಶಾಸನಗಳನ್ನು ತಾಲ್ಲೂಕುವಾರಾಗಿ ಜೋಡಿಸಿ ಅವುಗಳ ಹೆಸರು ಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಸೂಚಿಸಿದೆ.

★ ಅನಂತರ ಶಾಸನಸಂಖ್ಯೆ, ಮುಂದಿನ ಸಾಲಿನಲ್ಲಿ ಅದು ಲಭ್ಯವಿರುವ ಸ್ಥಳ, ಎರಡನ್ನೂ ನಮೂದಿಸಿದೆ. ಒಂದೇ ಸ್ಥಳದಲ್ಲಿ ಅನೇಕ ಶಾಸನಗಳು ಸಿಕ್ಕಿದ್ದರೆ 'ಅದೇ ಸ್ಥಳದ', 'ಅದೇ ಸ್ಥಳದಲ್ಲಿ' ಎಂಬ ಸೂಚನೆ ಇದೆ.

ಉದಾ: 1. ಮುಳಬಾಗಲಿನಲ್ಲಿ ಶ್ರೀಪಾದರಾಯರ ಮಠದಲ್ಲಿರುವ ತಾಮ್ರಶಾಸನ.

2. ಆವನಿ ಬೆಟ್ಟದಲ್ಲಿ ಏಕಾಂತ ರಾಮೇಶ್ವರ ದೇವಸ್ಥಾನದ ಬಾಗಿಲ ಸುತ್ತಲೂ ಬರೆದಿರುವುದು.

3. ಅದೇ ಬೆಟ್ಟದಲ್ಲಿ ಧನುಷ್ಕೋಟಿ ತೀರ್ಥದ ಉತ್ತರ ಕಡೆ ಬಂಡೆ ಮೇಲೆ ಇತ್ಯಾದಿ.

4. ಅದೇ ಸ್ಥಳದಲ್ಲಿ.

★ ಶಿಲಾಶಾಸನಗಳಾದರೆ ಅದರ ಉದ್ದಅಗಲಗಳನ್ನೂ, ತಾಮ್ರಶಾಸನ ಗಳಾದರೆ ಅದರಲ್ಲಿಯ ಹಾಳೆಗಳ ಸಂಖ್ಯೆ, ಮೊಹರಿನ ಚಿನ್ಹೆ, ಲಿಪಿ ಇತ್ಯಾದಿಗಳನ್ನೂ ಗುರುತಿಸಿದೆ.

ಉದಾ: 1. ಶಿಲಾಶಾಸನ : *ಪ್ರಮಾಣ 3' 6" × 2' 4"*

2. ತಾಮ್ರಶಾಸನ : *2 ಪತ್ರಗಳು - ನಾಗರಾಕ್ಷರ - ವರಾಹ ಮೊಹರು* ಮುಂತಾಗಿ.

★ ಶಾಸನವು ಕನ್ನಡ ಅಥವಾ ತೆಲುಗು ಲಿಪಿಯಲ್ಲಿ ಇರದೆ ಬೇರೆ ಲಿಪಿಯಲ್ಲಿ ಇದ್ದರೆ ಅದನ್ನು ಕನ್ನಡ ವಿಭಾಗದಲ್ಲಿ 'ಗ್ರಂಥ ಮತ್ತು ಅರವ ಅಕ್ಷರಗಳು', 'ಫಾರ್ಶಿ ಅಕ್ಷರ' ಮುಂತಾದ ಸೂಚನೆಗಳನ್ನು ಕೊಟ್ಟು ತಮಿಳು ಶಾಸನಗಳನ್ನು ಪ್ರತ್ಯೇಕ ವಿಭಾಗದಲ್ಲಿ, ಉಳಿದವನ್ನು ಲಿಪ್ಯಂತರ ವಿಭಾಗದಲ್ಲೂ ಪ್ರಕಟಿಸಿದೆ.

★ ಸಾಧ್ಯವಾದಷ್ಟೂ ಮಟ್ಟಿಗೆ ಶಾಸನಗಳು ಲಭ್ಯವಿರುವ ರೀತಿಯಲ್ಲಿಯೇ ಅವುಗಳನ್ನು ಮುದ್ರಿಸಲಾಗಿದೆ. ತಾಮ್ರಶಾಸನಗಳ ಬದಿಗಳನ್ನು '೧ನೇ ಪತ್ರದ ಮುಂಭಾಗ', '೨ನೇ ಪತ್ರದ ಹಿಂಭಾಗ' ಮುಂತಾಗಿ ಸೂಚಿಸಿದೆ. ಯಾವ ವಿಭಜನೆಯೂ ಇರದೆ ಎಡದಿಂದ ಬಲಕ್ಕೆ ನೇರವಾಗಿ ಬರೆಯಲಾದ ಶಿಲಾಶಾಸನಗಳನ್ನು ಅದೇ ರೀತಿಯಲ್ಲಿ ಮುದ್ರಿಸಿದೆ. ಶಾಸನಗಳನ್ನು ಉದ್ದನೆಯ ಎರಡು ಭಾಗಗಳಲ್ಲಿ ಬರೆಯಲಾಗಿದ್ದರೆ ಒಂದು ಉದ್ದದ ಮಧ್ಯದ ಗೆರೆಯ ಮೂಲಕ ಆ ಪ್ರತ್ಯೇಕತೆಯನ್ನು ತೋರಿಸಿದೆ.

★ ಪ್ರತಿಸಾಲಿಗೆ ಕ್ರಮಾಂಕವನ್ನು ನೀಡುವ ಮೂಲಕ ಶಾಸನ ಪಠ್ಯದ ಹರಿವನ್ನು ಸೂಚಿಸ ಲಾಗಿದೆ.

★ ಬಹುತೇಕ ಕಡೆ ಊಹಾಪಾಠ, ಸಂಪಾದಕೀಯ ಸೇರ್ಪಡೆ ಇತ್ಯಾದಿಯಾದ ಯಾವ ವಿವರಗಳನ್ನೂ ಸೇರಿಸದೆ ಕೇವಲ ಸ್ಪಷ್ಟವಾದ ಅಕ್ಷರಗಳನ್ನು ಮಾತ್ರ ಇಲ್ಲಿ ಪ್ರತಿಮಾಡಲಾಗಿದೆ. ತೀರಾ ಅಪರೂಪವಾಗಿ ಊಹಾಪಾಠವನ್ನು ಚೌಕಕಂಸದಲ್ಲಿ ಸೂಚಿಸಿದೆ. ಅಸ್ಪಷ್ಟ ಅಕ್ಷರಗಳನ್ನು ಎಂದಿನಂತೆ ಚುಕ್ಕೆಗಳಿಂದ ಗುರುತುಮಾಡಿದೆ. ಶಾಸನಪಾಠ ಸರಿಯಾಗಿ ಕಾಣದಿದ್ದ ಕಡೆಗಳಲ್ಲಿ 'ಮುಂದೆ ಅಸ್ಪಷ್ಟವಾಗಿದೆ' ಎಂಬ ಸೂಚನೆಯನ್ನು ಕಂಸಗಳಲ್ಲಿ ಕೊಟ್ಟಿದೆ.

★ ಅಪರೂಪದ ಸಂದರ್ಭಗಳಲ್ಲಿ ಅಡಿಟಿಪ್ಪಣಿಯಲ್ಲಿ ಸಂಪಾದಕೀಯ ಸೂಚನೆಗಳನ್ನು ನೀಡಿದೆ.

6. ಅನುಬಂಧಗಳು : ಪ್ರತಿಸಂಪುಟದ ಕೊನೆಯಲ್ಲಿ ತಪ್ಪೋಲೆ, ಊರು ಮತ್ತು ಹಳ್ಳಿಗಳ ಅಕಾರಾದಿ, ಪ್ರಸ್ತಾವನೆಯಲ್ಲಿ ಸೂಚಿತವಾಗಿರುವ ಮುಖ್ಯ ವ್ಯಕ್ತಿ-ಸ್ಥಳ ಅಥವಾ ವಂಶಗಳ ಹೆಸರಿನ ಸೂಚಿ, ಮತ್ತು ಕಡೆಯಲ್ಲಿ ಇದೇ ಲೇಖಕರ ಇತರ ಕೃತಿಗಳ ಪಟ್ಟಿ ಮತ್ತು ಅದಕ್ಕೆ ಸಂಬಂಧಿಸಿದಂತೆ ವಿವಿಧ ವ್ಯಕ್ತಿ ಅಥವಾ ಪತ್ರಿಕೆಗಳು ವ್ಯಕ್ತಪಡಿಸಿರುವ ಅಭಿಪ್ರಾಯ - ಇವಿಷ್ಟನ್ನೂ ಆಂಗ್ಲ ಭಾಷೆಯಲ್ಲಿ ನೀಡಿದೆ. ಈ ವಿಧಾನದಲ್ಲಿ ವಿನ್ಯಾಸಗೊಂಡಿರುವ ಎಪಿಗ್ರಾಫಿಯಾ ಕರ್ಣಾಟಿಕದ ಪ್ರತಿಯೊಂದು ಸಂಪುಟದ ವಿವರಗಳನ್ನು ಮುಂದೆ ಸ್ಥೂಲವಾಗಿ ಪರಿಚಯಿಸಿದೆ :

ಜಿಲ್ಲಾವಾರು ಸಂಪುಟ ಸಮೀಕ್ಷೆ :

ಸಂಪುಟ-1 : ಕೊಡಗು

'ಎಪಿಗ್ರಾಫಿಯ ಕರ್ನಾಟಿಕ' ಮಾಲೆಯ ಮೊತ್ತಮೊದಲ ಸಂಪುಟವೆಂದು ಪರಿಗಣಿತವಾಗಿರುವ ಈ ಸಂಪುಟ 'Coorg Inscriptions' ಎಂದೇ ಪ್ರಖ್ಯಾತ.[1] ಈ ಮೊದಲೇ ಪ್ರಸ್ತಾಪಿಸಿರುವಂತೆ ಮೊದಲ ಮುದ್ರಣದ ಪ್ರತಿಗಳ ಒಳಮುಖಪುಟದಲ್ಲಿ 'EPIGRAPHIA CARNATICA VOL.-1' ಎಂದು ಪ್ರತ್ಯೇಕವಾದ ಪಟ್ಟಿಯನ್ನು ಕೆಂಪುಬಣ್ಣದಲ್ಲಿ ಮುದ್ರಿಸಿ ಅಂಟಿಸಲಾಗಿದೆ. 1886ರಲ್ಲಿ ಮೊತ್ತಮೊದಲಿಗೆ ಪ್ರಕಟವಾದ 36 ಪುಟಗಳ ಈ ಕೃತಿಯಲ್ಲಿ 23 ಶಾಸನಗಳ ಭಾಷಾಂತರ ಮತ್ತು ಲಿಪ್ಯಂತರಗಳು ಪ್ರಕಟವಾಗಿವೆ. ಸಾಮಾನ್ಯವಾಗಿ ಪ್ರತಿಸಂಪುಟದ ಮುಖಪುಟದಲ್ಲಿ '......ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು' ಎಂಬ ಶೀರ್ಷಿಕೆಯೂ, ಒಳಪುಟಗಳಲ್ಲಿ ಕನ್ನಡ, ತಮಿಳು, ಉರ್ದು ಮುಂತಾದ ಶಾಸನಗಳ ಮೂಲಪಾಠಗಳು ಆಯಾ ಲಿಪಿಯಲ್ಲಿಯೇ ಮುದ್ರಿತವಾಗಿರುವುದು ವಾಡಿಕೆ. ಆದರೆ ಕೆಲವು ಶಾಸನಗಳ ಪಡಿಯಚ್ಚುಗಳನ್ನು ಬಿಟ್ಟರೆ ಈ ಸಂಪುಟದಲ್ಲಿ ಕನ್ನಡದ ಒಂದಕ್ಷರವೂ ಇಲ್ಲ. ಮೂಲಪಾಠಕ್ಕೆ ಬದಲಾಗಿ ಲಿಪ್ಯಂತರವನ್ನೇ ನೀಡಲಾಗಿದೆ.

ಇಲ್ಲಿಯ ಶಾಸನಗಳ ಬಗೆಗೆ ರೈಸರು ತಮ್ಮ ಮುನ್ನುಡಿಯಲ್ಲಿ ನೀಡಿರುವ ಮಾಹಿತಿ ಹೀಗಿದೆ :

> *"....1873ರಷ್ಟು ಹಿಂದೆಯೇ ಈ ಶಾಸನಗಳ ಪಟ್ಟಿಯನ್ನು ಸರ್ಕಾರವು ನನಗೆ ಕೊಟ್ಟು ಶಾಸನಗಳನ್ನು ಅನುವಾದಿಸಿ ಪ್ರಕಟಿಸಲು ಆದೇಶಿಸಿತ್ತು. ಆದರೆ ಇತರ ಅನೇಕ ಕೆಲಸಗಳ ಒತ್ತಡದಿಂದಾಗಿ ಇವುಗಳನ್ನು ಪ್ರಕಟಿಸಲಾಗಿರಲಿಲ್ಲ. ಕೊಡಗಿನ ಹಿಂದಿನ ಹಂಗಾಮಿ ಕಮೀಷನರ್ ಆಗಿದ್ದ ಕರ್ನಲ್ ಡಬ್ಲ್ಯೂ. ಹಿಲ್‌ರು ಇತ್ತೀಚೆಗೆ ಈ ಬಗ್ಗೆ ಪ್ರಸ್ತಾಪಿಸಿದ್ದರಿಂದ ಮತ್ತು ಶಾಸನಗಳ ಸಂಖ್ಯೆಯೂ ಹೆಚ್ಚಿಲ್ಲದಿದ್ದುದರಿಂದ ಅವೆಲ್ಲವನ್ನೂ ಒಟ್ಟಿಗೇ ಪ್ರಕಟಿಸಲಾಗಿದೆ".*

ಪ್ರಸ್ತುತ ಸಂಪುಟದಲ್ಲಿ 15 ಪುಟಗಳ ಪ್ರಸ್ತಾವನೆಯಿದ್ದು ಅದರಲ್ಲಿ ಲಭ್ಯಶಾಸನಗಳಲ್ಲಿನ ಮಾಹಿತಿಗಳ ಮತ್ತು ಇತರ ಮೂಲಗಳ ಆಧಾರದಿಂದ ಕೊಡಗಿನ ಇತಿಹಾಸವನ್ನು ನಿರೂಪಿಸಲಾಗಿದೆ. ಅಷ್ಟೇ ಅಲ್ಲದೆ 11 ಪುಟಗಳಲ್ಲಿ ಪ್ರತ್ಯೇಕವಾಗಿ ಗಂಗರ ಚರಿತ್ರೆ ಮತ್ತು ವಂಶವೃಕ್ಷವನ್ನು ನೀಡಲಾಗಿದೆ. ಗಂಗರನ್ನು ಕುರಿತಾದ ತಾಮ್ರಪಟಗಳಿಂದಾಗಿ ಉಂಟಾದ ವಿವಾದಗಳಿಗೆ ಪ್ರತ್ಯುತ್ತರ ರೂಪವಾಗಿ ಈ ಲೇಖನವನ್ನು ಇಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ ಲೇಖನವನ್ನು ರಚಿಸಲು ಕೇವಲ ಕೊಡಗಿನ ಶಾಸನಗಳನ್ನು ಮಾತ್ರವಲ್ಲದೆ ಗಂಗರ ಪ್ರಸ್ತಾಪ

1 ರೈಸರೂ ತಮ್ಮ ಮುಂದಿನ ಸಂಪುಟಗಳ ಅಡಿಟಿಪ್ಪಣಿಗಳಲ್ಲಿ ಈ ಹೆಸರಿನಿಂದಲೇ ಇದನ್ನು ನಿರ್ದೇಶಿಸಿದ್ದಾರೆ.

ವಿರುವ ಮಲ್ಲೋಹಳ್ಳಿ, ತಂಜಾವೂರು, ಹರಿಹರ, ಹೆಬ್ಬೂರು, ಸೇಲಂ, ನಾಗಮಂಗಲ, ನರಸಾಪುರ, ಚಿಕ್ಕಮಗಳೂರು, ಮುಂತಾದ ಅನೇಕ ಸ್ಥಳಗಳಲ್ಲಿನ ಶಾಸನಗಳ ಮಾಹಿತಿಯನ್ನೂ ಬಳಸಿಕೊಂಡಿರುವುದು ಇಲ್ಲಿಯ ವಿಶೇಷವಾಗಿದೆ.

ಶಾಸನಪ್ರಕಟಣೆಯ ಕ್ರಮ :

ಮೊದಲೇ ಉಲ್ಲೇಖಿಸಿದಂತೆ 'ಮೈಸೂರು ಇನ್ಸ್‌ಕ್ರಿಪ್ಷನ್ಸ್'ನಂತೆಯೇ ಇಲ್ಲಿಯೂ, 1) ಕ್ರಮಸಂಖ್ಯೆ, 2) ಶೀರ್ಷಿಕೆ, 3) ಕಾಲ - ಇವುಗಳನ್ನು ಮೊದಲ ಸಾಲಿನಲ್ಲಿಯೂ, ಎರಡನೇ ಸಾಲಿನಲ್ಲಿ ಶಾಸನದ ಉದ್ದಗಲದ ವಿವರಗಳೂ ಮತ್ತು ಮೂರನೇ ಸಾಲಿನಲ್ಲಿ ಲಿಪಿಯ ಸ್ವರೂಪವನ್ನೂ ಸೂಚಿಸಲಾಗಿದೆ.

ಮಾದರಿ :

1. COPPER PLATE INSCRIPTION AT MERCARA – DATE AD 466.
3 plates, 8 inches × 3.2 inches, 4 sides, seal an Elephant
Purvada Hale Kannada characters.*

ಅನಂತರ ಶಾಸನದ ಇಂಗ್ಲಿಷ್ ಅನುವಾದವನ್ನು ನೀಡಲಾಗಿದೆ.

ಮೈಸೂರಿನ ಶಾಸನ ಸಂಪುಟದಲ್ಲಿ ಇಲ್ಲಿಗೆ ಆ ಶಾಸನದ ವಿವರಗಳು ಮುಕ್ತಾಯವಾಗುತ್ತವೆ. ಆದರೆ ಇಲ್ಲಿ ಹೆಚ್ಚುವರಿಯಾಗಿ ಮೂರು ಅಂಶಗಳನ್ನು ಸೇರಿಸಲಾಗಿದೆ. ಅವೆಂದರೆ ಸ್ಥಳ ನಿರ್ದೇಶನ, ಲಿಪ್ಯಂತರ ಮತ್ತು ಪಡಿಯಚ್ಚುಗಳ ಹೆಚ್ಚಳ.

1) ಸ್ಥಳ ನಿರ್ದೇಶನ : ಶಾಸನದ ಶೀರ್ಷಿಕೆಯ ಕಡೆಯಲ್ಲಿ ನಕ್ಷತ್ರದ ಗುರುತನ್ನು ಮಾಡಿ ಅಡಿಟಿಪ್ಪಣಿಯಲ್ಲಿ ಆ ಶಾಸನವು ಪ್ರಸ್ತುತ ಲಭ್ಯವಿರುವ ಸ್ಥಳವನ್ನು ಮತ್ತು ಆ ಶಾಸನದ ಪಡಿಯಚ್ಚು ಈಗಾಗಲೇ ಬೇರೆಡೆ ಪ್ರಕಟವಾಗಿದ್ದರೆ ಅದರ ವಿವರಗಳನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟಿದೆ.

ನಿದರ್ಶನಕ್ಕೆ ಮೇಲಿನ ಶಾಸನದ ಲಭ್ಯತೆಯ ವಿವರದ ಅಡಿಟಿಪ್ಪಣಿ ಹೀಗಿದೆ :

In the Mercara Treasury. For Fac-simile see Ind. Ant. I 362.

2) ಲಿಪ್ಯಂತರ : ಇಂಗ್ಲಿಷ್ ಅನುವಾದದನಂತರ Text ಎಂಬ ಶೀರ್ಷಿಕೆಯಲ್ಲಿ ಕೆಲವು ಶಾಸನಗಳ ರೋಮನ್ ಲಿಪ್ಯಂತರವನ್ನು ನೀಡಲಾಗಿದೆ. "The text of this and all the inscriptions is published as it stands, without any corrections" ಎಂಬ ಸೂಚನೆಯು ಮೊದಲ ಶಾಸನಕ್ಕಿದೆ.

---

* Coorg. Ins. P-1.

ಈ ಸಂಪುಟದ ವಿಶೇಷವೆಂದರೆ ಶಾಸನಗಳ ಲಿಪ್ಯಂತರವು ಆಯಾ ಶಾಸನಗಳು ಇರುವ ರೂಪದಲ್ಲಿಯೇ ಮುದ್ರಿತವಾಗಿರುವುದು. ಅದರಲ್ಲಿಯೂ ವಿಶೇಷವಾಗಿ ತಾಮ್ರ ಶಾಸನಗಳಲ್ಲಿರುವ ರಂಧ್ರದ ಬಳಿಯ ಸ್ಥಳದ ಹತ್ತಿರದ ಅಕ್ಷರಗಳನ್ನು ಅದರಂತೆಯೇ ತೋರಿಸಲಾಗಿದೆ. ಪ್ರತಿಹಾಳೆಯ ಪ್ರತಿಸಾಲಿಗೂ ಕ್ರಮಸಂಖ್ಯೆಯನ್ನು ನೀಡಿದೆ.

3) ಪಡಿಯಚ್ಚು : ಅನೇಕ ಶಾಸನಗಳ ಪಡಿಯಚ್ಚುಗಳನ್ನು ಈ ಸಂಪುಟದಲ್ಲಿ ಸೇರಿಸಿದೆ. ಹಿಂದಿನ ಸಂಪುಟದಂತೆಯೇ ಶಾಸನದ ಶಿಲ್ಪಗಳನ್ನು Shanku, Lamp stand, Kalasa, Chamara, Elephant ಮುಂತಾದ ಹೆಸರುಗಳಿಂದ ಸೂಚಿಸಿದೆ.

ಈ ಸಂಪುಟವು ಅನೇಕ ಪ್ರಮುಖ ಶಾಸನಗಳನ್ನು ಒಳಗೊಂಡಿದೆ. ಮುಂದೆ ಕೃತಕ ತಾಮ್ರಪಟಗಳ ವಿವಾದಕ್ಕೆ ನಾಂದಿ ಹಾಡಿದ ಮಡಿಕೇರಿಯ ತಾಮ್ರಪಟ, ಪೆಣ್ಣೆಗಡಂಗದ ಸತ್ಯವಾಕ್ಯ ಜಿನಾಲಯಕ್ಕಾಗಿ ಶಿವನಂದಿ ಸಿದ್ಧಾಂತ ಭಟ್ಟಾರರ ಶಿಷ್ಯರಾದ ಸರ್ವನಂದಿದೇವರಿಗೆ ಸತ್ಯವಾಕ್ಯ ಕೊಂಗುಣಿವರ್ಮ ಧರ್ಮ ಮಹಾಧಿರಾಜ ಪೆರ್ಮಾನಡಿಯು ದತ್ತಿಕೊಟ್ಟ ಕ್ರಿ.ಶ. 888ರ ಬಿಳಿಯೂರಿನ ಶಾಸನ, ತನ್ನ ಸೋದರನಾದ ದುದ್ಧರಸನ ನೆನಪಿಗಾಗಿ ಜೂಜರಸನು ನಿಲ್ಲಿಸಿದ ಕ್ರಿ.ಶ. 1075ರ ಯೆಡೂರಿನ ವೀರಶಾಸನ, ಮಹಾ ಮಾಂಡಳೇಶ್ವರ ವೀರಚೋಳ ಕೊಂಗಾಳ್ವನ ಕ್ರಿ.ಶ. 1175ರ ನಂದಿಗುಂದ ಶಾಸನ ಮುಂತಾದವು ಹೆಸರಿಸಬಹುದಾದವು.

ಗಂಗವಂಶವನ್ನು ಕುರಿತಾದ ಹೆಚ್ಚಿನ ಮಾಹಿತಿ ಲಭ್ಯವಾದದ್ದು, ಕೊಡಗಿನಲ್ಲಿ ಜೈನ ಧರ್ಮದ ವ್ಯಾಪ್ತಿಯನ್ನು ಕುರಿತಾದ ವಿವರಗಳು ದೊರೆತದ್ದು, ಕದಂಬ, ಬಾಣ ಮುಂತಾದ ಪ್ರಾಚೀನ ರಾಜವಂಶಗಳಿಗೆ ಸಂಬಂಧಿಸಿದ ಅನೇಕ ಮಾಹಿತಿಗಳು ತಿಳಿದುಬಂದದ್ದು ಮುಂತಾದವು ಈ ಸಂಪುಟದಲ್ಲಿನ ಶಾಸನಗಳಿಂದ ಆಗುವ ಪ್ರಯೋಜನಗಳಾಗಿವೆ.

ಈ ಮೊದಲೇ ಉಲ್ಲೇಖಿಸಿದಂತೆ 1914ರಲ್ಲಿ ರೈಸರೇ ಹಿಂದೆ ತಾವು ಬೆಂಗಳೂರು ಮತ್ತು ತುಮಕೂರಿನ ಜಿಲ್ಲೆಗಳ ಸಂಪುಟಗಳಲ್ಲಿ ಅನುಬಂಧರೂಪದಲ್ಲಿ ಪ್ರಕಟಿಸಿದ ಕೊಡಗು ಜಿಲ್ಲೆಗೆ ಸೇರಿದ 52 ಹೆಚ್ಚುವರಿ ಶಾಸನಗಳನ್ನು ಈ ಸಂಪುಟಕ್ಕೆ ಸೇರಿಸಿ ಅದನ್ನು 'New Imperial Series'ನ 39ನೆಯ ಕೃತಿಯಾಗಿ ಪರಿಷ್ಕರಿಸಿದ್ದಾರೆ.

ಸಂಪುಟ-2 : ಶ್ರವಣಬೆಳಗೊಳ :

1889ರಲ್ಲಿ ಪ್ರಕಟವಾದ 'Inscriptions at Sravana Belgola' ಎಂಬ ಹೆಸರಿನ ಈ ಸಂಪುಟವು ರೈಸರ ಕೀರ್ತಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೇರಿಸಿದ ಕೃತಿಯಾಗಿದೆ.

ಜೈನರ ಪವಿತ್ರ ಕ್ಷೇತ್ರವಾದ ಶ್ರವಣಬೆಳಗೊಳದ ಶಾಸನಗಳನ್ನು ಅಭ್ಯಸಿಸುವ ಕಾರ್ಯವನ್ನು ರೈಸ್ 1870ರ ದಶಕದಲ್ಲಿಯೇ ಆರಂಭಿಸಿದ್ದರು. ಅದರ ಫಲವಾಗಿ ಈ

ಸಂಪುಟವು ಪ್ರಕಟವಾಗುವ ಮುನ್ನವೇ ಅಲ್ಲಿಯ ಶಾಸನಗಳನ್ನು ಕುರಿತಾದ ಮೂರು ಶಾಸನಗಳು 'ಇಂಡಿಯನ್ ಆ್ಯಂಟಿಕ್ವೆರಿ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅವೆಂದರೆ

1. Jaina Inscriptions at Sravana Belgola. (Vol. II, 1873)
2. Bhadra Bahu and Sravana Belghola (Vol. III, 1874)
3. A Jaina Vaishnava Compact (Vol. XIV, 1885)

ಇವುಗಳಲ್ಲಿ ಎರಡು 'Mysore Inscriptions' ನಲ್ಲಿಯೂ ಪ್ರಕಟವಾಗಿವೆ.[1]

ಶ್ರವಣಬೆಳಗೊಳದ ಶಾಸನಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೆ ತಾವು ಪಟ್ಟ ಕಷ್ಟವನ್ನು ರೈಸ್ 1873ರ ಇಂಡಿಯನ್ ಆಂಟಿಕ್ವೆರಿ ಸಂಪುಟದಲ್ಲಿ ವಿವರಿಸಿರುವುದನ್ನು ಇಲ್ಲಿ ಉದ್ಧರಿಸಬಹುದಾಗಿದೆ :

> *"........ಜೈನರ ಕ್ಷೇತ್ರವಾದ ಶ್ರವಣಬೆಳಗೊಳ ಎಂಬ ಹಳ್ಳಿಯಲ್ಲಿ ಗೊಮ್ಮಟೇಶ್ವರನ ಎತ್ತರವಾದ ಶಿಲ್ಪವಿರುವ ಚಂದ್ರಬೆಟ್ಟ ಎಂಬ ದೊಡ್ಡ ಬೆಟ್ಟದ ಎದುರಿಗಿರುವ ಇಂದ್ರಬೆಟ್ಟ ಎಂಬ ಹೆಸರಿನ ಚಿಕ್ಕಬೆಟ್ಟದ ಬಂಡೆಗಳ ಮೇಲೆ ಅನೇಕ ಶಾಸನಗಳನ್ನು ಕಲ್ಲಿನ ಮೇಲೆ ಕೊರೆಯಲಾಗಿದೆ..... ಈ ಶಾಸನಗಳು ಬಹುಪಾಲು ಮೂರು ಅಥವಾ ನಾಲ್ಕು ಸಾಲಿನ ಬರಹಗಳಾಗಿದ್ದು ಇವುಗಳನ್ನು ಚದುರಿಸಿದಂತೆ, ಎಲ್ಲೆಲ್ಲೋ ಕೊರೆಯಲಾಗಿದೆ. ಅಲ್ಲಿಯ ಮಠದ ವಿದ್ವಾಂಸರು ಈ ಶಾಸನಗಳ ಲಿಪಿಯನ್ನು ಓದಲಾರರು, ಅವುಗಳ ಅರ್ಥವನ್ನೂ ವಿವರಿಸಲಾರರು. ಅನೇಕ ಬಾರಿ ಪ್ರಯತ್ನಿಸಿದನಂತರ ಈ ಅಕ್ಷರಗಳನ್ನು ಓದುವ ವಿಧಾನವೊಂದು ನನಗೆ ಹೊಳೆಯಿತು. ಅಲ್ಲಿಯ ಅಕ್ಷರಗಳಲ್ಲಿ ಕೆಲವು ಈಗಿನ ಕನ್ನಡ ಅಕ್ಷರಗಳನ್ನು ಹೋಲುತ್ತವೆ. ಅವುಗಳನ್ನು ಮೂಲವಾಗಿಟ್ಟುಕೊಂಡು ಪ್ರಯತ್ನಿಸಿದಾಗ ಶಾಸನಗಳನ್ನು ಹಳೆಯ ಕನ್ನಡದಲ್ಲಿ ಬರೆದಿರುವುದು ಪತ್ತೆಯಾಯಿತು....."*[2]

ಕೇವಲ ಒಂದು ಬಾರಿಗೆ ಈ ಸಂಪ್ರತೀಕರಣ ಕಾರ್ಯ ಮುಗಿಯದೆ ಮತ್ತೆಮತ್ತೆ ತಾವು ಶ್ರವಣಬೆಳಗೊಳಕ್ಕೆ ಭೇಟಿಕೊಟ್ಟು ಶಾಸನಗಳನ್ನು ಪ್ರತಿಮಾಡಿಕೊಳ್ಳಬೇಕಾಗಿ ಬಂದ ಪರಿಸ್ಥಿತಿಯನ್ನು ಅವರೇ ಹೀಗೆ ವಿವರಿಸಿದ್ದಾರೆ :

> *"....ಶ್ರವಣಬೆಳಗೊಳದ ಅಸಂಖ್ಯಾತವಾದ ಮತ್ತು ಅತ್ಯಂತ ಕುತೂಹಲಕಾರಿಯಾದ ಶಾಸನಗಳ ಸಂಪೂರ್ಣ ಪಡಿಯಚ್ಚನ್ನು ಪಡೆಯಲು ಕೆಲವು ದಿನಗಳ ಕಾಲ ಅಲ್ಲಿಯೇ ಉಳಿಯಬೇಕಾದದ್ದು ನನಗೆ ಅನಿವಾರ್ಯವೆಂದು ಕಂಡುಬಂದಿತು. ಅಷ್ಟೇ ಅಲ್ಲದೆ ಜೈನ ವಿದ್ವಾಂಸರು ಮಾತ್ರವೇ ಬೆಳಕು ಚೆಲ್ಲಬಹುದಿದ್ದ ಹಲವಾರು ಅಂಶಗಳ ಬಗೆಗಿನ ವಿವರಣೆಯನ್ನೂ ನಾನು ಆ ಸ್ಥಳದಲ್ಲಿಯೇ*

1 ಶಾಸನ ಸಂಖ್ಯೆ 161 ಮತ್ತು 162.

2 Ind. Ant. Vol-2, P. 266ನಲ್ಲಿಯ ಭಾಗದ ಅನುವಾದ.

ಪಡೆದುಕೊಳ್ಳಬೇಕಿತ್ತು. ಮೊದಲು ನನಗೆ ಒದಗಿಸಲಾಗಿದ್ದ ಶಾಸನಗಳ ಪಡಿಯಚ್ಚುಗಳು ಅತ್ಯಂತ ಶ್ರಮವಹಿಸಿ ತೆಗೆದವಾಗಿದ್ದರೂ ಅವುಗಳನ್ನು ಸಂಪೂರ್ಣವಾಗಿ ನಂಬುವಂತಿರಲಿಲ್ಲ. ಏಕೆಂದರೆ ಅವುಗಳಲ್ಲಿ ಕೆಲವು ಶಾಸನಗಳ ಭಾಗಗಳು ಅದೇ ಸ್ವರೂಪದ, ಆದರೆ ಸಂಬಂಧವಿರದ ಇನ್ನು ಕೆಲವು ಶಾಸನಗಳ ಪ್ರತಿಗಳೊಂದಿಗೆ ಸೇರಿಹೋಗಿದ್ದವು, ಮತ್ತು ಶಾಸನಗಳನ್ನು ತಿದ್ದುವಾಗ ಮೂಲವನ್ನು ಗಮನಿಸದೆ ತಮಗೆ ಸರಿ ಎನಿಸಿದ ರೀತಿಯಲ್ಲಿ ಅವನ್ನು ತಿದ್ದಲಾಗಿತ್ತು. ಹಾಗಾಗಿ ನಾನು ಶಾಸನಗಳ ಪ್ರತಿತೆಗೆ ಯುವ ಕೆಲಸವನ್ನು ಮೊದಲಿನಿಂದ ಆರಂಭಿಸಬೇಕಾಯಿತು. ಈ ಸಂಗ್ರಹಿತವಾಗಿ ರುವ ಮಾಹಿತಿಯು ಶುದ್ಧವಾದ ರೂಪದಲ್ಲಿ ಶಾಸನಗಳನ್ನು ಪ್ರಕಟಿಸಲು ಎಲ್ಲ ರೀತಿಯಲ್ಲಿಯೂ ನೆರವಾಗುತ್ತದೆ ಎಂಬ ನಂಬಿಕೆ ನನಗಿದೆ.....'' [1]

ಪ್ರಸ್ತುತ ಸಂಪುಟವು 65 ಪುಟಗಳಷ್ಟು ದೀರ್ಘವಾದ ಪ್ರಸ್ತಾವನೆಯನ್ನು ಒಳಗೊಂಡಿದೆ. ಅದರ ಆರಂಭವೇ ಅತ್ಯಾಕರ್ಷಕವಾಗಿದ್ದು ಶ್ರವಣಬೆಳಗೊಳವನ್ನು ಕಣ್ಣಿಗೆ ಕಟ್ಟುವಂತೆ ಹೀಗೆ ಚಿತ್ರಿಸುತ್ತದೆ :

"ಬೆಂಗಳೂರಿನಿಂದ ಮಂಜಿರಾಬಾದ್ ಕೋಟೆಯ ಮೂಲಕ ಪಶ್ಚಿಮ ಕರಾವಳಿಯ ಕಡೆಗೆ ಟ್ರಂಕ್‌ರಸ್ತೆಯಲ್ಲಿ ಪ್ರಯಾಣ ಮಾಡಹೊರಟಿರುವ ಪ್ರವಾಸಿಗಳ ಕಣ್ಣುಗಳು ಚನ್ನರಾಯಪಟ್ಟಣದ ಬಳಿ ಬರುತ್ತಿದ್ದಂತೆ ಅಲ್ಲಿಗೆ ದಕ್ಷಿಣದಿಕ್ಕಿಗಿರುವ ಪ್ರಧಾನವಾದ ಬೆಟ್ಟವೊಂದರಲ್ಲಿ ಕೀಲಿಸುತ್ತವೆ. ಮೊದಲಿಗೆ ಆ ಬೆಟ್ಟದ ತುದಿಯಲ್ಲಿ ಉದ್ದನೆಯ ಒಂದು ಕಂಬ ನಿಂತಂತೆ ಕಾಣುವುದಾದರೂ ಬೆಟ್ಟದ ಸಮೀಪಕ್ಕೆ ಬರುತ್ತಿದ್ದಂತೆ ಅದೊಂದು ಭವ್ಯವಾದ ಮನುಷ್ಯಾಕಾರದ ವಿಗ್ರಹವೆಂಬುದು ಸ್ಪಷ್ಟವಾಗುತ್ತದೆ. ಅನೇಕ ಮೈಲಿಗಳಷ್ಟು ದೂರದಿಂದಲೇ ಕಣ್ಣಿಗೆ ಎದ್ದು ತೋರುವ ಈ ಅಸಾಮಾನ್ಯ ವಿಗ್ರಹವು ದಕ್ಷಿಣ ಭಾರತದ ಅತ್ಯಂತ ಆಸಕ್ತಿಕರವಾದ ಕ್ಷೇತ್ರವೊಂದರ ಹೆಗ್ಗುರುತಾಗಿದೆ. ಅಲ್ಲಿಯ ಶಾಸನಗಳು ಭಾರತೀಯ ಇತಿಹಾಸದ ಅತ್ಯಂತ ನಿರ್ದಿಷ್ಟ ಕಾಲಮಾನಕ್ಕಿಂತಲೂ ಹಿಂದಿನವು, ನಿಜ ಹೇಳಬೇಕೆಂದರೆ ದೇಶದ ಅತ್ಯಂತ ಹಳೆಯ ಶಾಸನಗಳೆಂದು ಪ್ರಖ್ಯಾತವಾಗಿರುವ ಅಶೋಕನ ಶಾಸನಗಳಿಗಿಂತಲೂ ಪ್ರಾಚೀನವಾದವು. ಈ ಪ್ರಸಿದ್ಧವಾದ ಸ್ಥಳವು ಒಂದು ಕಾಲದಲ್ಲಿ ಅತ್ಯಂತ ಶಕ್ತಿಶಾಲಿಯೂ ಪ್ರಭಾವಶಾಲಿಯೂ ಆಗಿದ್ದ, ಬೌದ್ಧಧರ್ಮಕ್ಕಿಂತಲೂ ಹಿಂದೆ ಆರಂಭವಾಗಿದ್ದ ಧರ್ಮವೊಂದರ ಪ್ರಧಾನ ಕೇಂದ್ರವಾಗಿತ್ತು...." [2]

---

1 ARAD. P. 6ರ ಭಾಗದ ಅನುವಾದ.

2 Ins. at Srv. P-1.

ಮುಂದಿನ ಪುಟಗಳಲ್ಲಿ ರೈಸರು ಶ್ರವಣಬೆಳಗೊಳದ ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಇತಿಹಾಸವನ್ನು ಅಲ್ಲಿಯ ಶಾಸನಗಳ ಸಹಾಯದಿಂದ ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಭದ್ರಬಾಹುವು ತನ್ನ ಶಿಷ್ಯನ ಒಡಗೂಡಿ ಈ ಸ್ಥಳಕ್ಕೆ ಬಂದ ಪ್ರಸಂಗದ ಐತಿಹಾಸಿಕತೆಯನ್ನು ಅವರು ಇಲ್ಲಿ ಪ್ರತಿಪಾದಿಸಿ ತೋರಿಸುವ ಪ್ರಯತ್ನವನ್ನು ನಡೆಸಿದ್ದಾರೆ. ಗಂಗ, ರಾಷ್ಟ್ರಕೂಟ, ಚಾಲುಕ್ಯ ಹೊಯ್ಸಳ, ಮುಂತಾದ ರಾಜವಂಶಗಳ ಆಳ್ವಿಕೆಯ ಕಾಲದಲ್ಲಿ ಕೆತ್ತಿಸಲಾದ ಶಾಸನಗಳನ್ನು ಆಧರಿಸಿ ಆಯಾ ರಾಜಮನೆ ತನಗಳಿಗೆ ಸಂಬಂಧಿಸಿದಂತೆ ಪ್ರಕಟವಾಗಬಹುದಾದ ಹೊಸಸಂಗತಿಗಳನ್ನು ಆಯ್ದುಕೊಂಡು ಚರ್ಚಿಸಿದ್ದಾರೆ.

ಕೇವಲ ಇಲ್ಲಿಯ ಶಾಸನಗಳಲ್ಲಿ ದೊರಕುವ ವಿವರಗಳನ್ನು ಮಾತ್ರ ಸಂಗ್ರಹಿಸದೆ ಇಲ್ಲಿ ಪ್ರಸ್ತಾಪಿತವಾಗಿರುವ ಅನೇಕ ವಿಷಯಗಳ ಬಗೆಗೆ ಬೇರೆಬೇರೆ ಆಕರಗಳಲ್ಲಿ ಹಾಗೂ ಇತರ ವಿದ್ವಾಂಸರ ಬರಹಗಳಲ್ಲಿ ಲಭ್ಯವಿರುವ ಹೆಚ್ಚಿನ ಮಾಹಿತಿಯನ್ನೂ ಅವರು ಇಲ್ಲಿ ಪ್ರಕಟಿಸಿದ್ದಾರೆ.

ನಿದರ್ಶನಕ್ಕೆ :

ಅ) ಶ್ವೇತಾಂಬರ ಮತ್ತು ದಿಗಂಬರಗಳೆಂಬ ಎರಡು ಜೈನ ಪಂಥಗಳ ಬಗೆಗೆ ಮೋನಿಯರ್ ವಿಲಿಯಮ್ಸ್‌ರು ಬರೆದ ಲೇಖನದ ಉದ್ಧೃತ ಭಾಗ.[1]

ಆ) ಗೊಮ್ಮಟಶಿಲ್ಪವನ್ನು ಚಾವುಂಡರಾಯನು ಕೆತ್ತಿಸಿದರ ಕಥೆಯನ್ನು ಕರ್ನಲ್ ಮೆಕೆಂಜ್ಜಿಯ ಬರಹಗಳಿಂದ ಆಯ್ದುಕೊಂಡಿರುವುದು.[2]

ಇ) ಗೊಮ್ಮಟಶಿಲ್ಪವನ್ನು ಅಳೆಯಲು ಯತ್ನಿಸಿದ ಸ್ಕ್ಯಾನ್‌ಲಾನ್ ಎಂಬ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ನು ಇಂಡಿಯನ್ ಆಂಟಿಕ್ವೆರಿಯಲ್ಲಿ ಪ್ರಕಟಿಸಿರುವ ವಿವರಗಳು.[3]

ಈ) ಕಾರ್ಕಳ ಮತ್ತು ವೇಣೂರುಗಳಲ್ಲಿರುವ ಗೊಮ್ಮಟ ಶಿಲ್ಪಗಳ ಬಗೆಗೆ ಬರ್ನೆಲ್ ವ್ಯಕ್ತಪಡಿಸಿರುವ ಅಭಿಪ್ರಾಯಗಳು.[4]

ಉ) 1887ರಲ್ಲಿ ನಡೆದ ಮಹಾಮಸ್ತಕಾಭಿಷೇಕದ ಬಗ್ಗೆ ಬಿ. ವೆಂಕಟಾಚಲಂ ಅಯ್ಯ ಎನ್ನುವರು 'ಹಾರ್ವೆಸ್ಟ್ ಫೀಲ್ಡ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿರುವ ವಿವರಗಳು.[5]

ಮುಂತಾದವುಗಳನ್ನು ಉಲ್ಲೇಖಿಸಬಹುದು. ಮಾತ್ರವಲ್ಲದೆ ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಅಕಳಂಕ ಎಂಬ ಕವಿಯ ಬಗ್ಗೆ ದೇವಚಂದ್ರನು ತನ್ನ 'ರಾಜಾವಳಿ ಕಥಾಸಾರ'ದಲ್ಲಿ ನೀಡಿರುವ ವಿವರದ ಭಾಗವನ್ನು ಯಥಾವತ್ತಾಗಿ ರೋಮನ್‌ಲಿಪಿಗೆ ಲಿಪ್ಯಂತರಿಸಿ ಪ್ರಕಟಿಸಲಾಗಿದೆ.[6]

---

1 ಅಲ್ಲೇ, ಪು.-10 (ಅಡಿಟಿಪ್ಪಣಿ)
2 ಅಲ್ಲೇ, ಪು.-26 (ಅಡಿಟಿಪ್ಪಣಿ)
3 ಅಲ್ಲೇ, ಪು.-31
4 ಅಲ್ಲೇ, ಪು.-31
5 ಅಲ್ಲೇ, ಪು.-30 (ಅಡಿಟಿಪ್ಪಣಿ)
6 ಅಲ್ಲೇ, ಪು. 46.

ಇವೆಲ್ಲಕ್ಕೆ ಕಳಸವಿಟ್ಟಂತೆ ಶ್ರವಣಬೆಳಗೊಳದ ಸಮಗ್ರ ಚಿತ್ರವನ್ನು ನೀಡುವ ನಕ್ಷೆ; ಚಂದ್ರಗುಪ್ತ ಬಸದಿ, ಚಾವುಂಡರಾಯ ಬಸದಿ ಮುಂತಾದ ಪ್ರಾಚೀನ ಸ್ಮಾರಕಗಳ ಪಾರ್ಶ್ವನೋಟವನ್ನು ತೋರಿಸುವ ರೇಖಾಚಿತ್ರಗಳು; ಭಂಡಾರ ಬಸ್ತಿ, ಅಕ್ಕನಬಸ್ತಿ ಮುಂತಾದ ಕಟ್ಟಡಗಳ ತಳಪಾಯದ ನಕಾಶೆಗಳು; ಚಂದ್ರಗುಪ್ತ ಬಸದಿಯ ಜಾಲಂಧ್ರಗಳು, ತ್ಯಾಗದ ಬ್ರಹ್ಮದ ಕಂಬ, ಕುಕ್ಕುಟ ಸರ್ಪ, ಗುಳ್ಳ ಕಾಯಜ್ಜಿ, ಮೊದಲಾದ ಶಿಲ್ಪಗಳ ಯಥಾವತ್ ರೇಖಾನಕಲುಗಳು ಹಾಗೂ ಚಂದ್ರಗುಪ್ತ ಬಸದಿ, ಚಾಮುಂಡರಾಯ ಬಸದಿಗಳ ಪಾಶ್ವದೃಶ್ಯಗಳ ಛಾಯಾಚಿತ್ರಗಳು - ಈ ಎಲ್ಲವನ್ನು ಬಳಸುವುದರ ಮೂಲಕ ರೈಸ್ ಈ ಸಂಪುಟವನ್ನು ಸರ್ವಾಂಗ ಸುಂದರವಾಗಿಸಲು ಯತ್ನಿಸಿದ್ದಾರೆ.

ಶಾಸನಗಳ ಪ್ರಕಟಣೆಯ ಸ್ವರೂಪ :

ಈ ಸಂಪುಟದಲ್ಲಿ ಶಾಸನಗಳ ಮುದ್ರಣದ ಸ್ವರೂಪವು ಹಿಂದಿನ ಎರಡು ಕೃತಿಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿದ್ದು ಉಳಿದೆಲ್ಲ ಎಪಿಗ್ರಾಫಿಯ ಸಂಪುಟಗಳಲ್ಲಿ ಕಂಡುಬರುವ ವಿಧಾನವು ಈ ಸಂಪುಟದಿಂದ ಆರಂಭಗೊಂಡಿದೆ.

ಸಂಪುಟ-3 : ಮೈಸೂರು (ಭಾಗ 1) :

ಎಪಿಗ್ರಾಫಿಯ ಸರಣಿಯ ಮೊದಲ ಎರಡು ಸಂಪುಟಗಳನ್ನು ಬಿಟ್ಟರೆ ಉಳಿದೆಲ್ಲವನ್ನೂ ಜಿಲ್ಲೆಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಒಂದು ಜಿಲ್ಲೆಯ ಎಲ್ಲ ಶಾಸನಗಳೂ ಒಂದೇ ಸಂಪುಟದಲ್ಲಿ ಅಡಕಗೊಳ್ಳುವುದು ವಾಡಿಕೆಯಾದರೂ ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳು ತಲಾ ಎರಡೆರಡು ಭಾಗಗಳಾಗಿ ಪ್ರಕಟವಾಗಿವೆ. ಶಾಸನಗಳ ಬಾಹುಳ್ಯ ಈ ನಿರ್ಧಾರಕ್ಕೆ ಕಾರಣ.

1894ರಲ್ಲಿ ಪ್ರಕಟವಾದ ಈ ಸಂಪುಟವು ಮೈಸೂರು ಜಿಲ್ಲೆಯ ಪೂರ್ವದ ತಾಲ್ಲೂಕುಗಳಾದ ಮೈಸೂರು, ಶ್ರೀರಂಗಪಟ್ಟಣ, ಮಂಡ್ಯ, ಮಳವಳ್ಳಿ, ತಿರುಮಕೂಡಲು ನರಸೀಪುರ, ಹಾಗೂ ನಂಜನಗೂಡಿನ ಒಟ್ಟು 803 ಶಾಸನಗಳಿವೆ.

ಕೃತಿಯಲ್ಲಿ ಮೊದಲಿಗೆ 36 ಪುಟಗಳ ಪ್ರಸ್ತಾವನೆ ಇದ್ದು ಅದರಲ್ಲಿ ಎಂದಿನಂತೆ ಹೊಸದಾಗಿ ಲಭ್ಯವಾಗಿರುವ ಶಾಸನಗಳಲ್ಲಿನ ವಿವರಗಳ ಆಧಾರದ ಮೇಲೆ ಗಂಗ, ಚೋಳ, ಹೊಯ್ಸಳ ಮುಂತಾದ ರಾಜವಂಶಗಳ ಇತಿಹಾಸವನ್ನು ನಿರೂಪಿಸಲಾಗಿದೆ. ಈ ಪ್ರಾಂತ್ಯನಲ್ಲಿನ ಪ್ರಮುಖ ಸ್ಮಾರಕಗಳ ವಾಸ್ತುಶಿಲ್ಪವನ್ನು ವಿವರಿಸಿರುವುದು ಇಲ್ಲಿಯ ವಿಶೇಷ. ಅಷ್ಟೇ ಅಲ್ಲದೆ ಹಿಂದಿನ ಸಂಪುಟಗಳಲ್ಲಿ ತಾವು ಪ್ರತಿಪಾದಿಸಿರುವ ಸಿದ್ಧಾಂತಗಳಿಗೆ ಪ್ರತಿಯಾಗಿ ಇತರ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಉತ್ತರವನ್ನು ನೀಡಲೂ ಪ್ರಸ್ತಾವನೆಯನ್ನು ರೈಸರು ವೇದಿಕೆಯಾಗಿ ಬಳಸಿಕೊಂಡಿದ್ದಾರೆ. ಭದ್ರಬಾಹು ಮತ್ತು ಚಂದ್ರಗುಪ್ತರ ಬಗ್ಗೆ ಮತ್ತು ಗಂಗವಂಶದ ಬಗೆಗೆ ಫ್ಲೀಟರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಇಲ್ಲಿ ಉತ್ತರಿಸಿರುವುದು ಈ ಮಾತಿಗೆ ಉದಾಹರಣೆ.

ಕೇವಲ ರಾಜಮಹಾರಾಜರ ಇತಿಹಾಸಕ್ಕೆ ಮಾತ್ರವೇ ಗಮನವನ್ನು ಹರಿಸದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಿಗೂ ರೈಸರು ತಮ್ಮ ಪ್ರಸ್ತಾವನೆಯಲ್ಲಿ ಸ್ಥಳಕೊಟ್ಟಿದ್ದಾರೆ. ಉದಾಹರಣೆಗೆ ಮೇಲುಕೋಟೆಯ ಶಾಸನಗಳಲ್ಲಿ ಪ್ರಾಸ್ತಾವಿಕವಾಗಿ ಕಂಡುಬರುವ ಅಲ್ಲಿಯ ಪ್ರಸಿದ್ಧ ನಾಮವನ್ನು ಉಲ್ಲೇಖಿಸಿ ಅಡಿಟಿಪ್ಪಣಿಯಲ್ಲಿ ನಾಮದ ತಯಾರಿಕೆಯ ಬಗ್ಗೆ ಬುಕನನ್ ತನ್ನ ಕೃತಿಯಲ್ಲಿ ನೀಡಿರುವ ವಿವರಗಳನ್ನು ಯಥಾವತ್ತಾಗಿ ಪುನರ್‌ಮುದ್ರಿಸಿದ್ದಾರೆ.[1] ಅಂತೆಯೇ ಶಾಲಿವಾಹನ ಶಕ 1438 (ಕ್ರಿ.ಶ. 1516)ರ ಒಂದು ಶಾಸನದಲ್ಲಿ[2] ಪ್ರಸ್ತಾಪಿತವಾಗಿರುವ ರಾಮಾನುಜಾಚಾರ್ಯರ ಶಿಷ್ಯ ಪರಂಪರೆಯವರಾದ ಅನಂತಾಚಾರ್ಯ ಎಂಬುವರಿಗೆ ತಿರುಪತಿಯ ದೇವಾಲಯದಲ್ಲಿ ಸಲ್ಲುವ ವಿಶೇಷ ಮರ್ಯಾದೆಯನ್ನು ಕುರಿತಾದ ಮಾಹಿತಿಯನ್ನು ವಿವರಿಸುವಾಗ ಈಗಲೂ ಅವರ ವಂಶೀಕರಿಗಷ್ಟೇ ತಿರುಪತಿಯಲ್ಲಿ ವಿಶೇಷ ಮಾಲಾರ್ಪಣೆಯು ಸಲ್ಲುತ್ತದೆ ಎಂಬ ವಿವರಗಳನ್ನು ಅಡಿಟಿಪ್ಪಣಿಯಲ್ಲಿ ನಮೂದಿಸಿದ್ದಾರೆ.

ಶ್ರವಣಬೆಳಗೊಳದ ಶಾಸನ ಸಂಪುಟದಂತೆಯೇ ಇಲ್ಲಿಯೂ ಅನೇಕ ರೇಖಾಚಿತ್ರಗಳಿವೆ. ಅವುಗಳಲ್ಲಿ ಸೋಮನಾಥಪುರದ ಕೇಶವದೇಗುಲ, ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ದೇವಾಲಯಗಳ ತಳಪಾಯದ ನಕಾಶೆ, ವಿವಿಧ ಆಯುಧಗಳ ರೇಖಾಚಿತ್ರಗಳು, ತಾಮ್ರಶಾಸನಗಳ ಕಲ್ಲಚ್ಚಿನ ಪ್ರತಿಗಳು, ಅನೇಕ ಶಾಸನಗಳ ಕಣ್‌ಪ್ರತಿಗಳು ಮುಖ್ಯವಾದವು. ಇವುಗಳ ಒಟ್ಟು ಸಂಖ್ಯೆ 22.

ಪ್ರಸ್ತುತ ಸಂಪುಟದ ಶಾಸನಗಳಿಂದ ಕರ್ನಾಟಕದ ಮತ್ತು ದಕ್ಷಿಣಭಾರತದ ಇತಿಹಾಸದ ಅಧ್ಯಯನಕ್ಕೆ ದೊರೆತಿರುವ ಸಹಕಾರ ಅಪಾರ. ಗಂಗರಿಗೆ ಸಂಬಂಧಿಸಿದ ಅನೇಕ ಮಾಹಿತಿಯನ್ನು ಒದಗಿಸುವುದರ ಮೂಲಕ ರೈಸ್ ಆವರೆಗೆ ಲಭ್ಯವಿದ್ದ ಆ ರಾಜವಂಶವನ್ನು ಕುರಿತಾದ ವಿವರಗಳಿಗೆ ಹೆಚ್ಚಿನ ಅಂಶಗಳನ್ನು ಸೇರಿಸಿದ್ದಾರೆ. ಚೋಳರನ್ನು ಕುರಿತಾದ ಬಹುಮಟ್ಟಿಗೆ ಖಚಿತವಾದ ಮಾಹಿತಿಗಳು ಮೊದಲ ಬಾರಿಗೆ ಈ ಸಂಪುಟದಲ್ಲಿ ಪ್ರಕಟವಾಗಿವೆ. ಹೊಯ್ಸಳರ ಉಗಮವನ್ನು ಗುರುತಿಸುವ ಪ್ರಯತ್ನವನ್ನೂ ಇಲ್ಲಿ ಮಾಡಲಾಗಿದೆ.

ಸಂಪುಟ-4 : ಮೈಸೂರು (ಭಾಗ-2) :

ಮೈಸೂರು ಜಿಲ್ಲೆ ಶಾಸನಗಳ ಮೊದಲ ಭಾಗ ಪ್ರಕಟವಾದ ನಾಲ್ಕು ವರ್ಷಗಳ ನಂತರ 1898ರಲ್ಲಿ ಎರಡನೆಯ ಭಾಗವಾದ ಈ ಸಂಪುಟ ಪ್ರಕಟವಾಗಿದೆ. ಈ ಸಂಪುಟದಲ್ಲಿ ಚಾಮರಾಜನಗರ, ಎಳಂದೂರು, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಹುಣಸೂರು, ಕೃಷ್ಣರಾಜಪೇಟೆ ಮತ್ತು ನಾಗಮಂಗಲ ತಾಲ್ಲೂಕುಗಳ ಶಾಸನಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಹಿಂದಿನ ಸಂಪುಟದಲ್ಲಿ ಸೇರ್ಪಡೆಯಾಗದಿದ್ದ ಶ್ರೀರಂಗಪಟ್ಟಣ ಮತ್ತು ನಂಜನಗೂಡಿನ ಹೆಚ್ಚುವರಿ ಶಾಸನಗಳನ್ನೂ ಈ ಸಂಪುಟದಲ್ಲಿಯೇ ಸೇರಿಸಲಾಗಿದೆ. ಇಲ್ಲಿ ಪ್ರಕಟವಾಗಿರುವ ಒಟ್ಟು ಶಾಸನಗಳ ಸಂಖ್ಯೆ 962. ಅದರಲ್ಲಿ ವಿಜಯನಗರದ ಅರಸರ ಕಾಲದ 258 ಮತ್ತು ಹೊಯ್ಸಳರ 212 ಶಾಸನಗಳು ಸಿಂಹಪಾಲನ್ನು ಪಡೆದಿವೆ. ಉಳಿದಂತೆ ಕದಂಬ,

---

1 E.C. Vol. III, ಪು. 20.

2 ಅಲ್ಲೇ. ಮಂಡ್ಯ ಕ್ರ.ಸಂ. 115.

ರಾಷ್ಟ್ರಕೂಟ, ಗಂಗ, ಚಾಲುಕ್ಯ, ಚೋಳ ಮುಂತಾದ ಪ್ರಸಿದ್ಧ ರಾಜವಂಶಗಳಲ್ಲದೆ ಉಮ್ಮತ್ತೂರು, ನಂದ್ಯಾಲ, ಹದಿನಾಡು, ಕಳಲೆ ಮುಂತಾದ ಚಿಕ್ಕಪುಟ್ಟ ರಾಜಮನೆತನಗಳ ಶಾಸನಗಳೂ ಇಲ್ಲಿ ಪ್ರಕಟವಾಗಿವೆ.

ಸಂಪುಟದ ಮೊದಲಲ್ಲಿ ಇರುವ 38 ಪುಟಗಳ ಪ್ರಸ್ತಾವನೆಯಲ್ಲಿ ಎಂದಿನಂತೆ ಈ ಸಂಪುಟದಲ್ಲಿನ ಶಾಸನಗಳ ಹಿನ್ನೆಲೆಯಲ್ಲಿ ವಿವಿಧ ರಾಜವಂಶಗಳ ವಿವರಗಳನ್ನು ರೈಸ್ ಕಲೆಹಾಕಿದ್ದಾರೆ. ಈ ಪ್ರಾಂತ್ಯದಲ್ಲಿ ಲಭ್ಯವಿರುವ ಹನ್ನೊಂದು ಕದಂಬರ ಶಾಸನಗಳು ಮೈಸೂರಿನ ನೈಋತ್ಯಮೂಲೆಯವರೆಗೂ ಕದಂಬರ ಆಳ್ವಿಕೆ ಹಬ್ಬಿದ್ದಿದ್ದನ್ನು ಸೂಚಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಪುನ್ನಾಟ ಎಂಬ ಪ್ರಾಚೀನ ಪ್ರಾಂತ್ಯದ ರಾಜಧಾನಿ ಯಾವುದಿರಬಹುದೆಂಬ ಅಂಶದ ಬಗೆಗೂ ಅವರು ಚರ್ಚಿಸಿದ್ದಾರೆ. ಚೋಳರ ಪ್ರಖ್ಯಾತ ಅರಸರಾದ ರಾಜೇಂದ್ರಚೋಳ, ರಾಜಾಧಿರಾಜ ಮತ್ತು ರಾಜೇಂದ್ರದೇವ ಮುಂತಾದವರನ್ನು ಕುರಿತ ಮಾಹಿತಿ, ಚಂಗಾಳ್ವರನ್ನು ಕುರಿತು ಮೊತ್ತಮೊದಲ ಬಾರಿಗೆ ಪ್ರಸ್ತಾಪಿಸಿರುವುದು, ಮೈಸೂರಿನ ರಾಜವಂಶ ಮತ್ತು ಕಳಲೆವಂಶದ ನಡುವಣ ಸಂಬಂಧ ಮುಂತಾದವು ಈ ಪ್ರಸ್ತಾವನೆಯಲ್ಲಿ ಚರ್ಚಿತವಾಗಿರುವ ಇನ್ನಿತರ ಚಾರಿತ್ರಿಕ ಸಂಗತಿಗಳು.

ಸಾಂಸ್ಕೃತಿಕ ಸಂಗತಿಗಳಲ್ಲಿ ಪ್ರಸ್ತಾಪಿಸಬಹುದಾದದ್ದೆಂದರೆ ನಾಯನ್ಮಾರರುಗಳನ್ನು ಕುರಿತಂತೆ ರೈಸರು ಇಲ್ಲಿ ನೀಡಿರುವ ವಿವರಗಳು. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಒಂದು ಪುಟ್ಟ ಕತ್ತಲೆಯ ಕೊಠಡಿಯಲ್ಲಿ ಹಳೆಗನ್ನಡ ಲಿಪಿಯ ಶಾಸನ ಸಹಿತವಾದ 64 ಮಂದಿ ಶಿವಭಕ್ತರ (ನಾಯನ್ಮಾರರ) ಲೋಹದ ವಿಗ್ರಹಗಳಿರುವುದನ್ನು ನಿವೃತ್ತ ಶಾಲಾಶಿಕ್ಷಕರೊಬ್ಬರು ರೈಸರ ಗಮನಕ್ಕೆ ತಂದರು.[1] ಬೇಡರಕಣ್ಣಪ್ಪ, ಇಳೆಯಾಂಡ ಗುಡಿಮಾರ, ಕರಿಕಾಲಚೋಳ ಮುಂತಾದ ಹೆಸರುಗಳ ಇವುಗಳ ಪಟ್ಟಿಯನ್ನು ರೈಸ್ ಪ್ರಸ್ತುತ ಸಂಪುಟದಲ್ಲಿ ಪ್ರಕಟಿಸಿದ್ದಾರೆ.[2] ಅಲ್ಲದೆ ತಮಿಳು ಸಾಹಿತ್ಯದಲ್ಲಿ ಲಭ್ಯವಿರುವ ಇವರಲ್ಲಿ ಕೆಲವರ ಕಥೆಯನ್ನೂ ನಿರೂಪಿಸಿದ್ದಾರೆ.[3] ಅಷ್ಟಕ್ಕೇ ತೃಪ್ತರಾಗದೆ ಕ್ರಿ.ಶ. 1750ರಲ್ಲಿ ಬದುಕಿದ್ದ ಚೆನ್ನಪ್ಪನೆಂಬ ಕವಿಯು ಬರೆದಿರುವ ಶಿವಶರಣಲೀಲಾಮೃತವೆಂಬ ಗ್ರಂಥದಿಂದ ತಮಿಳಿನ ನಾಯನ್ಮಾರರಿಗೆ ಸಮಾನವಾಗಿ ಗೌರವಿಸಲ್ಪಡುವ ಕನ್ನಡದ ಶರಣರ ವಿವರಗಳನ್ನೂ ನೀಡಿದ್ದಾರೆ.[4]

ಈ ಸಂಪುಟದಲ್ಲಿ ಒಟ್ಟು 10 ಚಿತ್ರಗಳಿದ್ದು ಚಾಮರಾಜನಗರ ತಾಲ್ಲೂಕಿನ ಹಳೆಆಲೂರಿನ ಅರ್ಕೇಶ್ವರ ದೇವಾಲಯದಲ್ಲಿನ ಕಂಬಗಳು ಮತ್ತು ದ್ವಾರಬಂಧ; ತೆಂಕಣಾಂಬಿಯ ಹನುಮಂತನ ದೇವಾಲಯದಲ್ಲಿನ ಕಲ್ಲಿನ ಕಂಬಗಳು ಮುಂತಾದವು

---

1 ARAD P. 41.

2 ಶಾಸನಗಳ ಸಂಖ್ಯೆ : ನಂಜನಗೂಡು - 200 ರಿಂದ 265.

3 EC IV, P – 34–36.

4 ಅಲ್ಲೇ.

ಪ್ರಮುಖವಾದವು. ಪ್ರಸ್ತುತ ಸಂಪುಟವನ್ನು ಸಂಪಾದಿಸಲು ರೈಸರು ಕ್ಯಾಪ್ಟನ್ ಕಾರ್ ಬರೆದ 'Seven pagodas', ಡಾ॥ ಮುರ್ಡೋಕನ 'Classified catalogue of Tamil Books', Chiristian College Magazine, Manual of Nilagiri District, ಲಾಸನ್ನನ 'Map of Ancient India' ಮುಂತಾದ ಕೃತಿಗಳನ್ನಲ್ಲದೆ ಅಕಾಡೆಮಿ, ಇಂಡಿಯನ್ ಆಂಟಿಕ್ವೆರಿ, ಎಪಿಗ್ರಾಫಿಯಾ ಇಂಡಿಕಾ ಮುಂತಾದ ವಿದ್ವತ್ ಪತ್ರಿಕೆಗಳನ್ನೂ ಪರಾಮರ್ಶಿಸಿದ್ದಾರೆ.

ಸಂಪುಟ-5 : ಹಾಸನ :

ಹಾಸನ, ಬೇಲೂರು, ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು, ಮಯ ಮಂಜಿರಾಬಾದ್ ತಾಲ್ಲೂಕುಗಳ ಒಟ್ಟು 942 ಶಾಸನಗಳನ್ನು ಒಳಗೊಂಡ ಸಂಪುಟವು ಮಂಗಳೂರಿನ ಬಾಸೆಲ್ ಮಿಷನ್ನಿನ ಮುದ್ರಣಾಲಯದಲ್ಲಿ ಮುದ್ರಿತವಾಗಿ 1902ರಲ್ಲಿ ಪ್ರಕಟವಾಗಿದೆ. ಪುಸ್ತಕದ ಗಾತ್ರದ ಕಾರಣದಿಂದಾಗಿಯೇ ಸಂಪುಟ ಹೊರಬರುವುದು ತಡವಾಯಿತೆಂಬುದನ್ನು ತಮ್ಮ ವಾರ್ಷಿಕ ವರದಿಯಲ್ಲಿ ಈ ಮಾತುಗಳಿಂದ ವಿವರಿಸಿದ್ದಾರೆ :

> *"The Hassan volume has been completed and it is in the hands of the binders, but turned out to be so bulky, as think as a volume of Encyclopaedia Britannica, that it was decided to make it a double volume, which as caused a little delay......"*[1]

ಹೀಗೆ ಹೊರಬಂದಿರುವ ಎರಡು ಭಾಗಗಳಲ್ಲಿ ಒಂದರಲ್ಲಿ ಪ್ರಸ್ತಾವನೆ, ಆಂಗ್ಲ ಅನುವಾದ ಮತ್ತು ರೋಮನ್ ಲಿಪ್ಯಂತರವೂ ಮತ್ತೊಂದರಲ್ಲಿ ಕೇವಲ ಶಾಸನಗಳ ಮೂಲಪಾಠವನ್ನೂ ಮುದ್ರಿಸಲಾಗಿದೆ.

ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು ಮೊದಲಾದ ಸ್ಥಳಗಳು ಹೊಯ್ಸಳರ ಪ್ರಮುಖ ಕೇಂದ್ರಗಳಾಗಿದ್ದುದರಿಂದ ಸಹಜವಾಗಿಯೇ ಈ ಸಂಪುಟದಲ್ಲಿನ ಶಾಸನಗಳಲ್ಲಿ ಸಿಂಹಪಾಲು ಆ ರಾಜ ವಂಶದ್ದೇ ಆಗಿದೆ (ಒಟ್ಟು 365 ಶಾಸನಗಳು). ಎಂದಿನಂತೆ ಈ ಸಂಪುಟದಲ್ಲಿಯೂ 50 ಪುಟಗಳಷ್ಟು ವಿಸ್ತಾರವಾದ ಪ್ರಸ್ತಾವನೆ ಇದ್ದು ಅದರಲ್ಲಿ ಪ್ರಧಾನವಾಗಿ ಹೊಯ್ಸಳರ ಆಳ್ವಿಕೆಯ ವಿವರಗಳನ್ನು ಚರ್ಚಿಸಲಾಗಿದೆ. ಮಲೆಯಾಳದ ವ್ಯಾಪಾರಿಗಳು ಸಾಗರೋತ್ತರ ವ್ಯಾಪಾರವನ್ನು ನಡೆಸಿ ಪರದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಂಡು ಅದನ್ನು ರಾಜನ ಅಶ್ವಶಾಲೆಗೆ ಸರಬರಾಜು ಮಾಡುತ್ತಿದ್ದ ಅಂಶವನ್ನು ರೈಸ್ ಪ್ರಸ್ತಾಪಿಸಿದ್ದಾರೆ.

ಕೊಂಗಾಳ್ವರಿಗೆ ಸಂಬಂಧಿಸಿದ ಹನ್ನೊಂದು ಶಾಸನಗಳು ಈ ಸಂಪುಟದಲ್ಲಿ ದಾಖಲಾಗಿದ್ದು ಮೊತ್ತ ಮೊದಲ ಬಾರಿಗೆ ಇವರನ್ನು ಕುರಿತಾದ ಮಾಹಿತಿ ಇಲ್ಲಿ ಲಭ್ಯವಾಗಿದೆ.

---

1 ARAD P. 66.

11ನೇ ಶತಮಾನದಲ್ಲಿ ಚೋಳ ಮತ್ತು ಕೊಂಗಾಳ್ವರ ನಡುವಣ ಕದನದ ವಿವರಗಳನ್ನು ಈ ಶಾಸನಗಳು ಪ್ರತಿಪಾದಿಸುತ್ತವೆ ಎಂದು ಅವರು ಹೇಳಿದ್ದಾರಲ್ಲದೆ ಕ್ರಿ.ಶ. 1079ರಲ್ಲಿ ಕೊಂಗಾಳ್ವರ ಮಂತ್ರಿಯಾಗಿದ್ದ ಚತುರ್ಭಾಷಾ ಕೋವಿದನಾದ ನಕುಲಾರ್ಯ ಎಂಬುವನೇ ಗುಜರಾತಿನಲ್ಲಿ ಪಾಶುಪತ ಪಂಥವನ್ನು ಸ್ಥಾಪಿಸಿದ ಪ್ರಸಿದ್ಧನಾದ ಲಕುಳನಿರಬೇಕೆಂದು ಊಹಿಸಿದ್ದಾರೆ. ಕ್ರಿ.ಶ. 1020ರ ಆರ್ಕಾಟಿನ ಶಾಸನ ಮತ್ತು 1036ರ ಮೈಸೂರಿನ ಶಾಸನಗಳಲ್ಲಿ ಈತನ ಪ್ರಸ್ತಾಪವಿರುವುದನ್ನು ಅವರು ಗುರುತಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ರಾಜನೊಬ್ಬ ತೀರಿದಾಗ ಅವನ ಅನೇಕ ಜನ ಭಟರು ತಾವೂ ಮಡಿಯುವುದಾಗಿ ಪ್ರತಿಜ್ಞೆ ಮಾಡಿರುತ್ತಿದ್ದ ಹಲವಾರು ವೀರರಿರುತ್ತಿದ್ದರೆಂಬ ಅಂಶವನ್ನು ರೈಸ್ ಇಲ್ಲಿ ಹೊರಗೆಡಹಿದ್ದಾರೆ. ಗಂಗರ ದೊರೆ ನೀತಿಮಾರ್ಗ ಪೆರ್ಮಾನಡಿಯು ಮಡಿದಾಗ ಬಖಿಯಮ್ಮ ಎಂಬುವನು ಅಗ್ನಿಪ್ರವೇಶವನ್ನು ಮಾಡಿದ್ದು[1] ಬಹುಶಃ ಅದೇ ರಾಜನಿಗೆ ವೇಳೆ ವಾಳಿಯಾಗಿ ರಾಚೆಯ ಎನ್ನುವವನು ಅಗ್ನಿಯನ್ನು ಹೊಕ್ಕಿದ್ದು[2] ಮುಂತಾದವು ಇಲ್ಲಿ ಉಲ್ಲೇಖಿಸಬಹುದಾದವು. ಆದರೆ ಇದೆಲ್ಲಕ್ಕಿಂತ ವಿಶಿಷ್ಟವಾದದ್ದು ಹೊಯ್ಸಳೇಶ್ವರ ದೇವಾಲಯದ ಕಂಬ ಒಂದರ ಮೇಲಿರುವ ಹೊಯ್ಸಳರ ದೊರೆಯಾದ ಎರಡನೇ ವೀರಬಲ್ಲಾಳನಿಗೆ ಕುವರ ಲಕ್ಷ್ಮ ಅವನ ಹೆಂಡತಿ ಮತ್ತು ಅವನ ಒಂದು ಸಾವಿರ ವೀರರು 'ಲೆಂಕ'ರಾಗಿ ಪ್ರಾಣತ್ಯಾಗವನ್ನು ಮಾಡಿದುದರ ವಿವರಗಳು.[3]

ಮೈಸೂರು ಒಡೆಯರು ಚನ್ನರಾಯಪಟ್ಟಣದ ಕೋಟೆಯನ್ನು ಬಿಜಾಪುರದ ಸುಲ್ತಾನನ ಸಲುವಾಗಿ ಕಟ್ಟಿದ ಕುತೂಹಲದ ಸಂಗತಿಯನ್ನು ಒಡೆಯರ ಕಾಲದ ಶಾಸನವೊಂದು ದಾಖಲಿಸಿರುವುದನ್ನು ಅವರು ಗುರುತಿಸಿದ್ದಾರೆ.

ಹಿಂದಿನ ಸಂಪುಟಗಳಂತೆಯೇ ಇದರಲ್ಲಿಯೂ ಅನೇಕ ರೇಖಾಚಿತ್ರಗಳು ಮತ್ತು ಛಾಯಾಚಿತ್ರಗಳಿವೆ. ಅವುಗಳಲ್ಲಿ ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳ ತಳಪಾಯದ ನಕ್ಷೆಗಳು; ಬೇಲೂರಿನ ಚೆನ್ನಕೇಶವ ದೇವಾಲಯದ ಮತ್ತು ಹಳೇಬೀಡಿನ ಪಾರ್ಶ್ವನಾಥ ಬಸದಿಯ ಕಂಬಗಳ ವಿನ್ಯಾಸ, ಅರಸೀಕೆರೆಯಲ್ಲಿನ ದೇವಾಲಯದ ವೃತ್ತಾಕಾರದ ಪ್ರಾಂಗಣ, ಹಳೇಬೀಡಿನ ವೀರಭದ್ರದೇವಾಲಯದ ಮೇಲ್ಭಾಗದಲ್ಲಿರುವ ಹೊಯ್ಸಳ ಲಾಂಛನಗಳ ರೇಖಾಚಿತ್ರಗಳು ಮುಖ್ಯವಾದವು. ಹಿಂದಿನ ಸಂಪುಟಗಳ ಚಿತ್ರಗಳನ್ನು ಸಿದ್ಧಪಡಿಸಿರುವ ನಮಶ್ಶಿವಾಯಂ ಪಿಳ್ಳೆಯವರೇ ಇದನ್ನೂ ತಯಾರಿಸಿದ್ದಾರೆ. ವೈಲ್ ಮತ್ತು ಕ್ಲೈನ್ ಎಂಬ ಮದ್ರಾಸಿನ ಛಾಯಾಗ್ರಾಹಕರು ತೆಗೆದ ಹಳೇಬೀಡಿನ ಕೇದಾರೇಶ್ವರ ದೇವಾಲಯದ ಛಾಯಾಚಿತ್ರ, ಕರ್ನಲ್ ಡಿಕ್ಸನ್ 1865ರಲ್ಲಿ ತೆಗೆದ ಬೇಲೂರಿನ ಚನ್ನಕೇಶವ ದೇವಾಲಯದ ದೃಶ್ಯಗಳು ಛಾಯಾಚಿತ್ರ ವಿಭಾಗದಲ್ಲಿವೆ. ಹಳೇಬೀಡಿನ ಕೇದಾರೇಶ್ವರ

1 Vol. V. ಅರಕಲಗೂಡು. ಶಾಸನಸಂಖ್ಯೆ 27. ಕ್ರಿ.ಶ. 915.

2 ಅಲ್ಲೇ, ಶಾಸನ ಸಂಖ್ಯೆ - 5.

3 ಅಲ್ಲೇ, ಬೇಲೂರು. ಶಾಸನ ಸಂಖ್ಯೆ 112. ಕ್ರಿ.ಶ. 1220.

ದೇವಾಲಯವು 1866ರಲ್ಲಿ ಜೀರ್ಣೋದ್ಧಾರವಾಗುವ ಮುನ್ನ ಹೇಗಿತ್ತು ಮತ್ತು 1886ರಲ್ಲಿ ದುರಸ್ತಿಯ ಹಂತದಲ್ಲಿ ಹೇಗೆ ಬದಲಾಯಿತು ಎನ್ನುವುದನ್ನು ತೋರಿಸುವ ಎರಡು ಚಿತ್ರಗಳನ್ನು ತೌಲನಿಕ ಕಾರಣಗಳಿಗಾಗಿ ಪ್ರಕಟಿಸಲಾಗಿದ್ದು ಎರಡನೆಯದನ್ನು ಮೈಸೂರಿನ ಮಹಾರಾಜರಾಗಿದ್ದ ಚಾಮರಾಜ ಒಡೆಯರರು ತೆಗೆದಿರುವುದು ವಿಶೇಷ.

ಸಂಪುಟ-6 : ಕಡೂರು :

ಈಗ ಚಿಕ್ಕಮಗಳೂರೆಂದು ನಾಮಕರಣಗೊಂಡಿರುವ ಹಿಂದಿನ ಕಡೂರು ಜಿಲ್ಲೆಯ 621 ಶಾಸನಗಳನ್ನು ಈ ಸಂಪುಟವು ಒಳಗೊಂಡಿದೆ. ಇಲ್ಲಿಯೂ ಹೊಯ್ಸಳ ವಂಶದ ಶಾಸನಗಳೇ ಪ್ರಧಾನವಾಗಿವೆ (232 ಶಾಸನಗಳು). ಪ್ರಮುಖ ರಾಜವಂಶಗಳಲ್ಲದೆ ಸಂತಾರ (15), ಸೇನಾವಾರ (7), ಕಳಸ-ಕಾರ್ಕಳ (30), ಕೆಳದಿ (6), ಸಂತೆಬಿದನೂರು (7) ಮುಂತಾದ ಚಿಕ್ಕ ಅರಸರು/ಸಾಮಂತರ ಶಾಸನಗಳೂ ಮುದ್ರಿತವಾಗಿವೆ. ಇಲ್ಲಿ ಮುವ್ವತ್ತು ಪುಟಗಳ ಪ್ರಸ್ತಾವನೆ ಇದೆ. ಗಂಗರ ವಂಶಾವಳಿ ಮತ್ತು ಆ ಕಾಲದ ಕೃತಕ ತಾಮ್ರಪಟಗಳನ್ನು ಕುರಿತಂತೆ ರೈಸ್ ಮತ್ತು ಫ್ಲೀಟರಿಗೆ ನಡೆಯುತ್ತಿದ್ದ ವಾದದ ಮಂಡನೆ-ಪ್ರತಿಮಂಡನೆ ಈ ಸಂಪುಟದಲ್ಲಿಯೂ ಮುಂದುವರೆದಿದೆ.[1] ಸಿರಗುಂದ ಶಾಸನವೆಂದು ಕರೆಯಲಾಗುವ ಚಿಕ್ಕಮಗಳೂರಿನ 50ನೇ ಸಂಖ್ಯೆಯ ಶಾಸನವು ಗಂಗರ ಪ್ರಾಚೀನತೆಯನ್ನು ಪತ್ತೆ ಹಚ್ಚುವುದಕ್ಕೆ ಬಳಸಬಹುದಾದ ಉತ್ತಮ ಆಕರವೆಂದು ರೈಸ್ ಸೂಚಿಸಿದ್ದಾರೆ. ಕಡೂರು[2] ಮತ್ತು ತರೀಕೆರೆ ತಾಲ್ಲೂಕುಗಳಲ್ಲಿನ ಕೆಲವು ಶಾಸನಗಳು ಆಸಂದಿಯ ಗಂಗರ ಬಗೆಗೆ ಹೆಚ್ಚಿನ ಮಾಹಿತಿಯನ್ನು ಚೆಲ್ಲುವುದನ್ನು ಅವರು ಗುರುತಿಸಿದ್ದಾರೆ. ಕರ್ನಾಟಕದ ಮತ್ತೊಂದು ಪ್ರಮುಖ ಮತ್ತು ಪ್ರಾಚೀನ ರಾಜವಂಶವಾದ ಕದಂಬರ ವಂಶಾವಳಿಯನ್ನು ಅವರು ನಿರ್ಧರಿಸಿದ್ದಾರೆ:

ಕಡೂರು ಪ್ರಾಂತ್ಯದ ಅತ್ಯಂತ ಪ್ರಸಿದ್ಧ ಧಾರ್ಮಿಕ ಕೇಂದ್ರವಾದ ಶೃಂಗೇರಿಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಇಲ್ಲಿ ಕೊಟ್ಟಿದೆ.[3] ಇಲ್ಲಿಯ 36ಕ್ಕೂ ಹೆಚ್ಚು ಶಾಸನಗಳನ್ನು ಬಳಸಿಕೊಂಡು ವಿವಿಧ ರಾಜಮನೆತನಗಳು ಶೃಂಗೇರಿಯ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ರೈಸರು ಇಲ್ಲಿ ದಾಖಲಿಸಿದ್ದಾರೆ.

ಈ ಸಂಪುಟದಲ್ಲಿ ಪ್ರಕಟವಾಗಿರುವ ಏಳು ಚಿತ್ರಗಳಲ್ಲಿ ತರೀಕೆರೆ ತಾಲ್ಲೂಕಿನ ಅಮೃತಾಪುರದಲ್ಲಿನ ಅಮೃತೇಶ್ವರ ದೇವಾಲಯದ ಪಾರ್ಶ್ವನೋಟ ಮತ್ತು ಅಲ್ಲಿಯ ತಳಪಾಯದ ನಕ್ಷೆಗಳು ಮುಖ್ಯವಾದವು.

---

1 EC Vol. VI, P–7, 29 ಮತ್ತು 30.

2 ಅಲ್ಲೇ. ಶಾಸನಸಂಖ್ಯೆ 145, P–27.

3 ಅಲ್ಲೇ. ಪು. 23 – 24.

ಸಂಪುಟ-7 : ಶಿವಮೊಗ್ಗ (ಭಾಗ-1) :

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಶಿವಮೊಗ್ಗ, ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳ 658 ಶಾಸನಗಳು ಇಲ್ಲಿ ಸಂಕಲಿತವಾಗಿವೆ. ಇವುಗಳಲ್ಲಿ ಹೆಚ್ಚಿನವು ಶಿಕಾರಿಪುರ ತಾಲ್ಲೂಕಿನಲ್ಲಿ ದೊರೆತಿರುವಂತಹವು.

1902ರಲ್ಲಿ ಪ್ರಕಟವಾದ ಈ ಸಂಪುಟದಲ್ಲಿ 47 ಪುಟಗಳ ಪ್ರಸ್ತಾವನೆ ಇದ್ದು ಹಲವು ಹತ್ತು ವೈವಿಧ್ಯಮಯವಾದ ಅಂಶಗಳನ್ನು ಇದರಲ್ಲಿ ಚರ್ಚಿಸಲಾಗಿದೆ. ಚರಿತ್ರೆಯ ರಾಜವಂಶಗಳ ಕಾಲದ ಶಾಸನಗಳು ಲಭ್ಯವಾಗುವುದು ಸ್ವಾಭಾವಿಕ. ಆದರೆ ಈ ಜಿಲ್ಲೆಯ ಶಾಸನಗಳಲ್ಲಿ ಕೆಲವು ಮಹಾಭಾರತದ ಜನಮೇಜಯ ಮುಂತಾದವರಿಗೆ ಸಂಬಂಧಿಸಿದವು ಎಂಬ ಉಲ್ಲೇಖಗಳನ್ನು ರೈಸ್ ಅನುಮಾನದಿಂದಲೇ ನೋಡಿದ್ದಾರೆ. ಶಿಕಾರಿಪುರ 263 ಮತ್ತು 264 ಎಂಬ ಸಂಕೇತವುಳ್ಳ ಮಳವಳ್ಳಿಯ ಸ್ಥಂಭಶಾಸನವು ಶಾತಕರ್ಣಿಗಳನ್ನು ಕುರಿತದ್ದಾಗಿದ್ದು ಅಶೋಕನ ಶಾಸನಗಳನಂತರ ಸಂಸ್ಥಾನದಲ್ಲಿ ದೊರೆತಿರುವ ವಿಶ್ವಾಸಾರ್ಹ ವಾದ ಅತ್ಯಂತ ಪ್ರಾಚೀನ ಶಾಸನವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕದಂಬರ ವಂಶಾವಳಿಯನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿರುವ ತಾಳಗುಂದದ ಪ್ರಣವೇಶ್ವರ ದೇವಾಲಯದ ಮುಂದಿನ ಶಾಂತಿವರ್ಮನ ಸ್ಥಂಭಶಾಸನ[1]ವನ್ನು ಪತ್ತೆಹಚ್ಚಿ ಅದನ್ನು ಮೊತ್ತಮೊದಲ ಬಾರಿಗೆ ಓದಿದ ಕೀರ್ತಿ ರೈಸರಿಗೆ ಸಲ್ಲುತ್ತದೆ. ಈ ಶಾಸನದ ಭಾಷೆ, ಅದರ ವಸ್ತು ವಿಶೇಷತೆ ಹಾಗೂ ಅದರ ಛಂದಃ ಸ್ವರೂಪ ಮುಂತಾದವುಗಳ ಬಗ್ಗೆ ವಿವರ ವಾಗಿ ರೈಸ್ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ.[2] "ಈ ಶಾಸನವನ್ನು ಬ್ಯೂಲರ್‌ರವರು ಸಂಪಾದಿಸಬೇಕಿತ್ತು. ಆದರೆ ದುರದೃಷ್ಟವಶಾತ್ ಆತ ತೀರಿಹೋದರು. ಆತ ಈ ಶಾಸನವನ್ನು ಪ್ರಕಟಿಸಿದ್ದರೆ ಇದರಲ್ಲಿಯ ಎಲ್ಲ ವಿಶೇಷಾಂಕಗಳನ್ನೂ ವಿಶದವಾಗಿ ವಿವರಿಸುತ್ತಿದ್ದರು. ಕೀಲ್‌ಹಾರ್ನ್‌ರ ಪ್ರಕಾರ ಇಲ್ಲಿ ಬಳಕೆಯಾಗಿರುವ ಛಂದಸ್ಸು ಮಾತ್ರಾ ಸಮಕವೆಂಬ ಅತ್ಯಂತ ಅಪರೂಪದ ಛಂದಸ್ಸಾಗಿದ್ದು ಹಿಂದೂ ಸಾಹಿತ್ಯದಲ್ಲಿ ಬೇರೆಲ್ಲಿಯೂ ಇದು ಬಳಕೆ ಯಾದಂತೆ ತೋರುವುದಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರಲ್ಲದೆ ಛಂದಸ್ಸಿನ ಸ್ವರೂಪ ವನ್ನು ಲಘು-ಗುರುಗಳಿಂದ ಗುರುತಿಸಿ ತೋರಿಸಿದ್ದಾರೆ.[3]

ಇಲ್ಲಿ ಚರ್ಚಿತವಾಗಿರುವ ಮತ್ತೊಂದು ಶಾಸನವೆಂದರೆ ಬಳ್ಳಿಗಾವೆಯ ಅತ್ಯಂತ ಪ್ರಸಿದ್ಧವಾದ ಕೋಡಿಮಠದ ಶಾಸನ.[4] ಈ ಶಾಸನದ 27ನೇ ಸಾಲಿನಲ್ಲಿ ಕೋಡಿಮಠವನ್ನು

---

1 Vol. VII. ಶಿಕಾರಿಪುರ. ಶಾಸನ ಸಂಖ್ಯೆ: 176.

'ದಕ್ಷಿಣ ಕೇದಾರ ಸ್ಥಾನ' ವೆಂದು ಕರೆದಿರುವುದರ ಕಡೆಗೆ ರೈಸ್ ಓದುಗರ ಗಮನ ಸೆಳೆದಿದ್ದಾರಲ್ಲದೆ "ಹಿಮಾಲಯದಲ್ಲಿರುವ ಪ್ರಸಿದ್ಧ ಶೈವಕ್ಷೇತ್ರವಾದ ಕೇದಾರದಿಂದ ಇಲ್ಲಿಗೆ ಈ ಹೆಸರು ಬಂದಿದೆ. ಅಲ್ಲಿ ನಿತ್ಯದ ಪೂಜಾಕೈಂಕರ್ಯಗಳನ್ನು ನಡೆಸುವ 'ರಾವಳ'ರೆಂಬ ಅರ್ಚಕರು ಮೈಸೂರಿನ ಶೈವರು" ಎಂದು ಹೇಳಿ ಅದಕ್ಕೆ ಸಮರ್ಥನೆಯಾಗಿ ಇಂಪೀರಿಯಲ್ ಗೆಜೆಟಿಯರ್‌ನ್ನು ಉಲ್ಲೇಖಿಸಿದ್ದಾರೆ.[1]

ತಮಗೆ ಸ್ಪಷ್ಟವಿರುವ ಅಂಶಗಳನ್ನು ಖಚಿತವಾಗಿ ನಮೂದಿಸಿದಷ್ಟೇ ಪ್ರಾಮಾಣಿಕವಾಗಿ ತಿಳಿಯದ ವಿಷಯಗಳನ್ನು ಪ್ರಾಂಜಲವಾಗಿ ಒಪ್ಪಿಕೊಳ್ಳುವ ಸೌಜನ್ಯವನ್ನು ಅವರು ಮೆರೆದಿದ್ದಾರೆ. ಉದಾಹರಣೆಗೆ, ಶಿಕಾರಿಪುರದ 197ನೇ ಸಂಖ್ಯೆಯ ಕ್ರಿ.ಶ. 1182ರ ಶಾಸನದಲ್ಲಿ ಕರ್ಣಾಟಕದ ಕುಂತಳ ದೇಶದಲ್ಲಿ "ಧರ್ಮಕ್ಕೆ ನೆರ್ಮಮುಂ ಭೋಗಕ್ಕಾಗರಮುಮಾದ ಘಟಿಕಾಸ್ಥಾನ"ಗಳಿದ್ದವು ಎಂಬ ಸಾಲಿನಲ್ಲಿರುವ 'ಘಟಿಕಾಸ್ಥಾನ' ಎಂಬ ಶಬ್ದವನ್ನು ಕುರಿತು ಬರೆಯುವಾಗ "ಘಟಿಕಾಸ್ಥಾನ ಎಂಬ ಶಬ್ದಕ್ಕೆ ನಿರ್ದಿಷ್ಟವಾದ ಅರ್ಥವೇನೆಂಬುದು ನನಗೆ ತಿಳಿದಿಲ್ಲ. ಕೆ.ಬಿ. ಪಾಠಕರು ತಮ್ಮ ಒಂದು ಲೇಖನದಲ್ಲಿ ಇದಕ್ಕೆ 'ಧಾರ್ಮಿಕ ಕೇಂದ್ರ' ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಆದರೆ ಕೀಲ್‌ಹಾರ್ನ್ ಅವರು 'ಬ್ರಹ್ಮಪುರಿ'ಗೆ ಪರ್ಯಾಯವಾಗಿ ಈ ಶಬ್ದವನ್ನು ಬಳಸಲಾಗಿದೆ ಎಂದಿದ್ದಾರೆ. ಒಟ್ಟಾರೆಯಾಗಿ ಈ ಶಬ್ದದ ಅರ್ಥ ಸ್ಪಷ್ಟವಾಗಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ.[2]

ಅಂತಹುದೇ ಇನ್ನೊಂದು ಸಂದರ್ಭವೆಂದರೆ ಎರಡನೇ ಸೋಮೇಶ್ವರನ ಒಂದು ಶಾಸನ.[3] ಇದರಲ್ಲಿ 'ಗಂಗ ಮಾಂಡಳೀಕರು ಅಲಂಪುರದಿಂದ ಆರಂಭವಾಗುವ ಪ್ರಾಂತ್ಯದ ಒಡೆಯರಾಗಿದ್ದರು' ಎಂಬ ಅಂಶವನ್ನು ಕುರಿತು ಪ್ರಸ್ತಾಪಿಸುತ್ತಾ "I am sorry, I have not able to identify this place. Ganga Mandalika was perhaps Udayadithya" ಎಂದು ತಮಗೆ ತಿಳಿಯದ್ದನ್ನು ಮುಚ್ಚುಮರೆ ಇಲ್ಲದೇ ಒಪ್ಪಿಕೊಂಡಿದ್ದಾರೆ.[4]

ಒಂದನೇ ಸೋಮೇಶ್ವರನು ತುಂಗಭದ್ರೆಯಲ್ಲಿ ಮುಳುಗಿದ್ದನ್ನು ನಿರೂಪಿಸುವ ಶಿಕಾರಿಪುರದ 136ನೇ ನಂಬರಿನ ಶಾಸನ, ಲಕುಳೀಶ್ವರನ ಪ್ರಸ್ತಾಪವಿರುವ ಅದೇ ತಾಲ್ಲೂಕಿನ 126ನೇ ಸಂಖ್ಯೆಯ ಶಾಸನ, ಕುಂತಳದೇಶವನ್ನು ಮೊದಲಿಗೆ ನಂದರು ಮತ್ತು ಮೌರ್ಯರು ಆಳುತ್ತಿದ್ದರೆಂಬ ಮಾಹಿತಿಯನ್ನು ನೀಡುವ ಶಿಕಾರಿಪುರ ತಾಲ್ಲೂಕಿನ 225ನೆಯ ಶಾಸನ, ಶಾತವಾಹನ ಶಕೆಯನ್ನು ಹಾಗೂ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ

---

1 P–23.

2 ಅಲ್ಲೇ., ಪು. 8. ಅಗ್ರಹಾರ, ಘಟಿಕಾಸ್ಥಾನ ಮತ್ತು ಬ್ರಹ್ಮಪುರಿಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ನೋಡಿ : ಚಿದಾನಂದಮೂರ್ತಿ ಎಂ., **ಕ.ಶಾ.ಸಾ.ಅ.** ಪು. 209-226.

3 ಶಿಕಾರಿಪುರ ಶಾಸನ ಸಂಖ್ಯೆ: 136.

4 EC VII. P–23.

ಸಹಕರಿಸಿದ ಸಾಯಣಮಾಧವರನ್ನು ಉಲ್ಲೇಖಿಸುವ ಅದೇ ತಾಲ್ಲೂಕಿನ 281ನೇ ಕ್ರಮಾಂಕದ ಶಾಸನ ಮತ್ತು ಮಾಸೂರು ಮದಗದ ಕೆರೆಯ ಮೇಲಿರುವ (ಶಿಕಾರಿಪುರ, 234) ಬಿಜಾಪುರದ ಸುಲ್ತಾನರ ಅರಾಬಿಕ್ ಮತ್ತು ಪರ್ಶಿಯನ್ ಭಾಷೆಯ ಶಾಸನಗಳನ್ನು ಕುರಿತಾದ ವಿವೇಚನೆ ಈ ಪ್ರಸ್ತಾವನೆಯಲ್ಲಿದೆ.

ಇಲ್ಲಿರುವ 24 ರೇಖಾಚಿತ್ರಗಳಲ್ಲಿ ಬಳ್ಳಿಗಾವೆಯ ಕೇದಾರೇಶ್ವರ ದೇವಾಲಯದ ಪಾರ್ಶ್ವನೋಟ, ಆ ದೇವಾಲಯದ ಮತ್ತು ಅದೇ ಊರಿನ ತ್ರಿಪುರಾಂತಕೇಶ್ವರ ದೇವಾಲಯ ಗಳ ತಳಪಾಯದ ನಕಾಶೆ, ದ್ವಾರಬಂಧ, ಶೂಲಬ್ರಹ್ಮನ ಕಲ್ಲು, ಭೇರುಂಡೇಶ್ವರ ಸ್ಥಂಭ, ಬಂದಳಿಕೆಯ ಸೋಮೇಶ್ವರ ದೇವಾಲಯದ ದ್ವಾರಬಂಧ, ಬಳ್ಳಿಗಾವೆಯ ತಾರಾಭಗವತಿ, ಉಮಾಮಹೇಶ್ವರ ಶಿಲ್ಪಗಳು ಮುಂತಾದವು ಪ್ರಸಿದ್ಧವಾದವು.

ಸಂಪುಟ-8 : ಶಿವಮೊಗ್ಗ (ಭಾಗ 2) :

1904ರಲ್ಲಿ ಹೊರಬಂದ ಈ ಸಂಪುಟವು ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ, ನಗರ, ಹಾಗೂ ತೀರ್ಥಹಳ್ಳಿ ತಾಲ್ಲೂಕಿನ 1038 ಶಾಸನಗಳನ್ನು ಒಳಗೊಂಡಿದೆ (ಪ್ರಧಾನ ವಾಗಿ ವಿಜಯನಗರದ ಅರಸರ ಕಾಲದವು). ಇವುಗಳಲ್ಲಿ ಕೃತಿಯ ಮೊದಲಿಗೆ ಇರುವ 16 ಪುಟಗಳ ಪ್ರಸ್ತಾವನೆಯಲ್ಲಿ ಹೊಸ ಶಾಸನಗಳ ಲಭ್ಯತೆಯಿಂದ ಬದಲಾದ ವಿವಿಧ ರಾಜವಂಶಗಳ ವಿವರಗಳನ್ನು ರೈಸ್ ನಿರೂಪಿಸಿದ್ದಾರೆ. ನಗರದಲ್ಲಿ ದೊರೆತ ಕ್ರಿ.ಶ. 1077ರ ತಾಮ್ರಶಾಸನವನ್ನು[1] ಬಳಸಿಕೊಂಡು ಗಂಗರ ಉಗಮವನ್ನು ಅವರು ಚಿತ್ರಿಸಿದ್ದಾರೆ. ಅಂತೆಯೇ ತೀರ್ಥಹಳ್ಳಿಯ 129ನೇ ಸಂಖ್ಯೆಯ ಶಾಸನದ ಆಧಾರದ ಮೇಲೆ ವಿಜಯನಗರದ ಅರಸನಾಗಿದ್ದ ಎರಡನೇ ಹರಿಹರನ ನಿಧನದ ವರ್ಷವನ್ನು ಅವರು ನಿರ್ಧರಿಸಲು ಯತ್ನಿಸಿ ದ್ದಾರೆ. ಅದೇ ರೀತಿಯಲ್ಲಿ ನಗರದ 48ನೇ ಕ್ರಮಾಂಕದ ಶಾಸನದಲ್ಲಿ ದಾಖಲಾಗಿರುವ ಜೈನಗುರುವಾದ ವಾದಿವಿದ್ಯಾನಂದ ಮತ್ತು ಆತನ ಶಿಷ್ಯವರ್ಗದ ವಿವರಗಳನ್ನು ಸಂಗ್ರಹಿಸಿ ದ್ದಾರೆ. ಇಕ್ಕೇರಿಯ ಅಘೋರೇಶ್ವರ ದೇವಾಲಯ ನಂದಿಮಂಟಪವು ಇಂಡೋ-ಸಾರ್ಸನಿಕ್ ಶೈಲಿಯಲ್ಲಿ ಇರುವುದನ್ನು ಅವರು ಗುರುತಿಸಿದ್ದಾರೆ. ಸಂತಾರರ ವಂಶವೃಕ್ಷವನ್ನು ಇಲ್ಲಿ ಮುದ್ರಿಸಲಾಗಿದೆ.

ಗಂಡಭೇರುಂಡದ ಕೆತ್ತನೆಯುಳ್ಳ ಕೆಳದಿಯ ವೀರಭದ್ರ ದೇವಾಲಯದ ಮೇಲ್ಛಾವಣಿ ಮತ್ತು ಸ್ಥಂಭಗಳು, ಇಕ್ಕೇರಿಯ ಅಘೋರೇಶ್ವರ ದೇವಾಲಯದ ನಂದಿಮಂಟಪ ಮತ್ತು ಸ್ಥಂಭಗಳು, ಮುಂತಾದವು ಇಲ್ಲಿರುವ 16 ಚಿತ್ರಗಳಲ್ಲಿನ ಕೆಲವು.

---

1 EC Vol. VIII, ನಗರ ಶಾಸನ ಸಂಖ್ಯೆ 35.

ಸಂಪುಟ-9 : ಬೆಂಗಳೂರು :

ಸರಣಿಯ ಲೆಕ್ಕದಲ್ಲಿ ಒಂಬತ್ತನೆಯದಾದರೂ ಈ ಸಂಪುಟವು ಮಾಲೆಯ ಕೊನೆಯ ಕೃತಿಯಾಗಿ 1905ರಲ್ಲಿ ಹೊರಬಂದಿದೆ. ಇದರಲ್ಲಿ ಬೆಂಗಳೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಹರಡಿರುವ 1023 ಶಾಸನಗಳನ್ನು ಮತ್ತು ಅನುಬಂಧದ ರೂಪದಲ್ಲಿರುವ ಕೊಡಗಿನ 46 - ಒಟ್ಟು 1069 ಶಾಸನಗಳು ಪ್ರಕಟವಾಗಿವೆ. ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ವಿಜಯನಗರದ ಪಾಲು ಹೆಚ್ಚು (ಒಟ್ಟು 221 ಶಾಸನಗಳು), ಅನಂತರದ ಸ್ಥಾನ ಹೊಯ್ಸಳರಿಗೆ (203). ಪ್ರಮುಖವಾದ ಇಂತಹ ರಾಜವಂಶಗಳಲ್ಲದೆ ಸಿಗಾಲನಾಡು (12), ಜಿಗಣಿ (2), ಕುಕ್ಕಿಲನಾಡು (10), ಯಲಹಂಕ (16), ಸುಗಟೂರು (15), ಆವನಿ (12), ಚನ್ನಪಟ್ಟಣ (3) ಮುಂತಾದ ಪಾಳೆಯಪಟ್ಟುಗಳ ಶಾಸನಗಳೂ ಲಭ್ಯವಾಗಿವೆ. ಚೀನಿ ಭಾಷೆಯ ಒಂದು ಶಾಸನವೂ ದೊರೆತಿರುವುದು ಇಲ್ಲಿನ ವಿಶೇಷ.

ಈ ಸಂಪುಟದಲ್ಲಿ 27 ಪುಟಗಳ ಪ್ರಸ್ತಾವನೆ ಇದ್ದು ಅದರಲ್ಲಿ ಕೇವಲ ಮೈಸೂರಿನ ಗಂಗರನ್ನು ಮಾತ್ರವಲ್ಲದೆ ಒರಿಸ್ಸದ ಕಳಿಂಗದ ಗಂಗರ ಬಗೆಗೂ ಮಾಹಿತಿಯನ್ನು ನೀಡಲಾಗಿದೆ. ಈ ವಂಶದವರು ತಮ್ಮದೇ ಆದ ಕಾಲಗಣನೆ(ಗಾಂಗೇಯ ವಂಶ ಸಂವತ್ಸರ) ಯೊಂದನ್ನು ಆರಂಭಿಸಿದ್ದರೆಂದು ತಿಳಿದು ಬರುವುದಾದರೂ ಅದನ್ನು ನಿರ್ಧರಿಸುವುದು ಹೇಗೆ ಎನ್ನುವುದು ರೈಸರಿಗೆ ಸ್ಪಷ್ಟವಾಗಿಲ್ಲ. ಗಜಪತಿಗಳು ಎಂದು ಕರೆಯಲಾಗುತ್ತಿದ್ದ ಇವರು ಆರನೇ ಶತಮಾನದಿಂದ ಹದಿನಾರನೇ ಶತಮಾನದ ಮಧ್ಯಭಾಗದವರೆಗೂ ರಾಜ್ಯವಾಳಿ ಮುಸಲ್ಮಾನರ ಆಕ್ರಮಣಕ್ಕೆ ಒಳಗಾಗಿ ರಾಜ್ಯವನ್ನು ಕಳೆದುಕೊಂಡರು ಎಂಬ ವಿವರಗಳನ್ನು ಬೆಂಗಳೂರು ತಾಲ್ಲೂಕಿನ ಒಂದು ಶಾಸನದಿಂದ[1] ಹೆಕ್ಕಿ ವಿವರಿಸಿದ್ದಾರೆ.

ಬೆಂಗಳೂರು ಜಿಲ್ಲೆಯಲ್ಲಿ ಚೋಳರ ಕಾಲದ 50ಕ್ಕೂ ಹೆಚ್ಚು ಶಾಸನಗಳು ದೊರೆತಿದ್ದು ಅದನ್ನು ರೈಸ್ ತಮ್ಮ ಕಛೇರಿಯ ಸಹಾಯಕರಾಗಿದ್ದ ಆರ್. ನರಸಿಂಹಾಚಾರ್ಯರಿಂದ ಅನುವಾದ ಮಾಡಿಸಿದ್ದಾರೆ. ಇವುಗಳಿಂದಾಗಿ ಚೋಳರ ಆಡಳಿತದ ಅವಧಿಯ ಬಗ್ಗೆ ಸಾಕಷ್ಟು ಹೆಚ್ಚಿನ ಮಾಹಿತಿಗಳು ಲಭ್ಯವಾಗಿವೆ.[2] ಕೊಂಗಾಳ್ವರ ಉಗಮ, ಕೊಡಗಿನ ಚೆಂಗಾಳ್ವರ ಜೊತೆಗಿನ ಅವರ ಸಂಬಂಧ ಮುಂತಾದ ವಿಷಯಗಳ ಬಗೆಗೂ ಇಲ್ಲಿಯ ಶಾಸನಗಳು ಪ್ರಸ್ತಾಪಿಸುತ್ತವೆ.

ತಮ್ಮ ಕಛೇರಿಯಲ್ಲಿಯೇ ಕೆಲಸಮಾಡುತ್ತಿದ್ದ ಪಂಡಿತನೊಬ್ಬ ಭೂಮಿಯ ಆಸೆಗಾಗಿ ಕೃತಕ ತಾಮ್ರಪಟಗಳನ್ನು ಸೃಷ್ಟಿಸಿ ಅದನ್ನು ನೈಜವೆಂದು ನಂಬಿಸಲು ಯತ್ನಿಸಿ ವಿಫಲನಾದ ಕುತೂಹಲಕರ ಘಟನೆಯೊಂದನ್ನು ರೈಸ್ ಇಲ್ಲಿ ನಿರೂಪಿಸಿದ್ದಾರೆ.[3]

---

1 EC. IX, ಬೆಂಗಳೂರು, ಶಾಸನ ಸಂಖ್ಯೆ. 140

2 ಅಲ್ಲೇ. ಪು. 14-18.

3 ಅಲ್ಲೇ. ಪು. 4-5.

ಓದುಗರ ಆಸಕ್ತಿಯನ್ನು ಕೆರಳಿಸುವ ಮತ್ತೊಂದು ಶಾಸನವೆಂದರೆ ಕ್ರಿ.ಶ. 1741 ರಲ್ಲಿ ಚೀನಾದ ದೊರೆ ಚಿ-ಯಾನ್-ಲಿಂಗ್ ಕಾಲದ ಲೋಹದ ಗಂಟೆಯ ಮೇಲಿರುವ ಶಾಸನ. ಈ ಶಾಸನವನ್ನು ಬರ್ಮಾ ಸರ್ಕಾರದ ಪ್ರಧಾನ ಶಾಸನಶಾಸ್ತ್ರಜ್ಞರಾಗಿದ್ದ ತಾವ್ಸೆನ್ (Tawsein)ರಿಂದ ಓದಿಸಲಾಗಿದೆ. ಹಲಸೂರಿನ ಕೆರೆಯ ಸಮೀಪದ ಕೆಂಪೇಗೌಡನ ಗೋಪುರಕ್ಕೆ ಈ ಗಂಟೆ ಹೇಗೆ ಬಂದಿತು ಎಂಬ ವಿಷಯವನ್ನು ಅರಿಯಲು ಯತ್ನಿಸಿ ಮಾಹಿತಿ ದೊರೆಯದಿದ್ದಾಗ 'ಮದ್ರಾಸ್ ಮೈಲ್' ಪತ್ರಿಕೆಯಲ್ಲಿ ಈ ಬಗ್ಗೆ ಪ್ರಕಟಣೆಯೊಂದನ್ನು ಹೊರಡಿಸಿ ವಿವರಗಳನ್ನು ತಿಳಿದುಕೊಳ್ಳಬೇಕಾಗಿ ಬಂದದ್ದನ್ನು ಅವರು ವಿವರಿಸಿದ್ದಾರೆ.[1]

ವಾಸ್ತುಶಿಲ್ಪದ ವಿಭಾಗದಲ್ಲಿ ಟಿಪ್ಪುವಿನ ಅರಮನೆಯನ್ನು ಕುರಿತಾದ ವಿವರಗಳಿವೆ. ದೇವನಹಳ್ಳಿ ತಾಲ್ಲೂಕಿನ ಗಂಗಾವರಂನಲ್ಲಿರುವ ಸೋಮೇಶ್ವರ ದೇವಾಲಯದ ಸಿಂಹ ಸ್ಥಂಭಗಳ ರೇಖಾಚಿತ್ರ ಆಕರ್ಷಕವಾಗಿದೆ.

ಸಂಪುಟ-10 : ಕೋಲಾರ :

ಎಪಿಗ್ರಾಫಿಯ ಸಂಪುಟಗಳಲ್ಲೆಲ್ಲ ಅತ್ಯಂತ ಹೆಚ್ಚಿನ ಶಾಸನಗಳನ್ನು (1347) ಒಳಗೊಂಡ ಈ ಸಂಪುಟವು 1905ರಲ್ಲಿ ಹೊರಬಂದಿದೆ. ಶಾಸನಗಳ ಸಂಖ್ಯೆಯಷ್ಟೇ ವೈವಿಧ್ಯಪೂರ್ಣವಾದದ್ದು ಇಲ್ಲಿನ ರಾಜವಂಶಗಳ ಪಟ್ಟಿ. ಕರ್ನಾಟಕದ ಎಲ್ಲ ಪ್ರಮುಖ ರಾಜವಂಶಗಳ ಜೊತೆಗೆ ಮಹಾವಲಿ, ಪಲ್ಲವರು, ಕಾಡುವೆಟ್ಟಿ, ಗಂಗಪಲ್ಲವ, ವೈದುಂಬ, ಆವನಿ, ಆವತಿ, ಸುಗಟೂರು, ರಾಯದುರ್ಗ, ಗುಮ್ಮನಾಯಕನ ಪಾಳ್ಯ, ಬಳ್ಳಾಪುರ, ತಾಡಿಗೋಳ್, ಕೊಟ್ಟಪಾಳ್ಯ, ರಾಳಪಾಡಿ, ಇಟ್ಟಿಗೆದುರ್ಗ, ಹಲಸೂರು ಮುಂತಾದ ಚಿಕ್ಕಪುಟ್ಟ ಪಾಳೆಯಪಟ್ಟುಗಳ ಮುಖ್ಯರುಗಳು ಹಾಕಿಸಿರುವ ಶಾಸನಗಳೂ ಇಲ್ಲಿವೆ. ಭಾಷಾದೃಷ್ಟಿಯಿಂದಲೂ ಕೋಲಾರ ಜಿಲ್ಲೆಯ ಶಾಸನಗಳ ವೈವಿಧ್ಯ ವಿಶಿಷ್ಟವಾದದ್ದು. ಕನ್ನಡ, ತಮಿಳು, ತೆಲುಗು ಮತ್ತು ಸಂಸ್ಕೃತ - ಈ ನಾಲ್ಕೂ ಭಾಷೆಗಳ ಶಾಸನಗಳು ಇಲ್ಲಿವೆ. ಶಾಸನಗಳ ಬಾಹುಳ್ಯದಿಂದಾಗಿ ಈ ಸಂಪುಟವನ್ನು ಎರಡು ಭಾಗಗಳಲ್ಲಿ ಮುದ್ರಿಸಲಾಗಿದೆ. ಮೊದಲ ಭಾಗವು ರೋಮನ್ ಲಿಪ್ಯಂತರ ಹಾಗೂ ಇಂಗ್ಲಿಷ್ ಸಾರಾಂಶವನ್ನೂ, ಎರಡನೇಯದು ಕನ್ನಡ ಶಾಸನಗಳ ಮೂಲಪಾಠವನ್ನೂ ಒಳಗೊಂಡಿದೆ.

ಇತರ ಸಂಪುಟಗಳಂತೆಯೇ ಈ ಸಂಪುಟದಲ್ಲಿಯೂ ನಲವತ್ತು ಪುಟಗಳ ಸವಿಸ್ತಾರವಾದ ಪ್ರಸ್ತಾವನೆ ಇದೆ. ಅದರಲ್ಲಿ ಮೊದಲಿಗೆ ಮಹಾವಲಿಗಳು ಅಥವಾ ಬಾಣರ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಲು ಯತ್ನಿಸಿದ್ದಾರೆ. ಶ್ರೀನಿವಾಸಪುರ ತಾಲ್ಲೂಕು 5 ಮತ್ತು 6ನೇ ಸಂಖ್ಯೆಯ ಶಾಸನ ಗಳಾದ ಗೂಲಂಗಾಂಪೊಡಿ ಶಾಸನಗಳನ್ನು ಪತ್ತೆಹಚ್ಚಿ ಅದರಲ್ಲಿನ ಬಾಣರ ವಂಶಾವಳಿಯನ್ನು ಹೊರಗೆಡಹಿದ್ದಾರೆ. ಪುರಾಣದಲ್ಲಿ ಬರುವ ಬಲಿಯ ಕಥೆಯನ್ನು ಸ್ಥೂಲವಾಗಿ ವಿವರಿಸಿ ಆ ಬಲಿಯ ಮೊದಲ ಮಗನಾದ ಬಾಣನೇ ಈ ಬಾಣ

1 ಅಲೇ. ಪು. 25.

ವಂಶದ ಮೂಲ ಪುರುಷ ಎಂಬ ಐತಿಹ್ಯವನ್ನು ಉಲ್ಲೇಖಿಸಿದ್ದಾರಲ್ಲದೆ ಉದಯೇಂದಿರಂ ತಾಮ್ರಪಟಗಳಲ್ಲಿನ ವಿವರಗಳನ್ನೂ ಬಳಸಿಕೊಂಡಿದ್ದಾರೆ.[1]

ಕೋಲಾರ ಜಿಲ್ಲೆಯ ಬಹುಭಾಗಗಳನ್ನು ಆಳಿದ ನೊಳಂಬರ ಬಗೆಗೆ ಸಾಕಷ್ಟು ಮಾಹಿತಿ ಇಲ್ಲಿದ್ದು ಈ ರಾಜವಂಶದ ರಾಜರು ತಮ್ಮನ್ನು ತಾವು 'ಪಲ್ಲವರು' ಎಂದು ಕರೆದು ಕೊಳ್ಳುತ್ತಿದ್ದುದನ್ನು ಅವರು ಗುರುತಿಸಿದ್ದಾರೆ. ನೊಳಂಬರ ಶಾಸನಗಳಲ್ಲಿ ಅವರ ಆಳ್ವಿಕೆಯ ಪ್ರಾಂತ್ಯದ ನಿರ್ದಿಷ್ಟ ಗಡಿಗಳನ್ನು ನಮೂದಿಸಿರುವುದಿಲ್ಲವಾದರೂ ಕೋಲಾರದ 79, ಬಂಗಾರಪೇಟೆಯ 64, ಶಿರಾದ 38 ಮತ್ತು 24, ನಂಜನಗೂಡಿನ 269 ಮುಂತಾದ ಕ್ರಮಾಂಕಗಳ ಶಾಸನಗಳನ್ನು ಬಳಸಿಕೊಂಡು ನೊಳಂಬರು 'ಗಂಗ 6000' ಪ್ರಾಂತ್ಯವನ್ನು ಆಳುತ್ತಿದ್ದರೆಂಬ ಸಿದ್ಧಾಂತವನ್ನು ಮಂಡಿಸಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ವಾಸ್ತುಶಿಲ್ಪ ಅತ್ಯುತ್ತಮ ಮಾದರಿಗಳಾಗಿ ನಂದಿಯ ಭೋಗನಂದೀಶ್ವರ ದೇವಾಲಯ, ಕೋಲಾರದ ಕೋಲಾರಮ್ಮನ ದೇವಾಲಯ, ಆವನಿಯ ರಾಮಲಿಂಗೇಶ್ವರ ಮತ್ತಿತರ ದೇವಾಲಯಗಳ ಸಂಕೀರ್ಣ ಮತ್ತು ಮುಸ್ಲಿಂ ವಾಸ್ತುವಿನಲ್ಲಿ ಗೌರಿಬಿದನೂರಿಗೆ ಸಮೀಪದ ಹಿರೇಬಿದನೂರಿನಲ್ಲಿರುವ 17ನೇ ಶತಮಾನದಲ್ಲಿ ನಿರ್ಮಿತವಾದ ಬಿಜಾಪುರದ ಸಾಮಂತನ ಸಮಾಧಿಗಳನ್ನು ಪರಿಗಣಿಸಲಾಗಿದೆ.

ಸಂಪುಟ-11 : ಚಿತ್ರದುರ್ಗ :

1903ರಲ್ಲಿ ಪ್ರಕಟವಾದ ಈ ಸಂಪುಟದಲ್ಲಿ ಒಟ್ಟು 642 ಶಾಸನಗಳಿವೆ. ಅದರಲ್ಲಿ ಅಗ್ರಮಾನ್ಯವಾದವೆಂದರೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದೊರೆತ ಅಶೋಕನ ಶಾಸನ ಗಳು. ಹಾಗಾಗಿಯೇ 32 ಪುಟಗಳ ಪ್ರಸ್ತಾವನೆಯ ಮೊದಲ ಐದು ಪುಟಗಳು ಅವುಗಳ ವಿವರಣೆಗೇ ಮೀಸಲಾಗಿವೆ. ಅಶೋಕನ ಶಾಸನವನ್ನು ತಾವು ಪತ್ತೆಮಾಡಿದ ರೀತಿ ಮತ್ತು ಅದರ ಸುದ್ದಿ ವಿಶ್ವದಾದ್ಯಂತ ಹಬ್ಬಿದ ಬಗೆ ಎರಡನ್ನೂ ರೈಸ್ ಹೀಗೆ ವಿವರಿಸಿದ್ದಾರೆ :

> *"The discovery was on the point of missed. For myself and my people were all much fatigued with a long period of travel and I had spent my lost rupee. I was therefore thinking of leaving Molakalmur as not promising any inscriptions of importance. But fortune proved more favorable and I procured some funds by an excursion to Bellary. In order to make the discovery public as soon as possible, it was communicated to the editor of Madras Mail, who at once recognised its importance and informed me that by the next morning it would be known to at every breakfast table in England.*

1 EC. X P. VIII.

I soon received hearty congra-tulations from all sides, from the veteran archaeologist Alexander Cunningham, from Dr. G. Buhler and many other learned as interested inquires all eager to know the particulars."[1]

ತಮಿಳುನಾಡಿನ ಅತ್ಯಂತ ಪ್ರಮುಖ ರಾಜಮನೆತನಗಳಲ್ಲಿ ಒಂದಾದ ಪಾಂಡ್ಯರ ವಿವರಗಳನ್ನು ಸಂಪೂರ್ಣವಾಗಿ ದಾವಣಗೆರೆಯ 5, 39, 40 ಮತ್ತು 41ನೇ ಕ್ರಮಾಂಕದ ಶಾಸನಗಳಿಂದ ನಿರೂಪಿಸಲಾಗಿದೆ.[2] ಸ್ಥಳೀಕರೇ ಆದ ಚಿತ್ರದುರ್ಗದ ನಾಯಕರ ಬಗೆಗಿನ ಮಾಹಿತಿಯಲ್ಲಿನ ಗೊಂದಲದಿಂದಾಗಿ ಅವರ ವಂಶಾವಳಿಯನ್ನು ತಪ್ಪಿಲ್ಲದಂತೆ ರೂಪಿಸುವುದು ಕಷ್ಟಕರವಾಗಿದೆ ಎಂದು ಮೊದಲಿಗೆ ರೈಸರು ಹೇಳಿ ಅನಂತರ ನಾಯಕರ ವಂಶಾವಳಿಯನ್ನು ಕೊಟ್ಟಿದ್ದರಾದರೂ 'ಇದನ್ನು ಯಾವ ರೀತಿಯಲ್ಲಿಯೂ ಖಚಿತವೆಂದು ದೃಢಪಡಿಸಲಾಗದು' ಎಂಬ ಸೂಚನೆಯನ್ನೂ ನೀಡಿದ್ದಾರೆ.[3].

ಮೊಳಕಾಲ್ಮೂರು ತಾಲ್ಲೂಕಿನ ಹಟ್ಟಿ ಎಂಬಲ್ಲಿ ಇರುವ ಆನೆಯ ಶಿಲ್ಪದ ಮೇಲಿರುವ ಎರಡು ಸಾಲಿನ ಸಂಸ್ಕೃತ ಶ್ಲೋಕವೊಂದರ[4] ಬಗೆಗೆ ಕುತೂಹಲಕರವಾದ ವಿಶ್ಲೇಷಣೆ ಇಲ್ಲಿದೆ. ಈ ಪದ್ಯ ವೈಶಿಷ್ಟ ವೆಂದರೆ ಇದರ ಮೊದಲ ಸಾಲಿನಲ್ಲಿ ಎಡದಿಂದ ಬಲಕ್ಕೆ ಬಳಸಲಾಗಿರುವ ಅಕ್ಷರಗಳನ್ನೇ ಎರಡನೇ ಸಾಲಿನಲ್ಲಿ ಬಲದಿಂದ ಎಡಕ್ಕೂ ಗಮನಿಸಬಹುದು.

ಕಂಜರಂಪುರಿತೇಂದ್ರಂಚ ಮಹೋದಲಿ ಸದಾಳಿಕಾ
ಕಾಳಿದಾಸ ಲಿದಾಹೋಮ ಚಂದ್ರಂತೇ ರಿಪುರಂಜಕಂ

'ಯಮಕ' ಎಂದು ಕರೆಯಲಾಗುವ ಈ ಪದ್ಯವು 'ಭೋಜಚರಿತ' ಎಂಬ ಸಂಸ್ಕೃತ ಕಾವ್ಯದ್ದಾಗಿದ್ದು ಕಾಳಿದಾಸನನ್ನು ಹೊಗಳಲು ಬಳಕೆಯಾಗಿದೆ. ಇದನ್ನು ನಾಲ್ಕಾರು ರೀತಿಯಲ್ಲಿ ಜೋಡಿಸಿ ಬೇರೆಬೇರೆ ಅರ್ಥಗಳು ಬರುವಂತೆ ಮಾಡುವುದು ಸಾಧನ ಎಂಬ ಪಂಡಿತ ರಾಜಗೋಪಾಲಚಾರ್ಯ ಅವರ ವಿವರಣೆಯನ್ನು ಉಲ್ಲೇಖಿಸಲಾಗಿದೆ.[5]

ಹರಿಹರದ ಹರಿಹರೇಶ್ವರ ದೇವಾಲಯ ನಿರ್ಮಾಣಕ್ಕೆ ಸಂಬಂಧಿಸಿದ ದಾವಣಗೆರೆ ತಾಲ್ಲೂಕಿನ ಶಾಸನ,[6] ತುಂಗಭದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟುವ ಮತ್ತು ಅದನ್ನು ದುರಸ್ತಿಗೊಳಿಸುವುದಕ್ಕೆ ಸಂಬಂಧಿಸಿದ ಅದೇ ತಾಲ್ಲೂಕಿನ ಇನ್ನೆರಡು ಶಾಸನಗಳು[7] ಮುಂತಾದವುಗಳನ್ನು ಸವಿಸ್ತಾರವಾಗಿ ಚರ್ಚಿಸಲಾಗಿದೆ.

1 EC. XI, P–2.
2 ಅಲ್ಲೇ. ಪು.-16.
3 ಅಲ್ಲೇ. ಪು.-29.
4 ಅಲ್ಲೇ. ಮೊಳಕಾಲ್ಮೂರು, ಶಾ.ಸಂ.: 39.
5 ಅಲ್ಲೇ. ಪು. 12.
6 ಶಾಸನ ಸಂಖ್ಯೆ 25 ಮತ್ತು 59.
7 ಶಾಸನ ಸಂಖ್ಯೆ 23 ಮತ್ತು 29.

ರೇಖಾಚಿತ್ರಗಳ ವಿಭಾಗದಲ್ಲಿ ಹರಿಹರದ ದೇವಾಲಯದ ತಳಪಾಯದ ನಕ್ಷೆ ಮತ್ತು ಹರಿಹರ ಮತ್ತು ನಂದಿತಾವರೆಗಳ ದೇವಾಲಯಗಳ ರಂಗಮಂಟಪಗಳ ಛಾವಣಿಯಲ್ಲಿರುವ ಅಲಂಕರಣದ ಚಿತ್ರಗಳು ಆಕರ್ಷಕವಾಗಿದ್ದು ಉಳಿದ ಸಂಪುಟಗಳಂತೆಯೇ ಇದನ್ನು ನಮಶ್ಶಿವಾಯಂ ಪಿಳ್ಳೆ ಬಿಡಿಸಿದ್ದಾರೆ.

ಸಂಪುಟ-12 : ತುಮಕೂರು :

ಎಪಿಗ್ರಾಫಿಯಾ ಸರಣಿಯಲ್ಲಿ ಕೊನೆಯದಾದ ಈ ಸಂಪುಟವು 1904ರಲ್ಲಿ ಹೊರ ಬಂದಿದ್ದು ಇದು ತುಮಕೂರು ಜಿಲ್ಲೆಯ ಶಾಸನಗಳನ್ನು ಪ್ರಧಾನವಾಗಿ ಒಳಗೊಂಡಿದ್ದರೂ ಅನುಬಂಧದ ರೂಪದಲ್ಲಿ ಮೈಸೂರು ಮತ್ತು ಕೊಡಗಿನ ಹೆಚ್ಚುವರಿ ಶಾಸನಗಳೂ ಇಲ್ಲಿ ಸೇರ್ಪಡೆಯಾಗಿವೆ. ಇವುಗಳ ಒಟ್ಟು ಸಂಖ್ಯೆ 688. ಇದರಲ್ಲಿ ವಿಜಯನಗರದ ಅರಸರ 123 ಮತ್ತು ಹೊಯ್ಸಳರ 117 ಶಾಸನಗಳಲ್ಲದೆ ಚಿಕ್ಕ ಪಾಳೆಯ ಪಟ್ಟುಗಳಾದ ನಿಡಗಲ್ಲು (7), ಹರತಿ (12), ಯಲಹಂಕ (1), ಹೊಳವನಹಳ್ಳಿ (5), ಸಂತೆ ಬಿದನೂರು (1), ಹಾಗಲವಾಡಿ (1), ಕುಂದರ್ಪಿ (1) ಹಾಗೂ ಗುಬ್ಬಿಹೊಸಳ್ಳಿಯ ಒಂದು ಶಾಸನಗಳೂ ಇವೆ.

ಗಂಗರ ಇತಿಹಾಸವನ್ನು ಸ್ಪಷ್ಟಪಡಿಸುವ ಅನೇಕ ಶಾಸನಗಳು ಈ ಸಂಪುಟದಲ್ಲಿವೆ. ಸುಮಾರು ಕ್ರಿ.ಶ. 482ರ ದುರ್ವಿನೀತನ ಮದ್ದಗಿರಿಯ 110ನೇ ಕ್ರಮಾಂಕದ ಶಾಸನ, ಹೆಬ್ಬೂರಿನ ತಾಮ್ರಪಟ (Tm 23), ತಿಪಟೂರಿನ 10 ಮತ್ತು 103ನೇ ಕ್ರಮಾಂಕಗಳ ಶಾಸನಗಳು, ಶ್ರೀಪುರುಷನ ಮಧುಗಿರಿ ಶಾಸನ (Mi 99) ಮುಂತಾದ ಆಕಾರಗಳ ಆಧಾರದ ಮೇಲೆ ಗಂಗರ ಇತಿಹಾಸವನ್ನು ರೈಸರು 19 ಪುಟಗಳ ತಮ್ಮ ಪ್ರಸ್ತಾವನೆಯ ಮೊದಲಿಗೆ ಪುನಾರ್ರಚಿಸಿದ್ದಾರೆ.[1] ಇದಕ್ಕೆ ಅವರಿಗೆ ಸಹಕಾರಿಯಾದದ್ದು ಇದೇ ಸಂಪುಟದ ಅನುಬಂಧದಲ್ಲಿರುವ Nj 129 ಎಂಬ ಸಂಕೇತದ ನಂಜನಗೂಡು ತಾಲ್ಲೂಕಿನ ಗಟ್ಟವಾದಿಪುರದ ಕ್ರಿ.ಶ. 904ರ ತಾಮ್ರಪಟ.

ಇದೇ ರೀತಿಯಲ್ಲಿ ಪಲ್ಲವನೊಳಂಬರೆಂಬ ವಿಶಿಷ್ಟ ರಾಜವಂಶದ ಇತಿಹಾಸವನ್ನು ಮಧುಗಿರಿಯ 92 ರಿಂದ 97, 100 ರಿಂದ 102 ಮತ್ತು ಶಿರಾದ 28ನೇ ಕ್ರಮಾಂಕದ ಶಾಸನಗಳಿಂದ ನಿರೂಪಿಸಲಾಗುವುದು, ನಿಡುಗಲ್ಲಿನ ಪಾಳ್ಳೇಗಾರರ ಚರಿತ್ರೆಯನ್ನು ಪಾವಗಡದ 54, 62, 38, 63, 37ನೇ ಕ್ರಮಾಂಕಗಳ ಶಾಸನಗಳು ಮತ್ತು ಸಿರಾದ 8ನೇ ಸಂಖ್ಯೆಯ ಶಾಸನದ ಆಧಾರದ ಮೇಲೆ ರಚಿಸಿರುವುದು ಮತ್ತು ಹರತಿಯ ಪಾಳ್ಳೇಗಾರರ ಇತಿಹಾಸವನ್ನು ಪಾವಗಡದ 42 ಮತ್ತು 46ನೇ ಶಾಸನಗಳಿಂದ ನಿರೂಪಿಸಿರುವುದು ಈ ಪ್ರಸ್ತಾವನೆಯ ವಿಶೇಷವಾಗಿದೆ. ಹೆಬ್ಬೂರಿನ ತಾಮ್ರಶಾಸನ(Tm 29)ಗಳನ್ನು ತಾವು ಓದಿದ ರೀತಿಯ ಸ್ವಾರಸ್ಯವನ್ನು ಅವರು ಇಲ್ಲಿ ವಿವರಿಸಿದ್ದಾರೆ.

1 EC XII P – 1-5.

ವಾಸ್ತುಶಿಲ್ಪದ ವಿಭಾಗದಲ್ಲಿ ಶಿರಾದ ಜುಮ್ಮಾಮಸೀದಿ, ಮಲ್ಲಿಕ್ ರಿಹಾನ್‌ನನ ಸಮಾಧಿಗಳನ್ನು ಮುಸ್ಲಿಂ ವಾಸ್ತುಶಿಲ್ಪದ ಅತ್ಯುತ್ತಮ ಮಾದರಿಗಳೆಂದು ಅವನ್ನು ಉದಾಹರಿಸಿದ್ದಾರೆ. ಮುಘಲರ ರಾಜ್ಯಪಾಲನಾದ ದಿಲಾವರಖಾನನು ಶಿರಾದಲ್ಲಿ ಕಟ್ಟಿದ ಅರಮನೆಯು ಬೆಂಗಳೂರು ಮತ್ತು ಶ್ರೀರಂಗಪಟ್ಟಣದಲ್ಲಿ ಟಿಪ್ಪುವು ಕಟ್ಟಿಸಿದ ಅರಮನೆಗೆ ಮಾದರಿಯಾಗಿದೆ, ಬೆಂಗಳೂರಿನ ಕೋಟೆಯು ಕೂಡಾ ಶಿರಾದ ಕೋಟೆಯ ಪ್ರತಿಕೃತಿ ಮತ್ತು ಬೆಂಗಳೂರಿನ ಲಾಲ್‌ಬಾಗ್ ಬಹುಶಃ ಶಿರಾದಲ್ಲಿರುವ ಖಾನ್‌ಭಾಗ್‌ನ ಸ್ಫೂರ್ತಿಯಿಂದ ನಿರ್ಮಿತವಾದದ್ದು ಎಂದು ಅವರು ಊಹಿಸಿದ್ದಾರೆ.[1]

ಸಂಗ್ರಹಿತ ಮಾಹಿತಿಯ ಒಟ್ಟು ನೋಟ :

ಎಪಿಗ್ರಾಫಿಯ ಸಂಪುಟಗಳ ಸಂಕಲನದಿಂದಾಗಿ ಮೈಸೂರು ಸಂಸ್ಥಾನದ ಇತಿಹಾಸದ ವಿಷಯದಲ್ಲಿ ಲಭ್ಯವಾದ ಹೊಸ ಮಾಹಿತಿಗಳ ಸಾರಾಂಶವನ್ನು ರೈಸರೇ ಹೀಗೆ ಪಟ್ಟಿಮಾಡಿದ್ದಾರೆ :

> *"ಪ್ರಸ್ತುತ ಸಂಶೋಧನೆ ಮತ್ತು ಸರ್ವೇಕ್ಷಣೆಯ ಫಲವಾಗಿ ಈ ಪ್ರಾಂತ್ಯದ ಚರಿತ್ರೆಯನ್ನು ಕ್ರಿ.ಪೂ. 3ನೇ ಶತಮಾನದವರೆಗೆ ಪತ್ತೆಹಚ್ಚಲು ಸಾಧ್ಯವಾಯಿತು. ಇದರಿಂದಾಗಿ ಈವರೆಗೆ ಇದ್ದ ಅನೇಕ ಪರಿಕಲ್ಪನೆಗಳು ಬದಲಾದವು. ಮೊದಲು ತಿಳಿದಿದ್ದ, ಈ ಶಾಸನಗಳ ಪತ್ತೆಯಿಂದ ಮಾತ್ರವೇ ನಮ್ಮ ಅರಿವಿಗೆ ದಕ್ಕಿದ ಕೆಲವು ಪ್ರಮುಖ ಸಂಗತಿಗಳನ್ನು ಪಟ್ಟಿ ಮಾಡಬಹುದಾದರೆ ಕಾಲದ ದೃಷ್ಟಿಯಿಂದ ಅತ್ಯಂತ ಪ್ರಾಚೀನವಾದದ್ದು ಮತ್ತು ಆಸಕ್ತಿ ಹಾಗೂ ನಾವಿನ್ಯತೆಗಳೆರಡರಿಂದಲೂ ಕೂಡಿರುವುದು ಜೈನ ಧರ್ಮಗುರುವಾದ ಭದ್ರಬಾಹುವು ಚಂದ್ರಗುಪ್ತನೇ ಮೊದಲಾದ ತನ್ನ ಅನೇಕ ಜನ ಶಿಷ್ಯರೊಡಗೂಡಿ ಉತ್ತರಭಾರತದಿಂದ ವಲಸೆ ಬಂದು ಹಾಸನ ಜಿಲ್ಲೆಯಲ್ಲಿರುವ ಶ್ರವಣಬೆಳಗೊಳದಲ್ಲಿ ಬಂದು ನೆಲೆಸಿ ಕೊನೆಗೆ ಅಲ್ಲಿಯೇ ತಮ್ಮ ಪ್ರಾಣವನ್ನು ತ್ಯಜಿಸಿದ ಸಂಗತಿ. ಇದನ್ನು ನಿಸ್ಸಂದೇಹಾಸ್ಪದ ಸತ್ಯ ಸಂಗತಿ ಎಂಬುದನ್ನು ನಿರೂಪಿಸಲು ನಮಗೆ ಯಾವ ಆಧಾರವೂ ಇಲ್ಲವಾದರೂ ಇದನ್ನು ಅಸಂಗತ ಎಂದು ಯಾರೂ ತಿರಸ್ಕರಿಸಿಲ್ಲವಾದ್ದರಿಂದ ಅಂತಹುದೊಂದು ಘಟನೆ ನಡೆದಿರಬಹುದು ಎನ್ನಲಡ್ಡಿಯಿಲ್ಲ. ನನ್ನ ಅತ್ಯಂತ ಮಹತ್ವದ ಸಂಶೋಧನೆಯಾದ ಅಶೋಕನ ಶಾಸನಗಳ ಪತ್ತೆಯಿಂದಾಗಿ ಮೈಸೂರು ಸಂಸ್ಥಾನದ ಉತ್ತರ ಭಾಗವು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ನಿಸ್ಸಂದಿಗ್ಧವಾಗಿ ಸಾಬೀತಾಯಿತಲ್ಲದೆ ಅಶೋಕನ ತಾತನಾದ ಚಂದ್ರಗುಪ್ತನಿಗೆ*

1 ಅಲ್ಲೇ. P–19.

ಈ ರಾಜ್ಯದೊಂದಿಗೆ ಸಂಬಂಧ ಇದ್ದಿರಬಹುದೆಂಬುದನ್ನು ತೋರಿಸಿ ಕೊಟ್ಟಿತು. ಮೌರ್ಯರ ಸ್ಥಾನೀಯ ಆಡಳಿತಪೀಠವೊಂದು ಹಿಂದೆ ಇಸಿಲ ಎಂದು ಕರೆಯಲಾಗುತ್ತಿದ್ದ ಮತ್ತು ಈಗ ಈ ಶಾಸನಗಳು ದೊರೆತಿರುವ ಮೊಳಕಾಲ್ಮೂರು ತಾಲ್ಲೂಕಿನ ಸಿದ್ಧ ಅಥವಾ ಸಿದ್ಧಾಪುರದಲ್ಲಿ ಒಂದು ಕಾಲದಲ್ಲಿ ಅಸ್ತಿತ್ವದಲ್ಲಿತ್ತು.[1]

ಮೌರ್ಯರನಂತರ ಈ ಪ್ರಾಂತ್ಯವನ್ನು ಆಂಧ್ರರು ಅಥವಾ ಶಾತವಾಹನರು ಆಳಿದರೆಂಬುದೂ ಈಗ ಸಾಬೀತಾಗಿದೆ. ಈವರೆಗೆ ಅಜ್ಞಾತವಾಗಿದ್ದ ಮಹಾವಲಿಗಳು ಅಥವಾ ಬಾಣರ ಸಂಗತಿ, ಕದಂಬರ ಉಗಮ ಮತ್ತು ಅವರ ಅಧಿಕಾರ ಗ್ರಹಣದ ವಿವರಗಳೂ ತಿಳಿದುಬಂದಿವೆ. ಗಂಗರು ಮೈಸೂರು ಮತ್ತು ಕೊಡಗು ಪ್ರಾಂತ್ಯಗಳನ್ನು ಕ್ರಿಸ್ತಪೂರ್ವದಿಂದ ಕ್ರಿಸ್ತಶಕೆಯ ಆರಂಭದವರೆಗೆ ಅನೇಕ ಶತಮಾನಗಳ ಕಾಲ ಆಳಿದವರು. ಆದರೆ ಸಂಪೂರ್ಣವಾಗಿ ವಿಸ್ಮೃತಿಗೆ ಒಳಗಾಗಿದ್ದ ಇವರ ಹೆಸರನ್ನು ಚರಿತ್ರೆಯಲ್ಲಿ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನದಲ್ಲಿ ಸ್ಥಾಪಿಸಲು ಈ ಅಧ್ಯಯನ ನೆರವಾಗಿದೆ. ಇವರಷ್ಟೇ ಅಜ್ಞಾತರಾಗಿದ್ದ ಪಲ್ಲವರನ್ನು ಇಂದು ದಕ್ಷಿಣ ಭಾರತದ ಬಲಾಢ್ಯ ರಾಜವಂಶವೆಂದು ಗುರುತಿಸುವುದು ಸಾಧ್ಯವಾಗಿದೆ. ಅಂತಹವರನ್ನೂ ಮೈಸೂರಿನ ಪ್ರಾಂತ್ಯದಲ್ಲಿ ಮಣಿಸಿದವರು ನೊಣಂಬ ಅಥವಾ ನೊಳಂಬರು. ಪಶ್ಚಿಮ ಚಾಲುಕ್ಯರು ಮತ್ತು ಅವರನ್ನು ಎರಡು ಶತಮಾನಗಳ ಕಾಲ ಎದುರಿಸಿದ ರಾಷ್ಟ್ರಕೂಟರು ಅಥವಾ ರಟ್ಟರನ್ನು ಸಂಪೂರ್ಣವಾಗಿ ಪರಿಚಯಿಸಲಾಗಿದೆ. ಚೋಳರ ಆರಂಭಿಕ ದಿನಗಳ ಆಡಳಿತದ ವಿವರಗಳು ಮೈಸೂರಿನ ಶಾಸನಗಳಲ್ಲಿ ಲಭ್ಯವಿದ್ದು ಈ ಪ್ರಾಂತ್ಯ ದಲ್ಲಿನ ಅವರ ಗೆಲುವಿನ ವಿವರಗಳ ಮಾಹಿತಿಯನ್ನು ಕೊಟ್ಟಿದೆ. ಈ ಮಣ್ಣಿ ನಲ್ಲಿಯೇ ಹುಟ್ಟಿ ಬೆಳೆದ ರಾಜವಂಶವಾದ ಪೊಯ್ಸಳ ಅಥವಾ ಹೊಯ್ಸಳರು ಇಡೀ ದಕ್ಷಿಣಭಾರತದಲ್ಲಿ ಪ್ರಖ್ಯಾತರಾಗಿದ್ದು ಇವರ ಉಗಮ ಸ್ಥಾನವನ್ನು ಗುರುತಿಸಲಾಗಿದೆ ಮತ್ತು ಇವರು ತಮ್ಮ ಅಧಿಕಾರವನ್ನು ವಿಸ್ತರಿಸಿದ ಸಂಗತಿ ಯನ್ನು ಸವಿಸ್ತಾರವಾಗಿ ನಿರೂಪಿಸಲಾಗಿದೆ. ಸಾಂತಾರರು, ಕೊಂಗಾಳ್ವರು, ಚೆಂಗಾಳ್ವರು ಮುಂತಾದ, ಈವರೆಗೆ ಸಂಪೂರ್ಣವಾಗಿ ಅಜ್ಞಾತವಾಗಿದ್ದ ರಾಜ ಮನೆತನಗಳನ್ನು ಬೆಳಕಿಗೆ ತಂದು ಆ ಮೂಲಕ ಕೊಡಗಿನ ಇತಿಹಾಸದಲ್ಲಿ ಖಾಲಿಯಾಗಿದ್ದ ಪುಟಗಳನ್ನು ತುಂಬಲಾಗಿದೆ.

---

1 ಆದರೆ ಫ್ಲೀಟರು ಈ ಶಾಸನಗಳು ಆಡಳಿತದ ಪ್ರಾಂತ್ಯವನ್ನು ಸೂಚಿಸದೆ ಕೇವಲ ಧರ್ಮಪ್ರಚಾರದ ಉದ್ದೇಶದಿಂದ ಹಾಕಿಸಿದವಾಗಿವೆ ಎಂದು ಭಾವಿಸಿದ್ದಾರೆ. ವಿವರಗಳಿಗೆ ನೋಡಿ Fleet J.F., Mahishamandala, Remark on Mr. Rice's Note, **J.R.A.S.** July 1911, P. 816–819.

ಆಧುನಿಕ ಕಾಲಘಟ್ಟದ್ದಾದ 15ನೇ ಶತಮಾನದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಬಗೆಗೆ ಸಾಕಷ್ಟು ವಿವರಗಳು ತಿಳಿದಿದ್ದವು. ಆದರೆ ಈಗ ನಮಗೆ ಲಭ್ಯವಿರುವ ಅಗಾಧವಾದ ಮಾಹಿತಿಯು ಈ ಬಗೆಗೆ ಇದ್ದ ಅನೇಕ ತಪ್ಪುಕಲ್ಪನೆಗಳನ್ನು ದೂರಮಾಡಿದೆ. ಕರ್ನಾಟಕದ ಸಾಹಿತ್ಯ ಮತ್ತು ಇತರ ತತ್ಸಂಬಂಧೀ ವಿಷಯಗಳ ಬಗೆಗೆ ಅತ್ಯಂತ ಪ್ರಮುಖವಾದ ಮಾಹಿತಿಯು ಲಭ್ಯವಾಗಿದ್ದು ಅವುಗಳನ್ನು ಒಂದೆರಡು ನುಡಿಗಳಲ್ಲಿ ವಿವರಿಸು ವುದು ಅಸಾಧ್ಯ...." [1]

ಪ್ರತಿಕ್ರಿಯೆಗಳು :

ರೈಸರು ಸಂಪಾದಿಸಿದ 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳನ್ನು ವಿದ್ವತ್ಪ್ರಪಂಚ ಹೇಗೆ ಸ್ವೀಕರಿಸಿತು ಎಂಬ ವಿಷಯ ಅಧ್ಯಯನ ಯೋಗ್ಯವಾಗಿದೆ. ಏಕೆಂದರೆ ಅದೇ ಕ್ಷೇತ್ರ ಗಳಲ್ಲಿ ಹತ್ತಾರು ವರ್ಷಗಳ ಕಾಲ ಸಕ್ರಿಯವಾಗಿ ಕಾರ್ಯ ನಿರ್ವಹಿಸಿರುವ ವಿದ್ವಾಂಸರುಗಳ ಅಭಿಪ್ರಾಯಕ್ಕೆ ವಿಶೇಷವಾದ ಮರ್ಯಾದೆಯಿದೆ.

ಪ್ರತಿಬಾರಿ ಹೊಸ ಶಾಸನಸಂಪುಟವೊಂದು ಪ್ರಕಟವಾದಾಗಲೂ ಪತ್ರಿಕೆಗಳು ಮತ್ತು ಇತರ ವಿದ್ವಾಂಸರು ಅವುಗಳ ಬಗೆಗಿನ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಈ ಅಭಿಪ್ರಾಯಗಳನೆಲ್ಲಾ ಒಟ್ಟುಗೂಡಿಸಿ ರೈಸರೇ 'works by B. Lewis Rice and Extracts from opinions thereon' ಎಂಬ ಸಣ್ಣ ಪತ್ರಿಕೆಯನ್ನು ಖಾಸಗಿ ಪ್ರಸಾರ ಕ್ಕೆಂದು ಹೊರಡಿಸಿದ್ದಾರೆ.[2] ಕೇಂಬ್ರಿಡ್ಜ್‌ನ 'ರೈಸ್ ಪತ್ರ ಸಂಗ್ರಹ'ದಲ್ಲಿರುವ ಈ ಪುಸ್ತಿಕೆಯ ಆಯ್ದಭಾಗಗಳನ್ನು ಗಮನಿಸಬಹುದಾಗಿದೆ.

1. **ಕೊಡಗಿನ ಸಂಪುಟದ ಬಗ್ಗೆ**

* "People intereted specially in coorg may find plenty of matter in these epigraphs to reward their persual of them"
  – *ಜೆ.ಎಫ್. ಫ್ಲೀಟ್, (JRAS ನಲ್ಲಿ)*

* "With his charecteristic historical imagination, Mr. Rice has successfully peeped into the forgotten past and has constructed forces vived pages of coorg history"
  – *Madras Mail*

1 Mysore & Coorg from Inscription. P–IX & XII (ಅನುವಾದ).

2 ಇವುಗಳಲ್ಲಿ ಕೆಲವನ್ನು ಎ.ಕ. ಸಂಪುಟಗಳ ಕಡೆಯಲ್ಲಿಯೂ ಕಾಣಬಹುದು.

2. ಉಳಿದ ಎಪಿಗ್ರಾಫಿಯ ಸಂಪುಟಗಳ ಬಗ್ಗೆ :

* "Mr. Rice deserves our hearty thanks for having brought to light such valuable materials on so important a period in the history of Southern India."
  – *Prof. Eggeling, in Ind. Ant.*

* "The numerons and various points of interest which the new epigraphic discoveries in Mysore offer, entitle Mr. Rice to the hearty congratulations of all Sanskritists, and to their warm thanks for the ability and indefatigable zeal with which he continues the Archeological explorations in the Province contided to his care."
  – *Dr. Buhler, in "Academy".*

* "Splendid work, of monumental character, which will bear your name to uttarani yugani." – *Prof. A. Weber.*

* "Supplies a great desideratum, as containing Saka dates for Chola kings whose inscriptions in the Madras Presidency are only dated in years of the reign."
  – *Dr. Hultzsch, in Report.*

* "The volumes contain an immense amount of most valuable information." – *Prof. Kielhorn.*

* "The discovery by Mr. Rice of Asoka inscriptions in Chitaldroog may be described without exaggeration as a discovery of an epoch-making character in the annals of Indian archaeology. Brahminism, Jainism, which was once the dominant creed in Kårnataka and Buddhism, which began to spread during the time of Asoka, have all left their traces in these permanent memorials, mostly of religious charity. The volumes constitute a very solid memorial to the activity of the Government of Mysore in matters historical and archaeological, and to the genius of Mr. Rice, who is responsible for their production. His Introductions to each volume are themselves a store house of valuable information." – *Times of India.*

* "Mr. Rice's volumes bear splendid testimony to his indefatigable exertiona. They will remain not merely a standing monument to his own good work, but a permanent source of stimulus and incentive to generations of future scholars and students." – *Madras Mail.*

* "The whole work is a valuable contribution to a branch study that seems only to gain fresh charms from age, and to be ever-fascinating to all who take it seriously." – *Daily Post.*

* "Mr. Rice has done recally useful work. Any other antiquarian has no need to search for inscriptions in the Mysore State: here they are in ready volumes, and all his time may be devoted to generalis-ation and discoveries." – *The Hindu.*

* "On the whole we are of opinion that Mr. Rice has rendered a valuable service to man, as he has helped the spread of the correct knowledge of history, which is indispensable for the welfare of the community. The Mysore Province is full of historical mementos of the memorable events in the past. These are thus placed beyond the pale of destruction, as the information which these books contain can never be lost, though the originals which furnished it might be reckoned with the majority in course of time." – *Evening Mail.*

ರೈಸ್-ಫ್ಲೀಟರ ನಡುವಣ ವಿವಾದ :

ರೈಸರ ಸಂಪುಟಗಳ ಗುಣವನ್ನು ಮೆಚ್ಚಿಕೊಂಡಷ್ಟೇ ತೀವ್ರವಾಗಿ ಅನೇಕರು ಅದರಲ್ಲಿ ಟೀಕೆ ದೋಷಗಳನ್ನು ಕಂಡುಹಿಡಿದಿದ್ದಾರೆ. ಶಾಸನ ಪಾಠವನ್ನು ಅವರು ಓದಿರುವ ರೀತಿ, ಅದನ್ನು ಅರ್ಥೈಸಿರುವ ಬಗೆ, ಮಂಡಿಸಿರುವ ಸಿದ್ಧಾಂತಗಳ ಯುಕ್ತಾಯುಕ್ತತೆ ಇತ್ಯಾದಿಯಾಗಿ ಹಲವು ಹತ್ತು ಬಗೆಗಳ ದೋಷವನ್ನು ಅಂದಿನಿಂದ ಇಂದಿನವರೆಗೆ ಅನೇಕರು ಗುರುತಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಮತ್ತು ಅನೇಕ ವರ್ಷಗಳ ಕಾಲ

ವಿದ್ವತ್‌ಪ್ರಪಂಚದಲ್ಲಿ ವಿಶೇಷವಾದ ಸಂಚಾಲನೆಯನ್ನು ಉಂಟು ಮಾಡಿದ್ದದ್ದು ಗಂಗರ ತಾಮ್ರಪಟಗಳ ನೈಜತೆ ಮತ್ತು ಕೃತಕತೆಗಳಿಗೆ ಸಂಬಂಧಿಸಿದಂತೆ ರೈಸ್ ಮತ್ತು ಫ್ಲೀಟರ ನಡುವೆ ನಡೆದ ವಿವಾದ. ವಿದ್ವಾಂಸರಿಬ್ಬರ ವಿಭಿನ್ನ ದೃಷ್ಟಿಕೋನದ ಪ್ರಾತಿನಿಧಿಕ ಉದಾಹರಣೆಯಾಗಿ ಈ ವಿವಾದದ ವಿವರಗಳನ್ನು ಗಮನಿಸಬಹುದು.

ರೈಸರು ಮೊದಲಿಗೆ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯಲ್ಲಿ ಮತ್ತು ಆನಂತರ ಮೈಸೂರು ಇನ್‌ಸ್ಕ್ರಿಪ್ಷನ್ಸ್ ಕೃತಿಯಲ್ಲಿ ಪ್ರಕಟಿಸಿದ ಏಳು ತಾಮ್ರ ಶಾಸನಗಳು[1] ಈ ವಿವಾದದ ಶುರುವಾತಿಗೆ ಕಾರಣವಾದವು. ಇವುಗಳಲ್ಲಿಯ ಮಾಹಿತಿಯನ್ನು ಆಧರಿಸಿ ರೈಸರು ಗಂಗರ ಇತಿಹಾಸವನ್ನು ಬರೆಯಲು ಯತ್ನಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಫ್ಲೀಟರು ಇಂಡಿಯನ್ ಆಂಟಿಕ್ವೆರಿಯ 1883ರ ಏಪ್ರಿಲ್ ಸಂಚಿಕೆಯಲ್ಲಿ[2] 'The Gangas' ಎಂಬ ಲೇಖನವನ್ನು ಬರೆದು 'ಗಂಗ ಎಂಬ ಪ್ರಾಚೀನವಾದ ಮತ್ತು ಪ್ರಮುಖವಾದ ರಾಜವಂಶವಿದ್ದದ್ದು ನಿಜ. ಆದರೆ ರೈಸರು ಹೇಳಿದಂತೆ ಅವರು ಕಂಡುಹಿಡಿದಿರುವ ತಾಮ್ರ ಶಾಸನಗಳಲ್ಲಿನ ಮಾಹಿತಿಯ ಆಧಾರದಿಂದ ಗಂಗರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುವುದು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ನಾನು ಪತ್ತೆ ಮಾಡಿರುವ ಕ್ರಿ.ಶ. 247-48ರ, ಆ ವಂಶದ ಮೂರನೇ ತಲೆಮಾರಿನವರಾದ ಲಕ್ಷ್ಮೇಶ್ವರದ ಶಾಸನವೇ ಗಂಗರನ್ನು ಕುರಿತು ಲಭ್ಯವಿರುವ ಅತ್ಯಂತ ಪ್ರಾಚೀನ ದಾಖಲೆಯಾಗಿದ್ದು ರೈಸರು ಪತ್ತೆ ಹಚ್ಚಿರುವ ತಾಮ್ರಶಾಸನಗಳೆಲ್ಲ ಕೂಟಶಾಸನಗಳಾಗಿವೆ. ಏಕೆಂದರೆ ಮಡಿಕೇರಿಯ ತಾಮ್ರಪಟದ ಕಾಲ 388, ಮತ್ತು ನಾಗಮಂಗಲದ್ದು 698. ಆದರೆ ಈ ಎರಡನ್ನು 'ವಿಶ್ವಕರ್ಮಾಚಾರ್ಯ' ಎಂಬ ಒಬ್ಬನೇ ಬರೆದಂತೆ ಲಿಖಿತವಾಗಿದೆ. ಇದು ಹೇಗೆ ಸಾಧ್ಯ?' ಎಂದು ಪ್ರಶ್ನಿಸಿದ್ದಾರೆ. ಲೇಖನದ ಕೊನೆಯಲ್ಲಿ "ಮಡಿಕೇರಿಯ ತಾಮ್ರಪಟಗಳ ಲಿಪಿಯು 9ನೇ ಶತಮಾನಕ್ಕಿಂತ ಹಳೆಯದಲ್ಲವಾದ್ದರಿಂದ ರೈಸರು ಹೇಳುವಂತೆ ಆ ಶಾಸನದಲ್ಲಿ ಹೇಳಿರುವ ಅಕಾಲವರ್ಷನು ಕ್ರಿ.ಶ. ನಾಲ್ಕನೇ ಶತಮಾನದವನಲ್ಲ. ಹಾಗಾಗಿ ರೈಸರು ಹೇಳುವ ಗಂಗರು ಕದಂಬರು ಮತ್ತು ಇಮ್ಮಡಿ ಪುಲಿಕೇಶಿಯನ್ನು ಸಂಧಿಸಿದ ಗಂಗರಲ್ಲ. ಗಂಗರ ನಿಜವಾದ ಇತಿಹಾಸವನ್ನು ನಿರ್ದಿಷ್ಟವಾಗಿ ನಿರೂಪಿಸಲು ಇನ್ನೂ ಹೆಚ್ಚಿನ ಮಾಹಿತಿ ಅಗತ್ಯವಿದೆ" ಎಂದು ಅಭಿಪ್ರಾಯಪಟ್ಟರು.[3]

ಫ್ಲೀಟರ ಈ ಆಕ್ಷೇಪಣೆಗಳಿಗೆ ಉತ್ತರವನ್ನು ರೈಸ್ 1886ರಲ್ಲಿ ಪ್ರಕಟವಾದ 'Coorg Inscriptions'ನ ಪ್ರಸ್ತಾವನೆಯಲ್ಲಿ ಕೊಟ್ಟಿದ್ದಾರೆ. 'ವಿಶ್ವಕರ್ಮ' ಎನ್ನುವುದು ಒಬ್ಬ ವ್ಯಕ್ತಿಯ ಹೆಸರಲ್ಲಿ ಬದಲಿಗೆ ಒಂದು ಜನಾಂಗದ ಹೆಸರು ಹಾಗಾಗಿ ಬೇರೆ ಬೇರೆ

1 Mys. Ins.ನ ಶಾಸನಗಳ ಸಂಖ್ಯೆ 151-157.

2 P. 111–113.

3 ಅಲ್ಲೇ., P–113.

ಕಾಲಘಟ್ಟಗಳ ಶಾಸನಗಳಲ್ಲಿ ಈ ಒಂದೇ ಹೆಸರು ಇರಬಾರದೆಂದೇನೂ ಇಲ್ಲ. ಎಂದು ಅವರು ಹೇಳಿದ್ದಾರೆ.[1]

ಇದರಿಂದ ಸಮಾಧಾನಗೊಳ್ಳದ ಫ್ಲೀಟರು ಎಪಿಗ್ರಾಫಿಯ ಇಂಡಿಕಾದ ಮೂರನೇ ಸಂಪುಟದಲ್ಲಿ[2] "Spurious Sudi Copper-plate grant purtaining to have been issued by Butuga in Saka-Samvat 860" ಎಂಬ 19 ಪುಟಗಳ ಸುದೀರ್ಘನಾದ ಲೇಖನವನ್ನು ಬರೆದು ರೈಸರ ಆವರೆಗಿನ ಗಂಗರನ್ನು ಕುರಿತಾದ ನಿಲುವನ್ನು ಖಂಡಿಸಿದ್ದಾರೆ. ಮೂಲ ಲೇಖನವು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಸೂಡಿ ಎಂಬಲ್ಲಿ ಸಿಕ್ಕ ತಾಮ್ರಶಾಸನಕ್ಕೆ ಸಂಬಂಧಿಸಿದ್ದಾರೂ ಪ್ರಾಸಂಗಿಕವಾಗಿ ಫ್ಲೀಟರು ರೈಸರು ಪ್ರಕಟಿಸಿದ ತಾಮ್ರಶಾಸನಗಳ ನೈಜತೆಯನ್ನು ಪ್ರಶ್ನಿಸಿದ್ದಾರೆ.

> *"ರೈಸರು ಪತ್ತೆ ಹಚ್ಚಿರುವ ಈ ಶಾಸನವು ಪಶ್ಚಿಮ ಗಂಗರ ಕೃತಕ ತಾಮ್ರ ಪಟಗಳ ಗುಂಪಿಗೇ ಸೇರುವಂತಹುದು. ಇವುಗಳನ್ನೆಲ್ಲಾ ನೈಜವೆಂದು ಅವರು ತಪ್ಪಾಗಿ ಗ್ರಹಿಸಿದ್ದಾರೆ ಮತ್ತು ದುರದೃಷ್ಟಕರ ಸಂಗತಿಯೆಂದರೆ ಈ ಶಾಸನಗಳ ವಿವರಗಳು ಗಂಗರ ಕಾಲಘಟ್ಟಕ್ಕೆ ಸೇರಿದ ರೈಸರ ಎಲ್ಲ ಬರಹಗಳಲ್ಲೆಲ್ಲ ವ್ಯಾಪಿಸಿಕೊಂಡು ಅವುಗಳನ್ನು ಕೆಡಿಸಿವೆ. ಹಿಂದೆಯೇ ನಾನು ಈ ಶಾಸನಗಳು ಕೃತಕ ಎನ್ನುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಕೊಟ್ಟು ನನ್ನ ಸಿದ್ಧಾಂತವನ್ನು ಮಾಡಿಸಿದ್ದೆ. ಆದರೆ ಆದರೂ ರೈಸ್ ಅದನ್ನು ಒಪ್ಪದೆ ತಮ್ಮ ವಾದಕ್ಕೇ ಅಂಟಿಕೊಂಡಿದ್ದಾರೆ. ಹಾಗಾಗಿ ನಾನು ಈ ಅವಕಾಶವನ್ನು ಬಳಸಿಕೊಂಡು ಪ್ರಸ್ತುತ ಪ್ರಕರಣವನ್ನು ಇನ್ನಷ್ಟು ಸಮಗ್ರವಾಗಿ ವಿವೇಚಿಸ ಬಯಸುತ್ತೇನೆ. 12 ವರ್ಷಗಳ ಹಿಂದೆ ಗಂಗರನ್ನು ಕುರಿತು ನಾನು ಬರೆದಾಗ ಅವರ ಮನಸ್ಸು ಬದಲಾಗಬಹುದೆಂದು ನಾನು ಭಾವಿಸಿದ್ದೆ. ಆದರೆ ಆ ಕಾರ್ಯ ಆಗಲಿಲ್ಲ. ಈಗ ಭಾರತದ ಪ್ರಾಚೀನ ಇತಿಹಾಸವನ್ನು ಅಭ್ಯಸಿಸುವವರು ಮೂಲಶಾಸನಗಳನ್ನು ಗಮನಿಸಿದರೆ ರೈಸ್ ಬರೆದ ಕೃತಿಗಳನ್ನೇ ನೆಚ್ಚಿಕೊಂಡು ಅವರು ಮಾಡಿದ ತಪ್ಪನ್ನೇ ಮತ್ತೆ ಪುನರಾವರ್ತಿಸದಂತೆ ತಡೆಯಲು ಮತ್ತು ಕೃತಕ ತಾಮ್ರಪಟಗಳಲ್ಲಿರುವ ಮಾಹಿತಿಯನ್ನು ನಂಬಿ ದಾರಿಗೆಡದಿರಲೆಂಬ ಉದ್ದೇಶದಿಂದ ಈ ಲೇಖನವನ್ನು ಬರೆದಿದ್ದೇನೆ"* ಎಂದು ಅವರು ಕಟುವಾಗಿ ರೈಸರನ್ನು ಟೀಕಿಸಿದ್ದಾರೆ.[3]

ರೈಸರು ನೈಜವೆಂದು ಪರಿಗಣಿಸಿರುವ ಒಂಬತ್ತು ತಾಮ್ರಶಾಸನಗಳನ್ನು ಫ್ಲೀಟ್ ತಮ್ಮ ಬರಹದ ಮುಖ್ಯವಸ್ತುವಾಗಿರಿಸಿಕೊಂಡಿದ್ದಾರೆ. ಅವೆಂದರೆ

1 Coorg Ins., P–10.

2 1891. P–158-177.

3 E.I. III. P. 159 (ಸಾರಾಂಶ ಮತ್ತು ಅನುವಾದ).

ಕ್ರ.ಸಂ.	ಶಾಸನದ ಹೆಸರು	ಕಾಲ	ರಾಜ	ಪ್ರಕಟಣೆಯ ಸ್ಥಳ
1.	ತಂಜಾವೂರಿನ ಶಾಸನ	ಕ್ರಿ.ಶ. 248	ಹರಿವರ್ಮ	Ind. Ant. VIII
2.	ಹರಿಹರದ ತಾಮ್ರಪಟ	ಕ್ರಿ.ಶ. 351	ಇಮ್ಮಡಿ ಮಾಧವ?	Ind. Ant. VII
3.	ಮಲ್ಲೋಹಳ್ಳಿಯ ತಾಮ್ರಪಟ	ಕ್ರಿ.ಶ. 454-55	ಅವನೀತ ಕೊಂಗಣಿ	Ind. Ant. V
4.	ಮಡಿಕೇರಿ ತಾಮ್ರಪಟ	ಕ್ರಿ.ಶ. 466	ಅವನೀತ ಕೊಂಗಣಿ	Mys. Ins.
5.	ಬೆಂಗಳೂರು ಮ್ಯೂಸಿಯಂನ ತಾಮ್ರಪಟ	ಕ್ರಿ.ಶ. 481-82	ದುರ್ವಿನೀತ ಕೊಂಗಣಿ	Ind. Ant. VII
6.	ಮಲ್ಲೋಹಳ್ಳಿ ತಾಮ್ರಪಟ	ಕ್ರಿ.ಶ. 513-14	ದುರ್ವಿನೀತ ಕೊಂಗಣಿ	Ind. Ant. V
7.	ಹೊಸೂರು ತಾಮ್ರಪಟ	ಕ್ರಿ.ಶ. 762	ಶ್ರೀಪುರುಷ	Mys. Ins.
8.	ನಾಗಮಂಗಲ ತಾಮ್ರಪಟ	ಕ್ರಿ.ಸ. 776-77	ಶ್ರೀಪುರುಷ	Ind. Ant. Vol. II
9.	ಬ್ರಿಟಿಷ್ ಮ್ಯೂಸಿಯಂ ತಾಮ್ರಪಟ	?	ಎರೆಯಂಗ	Ind. Ant. XII

ಇವುಗಳಲ್ಲಿ ನಾಗಮಂಗಲದ ತಾಮ್ರಪಟಗಳನ್ನು ಬಿಟ್ಟರೆ ಉಳಿದ ಯಾವುದರಲ್ಲಿಯ ಲಿಪಿಗಳೂ ಗಂಗರ ಕಾಲದ ಲಿಪಿಗಳನ್ನು ಹೋಲುವುದಿಲ್ಲ, ಶಬ್ದಉಚ್ಚಾರಶಾಸ್ತ್ರ (orthography) ಮತ್ತು ಲಿಪಿಶಾಸ್ತ್ರ (paleography) ಎರಡರ ಆಧಾರದಿಂದಲೂ ಇವು ಕೃತಕ ಎನ್ನುವುದು ಫ್ಲೀಟರ ಪ್ರಮುಖವಾದ ವಾದ. "ನಾಗಮಂಗಲ ಪಟವನ್ನು ಆ ಕಾಲದ ಲಿಪಿಯಲ್ಲಿಯೇ ಬರೆಯಲು ಪ್ರಯತ್ನಪೂರ್ವಕವಾಗಿ ಯತ್ನಿಸಿದೆಯಾದರೂ ಅದೂ ಕೃತಕ. ತಂಜಾವೂರಿನ ತಾಮ್ರಪಟಗಳ ಲಿಪಿಯ ಸ್ವರೂಪ 10ನೇ ಶತಮಾನದ್ದು ಆದರೆ ಶಾಸನೋಕ್ತ ಕಾಲ ಕ್ರಿ.ಶ. 248, ಇದರಲ್ಲಿನ 'ಲ' ಸ್ಪಷ್ಟವಾಗಿ 10ನೇ ಶತಮಾನದ್ದು. ಹರಿಹರದ ತಾಮ್ರಪಟಗಳ ಕಾಲ ಕ್ರಿ.ಶ. 351ದಾದರೂ 11ನೇ ಶತಮಾನದ 'ಕ', 'ಯ' 'ಪ', 'ಮ' ಗಳನ್ನು ಅಲ್ಲಿ ನೋಡಬಹುದು. ಮಡಿಕೇರಿ ತಾಮ್ರಪಟದ ಕಾಲ ಕ್ರಿ.ಶ. 466. ಆದರೆ ಇದರಲ್ಲಿಯ 'ಖ' 10ನೇ ಶತಮಾನದ್ದು. ನಾಗಮಂಗಲದ ಪಟಗಳ ಕಾಲ 776 ಆದರೂ ಲಿಪಿ 9-10ನೇ ಶತಮಾನದವು" ಎಂಬುದು ಅವರ ಅಭಿಪ್ರಾಯ.

"ಈ ಶಾಸನಗಳಲ್ಲಿ ಉಕ್ತವಾಗಿರುವ ಶಕ ವರ್ಷ, ಸಂವತ್ಸರ, ದಿನ, ವಾರ, ತಿಥಿ ಗಳೂ ಒಂದಕ್ಕೊಂದು ತಾಳೆಯಾಗುವುದಿಲ್ಲ. ಹಾಗಾಗಿ ಲಕ್ಷ್ಮೇಶ್ವರದ ಶಿಲಾಶಾಸನವೊಂದೇ ಗಂಗರ ವಂಶವೃಕ್ಷವನ್ನು ಸರಿಯಾಗಿ ದಾಖಲಿಸಿರುವ ಶಾಸನ" ಎಂದು ತಮ್ಮ ವಾದವನ್ನು ಅವರು ಸಮಾಪ್ತಿಗೊಳಿಸಿದ್ದಾರೆ ಮತ್ತು ಕಡೆಯಲ್ಲಿ "ಚಿಕಿತ್ಸಕ ಬುದ್ಧಿಯುಳ್ಳ ಯಾರಾದರೂ ನನ್ನ ನಿಲುವು ಸರಿಯೆಂದು ಒಪ್ಪಿಕೊಳ್ಳುತ್ತಾರೆ. ಈ ಅಂಶವನ್ನು ನಾನು ಪದೇ ಪದೇ ಏಕೆ ಒತ್ತಿಹೇಳಬೇಕೆಂದರೆ ಮೈಸೂರು ಸಂಸ್ಥಾನದಲ್ಲಿ ಅನೇಕ ನೈಜ ಶಾಸನಗಳನ್ನು ಕಂಡುಹಿಡಿದು ಪ್ರಕಟಿಸುವಂತಹ ಅಪರೂಪದ ಅವಕಾಶದೊರೆತಿದ್ದರೂ ರೈಸ್ ಇಂತಹ ಕೂಟಶಾಸನ ಗಳನ್ನು, ಅವುಗಳಲ್ಲಿರುವ ತಪ್ಪು ಮಾಹಿತಿಯನ್ನು ನಂಬಿಕೊಂಡು ತಾನು ಬರೆದದ್ದೆಲ್ಲವೂ

ನಿಷ್ಪ್ರಯೋಜಕವಾಗುವಂತೆ ಮಾಡಿಕೊಂಡಿದ್ದಾರೆ. ತನ್ನ ಬರಹಗಳಿಗೆ ಬೆಲೆ ಮತ್ತು ಘನತೆ ಬರಬೇಕಾದರೆ ರೈಸ್ ಈ ಎಲ್ಲ ಕೃತಕ ದಾಖಲೆಗಳನ್ನೂ ಮೊದಲು ತ್ಯಜಿಸಬೇಕು ಮತ್ತು ಇದನ್ನು ಆಧರಿಸಿ ಬರೆದ ಎಲ್ಲ ಬರಹಗಳನ್ನೂ ಹೊಡೆದುಹಾಕಬೇಕು ಮತ್ತು ವಿದ್ವಾಂಸರು ಪ್ರಶ್ನೆಮಾಡಲು ಸಾಧ್ಯವಾಗದಿರುವಂತಹ ಅಧಿಕೃತ ದಾಖಲೆಗಳನ್ನು ಆಧರಿಸಿಯೇ ಚರಿತ್ರೆ ಎಂದು ಹೆಸರಿಸಬಹುದಾದದ್ದನ್ನು ಪ್ರಕಟಿಸಬೇಕು'' ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.[1]

1898ರಲ್ಲಿ ಪ್ರಕಟವಾದ 'ಎಪಿಗ್ರಾಫಿಯ ಕರ್ನಾಟಕ'ದ ನಾಲ್ಕನೇ ಸಂಪುಟ (ಮೈಸೂರು, ಭಾಗ2)ದಲ್ಲಿ ಫ್ಲೀಟರ ಆಕ್ಷೇಪಣೆಗಳಿಗೆ ರೈಸ್ ಉತ್ತರಿಸಿದ್ದಾರೆ. 'ಉಚ್ಚಾರಶಾಸ್ತ್ರ ಮತ್ತು ಲಿಪಿಶಾಸ್ತ್ರಗಳ ಆಧಾರದಿಂದ ಈ ಶಾಸನಗಳನ್ನು ನೈಜ ಎಂದು ಒಪ್ಪಲು ಸಾಧ್ಯವಿಲ್ಲ' ಎಂಬ ಫ್ಲೀಟರ ಅಭಿಪ್ರಾಯಕ್ಕೆ ಅವರು ಪ್ರತಿಕ್ರಿಯಿಸುತ್ತಾ ''ಈ ಮಾನದಂಡಗಳೇ ಪ್ರಮುಖವಾದರೆ ಈಗ ನೈಜವೆಂದು ಪರಿಗಣಿಸಿರುವ ಎಷ್ಟೋ ಶಾಸನಗಳನ್ನು ಕೂಟಶಾಸನಗಳೆಂದು ಪರಿಗಣಿಸಬೇಕಾಗುತ್ತದೆ. 'ಖ' ಎಂಬ ಅಕ್ಷರವು ಅನೇಕ ರೀತಿಯಲ್ಲಿ ಲಿಖಿತವಾಗಿರುವುದಕ್ಕೆ ಅನೇಕ ಉದಾಹರಣೆಗಳಿವೆ. ಮಾಮಲ್ಲಪುರಂನಲ್ಲಿರುವ ಧರ್ಮರಾಜ ಮಂಟಪದ ಶಾಸನವನ್ನೇ ನೋಡಬಹುದು. ಹುಲ್ಷ್ ಇದನ್ನು 6ನೇ ಶತಮಾನದ್ದೆಂದು ಗುರುತಿಸಿದ್ದಾರೆ. ಅದನ್ನು ಫ್ಲೀಟ್ ಒಪ್ಪಿಕೊಂಡಿದ್ದಾರೆ. ಆ ಶಾಸನದ ಏಳನೇ ಭಾಗದಲ್ಲಿ 'ಶ್ರೀಮುಖ' ಎಂಬ ಹೆಸರಿದೆ. ಇದರಲ್ಲಿಯ 'ಖ' ಫ್ಲೀಟ್ ಯಾವ ಲಿಪಿ ಕ್ರಿ.ಶ. 804ಕ್ಕಿಂತ ಹಿಂದೆ ಇರಲೇ ಇಲ್ಲವೆಂದು ಪ್ರತಿಪಾದಿಸುವರೋ ಆ ಆಧುನಿಕ ಮೋಡಿಲಿಪಿಯಲ್ಲಿದೆ. ಇದೇ ರೀತಿಯಲ್ಲಿಯೇ ಗಂಗರ ತಾಮ್ರಪಟಗಳಲ್ಲಿಯೂ ಆಗಿರುವ ಸಾಧ್ಯತೆಗಳಿವೆ'' ಎಂದಿದ್ದಾರೆ.[2]

ವಿಶ್ವಕರ್ಮನೆಂಬ ಒಬ್ಬನೇ ಲಿಪಿಕಾರ ಬೇರೆ ಬೇರೆ ಕಾಲಘಟ್ಟದ ಶಾಸನಗಳ ಅನೇಕವನ್ನು ಸಿದ್ಧಪಡಿಸಿರುವ ಬಗ್ಗೆ ಮತ್ತು ವಿವಿಧ ಶಾಸನಗಳಲ್ಲಿರುವ ಸಾಕ್ಷಿಗಳ ಹೆಸರುಗಳು ಒಂದೇ ಆಗಿರುವ ಬಗ್ಗೆ ಅವರ ಸಮಾಧಾನವಿದು - ''ವಿಶ್ವಕರ್ಮ ಅಥವಾ ವಿಶ್ವ ಕರ್ಮಾಚಾರ್ಯ ಎಂಬುವವನು ಒಬ್ಬನೇ ವ್ಯಕ್ತಿ ಎಂಬ ಊಹೆಯ ಮೇಲೆ ಫ್ಲೀಟ್ ಈ ಶಾಸನಗಳು ಕೃತಕ ಎಂದು ಭಾವಿಸಿದ್ದಾರೆ. ಆದರೆ ಮಳವಳ್ಳಿಯಲ್ಲಿ ನಾನು ಕಂಡುಹಿಡಿದ ಕದಂಬರ ಸ್ಥಂಭ ಶಾಸನವೊಂದರ ಶಿಲ್ಪಿಯೂ ವಿಶ್ವಕರ್ಮನೆಂದೇ. ಆದ್ದರಿಂದ ಈ ಹೆಸರು ರಾಜಶಿಲ್ಪಿಗಳ ಒಂದು ಮನೆತನಕ್ಕೆ ಅನುವಂಶಿಕವಾಗಿ ಬಂದಿದ್ದು ಅವರು ಮೊದಲಿಗೆ ಕದಂಬರಲ್ಲಿ ಸೇವೆ ಸಲ್ಲಿಸುತ್ತಿದ್ದು ಅನಂತರ ಗಂಗರಲ್ಲಿ ಸೇರಿಕೊಂಡಿರಬೇಕು. ಇದೇ ರೀತಿಯಲ್ಲಿ ಬೇರೆ ಬೇರೆ ಶಾಸನಗಳಲ್ಲಿರುವ ಸಾಕ್ಷಿಗಳ ಹೆಸರುಗಳು ಸ್ಥಳದ ಆಡಳಿತದ ಸೂತ್ರಗಳನ್ನು ಹಿಡಿದಿರುವ ಅಧಿಕಾರಿಗಳಿಗೆ ವಂಶ ಪಾರಂಪರ್ಯವಾಗಿ ಬಂದ ಹೆಸರುಗಳಾಗಿರುವ ಸಾಧ್ಯತೆ ಇದೆ''.[3]

---

1 ಅಲ್ಲೇ. P–172. (ಅನುವಾದ).

2 EC IV., Mysore(2) P. 6 (ಸಾರಾಂಶ).

3 ಅಲ್ಲೇ. P. 7 (ಸಾರಾಂಶ).

"9ನೇ ಶತಮಾನದ ಅಂತಿಮ ಪಾದದಲ್ಲಿ ದಕ್ಷಿಣಭಾರತದ ಎಲ್ಲ ಪ್ರಮುಖ ರಾಜವಂಶಗಳೂ ತಮ್ಮ ವಂಶಾವಳಿಗಳಿಗೆ ಪುರಾಣದ ವಿವರಗಳನ್ನು ಸೇರಿಸಿಕೊಳ್ಳುವ ಮೂಲಕ ಅದನ್ನು ಗೌರವಾನ್ವಿತಗೊಳಿಸಿಕೊಳ್ಳಲು ಯತ್ನಿಸಿದರು" ಎಂಬ ಫ್ಲೀಟರ ಆರೋಪದ ಬಗ್ಗೆ "ಗಂಗರ ವಂಶಾವಳಿಯಲ್ಲಿ ಪೌರಾಣಿಕ ಅಂಶಗಳಿಲ್ಲ. ಮೈಸೂರಿಗೆ ಸಂಬಂಧಿಸಿದ ಅವರ ವಿವರಗಳೆಲ್ಲವೂ ಚರಿತ್ರೆಯ ವಾಸ್ತವ ಸಂಗತಿಗಳಾಗಿವೆ. ಈ ವಂಶದ ಮೊದಲ ರಾಜ ಸೆಣೆಸಿದ್ದು ಚಾರಿತ್ರಿಕವಾಗಿ ಸ್ಪಷ್ಟ ಉಲ್ಲೇಖವುಳ್ಳ ಬಾಣರಜೊತೆಗೆ. ಎರಡನೆಯವನು 'ದತ್ತಕ ಸೂತ್ರ'ಕ್ಕೆ ವೃತ್ತಿಯನ್ನು ಬರೆದವ. ಮೂರನೆಯವ ಪೂಜ್ಯಪಾದರಿಂದ ವಿದ್ಯೆಕಲಿತು ಭಾರವಿಯ ಕಿರಾತಾರ್ಜುನೀಯಕ್ಕೆ ವ್ಯಾಖ್ಯಾನವನ್ನು ಬರೆದವನು. ಇವಾವುವೂ ಪೌರಾಣಿಕ ಘಟನೆಗಳಲ್ಲ. ಗಂಗವಾಡಿ ಎಂಬ ಸ್ಥಳನಾಮವೇ ಅವರ ಐತಿಹಾಸಿಕತೆಗೆ ಸಾಕ್ಷಿ. ಈಗ ಗಂಗಡಿಕಾರರೆಂದು ಕರೆಯಲ್ಪಡುವ 'ಗಂಗವಾಡಿಕಾರರು' ಈಗಲೂ ಈ ಪ್ರಾಂತ್ಯದ ಕೃಷಿಕ ವರ್ಗದಲ್ಲಿ ಪ್ರಧಾನ ಅಂಗವಾಗಿದ್ದಾರೆ" ಎಂದು ಅವರು ಉತ್ತರಿಸಿದ್ದಾರೆ.[1]

ಎಪಿಗ್ರಾಫಿಯ ಇಂಡಿಕಾದ ಆರನೇ ಸಂಪುಟದಲ್ಲಿರುವ 'Three Western Ganga Records in the Mysore Government Museum at Bangalore' ಎಂಬ ಲೇಖನದಲ್ಲಿ[2] ರೈಸರ ಪ್ರತಿಕ್ರಿಯೆಗೆ ಫ್ಲೀಟರ ಮರುಪ್ರತಿಕ್ರಿಯೆ ಇದೆ. 83 ಪುಟಗಳ ಈ ಸುದೀರ್ಘ ಲೇಖನದಲ್ಲಿ ಅವರು ಗಂಗವಂಶಕ್ಕೆ ಸಂಬಂಧಿಸಿದಂತೆ ಆವರೆಗೆ ನಡೆದಿರುವ ಎಲ್ಲ ಸಂಶೋಧನೆಯನ್ನು ಸಮೀಕ್ಷಿಸಿದ್ದಾರಲ್ಲದೆ ತಮ್ಮ ಮತ್ತು ರೈಸರ ನಡುವೆ ನಡೆದಿರುವ ಚರ್ಚೆಯ ವಿವಿಧ ಮಗ್ಗಲುಗಳನ್ನು ವಿವರಿಸಿದ್ದಾರೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಶಾಸನಗಳನ್ನು ಅಭ್ಯಸಿಸುವ ಅತ್ಯುತ್ತಮ ಮಾದರಿಯಂತಿರುವ ಈ ಲೇಖನದ ಕೊನೆಯಲ್ಲಿ ಹಿಂದೆ ತಾವು ಕೈಗೊಂಡಿದ್ದ ಅನೇಕ ತೀರ್ಮಾನಗಳನ್ನು ಬದಲಿಸುವ ಮೂಲಕ ಗಂಗರ ಎಲ್ಲ ಶಾಸನಗಳೂ ಕೃತಕವಲ್ಲ ಎಂಬ ಹೊಸ ನಿರ್ಣಯಕ್ಕೆ ಬಂದಿದ್ದಾರೆ. ಗಂಗವಂಶಕ್ಕೆ ಸಂಬಂಧಿಸಿದಂತೆ ಫ್ಲೀಟರಿಗೆ ಇದ್ದ ಅಪನಂಬಿಕೆಗಳನ್ನು ದೂರಮಾಡಿದ್ದು ಎಪಿಗ್ರಾಫಿಯ ಇಂಡಿಕಾದ ನಾಲ್ಕನೇ ಸಂಪುಟದಲ್ಲಿ (ಪು. 140) ಹುಲ್ಷ್‌ರು ಪ್ರಕಟಿಸಿದ "Jaina Rock inscriptions at Vallimalai" ಎಂಬ ಲೇಖನ. ಮುಂದೆ ಫ್ಲೀಟರು 1915ರ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ 'A New Ganga Record' ಎಂಬ ಲೇಖನವನ್ನು ಬರೆದು ಪೆನುಗೊಂಡೆಯ ಆದೆಂಭಟ್ಟ ಎನ್ನುವವರಲ್ಲಿದ್ದ ಇಮ್ಮಡಿ ಮಾಧವನ (ಕ್ರಿ.ಶ. 468) ತಾಮ್ರಪಟವನ್ನು ಸಂಪಾದಿಸಿ ಪ್ರಕಟಿಸಲೆಂದು ರೈಸರಿಗೆ ಕೊಟ್ಟಿದ್ದಾರೆ. 1919ರ ಏಪ್ರಿಲ್ ಸಂಚಿಕೆಯಲ್ಲಿ ಇದನ್ನು ರೈಸ್ ಪ್ರಕಟಿಸುವುದರೊಂದಿಗೆ ಇವರೀರ್ವರ ನಡುವಣ ವಾಗ್ವಾದ ಮುಕ್ತಾಯವಾಯಿತು.

ವೈಯಕ್ತಿಕ ರಾಗದ್ವೇಷಗಳನ್ನು ಬೆರೆಸದೆ ಕೇವಲ ಬೌದ್ಧಿಕ ಮಟ್ಟದಲ್ಲಿಯೇ ನಡೆದ ಈ ವಿದ್ವದ್ವಿವಾದ ಇಬ್ಬರು ಘನವಿದ್ವಾಂಸರ ನಡುವಣ ಸತ್ಯನಿಷ್ಠೆಯ ದ್ಯೋತಕವಾಗಿದೆ.

---

1 ಅಲ್ಲೇ. P. 8 (ಸಾರಾಂಶ).

2 E.I. Vol. VI.. P. 40–83.

ಇತರ ವಿದ್ವಾಂಸರ ಅಭಿಪ್ರಾಯಗಳು :

ರೈಸರ ಸಮಕಾಲೀನರು ಮತ್ತು ಅನಂತರದ ಪೀಳಿಗೆಯ ವಿದ್ವಾಂಸರನೇಕರು ರೈಸರು ಸಂಪಾದಿಸಿ ಪ್ರಕಟಿಸಿರುವ ಶಾಸನಗಳನ್ನು ಮತ್ತು ಅವರ ವಿಶ್ಲೇಷಣೆಯ ಬಗ್ಗೆ ಅನೇಕ ರೀತಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಗಂಗರ ತಾಮ್ರಪಟಗಳ ಮತ್ತು ಗಂಗವಂಶದ ಬಗೆಗೆ ಆರ್ ನರಸಿಂಹಾಚಾರ್ಯ,[1] ನೆಲಮಂಗಲ ಲಕ್ಷ್ಮೀನಾರಾಯಣರಾಯರು ಮತ್ತು ಆರ್.ಎಸ್. ಪಂಚಮುಖಿ,[2] ಎಚ್.ಎಸ್. ಗೋಪಾಲ ರಾವ್,[3] ಕೆ.ವಿ. ರಮೇಶ್,[4] ಬಿ.ಷೇಕ್ ಅಲಿ[5] ಮುಂತಾದವರ ಬರಹಗಳನ್ನು ಇಲ್ಲಿ ಉದಾಹರಣೆಯಾಗಿ ಹೆಸರಿಸಬಹುದು. ಅಷ್ಟೇ ಅಲ್ಲದೆ ಶ್ರವಣಬೆಳಗೊಳಕ್ಕೆ ಬಂದ ಭದ್ರಬಾಹು ಮತ್ತು ಚಂದ್ರಗುಪ್ತರು ಯಾರು ಎನ್ನುವುದರ ಬಗ್ಗೆ ಫ್ಲೀಟ್, ಗೋವಿಂದ ಪೈ, ಹುಲ್ಲೂರು ಶ್ರೀನಿವಾಸಜೋಯಿಸ್ ಮುಂತಾದವರು ಚರ್ಚಿಸಿರುವ ಅನೇಕ ಬರಹಗಳಿವೆ; ರೈಸರು ಚಿತ್ರದುರ್ಗದ ಪ್ರಾಚೀನ ಹೆಸರಿನ ಮೊದಲ ಅಕ್ಷರವನ್ನು ಕೆಲವೊಮ್ಮೆ 'ಬೆ' ಎಂದೂ ಮತ್ತೆ ಕೆಲವು ಬಾರಿ 'ಚಿ' ಎಂದು ಓದಿರುವುದನ್ನು, 'ಬಾಚೋಜ' ಎಂಬ ಶಬ್ದವನ್ನು ಅವರು 'ಬಾಬೋಜ' ಎಂದು, 'ಭಟ್ಟವೃತ್ತಿ'ಯನ್ನು 'ಚಟ್ಟವೃತ್ತಿ' ಎಂದು, 'ಚಿಮ್ಮಗ್ರಾವುಣ್ಡ'ವನ್ನು 'ಬಿಮ್ಮಗ್ರಾವುಣ್ಡ' ಎಂದು, 'ಬ್ರಹ್ಮಪುರಿಗೇರಿ' ಯನ್ನು 'ಬ್ರಹ್ಮಪುರಗಿರಿ' ಎಂದು ತಪ್ಪಾಗಿ ಓದಿದ್ದಾರೆ ಎಂದು ಪ್ರತಿಪಾದಿಸಿರುವ ವಿದ್ವಾಂಸರಿದ್ದಾರೆ[6] ಮೂಲಪಾಠಕ್ಕೂ, ರೋಮನ್ ಲಿಪ್ಯಂತರಕ್ಕೂ ವ್ಯತ್ಯಾಸಗಳಿರುವುದು, ಅನುವಾದದಲ್ಲಿ ಶಾಸನಗಳ ನೈಜ ಅರ್ಥಕ್ಕೆ ಬದಲಾಗಿ ಬೇರೊಂದು ಅರ್ಥ ಬಂದಿರುವುದು ಮುಂತಾದ ಅನೇಕ ಉದಾಹರಣೆಗಳನ್ನು ವಿದ್ವಾಂಸರು ಸಾಕಷ್ಟು ಬಾರಿ ತೋರಿಸಿಕೊಟ್ಟಿದ್ದಾರೆ.

ಆದರೆ ಈ ಎಲ್ಲ ವಿದ್ವಾಂಸರೂ ರೈಸರ ಶಾಸನವ್ಯಾಸಂಗದ ಶ್ರದ್ಧೆಯ ಮುಂದೆ ಈ ತಪ್ಪುಗಳೆಲ್ಲಾ ಕ್ಷುಲ್ಲಕವಾದವು ಎಂಬುದನ್ನು ಒಮ್ಮತದಿಂದ ಒಪ್ಪಿಕೊಂಡಿದ್ದಾರೆ. ಚಿದಾನಂದ ಮೂರ್ತಿಯವರೆನ್ನುವಂತೆ

> *"....... ಫ್ಲೀಟ್ ಮತ್ತು ರೈಸ್ ಇಬ್ಬರೂ ಕರ್ನಾಟಕದ ಶಾಸನಾಧ್ಯಯನದ ರಂಗದಲ್ಲಿ ಅಗ್ರಗಣ್ಯರು .... ಫ್ಲೀಟ್ ಅವರು ಒಂದೊಂದು ಶಾಸನವನ್ನೂ ಟೀಕೆ, ಟಿಪ್ಪಣಿ, ವಿವರಣೆ ಅನುವಾದ, ಐತಿಹಾಸಿಕ ಮಹತ್ವಗಳೊಂದಿಗೆ ಪ್ರಕಟಿಸಿದ್ದಾರೆ. ಪ್ರಕಟಿಸಿರುವ ಶಾಸನಗಳ ಸಂಖ್ಯೆಯ ದೃಷ್ಟಿಯಿಂದ ರೈಸ್*

---

1 Mysore Archaeological reports, 1921–22, P. 18–29.

2 ಕರ್ನಾಟಕದ ಅರಸುಮನೆತನಗಳು, ಪು. 109-204.

3 'ತಲಕಾಡುಗಂಗರ ಕೃತಕ ತಾಮ್ರಶಾಸನಗಳು' **ಹರತಿಯಬಿ೦.**

4 Inscriptions of Western Gangas, P. IXX.

5 History of the Western Gangas.

6 ವಿವರಗಳಿಗೆ ನೋಡಿ : ಬಿ. ರಾಜಶೇಖರಪ್ಪ, **ದುರ್ಗಶೋಧನ**, ಬೆಂಗಳೂರು 2001.

> *ಅವರಿಗೆ ಪ್ರಥಮಸ್ಥಾನ ಸಲ್ಲಬೇಕು .... ರೈಸ್ (ಫ್ಲೀಟರಂತೆ) ಇಷ್ಟೊಂದು ಮಟ್ಟಿಗೆ ಒಂದೊಂದು ಶಾಸನಕ್ಕೂ ಕೆಲಸ ಮಾಡಲಿಲ್ಲ ಅಥವಾ ಕೆಲಸ ಮಾಡಲು ಸಾಧ್ಯವಿರಲಿಲ್ಲ. ಅವರ ಪ್ರಧಾನ ಉದ್ದೇಶ ತಮಗೆ ದೊರಕುವ ಶಾಸನಗಳೆಲ್ಲವನ್ನೂ ಸಂಗ್ರಹಿಸಿ ಪ್ರಕಟಿಸುವುದು .... ಹಾಗೆ ಪ್ರಕಟಿಸಿದ ಶಾಸನಗಳಲ್ಲಿ ಒಂದೊಂದಕ್ಕೂ ಟಿಪ್ಪಣಿ ಬರೆಯುವ ಮಾತಿರಲಿ, ಅವುಗಳ ಶುದ್ಧ ಪಾಠದ ಕಡೆಗಾಗಲೀ, ಸಮರ್ಪಕವಾದ ಅನುವಾದದ ಕಡೆಗಾಗಲಿ ಪೂರ್ಣಗಮನ ಕೊಡುವುದು ಸಾಧ್ಯವಿಲ್ಲ. ಆದರೂ ಅವರ ವಿಷಯ-ಪರಿಜ್ಞಾನ; ಐತಿಹಾಸಿಕ ವಿವೇಚನೆ ಇತ್ಯಾದಿಗಳು ಶಾಸನಾಧಾರದಿಂದ ಬರೆದಿರುವ "Mysore and Coorg from Inscription"* ಎಂಬ ಗ್ರಂಥದಲ್ಲಿ ಮಾಪನಗೊಂಡಿರುವುದನ್ನು ಕಾಣಬಹುದು.[1]

ಈ ಅಭಿಪ್ರಾಯವು ಕರ್ನಾಟಕದ ಶಾಸನ ಮತ್ತು ಚರಿತ್ರೆಯನ್ನು ಅಭ್ಯಸಿಸಿರುವ ಎಲ್ಲ ವಿದ್ವಾಂಸರ ಅಭಿಪ್ರಾಯಗಳ ಪ್ರತಿನಿಧಿಯಂತಿದೆ ಅಂದರೆ ತಪ್ಪಿಲ್ಲ. ಪ್ರೊ॥ ವೆಬರ್ ಎಂಬ ಆಂಗ್ಲವಿದ್ವಾಂಸ ಹೇಳಿದಂತೆ ಇಷ್ಟೆಲ್ಲಾ ಕುಂದುಕೊರತೆಯ ನಡುವೆಯೂ ಎಪಿಗ್ರಾಫಿಯ ಕರ್ನಾಟಕ ಸಂಪುಟಗಳು "Spendid work of monumental charactor, which will bear your (Rice's) name to *Uttarani Yugani*".

Mysore and Coorg from Inscriptions :

1909ರಲ್ಲಿ ಹೊರಬಂದ ಈ ಕೃತಿ 'ಎಪಿಗ್ರಾಫಿಯ ಕರ್ನಾಟಿಕ' ಸಂಪುಟಗಳ ಸಾರಸಂಗ್ರಹದಂತಿದೆ. 1905ರಲ್ಲಿ ಶಾಸನ ಸಂಪುಟಗಳ ಸರಣಿ ಮುಕ್ತಾಯವಾದಾಗಲೇ ಇಂತಹುದೊಂದು ಕೃತಿಯನ್ನು ಸಿದ್ಧಪಡಿಸಲು ರೈಸ್ ಆಯೋಜಿಸಿದ್ದರೆಂಬುದು 1905ರ ಇಲಾಖೆಯ ವಾರ್ಷಿಕ ವರದಿಯ ಕೆಳಗಿನ ಉಲ್ಲೇಖ ದಿಂದ ತಿಳಿದುಬರುತ್ತದೆ :

> *"The compilation of a final volume, bringing to one focus and presenting in a convenient collective form the varied information scattered throughout the different volumes, has been approved by Government and now in hand. The necessity of such a volume has been also pointed out by oriental scholars in Europe."*[2]

ಮೊದಲಿಗೆ ಈ ಕೃತಿಯನ್ನು ಎಪಿಗ್ರಾಫಿಯಾ ಸರಣಿಯ ಒಂದು ಭಾಗವಾಗಿಯೇ ಹೊರತರಲು ಸರ್ಕಾರ ಅನುಮತಿಸಿತ್ತಾದರೂ 1906ರಲ್ಲಿ ರೈಸರು ಇಂಗ್ಲೆಂಡಿಗೆ ಹಿಂದಿರುಗ ಬೇಕಾದುದರಿಂದ ಲಂಡನ್ನಿನ ಕಾನ್ಸ್‌ಟೇಬಲ್ ಮತ್ತು ಕಂಪನಿಯಿಂದ ಪ್ರಕಟವಾಗಿದೆ.

---

1 ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** 1966, ಪು. 23-24.

2 A.R.A.D.. P–87.

ಪ್ರಸ್ತುತ ಕೃತಿಯಲ್ಲಿ ಏಳು ಭಾಗಗಳಿದ್ದು ಮೊದಲ ಭಾಗದಲ್ಲಿ ಮೈಸೂರು ಮತ್ತು ಕೊಡಗುಗಳನ್ನು ಆಳಿದ ಪ್ರಖ್ಯಾತ ರಾಜವಂಶಗಳನ್ನು ಪರಿಚಯಿಸಲಾಗಿದೆ. ಮೌರ್ಯ ಶಾತವಾಹನ, ಬಾಣ, ಕದಂಬ, ಗಂಗ, ಚಾಲುಕ್ಯ ಹೊಯ್ಸಳ, ವಿಜಯನಗರ, ಒಡೆಯರು ಮುಂತಾದ ಪ್ರಮುಖ ರಾಜವಂಶಗಳ ಮುಖ್ಯರಾದ ರಾಜರುಗಳು, ಅವರ ವಂಶವೃಕ್ಷ, ಅವರ ಆಳ್ವಿಕೆಯ ಕಾಲದ ಪ್ರಮುಖ ಘಟನೆಗಳು ಮುಂತಾದವನ್ನು ಕಾಲಾನುಕ್ರಮವಾಗಿ ವಿವರಿಸಲಾಗಿದೆ.

ಎರಡನೆಯ ಭಾಗದಲ್ಲಿ, ಮೈಸೂರಿನ ಇತಿಹಾಸದಲ್ಲಿ ಕಂಡುಬರುವ ಚಿಕ್ಕ ರಾಜ ವಂಶಗಳು ಮತ್ತು ಪಾಳೆಯಗಾರರ ವಿವರಗಳಿವೆ. ಆಳುಪ, ಸಂತಾರ, ಚಂಗಾಳ್ವ, ಕೊಂಗಾಳ್ವ, ಪುನ್ನಾಡು, ಸಿಂದ, ಹದಿನಾಡು, ಕೆಳದಿ, ಉಮ್ಮತ್ತೂರು, ಚಿತ್ರದುರ್ಗ, ಸಂತೆಬಿದನೂರು, ಆವತಿ ಮುಂತಾದವರು ಇಲ್ಲಿ ಪ್ರಮುಖರಾದವರು.

ಮೂರನೆಯ ಭಾಗವು ಪ್ರಾಚೀನಕಾಲದಿಂದ ಇತ್ತೀಚಿನವರೆಗೆ ಮೈಸೂರು ಸಂಸ್ಥಾನದಲ್ಲಿ ಆಡಳಿತ ವ್ಯವಸ್ಥೆ ಹೇಗಿತ್ತು ಎಂಬುದನ್ನು ವಿವರಿಸುತ್ತದೆ. ಮೌರ್ಯರ ಕಾಲದಲ್ಲಿ 'ಆರ್ಯಪುತ್ರ'ರೆಂಬ ಹೆಸರಿನಿಂದ ಯುವರಾಜರುಗಳು ಆಳ್ವಿಕೆಯನ್ನು ನಡೆಸುತ್ತಿದ್ದರೆಂಬ ಶಾಸನಾಧಾರಿತ ಮಾಹಿತಿಯನ್ನು ಕೊಟ್ಟು ರಜ್ಜುಕ, ಸರ್ವಾಧಿಕಾರಿ, ಪಂಚಪ್ರಧಾನರು, ಧರ್ಮಾಧ್ಯಕ್ಷ, ರಾಜ್ಯಾಧ್ಯಕ್ಷ ಮುಂತಾದ ಅನೇಕ ಅಧಿಕಾರಿಗಳು ರಾಜನಿಗೆ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸಹಕರಿಸುತ್ತಿದ್ದರೆಂಬ ವಿವರಗಳಿವೆ. ಸೇನೆ, ಕಂದಾಯ, ಸುಂಕ, ನೀರಾವರಿ, ಸ್ಥಳೀಯ ಆಡಳಿತ, ಗ್ರಾಮೀಣಾಡಳಿತ ಮುಂತಾದ ಹಲವು ಕ್ಷೇತ್ರಗಳ ಸ್ಥೂಲ ಪರಿಚಯ ಇಲ್ಲಿದೆ.

ಮೈಸೂರಿನ ಜನರ ಜೀವನ ಪದ್ಧತಿ ಮತ್ತು ರೀತಿನೀತಿಗಳನ್ನು ನಾಲ್ಕನೇ ಭಾಗದಲ್ಲಿ ವಿವರಿಸಲಾಗಿದೆ. ಜೈನರ ಸಲ್ಲೇಖನ, ಸತಿಯ ಕಾರಣದಿಂದಾಗಿ ನಿಲ್ಲಿಸಲಾಗುತ್ತಿದ್ದ ಮಾಸ್ತಿಕಲ್ಲು; ಗಂಗ, ಹೊಯ್ಸಳ ಮುಂತಾದವರ ಕಾಲದ ಶಾಸನಗಳಲ್ಲಿ ಕಂಡುಬರುವ ಆತ್ಮಬಲಿಯ ಪ್ರಕಾರಗಳು; ಜನರ ಅಲಂಕರಣ, ಬೇಟೆ, ಕಾವ್ಯರಚನೆ ಮುಂತಾದ ಹಲವು ಹತ್ತು ವಿಷಯಗಳನ್ನು ರೈಸ್ ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ.

ಐದು ಮತ್ತು ಆರನೇ ಭಾಗಗಳು ಕ್ರಮವಾಗಿ ಕಲೆ ಮತ್ತು ಸಾಹಿತ್ಯವನ್ನು ಕುರಿತಾಗಿವೆ. ಬೇಲೂರು, ಹಳೇಬೀಡು ಮುಂತಾದ ಶಿಲ್ಪಕಲಾ ಸಮೃದ್ಧವಾದ ಸ್ಥಳಗಳ ಮತ್ತು ಅಲ್ಲಿನ ದೇವಾಲಯಗಳ ಪಟ್ಟಿಯನ್ನು ಕೊಟ್ಟು ಅವುಗಳ ಸ್ಥೂಲಪರಿಚಯವನ್ನು ನೀಡಲಾಗಿದೆ. ಆರನೆಯ ಭಾಗದಲ್ಲಿ ಜೈನ ಕವಿಗಳ ಕೃತಿಗಳನ್ನು ಪ್ರಧಾನವಾಗಿ ವಿವರಿಸಿದೆಯಲ್ಲದೆ ಇಲ್ಲಿನ ಶಾಸನಗಳ ಸ್ವರೂಪವನ್ನು ಪರಿಚಯಿಸಲಾಗಿದೆ.

ಕೊನೆಯ ಅಧ್ಯಾಯದಲ್ಲಿ ಜೈನ, ಶೈವ, ವೈಷ್ಣವ ಮುಂತಾದ ಧರ್ಮಗಳ ವಿವರಗಳಿವೆ. ಶಿಲ್ಪಗಳು ಮತ್ತು ಶಾಸನಗಳ ಛಾಯಾಚಿತ್ರ ಮತ್ತು ರೇಖಾಚಿತ್ರಗಳಿರುವುದರಿಂದ ಕೃತಿ ಆಕರ್ಷಕವಾಗಿದೆ.

ಎಪಿಗ್ರಾಫಿಯ ಸಂಪುಟಗಳಲ್ಲಿನ ಮಾಹಿತಿಗೆ ಹೋಲಿಸಿದರೆ 210 ಪುಟಗಳ ಈ ಕೃತಿಯಲ್ಲಿನ ವಿವರಗಳು ತೀರಾ ಸ್ವಲ್ಪವೆನ್ನುವುದು ನಿಜವಾದರೂ ರೈಸರೇ ಹೇಳಿರುವಂತೆ ಇದು ಮೂಲ ಆಕರಗಳ ಲಭ್ಯತೆಯನ್ನು ತೋರಿಸುವ ಕೈಮರದಂತೆ ಕೆಲಸ ಮಾಡುವುದರಲ್ಲಿ ಯಶಸ್ವಿಯಾಗುತ್ತದೆ.

ಶಾಸನ, ಸ್ಮಾರಕಗಳ ಸಂರಕ್ಷಣೆ :

ಶಾಸನಗಳು ಕೇವಲ ತಾವು ಒಳಗೊಂಡಿರುವ ಸಂಗತಿಗಳಿಗಾಗಿ ಮಾತ್ರವಲ್ಲದೆ ಪ್ರಾಚೀನ ಕಾಲದ ಶಿಲ್ಪ ಮತ್ತು ವಸ್ತುವಾಗಿ ಕೂಡಾ ಅತ್ಯಂತ ಮಹತ್ವದ್ದಾಗಿದೆ. ಆದರೆ 19ನೇ ಶತಮಾನದಲ್ಲಿ ಸರ್ಕಾರ ಮತ್ತು ಸಾರ್ವಜನಿಕರು-ಇಬ್ಬರಿಗೂ ಈ ಬಗ್ಗೆ ವಿಶೇಷ ವಾದ ಕಾಳಜಿ ಇರಲಿಲ್ಲ. ಆದರೆ ಶಾಸನಗಳನ್ನು ಓದಿ, ಪ್ರತಿಮಾಡಿ, ಅವುಗಳ ವಿವರಗಳನ್ನು ಪ್ರಕಟಿಸುವುದು ಎಷ್ಟು ಮುಖ್ಯವೋ ಅವುಗಳನ್ನು ಸಂರಕ್ಷಿಸುವುದೂ ಅಷ್ಟೇ ಮುಖ್ಯವೆಂಬುದು ರೈಸರ ನಿಲುವಾಗಿತ್ತು. 1889-88ರ ಇಲಾಖೆಯ ವರದಿಯಲ್ಲಿ ಶ್ರವಣ ಬೆಳಗೊಳದ ಭದ್ರಬಾಹುವಿನ ಶಾಸನಕ್ಕೆ ಒದಗಿದ ದುರ್ಗತಿಯ ಬಗ್ಗೆ ಅವರು ಹೀಗೆ ಬರೆದಿದ್ದಾರೆ :

> *"ನಾನು ಕಳೆದ ಬಾರಿ ಶ್ರವಣಬೆಳಗೊಳಕ್ಕೆ ಭೇಟಿಕೊಟ್ಟಾಗ ಅಲ್ಲಿಯ ಅತ್ಯಂತ ಪ್ರಾಚೀನವೂ ಮೈಸೂರಿನ ಶಾಸನಗಳಲ್ಲೆಲ್ಲಾ ಆಸಕ್ತಿಪೂರ್ಣವೂ ಆದ ಶಾಸನ ಗಳಲ್ಲಿ ಒಂದಾದ ಭದ್ರಬಾಹುವಿನ ಶಾಸನಕ್ಕೆ ಬಂದ ದುರ್ಗತಿಯನ್ನು ಅತ್ಯಂತ ವಿಷಾದದಿಂದ ಗಮನಿಸಿದೆನು. ಅನೇಕ ಶತಮಾನಗಳಿಂದ ಭಕ್ತಾದಿಗಳ ಬರಿಗಾಲಿನ ಸಂಪರ್ಕಕ್ಕೆ ಬಂದಿದ್ದರೂ ಇದು ಭೌತಿಕವಾಗಿ ಹೆಚ್ಚು ಹಾಳಾಗಿರಲಿಲ್ಲ. ಆದರೆ ಇತ್ತೀಚೆಗೆ ಗೋಡೆಯೊಂದನ್ನು ದುರಸ್ತಿಗೊಳಿಸುವ ಸಲುವಾಗಿ ಗಾರೆಯನ್ನು ಈ ಶಾಸನದ ಮೇಲೆ ರಾಶಿಹಾಕಲಾಗಿತ್ತಲ್ಲದೆ ಬಹುಶಃ ಅದನ್ನು ಅಲ್ಲಿಯೇ ಕುಟ್ಟಲಾಗಿತ್ತು. ಇದರಿಂದಾಗಿ ಶಾಸನಗಳ ಕೆಲವು ಭಾಗಗಳು ಮತ್ತೆ ದುರಸ್ತಿಯಾಗದಷ್ಟೂ ಹಾಳಾಗಿವೆ. ಈ ವಿಷಯವನ್ನು ನಾನು ಕೂಡಲೇ ಸರ್ಕಾರದ ಗಮನಕ್ಕೆ ತಂದು ಈ ಶಾಸನವೂ ಸೇರಿದಂತೆ ಇಲ್ಲಿಯ ಬಂಡೆಗಲ್ಲುಗಳ ಮೇಲಿರುವ ಶಾಸನಗಳನ್ನು ಯಾರೂ ಹಾಳುಮಾಡದಂತೆ ತಡೆಯಲು ಕಟೆಕಟೆಯನ್ನು ನಿರ್ಮಿಸಲು ಆದೇಶಿಸಿದ್ದೆ. ಅನಂತರ ಅಲ್ಲಿ ಪರಿಸ್ಥಿತಿ ಏನಾಗಿದೆಯೋ ಗೊತ್ತಿಲ್ಲ"*[1]

ರೈಸರ ಈ ಕೋರಿಕೆಗೆ ಸರ್ಕಾರವು ಕೂಡಲೇ ಸ್ಪಂದಿಸಿತು. 'ಶ್ರವಣ ಬೆಳಗೊಳದ ಬೆಟ್ಟದ ಮೇಲಿನ ಶಾಸನಗಳ ರಕ್ಷಣೆಗೆ ಸಂಬಂಧಿಸಿದ ಸೂಕ್ತ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು' ಎಂಬ ನಿರ್ಣಯವನ್ನು ಸರ್ಕಾರದ ಪರವಾಗಿ ಮುಖ್ಯಕಾರ್ಯದರ್ಶಿ

1 A.R.A.D., P–6. (ಅನುವಾದ).

ಯವರು ಪ್ರಕಟಿಸಿದರು.[1] 1890ರ ವೇಳೆಗೆ ಶಾಸನಗಳಿಗೆ ಕಲ್ಲಿನ ಕಟಕಟೆಯನ್ನು ನಿರ್ಮಿಸುವುದರ ಜೊತೆಜೊತೆಗೆ ಕತ್ತಲೆಬಸ್ತಿಗೆ ಲೋಹದ ಜಾಲಂಧ್ರಗಳನ್ನು ಜೋಡಿಸುವ ಕೆಲಸವನ್ನೂ ಕೈಗೊಂಡು ಮುಗಿಸಲಾಯಿತು.[2]

ಇದೇ ರೀತಿಯಲ್ಲಿ ಬಳ್ಳಿಗಾವೆಯ ಕೇದಾರೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳನ್ನು ಸುರಕ್ಷಿಸುವಂತೆ 1890-91ರ ವರದಿಯಲ್ಲಿ,[3] ಅರಸೀಕೆರೆಯಲ್ಲಿನ ದೇವಾಲಯ, ಬೇಲೂರಿನ ಚನ್ನಕೇಶವನ ದೇಗುಲ, ಮಳವಳ್ಳಿಯ ಶಾಸನದ ಸ್ಥಂಭಗಳನ್ನು ಸಂರಕ್ಷಿಸಬೇಕಾದ ಅಗತ್ಯತೆಗಳನ್ನು 1895-96ರ ವರದಿಯಲ್ಲಿ ಅವರು ಪ್ರತಿಪಾದಿಸಿದ್ದಾರೆ.[4]

ಇವೆಲ್ಲವುಗಳಿಗಿಂತ ವಿಶಿಷ್ಟವಾದದ್ದು ಮೊಳಕಾಲ್ಮೂರಿನ ಅಶೋಕನ ಶಾಸನದ ಸಂರಕ್ಷಣೆ. 1892ರಲ್ಲಿ ಬ್ರಹ್ಮಗಿರಿ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ಅಶೋಕನ ಶಾಸನಗಳು ಪತ್ತೆಯಾದ ನಂತರ ಅವುಗಳನ್ನು ಸಂರಕ್ಷಿಸುವಂತೆ ಸರ್ಕಾರವು ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿತು. ಅದರಂತೆ ಅವರು ನಡೆಸಿದ ಶಾಸನ ಸಂರಕ್ಷಣಾ ಕಾರ್ಯವು ಎಷ್ಟು ಅನಾಗರೀಕವೂ-ಅವೈಜ್ಞಾನಿಕವೂ ಆಗಿದ್ದುವೆಂಬುದನ್ನು 893ರ ಫೆಬ್ರವರಿ 1ರಂದು ದಿವಾನರ ಮುಖ್ಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ರೈಸರು ವಿವರಿಸಿದ್ದಾರೆ. ಅದರ ಸಾರಾಂಶ ಹೀಗಿದೆ.

> *"ಕಳೆದ ವರ್ಷ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ನಾನು ಕಂಡುಹಿಡಿದ ಅಶೋಕನ ಶಾಸನಗಳ ಹೊಸ ಪ್ರತಿಗಳನ್ನು ತೆಗೆಯುವ ಸಲುವಾಗಿ ನಾನು ಇತ್ತೀಚೆಗೆ ಅಲ್ಲಿಗೆ ಭೇಟಿ ಕೊಟ್ಟಾಗಿನ ವಿದ್ಯಮಾನಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಪತ್ತೆಯಾಗಿರುವ ಮೂರು ಶಾಸನಗಳಲ್ಲಿ ಜಟಿಂಗ ರಾಮೇಶ್ವರ ಬೆಟ್ಟದ ಮೇಲಿರುವ ಒಂದನ್ನು ಮಾತ್ರ ಸಂರಕ್ಷಿಸಲು ಕ್ರಮವನ್ನು ಕೈಗೊಳ್ಳಲಾಗಿದೆ. ಆದರೆ ಅದಕ್ಕಾಗಿ ಅನುಸರಿಸಿರುವ ವಿಧಾನವು ವಿವರಿಸಲಾಗದಷ್ಟು ಅನಾಗರೀಕವಾದದ್ದು ಎಂದು ವಿಷಾದದಿಂದ ಹೇಳ ಬೇಕಾಗಿದೆ.*
>
> *ಸುಮಾರು ಆರು ಅಡಿ ಎತ್ತರ ಮತ್ತು ಎರಡು ಅಡಿಗಳ ದಪ್ಪನಾದ ಗೋಡೆಯನ್ನು ಒರಟಾದ ಕಲ್ಲು ಮತ್ತು ಮಣ್ಣಿನಿಂದ ಕಟ್ಟಲಾಗಿದೆ. ಆದರೆ ಈ ಕೆಲಸ ಎಷ್ಟು ಕಳಪೆಯಾಗಿದೆ ಎಂದರೆ ಗೋಡೆಯನ್ನು ಶಾಸನದ ಅಕ್ಷರಗಳ ಮೇಲೆಯೇ ಕಟ್ಟಲಾಗಿದ್ದು ಅವುಗಳ ಪ್ರತಿಯನ್ನು ತೆಗೆದುಕೊಳ್ಳಲು ಗೋಡೆಯ ಒಂದು ಭಾಗವನ್ನು ಕೀಳಬೇಕಾಯಿತು. ಮಾತ್ರವಲ್ಲದೆ ಆ*

1 ಅಲ್ಲೇ., ಪು. 8.

2 ಅಲ್ಲೇ., ಪು. 16.

3 ಅಲ್ಲೇ., ಪು. 23.

4 ಅಲ್ಲೇ., ಪು. 42.

ವೃತ್ತಾಕಾರದ ಕಟ್ಟಡ ದೊಳಕ್ಕೆ ಹೋಗಲು ದಾರಿಯನ್ನೇ ಬಿಟ್ಟಿರಲಿಲ್ಲ. ಹಾಗಾಗಿ ಶಾಸನಗಳನ್ನು ಪ್ರತಿ ಮಾಡಿಕೊಳ್ಳಲು ಕಷ್ಟಪಟ್ಟು ಒಂದು ಏಣಿ ಯನ್ನು ಹೊಂದಿಸಿಕೊಂಡು (ಅಂತಹ ಒಂಟಿ ಬೆಟ್ಟದ ಮೇಲೆ ಏಣಿ ಸದಾಸಿದ್ಧ ವಾಗಿ ಸಿಗುವಂತಹ ವಸ್ತುವಲ್ಲ) ಅದರ ಸಹಾಯದಿಂದ ಗೋಡೆಯ ಹೊರಬದಿಯನ್ನು ಏರಿ ಆಮೇಲೆ ಏಣಿಯನ್ನು ಮೇಲಕ್ಕೆಳೆದುಕೊಂಡು ಮತ್ತೆ ಒಳಭಾಗಕ್ಕೆ ಅದನ್ನು ಇಳಿಸಿ ಆ ಮೂಲಕ ನಾವು ಕೆಳಗಿಳಿಯಬೇಕಾಯಿತು. ಈ ಕಟ್ಟಡವು ಸರ್ಕಾರಿ ಕಸದ ತೊಟ್ಟಿಯಂತೆ ತೋರುವುದರಿಂದ ಬೆಟ್ಟಕ್ಕೆ ಬರುವ ಪ್ರವಾಸಿಗರು ಎಲ್ಲ ಬಗೆಯ ಕಸಕಡ್ಡಿಗಳನ್ನೂ ಇದರೊಳಕ್ಕೆ ತಂದು ಸುರಿಯುತ್ತಾರೆ. ಹಾಗಾಗಿ ಪರಿಕಲ್ಪನೆ ಮತ್ತು ನಿಯೋಜನೆ ಎರಡರ ದೃಷ್ಟಿಯಿಂದಲೂ ಇದು ಮೈಸೂರು ಸರ್ಕಾರಕ್ಕೆ ಹೆಸರು ತರುವಂತಹ ಸಂಗತಿಯಲ್ಲ ಎಂದು ತಿಳಿಸಲು ನನಗೆ ಯಾವ ಹಿಂಜರಿಕೆಯೂ ಇಲ್ಲ.

ನನ್ನ ಅಭಿಪ್ರಾಯದಲ್ಲಿ ಅಲ್ಲಿ ಕಬ್ಬಿಣದ ಬೋನಿನಂತಹ ಒಂದು ರಚನೆ ಯನ್ನು ಮಾಡಿಸಿ ಅದರ ಮೇಲ್ಭಾಗವನ್ನು ಸರಿಯಾದ ರೀತಿಯಿಂದ ಮುಚ್ಚಿದರೆ ಶಾಸನವು ಸಂರಕ್ಷಿತವಾಗಬಿತ್ತದೆ. ಇದೇ ರೀತಿಯ ಕಬ್ಬಿಣದ ರಚನೆಯನ್ನು ಶ್ರವಣ ಬೆಳಗೊಳದಲ್ಲಿ ಭದ್ರಬಾಹುವಿನ ಶಾಸನವನ್ನು ರಕ್ಷಿಸಲು ನಿಲ್ಲಿಸಲಾಗಿದ್ದು ಅದರ ಕಾರ್ಯರೀತಿ ಸರಿಯಾಗಿದೆ. ಉಳಿದ ಎರಡು ಶಾಸನಗಳಲ್ಲಿ ಸಿದ್ದಾಪುರದಲ್ಲಿರುವ ಶಾಸನವನ್ನೂ ಇದೇ ರೀತಿಯಲ್ಲಿ ಸಂರಕ್ಷಿಸಬಹುದು. ಆದರೆ ಬ್ರಹ್ಮಗಿರಿಯ ಶಾಸನವು ದೊಡ್ಡದೊಂದು ಬಂಡೆಯ ಮೇಲಿರುವುದರಿಂದ ಅದರ ಸಂರಕ್ಷಣೆಗೆ ಬೇರೆಯದೇ ವಿಧಾನವನ್ನು ಬಳಸಬೇಕು. ಈ ಬಗ್ಗೆ ಮುಖ್ಯ ಎಂಜನಿಯರ್‌ರವರು ಯೋಜನೆಯೊಂದನ್ನು ಸಿದ್ಧಪಡಿಸುತ್ತಿದ್ದಾರೆಂದು ತಿಳಿದು ಬಂದಿದ್ದು ಅದನ್ನು ನನಗೆ ಕಳುಹಿಸಿದರೆ ಅದರ ಸಾಧ್ಯಾಸಾಧ್ಯತೆಗಳನ್ನು ಹೇಳಬಹುದು.

ಈ ಮೂರು ಶಾಸನಗಳು ದಕ್ಷಿಣಭಾರತದ ಅತ್ಯಂತ ಅಪೂರ್ವಶಾಸನ ಗಳಾಗಿದ್ದು ಸರ್ಕಾರವು ಇವುಗಳ ರಕ್ಷಣೆಗೆ ವೆಚ್ಚಮಾಡಬೇಕಿರುವ ಹಣಕ್ಕಾಗಿ ಗೊಣಗುವುದಿಲ್ಲವೆಂದು ನಾನು ಭಾವಿಸಿದ್ದೇನೆ." [1]

ರೈಸರ ಮೊನಚಾದ ಈ ಪತ್ರ ಸರ್ಕಾರದ ಅಧಿಕಾರಿಗಳನ್ನು ಚುಚ್ಚಿ ಎಬ್ಬಿಸಿತು. 1893ರ ಮಾರ್ಚ್ 22ರಂದು ದಿವಾನರ ಮುಖ್ಯಕಾರ್ಯದರ್ಶಿಯಾದ ಟಿ. ಆನಂದರಾಯರು

1 KSA GM 42 of 1891 (1–16).

ಸರ್ಕಾರದ ಪರವಾಗಿ ಈ ಬಗ್ಗೆ ಒಂದು 'ಜ್ಞಾಪನಪತ್ರ' (Memorandum) ಹೊರಡಿಸಿದ್ದಾರೆ. ಅದರಲ್ಲಿ ಅವರು ರೈಸರ ಅಭಿಪ್ರಾಯಕ್ಕೆ ಸಂಪೂರ್ಣ ಸಹಮತವನ್ನು ಸೂಚಿಸಿ 'ಶಾಸನಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ರವರು ಯಾವುದೇ ಯೋಜನೆಗಳನ್ನು ಕೈಗೊಳ್ಳುವುದಿದ್ದರೂ ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳ ಮೇಲೆ ರೈಸರ ರುಜುವನ್ನು ಪಡೆದನಂತರವೇ ಕಾರ್ಯವನ್ನು ಆರಂಭಿಸಬೇಕು. ಅಲ್ಲಿಯವರೆಗೆ ಚಿತ್ರದುರ್ಗದ ಜಿಲ್ಲಾಧಿಕಾರಿ 5 ಅಥವಾ 6 ರೂ.ಗಳ ಸಂಬಳದ ಮೇಲೆ ಒಬ್ಬ ಕಾವಲುಗಾರನನ್ನು ಶಾಸನಗಳ ರಕ್ಷಣೆಗೆ ನೇಮಿಸತಕ್ಕದ್ದು' ಎಂದು ಆದೇಶಿಸಿದ್ದಾರೆ.

ಅಂತಿಮವಾಗಿ ರೈಸರ ಸಲಹೆ ಸೂಚನೆಗಳ ಪ್ರಕಾರವೇ ಶಾಸನಗಳ ಸಂರಕ್ಷಣೆಯ ಕಾರ್ಯನಡೆಯಿತು. ಮುಂದೆ 1903ರಲ್ಲಿ ಹಳೇಬೀಡಿನ ಕೇದಾರೇಶ್ವರ ದೇವಾಲಯದ ದುರಸ್ತಿಯ ಸಂದರ್ಭದಲ್ಲಿಯೂ ರೈಸರ ಸಲಹೆಯನ್ನು ಸರ್ಕಾರ ಪಡೆದುಕೊಂಡಿದೆ.[1]

ಪರಿಣಾಮ ಮತ್ತು ಪ್ರಭಾವ :

ರೈಸರು ಸಂಪಾದಿಸಿದ ಎಪಿಗ್ರಾಫಿಯ ಸಂಪುಟಗಳ ಪ್ರಕಟಣೆಯಿಂದಾಗಿ ಮುಂದಿನ ಪೀಳಿಗೆಯ ವಿದ್ವಾಂಸರ ಮೇಲೆ ಆದ ಪರಿಣಾಮ ಅಗಾಧವಾದದ್ದು. ಮೈಸೂರು ಸರ್ಕಾರ ವೇನೋ ರೈಸರ ಕಾರ್ಯದ ಸಮಾಪ್ತಿಯನಂತರ ಪುರಾತತ್ತ್ವ ಇಲಾಖೆಯನ್ನು ಬರಕಾಸ್ತು ಗೊಳಿಸುವ ಉದ್ದೇಶವನ್ನು ಮೊದಲಿಗೆ ಹೊಂದಿತ್ತಾದರೂ ಎಪಿಗ್ರಾಫಿಯ ಯೋಜನೆಯ ನಂತರವೂ ಸಾಕಷ್ಟು ಕೆಲಸ ಬಾಕಿ ಉಳಿದಿದೆ ಎನ್ನುವ ಕಾರಣದಿಂದ ಆರ್. ನರಸಿಂಹಾಚಾರ್ಯರ ನೇತೃತ್ವದಲ್ಲಿ ಇಲಾಖೆಯ ಕಾರ್ಯವನ್ನು ಮುಂದುವರೆಯುವಂತೆ ಆಯೋಜಿಸಿತು. ಇದರಿಂದಾಗಿ ಕನ್ನಡ ಸಂಶೋಧನೆಗೆ ಆದ ಉಪಕಾರ ಅಪಾರ. 1906 ರಿಂದ 1922ರ ವರೆಗೆ ರೈಸರ ಹಾದಿಯಲ್ಲಿಯೇ ಮುಂದುವರೆದ ಆಚಾರ್ಯರು ಸುಮಾರು 5000 ಶಾಸನ ಗಳನ್ನು ಹೊಸದಾಗಿ ಕಂಡುಹಿಡಿದರಲ್ಲದೆ ರೈಸರು ಸಂಪಾದಿಸಿದ್ದ ಶ್ರವಣಬೆಳಗೊಳದ ಶಾಸನ ಸಂಪುಟವನ್ನು ಪರಿಷ್ಕರಿಸಿ 356 ಹೊಸಶಾಸನಗಳನ್ನು ಅದಕ್ಕೆ ಸೇರಿಸಿ 1923ರಲ್ಲಿ ಪ್ರಕಟಿಸಿದರು. ಇವರ ಕಾಲದಲ್ಲಿ ಇಲಾಖೆಯ ವಾರ್ಷಿಕ ವರದಿಗಳು 'Mysore Archaeological Reports' ಎಂಬ ಹೆಸರಿನಲ್ಲಿ ಅತ್ಯಾಕರ್ಷಕವಾಗಿ ಹೊರ ಬರಲು ಆರಂಭವಾದವು. ಅವರು ಈ ವರದಿಗಳಲ್ಲಿ ಆಯಾ ವರ್ಷದಲ್ಲಿ ಹೊಸದಾಗಿ ಕಂಡುಬಂದ ಶಾಸನಗಳನ್ನು ಪ್ರಕಟಿಸುತ್ತಿದ್ದರಲ್ಲದೆ ಹಿಂದೆ ಪ್ರಕಟವಾಗಿದ್ದ ಶಾಸನಗಳನ್ನು ಪರಿಷ್ಕರಿಸುತ್ತಲೂ ಇದ್ದರು. ಪುರಾತನ ಅವಶೇಷಗಳ ಅಧ್ಯಯನ, ಹಸ್ತಪ್ರತಿಗಳ ಪರಿಶೀಲನೆ ಮುಂತಾದ ಅನೇಕ ವಿಷಯಗಳನ್ನು ಒಳಗೊಂಡ ಈ 16 ಸಂಪುಟಗಳನ್ನು ಜಗತ್ತಿನಾದ್ಯಂತ ವಿದ್ವಾಂಸರು ಆದರಿಸಿ ಗೌರವಿಸಿದ್ದಾರೆ.

---

1 KSA GM 172 of 1903-04.

ನರಸಿಂಹಾಚಾರ್ಯರ ನಿವೃತ್ತಿಯನಂತರ ಇಲಾಖೆಯ ಮುಖ್ಯಸ್ಥರಾದ ಆರ್. ಶಾಮಾ ಶಾಸ್ತ್ರಿಗಳು ತಮ್ಮ ಹಿರಿಯ ಪರಂಪರೆಯನ್ನು ಮುಂದುವರೆಸಿ ಏಳು ವಾರ್ಷಿಕ ವರದಿಗಳನ್ನು ಪ್ರಕಟಿಸಿದರು.

1928ರಲ್ಲಿ ಎಂ.ಎಚ್. ಕೃಷ್ಣ ಅವರು ಇಲಾಖೆಯ ಮುಖ್ಯಸ್ಥರಾಗಿ ಜವಾಬ್ದಾರಿಯನ್ನು ವಹಿಸಿಕೊಂಡು ಎಪಿಗ್ರಾಫಿಯ ಕರ್ನಾಟಿಕ ಸರಣಿಗೆ ಮತ್ತೆ ಜೀವ ತುಂಬಿದರು. 1943ರಲ್ಲಿ ಅವರು ಮೈಸೂರು ಜಿಲ್ಲೆಯ ಪುರವಣಿ ಸಂಪುಟವನ್ನು ಎಪಿಗ್ರಾಫಿಯ ಸರಣಿಯ ಹದಿನಾಲ್ಕನೇ ಸಂಪುಟವಾಗಿ ಹೊರತಂದರು. ಹಾಸನ ಜಿಲ್ಲೆಯ ಪುರವಣಿ ಸಂಪುಟವು 15ನೆಯದಾಗಿ ಅದೇ ವರ್ಷ ಪ್ರಕಟವಾಯಿತು. ಸಾಂಸ್ಕೃತಿಕ ಇತಿಹಾಸ, ಪುರಾತತ್ತ್ವ ಶಾಸ್ತ್ರ, ನಾಣ್ಯಶಾಸ್ತ್ರ, ಮಾನವಶಾಸ್ತ್ರ ಮುಂತಾದವುಗಳನ್ನು ಚೆನ್ನಾಗಿ ಅಭ್ಯಸಿಸಿದ್ದ ಕೃಷ್ಣರ ಕಾಲದ ವಾರ್ಷಿಕ ವರದಿಗಳು ಇಂದಿಗೂ ಅಪರೂಪದ ಮಾಹಿತಿಯ ಆಗರವೇ ಆಗಿದೆ. ಕನ್ನಡದ ಪ್ರಾಚೀನತಮ ಶಾಸನವಾದ ಹಲ್ಮಿಡಿ ಶಾಸನದ ಶೋಧ ಮತ್ತು ಚಂದ್ರವಳ್ಳಿಯ ಉತ್ಖನನ ಮತ್ತು ಅಲ್ಲಿ ಕದಂಬರ ಮಯೂರವರ್ಮನ ಶಾಸನದ ಶೋಧನೆ ಎಂ.ಎಚ್. ಕೃಷ್ಣರ ಸಂಶೋಧನೆಯ ಉತ್ತುಂಗಗಳು.

ಹೀಗೆ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ರೈಸರಿಂದ ಮೊದಲಾದ ಪುರಾತತ್ತ್ವ ಶೋಧನೆ ಸ್ವಾತಂತ್ರ್ಯಪೂರ್ವದಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟಿತು. ಹಾಗಾಗಿಯೇ 1904ರಿಂದ 1940ರವರೆಗೆ ಸಂಸ್ಥಾನವನ್ನು ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತವೈಖರಿಯನ್ನು ವರ್ಣಿಸುವ ಸಂದರ್ಭದಲ್ಲಿ ಕವಿಯೊಬ್ಬ ಶಾಸನ ಇಲಾಖೆಯನ್ನು ಅವರು ಪೋಷಿಸಿದ ಬಗೆಗೆ ಹೀಗೆ ಹೇಳಿದ್ದಾನೆ:

ಶಾಸನಗಳ ಇಲಾಖೆ

ಉ.ಮಾ.॥ ಭೇದಿಸಿ ತಾಮ್ರ ಶಾಸನ ಶಿಲಾಲಿಪಿ ಶಾಸನಮೆಲ್ಲಮಂ ಸಮಂ।
ತೋದಿಸಿ ತತ್ಕಲಾ ನಿಪುಣರಿಂ ಲಿಪಿಶಾಖೆಯ ನೊಂದನಿಟ್ಟು ತಾ॥
ನಾದಿ ನರೇಂದ್ರರಾಳ್ದ ಚರಿತಂಗಳ ನೊಲ್ದರಿತೆಯ್ದ ಶಾಸನೋ।
ತ್ಪಾದಿತ ಸೂಕ್ತಿಯಂ ಗ್ರಹಿಸಿ ರಾಜ್ಯಮನಾಳ್ವ ನಿಳಾತಳಾಧಿಸಂ॥ [1]

ಸ್ವಾತಂತ್ರ್ಯಾನಂತರದಲ್ಲಿ ಇಲಾಖೆಯ ಕಾರ್ಯಚಟುವಟಿಕೆ ತನ್ನ ತೀವ್ರತೆಯನ್ನು ಕಳೆದುಕೊಂಡಿತು. 1958ರಲ್ಲಿ ಕೆ.ಎ. ನೀಲಕಂಠಶಾಸ್ತ್ರಿಗಳ ಮೂಲಕ ಪ್ರಕಟವಾದ ಸಂಪುಟ ಹದಿನಾರು (ತುಮಕೂರು ಶಾಸನಗಳ ಪುರವಣಿ), 1960ರ ದಶಕದಲ್ಲಿ ಎಂ. ಶೇಷಾದ್ರಿಯವರ ನೇತೃತ್ವದಲ್ಲಿ ಹೊರಬಂದ ಕೋಲಾರ ಜಿಲ್ಲೆ (ಸಂಪುಟ ಹದಿನೇಳು) ಮತ್ತು ಶಿವಮೊಗ್ಗ ಜಿಲ್ಲೆಗಳ ಶಾಸನಗಳ ಪುರವಣಿಗಳ (ಸಂಪುಟ ಏಳು ಮತ್ತು ಎಂಟು)ನ್ನು ಬಿಟ್ಟರೆ ಮುಂದೆ ಶಾಸನ ಸಂಪುಟಗಳು ಪ್ರಕಟವಾಗಲಿಲ್ಲ.

1 ನರಹರಿಯ **'ನಾಲ್ವಡಿ ಕೃಷ್ಣರಾಜಾಭ್ಯುದಯ'** - ಕರ್ನಾಟಕ ಕಾದಂಬರೀ ಸಂಗ್ರಹ ರಜತೋತ್ಸವ ಸಂಚಿಕೆ, ಚಾಮರಾಜನಗರ, 1938, ಪು. 26.

ರೈಸರಿಂದ ಆರಂಭಿಸಿ ಎಂ. ಶೇಷಾದ್ರಿಯವರ ವರೆಗೆ ಮೈಸೂರು ಸಂಸ್ಥಾನದ ಸುಮಾರು ಹದಿನಾಲ್ಕು ಸಾವಿರ ಶಾಸನಗಳು (ಖಚಿತವಾಗಿ ಹೇಳಬೇಕೆಂದರೆ 13,296) ಈ ಎಲ್ಲ ಸಂಪುಟಗಳಲ್ಲಿ ಪ್ರಕಟವಾಗಿವೆ ಎಂಬುದು ಒಂದು ಅಂದಾಜು.[1]

ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು ಕರ್ನಾಟಕದ ಚಾರಿತ್ರಿಕ, ರಾಜಕೀಯ, ಸಾಂಸ್ಕೃತಿಕ, ಆಡಳಿತಾತ್ಮಕ, ಆರ್ಥಿಕ ಮತ್ತು ಶೈಕ್ಷಣಿಕ ಅಧ್ಯಯನಕ್ಕೆ ಅನಿವಾರ್ಯ ಆಕರಗಳು. ಹಾಗಾಗಿ ಇವುಗಳ ಲಭ್ಯತೆ ನಿರಂತರವಾಗಿರಬೇಕಾದ್ದು ಅತ್ಯವಶ್ಯ. ಆದರೆ 20ನೇ ಶತಮಾನದ ಉತ್ತರಾರ್ಧದ ವೇಳೆಗೆ ಈ ಪ್ರತಿಗಳು ಅಧ್ಯಯನಕ್ಕೆ ದುರ್ಲಭವಾದ್ದರಿಂದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು 1973-74ರಲ್ಲಿ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವ ಯೋಜನೆಯನ್ನು ಆರಂಭಿಸಿತು. ಹಾ.ಮಾ. ನಾಯಕರ ಮಾರ್ಗದರ್ಶನದಲ್ಲಿ ಆರಂಭವಾದ ಯೋಜನೆಗೆ ಬಾ.ರಾ. ಗೋಪಾಲರು ಪ್ರಧಾನ ಸಂಪಾದಕರಾಗಿ ಅನೇಕ ಸಂಪುಟಗಳು ಹೊರಬರಲು ಕಾರಣರಾದರು. ಅನೇಕ ವರ್ಷಗಳಿಂದ ಈ ಯೋಜನೆಯು ಕುಂಟುತ್ತಾ ನಡೆದದ್ದು ವಿದ್ವಾಂಸರ ತಾಳ್ಮೆಗೆಡಿಸುತ್ತಿದೆ.

ಎಪಿಗ್ರಾಫಿಯ ಸಂಪುಟಗಳ ಲಭ್ಯತೆಯ ಅನಿವಾರ್ಯತೆಯನ್ನು ಮನಗಂಡ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್‌ನ ದಕ್ಷಿಣ ಪ್ರಾಂತೀಯ ಕಛೇರಿಯು 2005ರಲ್ಲಿ ರೈಸರು ಸಂಪಾದಿಸಿದ ಎಲ್ಲ ಸಂಪುಟಗಳನ್ನು ಒಂದೇ ಆಡಕತಟ್ಟೆ(Compact Disk)ಯಲ್ಲಿ ಹೊರತರುವ ಮೂಲಕ ಶಾಸನಾಧ್ಯಯನಕ್ಕೆ ಆಧುನಿಕತೆಯ ಸ್ಪರ್ಶವನ್ನು ನೀಡಿದೆ. ರೈಸರ ಮಾದರಿಯನ್ನೇ ಅನುಸರಿಸಿ ಹಂಪೆಯ ಕನ್ನಡ ವಿಶ್ವವಿದ್ಯಾಲಯವು ಉತ್ತರ ಕರ್ನಾಟಕದ ಮತ್ತು ಹೊರರಾಜ್ಯಗಳ ಸಂಪುಟಗಳನ್ನು ಪ್ರಕಟಿಸುವ ಕೆಲಸವನ್ನು ಆರಂಭಿಸಿದೆ.

ರೈಸರು ಆರಂಭಿಸಿದ ಶಾಸನಗಳ ಅಧ್ಯಯನದಿಂದಾಗಿ ಕೇವಲ ಮೈಸೂರು ಸಂಸ್ಥಾನದಲ್ಲಿ ಮಾತ್ರವಲ್ಲದೆ ಇಡಿಯ ಕರ್ನಾಟಕದಲ್ಲಿ ಶಾಸನಗಳ ವ್ಯಾಸಂಗವನ್ನು ಕುರಿತಾದ ವಿಶೇಷವಾದ ಜಾಗೃತಿಯೇ ಉಂಟಾಯಿತು. ಕೇವಲ ಪ್ರಾಚೀನ ಇತಿಹಾಸ ವಿಭಾಗದಲ್ಲಿ ಮಾತ್ರವಲ್ಲದೆ ಕನ್ನಡ ಸಾಹಿತ್ಯವನ್ನು ಎಂ.ಎ. ತರಗತಿಯಲ್ಲಿ ಅಭ್ಯಸಿಸುವಾಗ ಶಾಸನ ವ್ಯಾಸಂಗವನ್ನು ಒಂದು ಪತ್ರಿಕೆಯನ್ನಾಗಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಶಾಸನಶಾಸ್ತ್ರದ ಡಿಪ್ಲೊಮೊ ತರಗತಿಗಳೂ, ಬೆಂಗಳೂರಿನ ಕನ್ನಡಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ 'ಶಾಸನ ಪ್ರವೇಶ' ಮತ್ತು 'ಶಾಸನ ಪ್ರೌಢ' ಎಂಬ ತರಗತಿಗಳೂ ಆರಂಭವಾಗಿವೆ.

★ ☆ ★

1 ಕೃಷ್ಣಮೂರ್ತಿ, ಪಿ.ವಿ., *'ಕರ್ನಾಟಕದ ಶಾಸನ ಸಂಪುಟಗಳು'* **ಸತ್ಯಶುದ್ಧಕಾಯಕ** ಸಂಪುಟ-4, ಸಂಚಿಕೆ 1-4, 1993-94, ಪು. 195.

6. ಗ್ರಂಥಸಂಪಾದಕ

ಕರ್ಣಾಟಕ ಭಾಷಾಭೂಷಣ, ಕರ್ಣಾಟಕ ಶಬ್ದಾನುಶಾಸನ, ಪಂಪರಾಮಾಯಣ, ಪಂಪಭಾರತ, ಹಾಗೂ ಅಮರಕೋಶಗಳಂತಹ ಪ್ರಮುಖ ಕೃತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಶುದ್ಧಪಾಠಗಳನ್ನು ನಿರ್ಣಯಿಸಿ ಅವನ್ನು ಬೆಳಕಿಗೆ ತರುವ ಮೂಲಕ ರೈಸರು ಕನ್ನಡದ ಪ್ರಮುಖ ಗ್ರಂಥ ಸಂಪಾದನಕಾರರಲ್ಲಿ ಒಬ್ಬರೆಂದು ಪ್ರಖ್ಯಾತರಾಗಿದ್ದಾರೆ. ಪೂರ್ವ ನಿರ್ಮಿತ ಮಾದರಿಗಳು ಯಾವುದೂ ಇರದಿದ್ದ ಕಾಲದಲ್ಲಿ ರೈಸರು ರೂಪಿಸಿದ ವಿಧಾನಗಳನ್ನೇ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಮುಂದಿನ ಪೀಳಿಗೆಯ ಅನೇಕ ವಿದ್ವಾಂಸರು ಮುಂದುವರೆಸಿಕೊಂಡು ಬಂದರು. ಗ್ರಂಥ ಸಂಪಾದನೆಯ ಕ್ಷೇತ್ರಕ್ಕೆ ರೈಸರು ನೀಡಿರುವ ಕೊಡುಗೆಯ ಕೂಲಂಕಷ ಅಧ್ಯಯನಕ್ಕೆ ಪೂರ್ವಭಾವಿಯಾಗಿ ರೈಸರ ಪೂರ್ವದಲ್ಲಿ ಕನ್ನಡ ಗ್ರಂಥ ಸಂಪಾದನ ಕ್ಷೇತ್ರದ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಪರಿಚಯಿಸಿಕೊಳ್ಳುವುದು ಅತ್ಯಗತ್ಯ.

ರೈಸ್ ಸಂಪಾದಿತ ಕೃತಿಗಳು :

ವಿವಿಧ ಹಂತದ ತರಗತಿಗಳಿಗೆ ಅಗತ್ಯವಾದ ಪಠ್ಯಪುಸ್ತಕಗಳನ್ನು ರೂಪಿಸುವ ಜವಾಬ್ದಾರಿಯನ್ನು ಶಾಲಾ ಪರಿವೀಕ್ಷಣಾಧಿಕಾರಿಯಾಗಿದ್ದ ಕಾಲದಲ್ಲಿಯೇ ರೈಸರು ವಹಿಸಿಕೊಳ್ಳಬೇಕಿತ್ತು. ಆ ಕಾಲದಲ್ಲಿ ಅವರು ಪ್ರಕಟಿಸಿದ ಮೂರು ಪ್ರಮುಖ ಕೃತಿಗಳೆಂದರೆ ತಿರುನಗರಿ ರಾಮಾನುಜಯ್ಯನ 'ರಾಮಾಯಣ ಸಂಗ್ರಹಃ' ಎಂಬ ಸಂಸ್ಕೃತ ಕೃತಿ (1868) ಪ್ರಾಚೀನ ಕನ್ನಡ ಕವಿಗಳ ಪದ್ಯಗಳ ಸಂಗ್ರಹವಾದ 'ಪದ್ಯಸಾರ' (1868) ಹಾಗೂ ಅಮರಸಿಂಹನ 'ನಾಮಲಿಂಗಾನುಶಾಸನ' (1873). ಇವು ರೈಸರು ಗ್ರಂಥ ಸಂಪಾದನೆಯಲ್ಲಿ ತೊಡಗಿದ ಕಾಲದ ಆರಂಭದ ಕೃತಿಗಳಾಗಿದ್ದು ಪ್ರತಿಯೊಂದೂ ಅಧ್ಯಯನ ಯೋಗ್ಯವಾಗಿವೆ.

ರಾಮಾಯಣ ಸಂಗ್ರಹಃ (ಸಂಸ್ಕೃತ ಪ್ರದರ್ಶಿನಿ) :

1868ರಲ್ಲಿ ಪ್ರಕಟವಾಗಿರುವ 74 ಪುಟಗಳ ಈ ಕೃತಿಯು ರಾಮಾನುಜ ಎಂಬ ವ್ಯಕ್ತಿಯಿಂದ ರಚಿತವಾದದ್ದು ಎಂಬುದು ಗ್ರಂಥಾಂತ್ಯದಲ್ಲಿರುವ

ಇತಿ ವೈಯಾಕರಣೇನ
ಶ್ರೀಮದ್ರಾಮಾನುಜಾಭಿಧಾನೇನ ರಚಿತಂ ರಾಮಾಯಣ ಸಂಗ್ರ
ಹ ಮನುಗೃಹ್ಣಾತು ಜಾನಕೀ ಜಾನಿಃ

ಎಂಬ ಮಾತುಗಳಿಂದ ತಿಳಿದುಬರುತ್ತದೆ. ಪುಸ್ತಕದ ರಕ್ಷಾಪುಟದಲ್ಲಿ ಮೊದಲಿಗೆ ದೇವನಾಗರಿ ಲಿಪಿಯಲ್ಲಿ ರಾಮಾಯಣ ಸಂಗ್ರಹಃ, An Introduction to Sanskrit

ಎಂದಿದ್ದರೂ ಅದರ ಕೆಳಗೆ ಕನ್ನಡ ಲಿಪಿಯಲ್ಲಿ 'ಸಂಸ್ಕೃತ ಪ್ರದರ್ಶಿನಿ' ಎಂದಷ್ಟೇ ಇರುವುದು ಗಮನಾರ್ಹ. ವಾಲ್ಮೀಕಿ ರಾಮಾಯಣದಿಂದ ಒಟ್ಟು 61 ಶ್ಲೋಕಗಳನ್ನು ಆರಿಸಿಕೊಂಡು ಅದಕ್ಕೆ ಅಲ್ಲಲ್ಲಿ ಗದ್ಯಭಾಗವನ್ನು ಸೇರಿಸಿ ಈ ಚಂಪೂಕೃತಿಯನ್ನು ಸಿದ್ಧಪಡಿಸಲಾಗಿದೆ.

> *"...... ಈ ಪುಸ್ತಕದ ಸಹಾಯದಿಂದ ಕನಡ ಅಥವಾ ಇಂಗ್ಲಿಷ್ ತಿಳಿದವರು ದೇವನಾಗರೀ ಅಕ್ಷರವನ್ನು ಅಭ್ಯಾಸಮಾಡಿ ಸಂಸ್ಕೃತ ಭಾಷೆಯನ್ನು ಸುಲಭವಾಗಿ ಕಲಿಯಬಹುದು. ಆದರೆ ಆಂಧ್ರದ್ರವಿಡಾದಿ ಇತರ ಲಿಪಿಗಳಲ್ಲಿ ಅನೇಕ ಸಂಸ್ಕೃತ ಗ್ರಂಥಗಳು ಇದ್ದಾಗ್ಯೂ ದೇವನಾಗರೀ ಸಂಸ್ಕೃತದ ಸ್ವಂತ ಲಿಪಿಯಾಗಿ ಇರುವ ಕಾರಣ ಇದನ್ನೇ ಅಭ್ಯಾಸ ಮಾಡುವುದು ಅವಶ್ಯಕ ವಾಗಿಯೂ ಪಂಡಿತ ಪರಿಗ್ರಾಹ್ಯವಾಗಿಯೂ ಇಧೆ" ಎಂಬ ಪೀಠಿಕೆಯ ಮಾತುಗಳಿಂದ ಸಂಸ್ಕೃತ ಭಾಷೆಯನ್ನು ಪರಿಚಯಿಸುವ ಉದ್ದೇಶದಿಂದ ಈ ಕೃತಿಯನ್ನು ಸಿದ್ಧಪಡಿಸಲಾಗಿದೆ ಎಂದು ತಿಳಿದುಬರುತ್ತದೆ.*

ಕೃತಿಯ ಮೊದಲಿಗೆ ಎಂಟು ಪುಟಗಳ Introductionನ ಭಾಗವಿದ್ದು ಅದರಲ್ಲಿ ದೇವನಾಗರಿ ಅಕ್ಷರಮಾಲೆ, ಗುಣಿತಾಕ್ಷರಗಳು, ಸಂಖ್ಯೆಗಳು, ಪುಸ್ತಕದಲ್ಲಿ ಉಪಯೋಗಿಸಿರುವ ಸಂಕೇತಗಳು ಹಾಗೂ ಓದುವುದಕ್ಕೆ ಸೂಚನೆಗಳು ಎಂಬ ಭಾಗಗಳಿವೆ. ಪುಸ್ತಕದ ಎಡಪುಟದಲ್ಲಿ ದೇವನಾಗರಿ ಲಿಪಿಯ ಪಾಠ, ಅದರ ಕೆಳಗೆ ರೋಮನ್ ಲಿಪಿಯಲ್ಲಿ ಪದವಿಭಜನೆ ಹಾಗೂ ವ್ಯಾಕರಣಾಂಶಗಳನ್ನು ನೀಡಿದೆ. ಈ ವಿವರಗಳನ್ನೇ ಕನ್ನಡ ಲಿಪಿಯಲ್ಲಿ ಬಲಪುಟದಲ್ಲಿ ಕೊಡಲಾಗಿದೆ. ಆದರೆ ದೇವನಾಗರಿ ಲಿಪಿಯಲ್ಲಿ ಸಂಧಿಯನ್ನು ಬಿಡಿಸದೆ ಕೂಡಿಸಿ ಬರೆದಿರುವುದನ್ನು ಕನ್ನಡದಲ್ಲಿ ಬಿಡಿಸಿಯೇ ತೋರಿಸಿದೆ. ಉದಾಹರಣೆಗೆ ಕೆಳಗಿನ ಪದ್ಯವನ್ನು ನೋಡಬಹುದು :

ಎಡಗಡೆಯ ಪುಟದಲ್ಲಿರುವ ಪಠ್ಯ :

प॥ अथ लक्ष्मणाशत्रुघ्नौ प्रासूयेतां सुमित्रया।

atha Lakshmana-Shatrughnau prasuyetam Sumitraya

adv. Dva -a m. N. d. pra + su 3d. 2 pret. pass. -a f.I.s.

एते कुमाराश्चत्वारोव्यवर्धन्त दिने दिनो॥

ete kumaras chatviras vyavardhanta dine dine

etad m. N. p. -a m. N. p. chatur m. N. VI + vridh 3p. 1 pret. -a m. L. s.

ಬಲಗಡೆ ಪುಟದಲ್ಲಿರುವ ಪಠ್ಯ :

ಅಥ ಲಕ್ಷ್ಮಣ-ಶತ್ರುಘ್ನಾ ಪ್ರಾಸೂಯೆತಾಂ ಸುಮಿತ್ರಯಾ।

ಕ್ರಿ.ವಿ. ದ್ವ. ಅ.ಪು.೧ದ್ವಿ. ಪ್ರ+ಸೂ ಪ್ರ.ಪು.ಭೂ.ಕರ್ಮ. -ಆ ಸ್ತ್ರೀ.ತೃ.ಏ.

ಎತೆ ಕುಮಾರಾಸ್ ಚತ್ವಾರಸ್ ವ್ಯವರ್ಧಂತ ದಿನೆ ದಿನೆ ॥ [1]

ಎತದೌ ಪು.೧.ಬ. -ಅ ಪು.೧ ಬ. ಚತುರ್ ಪು.೧ ವಿ +ವೃಧೌ ಪ್ರ.ಬ.ಭೂ. -ಅ ಪು. ೩ ಏ.

ಇಷ್ಟೆಲ್ಲಾ ವಿವರಗಳಿದ್ದರೂ ತಾತ್ಪರ್ಯವಿಲ್ಲದಿರುವುದು ಗಮನಾರ್ಹ. ದೇವನಾಗರೀ ಮತ್ತು ರೋಮನ್ ಲಿಪಿಯ ಭಾಗವು ಹೆಚ್ಚು ತಪ್ಪಿಲ್ಲದೆ ಇದೆ. ಆದರೆ ಇದೇ ಮಾತನ್ನು ಕನ್ನಡ ವಿಭಾಗಕ್ಕೆ ಹೇಳುವಂತಿಲ್ಲ. ಏಕೆಂದರೆ ಇಡಿಯ ಪುಸ್ತಕದಲ್ಲಿ ಉಚ್ಚಾರಣೆ, ಪದ ಪ್ರಯೋಗ ಹಾಗೂ ಸಂಧಿ ಬಿಡಿಸುವಿಕೆಗಳಲ್ಲಿ ಹೇರಳವಾದ ತಪ್ಪುಗಳಿವೆ.

ಉಚ್ಚಾರಣೆ : ಕನ್ನಡ ಪದಗಳ ಉಚ್ಚಾರಣೆಯಲ್ಲಿ ಅನೇಕ ದೋಷಗಳಿವೆ. ಉದಾಹರಣೆಗೆ 'ಇದೆ' ಎಂಬುದಕ್ಕೆ ಬದಲಾಗಿ ಇಧೆ, ಶೇರಿಸುವ (ಸೇರಿಸುವ), ಸಾದಾರಣ (ಸಾಧಾರಣ), ಉಪಿಯೋಗ (ಉಪಯೋಗ) ಇತ್ಯಾದಿ. ಇವೆಲ್ಲಾ 19ನೇ ಶತಮಾನದ ಆಡುಭಾಷೆಯ ರೂಪಗಳೆಂದು ಸಮಾಧಾನಕೊಡಬಹುದಾದರೂ 'ಕನ್ನಡ', 'ಪುಸ್ತಕ' ಎಂಬ ಶಬ್ದಗಳನ್ನು 'ಕನಡ', 'ಪುಸ್ತುಕ' ಎಂದು ಬಳಸಿರುವುದರ ಕಾರಣವೇನೋ ತಿಳಿಯುವುದಿಲ್ಲ. ಅಂತೆಯೇ - Introduction ಎಂಬುದಕ್ಕೆ 'ಮುಂಭಾಗ' ಎಂದೂ, Directions for Reading ಎಂಬುದನ್ನು 'ಓದುವುದಕ್ಕೆ ಲಕ್ಷಣ' ಎಂದೂ ಅನುವಾದಿಸಲಾಗಿದೆ!

ಗಮನಾರ್ಹವಾದ ದೋಷವೆಂದರೆ ಪದಮಧ್ಯದಲ್ಲಿ ದೀರ್ಘಸಹಿತವಾದ ಓತ್ವಗಳಿರುವ ಕಡೆ ಕೇವಲ ಓತ್ವವನ್ನೇ ಮುದ್ರಿಸಿರುವುದು. ಮಹೇಂದ್ರ - 'ಮಹೆಂದ್ರ'ವಾಗಿದೆ. ಹಾಗೆಯೇ ವೈದೆಹಿ (ವೈದೇಹಿ), ರಾವಣೆನ (ರಾವಣೇನ), ಎತೆಷಾಂ (ಏತೇಷಾಂ), ಶೊಣಿತ (ಶೋಣಿತ), ಸಂಕ್ಷೊಭಂ (ಸಂಕ್ಷೋಭಂ), ಶೊಕ (ಶೋಕ), ಸಮ್ಮೊದಂ (ಸಮ್ಮೋದಂ), ಭರತೆನ (ಭರತೇನ), ಆದೆಶೆನ (ಆದೇಶೇನ) - ಹೀಗೆ ಈ ಪಟ್ಟಿಯನ್ನು ಸಾಕಷ್ಟು ಬೆಳೆಸಬಹುದು. ದೇವನಾಗರಿಯಲ್ಲಿ ಶುದ್ಧರೂಪಗಳನ್ನೇ ಕೊಟ್ಟಿದ್ದರೂ ಕನ್ನಡ ಲಿಪಿಯಲ್ಲಿ ಮಾತ್ರ ಈ ರೀತಿ ಇರುವುದು ಏಕೆ ಎಂಬ ಸಂದೇಹ ಮೂಡುತ್ತದೆ. ಸಂಸ್ಕೃತದಲ್ಲಿ ಎ ಮತ್ತು ಒ ಕಾರಗಳಿಗೆ ಹ್ರಸ್ವವಿಲ್ಲ. ಹೀಗಿರುವಾಗ ದೀರ್ಘಾಕ್ಷರಗಳನ್ನು ಹ್ರಸ್ವವನ್ನಾಗಿ ಪರಿಗಣಿಸಿರುವುದು ಔಚಿತ್ಯಪೂರ್ಣವಲ್ಲ.

ಇಂತಹುದೇ ಮತ್ತೊಂದು ಸಂದರ್ಭವೆಂದರೆ ಪದವಿಭಾಗದ ಸಂದರ್ಭದಲ್ಲಿ ವಿಸರ್ಗದಿಂದ ಕೊನೆಯಾಗಬೇಕಾದ ಕಡೆಗಳಲ್ಲೆಲ್ಲಾ 'ಸ್' ಎಂಬ ವ್ಯಂಜನದಿಂದ ಪದಗಳನ್ನು ಅಂತ್ಯಗೊಳಿಸಿರುವುದು. ನೃಪಸ್ (ನೃಪಃ), ಕಥಾಸ್ (ಕಥಾಃ), ಸಸ್ (ಸಃ), ತತಸ್ (ತತಃ), ತ್ವರಿತಗಾಮಿಭಿಸ್ (ತ್ವರಿತಗಾಮಿಭಿಃ) - ಎಂಬಿತ್ಯಾದಿಯಾದ ರೂಪಗಳು ಕೃತಿಯುದ್ದಕ್ಕೂ ಕಂಡುಬರುತ್ತದೆ.

---

1 ಬಾಲಕಾಂಡ, ನಾಲ್ಕನೇ ಪದ್ಯ. ಪು 2, 3.

ಸಂಸ್ಕೃತ ಭಾಷೆಯಲ್ಲಿ ವಿಸರ್ಗಸಂಧಿಯಾಗುವಾಗ ವಿಸರ್ಗಕ್ಕೆ ತವರ್ಗದ ಕರ್ಕಶ ವರ್ಣಗಳು ಪರವಾದರೆ ಸಕಾರ ಆದೇಶವಾಗುವುದು ನಿಯಮ. (ಉದಾ: ದೇವಾಃ + ತ್ರಿದಶಾಃ = ದೇವಾಸ್ತ್ರಿದಶಾಃ ಇತ್ಯಾದಿ). ಅಂತೆಯೇ ಚವರ್ಗದ ಕರ್ಕಶವರ್ಣಗಳು ಪರವಾದರೆ ಶಕಾರವೂ, ಟವರ್ಗದ ವರ್ಣಗಳು ಪರವಾದರೆ ಷಕಾರವೂ ಆದೇಶವಾಗುತ್ತದೆ. ಇದೇ ರೀತಿಯಾದ ನಿಯಮಗಳು ಸಾಕಷ್ಟಿದ್ದರೂ ವಾಕ್ಯಾಂತದಲ್ಲಿ ವಿಸರ್ಗ ಬಂದರೆ ಭೇದವಾಗದೆ ವಿಸರ್ಗವೇ ಉಳಿಯುತ್ತದೆ ಎನ್ನುವುದು ಬಹುಮುಖ್ಯ. 'ಸ್' ಎಂದು ಕೊನೆಯಾಗುವುದು ಪ್ರಾತಿಪದಿಕವಾದ ರೂಪ. ಆದರೆ ಯಾವುದೇ ಒಂದು ಪದವು ಪ್ರಾತಿಪದಿಕವಾಗಿ ಕೊನೆಯಾಗದೆ ವಿಸರ್ಗದೊಂದಿಗೇ ಕೊನೆಯಾಗುವುದು ರೂಢಿ. ಈ ದೃಷ್ಟಿಯಿಂದ ಇಲ್ಲಿಯ ಪದವಿಭಜನೆ ಸಾಧುವಲ್ಲ ಎಂದು ಹೇಳಬಹುದು. ಆದರೂ ಪಾಶ್ಚಾತ್ಯ ವಿದ್ವಾಂಸರನೇಕರು 'ದಂಡಿನ್' ಮುಂತಾಗಿ ಪ್ರಾತಿಪದಿಕ ರೂಪದಲ್ಲಿಯೇ ಪದಗಳನ್ನು ಬಳಸುವುದರಿಂದ ರೈಸರೂ ಈ ಮಾರ್ಗವನ್ನೇ ಅನುಸರಿಸಿದ್ದಾರೆ ಎನ್ನಬಹುದು.[1]

ಗ್ರಂಥಾಂತ್ಯದಲ್ಲಿ 'Vocabulary' ಎಂಬ ಶೀರ್ಷಿಕೆಯಲ್ಲಿ ಮೊದಲಿಗೆ ಸಂಸ್ಕೃತ ಶಬ್ದ, ಅದರ ಇಂಗ್ಲಿಷ್ ಅರ್ಥ, ಅನಂತರ ಕನ್ನಡ ಅರ್ಥಗಳನ್ನು ವರಸೆಯಾಗಿ ನೀಡಲಾಗಿದೆ.

ಕೃತಿಯ ಮುನ್ನುಡಿಯಲ್ಲಿರುವ 'ಕನ್ನಡದ ಜನರಿಗೆ ಅನುಕೂಲವಾಗುವಂತಹ ಇಂತಹ ಇನ್ನೊಂದು ಪುಸ್ತಕ ಈ ವರೆಗೆ ಬಂದಿಲ್ಲ' ಎಂಬ ಮಾತುಗಳನ್ನು ಪರಿಗಣಿಸಿದರೆ ರೈಸರ ಈ ಪ್ರಾಥಮಿಕ ಪ್ರಯತ್ನವು ಅಲ್ಪಸ್ವಲ್ಪ ದೋಷಗಳಿಂದ ಕೂಡಿದ್ದರೂ ಸಂಪೂರ್ಣವಾಗಿ ವಿಫಲ ಎಂದು ಹೇಳುವಂತಿಲ್ಲ. ಅವರೇ ಹೇಳಿಕೊಂಡಿರುವಂತೆ ದೇವನಾಗರಿ ಲಿಪಿಯು ಭಾರತದ ಈ ಪ್ರಾಂತ್ಯಗಳಲ್ಲಿ ಹೆಚ್ಚು ಪ್ರಚಲಿತದಲ್ಲಿ ಇರದಿರುವುದರಿಂದ ಆ ಲಿಪಿಯ ಅಕ್ಷರಗಳನ್ನು ಹೊಂದಿಸಿಕೊಳ್ಳುವುದು ಕಷ್ಟವಾಗಿದೆ. ಹಾಗಾಗಿಯೇ ಅ, ಆ, ಎ, ಔ, ಛ, ಣ, ಥ ಮುಂತಾದ ಅಕ್ಷರಗಳು ಈಗ ಬಳಕೆಯಲ್ಲಿರುವ ದೇವನಾಗರಿ ಅಕ್ಷರಗಳಿಗಿಂತ ಸ್ವಲ್ಪ ಭಿನ್ನವಾಗಿವೆ. 1868ರನಂತರ ಮತ್ತೆ ಈ ಪುಸ್ತಕವು ಮರುಮುದ್ರಿತವಾದಂತೆ ಕಂಡುಬರುವುದಿಲ್ಲ.

ಪದ್ಯಸಾರ : ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಆಯ್ದ ಭಾಗಗಳನ್ನು ಸಂಗ್ರಹಿಸಿ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಪದ್ಧತಿ 19ನೇ ಶತಮಾನದ ಉತ್ತರಾರ್ಧದಿಂದ ಆರಂಭವಾಯಿತು. ಅಂತಹುಗಳಲ್ಲಿ ಒಂದು 'ಪದ್ಯಸಾರ'. ಮೂರನೇ ಅಧ್ಯಾಯದಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ 1868ರಲ್ಲಿ ಮೊತ್ತ ಮೊದಲ ಬಾರಿಗೆ ರೈಸ್ ಇದನ್ನು ಸಂಪಾದಿಸಿ ಪ್ರಕಟಿಸಿದರು. ಇದೇ ವರ್ಷದಲ್ಲಿ ಕಿಟೆಲರ 'ಸಣ್ಣ ಕರ್ನಾಟಕ ಕಾವ್ಯಮಾಲೆ' ಹಾಗೂ ವುರ್ತನ 'ಪ್ರಾಕ್ಕಾವ್ಯ ಮಾಲಿಕೆ'ಗಳೂ ಪ್ರಕಟವಾಗಿರುವುದು ಗಮನಾರ್ಹ. ಇದರಲ್ಲಿ ಮೊದಲನೆಯದನ್ನು ಬಾಸೆಲ್ ಮಿಷನ್ ಪ್ರಕಟಿಸಿದ್ದರೆ ಎರಡನೆಯದನ್ನು ಮದ್ರಾಸು ಸರ್ಕಾರದ ಶಿಕ್ಷಣ ಇಲಾಖೆಗಾಗಿ ಮೈಸೂರಿನ ವಿದ್ಯಾಭ್ಯಾಸ ಇಲಾಖೆಯೇ ಪ್ರಕಟಿಸಿದೆ.

1 ಈ ವಿವರಗಳನ್ನು ತಿಳಿಸಿದವರು ಡಾ॥ ಶ್ರೀರಾಮಭಟ್ಟ ಅವರು.

1868ರಲ್ಲಿ ಮೊದಲಿಗೆ ಪ್ರಕಟವಾದಾಗ 124 ಪುಟಗಳಷ್ಟಿದ್ದ ಪದ್ಯಸಾರವು[1] ಎರಡನೇ ಬಾರಿಗೆ 1872ರಲ್ಲಿ 135 ಪುಟಗಳಷ್ಟಾಯಿತು. ಆದರೆ 1881ರಲ್ಲಿ ಹೊರಬಂದ ಐದನೇ ಮುದ್ರಣದ ವೇಳೆಗೆ ಪುಟಗಳ ಸಂಖ್ಯೆ 108ಕ್ಕೆ ಇಳಿದಿದೆ. ಬಹುಶಃ ಇದಕ್ಕೆ ಕಾರಣ ಎರಡನೇ ಮುದ್ರಣದಲ್ಲಿದ್ದ 'ಮೂರ್ಖತನ ವನ್ನು ಕುರಿತು', 'ಚಿಂತೆಬೇಡ', 'ವ್ಯರ್ಥವಾದ ಕೆಲಸಗಳು', 'ಸಲ್ಲದ ಕೆಲಸಗಳು', 'ಕಷ್ಟಾರ್ಜಿತ ಧನ' ಹಾಗೂ 'ಇಹಲೋಕದ ಕಷ್ಟ' ಎಂಬ ಭಾಗಗಳನ್ನು ಕೈಬಿಟ್ಟಿರುವುದು. ಅವುಗಳ ಸ್ಥಳದಲ್ಲಿ 'ಪಂಪಕವಿ ಪ್ರಶಂಸೆ', 'ಪರ್ವತ ವರ್ಣನೆ', 'ಚಂದ್ರೋದಯ ವರ್ಣನೆ' ಹಾಗೂ 'ವರ್ಷಋತು ವರ್ಣನೆ' ಎಂಬ ಭಾಗ ಗಳನ್ನು ಸೇರಿಸಿದೆ.

ಎರಡನೆಯ ಮುದ್ರಣದ ಮುನ್ನುಡಿಯಲ್ಲಿ ರೈಸ್ ಹೆಚ್ಚಿನ ವಿವರಗಳನ್ನೇನೂ ನೀಡದೆ 'ಈ ಸಂಕಲನವನ್ನು ಮೂಲತಃ ಮೈಸೂರು ಸಂಸ್ಥಾನದ ಸರ್ಕಾರಿ ಶಾಲೆಗಳಿಗೆ ಪಠ್ಯವಾಗಿ ಬಳಸಲೆಂದು ಸಿದ್ಧಪಡಿಸಲಾಗಿದೆ. ಆದರೆ ಕನ್ನಡದ ಪ್ರಮುಖ ಸಾಹಿತ್ಯ ಕೃತಿಗಳ ಚಿಕ್ಕಚಿಕ್ಕ ಆಯ್ದ ಭಾಗಗಳನ್ನೂ ಇದು ಒಳಗೊಂಡಿರುವುದರಿಂದ ಸಾಮಾನ್ಯ ಓದುಗರಿಗೂ ಇದು ಅನುಕೂಲವಾಗುವಂತೆ ಕಲ್ಪಿಸಿದೆ. ಹಾಗಾಗಿ ಕೇವಲ ದಾಸರ ಪದಗಳನ್ನೇ ಹೆಚ್ಚಾಗಿ ತೆಗೆದುಕೊಳ್ಳದೆ ಜ್ಞಾನಸಿಂಧು, ಅನುಭವಾಮೃತಗಳಂತಹ ನೀತಿಗ್ರಂಥಗಳಿಂದ ಹಾಗೂ ರಾಮಾಯಣ, ಮಹಾಭಾರತ, ಲಿಂಗಾಯತ ಕೃತಿಯಾದ ಬಸವಪುರಾಣ, ಪ್ರಸಿದ್ಧ ಕೃತಿಗಳಾದ ಜೈಮಿನಿಭಾರತ, ರಾಜಶೇಖರ ವಿಳಾಸಗಳಿಂದ ಪದ್ಯಗಳನ್ನು ಆಯ್ದು ಸೇರಿಸಿದೆ' ಎಂದಷ್ಟೇ ಹೇಳಿದ್ದಾರೆ.

ಆದರೆ ಐದನೇ ಮುದ್ರಣದಲ್ಲಿ ಮೂರು ಪುಟಗಳಷ್ಟು ವಿಸ್ತಾರವಾದ ಮುನ್ನುಡಿ ಇದ್ದು ಕನ್ನಡ ಸಾಹಿತ್ಯ ಚರಿತ್ರೆಯ ಪಕ್ಷಿನೋಟವನ್ನು ನೀಡಲಾಗಿದೆ. ಪಂಪ, ಕವಿರಾಜ ಕುಂಜರ, ನಾಗಚಂದ್ರ, ಲಕ್ಷ್ಮೀಶ, ಭೀಮಕವಿ, ವಿರೂಪಾಕ್ಷ ಪಂಡಿತ, ಕುಮಾರವ್ಯಾಸ, ಕುಮಾರವಾಲ್ಮೀಕಿ, ಪುರಂದರದಾಸ, ಕನಕದಾಸ, ಷಡಕ್ಷರದೇವ, ರಂಗನಾಥ ಹಾಗೂ ಚಿದಾನಂದ ಅವಧೂತರ ಬಗೆಗೆ ತಲಾ ನಾಲ್ಕಾರು ಸಾಲುಗಳ ಪರಿಚಯವಿದೆ. ಅದರಲ್ಲಿಯೂ ವಿಶೇಷವಾಗಿ ಪಂಪನ ಬಗ್ಗೆ ಇರುವ ಮಾಹಿತಿ. ಪಂಪ ಬರೆದ ಕೃತಿಗಳು, ಅವನ ವಂಶ, ಪೂರ್ವಜರು ಆದ ಅರಿಕೇಸರಿಯ ಆಸ್ಥಾನದಲ್ಲಿದ್ದದ್ದು, ಪುಲಿಗೆರೆಯ ತಿರುಳ್ಗನ್ನಡದಲ್ಲಿ ಕಾವ್ಯರಚನೆ ಮಾಡಿದ್ದು, ದೊರೆಯು ಅವನಿಗೆ ಅಗ್ರಹಾರವನ್ನು ದಾನಕೊಟ್ಟಿದ್ದು, ಇತ್ಯಾದಿ ವಿವರಗಳಿವೆ. ವಿಶೇಷವೆಂದರೆ ಪಂಪನನ್ನು ಕುರಿತಾದ ಈ ಎಲ್ಲ ಮಾಹಿತಿಗಳು ಬಹುಶಃ ಮೊತ್ತಮೊದಲ ಬಾರಿಗೆ ಬಾಹ್ಯಪ್ರಪಂಚಕ್ಕೆ ಇಲ್ಲಿ ಪರಿಚಿತವಾಗುತ್ತಿದೆ. 1882ರಲ್ಲಿ ರೈಸರೇ

---

1 ಮೊದಲ ಮುದ್ರಣದ ಪ್ರತಿಗಳೂ ಸೇರಿದಂತೆ ಪದ್ಯಸಾರದ ಎಲ್ಲ ಮುದ್ರಣಗಳೂ ಈಗ ನೋಡಲು ಲಭ್ಯವಿಲ್ಲ. ಆದ್ದರಿಂದ ಬಾರ್ನೆಟ್‌ರ ಸೂಚಿಯಲ್ಲಿರುವ ಮಾಹಿತಿ ಹಾಗೂ ಎರಡು ಮತ್ತು ಐದನೇ ಮುದ್ರಣದ ಆವೃತ್ತಿ ಗಳನ್ನು ಇಲ್ಲಿ ಬಳಸಿಕೊಂಡಿದೆ.

The poet Pampa ಎಂಬ ಲೇಖನವನ್ನು Journal of Royal Asiatic Society ಯಲ್ಲಿ ಪ್ರಕಟಿಸಿದಾಗಲೇ ಮೊತ್ತಮೊದಲಿಗೆ ಪಂಪನ ಹೆಸರು ಹೊರಬಂದಿತು ಎಂಬ ಅಭಿಪ್ರಾಯವಿದೆ. ಆದರೆ ಅದಕ್ಕೂ ಒಂದು ವರ್ಷ ಮೊದಲೇ ರೈಸರು ಈ ವಿವರಗಳನ್ನು ಪದ್ಯಸಾರದಲ್ಲಿ ಅಳವಡಿಸಿದ್ದಾರೆ. ಅಲ್ಲದೆ 'ಕಥೆಪಿರಿದಾದರಂ.....', 'ವ್ಯಾಸಮುನೀಂದ್ರ......' ಮುಂತಾದ ಎಂಟು ಪ್ರಸಿದ್ಧ ಪದ್ಯಗಳನ್ನು ಪಠ್ಯದಲ್ಲಿ ಅಳವಡಿಸಿದ್ದಾರೆ. ಅದರಂತೆಯೇ ನಾಗಚಂದ್ರನ 'ಪಂಪರಾಮಾಯಣ'ದ ಸಂಪೂರ್ಣ ಪಠ್ಯವು 1882ರಲ್ಲಿ ಪ್ರಕಟವಾಗುವ ಎಷ್ಟೋ ವರ್ಷಗಳ ಮೊದಲೇ ಇಲ್ಲಿ ಆ ಕೃತಿಯ ವರ್ಷಋತುವಿನ ವರ್ಣನೆಯ ಪದ್ಯಗಳನ್ನು ಮುದ್ರಿಸಲಾಗಿದೆ.

ಮುನ್ನುಡಿಯ ಅಂತ್ಯದಲ್ಲಿ ರೈಸ್ ಈ ಸಂಕಲನವನ್ನು ಹೊರತರುವಲ್ಲಿ ತಮಗಿದ್ದ ಉದ್ದೇಶವನ್ನು ಹೀಗೆ ಹೇಳಿಕೊಂಡಿದ್ದಾರೆ :

> *ಪ್ರಸ್ತುತ ಸಂಕಲನದಲ್ಲಿನ ಆಯ್ದಭಾಗಗಳು ಸುಮಾರು ಒಂದು ಸಾವಿರ ವರ್ಷಗಳಷ್ಟು ದೀರ್ಘಕಾಲಾವಧಿಯ ವಿವಿಧ ಘಟ್ಟಗಳಲ್ಲಿ ರಚಿತವಾಗಿವೆ. ಕನ್ನಡಿಗರು ಕೇವಲ ಸಂಸ್ಕೃತಪಂಡಿತರ ಜಟಿಲವಾದ ಸಂಸ್ಕೃತ ಪದಜಾಲಗೆ ಶರಣಾಗುವುದರ ಬದಲು, ಅಥವಾ ವಿದೇಶಿ ಶಬ್ದಗಳಿಂದ ಕಲಬೆರಕೆಯಾದ ಕಾಯಿದೆ ಕಾನೂನುಗಳ ಭಾಷಾಂತರಗಳ ಅರ್ಥವಿಲ್ಲದ ವಾಗ್ಜಾಲದಲ್ಲಿ ಸಿಲುಕುವುದರ ಬದಲಿಗೆ ಶ್ರುತಿಮನೋಹರವೂ, ಭಾವಪೂರ್ಣವೂ ಆದ ತಮ್ಮದೇ ನುಡಿಯ ಇಂತಹ ಸುಂದರ ಅತ್ಯುತ್ತಮ ಕಾವ್ಯಭಾಗಗಳನ್ನು ಅಭ್ಯಸಿಸುವುದು ಅವಶ್ಯಕ. ದಕ್ಷಿಣಭಾರತದ ಯಾವ ಭಾಷೆಯೂ ಕನ್ನಡದಷ್ಟು ಸಮೃದ್ಧವಾದ ಸಾಹಿತ್ಯರಾಶಿಯನ್ನಾಗಲೀ, ಪ್ರಾಚೀನತೆಯನ್ನಾಗಲೀ ಪಡೆದುಕೊಂಡಿಲ್ಲ. ತಮಿಳಿನ ಅತ್ಯಂತ ಪ್ರಾಚೀನ ಕೃತಿ ಎಂದು ತಿಳಿದು ಬಂದಿರುವ ತೊಲ್ಕಾಪ್ಪಿಯಂ ಕೂಡಾ 10ನೇ ಶತಮಾನಕ್ಕಿಂತ ಹಳೆಯದಲ್ಲವೆನ್ನಲಾಗಿದೆ. ನನ್ನಯ್ಯನ ವ್ಯಾಕರಣವೇ ತೆಲುಗಿನ ಅತ್ಯಂತ ಪ್ರಾಚೀನ ಕೃತಿಯಾಗಿದ್ದು ಅದರ ಕಾಲ 12ನೇ ಶತಮಾನ. ಮಲೆಯಾಳದ ರಾಮಚರಿತವೂ ತುಂಬಾ ಹಳೆಯದೇನಲ್ಲ. ಹೀಗಿರುವ ಕನ್ನಡದ ಪ್ರಾಚೀನ ಕೃತಿಗಳನ್ನು ಅವು ಜೈನಧರ್ಮಕ್ಕೆ ಸೇರಿದವು ಎಂಬ ಏಕೈಕ ಕಾರಣಕ್ಕೆ ಅಲಕ್ಷಿಸುವುದು ಕೇವಲ ಅನಾಗರೀಕವಾದ ನಡವಳಿಕೆ ಎನಿಸುತ್ತದೆ.*[1]

---

1 ಪು - 63ರಲ್ಲಿನ ಭಾಗದ ಅನುವಾದ.

ಇನ್ನು ಕೃತಿಯ ಐದನೇ ಮುದ್ರಣದಲ್ಲಿ ಅಳವಡಿಸಲ್ಪಟ್ಟಿರುವ ಪದ್ಯಗಳ ವಿವರಗಳನ್ನು ಹೀಗೆ ಪಟ್ಟಿ ಮಾಡಬಹುದು :

* ಈ ಸಂಗ್ರಹದಲ್ಲಿ ಒಟ್ಟು 25 ಪದ್ಯಗಳಿವೆ. ಅವುಗಳಲ್ಲಿ ಆರು ದಾಸರ ಪದಗಳು (ಹೆಚ್ಚರಿಕೆ, ಆಶೆಯು ಕೆಟ್ಟದ್ದು, ದ್ರವ್ಯ ವರ್ಣನೆ, ಲೋಭಿಯ ದ್ರವ್ಯ, ದುರ್ಜನರ ಸಹವಾಸ ಮತ್ತು ದುರ್ನೀತಿಯೇ ಹೊಲೆತನ), ಮೂರುತೊರವೆ ರಾಮಾಯಣದ ಭಾಗಗಳು (ಸೀತಾಕಲ್ಯಾಣ, ಯುದ್ಧಸನ್ನಾಹ ಹಾಗೂ ಖರಾದಿ ರಾಕ್ಷಸರ ಸಂಹಾರ), ಮೂರು ರಾಜಶೇಖರ ವಿಳಾಸದ ಭಾಗಗಳು (ಸಮುದ್ರವರ್ಣನೆ, ಪ್ರಾತಃಕಾಲವರ್ಣನೆ ಹಾಗೂ ಮೃಗಯಾವರ್ಣನೆ), ಚನ್ನಬಸವ ಪುರಾಣದ ಎರಡು ಭಾಗಗಳು (ವಸಂತಋತು ವರ್ಣನೆ ಮತ್ತು ರಾಜನೀತಿ), ಜ್ಞಾನಸಿಂಧು, ಅನುಭವಾಮೃತ, ಕುಮಾರವ್ಯಾಸ ಭಾರತ, ಪಂಪಭಾರತ, ಜೈಮಿನಿ ಭಾರತ, ಶಬರ ಶಂಕರ ವಿಳಾಸ, ಲೀಲಾವತಿ, ಪಂಪರಾಮಾಯಣ ಹಾಗೂ ಬಸವಪುರಾಣಗಳ ತಲಾ ಒಂದೊಂದು ಭಾಗಗಳು (ಅನುಕ್ರಮವಾಗಿ ಸಾಧುಲಕ್ಷಣ, ವೈರಾಗ್ಯಲಕ್ಷಣ, ಪಾಂಚಾಲಪುರ ವರ್ಣನೆ, ಪಂಪಕವಿ ಪ್ರಶಂಸೆ, ವೃಷಕೇತು ಸುಧನ್ವರ ಕಾಳಗ, ಪರ್ವತ ವರ್ಣನೆ, ಚಂದ್ರೋದಯ ವರ್ಣನೆ, ವರ್ಷಋತುವರ್ಣನೆ ಮತ್ತು ಶ್ರೀಗಿರಿಯ ಅರಣ್ಯಗುಹೆಗಳ ವರ್ಣನೆ) ಇವೆ.

* ಪ್ರತಿ ಪದ್ಯದ ಮೊದಲಿಗೆ ಇಂಗ್ಲೀಷಿನಲ್ಲಿ ಆ ಪದ್ಯದ ಮುಖ್ಯ ಭಾವವನ್ನು ಬಿಂಬಿಸುವ ಶೀರ್ಷಿಕೆ ಇರುತ್ತದೆ. Shown evil company, who is an out caste, wealth ..... ಇತ್ಯಾದಿ.

* ಅನಂತರ ಸ್ವಲ್ಪ ದೊಡ್ಡ ಅಕ್ಷರಗಳಲ್ಲಿ ಪದ್ಯದ ಶೀರ್ಷಿಕೆಯನ್ನೂ, ಅದರ ಮಗ್ಗುಲಲ್ಲಿ ಸ್ವಲ್ಪ ಸಣ್ಣ ಅಕ್ಷರಗಳಲ್ಲಿ ಪದ್ಯದ ಆಕರವನ್ನೂ ಮುದ್ರಿಸಲಾಗಿದೆ.

  ದುರ್ಜನರ ಸಹವಾಸ. ದಾಸರಪದ
  ಸಾಧುಲಕ್ಷಣ ಜ್ಞಾನಸಿಂಧು
  ವೃಷಕೇತು ಸುಧನ್ವರ ಯುದ್ಧ ಜೈಮಿನಿಭಾರತ ಹೀಗೆ.

* ಮುಂದಿನ ಸಾಲಿನಲ್ಲಿ ದಾಸರ ಪದವಾದರೆ ರಾಗತಾಳಗಳನ್ನೂ, ಇತರ ಸಾಹಿತ್ಯ ಕೃತಿಯಾದರೆ ಅದರ ಛಂದಸ್ಸನ್ನೂ ಸೂಚಿಸಿದೆ. ಪದ್ಯಭಾಗದಲ್ಲಿ ಬೇರೆಬೇರೆ ಛಂದಸ್ಸಿನ ಪದ್ಯಗಳಿದ್ದರೆ ಆಯಾ ಪದ್ಯದ ಮೇಲೆ ಅವುಗಳ ಛಂದಸ್ಸನ್ನು ಸೂಚಿಸಲಾಗಿದೆ.

* ಪದ್ಯ ಖಂಡಗಳನ್ನು ಮುದ್ರಿಸುವಾಗ ದಾಸರ ಪದಗಳಲ್ಲಿ ಮಾತ್ರ ಪಲ್ಲವಿಯ ಭಾಗವನ್ನು ಮಧ್ಯದಲ್ಲಿ ಮುದ್ರಿಸಿ ಎಲ್ಲ ಚರಣಗಳನ್ನು ಎಡ ಅಂಚಿನಿಂದ ಆರಂಭಿಸಿ ಮುದ್ರಿಸಲಾಗಿದೆ.

ಉದಾ : *ದುರ್ಜನರ ಸಂಗವನು ತ್ಯಜಿಸು ಮನವೇ ಸಾಧು॥*
ಸಜ್ಜನರ ಸಂಗವನು ಭಜಿಸಿ ಸುಖಿಯಾಗೆಲವೋ॥ ॥ಪಲ್ಲವಿ॥

ದುಷ್ಟವ್ಯಾಘ್ರನ ಕಯ್ಯಮುಟ್ಟಿ ಹಿಡಿತರಬಹುದು।
ಅಟ್ಟಿಬಹ ಮದಕರಿಯ ಕಟ್ಟಬಹುದು॥
ಕೃಷ್ಣಸರ್ಪದ ಹುತ್ತ ಕಲಕಿ ಜೀವಿಸಬಹುದು।
ದುಷ್ಟಾತ್ಮರಾದವರ ಬಿಟ್ಟುಕಳೆ ಮನವೆ॥

(ದುರ್ಜನರ ಸಹವಾಸ) (ಪದ್ಯಭಾಗ ಸಂಖ್ಯೆ-1)

ಆದರೆ ಷಟ್ಪದಿಯನ್ನು ಮುದ್ರಿಸುವಾಗ ಕೆಳಗಿನ ವಿಧಾನವನ್ನು ಬಳಸಲಾಗಿದೆ.

ಧನುವನೇವರಿಸಿದನು ಕೊಪ್ಪಿನ।
ಕೊನೆಯ ನಾರೈದುಭಯದಲಿ ಸಿಂ।
ಜಿನಿಯ ಧನಿಧೋರಿಸಿದನಬು ಜಭವಾಂಡಘಟ ಬಿರಿಯೆ॥
ವನಧಿಗಳು ತುಳುಕಾಡೆ ತಾರಕೆ।
ತನಿಗೆದರೆ ತಳ್ಳಂಕಗೊಳೆ ಯೇ।
ದಿನಿ ಸುರಾಚಲವಲುಗೆ ಬೊಬ್ಬಿರಿದುಬ್ಬಿದನು ರಘುಜ.

(ಖರ, ದೂಷಣ, ತ್ರಿಶಿರರೆಂಬ ರಾಕ್ಷಸರ ಸಂಹಾರ) (ಪದ್ಯಭಾಗ ಸಂಖ್ಯೆ 188)

ಕಂದಪದ್ಯಗಳನ್ನು ಷಟ್ಪದಿಯ ರೂಪದಲ್ಲೇ ಹಾಗೂ ಈಗಿರುವಂತೆ ಎಲ್ಲ ಸಾಲುಗಳೂ ಎಡಗಡೆಯಿಂದ ಆರಂಭವಾಗುವಂತೆ - ಎರಡೂ ರೀತಿಯಲ್ಲಿ ಅಚ್ಚಿಸಲಾಗಿದೆ.

* ಪ್ರತಿ ಪದ್ಯಖಂಡದ ಎಡತುದಿಯಲ್ಲಿಯೂ ಕ್ರಮಸಂಖ್ಯೆಗಳನ್ನು ನೀಡಲಾಗಿದೆ. ಈ ಕ್ರಮಸಂಖ್ಯೆಗಳು ಕೇವಲ ಆಯಾ ಪದ್ಯಗಳಿಗೆ ಮಾತ್ರ ಸೀಮಿತವಾಗಿರದೆ ಒಟ್ಟು ಕೃತಿಗೇ ಸಂಬಂಧಿಸಿವೆ. ಹಾಗಾಗಿ ಇಲ್ಲಿ ಒಟ್ಟು 395 ಪದ್ಯಭಾಗಗಳಿವೆ.

* ಗ್ರಂಥಾಂತ್ಯದಲ್ಲಿ 'ತಾತ್ಪರ್ಯ ಬೋಧಕ ಟಿಪ್ಪಣಿ' ಎಂಬ ಶೀರ್ಷಿಕೆಯಲ್ಲಿ ಪದ್ಯದಲ್ಲಿನ ಕಠಿಣ ಪದಗಳ ಅರ್ಥ, ವ್ಯಾಕರಣಾಂಶ ಮುಂತಾದವುಗಳನ್ನು ಕೊಟ್ಟಿದೆ. ವ್ಯಾಕರಣಾಂಶಗಳನ್ನು ಸಂಪೂರ್ಣವಾಗಿ ವಿವರಿಸದೆ ವಾಗ್ವಿಧಾಯಿನಿಯ ನಿರ್ದಿಷ್ಟ ಸೂತ್ರವನ್ನು ಗಮನಿಸಲು 'ವಾಗ್ವಿ. .....ನೇ ಸೂ. ನೋಡು' ಎಂಬ ಸೂಚನೆಯನು ಕೊಟ್ಟಿದೆ.

ಈ ಸಂಗ್ರಹದಲ್ಲಿರುವ ಪದ್ಯಗಳ ಆಕರ, ಪಾಠ ನಿರ್ಣಯ ಇತ್ಯಾದಿ ಯಾವ ಅಂಶಗಳೂ ಇಲ್ಲಿ ಸೂಚಿತವಾಗಿಲ್ಲ. ಪಠ್ಯಪುಸ್ತಕದಂತಹ ಜನಪ್ರಿಯ ಆವೃತ್ತಿಗಳಲ್ಲಿ ಈ ಮಾದರಿಯ ಶಾಸ್ತ್ರೀಯ ಅಂಶಗಳನ್ನು ನಿರೀಕ್ಷಿಸುವಂತಿಲ್ಲ.

ಆದರೆ ಈ ಸಂಕಲನದಲ್ಲಿನ ಬಹುಪಾಲು ಕೃತಿಗಳು ಮೊಗ್ಲಿಂಗಿನ ಬಿಬ್ಲಿಯಾಥೆಕಾ ಸರಣಿಯಲ್ಲಿ ಪ್ರಕಟವಾದುವಾಗಿದ್ದು ಪದ್ಯಗಳು ಮುದ್ರಿತವಾಗಿರುವ ರೀತಿಯೂ ಹೀಗೆಯೇ ಇದೆ. ಹಾಗಾಗಿ ರೈಸ್ ಇವುಗಳನ್ನು ಮೊಗ್ಲಿಂಗ್‌ರ ಪ್ರಕಟಣೆಗಳಿಂದ ಆಯ್ದುಕೊಂಡಿರ ಬೇಕೆಂದು ಊಹಿಸಬಹುದು. ಉಳಿದವುಗಳನ್ನು ತಮ್ಮಲ್ಲಿಯ ಹಸ್ತಪ್ರತಿಗಳಿಂದ ಸಂಕಲಿಸಿ ದ್ದಾರೆ ಎಂದು ಭಾವಿಸಲು ಅವಕಾಶವಿದೆ.

ತುಂಬಾ ಅತ್ಯುತ್ತಮವೆನ್ನಲಾಗದ ಪದ್ಯಭಾಗಗಳ ಆಯ್ಕೆ, ಒಂದೇ ಪದ್ಯದಲ್ಲಿ 'ಹೆಚ್ಚರಿಕೆ', 'ಯೆಚ್ಚರಿಕೆ', 'ಎಚ್ಚರಿಕೆ' ಇತ್ಯಾದಿಯಾಗಿ ಏಕರೂಪತೆಯಿಲ್ಲದೆ ಪದಗಳನ್ನು ಬಳಸಿರುವುದು, ದಾಸರ ಪದಗಳ ಅಂತ್ಯದಲ್ಲಿ ಬರುವ ಅಂಕಿತದ ಭಾಗವನ್ನು ಕೈಬಿಟ್ಟಿರು ವುದು ಇತ್ಯಾದಿಯಾದ ಲೋಪದೋಷಗಳು ಪ್ರಸ್ತುತ ಕೃತಿಯಲ್ಲಿ ಅಲ್ಲಲ್ಲಿ ಕಾಣಬರುತ್ತದೆ. ಹಾಗಾಗಿ ಈ ಕೃತಿಯನ್ನು ಅತ್ಯುತ್ತಮ ದರ್ಜೆಯದೆಂದು ಪರಿಗಣಿಸಲು ಸಾಧ್ಯವಾಗದು. ಆದರೂ ತತ್ಕಾಲೀನ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸನ್ನಿವೇಶದಲ್ಲಿ ಇದಕ್ಕಿಂತ ಉತ್ತಮ ವಾದ ಸಂಕಲನವನ್ನು ರೂಪಿಸುವುದು ಕಷ್ಟಸಾಧ್ಯವಿತ್ತೆಂಬ ಸತ್ಯವನ್ನು ಅಲ್ಲಗಳೆಯುವಂತಿಲ್ಲ.

ಅಮರಕೋಶ :

'ಅಮರಕೋಶ'ವೆಂದೇ ಪ್ರಖ್ಯಾತವಾದ ಅಮರಸಿಂಹನ 'ನಾಮಲಿಂಗಾನುಶಾಸನ'ವು ಪ್ರತ್ಯಕ್ಷವಾಗಿ ಸಂಸ್ಕೃತ ವಿದ್ಯಾರ್ಥಿಗೆಳಿಗೂ, ಪರೋಕ್ಷವಾಗಿ ಕನ್ನಡ, ತೆಲುಗು ಮುಂತಾದ ದೇಶ ಭಾಷೆಗಳ ಅಭ್ಯಾಸಿಗಳಿಗೂ ಅವಶ್ಯಕವಾದ ಗ್ರಂಥ. ಹಾಗಾಗಿ 18ನೇ ಶತಮಾನದ ಆದಿಭಾಗ ದಿಂದಲೇ ಈ ಕೃತಿಯನ್ನು ಸಂಪಾದಿಸಿ, ಅನುವಾದಿಸಿ ಪ್ರಕಟಿಸುವ ಕಾರ್ಯ ಆರಂಭವಾಯಿತು. 1807ರಲ್ಲಿ ಎಚ್.ಟಿ. ಕೋಲ್‌ಬ್ರೂಕ್ ಪ್ರಕಟಿಸಿದ ಆಂಗ್ಲ ಅವತರಣಿಕೆ ಪ್ರಸಿದ್ಧವಾದದ್ದು.

ಲಬ್ಧ ಮಾಹಿತಿಯ ಆಧಾರದ ಮೇಲೆ ಹೇಳುವುದಾದರೆ ಅಮರಕೋಶವು ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ ಮುದ್ರಿತವಾದದ್ದು ಬಹುಶಃ 1830ರಲ್ಲಿ.[1] 378 ಪುಟಗಳ ಈ ಕೃತಿಯ ಸಂಪಾದಕರು ಯಾರೆಂದು ತಿಳಿದಿಲ್ಲ. ಆನಂತರ ಚಿಂತಕೊಂತ ಚಲುಮಯ್ಯಾ ಮತ್ತು ಮಹಾದೇವಪ್ಪ ಎಂಬ ಇಬ್ಬರು 1851ರಲ್ಲಿ ಅಮರಕೋಶವನ್ನು ತೆಲುಗಿನಿಂದ ಅನುವಾದಿಸಿ ಪ್ರಕಟಿಸಿದ್ದಾರೆ.[2] ಮುಂದೆ 1881ರಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳು 'ನಾಮಲಿಂಗಾನುಶಾಸನವೆಂಬ ಸಂಸ್ಕೃತಕೋಶವು' ಎಂಬ ಹೆಸರಿನಲ್ಲಿ ಕನ್ನಡ ಟೀಕೆ-

1 ಬಾರ್ನೆಟ್ ಸೂಚಿ, ಪು. 6.

2 ಬಾಲಸುಬ್ರಹ್ಮಣ್ಯ ಎನ್., (ಸಂ) ಅಮರಕೋಶ, ಪು. XXIII. ಮೈವಿ.ವಿ. 1989 (ದ್ವಿ.ಮು).

ತಾತ್ಪರ್ಯಗಳೊಡನೆ ಪ್ರಕಟಿಸಿದರು.[1] ಆದರೆ ಈ ಯಾವ ಆವೃತ್ತಿಗಳೂ ಪ್ರಸ್ತುತ ಅಧ್ಯಯನಕ್ಕೆ ಲಭ್ಯವಿಲ್ಲ. ಆದರೆ 1873ರಲ್ಲಿ ರೈಸ್ ಸಂಪಾದಿಸಿದ ಅಮರಕೋಶವು ಇಂದಿಗೂ ಚಾಲ್ತಿಯಲ್ಲಿದ್ದು ಅನೇಕ ಮುದ್ರಣಗಳನ್ನು ಕಂಡಿದೆ. ಮೊದಲ ಮತ್ತು ಎರಡನೆಯ ಆವೃತ್ತಿಯ ಪ್ರತಿಗಳು ಅಲಭ್ಯವಿದ್ದು ಪ್ರಸ್ತುತ ಅಧ್ಯಯನಕ್ಕೆ 1883ರಲ್ಲಿ ಮುದ್ರಿತವಾದ ಮೂರನೆಯ ಆವೃತ್ತಿಯನ್ನು ಪ್ರಧಾನವಾಗಿ ಹಾಗೂ 1927ರಲ್ಲಿ ಮುದ್ರಿತವಾದ ನಾಲ್ಕನೆಯ ಆವೃತ್ತಿಯ ಪರಿಷ್ಕೃತ ಪುನರ್ಮುದ್ರಣವನ್ನು (ಪರಿಷ್ಕೃತ ಸಂಸ್ಕರಣ - ಎನ್. ಬಾಲಸುಬ್ರಹ್ಮಣ್ಯ, ಪ್ರಕಟಣೆ - ಮೈಸೂರು ವಿಶ್ವವಿದ್ಯಾನಿಲಯ) ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ.

ಮೂರನೇ ಮುದ್ರಣದ ಪ್ರತಿಯಲ್ಲಿ ಮೊದಲಿಗೆ ಆ ನಿರ್ದಿಷ್ಟ ಆವೃತ್ತಿಯ ಮುನ್ನುಡಿ, ಎಲ್ಲ ಆವೃತ್ತಿಗಳನ್ನೂ ಸೇರಿದಂತಿರುವ 5 ಪುಟಗಳ ಸಾಮಾನ್ಯ ಮುನ್ನುಡಿ, ಪರಿವಿಡಿ, ಮುನ್ನುಡಿ ಮತ್ತು ಪರಿವಿಡಿಗಳ ಕನ್ನಡ ಅವತರಣಿಕೆ ಮತ್ತು 'ಮುದ್ರಾಪನ ಕ್ರಮಸೂಚಿಕೆ' ಎಂಬ ಭಾಗಗಳಿವೆ. ಮುಖ್ಯ ಪಠ್ಯದನಂತರ 'ಅಮರಕೋಶದರ್ಶಿ'ವೆಂಬ ಹೆಸರಿನ 148 ಪುಟಗಳ ಅಕಾರಾದಿಯನ್ನು ಮುದ್ರಿಸಲಾಗಿದೆ.

ಮೊದಲಿಗೆ ಇರುವ ಮೂರನೇ ಆವೃತ್ತಿಗೆಂದೇ ಬರೆದ ಮುನ್ನುಡಿಯಲ್ಲಿ 'ಕಳೆದ ಆವೃತ್ತಿಯಲ್ಲಿ ದುಂಡು ಕಂಸಗಳ ಬದಲಿಗೆ ಚೌಕಕಂಸಗಳನ್ನು ಬಳಸಿರುವುದನ್ನು ಬಿಟ್ಟರೆ ಎರಡನೇ ಮುದ್ರಣವು ಮೊದಲನೇ ಆವೃತ್ತಿಯ ಪುನರ್ಮುದ್ರಣವಷ್ಟೇ ಆಗಿದೆ' ಎಂಬ ಸೂಚನೆ ಇದೆ. ಎರಡನೇ ಆವೃತ್ತಿಯಲ್ಲಿ ಇಲ್ಲದಿದ್ದ ಅಕಾರಾದಿ ಸೂಚಿಯನ್ನು ಈ ಆವೃತ್ತಿಯಲ್ಲಿ ಸೇರಿಸಿರುವುದಾಗಿಯೂ ಅದರಿಂದ ಬೇಕಾದ ಪದವಿರುವ ಶ್ಲೋಕವನ್ನು ನೇರವಾಗಿ ತೆಗೆದು ನೋಡಲು ಸಾಧ್ಯವಾಗುವುದೇ ಮೊದಲಾದ ಅನೇಕ ಉಪಯೋಗ ಇದರಿಂದ ಇದೆಯೆಂದು ರೈಸ್ ಇಲ್ಲಿ ಹೇಳಿದ್ದಾರೆ.

ಪ್ರಸ್ತಾವನೆ ಎಂದು ಪರಿಗಣಿಸಬಹುದಾದ ಮತ್ತೊಂದು ಮುನ್ನುಡಿಯಲ್ಲಿ ರೈಸ್ ಅಮರಸಿಂಹನ ಕಾಲ, ದೇಶ, ಮತ; ಅಮರಕೋಶಕ್ಕಿರುವ ಪ್ರಖ್ಯಾತಿ, ಪ್ರಸ್ತುತ ಆವೃತ್ತಿಯಲ್ಲಿ ಪದಗಳನ್ನು ವಿಭಜಿಸಿರುವ ಕ್ರಮ, ಆ ಕಾರ್ಯವನ್ನು ಕೈಗೊಳ್ಳುವ ಹಿಂದಿನ ಮನೋಧರ್ಮ ಹಾಗೂ ಕಡೆಗೆ ತಾವು ಪರಿಶೀಲಿಸಿದ ಗ್ರಂಥಗಳು - ಇವಿಷ್ಟನ್ನೂ ಚರ್ಚಿಸಿದ್ದಾರೆ.

"ವಿದ್ಯಾಭ್ಯಾಸವನ್ನು ಈಗಷ್ಟೇ ಆರಂಭಿಸಿರುವ ಒಬ್ಬ ಸಾಮಾನ್ಯ ಹಿಂದೂ ಬಾಲಕನಿಂದ ಹಿಡಿದು ಅತ್ಯಂತ ದೊಡ್ಡ ವಿದ್ವಾಂಸನೆನಿಸಿಕೊಂಡವರಿಗೂ ಈ ಗ್ರಂಥ ಪರಮಾಪ್ತವಾದದ್ದು" ಎಂಬ ಮಾತುಗಳೊಂದಿಗೆ ಈ ಮುನ್ನುಡಿಯನ್ನು ಆರಂಭಿಸಿರುವ ರೈಸರು ಅಮರಕೋಶವನ್ನು 'ಸುಮಾರು 2000 ವರ್ಷಗಳ ಕಾಲ ವಿಜ್ಞಾನದ ಪ್ರಭೆ ಭೂಮಂಡಲದಲ್ಲಿ ಎಲ್ಲೆಲ್ಲಿ ತಲುಪಿತ್ತೋ ಅಲ್ಲೆಲ್ಲಾ ರೇಖಾಗಣಿತದ ಬೋಧನೆಯ ಮೂಲ ಆಕರವಾಗಿದ್ದ'

---

1 ಬಾರ್ನೆಟ್ ಸೂಚಿ - ಪು. 6. ಬಾಲಸುಬ್ರಹ್ಮಣ್ಯ ಅವರ ಪ್ರಕಾರ ಇದರ ಪ್ರಕಟಣ ವರ್ಷ 1872 ಮತ್ತು ಈ ಹೇಳಿಕೆ ನಿಜವೂ ಹೌದು. ಬೆಂಗಳೂರಿನ ವಿಚಾರದರ್ಪಣ ಪ್ರೆಸ್‌ನಲ್ಲಿ ಇದು ಮುದ್ರಿತವಾಗಿದೆ. (ಇದು ದ್ವಿತೀಯ ಮುದ್ರಣ. ಪ್ರಥಮ ಮುದ್ರಣದ ಮಾಹಿತಿ ಲಭ್ಯವಿಲ್ಲ.)

ಯೂಕ್ಲಿಡ್ಡನ ರೇಖಾಗಣಿತದ ಸೂತ್ರಗಳಿಗೆ ಹೋಲಿಸಿದ್ದಾರೆ. ಅಮರಕೋಶಕ್ಕೆ ಸಂಬಂಧಿಸಿದ ಪಾರಂಪರಿಕ ನಂಬಿಕೆಗಳನ್ನು ಆಧುನಿಕ ವಿದ್ವಾಂಸರ ಅಭಿಪ್ರಾಯಗಳ ಜೊತೆಜೊತೆಗೇ ಪ್ರಸ್ತಾಪಿಸಿರುವುದು ಈ ಮುನ್ನುಡಿಯ ವಿಶೇಷ. ಶಂಕರಾಚಾರ್ಯರು ಒಮ್ಮೆ ಬೌದ್ಧಧರ್ಮಕ್ಕೆ ಸೇರಿದ ಅನೇಕ ಕೃತಿಗಳನ್ನು ನೀರಿಗೆ ಅರ್ಪಿಸುತ್ತಿದ್ದಾಗ ಉಳಿದೆಲ್ಲ ಕೃತಿಗಳು ಮುಳುಗಿ ಹೋದರೂ ಅಮರಕೋಶವು ಮಾತ್ರ ಮುಳಗದೆ ಹಾಗೆಯೇ ತೇಲುತ್ತಿತ್ತು ಎಂಬ ದಂತಕಥೆಯನ್ನು ಅವರು ಉಲ್ಲೇಖಿಸಿದ್ದಾರೆ.[1]

ಅಮರಸಿಂಹನ ಕಾಲ ಹಾಗೂ ಮತಗಳಿಗೆ ಸಂಬಂಧಿಸಿದಂತೆ ವಿದ್ವಾಂಸರಲ್ಲಿ ನಡೆದಿರುವ ಚರ್ಚೆಗಳ ಸ್ಥೂಲ ಚಿತ್ರಣ ಇಲ್ಲಿದೆ. ಕೋಶಕಾರನ ಹೆಸರಿನಲ್ಲಿ 'ಸಿಂಹ' ಎಂಬ ಕ್ಷತ್ರಿಯ ಸೂಚಕವಾದ ಶಬ್ದವೂ, ಕೆಲವೆಡೆ 'ದೇವ' ಎಂಬ ಬ್ರಾಹ್ಮಣಸೂಚಕವಾದ ಶಬ್ದವೂ ಕಂಡುಬರುತ್ತದೆ. ಆದರೂ ಸಕಾರಣವಾಗಿ ಆತ ಬೌದ್ಧ ಎಂದು ವಿಲ್ಸನ್ ತಮ್ಮ ವಾಯು ಪುರಾಣದ ಪೀಠಿಕೆಯಲ್ಲಿ ಆಡಿರುವ ಮಾತುಗಳನ್ನು ರೈಸ್ ಉದ್ಧರಿಸಿ ಅಂಗೀಕರಿಸಿದ್ದಾರೆ.[2] ಆದರೆ ಆತನ ಕಾಲ ಇಷ್ಟು ನಿಸ್ಸಂಧಿಗ್ಧವಾಗಿಲ್ಲ. ಪಾರಂಪರಿಕವಾದ ನಂಬಿಕೆಯಂತೆ ಅಮರಸಿಂಹ ವಿಕ್ರಮಾದಿತ್ಯನ (ಕ್ರಿ.ಶ. 4ನೇ ಶತ) ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಒಬ್ಬ. ಆದರೆ ಪ್ರೊ॥ ವಿಲ್ಸನ್ ಅಮರಸಿಂಹನ ಕಾಲವನ್ನು ಕ್ರಿ.ಪೂ. 1ರಿಂದ ಕ್ರಿ.ಶ. 5ರ ನಡುವೆ ಎಂದು ಗುರುತಿಸಿದ್ದಾರೆ. ಪ್ರೊ॥ ಗೋಲ್ಡ್‌ಸ್ಟಕರ್ ವಿಲ್ಸನ್ನರ ವಾದವನ್ನು ಬೆಂಬಲಿಸಿದ್ದಾರೆ. ಪ್ರೊ॥ ಲಾಸೆನ್‌ರ ಪ್ರಕಾರ ಅಮರಸಿಂಹ 3ನೇ ಶತಮಾನದ ಮಧ್ಯಭಾಗದಲ್ಲಿದ್ದ'.- ಇಷ್ಟು ವಿವರಗಳನ್ನು ರೈಸ್ ಪ್ರಸ್ತಾಪಿಸುತ್ತಾರಾದರೂ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

ಅಮರಕೋಶದ ಪ್ರಸ್ತುತ ಸಂಪಾದನೆಯನ್ನು ಸಿದ್ಧಪಡಿಸಲು ಇದ್ದ ಅಗತ್ಯವನ್ನು ರೈಸ್ ತಮ್ಮ ಪೀಠಿಕೆಯಲ್ಲಿ ಹೀಗೆ ವಿವರಿಸಿದ್ದಾರೆ :

> *"ಈ ಪುಸ್ತಕವನ್ನು ಸರ್ಕಾರಿ ಶಾಲೆಗಳ ಕನ್ನಡ ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿದೆ. ಅಮರಕೋಶ ಎಷ್ಟು ಪ್ರಸಿದ್ಧವಾದ ಗ್ರಂಥವೆಂದರೆ ಬಟ್ಟೆಯಲ್ಲಿ ಸುತ್ತಿದ ಇದರ ಒಂದೆರಡಾದರೂ ಭಾಗಗಳ ಕೈಬರಹದ ಪ್ರತಿಗಳು ಹಾಗೂ ಕಾಲಾನುಕಾಲದಿಂದಲೂ 'ಪೂಜ್ಯ'ವಾದ ಬೆತ್ತ - ಇವೆರಡೂ ಯಾವುದೇ ಒಂದು ಸಣ್ಣ ಹಳ್ಳಿಯ ಉಪಾಧ್ಯಾಯನ ಬಳಿಯಲ್ಲಿಯೂ ನೋಡಬಹುದಾದ ವಸ್ತುಗಳು. ಅನೇಕ ವರ್ಷಗಳಿಂದ ನಮ್ಮ ವಿದ್ಯಾರ್ಥಿಗಳು ಅರ್ಥದ ಅರಿವಿಲ್ಲದೆ*

---

1 ಇದಕ್ಕೆ ವಿರುದ್ಧವಾಗಿ ಅಮರಸಿಂಹನು ತನ್ನ ಕೃತಿಗಳಿಂದ ಯಾವ ಪಾರಮಾರ್ಥಿಕ ಪ್ರಯೋಜನವೂ ಇಲ್ಲವೆಂದು ಅವನ್ನು ಒಂದೊಂದಾಗಿ ಬೆಂಕಿಗೆ ಹಾಕುತ್ತಿದ್ದಾಗ ಶಂಕರಾಚಾರ್ಯರು ಬಂದು ಅಮರಕೋಶವನ್ನು ಬೆಂಕಿಯಿಂದ ತಪ್ಪಿಸಿದರು ಎಂಬ ಕಥೆಯೂ ಒಂದಿದೆ! (ಬಾಲಸುಬ್ರಹ್ಮಣ್ಯ ಎನ್. ಪೂರ್ವೋಕ್ತ ಪು. XI)

2 ಅಮರಸಿಂಹನು ಬೌದ್ಧನೆಂಬುವುದಕ್ಕೆ ಗ್ರಂಥದಲ್ಲಿಯೇ ಸಾಕಷ್ಟು ಪ್ರಮಾಣಗಳಿವೆ. ಅಮರಕೋಶದ ಪ್ರಾಚೀನ ವ್ಯಾಖ್ಯಕಾರರ ಪ್ರಕಾರ ಗ್ರಂಥದ ಆದಿಯಲ್ಲಿರುವ ಮಂಗಳಶ್ಲೋಕ ಬುದ್ಧನನ್ನು ಕುರಿತದ್ದು. ಸ್ವರ್ಗವರ್ಗದಲ್ಲಿ ದೇವವ್ಯಕ್ತಿಗಳ ಹೆಸರನ್ನು ಹೇಳುವಾಗ ಮೊದಲಿಗೆ 'ಶಾಕ್ಯ'ನ ಹೆಸರು ಹೇಳಿರುವುದೂ ಈ ಮಾತಿಗೆ ಆಧಾರ.

ಅಮರವನ್ನು ಉರುಹಚ್ಚುತ್ತಲೇ ಬಂದಿದ್ದಾರೆ. ಅರ್ಥ ತಿಳಿಯುವುದೇನಿದ್ದರೂ ದೊಡ್ಡ ತರಗತಿಗಳಲ್ಲಿ ಎನ್ನುವುದು ಅವರ ಭಾವನೆ. ಅರ್ಥವಾಗಬೇಕಿದ್ದರೂ ಅದು ಬಹಳ ಹೆಚ್ಚಿನ ಓದನ್ನು ಓದಿದವರಿಗೆ ಮಾತ್ರ. ಅಮರದ ಕಲಿಕೆ ಗಿಳಿಪಾಠವಾಗಿದೆ ಎಂಬುದು ಎಲ್ಲರಿಗೂ ತಿಳಿದಿದ್ದರೂ ಇಂತಹುದೊಂದು ವಿಧಾನ ನಿಷ್ಪ್ರಯೋಜಕ ಎಂದು ಯಾರೂ ಅದನ್ನು ಪ್ರತಿಭಟಿಸಿಲ್ಲ, ಅಧಿಕಾರಿಗಳಿಂದ ಆದೇಶ ಹೊರಡಿಸಿ ಈ ಅಭ್ಯಾಸವನ್ನು ನಿಲ್ಲಿಸಲು ಯತ್ನಿಸಿಲ್ಲ..... ಸಾರ್ವಜನಿಕರ ಎದುರು ನಡೆಸುವ ಪರೀಕ್ಷೆಗಳಲ್ಲಿ ಅಮರದ ಪದ್ಯಗಳನ್ನು ನೆನಪಿನಿಂದ 'ಒಪ್ಪಿಸುವುದು' ಯಾವಾಗಲೂ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಹೊಸ ಮಾದರಿಯ ಶಾಲೆಗಳು ಮತ್ತು ಹುಲಿ-ಸಿಂಹಗಳಂತೆ ತೋರುವ ಹೊಸ ಬಗೆಯ ಪಠ್ಯಪುಸ್ತಕಗಳ ನಡುವೆ ನೆಚ್ಚಿಗೆಗೆ ಅರ್ಹವಾದದ್ದು ಅಮರ ಒಂದೇ ಎಂಬುದು ಅವರೆಲ್ಲರ ಭಾವನೆ. ಚಿಕ್ಕಹುಡುಗರು ಗಟ್ಟಿಯಾದ ಧ್ವನಿಯಲ್ಲಿ ಅಮರವನ್ನು ಒಪ್ಪಿಸುತ್ತಿರುವಾಗ ಹಿರಿಯರು ತಮಗೆ ಲಾಗಾಯ್ತಿನಿಂದಲೂ ಪರಿಚಿತವಾದ ಆ ಪದ್ಯಗಳನ್ನು ಮೆಲುದನಿಯಲ್ಲಿ ಪುನರುಚ್ಚರಿಸಿಕೊಳ್ಳುತ್ತಿರುವ ದೃಶ್ಯ ಬಹಳ ಸಾಮಾನ್ಯ.

ಅಮರವು ಗಂಟಲು ಮತ್ತು ಕಿವಿ - ಎರಡೂ ಸ್ಫುಟಗೊಳ್ಳುವಂತೆ ತರಬೇತುಗೊಳಿಸುತ್ತದೆ. ಬಾಯಿಪಾಠದಲ್ಲಿ ಅಲ್ಪಸ್ವಲ್ಪ ತಪ್ಪಿದರೂ ಪಕ್ಕ ದಲ್ಲಿರುವ ಯಾರಾದರೊಬ್ಬರು ತಪ್ಪನ್ನು ತಿದ್ದಲು ಸದಾ ಸಿದ್ಧರಿರುವುದರಿಂದ ನೆನಪಿನ ಶಕ್ತಿ ಚುರುಕಾಗುತ್ತದೆ. ಪವಿತ್ರವಾದ ಸಂಸ್ಕೃತವನ್ನು ಕಲಿಯಲು, ಆ ಮೂಲಕ ಹೆಚ್ಚಿನದೇನನ್ನು ಸಾಧಿಸಬೇಕಾದರೂ ಇದೇ ಮೊದಲ ಮೆಟ್ಟಿಲು. ಎಲ್ಲಕ್ಕಿಂತ ಹೆಚ್ಚಾಗಿ ಕಾಲಾನುಕಾಲದಿಂದ ಶಾಲೆಗಳಲ್ಲಿ ಅಮರವನ್ನು ಕಲಿಸುವುದು ಈ ನಾಡಿನ ರೂಢಿ. ಈ ಎಲ್ಲ ಕಾರಣಗಳಿಗಾಗಿ ಅಮರವನ್ನು ಕಲಿಸುವುದನ್ನು ಎಲ್ಲರೂ ಅವಿರೋಧವಾಗಿ ಬೆಂಬಲಿಸುತ್ತಾ ಬಂದಿದ್ದಾರೆ. ಜನಮಾನಸದ ಮೇಲೆ ಇಷ್ಟು ತೀವ್ರವಾದ ಪರಿಣಾಮವನ್ನು ಬೀರಿರುವ ಇಂತಹುದೊಂದು ಕೃತಿಯನ್ನು ಅಲಕ್ಷಿಸುವುದು ಅಸಾಧ್ಯ. ಹಾಗಾಗಿ ಅಮರ ವನ್ನು ಕೇವಲ ಕಂಠಪಾಠಕ್ಕೆ ಸೀಮಿತಗೊಳಿಸಿರುವ, ಬುದ್ಧಿವಂತರಲ್ಲದ ಉಪಾಧ್ಯಾಯರಿಗೆ ಇದರ ಕಲಿಕೆಯ ಜವಾಬ್ದಾರಿಯನ್ನು ಒಪ್ಪಿಸುವ ಬದಲು ಭಾಷಾಭ್ಯಾಸದ ಒಂದು ಪಠ್ಯವಾಗಿ ಅದನ್ನು ಬೋಧಿಸುವುದು ಉತ್ತಮ ಮಾರ್ಗ. ಹಾಗಾಗಿ ಕನ್ನಡ ಶಾಲೆಗಳಿಗಾಗಿ ಪಠ್ಯಪುಸ್ತಕಗಳನ್ನು ರಚಿಸುವ ಸಂದರ್ಭದಲ್ಲಿ ಅಮರಕೋಶವನ್ನು ಎಲ್ಲರಿಗೂ ಸುಲಭವಾಗಿ ದೊರೆಯು ವಂತೆ ಸರಳವಾಗಿ ಮತ್ತು ಅರ್ಥಸಹಿತವಾಗಿ ಪ್ರಕಟಿಸಬೇಕೆಂದು ನಾನು

ನಿರ್ಧರಿಸಿದೆ. ಕೆಲಸ ಮುಂದುವರೆದಂತೆಲ್ಲಾ ಕೃತಿಯನ್ನು ಕುರಿತಾದ ಆಸಕ್ತಿ ಹೆಚ್ಚಿತು. ಅನೇಕ ಬಾರಿ ಕೆಲಸವನ್ನು ಮುಂದುವರೆಸಲು ಅಡಚಣೆಯಾಗಿ ಬಿಡುವಿನ ವೇಳೆಯಲ್ಲಿ ಮುಂದುವರೆಸಬೇಕಾಯ್ತು. ಕೃತಿಯನ್ನು ಉತ್ತಮಗೊಳಿಸಬಹುದಾದ ಅನೇಕ ಉಪಯುಕ್ತ ಅಂಶಗಳು ತಾವಾಗಿಯೇ ನಂತರ ಹೊಳೆದವು. ಅವುಗಳನ್ನೂ ಮೊತ್ತ ಮೊದಲ ಬಾರಿಗೆ ಪ್ರಕಟವಾಗುತ್ತಿರುವ ಈ ಮಾದರಿಯ ಕೃತಿಯಲ್ಲಿ ಅನಿವಾರ್ಯವಾಗಿ ಸೇರ್ಪಡೆಯಾಗಿರಬಹುದಾದ ತಪ್ಪುಗಳ ತಿದ್ದುಪಡಿಯನ್ನು ಮುಂದಿನ ಮುದ್ರಣಗಳಲ್ಲಿ ಅಳವಡಿಸಿಕೊಳ್ಳಬಹುದು." [1]

ಈ ಕೃತಿಯನ್ನು ಸಿದ್ಧಪಡಿಸುವಾಗ ಕನ್ನಡಟೀಕಾಮರ, ಆಂಧ್ರಟೀಕಾಮರ, ಗುರುಬಾಲ ಪ್ರಬೋಧಿಕಾ, ನಾಮಲಿಂಗಾರ್ಥ ಚಂದ್ರಿಕಾ, ಗೋಲ್ಡ್‌ಸ್ಟಕ್ಕರ್, ವಿಲ್ಸನ್ ಮತ್ತು ಬೆನ್ಫೆಯರ ಸಂಸ್ಕೃತ ನಿಘಂಟುಗಳು, ಸಿ.ಪಿ. ಬ್ರೌನನ ತೆಲುಗು ನಿಘಂಟು, ರೀವನ ಕನ್ನಡ ನಿಘಂಟು, ಆಲಿವರ್ ಬರೆದ Indian Botany ಮುಂತಾದ ಗ್ರಂಥಗಳನ್ನು ಪರಿಶೀಲಿಸಿರುವುದು ರೈಸರ ಹೇಳಿಕೆಯಿಂದ ತಿಳಿದುಬರುತ್ತದೆ.[2] ಎಷ್ಟೇ ಪ್ರಯತ್ನಪಟ್ಟರೂ ಅಮರದ ಮೇಲಿನ ಜೈನ ವ್ಯಾಖ್ಯೆಗಳಾದ 'ನಾಚಿರಾಜೀಯ' ಮತ್ತು 'ಅಪ್ಪಾಜಿ'ಗಳು ದೊರೆಯಲಿಲ್ಲವೆಂದೂ, ಇವುಗಳನ್ನೂ ಹಾಗೂ ಮಂಗರಾಜ ನಿಘಂಟು ಮುಂತಾದ ಇತರ ಕನ್ನಡ ಕೃತಿಗಳನ್ನೂ ಎರಡನೆಯ ಪರಿಷ್ಕರಣದಲ್ಲಿ ಬಳಸಿಕೊಳ್ಳಬಹುದೆಂಬ ಆಶಾಭಾವನೆಯನ್ನು ಅವರು ತಳೆದಿದ್ದಾರೆ. ಕೋಲ್‌ಬ್ರೂಕ್‌ನ ಅನುವಾದವೂ ಈ ಕೃತಿಯ ಪ್ರಕಟಣೆಯ ಸಮಯದವರೆಗೆ ಅವರಿಗೆ ದೊರಕಿರಲಿಲ್ಲವೆಂಬ ಸೂಚನೆ ಪೀಠಿಕೆಯಲ್ಲಿದೆ.*

ಪರಿವಿಡಿಯನಂತರ ಬಂದಿರುವ 'ಮುದ್ರಾಪನಕ್ರಮ ಸೂಚಿಕೆ' ಗ್ರಂಥ ಸಂಪಾದನೆಯ ದೃಷ್ಟಿಯಿಂದ ಮುಖ್ಯವಾದದ್ದು. ಇಲ್ಲಿ ರೈಸರು ತಾವು ಬಳಸಿರುವ ಸಂಕೇತಗಳು, ಶ್ಲೋಕಗಳನ್ನು ಪ್ರಕಟಿಸಿರುವ ಕ್ರಮ, ಇಂಗ್ಲಿಷ್ ಅಕ್ಷರಗಳನ್ನು ಬಳಸಿಕೊಂಡಿರುವ ರೀತಿ ಮುಂತಾದವುಗಳ ಬಗ್ಗೆ ಹೀಗೆ ವಿವರಿಸಿದ್ದಾರೆ :

ಪ್ರತಿ ಪುಟದಲ್ಲಿಯೂ ಪ್ರಥಮತಃ ಮೂಲ ಶ್ಲೋಕಗಳೂ ಆ ಮೇಲೆ ಒಂದು ತಿರ್ಯಗ್ರೇಖೆಯೂ ಅದರ ಕೆಳಗೆ ಇಂಗ್ಲಿಷ್ ಭಾಷೆಯಲ್ಲಿ ಅರ್ಥವೂ ಅದರ ಕೆಳಗೆ ಕನ್ನಡದಲ್ಲಿ ಅರ್ಥವೂ ಬರುವಂತೆ ಮಾಡಿ ಒಂದೊಂದು ಪಂಙ್ತಿಗೆ ಅರ್ಧ ಶ್ಲೋಕ ಮುಗಿದು ಶ್ಲೋಕ ಸಂಖ್ಯೆಯೆಲ್ಲಾ ಬಲಗಡೆಯೇ ಕ್ರಮವಾಗಿ ಬರುವಂತೆ ಮಾಡಿ ಇದೆ.

---

1 ಪು. V – VI ರ ಭಾಗಗಳ ಅನುವಾದ.

2 ಪು. VI.

* 1927ರಲ್ಲಿ ಪ್ರಕಟವಾದ ನಾಲ್ಕನೆಯ ಪರಿಷ್ಕೃತ ಮುದ್ರಣದಲ್ಲಿ ಈ ಎಲ್ಲ ಕೃತಿಗಳನ್ನು ಅವರು ಬಳಸಿಕೊಂಡಿದ್ದಾರೆಯೇ ಎಂಬುದು ಇದೇ ಆವೃತ್ತಿಯ 1989ರ ಮುದ್ರಣದಲ್ಲಿ ಸ್ಪಷ್ಟವಿಲ್ಲ.

ಟೀಕೆಯಲ್ಲಿ ಮೂಲಸ್ಥ ಪದಗಳನ್ನೆಲ್ಲಾ ಬರೆಯುವುದಕ್ಕೆ ಬದಲಾಗಿ ದೇವತೆ ಅಥವಾ ಮನುಷ್ಯ ಅಥವಾ ವಸ್ತುವಾಚಕವಾದ ಪರ್ಯಾಯ ಪದಗಳೆಷ್ಟು ಇವೆಯೋ ಅಷ್ಟಕ್ಕೆ ಆ ಸಂಖ್ಯೆಯನ್ನು ಬರೆದು ಆ ಅರ್ಥವನ್ನು ಬರೆದಿದೆ. ಈ ವಿಷಯದಲ್ಲಿ ಮೂಲದೊಳಗೆ ಇಲ್ಲಿನ ಪಠ್ಯಂತರ ಇರುವ ಪದಗಳೆಲ್ಲಾ ಈ ಪರ್ಯಾಯಾರ್ಥಗಳೆಂದು ತಿಳಿಯುವುದಕ್ಕಾಗಿ ಮೂಲಸ್ಥ ಶ್ಲೋಕದ ಮಧ್ಯಾಂತ್ಯಗಳಲ್ಲಿ ಎಲ್ಲಿನವರಿವಿಗೆ ಆಯಾ ಪರ್ಯಾಯ ಪದಗಳು ಮುಗಿದಿವೆಯೋ ಅಲ್ಲಿ ಇಂಗ್ಲಿಷ್ ಅಕ್ಷರಗಳನ್ನು ಪರಿಮಿತಿ ಸೂಚಕವಾಗಿ ಹಾಕಿ ಇದೆ. ಉದಾ ಹರಣೆ ॥ಸ್ವರವ್ಯಯಂ ಸ್ವರ್ಗನಾಕ ತ್ರಿದಿವ ತ್ರಿದಶಾಲಯಾಃ। ಸುರಲೋಕೋ ದ್ಯೋದಿವಾದ್ಯೇ ಸ್ತ್ರೀಯಾಂಕ್ಲೀವೇ ತ್ರಿವಿಷ್ಟಪಂ। a ೫ನೇ ಪುಟ ೬ನೇ ಶ್ಲೋಕವನ್ನು ನೋಡು. ಇದರಲ್ಲಿ a ಈ ಅಕ್ಷರವನ್ನು ಹಾಕಿರುವವರಿವಿಗೂ ಇರುವ ಪದಗಳೆಲ್ಲಾ ಸ್ವರ್ಗಕ್ಕೆ ಅರ್ಥವಾದ್ದರಿಂದ ಕನ್ನಡದಲ್ಲಿ a ಈ ಗುರ್ತನ್ನು ಹಾಗಿ ಸ್ವರ್ಗಲೋಕ ೯ ಎಂದು ಬರದು ಇದೆ, ಹೀಗೆಯೇ ಶ್ಲೋಕದ ಮಧ್ಯದಲ್ಲಿ ಬರುವುದನ್ನೂ ಊಹಿಸಲಾಗುವುದು.

ಯಾವ ಪದವೂ ಅಲ್ಲದೆ ಮೂಲಕಾರರ ಲಿಂಗನಿರ್ಣಯಾದಿ ಸಂಕೇತಗಳು ಶ್ಲೋಕದಲ್ಲಿದ್ದರೆ ಅದನ್ನು ಲೆಕ್ಕ ಮಾಡುವ ಭ್ರಮನಿವಾರಕವಾಗಿ ಅಂಥವು ಗಳನ್ನು ಆವರಣ ಚಿಹ್ನೆಯೊಳಗೆ ಶೇರಿಸಿ ಇವೆ ॥ಉದಾಹರಣೆ॥ ೫ನೇ ಪುಟ ೯-೧೦ನೇ ಶ್ಲೋಕಗಳಲ್ಲಿ ಬೃಂದಾರಕಾ ದೈವತಾನಿ (ಪುಂಸಿವಾ) (ದೇವತಾ ಸ್ತ್ರಿಯಾಂ) ಮಹಾರಾಜಕ ಸಾಧ್ಯಾಂಶ್ಚ ರುದ್ರಾಶ್ಚ (ಗಣದೇವತಾಃ)। ಎಂಬುದರಲ್ಲಿ (ಪುಂಸಿವಾ)(ಸ್ತ್ರಿ) ಯಾಂ) (ಗಣದೇವತಾಃ) ಎಂಬವು ಆವರಣ ಚಿನ್ಹೆಯಲ್ಲಿರುವುದರಿಂದ ಪದಸಂಖ್ಯೆಗೆ ಶೇರಿದ್ದಲ್ಲವೆಂತಲೂ ಮೂಲಕಾರರ ಲಿಂಗ ನಿರ್ಣಯಾದಿ ಸಂಕೇತವೆಂತಲೂ ಊಹಿಸಬೇಕು. ಇಲ್ಲಿಂದಯಿಲ್ಲಿಗೆ ಇಷ್ಟು ಪದಗಳೆಂದು ತಿಳಿಯುವುದಕ್ಕಾಗಿ ಪದಗಳನ್ನೆಲ್ಲಾ ಸಾಧ್ಯವಾದ ಮಟ್ಟಿಗೂ ವಿಂಗಡಿಸಿ ಹಾಕಿದೆ.

ಸಂಧಿಕಾರ್ಯದಿಂದ ಪದಗಳನ್ನು ವಿಂಗಡಿಸಲಾಗದ ಪಕ್ಷದಲ್ಲಿ ಯಾವ ಅಕ್ಷರದಲ್ಲಿ ಸಂಧಿ ಇದೆಯೋ ಆ ಅಕ್ಷರದ ಮೇಲೆ ಒಂದು ಚುಕ್ಕೆಯನ್ನಿಟ್ಟು ಇದೆ. ಉದಾ ಹರಣೆ ೫ನೇ ಪುಟ ೧೨ನೇ ಶ್ಲೋಕದಲ್ಲಿ, ಅಸುರಾದೈತ್ಯ ದೈತೇಯ ದನುಜೇಂದ್ರಾರಿ ದಾನವಾಃ ಎಂಬದರಲ್ಲಿ ಅಸುರ। ದೈತ್ಯ। ದೈತೇಯ। ಎಂಬ ಪದಗಳು ವಿಂಗಡಿಸಿ ಇರುವುದರಿಂದಲೂ ದನುಜೇಂದ್ರಾರಿ ಎಂಬ ಕಡೆ ಧನುಜ,

ಇಂದ್ರಾರಿ ಎಂಬ ಪದಗಳ ಸಂಧಿ. ಜೆ-ಎಂಬಕ್ಷರದಲ್ಲಿ ಇರುವುದರಿಂದ ಅದರ ಮೇಲೆ ಚುಕ್ಕೆ ಹಾಕಿ ಇದೆ ಎಂತಲೂ ಹೀಗೆಯೇ ತಿಳಿಯತಕ್ಕದ್ದು.[1]

ಇದೇ ಭಾಗದಲ್ಲಿ ಸಂಸ್ಕೃತ ಸ್ವರ ಮತ್ತು ವ್ಯಂಜನ ಸಂಧಿಗಳನ್ನು ಕುರಿತಾದ ವಿಸ್ತಾರ ವಾದ ವಿವರಣೆಯು "ವಿದ್ಯಾರ್ಥಿಗಳಿಗೆ ಮಾರ್ಗ ಪ್ರದರ್ಶಕವಾಗುವಂತೆ ಬರೆಯಲ್ಪಟ್ಟು ಇದೆ".

ಈಗ ಕೃತಿಯ ಸ್ವರೂಪವನ್ನು ವಿವರವಾಗಿ ಪರಿಶೀಲಿಸಬಹುದು :

★ ಅಮರಕೋಶವು 'ಕಾಂಡ' ಎಂದು ಕರೆಯಲ್ಪಡುವ ಮೂರು ಮುಖ್ಯ ಅಧ್ಯಾಯ ಗಳನ್ನೂ, 'ವರ್ಗ'ಗಳೆಂದು ಹೆಸರಾದ 28 ಉಪವಿಭಾಗಗಳನ್ನು (ಪ್ರಥಮ ಕಾಂಡದಲ್ಲಿ 12, ದ್ವಿತೀಯ ಕಾಂಡದಲ್ಲಿ 10 ಮತ್ತು ತೃತೀಯ ಕಾಂಡದಲ್ಲಿ 6) ಒಳಗೊಂಡ ಗ್ರಂಥ.

★ ಪ್ರತಿಕಾಂಡದ ಮೊದಲಲ್ಲಿಯೂ ಪೀಠಿಕಾ ಪದ್ಯಗಳಿವೆ. (ಪ್ರಥಮ ಕಾಂಡದಲ್ಲಿ ಐದು, ದ್ವಿತೀಯ ಕಾಂಡದಲ್ಲಿ ಒಂದು ಮತ್ತು ತೃತೀಯ ಕಾಂಡದಲ್ಲಿ ಎರಡು ಶ್ಲೋಕಗಳು).

★ ಕಾಂಡದ ಆರಂಭದ ಮತ್ತು 'ಪೀಠಿಕೆ' ಎನ್ನುವ ಸೂಚನೆಗಳು ಪ್ರತಿ ಕಾಂಡದ ಮೊದಲಿಗೆ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಇವೆ.

★ ಮೊದಲಿಗೆ ಮೂಲ ಪಾಠ, ಅನಂತರ ಪ್ರತಿಪದಾರ್ಥ (ಟೀಕೆ), ಒಟ್ಟು ತಾತ್ಪರ್ಯ ಕಡೆಗೆ ಆಂಗ್ಲ ಅರ್ಥ ಇದು ಪೀಠಿಕಾ ಭಾಗವು ಮುದ್ರಿತವಾಗಿರುವ ರೀತಿ.

★ ಪ್ರತಿವರ್ಗದ ಶೀರ್ಷಿಕೆಯನ್ನು ಕನ್ನಡ ಲಿಪಿ ಹಾಗೂ ರೋಮನ್ ಲಿಪ್ಯಂತರ ಗಳಲ್ಲಿ ಕೊಟ್ಟಿದೆ.

★ ಪ್ರತಿ ಅನುಷ್ಟುಪ್ ಶ್ಲೋಕದ ಪದಗಳನ್ನು ಸಾಧ್ಯವಾದಷ್ಟೂ ಬಿಡಿಸಿದೆ. ಸಂಧಿಯ ಕಾರಣದಿಂದಾಗಿ ಪದಗಳನ್ನು ಬಿಡಿಸಲು ಆಗದ ಕಡೆ ಸಂಧಿಕಾರ್ಯವು ಆಗಿರುವ ಅಕ್ಷರದ ಮೇಲೆ ಒಂದು ಚುಕ್ಕೆಯನ್ನಿಟ್ಟಿದೆ.

ಉದಾ : *ಸಮುದ್ರೋ'ಬ್ಧಿ'ರ ಕೂಪಾರಃ ಪಾರಾವಾರ' ಸ್ಸರಿತ್ಪತಿಃ।*
ಉದನ್ವಾ'ನುದಧಿಃ ಸಿಂಧುಃ ಸರಸ್ವಾ'ನ್ಸಾಗರೋ'ರ್ಣವಃ॥

(ವಾರಿವರ್ಗ, ಪದ್ಯ 235 ಪು. 31)

★ ಒಂದು ಪದ ಪರ್ಯಾಯ ಪದಗಳು ಎಲ್ಲಿಗೆ ಮುಕ್ತಾಯವಾಗುತ್ತವೆ ಎಂಬುದನ್ನು ಸೂಚಿಸಲು ಅವುಗಳ ಕೊನೆಗೆ a, b, c, d ಮುಂತಾದ ಇಂಗ್ಲಿಷ್ ಅಕ್ಷರಗಳನ್ನು ಬಳಸಿದೆ.

ಉದಾ : *ಊರವ್ಯಾ ಊರುಜಾ ಆರ್ಯಾ ವೈಶ್ಯಾ ಭೂಮಿಸ್ಪೃಶೋ'ವಿಶಃ a ॥*

(ವೈಶ್ಯವರ್ಗ, ಪದ್ಯ 577 ಪು.-117)

★ ಮೂಲ ಕೃತಿಯಲ್ಲಿ ಲಿಂಗ, ನಿರ್ಣಯ, ಮುಂತಾದ ಸೂಚನೆಗಳನ್ನು ಸಮಾನಾರ್ಥಕ ಪದಗಳೆಂದು ತಪ್ಪು ತಿಳಿಯುವುದನ್ನು ತಪ್ಪಿಸುವ ಉದ್ದೇಶದಿಂದ ಅಂತಹ ಸಂಕೇತಗಳನ್ನು ಚೌಕ ಕಂಸಗಳ ಒಳಗೆ ಸೂಚಿಸಿದೆ.

ಉದಾ : *ಶಿಖಾ ಚೂಡಾ ಕೇಶಪಾಶೀ [ಪ್ರತಿನಾಂತು] ಜಟಾ ಸಟಾ b*

(ಮನುಷ್ಯ ವರ್ಗ ಪದ್ಯ 357, ಪು. 83)

★ ಮೂಲಪಾಠದ ಕೆಳಗೆ ಒಂದು ಅಡ್ಡಗೆರೆಯನ್ನು ಎಳೆದು ಅದರ ಕೆಳಗೆ ಆಯಾ ಪುಟದಲ್ಲಿರುವ ಮೂಲಪಾಠದ ಪದಗಳ ಅರ್ಥವನ್ನು ಮೊದಲಿಗೆ ಇಂಗ್ಲಿಷಿನಲ್ಲಿಯೂ ಅನಂತರ ಕನ್ನಡದಲ್ಲಿಯೂ ಕೊಟ್ಟಿದೆ. ಹೀಗೆ ಮಾಡುವಾಗ ಒಂದು ಪದಕ್ಕೆ ಎಷ್ಟು ಪರ್ಯಾಯ ಪದಗಳಿವೆ ಎಂಬ ಸಂಖ್ಯೆಯನ್ನು ಆಯಾ ಗುಂಪಿಗೆ ಸೂಚಿಸಲಾದ ಇಂಗ್ಲಿಷ್ ಸಂಕೇತಾಕ್ಷರಗಳೊಂದಿಗೆ ನೀಡಿದೆ.

ಉದಾ : *ಇಂಗ್ಲಿಷಿನಲ್ಲಿ - a 3, The lock worn by Hindumen on the top of the head or scalp. b2, Matted locks, such as those of rishis.*

ಕನ್ನಡದಲ್ಲಿ - a ಶಿಖೆ, ಜುಟ್ಟು ೩.b ವ್ರತನೇಮವುಳ್ಳವರ ಜಡೆಗಳು, ಮಣಕು ಕೂದಲು, ಜಡೆ, ತಿಂಗಳು.

(ಮನಷ್ಯವರ್ಗ, 357ನೆ ಪದ್ಯ ಪೂರ್ವಾರ್ಧದ ಅರ್ಥ, ಪು.-83)

★ ವನೌಷಧಿ ವರ್ಗದಲ್ಲಿ ಸಸ್ಯಗಳ ಹೆಸರನ್ನು ಹೇಳುವಾಗ ತಾತ್ಪರ್ಯದಲ್ಲಿ ಇಂಗ್ಲಿಷಿನ ಸಾಮಾನ್ಯ ಹೆಸರು, ಅವುಗಳ ಸಸ್ಯಶಾಸ್ತ್ರೀಯವಾದ ದ್ವಿನಾಮ ನಾಮಕರಣದ ಹೆಸರು (Binominal Name) ಎರಡನ್ನೂ ಕೊಟ್ಟಿದೆಯಲ್ಲದೆ ಅವುಗಳ ಕನ್ನಡ ಹೆಸರುಗಳನ್ನೂ ನೀಡಿರುವುದು ವಿಶೇಷ. ಸಿಂಹಾದಿ ವರ್ಗದಲ್ಲಿಯೂ ಅಪರೂಪವಾಗಿ ಪ್ರಾಣಿಗಳನ್ನು ಹೆಸರಿಸುವಾಗಲೂ ಈ ಪದ್ಧತಿಯನ್ನು ಅನುಸರಿಸಿದೆ.

★ ಭಿನ್ನಪಾಠವನ್ನು ಸೂಚಿಸುವಾಗ ಈಗಿನಂತೆಯೇ ಮೂಲಪಾಠದಲ್ಲಿ ನಕ್ಷತ್ರದ ಗುರುತನ್ನು ಮಾಡಿ ಪಾಠಾಂತರವನ್ನು ಅಡಿಟಿಪ್ಪಣಿಯಲ್ಲಿ ಸೂಚಿಸಿದೆ. ಬಹುಮಟ್ಟಿಗೆ ಪಾಠಾಂತರದ ಸಂಖ್ಯೆ ಒಂದನ್ನು ಮೀರಿಲ್ಲ. ಆದರೆ ಅತಿ ವಿರಳವಾಗಿ ಮೂರು ಪಾಠಗಳ ಸೂಚನೆಗಳೂ ಇವೆ.

★ ತೃತೀಯ ಕಾಂಡದ ಕಡೆಯ ವರ್ಗವಾದ ಲಿಂಗಾದಿ ಸಂಗ್ರಹ ವರ್ಗವನ್ನು ವಿವರಿಸುವಾಗ ಮಾತ್ರ ಮೊದಲಿಗೆ ಮೂಲ, ಅದರ ಇಂಗ್ಲಿಷ್ ಅರ್ಥ, ಅನಂತರ ಟೀಕೆ - ಈ ವಿಧಾನವನ್ನು ಅನುಸರಿಸಿದೆ.

★ ಗ್ರಂಥಾಂತ್ಯದಲ್ಲಿರುವ 'ಅಮರಕೋಶಾದರ್ಶ' ಎಂಬ ಸೂಚಿಯಲ್ಲಿ ಅಕಾರಾದಿಯಾಗಿ ಪದಗಳನ್ನು ಜೋಡಿಸಿದೆಯಲ್ಲದೆ ಆ ಪದವು ಕಂಡುಬರುವ ಪುಟದ ಸಂಖ್ಯೆ ಮತ್ತು ಶ್ಲೋಕದ ಸಂಖ್ಯೆ ಎರಡನ್ನೂ ನಮೂದಿಸಿದೆ.

ರೈಸರು ಈ ಕೃತಿಯ ಪ್ರಕಟಣೆಯಲ್ಲಿ ಬಳಸಿಕೊಂಡಿರುವ ಈ ಪದ್ಧತಿಗಳಾವುವೂ ಪೂರ್ವಸಿದ್ಧವಾದ ಮಾದರಿಗಳಲ್ಲ. ಬದಲಿಗೆ ಅವರೇ ರೂಪಿಸಿಕೊಂಡಿರುವ ವಿಧಾನಗಳು. ಇದರಿಂದ ಮುಖ್ಯವಾಗಿ ಲಾಭವಾಗುವುದು ವಿದ್ಯಾರ್ಥಿಗಳಿಗೆ ಎನ್ನುವುದು ಗಮನಾರ್ಹ. ದೇವನಾಗರಿ ಲಿಪಿಯ ಪರಿಚಯ ಇಲ್ಲದವರಿಗೂ ಮೂಲಪಠ್ಯ ದೊರಕುವುದು, ಪದ ವಿಭಾಗ, ಪರ್ಯಾಯ ಪದಗಳ ವಿಂಗಡಣೆ ಮುಂತಾದ ಮೂಲಪಠ್ಯದ ಜೋಡಣೆ, ಪ್ರಸ್ತಾವನೆ, ಮುದ್ರಾಪನ ಕ್ರಮಸೂಚಿಕೆ, ಇಂಗ್ಲಿಷ್ ಮತ್ತು ಕನ್ನಡ ಟಿಪ್ಪಣಿಗಳು, ಶಬ್ದಸೂಚಿ ಮೊದಲಾದ ಆನುಷಂಗಿಕ ಪರಿಕರಗಳಿಂದ ಕೇವಲ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಇಂಗ್ಲಿಷ್ ಮತ್ತು ಕನ್ನಡವನ್ನು ಮಾತ್ರ ಬಲ್ಲವರಿಗೂ ಈ ಸಂಪಾದಿತಕೃತಿ ಉಪಯುಕ್ತವಾಗಿದೆ.[1]

ಆದರೂ ಇದರಲ್ಲಿಯೂ ಅರೆ-ಕೊರೆಗಳು ಉಳಿದು ಬಂದಿವೆ. ರೈಸ್ ಸಂಪಾದಿತ ನಾಲ್ಕನೇ ಆವೃತ್ತಿಯನ್ನು ಪುನಃ ಪರಿಷ್ಕರಿಸಿದ ಎನ್. ಬಾಲಸುಬ್ರಹ್ಮಣ್ಯ ಅವರು ಅವುಗಳನ್ನು ಹೀಗೆ ಪಟ್ಟಿಮಾಡಿದ್ದಾರೆ :

> *"...... ಸದ್ಯದ ಮುದ್ರಣದಲ್ಲಿ ಕೆಲವು ಪರಿಷ್ಕರಣಗಳನ್ನು ಮಾಡಿದೆ. ಅವುಗಳಲ್ಲಿ ಮೊದಲನೆಯದು ಆವರಣ ಚಿಹ್ನೆಗಳಿಗೆ ಸಂಬಂಧಿಸಿದ್ದು. ಲಿಂಗ ನಿರ್ದೇಶಕ್ಕಾಗಿ, ಪರ್ಯಾಯ ವಿಭಾಗಕ್ಕಾಗಿ, ಹಾಗೂ ಪಾದಪೂರಣಕ್ಕಾಗಿ ಬಳಸಿರುವ ಶಬ್ದಗಳನ್ನು ಇತರ ಶಬ್ದಗಳಿಂದ ಬೇರ್ಪಡಿಸಲು ಆವರಣ ಚಿಹ್ನೆಗಳನ್ನು ಬಳಸಿರುವುದಾಗಿ ರೈಸರು ಪೀಠಿಕೆಯಲ್ಲಿ ಹೇಳಿದ್ದರೂ ಎಷ್ಟೋ ಕಡೆಗಳಲ್ಲಿ ಹಾಗೆ ಮಾಡಿರಲಿಲ್ಲ. ಈ ಸಂಸ್ಕರಣದಲ್ಲಿ ಅದನ್ನು ಮಾಡಿದೆ. ಎರಡನೆಯದಾಗಿ, ಅನುವಾದದಲ್ಲಿ ಸಂಭವಿಸಿದ್ದ ತಪ್ಪುಗಳನ್ನು ತಿದ್ದಲಾಗಿದೆ. ಅದನ್ನು ತಿದ್ದುಪಡಿಯಲ್ಲಿ ನಮೂದಿಸಿದೆ. ಕೊನೆಯದಾಗಿ ರೈಸರ ಗ್ರಂಥದ ಪದಸೂಚಿ ಅನೇಕ ದೋಷಗಳಿಂದ ಕೂಡಿತ್ತು. ಕ್ರಮದಲ್ಲಿ ಬಹಳ ಅವ್ಯವಸ್ಥೆ ಇದ್ದಿತು. ಅನೇಕ ಪದಗಳ ಉಲ್ಲೇಖವಾಗಿರಲಿಲ್ಲ. ಉಲ್ಲೇಖವಾಗಿದ್ದವುಗಳದ್ದೂ ಎಲ್ಲ ಉಲ್ಲೇಖಗಳನ್ನೂ ಸೂಚಿಸಿರಲಿಲ್ಲ. ಆದ್ದರಿಂದ ಈ ಮುದ್ರಣ*

1 ಇದಕ್ಕೆ ಪ್ರತಿಲೋಮದಂತಿರುವುದು ಇತ್ತೀಚೆಗೆ ಪ್ರಕಟವಾದ ವಿದ್ವಾನ್ ರಂಗನಾಥಶರ್ಮರಿಂದ ಸಂಪಾದಿತವಾದ **ಅಮರಕೋಶ** (ಪ್ರ.ಮು. 1975, ದ್ವಿ.ಪ.ಮು. 1996).

ದಲ್ಲಿ ಪದಸೂಚಿಯನ್ನು ಪೂರ್ತಿ ಹೊಸದಾಗಿ ರಚಿಸಿದೆ. ರೈಸ್‌ರ ಆವೃತ್ತಿಯಲ್ಲಿ ಬಿಟ್ಟುಹೋಗಿದ್ದ ೨೬೦ ಪದಗಳನ್ನು ಮತ್ತು 350 ಪದೋಲ್ಲೇಖನಗಳನ್ನೂ ಸೇರಿಸಿದೆ ...." [1]

ಇವೆಲ್ಲಕ್ಕೂ ಕಿರೀಟಪ್ರಾಯವಾಗಿ ಸುಮಾರು ಸಂಪಾದಕರೇ ಬರೆದಿರುವ ಇಪ್ಪತ್ತು ಪುಟಗಳ ಭೂಮಿಕೆಯು ಕೃತಿಯ ಮೊದಲಲ್ಲಿದೆ. ಆದರೆ Thesaurus ಎಂಬ ಸೂಚನೆಯನ್ನು ಹಾಗೂ ರೈಸ್‌ರ ಆಂಗ್ಲ ಮುನ್ನುಡಿಯನ್ನು ಕೈಬಿಟ್ಟಿರುವುದು. ಪೀಠಿಕೆ ಮತ್ತು ಮುದ್ರಾಪನ ಕ್ರಮಸೂಚಿಕೆಯ ಭಾಷೆಯನ್ನು ತಿದ್ದಿರುವುದು ಚಾರಿತ್ರಿಕವಾಗಿ ಅಷ್ಟು ಉತ್ತಮ ವಿಧಾನವಲ್ಲ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಗರಣಿ ತಿಮ್ಮಣ್ಣಾಚಾರ್ಯರೆಂಬ ವಿದ್ವಾಂಸರು ರೈಸರ ಮಾದರಿಯಲ್ಲಿಯೇ ಅಮರಕೋಶವನ್ನು ಇಂಗ್ಲಿಷ್ ಮತ್ತು ಕನ್ನಡ ಟಿಪ್ಪಣಿಗಳ ಸಮೇತ ಪ್ರಕಟಿಸಿದ್ದಾರೆ.[2]

ಈ ಗ್ರಂಥದಲ್ಲಿ ವ್ಯಾಕರಣದ ದೃಷ್ಟಿಯಿಂದ ಉಪಯುಕ್ತವಾದ ಅನೇಕ ಟಿಪ್ಪಣಿಗಳನ್ನು ಕೊಡಲಾಗಿದೆ. ಉದಾಹರಣೆಗೆ 'ಚಿತ್' ಎಂಬ ಶಬ್ದವನ್ನು ಪ್ರಥಮಪುರುಷ, ಏಕವಚನದಲ್ಲಿ ತಕಾರಾಂತವಾಗಿ ಪರಿಗಣಿಸಿದರೂ 'ಸಂವಿತ್' ಮುಂತಾದ ಶಬ್ದಗಳನ್ನು ದಕಾರಾಂತವಾಗಿ ಪರಿಗಣಿಸಬೇಕಿರುವುದು; 'ಹಾಹಾ' ಮುಂತಾದ ಅಪರೂಪದ, ಅಪ್ರಸಿದ್ಧ ಶಬ್ದಗಳ ವಿಭಕ್ತಿ ಪ್ರತ್ಯಯಗಳನ್ನು ಪಟ್ಟಿ ಮಾಡಿರುವುದು; ಪಾರಿಭಾಷಿಕ ಶಬ್ದಗಳ ವಿಶೇಷ ಅರ್ಥಗಳನ್ನು ಸೂಚಿಸಿರುವುದು, ಇತ್ಯಾದಿ.[3]

ಈ ಕೃತಿಯ ರಚನೆಯ ಹಿಂದೆ ರೈಸ್ ಸಂಪಾದಿತ ಅಮರಕೋಶದ ಪ್ರಭಾವ ನಿಚ್ಚಳವಾಗಿರುವುದನ್ನು ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಅಮರಕೋಶವನ್ನು ಸಂಪಾದಿಸುವ ಮೂಲಕ ಸಂಸ್ಕೃತ ಕೃತಿಗಳನ್ನು ಟೀಕೆ-ಟಿಪ್ಪಣಿಗಳ ಸಹಿತ ಪ್ರಕಟಿಸುವ ಪದ್ಧತಿಯನ್ನು ಕನ್ನಡನಾಡಿನಲ್ಲಿ ಚಾಲ್ತಿಗೆ ತಂದವರಲ್ಲಿ ರೈಸರೇ ಮೊದಲಿಗರೆಂಬ ತೀರ್ಮಾನಕ್ಕೆ ಬರಬಹುದು.

'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲೆಯ ಕೃತಿಗಳು

ಕನ್ನಡದ ಪ್ರಮುಖ ಮತ್ತು ಪ್ರಾಚೀನ ಕೃತಿಗಳನ್ನು ಪರಿಷ್ಕರಿಸಿ ಮುದ್ರಿಸುವ ಉದ್ದೇಶದಿಂದ ರೈಸರು 'ಬಿಬ್ಲಿಯಾಥೆಕಾ ಕರ್ನಾಟಿಕಾ' ಎಂಬ ಗ್ರಂಥಮಾಲೆಯನ್ನು ಆರಂಭಿಸಿದರು. ಬಹುಶಃ ಈ ಹೆಸರನ್ನು ಇಡಲು ಅವರಿಗಿದ್ದ ಸ್ಫೂರ್ತಿಯೆಂದರೆ ಮೊಗ್ಲಿಂಗ್ ಆರಂಭಿಸಿದ್ದ ಇದೇ ಹೆಸರಿನ ಪುಸ್ತಕಮಾಲೆ. ಈ ಸರಣಿಯ ಪುಸ್ತಕಗಳಲ್ಲಿ ಒಳರಕ್ಷಾಪುಟದ ಮೇಲ್ಭಾಗದಲ್ಲಿ ಕೆಂಪುಬಣ್ಣದಲ್ಲಿ ಇಂಗ್ಲಿಷ್ ಅಕ್ಷರಗಳಲ್ಲಿ BIBLIOTHECA CARNATICA ಎಂದು

---

1 ಪೂರ್ವೋಕ್ತ, ಪು. XXV.

2 ಪ್ರಥಮ ಕಾಂಡವು 1953ರಲ್ಲಿ ಅವರಿಂದಲೇ ಪ್ರಕಾಶಿತವಾಗಿದೆ.

3 ಈ ವಿವರಗಳನ್ನು ನೀಡಿದವರು ಪ್ರೊ|| ಕೆ.ಎಸ್. ಕಣ್ಣನ್ ಅವರು.

ಮುದ್ರಿಸಿರುವುದನ್ನು ಬಿಟ್ಟರೆ ಕೃತಿಯ ಒಳಗೆಲ್ಲೂ ಇಂತಹ ಸೂಚನೆ ಇರುವುದಿಲ್ಲ. ಈ ಮಾಲೆಯಲ್ಲಿ ರೈಸರು ಸ್ವತಃ ಸಂಪಾದಿಸಿ ಪ್ರಕಟಿಸಿದ ಕೃತಿಗಳು ಕೇವಲ ನಾಲ್ಕು - ಕರ್ಣಾಟಕ ಭಾಷಾಭೂಷಣಂ, ಶಬ್ದಾನುಶಾಸನಂ, ಪಂಪರಾಮಾಯಣ ಮತ್ತು ಪಂಪಭಾರತ. ಈ ನಾಲ್ಕೂ ಕೃತಿಗಳನ್ನು ಮತ್ತು ಅವರು ಪರಿಷ್ಕರಿಸಿರುವ ವಿಧಾನವನ್ನು ಮುಂದೆ ವಿಶದವಾಗಿ ಪರಿಶೀಲಿಸಿದೆ.

ಕರ್ಣಾಟಕ ಭಾಷಾಭೂಷಣಂ (1884) :

ರೈಸರು ಸಂಪಾದಿಸಿರುವ ಕನ್ನಡ ಶಾಸ್ತ್ರ ಗ್ರಂಥಗಳಲ್ಲಿ ಇದು ಮೊದಲನೆಯದು. ತಮಗೆ ದೊರೆತ ಮೂರು ಓಲೆಗರಿಯ ಹಸ್ತಪ್ರತಿಗಳನ್ನು ಆಧಾರವಾಗಿಟ್ಟುಕೊಂಡು 1884 ರಲ್ಲಿ ರೈಸ್ ಇದನ್ನು ಸಂಪಾದಿಸಿದ್ದಾರೆ. ಈ ಮೂರು ಪ್ರತಿಗಳಿಗೆ ಕ್ರಮವಾಗಿ 'A', 'B' ಹಾಗೂ 'C' ಎಂಬ ಸಂಕೇತಗಳನ್ನು ನೀಡಿದ್ದಾರೆ. ಇವುಗಳಲ್ಲಿ ಮೊದಲನೆಯದಾದ 'A' ಎಂಬ ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಉಳಿದವುಗಳಿಂದ ವಿರಳವಾಗಿ ಪಾಠಾಂತರಗಳನ್ನು ಗುರುತಿಸಿದ್ದಾರೆ. ಈ ಮೂರು ಪ್ರತಿಗಳನ್ನು ಶುದ್ಧಪ್ರತಿಗಳೆಂದು ಪರಿಗಣಿಸುವುದಕ್ಕೆ ಕಾರಣವನ್ನು ಅವರು ಹೀಗೆ ಸೂಚಿಸಿದ್ದಾರೆ :

> *"The present edition is a recension formed from the collection of three ole or palmyra leaf copies, which have been distinguished as A – the text – B and C. They are all Jain Copies and therefore the more likely to be genuine reproductions of the original".*[1]

'ಜೈನ ಸಂಪ್ರದಾಯದಲ್ಲಿ ಬಂದಿರುವ ಹಸ್ತಪ್ರತಿಗಳಾಗಿರುವುದರಿಂದ ಪಾಠವು ಶುದ್ಧವಿರಬಹುದು' ಎಂಬ ರೈಸರ ಊಹೆ ಪ್ರಸ್ತುತ ಸಂದರ್ಭಕ್ಕೆ ಯೋಗ್ಯವೆನಿಸದಿದ್ದರೂ ತತ್ಕಾಲೀನ ಸಂದರ್ಭದಲ್ಲಿ ತೀರಾ ದೊಡ್ಡ ಪ್ರಮಾದವೇನೂ ಅಲ್ಲ ಎನ್ನಬಹುದು. 'ಜೈನ ಸಂಪ್ರದಾಯದ ಹಸ್ತಪ್ರತಿಗಳಲ್ಲದೇ ಬ್ರಾಹ್ಮಣ ಹಾಗೂ ಲಿಂಗಾಯಿತ ಸಂಪ್ರದಾಯಕ್ಕೆ ಸೇರಿದ ಹಸ್ತಪ್ರತಿಗಳೂ ಲಭ್ಯವಿವೆ' ಎಂದು ಅವರು ಉಲ್ಲೇಖಿಸಿದ್ದಾರಲ್ಲದೆ ಇವುಗಳ ಪಾಠಭೇದಗಳನ್ನು ಅನುಬಂಧದಲ್ಲಿ ಸವಿಸ್ತಾರವಾಗಿ ತೋರಿಸಿದ್ದಾರೆ.

ರೈಸರು ಈ ಕೃತಿಯನ್ನು ಪ್ರಕಟಿಸಿದ ಕೆಲವೇ ವರ್ಷಗಳ ಮೊದಲು (1880) ಪುಸ್ತಕಂ ಅಳಸಿಂಗಾಚಾರಿ ಎಂಬುವವರು 'ಕನ್ನಡ ಟೀಕಿನ ಸಮೇತ ಮೈಸೂರಿನ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಿದ' 88 ಪುಟಗಳ ಕರ್ಣಾಟಕ ಭಾಷಾಭೂಷಣವನ್ನು ಪ್ರಕಟಿಸಿದ್ದರು. ಈ ಪ್ರತಿಯಲ್ಲಿ "ಮುಖಪುಟದ ಹೊರತು ಹಸ್ತಪ್ರತಿ ಸಂಬಂಧದ ವಿವರಗಳಾವುವೂ ಇಲ್ಲ. ಹಳೆಯ ಮಾದರಿಯಲ್ಲಿಯೇ ಸಾಧಾರಣವಾಗಿ ಮುದ್ರಣವಾಗಿದ್ದು, ತಪ್ಪುಗಳೂ ಬಹಳವಾಗಿವೆ; ಆಶಯದ ವೈಪರೀತ್ಯಗಳೂ ಇವೆ. ಟೀಕು ಈ ಪುಸ್ತಕದ 'ಸಂಪಾದಕ'

---

1 ಪು. – IV.

ರದೇ ಇರಬೇಕು'' ಎಂದು ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ.[1] 'ಭಾಷಾಭೂಷಣ'ದ ಮೊತ್ತಮೊದಲ ಮುದ್ರಿತ ಪ್ರತಿ ಎಂಬ ಏಕೈಕ ಅಂಶವನ್ನುಳಿದು ಇನ್ನಾವ ರೀತಿಯಲ್ಲೂ ಪರಿಗಣನೆಗೆ ಯೋಗ್ಯವಲ್ಲದಷ್ಟು ಸಾಧಾರಣವಾದ ಈ ಪ್ರತಿಯಿಂದ ರೈಸರ ಕಾರ್ಯಕ್ಕೆ ಯಾವುದೇ ರೀತಿಯ ಉಪಯೋಗವಾಗಿರುವ ಸಾಧ್ಯತೆ ಕಡಿಮೆ ಎಂದು ಊಹಿಸ ಬಹುದು.

ಒಟ್ಟು 162 ಪುಟಗಳಿರುವ ಸದ್ಯದ ಆವೃತ್ತಿಯಲ್ಲಿ 44 ಪುಟಗಳಷ್ಟು ವಿಸ್ತಾರವಾದ ಪ್ರಸ್ತಾವನೆ ಇದ್ದು ಇದರಲ್ಲಿ ಮೂರು ಭಾಗಗಳಿವೆ. ಮೊದಲ ಭಾಗವು ನಾಗವರ್ಮ ಮತ್ತು ಅವನ ಕೃತಿಗಳನ್ನು ಕುರಿತದ್ದು. ಇಲ್ಲಿ ತಮಗೆ ಲಭ್ಯವಿರುವ ಮಾಹಿತಿಯ ಆಧಾರಗಳ ಮೇಲೆ ರೈಸರು ನಾಗವರ್ಮನು 12ನೇ ಶತಮಾನದ ಆದಿಭಾಗದಲ್ಲಿದ್ದ ಜೈನಕವಿ ಎಂದು ತೀರ್ಮಾನಿಸಿದ್ದಾರೆ. ಈತ ಕೌಂಡಿನ್ಯ ಗೋತ್ರಕ್ಕೆ ಸೇರಿದವ, ವೆಂಗಿದೇಶದ ವೆಣ್ಣಮಯ್ಯ ಮತ್ತು ಪೋಲಿಕಬ್ಬೆ ಅಥವಾ ಪೋಟಿಕಬ್ಬೆಯರ ಮೊದಲ ಮಗ, ದಾಮಮಯ್ಯ- ಕುಂದ ಕಬ್ಬೆಯರ ಪೌತ್ರ, ವೆಣ್ಣಮಯ್ಯ-ಕೌಂಡಿಕಬ್ಬೆಯರ ಪ್ರಪೌತ್ರ. ನಾಗವರ್ಮನು ತನ್ನ ಮೂಲ ಸ್ಥಾನವಾದ ವೆಂಗಿಯನ್ನು ಬಿಟ್ಟು ಬಹುಶಃ ಬಳ್ಳಾರಿಯ ಸಮೀಪದ ಪೊಳಲು ಅಥವಾ ಹೊಳಲುವಲ್ಲಿ ನೆಲೆಸಿದನೆಂದೂ, ಆಗಲೇ ಬಹುಶಃ ಅವನು ತಮ್ಮ ಪೂರ್ವಿಕರ ಮತವಾದ ವೈದಿಕಮತವನ್ನು ಬಿಟ್ಟು ಜಿನಮತವನ್ನು ಅಂಗೀಕರಿಸಿದನೆಂದೂ ರೈಸ್ ಊಹಿಸಿದ್ದಾರೆ.

ಪಶ್ಚಿಮ ಚಾಲುಕ್ಯರನ್ನು (ಕಲ್ಯಾಣದ ಚಾಲುಕ್ಯರು) ಮತ್ತು ಗಂಗರಸರನ್ನು ಈತ ಹೆಚ್ಚಾಗಿ ಉಲ್ಲೇಖಿಸುವುದರಿಂದ ಈತ ಚೋಳರ ಸಾಮಂತರಾಜನಾಗಿದ್ದ ಭುವನೈಕಮಲ್ಲನ [ಇಮ್ಮಡಿ ಸೋಮೇಶ್ವರ (1068-1076)] ಆಸ್ಥಾನದಲ್ಲಿ ಇದ್ದಿರಬೇಕು, ಗುಣವರ್ಮ ಮತ್ತು ಉದಯಾದಿತ್ಯರಿಗೆ ಈತ ಆಪ್ತನೆಂದು ರೈಸರ ಅಭಿಮತ.

ನಾಗವರ್ಮನು ಕ್ರಿ.ಶ. 1115ರ ನಯಸೇನನನ್ನು ಹೆಸರಿಸುವುದರಿಂದ ಮತ್ತು 1172ರಲ್ಲಿ ನಿಧನ ಹೊಂದಿದ ಹೇಮಚಂದ್ರನ ಕೋಶವನ್ನು ಹೆಸರಿಸದಿರುವುದರಿಂದ ಈತನು ಕೇಶಿರಾಜನಿಗಿಂತ ಪೂರ್ವದವನಾಗಿದ್ದು 11ನೇ ಶತಮಾನದ ಉತ್ತರಾರ್ಧ ಹಾಗೂ 12 ಶತಮಾನದ ಮೊದಲ ಪಾದದಲ್ಲಿ ಬದುಕಿದ್ದಿರಬೇಕು ಎಂದು ಅವರು ನಿರ್ಣಯಿಸಿದ್ದಾರೆ.

ರೈಸರ ಪ್ರಕಾರ ನಾಗವರ್ಮನಿಂದ ವಿರಚಿತವಾದ ಕೃತಿಗಳು ಐದು - (1) ಕಾವ್ಯಾ ವಲೋಕನ, (2) ಛಂದೋಂಬುಧಿ, (3) ಕರ್ಣಾಟಕ ಭಾಷಾಭೂಷಣ, (4) ವಸ್ತುಕೋಶ ಹಾಗೂ (5) ಕಾದಂಬರೀ. ಇವುಗಳಲ್ಲಿ ಮೊದಲ ನಾಲ್ಕನ್ನು ಕುರಿತು ರೈಸ್ ತಲಾ ಒಂದೆರಡು ಪ್ಯಾರಾಗಳ ವಿವರಣೆಯನ್ನು ನೀಡಿದ್ದಾರೆ. ಕಾದಂಬರಿಯನ್ನು ಕುರಿತಂತೆ ಮಾತ್ರ 'ಇದು

1 ವೆಂಕಟಾಚಲ ಶಾಸ್ತ್ರೀ, ಟಿ.ವಿ., *'ಕನ್ನಡ ಲಕ್ಷಣ ಗ್ರಂಥಗಳ ಸಂಪಾದನೆ'* ಶಾಸ್ತ್ರೀಯ ಸಂಪುಟ-1. ಪು. 179. 1999. ಬೆಂಗಳೂರು.

ಇದೇ ಹೆಸರಿನಲ್ಲಿ ಬಾಣನು ಬರೆದ ಪ್ರಸಿದ್ಧವಾದ ಶೃಂಗಾರ ಕೃತಿಯ ಅನುವಾದ' ಎಂದಷ್ಟೇ ಹೇಳಿ ಅಡಿಟಿಪ್ಪಣಿಯಲ್ಲಿ,

"I do not of myself know this to be a work by Naga Varma, but I am confidently assured of it by competant native scholar" ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.[1]

ಪ್ರಸ್ತಾವನೆಯ ಮುಂದಿನ ಭಾಗವನ್ನು ಪರಿಶೀಲಿಸುವ ಮೊದಲಿಗೆ ಈ ಹಂತ ದಲ್ಲಿಯೇ ನಾಗವರ್ಮನ ಕಾಲ, ದೇಶ ಮತ್ತು ಮತಗಳ ಬಗ್ಗೆ ರೈಸರ ಅಭಿಪ್ರಾಯಗಳನ್ನು ಇತ್ತೀಚಿನ ಸಂಶೋಧನೆಗಳ ಹಿನ್ನೆಲೆಯಲ್ಲಿ ಒರೆಗೆ ಹಚ್ಚಬಹುದು.

ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧರಾಗಿರುವ ನಾಗವರ್ಮರು ಎಷ್ಟು ಮಂದಿ? ಎಂಬ ಪ್ರಶ್ನೆಯನ್ನು ಕುರಿತು 20ನೇ ಶತಮಾನದಲ್ಲಿ ಅನೇಕ ವಿದ್ವಾಂಸರು ಚರ್ಚಿಸಿ ತಮ್ಮತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆರ್. ನರಸಿಂಹಾಚಾರ್ಯ ಅಂಬಳೆ ವೆಂಕಟಸುಬ್ಬಯ್ಯ ಬಿ. ಮಲ್ಲಪ್ಪ, ಎಂ. ಗೋವಿಂದ ಪೈ ನಾ.ಶ್ರೀ. ರಾಜಪುರೋಹಿತ, ಕೆ. ವೆಂಕಟರಾಯಾಚಾರ್ಯ ಟಿ.ಎಸ್. ವೆಂಕಣ್ಣಯ್ಯ, ಎಚ್. ಶೇಷಯ್ಯಂಗಾರ್, ಎ. ವೆಂಕಟರಾವ್, ರಂ.ಶ್ರೀ. ಮುಗಳಿ, ಭೀಮರಾವ್ ಚಿಟಗುಪ್ಪಿ, ಶಿ.ಶಿ. ಬಸವನಾಳ, ಜಿ. ಹನುಮಂತರಾವ್, ಎ. ಶಂಕರ ಕೆದಿಲಾಯ ಮುಂತಾದವರು ಇವರಲ್ಲಿ ಮುಖ್ಯರು. ಇವರೆಲ್ಲರೂ ಅಳೆದು-ತೂಗಿ ನಿರ್ಣಯಿಸಿರುವ ಅಂಶವೆಂದರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಯನ್ನು ಮಾಡಿದವರಲ್ಲಿ ಇಬ್ಬರು ನಾಗವರ್ಮರು ಆಗಿಹೋಗಿದ್ದಾರೆ.[2] ಅವರಲ್ಲಿ ಮೊದಲನೆಯವನು ಸುಮಾರು ಕ್ರಿ.ಶ. 990ರಲ್ಲಿದ್ದ, ಛಂದೋಂಬುಧಿ ಹಾಗೂ ಕರ್ಣಾಟಕ ಕಾದಂಬರಿಯನ್ನು ಬರೆದ ಮೊದಲನೆಯ ನಾಗವರ್ಮ. ಈತನೇ ರೈಸ್ ಪ್ರಸ್ತಾಪಿಸಿರುವ ವೆಣ್ಣಮಯ್ಯ ಮತ್ತು ಪೋಲಿಕಬ್ಬೆಯರ ಮಗ. ಈತನಲ್ಲದೆ ಕ್ರಿ.ಶ. ಸುಮಾರು 1042ರಲ್ಲಿ ಜೀವಿಸಿದ್ದ ನಾಗವರ್ಮನೂ ಒಬ್ಬನಿದ್ದಾನೆ. ಅನುಕೂಲದ ದೃಷ್ಟಿಯಿಂದ ಇವನನ್ನು 'ಎರಡನೇ ನಾಗವರ್ಮ', 'ಇಮ್ಮಡಿ ನಾಗವರ್ಮ' ಎಂದು ಕರೆಯು ವುದು ವಾಡಿಕೆ. ಈತ ಜೈನ ಕವಿ. 'ನಾಕಿಗ' ಎಂದು ಈತ ತನ್ನನ್ನು ತಾನು ಕರೆದುಕೊಂಡಿದ್ದು ದಾಮೋದರ ಎಂಬಾತನ ಪುತ್ರನೀತ. ಇಮ್ಮಡಿ ನಾಗವರ್ಮನು ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಅಭಿಧಾನ ವಸ್ತುಕೋಶ ಎಂಬ ಕೃತಿಗಳನ್ನು ಬರೆದಿದ್ದಾನೆ. ಈತನೇ ಬರೆದ ವರ್ಧಮಾನಪುರಾಣವು ಇತ್ತೀಚೆಗೆ ಪತ್ತೆಯಾಗಿದೆ. ಈತ ಚಾಲುಕ್ಯರಾಜ ನಾದ ಜಗದೇಕಮಲ್ಲ ಜಯಸಿಂಹನಲ್ಲಿ (1015-1042) ಕಟಕೋಪಾಧ್ಯಾಯನಾಗಿದ್ದನೆಂದು ತಿಳಿದುಬರುತ್ತದೆ.

---

1 ಪು. V.

2 ಪ್ರಸಿದ್ಧರಾದ ಇವರಿಬ್ಬರೇ ಅಲ್ಲದೆ ಚಂದ್ರಚೂಡಾಮಣಿ ಶತಕವನ್ನು ಬರೆದ ಮತ್ತೊಬ್ಬ ನಾಗವರ್ಮನೂ ಇದ್ದಾನೆ. (ಕ.ಕ.ಚ. ಸಂ. 1, ಪು.-60, ದ್ವಿ.ಮು.)

ಈಗ ಮೊದಲಿಗೆ ರೈಸರು ಮೊದಲನೆಯ ಮತ್ತು ಎರಡನೆಯ ನಾಗವರ್ಮರಿಬ್ಬರೂ ಒಬ್ಬನೇ ಎಂದು ಭಾವಿಸಲು ಕಾರಣವೇನು ಎಂಬುದನ್ನು ಯೋಚಿಸಬೇಕು. ನಾಗವರ್ಮನಿಗೆ ಸಂಬಂಧಿಸಿದಂತೆ ಈ ಮೊದಲು ಪ್ರಸ್ತಾಪಿಸಿದ ವಿವರಗಳೆಲ್ಲವೂ ಕೇವಲ ಛಂದೋಂಬುಧಿಯಲ್ಲಿ ಮಾತ್ರ ದೊರಕಿರುವಂತಹವು.[1] ಛಂದೋಂಬುಧಿಯನ್ನು ಬರೆದ ನಾಗವರ್ಮನೂ, ಕಾದಂಬರಿಯನ್ನು ಬರೆದವನೂ ಒಬ್ಬನೇ ಆದರೂ ಛಂದೋಂಬುಧಿಯಲ್ಲಿರುವ ಯಾವ ಮಾಹಿತಿಯೂ ಕಾದಂಬರಿಯಲ್ಲಿಲ್ಲ. 1875ರ ವೇಳೆಗೆ ಕಾದಂಬರಿಯು ಪ್ರಕಟವೂ ಆಗಿರಲಿಲ್ಲ. ಕಾವ್ಯಾವಲೋಕನ ಮತ್ತು ಭಾಷಾಭೂಷಣಗಳಲ್ಲಿ ಕ್ರಮವಾಗಿ 'ಶ್ರೀ ಮನ್ನಾಗವರ್ಮ ಪ್ರಣೀತಮಪ್ಪ', 'ಜೀಯಾದಸಾ ಮಹಾಪ್ರೋಕ್ತಾ ನಾಗವರ್ಮ ಬುಧೋತ್ತಮಃ' ಎಂಬ ಮಾತುಗಳಿವೆಯೇ ಹೊರತು ತಂದೆ, ತಾಯಿ, ವಂಶ, ಇತ್ಯಾದಿ ಯಾವ ವಿವರಗಳೂ ಇಲ್ಲ. ಹಾಗಾಗಿ ರೈಸರು ಹೆಸರಿನ ಸಾದೃಶ್ಯದಿಂದ ಕಿಟೆಲರಂತೆಯೇ ಮೇಲೆ ಕಾಣಿಸಿದ ಐದೂ ಕೃತಿಗಳನ್ನೂ ಬರೆದ ನಾಗವರ್ಮನು ಒಬ್ಬನೇ ಎಂದು ಭಾವಿಸಿರಬೇಕು. ಆದರೂ ಕಾದಂಬರಿಯ ಲೇಖಕನ ವಿಷಯದಲ್ಲಿ ಅವರಿಗೆ ಸ್ವಲ್ಪ ಅನುಮಾನವಿದ್ದ ಅಂಶ ಈಗಾಗಲೇ ಪ್ರಸ್ತಾಪಿತವಾಗಿದೆ.

ಮುಂದೆ 1903ರಲ್ಲಿ ಕಾವ್ಯಾವಲೋಕನ ಮತ್ತು ಭಾಷಾಭೂಷಣಗಳನ್ನು ಮರು ಪರಿಷ್ಕರಿಸಿ ಪ್ರಕಟಿಸುವಾಗ ಆರ್. ನರಸಿಂಹಾಚಾರ್ಯರು, ತಮ್ಮ ಕೃತಿಯ ಪೀಠಿಕೆಯಲ್ಲಿ ನಾಗವರ್ಮರು ಎಷ್ಟು ಮಂದಿ ಎಂಬ ಪ್ರಶ್ನೆಯನ್ನು ಎತ್ತಿಕೊಂಡು ವಿಸ್ತಾರವಾಗಿ ಚರ್ಚಿಸಿ ಎಲ್ಲ ಕೃತಿಗಳಲ್ಲಿನ ಆಂತರಿಕ ಪ್ರಮಾಣಗಳ ಆಧಾರದ ಮೇಲೆ ಇಬ್ಬರು ನಾಗವರ್ಮರ ಪ್ರಮೇಯವನ್ನು ಪ್ರತಿಪಾದಿಸಿದರು. ಅವರ ಈ ನಿರ್ಣಯಕ್ಕೆ ಅಂಬಳೆ ವೆಂಕಟಸುಬ್ಬಯ್ಯ ಮುಂತಾದ ಒಂದಿಬ್ಬರು ವಿದ್ವಾಂಸರ ವಿರೋಧವಿತ್ತಾದರೂ ಕವಿಚರಿತ್ರೆಯ ಮೊದಲ ಸಂಪುಟದಲ್ಲಿ ಆಚಾರ್ಯರು ಇವರೆಲ್ಲರ ಪ್ರಶ್ನೆಗಳಿಗೆ ನೀಡಿದ ಸಮಾಧಾನದಿಂದ ಅವರ ವಾದವು ಪುನಃ ಸ್ಥಾಪಿತವಾಯಿತು. ಇತ್ತೀಚೆಗೆ ದೊರೆತಿರುವ ವರ್ಧಮಾನ ಪುರಾಣವು ಎರಡನೇ ನಾಗವರ್ಮನನ್ನು ಕುರಿತಾದ ಕೆಲವಾದರೂ ಸಂಶಯಗಳನ್ನು ದೂರ ಮಾಡಿದೆ.

ಒಟ್ಟಿನಲ್ಲಿ ಈ ಪರಿವೀಕ್ಷಣೆಯಿಂದ ಹೊರಹೊಮ್ಮುವ ಅಭಿಪ್ರಾಯವೆಂದರೆ ರೈಸರು ನಾಗವರ್ಮನು ಒಬ್ಬನೇ ಎಂಬ ನಿರ್ಣಯಕ್ಕೆ ಬರಲು ಕಾರಣ ಮಾಹಿತಿಯ ಕೊರತೆಯೇ ವಿನಃ ಅನವಧಾನವಲ್ಲ. ಕಿಟೆಲ್ಲರು ಛಂದೋಂಬುಧಿಯನ್ನು ಸಂಪಾದಿಸುವಾಗ ಮಂಗಳ ಪದ್ಯಗಳನ್ನು ಕೈಬಿಡುವ ಗೋಜಿಗೆ ಹೋಗದೆ ಇದ್ದಿದ್ದರೆ ಆ ಹಂತದಲ್ಲಿಯೇ ರೈಸರಿಗೆ ಇಬ್ಬರು ನಾಗವರ್ಮರ ಸೂಚನೆ ದೊರೆತಿರುತ್ತಿತ್ತೆಂದು ಊಹಿಸಬಹುದು.

* * *

ಪ್ರಸ್ತಾವನೆಯ ಎರಡನೆಯ ಭಾಗವು ಕನ್ನಡ ಭಾಷೆಯನ್ನು ಕುರಿತದ್ದು. ಇಲ್ಲಿ ರೈಸರು 'ಕನ್ನಡ' ಎಂಬ ಶಬ್ದದ ನಿಷ್ಪತ್ತಿಯ ಬಗೆಗೆ ಗುಂಡರ್ಟ್, ಸಿ.ಪಿ. ಬ್ರೌನ್ ಮುಂತಾದವರು

1 ಕಿಟೆಲ್, ಎಫ್. (ಸಂ) **ನಾಗವರ್ಮನ ಕನ್ನಡ ಛಂದಸ್ಸು**, ಪದ್ಯಗಳು 1 ರಿಂದ 16, ಪು. 1-4. 1875.

ನೀಡಿರುವ ಅಭಿಪ್ರಾಯಗಳನ್ನು ಮೊದಲಿಗೆ ಪ್ರಸ್ತಾಪಿಸಿ ಕಡೆಗೆ "Whatever its origin, the term is considerable antiquity, as it occurs at the beginning of the 5th Century in Varahamihira" ಎಂಬ ನಿರ್ಣಯಕ್ಕೆ ಬಂದಿದ್ದಾರೆ.[1] ಕನ್ನಡ ಭಾಷೆಯನ್ನು ಮಾತನಾಡುವ ಜನರಿರುವ ಪ್ರದೇಶವನ್ನು ಸೂಚಿಸಿ ಅನಂತರ ಕೊಡವ, ತೊಂಡ, ತುಳು, ಕೋಟ, ಬಡಗ ಎಂಬ ಉಪಭಾಷೆಗಳು ಕನ್ನಡಕ್ಕಿರುವುದನ್ನು ನಮೂದಿಸಲಾಗಿದೆ.

ಶಾಸನಗಳು ಮತ್ತು ಸಾಹಿತ್ಯಕೃತಿಗಳ ಆಧಾರದ ಮೇಲೆ ರೈಸ್ ಪೂರ್ವದ ಹಳೆಗನ್ನಡ, ಹಳೆಗನ್ನಡ ಮತ್ತು ಹೊಸಗನ್ನಡ ಎಂಬ ಮೂರು ಕಾಲಘಟ್ಟಗಳನ್ನು ವಿಭಾಗಿಸಿದ್ದಾರೆ. 'ಮಹಾವಂಶೋ, ಟಾಲೆಮಿಯ ಭೂಗೋಳಕೈಪಿಡಿ ಮುಂತಾದ ಕೃತಿಗಳಲ್ಲಿ ಉಲ್ಲೇಖಿತ ವಾಗಿರುವ ಬನವಾಸಿಯು ಪೂರ್ವದ ಹಳೆಗನ್ನಡದ ಸ್ಥಳ' ಎಂಬ ವಿಲ್ಸನ ಮಾತನ್ನು ಉಲ್ಲೇಖಿಸಿರುವ ಅವರು ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ. 7ನೇ ಶತಮಾನದವರೆಗೆ ಪೂರ್ವದ ಹಳೆಗನ್ನಡ ಅಸ್ತಿತ್ವದಲ್ಲಿ ಇದ್ದಿರಬೇಕೆಂದು ಊಹಿಸಿದ್ದಾರೆ.[2] '8 ರಿಂದ 14ನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದದ್ದು ಜೈನ ಕವಿಗಳಿಂದ ವಿಶೇಷವಾಗಿ ಪರಿಪುಷ್ಟಗೊಂಡದ್ದು ಹಳೆಗನ್ನಡ'ವೆಂಬುದು ಅವರ ಅಭಿಪ್ರಾಯ.

ಕನ್ನಡ ಲಿಪಿಯ ಉಗಮವನ್ನು ಕುರಿತೂ ರೈಸ್ ಇಲ್ಲಿ ಪ್ರಸ್ತಾಪಿಸಿದ್ದಾರೆ. ಗಿರನಾರ್ ಎಂಬಲ್ಲಿನ ಕ್ರಿ.ಪೂ. 250ರ ಅಶೋಕನ ಶಾಸನವೇ ಭಾರತದಲ್ಲಿ ಉಪಲಬ್ಧವಿರುವ ಅತ್ಯಂತ ಪ್ರಾಚೀನ ಬರವಣಿಗೆ ಎಂಬ ಅಂಶವನ್ನು ಪ್ರಸ್ತಾಪಿಸಿರುವ ಅವರು "ಭಾರತದಲ್ಲಿನ ಎಲ್ಲ ಹಳೆಯ ಮತ್ತು ಹೊಸ ಲಿಪಿಗಳು ಅಶೋಕ ಕಾಲದ ಲಿಪಿಗಳಿಂದಲೇ ಬೆಳೆದುಬಂದ ವಾಗಿವೆ" ಎಂಬ ಕಸ್ಟ್ ಎಂಬ ವಿದ್ವಾಂಸನ ಮಾತನ್ನು ಒಪ್ಪಿ ಉಲ್ಲೇಖಿಸಿದ್ದಾರೆ. "9 ಮತ್ತು 15ನೇ ಶತಮಾನದಲ್ಲಿ ಕನ್ನಡ ಲಿಪಿಯು ಸ್ಪಷ್ಟವಾಗಿ ರೂಪಾಂತರಗೊಂಡಿದ್ದನ್ನು ಶಾಸನ ಗಳಲ್ಲಿ ಕಾಣಬಹುದಾಗಿದ್ದು ಈ ಪ್ರಕ್ರಿಯೆಯ ಪೂರ್ವದ ಹಳೆಗನ್ನಡವು ಹಳೆಗನ್ನಡವಾಗಿ ಬದಲಾದದ್ದನ್ನು ಮತ್ತು ಹೊಸಗನ್ನಡ ಲಿಪಿಯ ಬೆಳವಣಿಗೆಯ ಆರಂಭಿಕ ಹಂತವನ್ನು ಸೂಚಿಸುತ್ತವೆ" ಎಂದು ಅವರು ಹೇಳಿದ್ದಾರಲ್ಲದೇ ಕನ್ನಡ ಲಿಪಿಯು ವಿವಿಧ ಕಾಲಘಟ್ಟ ಗಳಲ್ಲಿ ರೂಪಾಂತರಗೊಂಡ ಹಂತಗಳನ್ನು ಬಿಂಬಿಸುವ ಕೋಷ್ಟಕ ಒಂದನ್ನು ನೀಡಿದ್ದಾರೆ. ಇದು ಬಹುಶಃ ಕನ್ನಡ ಲಿಪಿಯ ವಿಕಾಸವನ್ನು ತೋರಿಸುವ ಮೊತ್ತಮೊದಲನೆಯ ಕೋಷ್ಟಕ.

ಕನ್ನಡ ಮತ್ತು ಸಂಸ್ಕೃತಗಳ ಸಂಬಂಧಕ್ಕೆ ಸಂಬಂಧಿಸಿ ರೈಸ್ ಇಲ್ಲಿ ಅತ್ಯಂತ ಮಹತ್ವದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕಸ್ಟ್, ಕಾಲ್ಡ್‌ವೆಲ್, ಪೋಪ್, ವಿಟ್ನೆ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಮಂಡಿಸಿರುವ 'ಕನ್ನಡವು ದ್ರಾವಿಡ ಭಾಷಾ

1 ಪು. - VI.

2 ಅಲ್ಲೇ.

ಪರಿವಾರಕ್ಕೆ ಸೇರಿದ ಭಾಷೆ' ಎಂಬ ಸಿದ್ಧಾಂತಕ್ಕೆ ಮಾತ್ರ ಜೋತು ಬಿದ್ದಿಲ್ಲ. ಬದಲಿಗೆ ಈ ಎಲ್ಲರ ಅಭಿಪ್ರಾಯಗಳನ್ನು ಅವರು ಇಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಿದ್ದರೂ 'ಎಲ್ಲ ಭಾರತೀಯ ಭಾಷೆಗಳೂ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ಪೈಶಾಚಿಕ ಎಂಬ ಮೂರೂವರೆ ಭಾಷೆಗಳಿಂದ ಜನಿಸಿದವು. ಕನ್ನಡ ವರ್ಣಮಾಲೆ ಹಾಗೂ ಸಂಸ್ಕೃತ ವರ್ಣಮಾಲೆಯಲ್ಲಿನ ಅಕ್ಷರಗಳಲ್ಲಿ ಅನೇಕ ಸಾಮ್ಯತೆಗಳಿದ್ದರೂ ಎ, ಮತ್ತು ಒ ಗಳಲ್ಲಿ ಹ್ರಸ್ವ ದೀರ್ಘಗಳನ್ನೂ ಹೊಂದಿರುವುದು, ಱಳಗಳ ಅಸ್ತಿತ್ವ ಮುಂತಾದ ಬದಲಾವಣೆಗಳ ಮೂಲಕ ಕನ್ನಡವು ತನ್ನ ಸ್ವಂತಿಕೆಯನ್ನು ಕಾಯ್ದುಕೊಂಡಿದೆ' ಎಂಬ ನಾಗವರ್ಮನ ಮಾತುಗಳನ್ನು ಅವರು ಪ್ರಧಾನವಾಗಿ ಪರಿಗಣಿಸಿದ್ದಾರೆ.

> *"It is evident that Kannada was not dependent upon Sanskrit as an aid in composition, but quite self-sufficient and will adopted for independent use as a vehicle for the expression of thought"*[1] ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯ.

'ಆದರೂ ಮೊದಲಿನ ಬಹುಮಟ್ಟಿನ ಬ್ರಾಹ್ಮಣ ಕವಿಗಳು ಸಂಸ್ಕೃತಕ್ಕೆ ಮಿತಿಮೀರಿದ ಪ್ರಾಶಸ್ತ್ಯವನ್ನು ಕೊಟ್ಟು ಕನ್ನಡದ ಬರವಣಿಗೆಯಲ್ಲಿ ಅತಿಯಾಗಿ ಸಂಸ್ಕೃತವನ್ನು ಪ್ರಯೋಗಿಸಿ ದರು. ಆದರೆ ಅನಂತರ ಬಂದ ಜೈನ ಕವಿಗಳು ಸಂಸ್ಕೃತವನ್ನು ಚೆನ್ನಾಗಿ ಅರಿತಿದ್ದರೂ ಬರವಣಿಗೆಯಲ್ಲಿ ಕನ್ನಡ-ಸಂಸ್ಕೃತಗಳನ್ನು ಬೆರೆಸದೆ ಎರಡರಲ್ಲಿಯೂ ಪರಿಶುದ್ಧತೆಯನ್ನು ಕಾಯ್ದುಕೊಂಡರು' ಎಂದವರು ವಿವರಿಸಿ ಅದಕ್ಕೆ ಸಮರ್ಥನೆಯಾಗಿ ನಯಸೇನ, ನಾಗವರ್ಮ ಹಾಗೂ ಕೇಶೀರಾಜರ ಪದ್ಯಗಳನ್ನು ಉದಾಹರಿಸಿದ್ದಾರೆ.

ಹಿಂದಿನಂತೆ ಇಲ್ಲಿಯೇ ಈ ಭಾಗವನ್ನು ಕುರಿತಾದ ವಾದ-ಪ್ರತಿವಾದಗಳನ್ನು ಗಮನಿಸಬಹುದು.

ರೈಸರು ಪ್ರತಿಪಾದಿಸಿದ ಪೂರ್ವದ ಹಳೆಗನ್ನಡ, ಹಳೆಗನ್ನಡ ಹಾಗೂ ಹೊಸಗನ್ನಡ ಗಳೆಂಬ ವಿಭಾಗ ಕ್ರಮವು ತೀವ್ರವಾದ ವಾದವಿವಾದಗಳಿಗೆ ದಾರಿಮಾಡಿಕೊಟ್ಟಿತು. ಈ ಸಂದರ್ಭದಲ್ಲಿ ರೈಸರ ಅಭಿಪ್ರಾಯಗಳನ್ನು ವಿರೋಧಿಸಿದವರೆಂದರೆ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಆರ್. ರಘುನಾಥರಾಯರು. ಅವರು 'ಕರ್ಣಾಟಕ ಭಾಷಾ ವ್ಯಾಕರಣೋಪ ನ್ಯಾಸಮಂಜರೀ' ಎಂಬ ಗ್ರಂಥವನ್ನು 1894ರಲ್ಲಿ ಪ್ರಕಟಿಸಿ[2] ಅದರಲ್ಲಿ ರೈಸರ ಅಭಿಪ್ರಾಯ ಗಳನ್ನು ಖಂಡಿಸಿದ್ದಾರೆ. ಅವರು ಮಂಡಿಸಿರುವ ವಾದವನ್ನು ಹೀಗೆ ಸಂಗ್ರಹಿಸಬಹುದು :

---

1 P – VIII.

2 ಇದರ ಇಂಗ್ಲೀಷ್ ಶೀರ್ಷಿಕೆ Essays on Kannada Grammar 1894. ಕಾಕ್ಸ್ ಪ್ರೆಸ್, ಬೆಂಗಳೂರು.

"......... ಮೆ॥ ರೈಸ್ ಸಾಹೇಬರು ಹಳಗನ್ನಡವೆಂದು ಹೆಸರಿಟ್ಟಿರುವ ಕನ್ನಡವು ನೃಪತುಂಗನ 'ಪುರಾಣ ಕವಿಗಳ' ಕಾಲದಲ್ಲಿಯೂ ಇದ್ದಂತೆ ಈ ಪದ್ಯದಿಂದ ('ಎಂತು ಭೇದ ಮನಿನಿಸಾ' ಎಂದು ಆರಂಭವಾಗುವ) ತೋರುವುದಿಲ್ಲವೇ? ಪೂರ್ವದ ಹಳಗನ್ನಡದ ವಿಷಯದಲ್ಲಿ ಬಹುತೊಂದರೆಗಳಿದ್ದರೂ ಮೆ॥ ರೈಸ್ ಸಾಹೇಬರು ಮಾತ್ರ 'ಕೈ ಹುಣ್ಣಿಗೆ ಕನ್ನಡಿಯೇತಕ್ಕೆ?" ಎಂಬ ತೆರದಲ್ಲಿ ಬರೆದಿರುವರು. ಈ ಸಂಗತಿ ಇಷ್ಟು ಸ್ಪಷ್ಟವಾಗಿಲ್ಲ, ಸರಿಯಾದ ಸಾಧನಗಳಿನ್ನೂ ಸಿಕ್ಕಿಲ್ಲ. ಅಂತಹ ಸಾಧನಗಳು ಸಿಕ್ಕುವವರೆಗೂ ಸುಮ್ಮನಿರುವುದು ಉತ್ತಮವೆಂದು ತೋರಿಸುವುದು ನನ್ನುದ್ದೇಶವೇ ಹೊರತು, ಹಳಗನ್ನಡಕ್ಕೂ ಪ್ರಾಚೀನವಾಗಿದ್ದ ಕನ್ನಡವೊಂದು ಇರಲೇ ಇಲ್ಲವೆಂದು ಸಾಧಿಸುವುದಕ್ಕೆ ನಾನು ಪ್ರಯತ್ನಿಸಿಲ್ಲ ......" [1]

"..... ಪೂರ್ವದ ಹಳಗನ್ನಡಕ್ಕೂ" ಹಳಗನ್ನಡಕ್ಕೂ ಎಷ್ಟು ಭೇದವಿರುವುದೇ ಮೆ॥ ರೈಸ್ ಸಾಹೇಬರು ಸ್ಪಷ್ಟವಾಗಿ ಹೇಳಿರುವುದನ್ನು ನಾನು ನೋಡಿಯೂ ಇಲ್ಲ, ಕೇಳಿಯೂ ಇಲ್ಲ. ಪೂರ್ವದ ಹಳಗನ್ನಡವೊಂದಿತ್ತೆಂದು ನಾವು ಮೆ॥ ರೈಸ್ ಸಾಹೇಬರವರ ಒಣಮಾತಿನ ಮೇಲೆ ನಂಬಬೇಕೇ ಹೊರತು ಸರಿಯಾದ ಮತ್ತಾವ ಕಾರಣವೂ ತೋರಬರುವುದಿಲ್ಲ ...." [2]

"...... ನಯಸೇನ ನಾಗವರ್ಮ ಮುಂತಾದ ಪ್ರಾಚೀನ ಕವಿಗಳೇ ಹೊಸಗನ್ನಡ ಹಳಗನ್ನಡಗಳೆಂಬ ಪದಗಳನ್ನು ಪ್ರಯೋಗಿಸಿರುವುದರಿಂದ "ಪೂರ್ವದ ಹಳಗನ್ನಡ" ಎಂಬುದೊಂದು ಕಾಲವನ್ನು ಇಟ್ಟುಕೊಳ್ಳುವುದು ಅವಶ್ಯಕವೆಂದು ಇವರಿಗೆ ತೋರಿತು. ಆದರೆ ಈ ಪದ್ಯಗಳಲ್ಲಿರುವ ಹೊಸಗನ್ನಡ ಪಳಗನ್ನಡ ಎಂಬುವುಗಳಿಗೆ ಸಂದರ್ಭವನ್ನು ಯೋಚಿಸದೆ ಈಗ ನಾವು ವಾಡಿಕೆಯಾಗಿ ಹೇಳುವ ಅರ್ಥವನ್ನು ಹೇಳುವುದು ಸರಿಯಲ್ಲವೆಂದು ತೋರುವುದು .... ಪೊಸತು ಎಂಬುದಕ್ಕೆ ಹೃದಯಂಗಮವಾದ, ಸೊಗಯಿಪ ಎಂಬ ಅರ್ಥವೂ ಉಂಟು. "ಪೊಸ ಗನ್ನಡದಿಂ" ಎಂದರೆ ಸೊಗಯಿಪ ಕನ್ನಡದಿಂದ ಎಂದು ಅರ್ಥಮಾಡಬಹುದು. "ಇತರರ ಪ್ರಯೋಗಗಳನ್ನು ಕದಿಯದೆ ಬರೆದ ಕನ್ನಡದಿಂದ" ಎಂಬ ಭಾವವೂ ಇದ್ದಂತೆ ತೋರುತ್ತದೆ...." [3]

---

1 ಪು. 8.

2 ಪು. 54.

3 ಪು. 55, 56.

"...... ಮೆ॥ ರೈಸ್ ಸಾಹೇಬರು ಹೇಳುವಂತೆ ಪೂರ್ವದ ಹಳಗನ್ನಡವೆಂಬು ದೊಂದು 7ನೆಯ ಶತಮಾನದ ಕೊನೆಯವರೆಗೂ ಬಾಳುತ್ತಿದ್ದ ಪಕ್ಷಕ್ಕೆ, 9ನೆಯ ಶತಮಾನದ ಆದಿಯಲ್ಲಿದ್ದ ನೃಪತುಂಗನು ಅದರ ವಿಷಯವಾಗಿ ಏನಾದರೂ ಹೇಳುತ್ತಿದ್ದನಲ್ಲವೇ ......" [1]

"...... ಕ್ರಿಸ್ತ ಶಕದ ಆ ವಿಭಾಗದ ಶತಮಾನಗಳಲ್ಲಿ ರಚಿತವಾಗಿರಬಹುದಾದ ಶಾಸನಗಳನ್ನು ನೋಡೋಣ.... ಇವು ನಾಲ್ಕು ಶ್ರವಣಬೆಳ್ಗೊಳದ ಶಾಸನದ ಪುಸ್ತಕದಿಂದ ತೆಗೆಯಲ್ಪಟ್ಟಿರುವುವು....[2] ಈ ಶಾಸನಗಳೆಲ್ಲವೂ ಪೂರ್ವದ ಹಳಗನ್ನಡದ ಅಕ್ಷರದಲ್ಲಿವೆಯೆಂದೂ, ಇವೆಲ್ಲವೂ ಏಳನೆಯ ಶತಮಾನಕ್ಕಿಂತ ಹಳೆಯವು ಎಂದೂ, ಮೆ॥ ರೈಸ್ ಸಾಹೇಬರೇ ಹೇಳಿರುತ್ತಾರೆ...... ಈ ಶಾಸನಗಳ ಕನ್ನಡವು ಹಳಗನ್ನಡವೆಂದು ಅವರೇ ಬರೆದಿರುವರು ಮತ್ತು ಈ ಶಾಸನಗಳು ಕ್ರಿ.ಶ. ಏಳನೆಯ ಶತಮಾನಕ್ಕಿಂತ ಹಳೆಯದೆಂದೂ ಹೇಳಿರು ವರು. ಪೂರ್ವದ ಹಳಗನ್ನಡವು ೭ನೆಯ ಶತಮಾನದ ಕೊನೆಯವರೆಗೂ ಇದ್ದು ಎಂಟನೆಯ ಶತಮಾನಕ್ಕೆ ಪೂರ್ವದಲ್ಲಿದ್ದ ಮಾನವರು ತಮ್ಮ ಕಾಲಾ ನಂತರ ನೂರಾರು ವರ್ಷಗಳ ಮೇಲೆ ಪ್ರಚಾರವಾಗುವ ಕನ್ನಡವನ್ನು ತ್ರಿಕಾಲ ಜ್ಞಾನಿಗಳಾಗಿ ತಿಳಿದು ಬರೆಯುತ್ತಿದ್ದರೆಂದು ಒಪ್ಪಬೇಕಾಗುವುದಿಲ್ಲವೆ? ಇದು ಅಸಾಧ್ಯವಾದುದರಿಂದ, ಹಳಗನ್ನಡವು ಪ್ರಚಾರವಾಯಿತೆಂದು ಹೇಳಿರುವ ಕಾಲ ತಪ್ಪೋ, ಈ ಶಾಸನಗಳ ಕಾಲವನ್ನು ನಿರ್ಣಯಿಸಿರುವುದು ತಪ್ಪೋ. ಮೆ॥ ರೈಸ್ ಸಾಹೇಬರು ಸಾವಧಾನದಿಂದ ಯೋಚಿಸಬೇಕಾಗಿದೆ....." [3]

"...... ಕ್ರಿ.ಶ. ೧೪ನೆಯ ಶತಮಾನದಿಂದೀಚೆಗೆ ಬಾಳಿದ ಸತ್ಕವಿಗಳಲ್ಲಿ ಅನೇಕರು ಹೊಸಮಾರ್ಗದ ಕನ್ನಡವನ್ನೂ ಹಳೆಯ ಮಾರ್ಗದ ಕನ್ನಡವನ್ನೂ ಸಮ್ಮಿಳಿತ ಮಾಡಿ ತಂತಮ್ಮ ಗ್ರಂಥಗಳನ್ನು ಬರೆದಿರುತ್ತಾರೆ. ಈಗಿನವರೂ ಹಾಗೆಯೇ ಮಾಡುತ್ತಿದ್ದಾರೆ. ಈ ಸಂಗತಿಗಳನ್ನು ತಿಳಿಯದೆ ಅಥವಾ ಜ್ಞಾಪಕ ದಲ್ಲಿಡದೆ ಮಾತನಾಡಿದರೆ ಪ್ರಯೋಜನ ಕಾಣಬರುವುದಿಲ್ಲ. ಕ್ರಿ.ಶ. ೧೪ ನೆಯ ಶತಮಾನದ ಹೊತ್ತಿಗೆ ಹಳಗನ್ನಡವು ಸತ್ತಿತೆಂದು ಮೆ॥ ರೈಸ್ ಸಾಹೇಬರು ಗೋರಿಯ ಕಲ್ಲನ್ನು ತಾವು ಬರೆದ ಪೀಠಿಕೆಗಳಲ್ಲಿ ನೆಡುತ್ತ ಬಂದ ಮಾತ್ರಕ್ಕೆ ಹಳಗನ್ನಡದ ಪ್ರಾಣವು ಹೋದೀತೆ?" [4]

---

1 ಪು. 58.
2 ಶಾಸನ ಸಂಖ್ಯೆಗಳು 8, 13, 14 ಮತ್ತು 26.
3 ಪು. 59 - 61.
4 ಪು. 110.

ರಘುನಾಥರಾಯರ ಈ ಆಕ್ಷೇಪಣೆಗಳಿಗೆ ಉತ್ತರವನ್ನು ಕೊಟ್ಟವರು ಆರ್. ನರಸಿಂಹಾಚಾರ್ಯರು.[1] ಅವರು ರಘುನಾಥರಾಯರಿಗೆ ಬರೆದ ಪತ್ರದಲ್ಲಿ ಬರೆದಿರುವ ಅಂಶಗಳ ಭಾಷಾಂತರ ಹೀಗಿದೆ :

> *"....... ನಿಮ್ಮ ಕೃತಿಯ ಒಂದು ಭಾಗವು ಶ್ರೀ ರೈಸರ ಟೀಕೆಗೇ ಬಳಕೆಯಾಗಿದೆ. ಸುಮಾರು 10 ಪುಟಗಳಲ್ಲಿ ನೀವು ಅವರನ್ನು ಸ್ವಲ್ಪವೂ ಉದಾರತೆ ಇಲ್ಲದೆ ಅತ್ಯುಗ್ರವಾಗಿ ಟೀಕಿಸಿದ್ದೀರಿ. ಭಾಷೆಗಳು ಬದಲಾವಣೆ ಹೊಂದುವ ಕಾಲಘಟ್ಟಗಳ ನಿರ್ದಿಷ್ಟ ದಿನಾಂಕಗಳನ್ನು ಯಾರೂ ಖಚಿತವಾಗಿ ಹೇಳಲಾರರು. ಒಂದು ಶತಮಾನ ಆಚೆ, ಒಂದು ಶತಮಾನ ಈಚೆಗೆ ಆದರೆ ಅದೇನೂ ದೊಡ್ಡ ವ್ಯತ್ಯಾಸವಲ್ಲ. ಪೂರ್ವದಹಳೆಗನ್ನಡವು ಹಳೆಗನ್ನಡದಲ್ಲಿ ಇರದ ಎಷ್ಟೋ ರೂಪಗಳನ್ನು ಹಾಗೂ ಶಬ್ದಗಳನ್ನು ಹೊಂದಿದೆ. 'ಸಂದಾನ್' ಮುಂತಾದ ಶಬ್ದಗಳನ್ನು ಹೋಲಿಸಿ, ನೃಪತುಂಗನೂ ತನಗಿಂತ ಮೊದಲು ಬೇರೊಂದು ಕನ್ನಡ ಇತ್ತೆಂದು ಹೇಳಿದ್ದಾನೆ. ಈ ವಾಗ್ವಾದಕ್ಕೆ ಸಂಬಂಧಿಸಿದಂತೆ ನಿಮ್ಮ ಮುನ್ನುಡಿಯಲ್ಲಿಯ ಮಾತುಗಳಿಗೂ ಪುಸ್ತಕದ ಶರೀರದಲ್ಲಿಯ ಮಾತುಗಳಿಗೂ ತಾಳೆಯಾಗುವುದಿಲ್ಲ. ನಿಮ್ಮ ಕೆಲವು ತೀರ್ಮಾನಗಳು ಪ್ರಮುಖವಲ್ಲದ ಆಧಾರಗಳಿಂದ ಹುಟ್ಟಿದವಾಗಿವೆ. ಆಕ್ಷೇಪಾರ್ಹವೆಂದು ಕಂಡುಬಂದ ಕೆಲವು ನಿರ್ಣಯಗಳನ್ನು ನಾನು ಗುರುತು ಮಾಡಿಟ್ಟಿದ್ದೇನೆ. ಮುಂದೆ ಯಾವಾಗಲಾದರೂ ನಿಮ್ಮ ಗಮನಕ್ಕೆ ತರುತ್ತೇನೆ. ವಿವಾದಿತ ಭಾಗಗಳನ್ನು ನೀವು ಪುಸ್ತಕದಲ್ಲಿ ಉಳಿಸಿಕೊಳ್ಳಲೇಬೇಕೆಂದು ತೀರ್ಮಾನಿಸಿದಲ್ಲಿ ಅದನ್ನು ಅಡಿಟಿಪ್ಪಣಿಯಾಗಿಟ್ಟುಕೊಳ್ಳಬಹುದು."* [2]

---

1 ರೈಸ್-ರಘುನಾಥಾಚಾರ್ಯರ ನಡುವಣ ವಾಗ್ವಾದದಲ್ಲಿ ಆರ್. ನರಸಿಂಹಾಚಾರ್ಯರು ಬರಲು ಇರುವ ಕಾರಣ ಸ್ವಾರಸ್ಯಕರವಾಗಿದೆ. ತಮ್ಮ 'ವ್ಯಾಕರಣೋಪನ್ಯಾಸ ಮಂಜರಿ'ಯ ಪ್ರತಿಯೊಂದನ್ನು ರಘುನಾಥರಾಯರು ಆಗ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಆರ್. ನರಸಿಂಹಾಚಾರ್ಯರಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ಕೇಳಿದರು. ಅದರಂತೆ ನರಸಿಂಹಾಚಾರ್ಯರು ತಮ್ಮ ಅಭಿಪ್ರಾಯವನ್ನು ಅವರಿಗೆ ಬರೆದು ಕಳುಹಿಸಿದರು. ಆಚಾರ್ಯರ ಅಭಿಪ್ರಾಯಗಳು ತಮಗೆ ವ್ಯತಿರಿಕ್ತವಾಗಿದ್ದದ್ದನ್ನು ಒಪ್ಪದ ರಘುನಾಥರಾಯರು ಆಚಾರ್ಯರ ಉತ್ತರಕ್ಕೆ ತಾವು ಪ್ರತ್ಯುತ್ತರವನ್ನು ಬರೆದು ಅದನ್ನು ಆಚಾರ್ಯರಿಗೆ ಕಳುಹಿಸದೆ Evening Mail ಎಂಬ ಪತ್ರಿಕೆಗೆ ಕಳುಹಿಸಿದರು! 1894ರ ಡಿಸೆಂಬರ್ 11 ಮತ್ತು 13ರಂದು ಇವು ಪ್ರಕಟವೂ ಆದವು!! ಇವುಗಳನ್ನು ಚಿಕ್ಕ ಪುಸ್ತಿಕೆಗಳಾಗಿ ಮುದ್ರಿಸಿ ರಘುನಾಥರಾಯರು ತಮ್ಮ ಆಪ್ತವರ್ಗಕ್ಕೆ ಹಂಚಿದರಲ್ಲದೆ 'With Best Compliments' ಎಂಬ ಹಾರೈಕೆಗಳೊಡನೆ ನರಸಿಂಹಾಚಾರ್ಯರಿಗೂ ಒಂದು ಪ್ರತಿಯನ್ನು ಕಳುಹಿಸಿದರು! ಇದಕ್ಕೆ ಉತ್ತರವಾಗಿ 1895ರಲ್ಲಿ ಆಚಾರ್ಯರೂ Mysore Heraldನ ಜನವರಿ 21; ಫೆಬ್ರವರಿ 11, 18; ಮಾರ್ಚ್ 4, 11 ಮತ್ತು 25ರ ಸಂಚಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರಲ್ಲದೆ ತಮ್ಮಿಬ್ಬರ ಬರಹಗಳನ್ನೂ ಸೇರಿಸಿ 'A Controversy' ಎಂಬ 30 ಪುಟಗಳ ಪುಸ್ತಿಕೆಯನ್ನೇ ಪ್ರಕಟಿಸಿ ಹಂಚಿದರು! ಇದಕ್ಕೂ ಒಂದು ಪ್ರತ್ಯುತ್ತರವನ್ನು ರಘುನಾಥರಾಯರು ಬರೆದಿದ್ದು ಇದು ಫುಲ್‌ಸ್ಕೇಪ್ ಕಾಗದದಲ್ಲಿ ಅತಿಚಿಕ್ಕ ಅಕ್ಷರಗಳಲ್ಲಿ ನಾಲ್ಕೂವರೆ ಪುಟಗಳಷ್ಟಿದೆ! ಆದರೆ 'ನನ್ನ ಪುಸ್ತಿಕೆಯಲ್ಲಿಯೇ ಎಲ್ಲ ವಿವರಗಳೂ ಇರುವುದರಿಂದ ಆ ಪತ್ರಕ್ಕೆ ನಾನು ಮತ್ತೆ ಉತ್ತರ ಕೊಡಬೇಕಿಲ್ಲ' ಎಂದು ಆರ್. ನರಸಿಂಹಾಚಾರ್ಯರು, ತಮ್ಮ ಪುಸ್ತಿಕೆಯ Note ನಲ್ಲಿ ಹೇಳಿದ್ದಾರೆ.

2 A Conroversy ಯು ಪು. 25ರಲ್ಲಿ ಉದ್ಧೃತ.

ನರಸಿಂಹಾಚಾರ್ಯರ ಈ ಉತ್ತರಕ್ಕೆ ಪ್ರತಿಯಾಗಿ ರಘುನಾಥರಾಯರು ಅನೇಕ ಪತ್ರ-ಲೇಖನಗಳನ್ನು ಬರೆದರಾದರೂ ಅವುಗಳಲ್ಲಿ ಕನ್ನಡದ ಮೇಲೆ ತೆಲುಗಿನ ಪ್ರಭಾವ, ದಕ್ಷಿಣ-ಉತ್ತರ ಎಂಬ ಮಾರ್ಗಗಳು - ಇತ್ಯಾದಿಯಾದ ಅಂಶಗಳೇ ಹೆಚ್ಚಾಗಿ ಚರ್ಚಿತವಾಗಿವೆ. ಮುಂದೆ 1926ರಲ್ಲಿ ನರಸಿಂಹಾಚಾರ್ಯರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಡಿದ ಉಪನ್ಯಾಸಗಳಲ್ಲಿ ರೈಸರು ಪ್ರತಿಪಾದಿಸಿದ ಮೂರು ಅವಸ್ಥಾ ಭೇದಗಳನ್ನೇ ಮತ್ತೆ ಪ್ರತಿಪಾದಿಸಿ ಅದಕ್ಕೆ ಸಾಕಷ್ಟು ಉದಾಹರಣೆಗಳನ್ನು ನೀಡಿದ್ದಾರೆ.[1]

ರೈಸರು ಪ್ರತಿಪಾದಿಸಿದ ಈ ಪೂರ್ವದ ಹಳೆಗನ್ನಡ ಸಿದ್ಧಾಂತವು ಇಂದು ಸರ್ವಮಾನ್ಯವಾಗಿದೆ. ಅನೇಕ ಮಂದಿ ವಿದ್ವಾಂಸರು ಈ ನಿಟ್ಟಿನಲ್ಲಿ ಕೆಲಸ ಮಾಡಿ ಪೂರ್ವದ ಹಳೆಗನ್ನಡದ ಸ್ವರೂಪವೇನಿದ್ದಿರಬಹುದೆಂದು ಸಾಕಷ್ಟು ಚಿಂತನ-ಮಂಥನಗಳನ್ನು ನಡೆಸಿ ಕೆಲವು ಸಿದ್ಧಾಂತಗಳನ್ನೂ ಮಂಡಿಸಿದ್ದಾರೆ.[2]

★ ★ ★

ಪೀಠಿಕೆಯ ಮೂರನೆಯ ಭಾಗದಲ್ಲಿ ಕನ್ನಡ ಸಾಹಿತ್ಯದ ಸ್ಥೂಲವಾದ ಚರಿತ್ರೆ ಇದೆ. ಈ ಭಾಗದ ಬರವಣಿಗೆಯಲ್ಲಿ ರೈಸ್ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಯಲ್ಲಿ ತಾವೇ ಬರೆದ 'Early Kannada Authors' (1883) ಎಂಬ ಲೇಖನವನ್ನು ಅಳವಡಿಸಿದ್ದಾರೆ. ಕೇವಲ ಸಾಹಿತ್ಯ ಕೃತಿಗಳಲ್ಲಿ ದೊರಕುವ ಮಾಹಿತಿಯನ್ನಷ್ಟೇ ಅಲ್ಲದೆ ಗಂಗರ ಶಾಸನಗಳಲ್ಲಿನ ಮಾಹಿತಿಯನ್ನೂ ಅವರು ಬಳಸಿಕೊಂಡಿದ್ದಾರೆ. ಈ ವಿಭಾಗದ ವಿಶೇಷತೆಗಳನ್ನು ಹೀಗೆ ಪಟ್ಟಿ ಮಾಡಬಹುದು :

- ಕನ್ನಡದ ಆದ್ಯ ಕವಿಗಳು ಜೈನರೆಂಬುವುದನ್ನು ಮೊದಲಿಗೆ ಪ್ರಸ್ತಾಪಿಸಿ ಅವರೆಲ್ಲ ಮುಖ್ಯವಾಗಿ ಚಂಪೂಕಾವ್ಯಗಳನ್ನು ರಚಿಸಿದವರು ಎಂಬುದನ್ನು ಸೂಚಿಸಿದೆ. ಚಾಲುಕ್ಯರ ಆಳ್ವಿಕೆಯ ಪ್ರಾಂತ್ಯಗಳಲ್ಲಿ ಒಂದಾಗಿದ್ದ ವೆಂಗಿ ಪ್ರಾಂತ್ಯವು ಜೈನಕವಿಗಳ ಪ್ರಮುಖ ಸ್ಥಾನವಾಗಿತ್ತೆಂಬ ಐತಿಹಾಸಿಕ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.
- ಪ್ರಸ್ತುತ ಪಟ್ಟಿಯಲ್ಲಿ ಸುಮಾರು 150 ಜನ ಕವಿಗಳ ವಿವರಗಳಿವೆ.
- ಪಟ್ಟಿಯನ್ನು ಕಿಟೆಲ್ಲರಂತೆ[3] ಅಕಾರಾದಿಯಾಗಿ ಜೋಡಿಸದೆ ಕಾಲಾನುಕ್ರಮದಲ್ಲಿ ಜೋಡಿಸಲಾಗಿದೆ.

---

1 ಈ ಉಪನ್ಯಾಸಗಳು ಅಚ್ಚಾಗಿವೆ. ನೋಡಿ - Narasimhacharya R., **History of Kannada Language**, 1969. P - 182–194, University of Mysore (ದ್ವಿ.ಮು.).

2 ಉದಾಹರಣೆಗೆ ನೋಡಿ : ತೀ.ನಂ. ಶ್ರೀಕಂಠಯ್ಯ 'ಭಾಷೆಗಳು' **ಕರ್ನಾಟಕದ ಪರಂಪರೆ**. ಸಂ-1. ಪು. 92. 93. 1970.

3 **'ನಾಗವರ್ಮನ ಕನ್ನಡ ಛಂದಸ್ಸು'**. ಇದರ ಪೀಠಿಕೆ - ಪು. XXIV – LXXXI.

- ಮೊದಲಿಗೆ AD. C 240 ಮುಂತಾದ ಕಾಲನಿರ್ದೇಶವಿದೆ. ಕಾಲದ ಬಗ್ಗೆ ಸಂಶಯವಿದ್ದಲ್ಲಿ ಮೊದಲಿಗೆ ಪ್ರಶ್ನಾರ್ಥಕ ಚಿನ್ಹೆಯನ್ನು ಹಾಕಿ ಅನಂತರ ಸರಿ ಎಂದು ಭಾವಿಸಲಾದ ಅಂದಾಜು ಕಾಲವನ್ನು ಸೂಚಿಸಿದೆ. ಕಾಲ ತಿಳಿಯದೇ ಇರುವ ಸಂದರ್ಭದಲ್ಲಿ ಹೆಸರಿನ ಮುಂದೆ ಚಿಕ್ಕ ಅಡ್ಡಗೆರೆಯೊಂದನ್ನು ಹಾಕಿ ವಿವರಣೆಯ ಸಂದರ್ಭದಲ್ಲಿ 'ಈತನ ಕಾಲ ತಿಳಿದಿಲ್ಲ' ಎಂಬ ಅಂಶವನ್ನು ಸೂಚಿಸಲಾಗಿದೆ.

- ಹೆಸರನ್ನು ದಪ್ಪಅಕ್ಷರಗಳಲ್ಲಿ ಕಾಲದ ಪಕ್ಕದಲ್ಲಿ ನಮೂದಿಸಿದೆ. ಅನಂತರ ಬಾಗಿದ ಅಕ್ಷರಗಳಲ್ಲಿ (Italics) ಆ ಕವಿಯ ನಾಮಾಂತರಗಳು, ಬಿರುದುಗಳು, ಇತರ ಕವಿಗಳು ಅವನನ್ನು ಹೆಸರಿಸಿರುವ ಬಗೆ - ಇವುಗಳನ್ನು ಕೊಟ್ಟಿದೆ. ನಾಮಾಂತರ ಅಥವಾ ಬಿರುದಿನ ಬಗ್ಗೆ ಸಂದೇಹವಿದ್ದಲ್ಲಿ ಪರ್ಯಾಯ ಹೆಸರುಗಳು ಆರಂಭವಾಗುವ ಮುನ್ನವೇ ಅದನ್ನು ಪ್ರಶ್ನಾರ್ಥಕ ಚಿನ್ಹೆಯಿಂದ ಸೂಚಿಸಿದೆ. *ಉದಾ :* Chamunda Raya, ? *Ganga-bhushana.*

- ಅನಂತರ ಕವಿಯ ಜೀವನದ ವಿವರಗಳು, ರಚಿಸಿದ ಕೃತಿಗಳು, ತುಂಬಾ ಪ್ರಮುಖ ಕವಿಯಾದರೆ ಆತನ ಕೃತಿಗಳ ಸ್ವರೂಪ, ಅದರ ವಸ್ತು, ವಿಶೇಷತೆ ಇತ್ಯಾದಿಗಳ ಚಿತ್ರಣವಿದೆ. ಅವಶ್ಯಕವೆನಿಸಿದಲ್ಲಿ ಮೂಲ ಪಾಠದ ಭಾಗಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಅಡಿಟಿಪ್ಪಣಿಗಳನ್ನಾಗಿ ಕೊಟ್ಟಿದೆ.

- ಪ್ರಮುಖರಲ್ಲದ ಅಥವಾ ಹೆಚ್ಚಿನ ವಿವರಗಳು ತಿಳಿದಿಲ್ಲದ ಜೈನ ಕವಿಗಳ ಮತ್ತು ಕೃತಿಗಳ ಹೆಸರುಗಳನ್ನು ಅಡಿಟಿಪ್ಪಣಿಯಲ್ಲಿ ಪಟ್ಟಿಮಾಡಿದೆ.

- ಜೈನ ಕವಿಗಳ ಪಟ್ಟಿ ಮುಗಿದನಂತರ ಲಿಂಗಾಯತ ಮತ್ತು ಬ್ರಾಹ್ಮಣ ಕವಿಗಳನ್ನು ಪ್ರಸ್ತಾಪಿಸುವ ಮೊದಲಿಗೆ 12ನೇ ಶತಮಾನದ ಚಾರಿತ್ರಿಕ ಹಾಗೂ ಧಾರ್ಮಿಕ ಸ್ಥಿತಿಯ ಅತಿಸ್ಥೂಲವಾದ ಪರಿಚಯವನ್ನು (ವಿಷ್ಣುವರ್ಧನ ಆಳ್ವಿಕೆಯ ಕಾಲ ದಲ್ಲಿ ರಾಮಾನುಜಾಚಾರ್ಯರ ಪ್ರಾಬಲ್ಯ; ಬಸವಣ್ಣನ ಕಾರ್ಯಗಳು, ಬಿಜ್ಜಳನ ಕೊಲೆ, ಕೃಷ್ಣದೇವರಾಯನ ಕಾಲದಲ್ಲಿ ಬ್ರಾಹ್ಮಣ ಕವಿಗಳಿಗೆ ಪ್ರಾಶಸ್ತ್ಯ ದೊರೆತದ್ದು ಇತ್ಯಾದಿ) ನೀಡಿ ನಂತರ ಪಟ್ಟಿಯನ್ನು ಹಿಂದಿನಂತೆಯೇ ಮುಂದುವರೆಸಿದೆ. 'ಈ ಭಾಗದ ಬರವಣಿಗೆಯು ಕಿಟೆಲರ ಕೃತಿಯನ್ನು ಆಧರಿಸಿದೆ' ಎಂಬ ಸೂಚನೆಯು ಅಡಿಟಿಪ್ಪಣಿಯಲ್ಲಿದೆ.

- ಹಿಂದಿನಂತೆ ಇಲ್ಲಿಯೂ ಪ್ರಸಿದ್ಧರ ವಿವರಗಳನಂತರ ಅಪ್ರಸಿದ್ಧ ಕೃತಿ - ಕರ್ತೃಗಳ ಹೆಸರುಗಳನ್ನು ಪಟ್ಟಿ ಮಾಡಿದೆ.

- ಹೊಸಗನ್ನಡದಲ್ಲಿ ರಚಿತವಾದ ಕೆಲವಾರು ಕೃತಿಗಳನ್ನು ಮಾತ್ರವೇ ಹೆಸರಿಸಿ 'ಸಾಹಿತ್ಯಕವಾಗಿ ಮಹತ್ವಪೂರ್ಣವಾದ ಕೆಲವು ಕೃತಿಗಳು ಈಗೀಗ ಮುದ್ರಿತ

ವಾಗುತ್ತಿವೆ. ಆದರೆ ಹಿಂದಿನ ಜನಪ್ರಿಯವಾದ ಕೃತಿಗಳ ಮರುಮುದ್ರಣದ ಕಾರ್ಯವೇ ಹೆಚ್ಚಾಗಿದೆ' ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ.

"ಆದರೂ ಪಾಶ್ಚಾತ್ಯ ವಿದ್ಯಾಭ್ಯಾಸದ ಪರಿಣಾಮವಾಗಿ ಸುಸಂಸ್ಕೃತರೆನಿಸಿಕೊಂಡವರಲ್ಲಿ ಹಿಂದಿನ ಯಕ್ಷಗಾನ ಕೃತಿಗಳಿಗಿಂತ ಮೇಲ್ವರ್ಗದ ನಾಟಕಗಳ ಬಗೆಗೆ ಆಸಕ್ತಿ ಹೆಚ್ಚಿದೆ. ಇದರ ಫಲವಾಗಿಯೇ ಶೇಕ್ಸ್‌ಪಿಯರನ 'Comedy of Errors' ತಿರುಮಲಾಚಾರ್ಯನಿಂದ 'ಭ್ರಾಂತಿವಿಲಾಸ' ಎಂಬ ಹೆಸರಿನಲ್ಲಿ ಮತ್ತು Cymbeline 'ಜಯಸಿಂಹ ರಾಜ ಚರಿತ್ರೆ' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. ಕಾಳಿದಾಸನ ಶಾಕುಂತಲಾವನ್ನು ಇಂಗ್ಲಿಷ್ ನಾಟಕಗಳಂತೆಯೇ ರಂಗದ ಮೇಲೆ ಪ್ರದರ್ಶಿಸಲು ಅನುವಾದಿಸಲಾಗಿದೆ. ಕಾದಂಬರಿಗಳನ್ನು ಬರೆಯುವ ಪ್ರಯತ್ನವೂ ಆರಂಭವಾಗಿದೆ" ಎಂಬ ಮಾತುಗಳೊಂದಿಗೆ ರೈಸ್ ಈ ಪಕ್ಷಿನೋಟವನ್ನು ಮುಗಿಸಿದ್ದಾರೆ.[1]

ಉಪಸಂಹಾರ ರೂಪದಲ್ಲಿ ರೈಸ್ ಆಡಿರುವ ಮಾತುಗಳಿವು :

"ಇಲ್ಲಿಗೆ ಪ್ರಾಚೀನಕಾಲದಿಂದ ಇಲ್ಲಿಯವರೆಗಿನ ಕನ್ನಡ ಸಾಹಿತ್ಯದ ಅವಲೋಕನವನ್ನು ಸಮಾಪ್ತಿಗೊಳಿಸಬಹುದು. ಇಂತಹುದೊಂದು ಪರಿಪೂರ್ಣವಾದ ಯಾದಿಯು ಈವರೆಗೆ ಪ್ರಕಟವಾಗಿರಲಿಲ್ಲ. ಈ ಪಟ್ಟಿಯಲ್ಲಿರುವ ಕೃತಿಗಳ ವ್ಯಾಪ್ತಿ ಮತ್ತು ವೈವಿಧ್ಯ ಯಾರನ್ನಾದರೂ ಅಚ್ಚರಿಗೊಳಿಸುವುದರಲ್ಲಿ ಸಂದೇಹವೇ ಇಲ್ಲ. ಅಂತೆಯೇ ಇನ್ನೂ ಪರಿಶೋಧಿತವಾಗಬೇಕಿರುವ ಕ್ಷೇತ್ರಗಳೂ, ಕೈವಶವಾಗಬೇಕಿರುವ ಭಾಷೆಯ ಆಕರಗಳೂ ಸಾಕಷ್ಟಿವೆ. ಪ್ರಾಚೀನ ಸಾಹಿತ್ಯ ಕೃತಿಗಳ ಶ್ರೇಷ್ಠತೆ ಹಾಗೂ ಇತ್ತೀಚಿನವುಗಳ ಮೌಲ್ಯಪತನ ಸರ್ವವೇದ್ಯ. ಆದರೆ ಈಗ ಕನ್ನಡಿಗರಲ್ಲಿ ತಮ್ಮ ಮಾತೃಭಾಷೆಯನ್ನು ಕುರಿತಾದ ಜಾಗೃತಿ ಹೆಚ್ಚುತ್ತಿದೆ. ಎಲ್ಲ ಪ್ರಾಕ್ತನಶಾಸ್ತ್ರಜ್ಞರ, ಅದರಲ್ಲೂ ವಿಶೇಷವಾಗಿ ಕರ್ನಾಟಕದ ಹಾಗೂ ದಕ್ಷಿಣ ಭಾರತದವರಿಗೆ ಉಪಯುಕ್ತವಾಗುವಂತಹ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕಾದ ಗುರುತರವಾದ ಹೊಣೆಗಾರಿಕೆ ಈಗಷ್ಟೇ ಮೈಸೂರು ಸಂಸ್ಥಾನದ ಆಡಳಿತವನ್ನು ಹಿಂದಕ್ಕೆ ಪಡೆದಿರುವ ದೇಶೀಯ ಅರಸರ ಮೇಲಿದೆ. ಅಂತಹ

1 ಪು. – XXXVII ದ ಭಾಗದ ಅನುವಾದ.

> *ಯೋಜನೆಗಳನ್ನು ಕೈಗೊಳ್ಳುವುದರಲ್ಲಿ ಪ್ರಸ್ತುತ ಕೃತಿಯು ಯಾವು ದಾದರೂ ರೀತಿಯಲ್ಲಿ ಪ್ರಚೋದಕವೋ ಅಥವಾ ಪೂರಕವೋ ಆದಲ್ಲಿ ಈ ಸಂಶೋಧನೆಯ ಕೆಲಸದಲ್ಲಿ ಪಟ್ಟ ಶ್ರಮ ಸಾರ್ಥಕವೂ, ಸಫಲವೂ ಆಗುವುದು."* [1]

ಪ್ರಸ್ತಾವನೆಯ ಕಡೆಯಲ್ಲಿ ಲೇಖಕರ ಮತ್ತು ಕೃತಿಗಳ ಅಕಾರಾದಿಗಳಿವೆ.

ಕನ್ನಡ ಕವಿ ಮತ್ತು ಕೃತಿಗಳನ್ನು ಪರಿಚಯಿಸುವ ರೈಸರ ಪ್ರಯತ್ನ ಗುಣ-ದೋಷ ಗಳೆರಡರಿಂದಲೂ ಕೂಡಿದೆ. 'ಇಂತಹುದೊಂದು ಪರಿಪೂರ್ಣವಾದ ಯಾದಿಯು ಈವರೆಗೆ ಪ್ರಕಟವಾಗಿರಲಿಲ್ಲ' ಎಂದೇನೋ ರೈಸರು ಹೇಳಿಕೊಂಡಿದ್ದಾರಾದರೂ ಈ ಮಾತು ಸಂಪೂರ್ಣವಾಗಿ ನಿಜವಲ್ಲ. ಏಕೆಂದರೆ 'ನಾಗವರ್ಮನ ಛಂದಸ್ಸು' ಎಂಬ ಶೀರ್ಷಿಕೆಯಲ್ಲಿ ಛಂದೋಂಬುಧಿಯನ್ನು ಪ್ರಕಟಿಸಿದ ಕಿಟೆಲ್‌ರೇ ಈ ಕೆಲಸವನ್ನು ತಮ್ಮ ಪ್ರಸ್ತಾವನೆಯಲ್ಲಿ ಮಾಡಿದ್ದಾರೆ. ಇದನ್ನು ರೈಸ್ ಗಮನಿಸಿದ್ದಾರೆ ಮಾತ್ರವಲ್ಲ, ಲಿಂಗಾಯಿತ ಕವಿಗಳನ್ನು ಕುರಿತಾದ ಮಾಹಿತಿಯನ್ನು ಅಲ್ಲಿಂದಲೇ ಪಡೆದು ಅದನ್ನು ನಮೂದಿಸಿಯೂ ಇದ್ದಾರೆ.

ಆದರೂ ರೈಸರ ಈ ಪ್ರಯತ್ನವು ಕೆಳಕಂಡ ಕಾರಣಗಳಿಗಾಗಿ ಉಪಯುಕ್ತವಾಗಿದೆ :

- ಈ ಮೊದಲೇ ಪ್ರಸ್ತಾಪಿಸಿದಂತೆ ರೈಸ್ ಕವಿಗಳ ವಿವರಗಳನ್ನು ಅಕಾರಾದಿ ಯಾಗಿ ಜೋಡಿಸದೆ ಕಾಲಾನುಕ್ರಮದಲ್ಲಿ ಜೋಡಿಸಿದ್ದಾರೆ. ಇದರಿಂದಾಗಿ ಬೇಕಾದ ವ್ಯಕ್ತಿಯ ವಿವರಗಳನ್ನು ಕೂಡಲೇ ಪಡೆಯುವುದು ಸಾಧ್ಯ.
- ಕಿಟೆಲ್ ತಮ್ಮ ಯಾದಿಯನ್ನು ಇತರ ಸಾಮಾನ್ಯ ಪಠ್ಯದಂತೆಯೇ ಮುದ್ರಿಸಿದ್ದಾರೆ. ಆದರೆ ಇಲ್ಲಿ ಅದನ್ನು ಒಂದರ ಕೆಳಗೆ ಒಂದು ಬರುವಂತೆ ವಿನ್ಯಾಸ ಮಾಡ ಲಾಗಿದೆ. ಇದೂ ಹುಡುಕುವ ದೃಷ್ಟಿಯಿಂದ ಅನುಕೂಲ.
- ಕೇವಲ ಸಾಹಿತ್ಯಕೃತಿಗಳನ್ನು ಮಾತ್ರ ಆಧರಿಸದೆ ಶಾಸನಗಳಲ್ಲಿಯ ವಿವರಗಳನ್ನೂ ಪರಿಗಣಿಸಿರುವುದರಿಂದ ಮಾಧವರಾಜ, ಅವಿನೀತ, ರವಿಕೀರ್ತಿ, ಮುಂತಾದವರನ್ನು ಕುರಿತಾದ ಮಾಹಿತಿ ಲಭ್ಯವಾಗಿದೆ.
- ಇಷ್ಟು ಜನ ಕವಿಗಳು, ಕೃತಿಗಳ ಬಗೆಗೆ ಒಂದೇ ಕಡೆ ಇಷ್ಟು ಮಾಹಿತಿ ಹಿಂದೆ ಲಭ್ಯವಿರುತ್ತಿರಲಿಲ್ಲ. ಕಿಟೆಲ್ ಮತ್ತು ರೈಸರ ಈ ಸಾಹಸದಿಂದ ಕನ್ನಡ ಸಾಹಿತ್ಯದ ಸಮಗ್ರ ನೋಟವು ಸಿಗುವಂತಾಯಿತು.
- ರೈಸ್ ಮತ್ತು ಕಿಟೆಲ್ ಕೈಗೊಂಡ ಈ ಪ್ರಯೋಗವನ್ನೇ ಮುಂದುವರೆಸಿ ಆರ್. ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ'ಯನ್ನು ಮೂರು ಬೃಹತ್ ಸಂಪುಟಗಳಲ್ಲಿ ಹೊರತಂದರು.

---

1 ಅಲ್ಲೇ.,

ಈ ಯಾದಿಗೆ ಕೆಲವು ಮಿತಿಗಳೂ ಇವೆ. ಅವೆಂದರೆ :

* ಕವಿಗಳ ಕಾಲನಿರ್ಣಯದ ವಿಷಯದಲ್ಲಿ ಆಗಿರುವ ವ್ಯತ್ಯಾಸಗಳು. ಈ ಪಟ್ಟಿಯಲ್ಲಿರುವ ಕೇವಲ ಕೆಲವು ಕವಿಗಳ ಕಾಲವನ್ನು ಬಿಟ್ಟರೆ (ಉದಾ : ಪಂಪ, ಅಗ್ಗಳ, ಭೀಮಕವಿ, ಇತ್ಯಾದಿ) ಅನೇಕರ ಬಗ್ಗೆ ರೈಸ್ ಸೂಚಿಸಿರುವ ಕಾಲಕ್ಕೂ, ಕಾಲನಿರ್ಣಯದ ವಿಷಯದಲ್ಲಿ ಬಹುಮಟ್ಟಿಗೆ ನಿಖರ ಎಂದೇ ಹೇಳಬಹುದಾದ ಆರ್. ನರಸಿಂಹಾಚಾರ್ಯರ ಕವಿಚರಿತೆಗೂ ತಾಳೆಯಾಗುವುದಿಲ್ಲ. ನಿದರ್ಶನಕ್ಕೆ ಸಮಂತಭದ್ರನ ಕಾಲ ಸುಮಾರು ಕ್ರಿ.ಶ. 650 ಎಂದು ರೈಸ್ ಊಹಿಸಿದ್ದಾರೆ. ಆದರೆ ನರಸಿಂಹಾಚಾರ್ಯರ ಪ್ರಕಾರ ಅದು ಕ್ರಿ.ಶ. 400. ಅಂತೆಯೇ ಕವಿಪರಮೇಷ್ಠಿ, (ರೈಸ್ - 670, ನರಸಿಂಹಾಚಾರ್ಯ - 550), ನಾಚಿರಾಜ (ರೈಸ್ - 1158, ನರಸಿಂಹಾಚಾರ್ಯ - 1300), ಕರ್ಣಪಾರ್ಯ (ರೈಸ್ - 1220, ನರಸಿಂಹಾಚಾರ್ಯ - 1140), ರಾಘವಾಂಕ (ರೈಸ್ - 1300, ನರಸಿಂಹಾಚಾರ್ಯ - 1165) ಇತ್ಯಾದಿ.

* ಕನ್ನಡ ಕವಿಗಳ ಈ ಪಟ್ಟಿಯನ್ನು ನಾಲ್ಕಾರು ಸಂಸ್ಕೃತ, ಕವಿಗಳೂ ಸೇರಿಹೋಗಿದ್ದಾರೆ. ವಿಕ್ರಮಾಂಕ ದೇವಚರಿತವನ್ನು ಬರೆದ ಬಿಲ್ಹಣ, ಶ್ಲೋಕವಾರ್ತಿಕಾಲಂಕಾರದ ಕವಿಯಾದ ವಿದ್ಯಾನಂದ, ರಾಘವಪಾಂಡವೀಯದ ಕರ್ತೃವಾದ ಶ್ರುತಕೀರ್ತಿ, ಹರ್ಷಚರಿತದ ಕವಿಯಾದ ಬಾಣ; ಉತ್ತರ ಪುರಾಣ, ಆತ್ಮಾನುಸಂಧಾನಗಳನ್ನು ಬರೆದ ಗುಣಭದ್ರ - ಮುಂತಾದವರೆಲ್ಲ ಹಾಗೆ ಸೇರ್ಪಡೆಯಾಗಿರುವವರು.

* ಪ್ರಬಂಧದ ಕೊನೆಯಲ್ಲಿ ಕೊಟ್ಟಿರುವ ಕವಿಗಳ ಹೆಸರುಗಳ ಅಕಾರಾದಿ ಪಟ್ಟಿಯಲ್ಲಿ ಒಬ್ಬನೇ ಕವಿಗಿರುವ ಬೇರೆಬೇರೆ ಹೆಸರುಗಳನ್ನು ಪ್ರತ್ಯೇಕ ಹೆಸರುಗಳೆಂಬಂತೆ ನಮೂದಿಸಿದೆ. ನಿದರ್ಶನಕ್ಕೆ ಅಕಳಂಕ ಮತ್ತು ಅಕಳಂಕಚಂದ್ರ ಎರಡೂ ಒಬ್ಬನೇ ವ್ಯಕ್ತಿಯ ಹೆಸರುಗಳು ಅಂತೆಯೇ ನಾಗಚಂದ್ರ-ಅಭಿನವ ಪಂಪ; ಕೇಶವ-ಕೇಶಿರಾಜ ಇತ್ಯಾದಿ. ಇದು ತೀರಾ ನಗಣ್ಯವಾದ ತಪ್ಪೆಂದು ಪರಿಗಣಿಸಬಹುದಾದರೂ 'ಪಂಪ' ಮುಂತಾದವರ ನಾಮಾಂತರವಾದ 'ಹಂಪ' ಎನ್ನುವುದನ್ನು ಪ್ರತ್ಯೇಕವಾಗಿ ತೋರಿಸಿರುವುದೂ ಅಲ್ಲದೆ ಕವಿತಾ ಗುಣಾರ್ಣವ, ಗುರುಪಂಪ, ಪೂರ್ಣಕವಿ, ಸುಕವಿ, ಜನಮನೋಮಾನಸೋತ್ತಂಸ, ಸುಜನೋತ್ತಂಸ, ಹಂಸರಾಜ ಎಂಬ ಬಿರುದುಗಳನ್ನೂ ಬೇರೆಬೇರೆ ವ್ಯಕ್ತಿಗಳ ಹೆಸರುಗಳೆಂಬಂತೆ ತೋರಿಸಿದೆ! ಹೀಗಾಗಿ ಪ್ರಬಂಧದಲ್ಲಿ ಉಲ್ಲೇಖಿತವಾಗಿರುವ ಕವಿಗಳ ಸಂಖ್ಯೆ ಸುಮಾರು 150. ಆದರೆ ಈ ಯಾದಿಯಲ್ಲಿ ಇರುವ ಹೆಸರುಗಳ ಸಂಖ್ಯೆ 252!

ಒಟ್ಟಾರೆಯಾಗಿ ಕನ್ನಡ ಸಾಹಿತ್ಯಚರಿತ್ರೆಯನ್ನು ಬರೆಯಬೇಕೆನ್ನುವ ರೈಸರ ಈ ಪ್ರಯತ್ನವನ್ನು ಗಮನಿಸಿದಾಗ ವೇದ್ಯವಾಗುವ ವಿಷಯವಿಷ್ಟು. ರೈಸ್ ತಮಗೆ ಲಬ್ಧವಿರುವ

ಸಾಹಿತ್ಯಕೃತಿ ಲೇಖಕರುಗಳನ್ನು ಮಾತ್ರ ಪರಿಗಣಿಸದೆ ನಾಗವರ್ಮ, ಕೇಶಿರಾಜ, ಮಲ್ಲಿಕಾರ್ಜುನ ಮುಂತಾದವರ ಕೃತಿಗಳಲ್ಲಿ ಬರುವ ಪೂರ್ವಕವಿ ಉಲ್ಲೇಖ-ಪ್ರಯೋಗ ಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಹಾಗಾಗಿ ಅವರು ಕೆಲವು ಸಂದರ್ಭದಲ್ಲಿ ತಪ್ಪು ನಿರ್ಣಯಗಳಿಗೆ ಬಂದಿರುವ ಸಾಧ್ಯತೆಗಳಿದೆ. ಅದರಲ್ಲಿಯೂ ವಿಶೇಷವಾಗಿ ಕವಿಗಳ ಕಾಲ-ದೇಶ-ಮತಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಚರ್ಚೆ ಈಗಲೂ ಮುಂದು ವರೆಯುತ್ತಿರುವುದೇ ಸಮಸ್ಯೆಯ ಜಟಿಲತೆಯನ್ನು ಎತ್ತಿ ತೋರಿಸುತ್ತದೆ. ಪರಿಸ್ಥಿತಿ ಹೀಗಿರು ವಾಗ ರೈಸರು ತಮಗೆ ಲಭ್ಯವಿದ್ದ ಅತ್ಯಂತ ಕಡಿಮೆ ಸೌಕರ್ಯ-ಸಾಧನಗಳಲ್ಲಿ ಇಂತಹು ದೊಂದು ಸಾಹಸವನ್ನು ಮಾಡಲು ಉದ್ಯುಕ್ತರಾದದ್ದೇ ಒಂದು ವಿಶೇಷ ಸಂಗತಿಯೆನ್ನಬೇಕು. ಅವರ ಈ ಪ್ರಯತ್ನ ಮುಂದೆ ಆರ್. ನರಸಿಂಹಾಚಾರ್ಯ, ಅಂಬಳೆ ವೆಂಕಟಸುಬ್ಬಯ್ಯ ಮುಂತಾದವರ ಕಾರ್ಯಗಳಿಗೆ ಅಡಿಪಾಯವನ್ನು ಒದಗಿಸಿತು ಎಂಬ ಅಂಶವನ್ನು ಪರಿಗಣಿಸಿದರೆ ರೈಸರೇ ಹೇಳಿದಂತೆ ಅವರ ಯತ್ನ ನಿಷ್ಫಲವಲ್ಲ.

★ ★ ★

ರೈಸ್ ಪ್ರಸ್ತುತ ಕೃತಿಯ ಪಠ್ಯಭಾಗವನ್ನು ಈ ರೀತಿಯಾಗಿ ಆಯೋಜಿಸಿ ಪ್ರಕಟಿಸಿದ್ದಾರೆ:

★ ಈ ಕೃತಿಯ ಪ್ರತಿಪುಟದಲ್ಲಿ ಮೇಲಿನ ಅರ್ಧಭಾಗವು ರೋಮನ್ ಲಿಪ್ಯಂತರ ಮತ್ತು ಇಂಗ್ಲಿಷ್ ಭಾಷಾಂತರಗಳಿಗೂ, ಕೆಳಗಿನ ಅರ್ಧಭಾಗವು ಕನ್ನಡ ಲಿಪಿಯ ಪಾಠಕ್ಕೂ ಮೀಸಲಾಗಿದೆ. ಇವೆರಡನ್ನೂ ಅಡ್ಡಗೆರೆಯಿಂದ ವಿಭಜಿಸಲಾಗಿದೆ.

★ ಇಂಗ್ಲಿಷ್ ವಿಭಾಗದಲ್ಲಿ ಮೊದಲಿಗೆ ಆಯಾ ವಿಭಾಗದ ಶೀರ್ಷಿಕೆಯ ಅರ್ಥ ವನ್ನು ಕಂಸಗಳಲ್ಲಿ ಸೂಚಿಸಲಾಗಿದೆ.
ಉದಾ : [I. The Alphabet]

★ ಅನಂತರ ಆ ವಿಭಾಗದ ಮೂಲ ಶೀರ್ಷಿಕೆಯ ರೋಮನ್ ಲಿಪ್ಯಂತರವಿರುತ್ತದೆ.
ಉದಾ : Samjna Vidhanam.

★ Sutra 1, Sutra 2 ಇತ್ಯಾದಿ ಸೂಚನೆಯೊಂದಿಗೆ ಅನಂತರದಲ್ಲಿ ಮೂಲ ಸೂತ್ರದ ರೋಮನ್ ಲಿಪ್ಯಂತರವಿದೆ.

★ ಅದರ ಕೆಳಗೆ Vritti ಎಂಬ ಸೂಚನೆ ಸಹಿತವಾಗಿ ಆಯಾಸೂತ್ರದ ವೃತ್ತಿಯ ಲಿಪ್ಯಂತರ ಕೊಟ್ಟಿದೆ.
ಕಡೆಯಲ್ಲಿ ಚಿಕ್ಕ ಅಕ್ಷರಗಳಲ್ಲಿ ಸೂಕ್ತ ವೃತ್ತಿಗಳ ತಾತ್ಪರ್ಯವನ್ನು ಇಂಗ್ಲಿಷ್ ಭಾಷೆ ಯಲ್ಲಿ, ಚೌಕಕಂಸಗಳಲ್ಲಿ ನಮೂದಿಸಿದೆ.

★ ಪುಟದ ಕೆಳ ಅರ್ಧಭಾಗಗಳಲ್ಲಿ ಇದೇ ವಿವರಗಳನ್ನು ಕನ್ನಡ ಲಿಪಿಯಲ್ಲಿ ನೋಡಬಹುದು. ಅದರೊಂದಿಗೆ ಹೆಚ್ಚುವರಿಯಾಗಿ ಹೊಸಗನ್ನಡ ತಾತ್ಪರ್ಯ ವನ್ನು ಸೇರಿಸಿದೆ.

★ ಅವಶ್ಯಕವಿದ್ದಲ್ಲಿ ಇದೆಲ್ಲದರ ಕೆಳಗೆ ಮತ್ತೊಂದು ಅಡ್ಡರೇಖೆಯನ್ನೆಳೆದು ಅದರ ಕೆಳಗೆ ಉಳಿದೆರಡು ಪ್ರತಿಗಳ ಪಾಠಾಂತರಗಳನ್ನೂ, ಬೇರೆಬೇರೆ ವಿಷಯ ಗಳನ್ನೂ ತೋರಿಸಲಾಗಿದೆ.

★ ಅನುಬಂಧದಲ್ಲಿ ಪಾಠಾಂತರಗಳ ಮತ್ತು ಉದಾಹರಣ ಶಬ್ದಗಳ ಸೂಚಿಗಳಿವೆ.

ಬಹುಶಃ ಸಂಪೂರ್ಣವಾಗಿ ರೋಮನ್ ಲಿಪಿಗೆ ಲಿಪ್ಯಂತರಗೊಂಡು ಪ್ರಕಟವಾದ ಕನ್ನಡದ ಮೊತ್ತ ಮೊದಲ ಕೃತಿ ಎಂಬ ಕೀರ್ತಿಗೆ ರೈಸರ ಈ ಆವೃತ್ತಿ ಭಾಜನವಾಗುತ್ತದೆ. ಕೇವಲ ಸಂಸ್ಕೃತ ಕೃತಿಗಳನ್ನು ಮಾತ್ರವೇ ಈ ರೀತಿಯಾಗಿ ಲಿಪ್ಯಂತರಗೊಳಿಸಿ ಪ್ರಕಟಿಸುವ ಅಭ್ಯಾಸವಿದ್ದ ಆ ಕಾಲದಲ್ಲಿ ರೈಸರು ದೇಶೀಯ ಭಾಷೆಯೊಂದರ ಕೃತಿಯನ್ನೂ ಅದೇ ರೀತಿಯಲ್ಲಿ ಪ್ರಕಟಿಸ ಹೊರಟಿದ್ದು ನಿಜವಾಗಿಯೂ ಸಾಹಸದ ಕೆಲಸವೇ ಆಗಿದೆ. ಈ ಬಗ್ಗೆ ಅವರು

> *"with the view of making it available for consultation by European scholars this edition has been printed in the roman character, as well as in Kannada for local use"* ಎಂದು ಕೃತಿಯ ಮುನ್ನುಡಿಯಲ್ಲಿ (ಪುಟ. V) ಸ್ಪಷ್ಟಪಡಿಸಿದ್ದಾರೆ.[1]

ರೈಸರ ಪರಿಷ್ಕರಣದಿಂದಾಗಿ ಕೇವಲ ಕನ್ನಡಿಗರಿಗೆ ಮಾತ್ರವಲ್ಲದೆ ಪಾಶ್ಚಾತ್ಯರಿಗೂ ಭಾಷಾಭೂಷಣದ ಪರಿಚಯವಾಯಿತೆನ್ನುವುದು ನಿಜವಾದರೂ ಗ್ರಂಥ ಸಂಪಾದನೆಯ ದೃಷ್ಟಿಯಿಂದ ಈ ಆವೃತ್ತಿ ದೋಷದೂರವೇನಲ್ಲ. ಈ ಪರಿಷ್ಕರಣದಲ್ಲಿ ಕಂಡು ಬರುವ ಓರೆಕೋರೆಗಳನ್ನು ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೀಗೆ ಗುರುತಿಸಿದ್ದಾರೆ :

> *"....... ರೈಸ್ ಅವರ ಭಾಷಾಭೂಷಣ ಪರಿಷ್ಕರಣದ ಪಾಠಮೌಲ್ಯ ಪುಸ್ತಕಂ ಅಳಸಿಂಗಳಾಚಾರಿಯವರ ಪರಿಷ್ಕರಣದ್ದಕ್ಕಿಂತ ಉತ್ತಮವಾಗಿರುವುದು ನಿಜ; ಆದರೆ ಈಚಿನ ಆರ್. ನರಸಿಂಹಾಚಾರ್ಯರ ಪರಿಷ್ಕರಣದೊಂದಿಗೆ ಹೋಲಿಸಿ ದಾಗ ಅದರ ದೋಷಗಳೂ ದೌರ್ಬಲ್ಯಗಳೂ ಎದ್ದು ತೋರುತ್ತವೆ. ಸೂತ್ರ, ವೃತ್ತಿ ಮತ್ತು ಪ್ರಯೋಗ ಈ ಮೂರಕ್ಕೂ ಇದು ಅನ್ವಯಿಸುತ್ತದೆ. ಇದರಲ್ಲಿ ಭಾಷಾ ದೋಷಗಳಿವೆ, ಕಾಗುಣಿತದ ತಪ್ಪುಗಳಿವೆ, ಆಶಯದ ವೈಪರೀತ್ಯ ಗಳಿವೆ. ಶಕಟರೇಫ ಮತ್ತು ಱಱಘಟಿತ ಶಬ್ದಗಳು ಸಾಮಾನ್ಯ ರೇಫ ಮತ್ತು ಕುಳ ಳಕಾರ ಘಟಿತ ಶಬ್ದಗಳಾಗಿ ಲಿಖಿತವಾಗಿದೆ. ನಾಗವರ್ಮನ ಬರೆದಿಲ್ಲದ*

1 ರೈಸರು ರೋಮನ್ ಲಿಪಿಯಲ್ಲಿ ಮೂಲಪಾಠವನ್ನು ಕೊಟ್ಟದ್ದರಿಂದ ಆದ ಉಪಯೋಗಕ್ಕೆ ಉದಾಹರಣೆಯೊಂದನ್ನು ಎಚ್.ಎಂ. ಶಂಕರನಾರಾಯಣರಾಯರು ಹೀಗೆ ದಾಖಲಿಸಿದ್ದಾರೆ :
"1958ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ 'ಭಾಷಾಧ್ಯಯನ ಶಿಬಿರ' ಸೇರಿತ್ತು. ಅದರಲ್ಲಿ ಪಾಲ್ಗೊಂಡಿದ್ದ ಸುಪ್ರಸಿದ್ಧ ಭಾಷಾವಿದ್ವಾಂಸರಾದ ಡಾ|| ಸುನೀತ ಕುಮಾರ ಚಟರ್ಜಿಯವರು ಭಾಷಾಭೂಷಣದ ಮಂಗಳಶ್ಲೋಕದಲ್ಲಿ ಅಡಕವಾಗಿದ್ದ ಭಾವದ ವೈಶಾಲ್ಯ ಔನ್ನತ್ಯಗಳನ್ನು ಕೊಂಡಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಯಸು ತ್ತೇನೆ. ಈ ಪದ್ಯ ಅವರ ಗಮನಕ್ಕೆ ಬಂದದ್ದು ರೈಸರ ಭಾಷಾಭೂಷಣದ ಸಂಸ್ಕರಣದಿಂದ. ('ಕರ್ಣಾಟಕ ಭಾಷಾ ಭೂಷಣಂ'ನ ಅರಿಕೆ. ಪು. VI, ಅಡಿಟಿಪ್ಪಣಿ. 1975, ಮೈಸೂರು)

'ತಾತ್ಪರ್ಯ' ವೆಂಬ ಸೂತ್ರಾರ್ಥವು 'ಪ್ರಯೋಗ'ದ ತರುವಾಯದಲ್ಲಿ ಆತನದೇ ರಚನೆಯೆಂದು ಭಾಸವಾಗುವಂತೆ ಗ್ರಂಥ ಶರೀರದಲ್ಲಿ ಸೇರಿ ಕೊಂಡಿದೆ....'' [1]

ಈ ಎಲ್ಲ ಅಂಶಗಳನ್ನು ಪರಿಗಣಿಸಿ ನೋಡಿದಾಗ ಕನ್ನಡ ಶಾಸ್ತ್ರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಬೇಕೆನ್ನುವ ರೈಸರ ಅಭಿಲಾಷೆಯ ಈ ಪ್ರಥಮ ಪ್ರಯತ್ನ ಕೆಲವು ಉತ್ತಮಾಂಶ ಗಳನ್ನು ಮತ್ತು ಹಲವು ದೋಷಗಳನ್ನು ಒಳಗೊಂಡು ಮಿಶ್ರಫಲವನ್ನು ನೀಡಿದೆ ಎಂಬ ತೀರ್ಮಾನಕ್ಕೆ ಬರಬಹುದು.

ಕರ್ಣಾಟಕ ಶಬ್ದಾನುಶಾಸನಂ :

ಭಟ್ಟಾಕಳಂಕನ (ಕ್ರಿ.ಶ. 1604) ಕರ್ಣಾಟಕ ಶಬ್ದಾನುಶಾಸನ ಕನ್ನಡ ವ್ಯಾಕರಣ ವನ್ನು ಕುರಿತಾದ ಸಂಸ್ಕೃತ ಗ್ರಂಥ. ರೈಸರು ಬಿಬ್ಲಿಯಾಥೆಕಾ ಕರ್ನಾಟಿಕಾ ಮಾಲೆಯ ಪುಸ್ತಕವಾಗಿ ಈ ಕೃತಿಯನ್ನು ಮೊತ್ತ ಮೊದಲ ಬಾರಿಗೆ ಪ್ರಕಟಿಸಿದರು. 1890ರಲ್ಲಿ ಈ ಕೃತಿ ಹೊರ ಬಂದಿತಾದರೂ ಅದಕ್ಕೆ ಸುಮಾರು 20 ವರ್ಷಗಳ ಹಿಂದಿನಿಂದಲೂ ಇದರ ಹಸ್ತಪ್ರತಿ ಗಳನ್ನು ತಾವು ಸಂಗ್ರಹಿಸುತ್ತಿದ್ದುದಾಗಿಯೂ ಕೇವಲ ಸಂಪಾದನೆ ಮಾತ್ರವಲ್ಲದೇ ಮುದ್ರಣವೂ ಸಾಕಷ್ಟು ಕಷ್ಟಕರವಾಗಿದ್ದುದರಿಂದ ಪ್ರಕಟಣೆ ಸಾಕಷ್ಟು ವರ್ಷಗಳನ್ನು ತೆಗೆದುಕೊಂಡಿತು ಎಂದು ಅವರು ಮುನ್ನುಡಿಯಲ್ಲಿ ತಿಳಿಸಿದ್ದಾರೆ.

ಎಷ್ಟು ಹಸ್ತಪ್ರತಿಗಳನ್ನು ಬಳಸಿ ಈ ಕೃತಿಯನ್ನು ಸಂಪಾದಿಸಲಾಗಿದೆ ಎಂಬ ವಿವರ ಎಲ್ಲಿಯೂ ಇಲ್ಲ. ''ಹಸ್ತಪ್ರತಿಗಳನ್ನು ನೀಡಿರುವುದಕ್ಕಾಗಿ ಶ್ರವಣಬೆಳಗೊಳದ ಬ್ರಹ್ಮಸೂರಿ ಶಾಸ್ತ್ರಿ, ಚಾಮರಾಜನಗರದ ಬ್ರಹ್ಮಸೂರಿ ಪಂಡಿತರು, ಮಂಗಳೂರಿನ ಎಫ್. ಕಿಟೆಲ್ ಮತ್ತು ಮೈಸೂರಿನ ಬಿ. ಮಲ್ಲಪ್ಪನವರಿಗೆ ಕೃತಜ್ಞನಾಗಿದ್ದೇನೆ'' ಎಂದಷ್ಟೇ ಅವರು ಸೂಚಿಸಿದ್ದಾರೆಯೇ ವಿನಃ ಎಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಲಾಯಿತು ಎಂಬ ಅಂಶ ದಾಖಲಾಗಿಲ್ಲ. ಟಿ.ವಿ. ವೆಂಕಟಾಚಲಶಾಸ್ತ್ರಿಯವರು ''ಅವರು(ರೈಸ್) ಕನಿಷ್ಠ ನಾಲ್ಕು ಹಸ್ತಪ್ರತಿಗಳನ್ನಾದರೂ ದೊರಕಿಸಿ ಕೊಂಡು ಕೆಲಸವನ್ನಾರಂಭಿಸಿದಂತೆ ತೋರುತ್ತದೆ'' ಎಂದು ಅಭಿಪ್ರಾಯಪಡುತ್ತಾರೆ.[2]

'ಭಾಷಾಭೂಷಣ'ದಂತೆಯೇ ಈ ಕೃತಿಯಲ್ಲಿಯೂ ಒಟ್ಟು 58 ಪುಟಗಳಷ್ಟು ವಿಸ್ತಾರವಾದ ಹಾಗೂ ಪಾಂಡಿತ್ಯಪೂರ್ಣವಾದ ಪ್ರಸ್ತಾವನೆ ಇದೆ. ಇದರಲ್ಲಿ ಮೊದಲಿಗೆ ಭಾರತೀಯ ಪರಂಪರೆಯಲ್ಲಿ ವ್ಯಾಕರಣದ ಅಧ್ಯಯನವು ಹೇಗೆ ಕ್ರಮಬದ್ಧವಾಗಿ, ಹಾಗೂ ವೈಜ್ಞಾನಿಕವಾಗಿ ಪ್ರಾಚೀನಕಾಲದಿಂದಲೂ ನಡೆಸಿಕೊಂಡು ಬಂದಿದೆ ಎನ್ನುವುದರ ಸ್ಥೂಲವಾದ ಚಿತ್ರಣವಿದೆ. ಸಂಸ್ಕೃತ ಭಾಷೆಯ ಪ್ರಮುಖ ವ್ಯಾಕರಣಕಾರರಾದ ಪಾಣಿನಿ, ಶಾಕಟಾಯನ,

1 ವೆಂಕಟಾಚಲಶಾಸ್ತ್ರೀ, ಟಿ.ವಿ. 'ಕಿಟೆಲ್ ಮತ್ತು ರೈಸ್ ಅವರ ಗ್ರಂಥ ಸಂಪಾದನ ವಿಧಾನಗಳು', **ಶಾಸ್ತ್ರೀಯ** ಸಂ.-1, ಪು. 227, 1999.

2 ವೆಂಕಟಾಚಲಶಾಸ್ತ್ರೀ, ಟಿ.ವಿ. *'ಕನ್ನಡ ಲಕ್ಷಣ ಗ್ರಂಥಗಳ ಸಂಪಾದನೆ'*, **ಶಾಸ್ತ್ರೀಯ** ಸಂ.-1, ಪು. 187, 1999.

ಪತಂಜಲಿ, ಪೂಜ್ಯಪಾದ ಮುಂತಾದವರುಗಳ ಜೀವನ ಮತ್ತು ಕೃತಿಗಳಿಗೆ ಸಂಬಂಧಿಸಿದಂತೆ ಗೋಲ್ಡ್‌ಸ್ಟಕರ್, ಬ್ಯಾಲಂಟೈನ್, ವಿಲಿಯಂಜೋನ್ಸ್, ಮ್ಯಾಕ್ಸ್‌ಮುಲ್ಲರ್, ಬರ್ನೆಲ್, ಕೀಲ್‌ಹಾರ್ನ್, ಈಗ್ಲಿಂಗ್, ಕೋಲ್‌ಬ್ರೂಕ್, ಮುಂತಾದ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ರೈಸ್ ಇಲ್ಲಿ ಸಂಗ್ರಹಿಸಿದ್ದಾರೆ. ಅಷ್ಟೇ ಅಲ್ಲದೆ ಇವರೆಲ್ಲರ ನಡುವೆ ಇರುವ ಅಭಿಪ್ರಾಯ ಭೇದಗಳನ್ನು ನಿವಾರಿಸಲು ಚಿಕ್ಕದೇವರಾಯರ ಕಾಲದಲ್ಲಿದ್ದ ಚಿದಾನಂದ ಕವಿಯ 'ಮುನಿವಂಶಾಭ್ಯುದಯ' ಎಂಬ ಕನ್ನಡ ಕೃತಿಯಲ್ಲಿನ ಮಾಹಿತಿಯನ್ನು ಉಲ್ಲೇಖಿಸುವುದರ ಮೂಲಕ ಚರ್ಚೆಗೆ ಹೊಸದೊಂದು ಆಯಾಮವನ್ನು ಕೊಟ್ಟಿದ್ದಾರೆ.

ಶಾಕಟಾಯನನ 'ಶಬ್ದಾನುಶಾಸನ' ಎಂಬ ಕೃತಿಯೇ ಭಟ್ಟಾಕಳಂಕನ 'ಕರ್ಣಾಟಕ ಶಬ್ದಾನು ಶಾಸನ'ಕ್ಕೆ ಮೂಲ ಆಕರವಾಗಿರುವುದರಿಂದ ಶಾಕಟಾಯನನಿಗೆ ಸಂಬಂಧಿಸಿದ ಹೆಚ್ಚಿನ ಚರ್ಚೆ ಇಲ್ಲಿದೆ. ಸಂಸ್ಕೃತ ಶಬ್ದಾನುಶಾಸನದ ಭಾಷ್ಯಕಾರರಾದ ಗಂಗೇಶ, ವೋಪದೇವ, ಜಿನೇಂದ್ರ, ಹೇಮಚಂದ್ರ ಮುಂತಾದವರ ಕೃತಿಗಳನ್ನೂ ಇಲ್ಲಿ ಪರಿಚಯಿಸಲಾಗಿದೆ. "ಪಾಣಿನಿ ಮುಂತಾದವರ ವ್ಯಾಕರಣವು ಬಹಳ ಜಟಿಲವೂ, ಸಂಕ್ಷಿಪ್ತವೂ, ಸಂಕೇತಾಕ್ಷರಗಳಿಗಿಂತ ನಿಬಿಡವೂ ಆಗಿದ್ದು ಭಾಷ್ಯ, ವ್ಯಾಖ್ಯಾನಗಳಿಲ್ಲದೆ ಅರ್ಥಮಾಡಿಕೊಳ್ಳಲು ಸಾಧ್ಯವೇ ಆಗದಷ್ಟರ ಮಟ್ಟಿಗೆ ಸಂದಿಗ್ಧವಾಗಿದೆ" ಎಂಬ ವಿಲಿಯಂ ಜೋನ್ಸ್, ಕೋಲ್‌ಬ್ರೂಕ್ ಮುಂತಾದ ಪಾಶ್ಚಾತ್ಯ ವಿದ್ವಾಂಸರ ಮಾತುಗಳನ್ನು ರೈಸ್ ಒಪ್ಪಿಲ್ಲ. ಬದಲಿಗೆ ಬ್ಯಾಲಂಟೈನ್ ಎಂಬ ವಿದ್ವಾಂಸ ಈ ಬಗ್ಗೆ ವ್ಯಕ್ತಪಡಿಸಿರುವ "ಪಾಣಿನಿಯ ವ್ಯಾಕರಣವು ಅತೀ ಹ್ರಸ್ವ, ಜಟಿಲ, ಸಂದಿಗ್ಧ ಎನ್ನುವುದು ತಪ್ಪು ಕಲ್ಪನೆ. ಇಲ್ಲಿಯ ಸೂತ್ರಗಳು ನ್ಯೂಟನ್ನನ ದ್ವಿಪದೋಕ್ತಿ ಪ್ರಮೇಯ (Binomial theorum), ಬೀಜಗಣಿತದ ಸಮೀಕರಣಗಳ ಸೂತ್ರಗಳಿದ್ದಂತೆ. ವ್ಯಾಕರಣ ಸೂತ್ರಗಳು ಇಷ್ಟು ಹ್ರಸ್ವವಾಗಿರುವುದರಿಂದಲೇ ಹಿಂದೂಜನ ಕಾಲಾನುಕಾಲದಿಂದ ಯಾವುದೇ ಪುಸ್ತಕ ಗಳನ್ನು ಅವಲಂಬಿಸದೆ ಅವನ್ನು ಕಂಠಸ್ಥ ಮಾಡಿಕೊಂಡಿದ್ದಾರೆ" ಎಂಬ ಅಭಿಪ್ರಾಯವನ್ನು ಎತ್ತಿಹಿಡಿದಿದ್ದಾರೆ.[1]

ಮುಂದಿನ ಹಂತದಲ್ಲಿ ರೈಸ್ ಕನ್ನಡದ ವ್ಯಾಕರಣ ಪರಂಪರೆಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ವೇ ಈ ನಿಟ್ಟಿನಲ್ಲಿ ಮೊತ್ತ ಮೊದಲು ರಚಿತವಾದ ಕೃತಿ ಎಂಬುದನ್ನು ಪ್ರಸ್ತಾಪಿಸಿ, ಅನಂತರ ಈ ಪರಂಪರೆಯನ್ನು ಕೇಶೀರಾಜ, ಭಟ್ಟಾಕಳಂಕ ಮುಂತಾದವರು ಮುಂದುವರೆಸಿದ್ದನ್ನು ವಿವರಿಸಿದ್ದಾರೆ. ಪ್ರಸ್ತುತ ಕೃತಿಯಾದ ಶಬ್ದಾನುಶಾಸನವನ್ನು ಅವರು ಶಾಕಟಾಯನನ ಸಂಸ್ಕೃತದ ಇದೇ ಹೆಸರಿನ ಕೃತಿಯೊಂದಿಗೆ ಹೋಲಿಸಿ ನೋಡಿದ್ದಾರೆ. "ಶಾಕಟಾಯನ ಹಾಗೂ ಹೇಮಚಂದ್ರರು ಬಳಸಿ ಪ್ರಸಿದ್ಧವಾಗಿರುವ 'ಶಬ್ದಾನುಶಾಸನ' ಎಂಬ ಹೆಸರನ್ನೇ ಭಟ್ಟಾಕಳಂಕನೂ ಬಳಸಿಕೊಂಡಿರು ವುದು ವಿಶೇಷ. ಇಲ್ಲಿಯೂ ವಿಷಯವನ್ನು ಸೂತ್ರರೂಪದಲ್ಲಿಯೆ ಪ್ರತಿಪಾದಿಸಿದೆಯಾದರೂ ಪಾಣಿನಿಯ ಕ್ರಮವನ್ನು ಅನುಸರಿಸದೆ ಕಾತಂತ್ರ ಮತ್ತು ಕೌಮುದಿಯ ಮಾದರಿಯ

1 ಪು. - 4.

ಸರಳವಾದ ಮತ್ತು ಸ್ವಾಭಾವಿಕವಾದ ವಿಧಾನವನ್ನು ಬಳಸಿಕೊಂಡಿದೆ'' ಎಂದು ಹೇಳಿ ಕನ್ನಡದಂತಹ ದೇಶೀಯ ಭಾಷೆಗೂ ವ್ಯಾಕರಣವನ್ನು ರಚಿಸುವುದರ ಅಗತ್ಯವನ್ನು ಕುರಿತಂತೆ ಭಟ್ಟಾಕಳಂಕನು ಆಡಿರುವ ಮಾತುಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿಕೊಟ್ಟಿದ್ದಾರೆ. ಪೂರಕಮಾಹಿತಿಯಾಗಿ ತೆಲುಗಿನ ನನ್ನಯ ಭಟ್ಟನ ವ್ಯಾಕರಣ, ತಮಿಳಿನ ತೊಲ್ಕಾಪ್ಪಿಯಂ ಮತ್ತು ನನ್ನೂಲ್‌ಗಳ ಪರಿಚಯವನ್ನು ಅವರು ನೀಡಿದ್ದಾರೆ.

ಪ್ರಸ್ತಾವನೆಯ ಎರಡನೆಯ ಭಾಗವಾಗಿ 'The Literature of Karnataka' ಎಂಬ ಶೀರ್ಷಿಕೆಯಲ್ಲಿ ರೈಸರು ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಚರಿತ್ರೆಯನ್ನು ಸುಮಾರು 40 ಪುಟಗಳಲ್ಲಿ ಸಮೀಕ್ಷಿಸಿದ್ದಾರೆ.

> *''ಇಂತಹುದೇ ಒಂದು ಪ್ರಬಂಧವನ್ನು 1884ರಲ್ಲಿ ಪ್ರಕಟವಾದ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ಕ್ಕೆ ನಾನು ಬರೆದ ಪ್ರಸ್ತಾವನೆಯಲ್ಲಿಯೂ ಕಾಣಬಹುದು. ಆದರೆ ಅಲ್ಲಿಂದ ಈಚೆಗೆ ನಡೆದಿರುವ ಸಂಶೋಧನೆಗಳಿಂದಾಗಿ ಎಷ್ಟೋ ಹೊಸ ಮಾಹಿತಿಗಳು, ಅದರಲ್ಲಿಯೂ ವಿಶೇಷವಾಗಿ ಕನ್ನಡದ ಪ್ರಾಚೀನ ಕೃತಿಗಳಿಗೆ ಸಂಬಂಧಿಸಿದವು ಲಭ್ಯವಾಗಿವೆ. ಹಾಗಾಗಿ ಪ್ರಸ್ತುತ ಪ್ರಕಟಣೆಯು ಹೊಸದಾಗಿ ಸಂಗ್ರಹವಾಗಿರುವ ಎಲ್ಲ ಸಂಗತಿಗಳನ್ನು ದಾಖಲಿಸಲು ಸೂಕ್ತ ಮಾಧ್ಯಮವೆಂದು ಪರಿಗಣಿಸಿ ಈ ಪ್ರಬಂಧವನ್ನು ಸೇರಿಸಿದೆ''* ಎನ್ನುವುದು ಅವರ ಸಮರ್ಥನೆ.[1]

ಭಾಷಾಭೂಷಣದಲ್ಲಿಯ ಪ್ರಬಂಧದಂತೆಯೇ ಇಲ್ಲಿಯೂ ಕನ್ನಡ ಶಬ್ದದ ನಿಷ್ಪತ್ತಿ; ಉಪಭಾಷೆಗಳು; ಪೂರ್ವದ ಹಳೆಗನ್ನಡ, ಹಳೆಗನ್ನಡ ಮತ್ತು ಹೊಸಗನ್ನಡಗಳೆಂಬ ಘಟ್ಟಗಳು; ಕನ್ನಡ ಮತ್ತು ಸಂಸ್ಕೃತದ ಸಂಬಂಧ; ಕನ್ನಡ ಭಾಷೆಯನ್ನು ಮಾತನಾಡುವ ಜನಗಳಿರುವ ಪ್ರದೇಶ ಮುಂತಾದ ವಿಷಯಗಳನ್ನು ಕುರಿತಾದ ವಿಸ್ತೃತ ಮಾಹಿತಿ ಇದೆ.

ಕನ್ನಡವನ್ನು ಮಾತನಾಡುವ ಜನರಿರುವ ಪ್ರದೇಶವನ್ನು 'ಕೆನರಾ' ಎಂದೂ, ಕನ್ನಡವನ್ನು ಕ್ಯಾನರೀಸ್ ಉಚ್ಚರಿಸುವುದರ ಬಗ್ಗೆ ರೈಸ್ ಇಲ್ಲಿ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

> *'' 'ಕರ್ನಾಟಕ' ಎಂಬ ಶಬ್ದದ ನಿಷ್ಪತ್ತಿ ಏನೇ ಇರಲಿ, ಸ್ಥಳೀಯರ ಪಾಲಿಗೆ ಈ ನೆಲ ಕನ್ನಡ ನಾಡು, ಅವರು ಆಡುವ ನುಡಿ ಕನ್ನಡ ಭಾಷೆ. ಪಾಶ್ಚಾತ್ಯರು 'ಕನ್ನಡ' ಎನ್ನುವುದನ್ನು 'ಕೆನರಾ' ಎಂದು ಅಪಭ್ರಂಶಗೊಳಿಸಿರುವುದರಿಂದ ಇಲ್ಲಿಯ ಜನ ಆಡುವ ಭಾಷೆಗೆ 'ಕೆನರೀಸ್' (Canarese) ಎಂಬ ತಪ್ಪು*

1 ಪು. - 11ರ ಭಾಗದ ಅನುವಾದ.

ಹೆಸರು ಬಂದಿದೆ. ಮದ್ರಾಸ್ ಪ್ರಾಂತ್ಯದಲ್ಲಿ Kanarese ಎಂದೂ, ಮುಂಬೈ ಪ್ರಾಂತ್ಯದಲ್ಲಿ Kaanarese ಎಂದೂ ಬಳಕೆಯಾಗುತ್ತಿರುವ ಈ ಹೈಬ್ರೀಡ್ ಶಬ್ದದ ಬಳಕೆಯನ್ನು ಬದಲಿಸಿ ಉಚ್ಚರಿಸಲು ಸ್ವಲ್ಪವೂ ಕಷ್ಟವಿಲ್ಲದ 'ಕನ್ನಡ' ಎಂಬ ಪದವನ್ನು ಬಳಕೆಗೆ ತರಲು ವಿಶ್ವವಿದ್ಯಾನಿಲಯಗಳು ಮತ್ತು ಸ್ಥಳೀಯ ಸರ್ಕಾರಗಳು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು. ತಮಿಳು, ತೆಲುಗು, ಮಲೆಯಾಳಗಳಂತಹ ಕನ್ನಡದ ಜ್ಞಾತಿ ಭಾಷೆಗಳ ಹೆಸರುಗಳು ಅವುಗಳ ಮೂಲರೂಪದಲ್ಲಿಯೇ ಬಳಕೆಯಾಗುತ್ತಿರುವಾಗ, ಈ ಪದಗಳು ಆಯಾ ಭಾಷೆಯನ್ನಾಡುವ ಜನಗಳನ್ನೂ ಸಂಕೇತಿಸುತ್ತಿರುವಾಗ ಕನ್ನಡದ ಸಂದರ್ಭ ದಲ್ಲಿ ಮಾತ್ರ ಕನ್ನಡ ಭಾಷೆ ಅಥವಾ ಜನಾಂಗವನ್ನು ಪ್ರತಿನಿಧಿಸದ, ಸ್ಥಳೀಯ ಜನಗಳಿಗೆ ಅಪರಿಚಿತವಾದ Canarese, Kaanarese, Kanarese ಮುಂತಾದ ಅರ್ಥಹೀನ ಶಬ್ದಗಳನ್ನು ಬಳಸಬೇಕೇಕೆ?" ಎಂದು ಅವರು ಕಟುವಾಗಿ ಟೀಕಿಸಿದ್ದಾರೆ.[1]

ಪ್ರಸ್ತುತ ಪ್ರಬಂಧದಲ್ಲಿಯೂ ಭಾಷಾಭೂಷಣದಲ್ಲಿಯ ಪ್ರಬಂಧದಲ್ಲಿರುವಂತೆಯೇ ಸುಮಾರು 150 ಮಂದಿ ಕವಿಗಳ ಕಾಲ-ಕೃತಿಗಳನ್ನು ಕುರಿತಾದ ವಿವರಗಳಿವೆ. ಮಾಹಿತಿಯನ್ನು ಜೋಡಿಸಿರುವ ಕ್ರಮವೂ ಹಿಂದಿನಂತೆಯೇ. ಅವರೇ ಹೇಳಿದಂತೆ ಕೆಲವರ ವಿವರಗಳಲ್ಲಿ ಹೆಚ್ಚಿನ ಬದಲಾವಣೆ ಏನೂ ಇಲ್ಲ. ಮತ್ತೆ ಕೆಲವರ ಕಾಲ ಸಾಕಷ್ಟು ಬದಲಾಗಿದೆ. (ಉದಾ ಹರಣೆಗೆ : ಭಾಷಾಭೂಷಣದ ಪ್ರಕಾರ ಸಮಂತಭದ್ರನ ಕಾಲ ಕ್ರಿ.ಶ. 650. ಇಲ್ಲಿಯ ಪಟ್ಟಿಯ ಪ್ರಕಾರ ಕ್ರಿ.ಶ. 138. ಅಂತೆಯೇ, ಪೂಜ್ಯಪಾದ (ಕ್ರಮವಾಗಿ 690 ಮತ್ತು 470), ಅಕಳಂಕ (788 ಮತ್ತು 855), ಗುಣವರ್ಮ (1100 ಮತ್ತು 870) ಇತ್ಯಾದಿ. ಹಿಂದಿನ ಪಟ್ಟಿಯಲ್ಲಿ ಇರದಿದ್ದ ಅಜಿತಸೇನ, ಅಮೋಘವರ್ಷ, ಆಂಡಯ್ಯ ಮುಂತಾದ ಕವಿಗಳ ಹಾಗೂ ಆಚಾರಸಾರ, ಅಲಂಕಾರ ಚಿಂತಾಮಣಿ, ಆನಂದ ರಾಮಾಯಣ, ಸಾಳ್ವಭಾರತ ಮುಂತಾದ ಕೃತಿಗಳ ವಿವರಗಳು ಸೇರ್ಪಡೆಯಾಗಿವೆ. ಭಾಷಾಭೂಷಣ ದಲ್ಲಿಯ ಪ್ರಬಂಧದ ಗುಣ-ದೋಷಗಳೇ ಇಲ್ಲಿಯೂ ಮುಂದುವರೆದಿವೆ.

★ ★ ★

ಶಬ್ದಾನುಶಾಸನದ ಪ್ರಸ್ತುತ ಪರಿಷ್ಕರಣದ ರೂಪರೇಖೆಗಳು ಹೀಗಿವೆ :

* ಮೊದಲಿಗೆ ರೋಮನ್ ಲಿಪ್ಯಂತರದಲ್ಲಿ ಸೂತ್ರ, ವೃತ್ತಿ, ಪ್ರಯೋಗ ಮತ್ತು ವ್ಯಾಖ್ಯೆಗಳನ್ನು ಕ್ರಮವಾಗಿ ಕೊಟ್ಟಿದೆ.
* ಸೂತ್ರದ ಅರ್ಥವು ಚಿಕ್ಕ ಅಕ್ಷರಗಳಲ್ಲಿ ಚೌಕಕಂಸಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿದೆ.

1 ಪು. - 12ರ ಭಾಗದ ಅನುವಾದ.

* ಇಲ್ಲಿ ಬಳಕೆಯಾಗಿರುವ ವೃತ್ತಿಗೆ ಭಾಷಾಮಂಜರೀ ಎಂಬ ಹೆಸರೂ, ವ್ಯಾಖ್ಯೆಗೆ ಮಂಜರೀ ಮಕರಂದವೆಂಬ ಹೆಸರೂ ಇರುವುದನ್ನು ಸೂಚಿಸಿದೆ.
* ಸೂತ್ರ ಮತ್ತು ವ್ಯಾಖ್ಯೆಗಳನ್ನು ರೋಮನ್ ಲಿಪಿಯಲ್ಲಿ ಮುದ್ರಿಸುವಾಗ ಸಾಧ್ಯವಾದಷ್ಟೂ ಸಂಧಿಯನ್ನು ಬಿಡಿಸಿದೆ.
* ವ್ಯಾಖ್ಯಾನದಲ್ಲಿ, ವ್ಯಾಖ್ಯಾನಕಾರನು ವಿಷಯದ ಸ್ಪಷ್ಟನೆಗಾಗಿ ಉದ್ಧರಿಸಿರುವ ಗ್ರಂಥದ ಬೇರೆ ಬೇರೆ ಸೂತ್ರಗಳನ್ನು ಸೂಚಿಸಲು ಅಲ್ಲಲ್ಲೇ ಸೂತ್ರದ ಸಂಖ್ಯೆಗಳು ಸೂಚಿಸಿದೆ.
* ಬೇರೆಬೇರೆ ಪ್ರತಿಗಳಲ್ಲಿರುವ ಪಾಠಭೇದವನ್ನು ಎಲ್ಲಿಯೂ ಸೂಚಿಸಿಲ್ಲ.
* ಕನ್ನಡ ಲಿಪಿಯಲ್ಲಿ ಮುದ್ರಿಸುವಾಗ ಸೂತ್ರದ ಅರ್ಥವನ್ನು ವಿವರಿಸುವ ಇಂಗ್ಲಿಷಿನ ಟಿಪ್ಪಣಿಯೊಂದನ್ನು ಬಿಟ್ಟು ಉಳಿದಂತೆ ರೋಮನ್‌ಲಿಪಿಯ ಪಾಠದಂತೆಯೇ ಸೂತ್ರ-ವೃತ್ತಿ- ಪ್ರಯೋಗ-ವ್ಯಾಖ್ಯೆಗಳನ್ನು ಕ್ರಮವಾಗಿ ಕೊಡಲಾಗಿದೆ.
* ಗ್ರಂಥದ ಕೊನೆಯಲ್ಲಿ ಸೂತ್ರಪಾಠ, ಸೂತ್ರಗಳ ಅಕಾರಾದಿ ಮತ್ತು ಉದಾಹರಣೆಯಾಗಿ ಬಳಕೆಯಾಗಿರುವ ಕನ್ನಡ ಶಬ್ದಗಳ ಸೂಚಿಗಳನ್ನು ಅಳವಡಿಸಲಾಗಿದೆ.

ಆರ್. ನರಸಿಂಹಾಚಾರ್ಯರು 'ಶಬ್ದಾನುಶಾಸನ'ವನ್ನು ಹೊಸದಾಗಿ ಸಂಪಾದಿಸಿ 1923ರಲ್ಲಿ ಬೆಂಗಳೂರಿನಿಂದ ಪ್ರಕಟಿಸಿದರು. ಕೃತಿಯ ನಿರೂಪಣೆ, ವಿನ್ಯಾಸ ಮುಂತಾದವುಗಳಲ್ಲಿ ಅವರು ಸಾಕಷ್ಟು ಬದಲಾವಣೆಗಳನ್ನು ಮಾಡಿದ್ದಾರೆಯಾದರೂ ಪ್ರಸ್ತಾವನೆಯಲ್ಲಿ ಮಾತ್ರ ರೈಸರ ಪದ್ಧತಿಯನ್ನೇ ಬಹುಮಟ್ಟಿಗೆ ಅನುಸರಿಸಿದ್ದಾರೆ. ಈ ಎರಡೂ ಆವೃತ್ತಿಗಳನ್ನು ತೌಲನಿಕವಾಗಿ ಅಭ್ಯಸಿಸಿ ಟಿ.ವಿ. ವೆಂಕಟಾಚಲಶಾಸ್ತ್ರಿಗಳು ವ್ಯಕ್ತಪಡಿಸಿರುವ,

> *"ಶಬ್ದಾನುಶಾಸನದ ಸಂಪಾದನೆಯ ಪಾಠಮೌಲ್ಯ ರೈಸ್ ಅವರೇ ಸಂಪಾದಿಸಿದ 'ಭಾಷಾಭೂಷಣದ ಪಾಠಮೌಲ್ಯ'ಕ್ಕಿಂತ ಉತ್ತಮವಾದದ್ದು. ಆದರೆ ಆರ್. ನರಸಿಂಹಾಚಾರ್ಯರ ಪರಿಷ್ಕರಣವೆ ಇಲ್ಲಿಯೂ ಹೆಚ್ಚು ನಿರ್ದುಷ್ಟವಾದದ್ದು. ಈ ಕೃತಿಯ ಸಂಪಾದನೆಯಲ್ಲಿ (ರೈಸರು) ಶಾಸನಗಳ ಸಂಪಾದನೆಯಲ್ಲಿ ಅನುಸರಿಸುವ ಕೆಲವು ಕ್ರಮಗಳನ್ನು ಅನುಸರಿಸಿರುವುದರಿಂದ ಅಭ್ಯಾಸಿಗಳಿಗೆ ಸೌಕರ್ಯ ಕಡಿಮೆ. ಗ್ರಂಥ ಪಾಠವನ್ನು ಅನುಸ್ಯೂತವಾಗಿ ಮುದ್ರಿಸಿರುವುದರಿಂದಲೂ ಶಬ್ದರೂಪಗಳಿಂದಲೂ ಇದನ್ನು ತಿಳಿಯಬಹುದಾಗಿದೆ"* [1]

ಎಂಬ ಅಭಿಪ್ರಾಯವು ಪರಿಗಣನೆಗೆ ಯೋಗ್ಯವಾಗಿದೆ.

1 ವೆಂಕಟಾಚಲಶಾಸ್ತ್ರೀ, ಟಿ.ವಿ. ಪೂರ್ವೋಕ್ತ, ಪು.-187.

ಪಂಪರಾಮಾಯಣ :

'ಅಭಿನವ ಪಂಪ'ನೆಂದೇ ಪ್ರಖ್ಯಾತನಾದ ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ'ವನ್ನು ತಾವು 1882ರಲ್ಲಿ ಮೊತ್ತಮೊದಲ ಬಾರಿಗೆ ಪ್ರಕಟಿಸಿರುವುದಾಗಿ ರೈಸ್ 1892ರ ಪರಿಷ್ಕೃತ ಮುದ್ರಣದ ಪೀಠಿಕೆಯಲ್ಲಿ ಸೂಚಿಸಿದ್ದಾರೆ.[1] ಅದಕ್ಕೂ ಮುನ್ನ 1874 ರಲ್ಲಿ ತಾವು ಈ ಕೃತಿಯ ಐದು ಆಶ್ವಾಸಗಳನ್ನು 1876ರಲ್ಲಿ ನಡೆಯಲಿದ್ದ ಬಿ.ಎ. ಪರೀಕ್ಷೆಗಳ ಸಲುವಾಗಿ ಹಾಗೂ ಉಳಿದ ಐದು ಆಶ್ವಾಸಗಳನ್ನು ಮುಂದಿನ ವರ್ಷಗಳ ಪರೀಕ್ಷೆಗಳಿಗಾಗಿಯೂ ಪ್ರಕಟಿಸಿದ್ದಾಗಿಯೂ ಅವರೇ ಅಲ್ಲಿಯ ಅಡಿಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

> *"1882ರ ಆವೃತ್ತಿಯನ್ನು ಸಿದ್ಧಪಡಿಸುವ ವೇಳೆಗೆ ನನ್ನಲ್ಲಿದ್ದದ್ದು ಮೂರು ಓಲೆಗರಿಯ ಹಸ್ತಪ್ರತಿಗಳು. ಅವುಗಳಲ್ಲಿ ಅತ್ಯಂತ ಪ್ರಾಚೀನವಾದದ್ದು ಕಿಟೆಲ್ಲರಿಂದ ಎರವಲಾಗಿ ಬಂದ ಕ್ರಿ.ಶ. 1428ರಲ್ಲಿ ರಚಿತವಾದ ಪ್ರತಿ. ಆದರೆ ನಾನು ಮುಖ್ಯವಾಗಿ ಆಧರಿಸಿರುವುದು ಅನೇಕ ವರ್ಷಗಳಿಂದ ನನ್ನಲ್ಲಿದ್ದ ಶಕ 1517 (ಕ್ರಿ.ಶ. 1595)ರ ಪ್ರತಿಯನ್ನು. ಪರಿಷ್ಕೃತ ಆವೃತ್ತಿಯಲ್ಲಿ ಅನಂತರ ಪತ್ತೆಯಾದ ಹಸ್ತಪ್ರತಿಗಳನ್ನು ಬಳಸಿಕೊಂಡು ಅನೇಕ ತಿದ್ದುಪಡಿಗಳನ್ನು ಮಾಡಿದೆ".*

- ಇವಿಷ್ಟೇ ರೈಸ್ ಹಸ್ತಪ್ರತಿಗಳಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ.[2] ಪ್ರಾಚೀನವಾದ ಪಾಠವನ್ನು ಬಿಟ್ಟು ಅನಂತರದ ಪಾಠವನ್ನು ಅಂಗೀಕರಿಸಲು ತನಗಿದ್ದ ಕಾರಣಗಳು, ಅನಂತರದ ಹಸ್ತಪ್ರತಿಗಳ ವಿವರ, ತಿದ್ದುಪಾಡುಗಳನ್ನು ಮಾಡುವಾಗ ಅನುಸರಿಸಿರುವ ಕ್ರಮ ಇತ್ಯಾದಿ ಯಾವ ವಿಷಯಗಳ ಬಗೆಗೂ ಇಲ್ಲಿ ಮಾಹಿತಿ ಇಲ್ಲ. ಪಠ್ಯಭಾಗದಲ್ಲಿಯೂ ಎಲ್ಲಿಯೂ ಪಾಠಾಂತರಗಳು ನಮೂದಾಗಿಲ್ಲ. ಇಲ್ಲಿಯ ಪ್ರಕಟಣಾ ವಿಧಾನವನ್ನು ಗಮನಿಸಿ: "ಇದು ಪ್ರಾಯಶಃ ಆ ಕಾಲಕ್ಕೆ ಮೊದಲು ಕಲ್ಲಚ್ಚಿನ ಮತ್ತು ರೂಢಿಯ ಅಚ್ಚಿನ ಪುಸ್ತಕಗಳು, ಮುಖ್ಯವಾಗಿ ಪ್ರಾಚೀನ ಕನ್ನಡ ಗ್ರಂಥಗಳು ಪ್ರಕಟವಾಗುತ್ತಿದ್ದ ರೀತಿಯೇ ಇರಬೇಕೆಂದು ತೋರುತ್ತದೆ" ಎಂದು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.[3]

ಆದರೆ ಬಹುಶಃ ಅದಕ್ಕಿಂತ ಸೂಕ್ತವಾದ ಕಾರಣವೆಂದರೆ ಈ ಕೃತಿಯು ಪದೇಪದೇ ಪಠ್ಯಪುಸ್ತಕವಾಗಿ ಬಳಕೆಯಾಗುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಈ ವಿವರಣೆ ಅನವಶ್ಯ

1 ಪ್ರಸ್ತುತ ಅಧ್ಯಯನಕ್ಕೆ 1892ರ ಪರಿಷ್ಕೃತ ಆವೃತ್ತಿಯನ್ನು ಬಳಸಲಾಗಿದೆ.

2 ಅಲ್ಲೇ.. (ಅನುವಾದಿತ).

3 ಪೂರ್ವೋಕ್ತ, ಪು. 225.

ಎಂದು ರೈಸ್ ಭಾವಿಸಿದ್ದರು. ಪಾಠ-ಪಾಠಾಂತರ ಮುಂತಾದ ತಾಂತ್ರಿಕ ವಿವರಗಳಿಗಿಂತ ವಿದ್ಯಾರ್ಥಿಗಳಿಗೆ ಕವಿಪರಿಚಯ ಕೃತಿಯ ಕಥಾಸಾರ ಮುಂತಾದವು ಪರೀಕ್ಷೆಗೆ ಮುಖ್ಯ. ಹಾಗಾಗಿಯೇ ರೈಸ್ ಈ ಕೃತಿಗೆ 96 ಪುಟಗಳಷ್ಟು ಸುದೀರ್ಘವಾದ ಪೀಠಿಕೆಯನ್ನು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯದು 16 ಪುಟಗಳ ಪ್ರಸ್ತಾವನೆ ಮತ್ತು 80 ಪುಟಗಳ ಪ್ರಸ್ತುತ ಕೃತಿಯ ವಿಶ್ಲೇಷಣೆ ('Analysis of the poem') ಪ್ರಸ್ತಾವನೆ ಯಲ್ಲಿ ಭಾಷಾಭೂಷಣ ಅಥವಾ ಶಬ್ದಾನುಶಾಸನದಲ್ಲಿಯ ಪ್ರಸ್ತಾವನೆಗಳಲ್ಲಿರು ವಂತೆ ಕನ್ನಡ ಭಾಷೆ, ಸಾಹಿತ್ಯ ಮುಂತಾದವುಗಳನ್ನು ಕುರಿತಾದ ಪ್ರೌಢಪ್ರಬಂಧಗಳಿಲ್ಲ. ಬದಲಿಗೆ ಕವಿ ಪರಿಚಯ; ಅವನು ಉಲ್ಲೇಖಿಸುವ, ಅವನನ್ನು ಕೀರ್ತಿಸಿರುವ ಕವಿಗಳು; ಕೃತಿ ರಚಿತವಾಗಿರಬಹುದಾದ ಕಾಲ; ಬೌದ್ಧ ಸಾಹಿತ್ಯದಲ್ಲಿನ 'ದಶರಥ ಜಾತಕ'ವು ಜೈನ ರಾಮಾಯಣಕ್ಕೆ ಮೂಲವಾಗಿರಬಹುದಾದ ಸಾಧ್ಯತೆ ಇತ್ಯಾದಿ ವಿವರಗಳನ್ನು ಒಂಬತ್ತು ಪುಟಗಳಲ್ಲಿ ಸಂಕ್ಷಿಪ್ತವಾಗಿ ಕೊಟ್ಟಿದೆ. ಅನಂತರ ಪ್ರಸ್ತುತ ಕೃತಿಯಲ್ಲಿ 16 ಆಶ್ವಾಸಗಳಿರುವುದನ್ನು ಸೂಚಿಸಿ ಪ್ರತಿ ಆಶ್ವಾಸದ ವಿವರಗಳನ್ನು ಮೊದಲಿಗೆ ಚಿಕ್ಕದಾಗಿ ನೀಡಿದೆ. ಈ ಕಾವ್ಯದಲ್ಲಿ ಬಳಕೆಯಾಗಿರುವ ವಿವಿಧ ಛಂದಸ್ಸುಗಳ ಪಟ್ಟಿ ಮತ್ತು ತಮಿಳು, ತೆಲುಗು, ಮಲೆಯಾಳ ಮತ್ತು ತೊರವೆರಾಮಾಯಣಗಳ ಅತಿ ಸಂಕ್ಷಿಪ್ತ ಪರಿಚಯದೊಂದಿಗೆ ಈ ಪ್ರಸ್ತಾವನೆ ಮುಗಿದಿದೆ.

ಕೃತಿಯ ವಿಶ್ಲೇಷಣೆಯ ಭಾಗದಲ್ಲಿ ಮೊದಲಿಗೆ ಆಯಾ ಆಶ್ವಾಸದ ಸೂಚನೆ ಇದೆ. ಅನಂತರ ದುಂಡುಕಂಸಗಳಲ್ಲಿ ಪದ್ಯದ ಸಂಖ್ಯೆಯನ್ನು ನಮೂದಿಸಿ ಅದರ ಮುಂದೆ ಆಯಾ ಪದ್ಯದ ಸಾರಾಂಶವನ್ನು ಇಂಗ್ಲಿಷಿನಲ್ಲಿ ಸೂಚಿಸಿದೆ. (ಗದ್ಯಭಾಗವನ್ನು ಸೂಚಿಸಲು ಸಂಖ್ಯೆಯ ನಂತರ 'p' ಎಂಬ ಸಂಕೇತವನ್ನು ಬಳಸಲಾಗಿದೆ) ಆದರೆ ಹೀಗೆ ಮಾಡುವಾಗ ಆ ಪದ್ಯದ ಯಾವ ವಿಶೇಷತೆಯನ್ನೂ ಲೆಕ್ಕಕ್ಕೆ ಪರಿಗಣಿಸದೆ (ಉಪಮಾ, ರೂಪಕದಂತಹ ಅಲಂಕಾರ ಗಳು, ಭಾಷಾಪ್ರೌಢಿಮೆ, ಚಿತ್ರಕಶಕ್ತಿ ಇತ್ಯಾದಿ) ಕೇವಲ ಒಟ್ಟು ಅರ್ಥವನ್ನು ಮಾತ್ರ ಬಹು ಮಟ್ಟಿಗೆ ಒಂದೇ ಸಾಲಿನಲ್ಲಿ ಕೊಟ್ಟಿದೆ. ಉದಾಹರಣೆಗೆ :

ವ॥ ಅಂತುಸೊಗಯಿಸುವಸಜ್ಜೆವನೆಯೊಳಪರಾಜಿತಾಮಹಾದೇವಿಸರೋವರದೊಳಿರ್ಪ
ಜಲದೇವತೆಯಂತೆವಿಳಾಸತಳ್ಪತಳದೊಳಿರ್ಪದುಮಾಗಳುಪಚರಿತಗರ್ಭಾಧಾನ
ಮಂಗಳವಿಧಾನಂದಶರಥಮಹೀನಾಥಂನಿಜನಿರತಿಶಯರೂಪುದರ್ಪ್ಪನರೂಪದ
ರ್ಪ್ಪಮನದಿರ್ಪ್ಪೆಭೂಷಣಮಯೂಖಲೇಖೆಚಿತ್ರಭಿತ್ತಿಗೆನಿರ್ವ್ವಾಣಲೇಖೆಯೆನಿಸೆಚ
ರಣನಖಕಿರಣದಿನುಪಹಾರಕುಸುಮಂಗಳಂದ್ವಿಗುಣಿಸುತ್ತುಮೊಳಪುಗುವುದುಂ॥

- ತೃತೀಯಾಶ್ವಾಸ, 77ನೇ ಪದ್ಯದನಂತರ ವಚನ ಪು.-55

ಎಂಬ ಭಾಗಕ್ಕೆ ಇರುವ ಇಂಗ್ಲಿಷ್ ತಾತ್ಪರ್ಯ ಕೇವಲ 'Dasaratha enters it' (Bridal Chamber) ಎಂದಷ್ಟೇ.[1] ಇನ್ನು ಕೆಲವೆಡೆ ಅನೇಕ ಪದ್ಯಗಳನ್ನು ಸೇರಿಸಿ ಒಂದೇ ಸಾಲಿನ ವಿವರಣೆಯನ್ನು ಕೊಟ್ಟು ಮುಗಿಸಿದೆ. ನಿದರ್ಶನಕ್ಕೆ ಷೋಡಶಾಶ್ವಾಸದ 30, 31 ಹಾಗೂ 32ನೇ ಸಂಖ್ಯೆಯ ಇಡಿಯ ಭಾಗದ ತಾತ್ಪರ್ಯವನ್ನು 'The fire is transformed into a splendid throne and bears up Sita in sight of all' ಎಂದು ಮಾತ್ರ ನಮೂದಿಸಿದೆ.[2]

ಈ ರೀತಿಯ ತಾತ್ಪರ್ಯವನ್ನಲ್ಲದೆ ಹೆಚ್ಚಿನ ವಿಷಯಗಳನ್ನು ಹೇಳಬೇಕಾದಾಗ ಅವುಗಳನ್ನು ವಿರಳವಾಗಿ ಅಡಿಟಿಪ್ಪಣಿಯಲ್ಲಿ ಸೂಚಿಸಿದೆ. ಕವಿಯ ಭಾವನೆಯನ್ನು ಸ್ಪಷ್ಟಪಡಿಸುವ ಪದ್ಯಗಳು ಅತ್ಯಂತ ಪ್ರಮುಖವಾಗಿದ್ದಲ್ಲಿ ಅವುಗಳ ರೋಮನ್ ಲಿಪ್ಯಂತರವನ್ನೂ ಅಡಿಟಿಪ್ಪಣಿಯಲ್ಲಿಯೇ ಅಚ್ಚಿಸಿದೆ.

ಪ್ರಸ್ತುತ ಗ್ರಂಥವನ್ನು ರೈಸರು ಸಂಪಾದಿಸಿರುವ ರೀತಿಯನ್ನು ಹೀಗೆ ನಿರೂಪಿಸಬಹುದು:

- ✦ ಪದ್ಯಗಳನ್ನು ಮುದ್ರಿಸುವಾಗ ಮೊದಲಿಗೆ ಅವುಗಳ ಛಂದಸ್ಸನ್ನು ಸಂಕೇತಾಕ್ಷರಗಳಿಂದ ಸೂಚಿಸಿದೆ (ಶಾರ್ದೂಲವಿಕ್ರೀಡಿತಕ್ಕೆ 'ಶಾ', ಸ್ರಗ್ಧರೆಗೆ 'ಸ್ರ', ಗದ್ಯ 'ವ' ಇತ್ಯಾದಿ).
- ✦ ಅನಂತರ ವೃತ್ತ, ಕಂದ ಮುಂತಾದವುಗಳನ್ನು ನಾಲ್ಕು ಸಾಲುಗಳಲ್ಲಿಯೂ ಗದ್ಯಭಾಗವನ್ನು ಈಗಿನಂತೆ ನಿರಂತರವಾಗಿಯೂ ಮುದ್ರಿಸಿದೆ.
- ✦ ಕಂದವೃತ್ತಗಳ ಎಲ್ಲ ಪಾದಗಳನ್ನೂ ಒಂದರ ಕೆಳಗೆ ಒಂದು ಬರುವಂತೆ ನೀಡಿದೆ. ಇದರಿಂದಾಗಿ ದ್ವಿತೀಯಾಕ್ಷರ ಪ್ರಾಸ ಥಟ್ಟನೆ ಗಮನಕ್ಕೆ ಬರುತ್ತದೆ. ಮೊಗ್ಲಿಂಗ್ ಸಂಪಾದಿಸಿದ ಬಸವಪುರಾಣದ ಪದ್ಧತಿಗಿಂತ ಇದು ಭಿನ್ನವಾಗಿದೆ.
- ✦ ಗದ್ಯಪದ್ಯಗಳಲ್ಲಿ ಪದಪದಗಳ ನಡುವೆ ಯಾವುದೇ ಅಂತರವನ್ನು ತೋರಿಸದೆ ಮಣಿಗಳನ್ನು ಪೋಣಿಸಿದಂತೆ ಅಕ್ಷರಗಳನ್ನು ಹೊಂದಿದೆ. ಇದು ಶಾಸನಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ಕಂಡುಬರುವ ಕ್ರಮ. ಆದರೂ ಕೆಲವೆಡೆಗಳಲ್ಲಿ ಪದವಿಭಾಗ ಇರುವುದೂ ಉಂಟು.
- ✦ ಉರ್ವ್ವಿ, ಮಾರ್ಗ್ಗ, ವರ್ಗ್ಗ, ಸಂಪೂರ್ಣ್ಣಂ ಮುಂತಾದ ರೂಪಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.
- ✦ ಶಕಟರೇಫಘಟಿತ ಶಬ್ದಗಳನ್ನು ಸಾಮಾನ್ಯ ರೇಫದ ಶಬ್ದಗಳ ರೂಪದಲ್ಲಿಯೂ ೞಘಟಿತ ಶಬ್ದಗಳನ್ನು ಕುಳ ಳಕಾರ ಶಬ್ದಗಳ ರೂಪದಲ್ಲಿಯೂ ತೋರಿಸಿದೆ.
- ✦ ಪದ್ಯಗಳಿಗೆ ಆಶ್ವಾಸಾನುಸಾರವಾಗಿ ಕ್ರಮಸಂಖ್ಯೆಯನ್ನು ಕೊಟ್ಟಿದೆ.

---

1 ಪು.-22.

2 ಪು.-90.

- ✦ ಗ್ರಂಥಾಂತ್ಯದಲ್ಲಿ ಶುದ್ಧಾಶುದ್ಧ ಪತ್ರಿಕೆ ಇದ್ದು ಅದರಲ್ಲಿ ಮುದ್ರಣದೋಷದ ತಪ್ಪುಗಳನ್ನು ತಿದ್ದಿದೆ. ಆದರೆ ಇಲ್ಲಿ ಎಲ್ಲ ಕಡೆಯಲ್ಲೂ 'ಪುಟ' ಎಂಬುವ ರೂಪಕ್ಕೆ ಬದಲಾಗಿ 'ಪುಠ' ಎಂದೇ ಬಳಸಿದೆ!

ಹಸ್ತಪ್ರತಿಗಳಲ್ಲಿಯ ಸಾಮಾನ್ಯ ಲಿಪಿಕಾರ ಲೇಖನ ಸ್ಖಾಲಿತ್ಯಗಳನ್ನೂ ತಿದ್ದದೆ ಬಿಟ್ಟಿರುವುದು, ಪದಗಳ ನಡುವೆ ಅಂತರವನ್ನು ಸೂಚಿಸದೆ ಅಚ್ಚುಮಾಡಿರುವುದು, ರ-ಳಗಳ ವಿಷಯದಲ್ಲಿನ ಗೊಂದಲ- "ಮೇಲಿನ ಈ ಕಾರಣಗಳಿಂದಾಗಿ ಹಲವೆಡೆ ಮಿಥ್ಯಾಶಬ್ದಗಳು, ಅಶುದ್ಧ ಮತ್ತು ವಿಕೃತ ಶಬ್ದಗಳೂ ಅಲ್ಲಲ್ಲಿ ಕಾಣಿಸಿಕೊಂಡು, ಮೂಲಪಾಠದ ಸ್ವರೂಪ ಕೆಟ್ಟಿದೆ. ಜೊತೆಗೆ 'ಶುದ್ಧಾಶುದ್ಧ ಪತ್ರಿಕೆ' ಎಂಬ ತಿದ್ದುಪಡಿ ಭಾಗದಲ್ಲಿ ಅನೇಕ ಅಚ್ಚಿನ ತಪ್ಪುಗಳನ್ನು ತೋರಿಸಿದೆ. ಇವನ್ನು ಮನದಂದರೆ ಈ ಪರಿಷ್ಕರಣಕ್ಕೆ ಒಂದು ಹಸ್ತಪ್ರತಿಯ ಬೆಲೆಯನ್ನು ಮಾತ್ರ ಕೊಡಬಹುದಾಗಿದೆ'' ಎಂಬ ವೆಂಕಟಾಚಲ ಶಾಸ್ತ್ರಿಗಳ ಅಭಿಪ್ರಾಯ ವಾಗಲೀ[1] ಅಥವಾ "ರೈಸ್ ಅವರಿಗೆ ಕಿಟ್ಟೆಲ್ ಅವರಂತೆ ಶಾಸ್ತ್ರೀಯವಾಗಿ ಗ್ರಂಥ ಸಂಪಾದಿಸ ಬೇಕೆಂಬ ಕಳಕಳಿ ಇದ್ದಿತ್ತಾದರೂ ಅವರಷ್ಟು ಸಮರ್ಪಕವಾಗಿ ಪರಿಷ್ಕರಿಸುವುದು ಈ ಕೃತಿಯಲ್ಲಿ ಸಾಧ್ಯವಾಗಿಲ್ಲ'' ಎಂಬ ವೈ.ಸಿ. ಭಾನುಮತಿಯವರ ಮಾತುಗಳಾಗಲೀ[2] ಅಸತ್ಯ ವೇನಲ್ಲ. ಆದರೆ ಸುಮಾರು 2,300 ಕಂದವೃತ್ತಗಳನ್ನು ಮತ್ತು ಸಾಕಷ್ಟು ದೊಡ್ಡ ಗದ್ಯಭಾಗಗಳನ್ನು ಒಳಗೊಂಡ ಪಂಪರಾಮಾಯಣವನ್ನು ಮುದ್ರಿಸಲು ರೈಸರು ಕೈಗೆತ್ತಿ ಕೊಂಡಿದ್ದೇ ದೊಡ್ಡ ಸಾಧನೆ ಎನ್ನಬೇಕು. ಏಕೆಂದರೆ ಬಹುಶಃ 19ನೇ ಶತಮಾನದಲ್ಲಿ ಸುಮಾರು ಐದು ನೂರು ಪುಟಗಳಷ್ಟು ದೊಡ್ಡದಾದ ಇಷ್ಟು ದೊಡ್ಡ ಕಾವ್ಯವನ್ನು ಇನ್ನಾರೂ ಪ್ರಕಟಿಸಿದಂತೆ ತೋರುವು ದಿಲ್ಲ. ಹಾಗೂ ಈ ಕೃತಿಯನ್ನು ಸಂಪಾದಿಸಲು ರೈಸರಿಗೆ ಅವರದೇ ಆದ ಕೆಲವು ಮಿತಿಗಳಿದ್ದವು ಎನ್ನುವುದನ್ನೂ ಮರೆಯುವಂತಿಲ್ಲ. ಹಾಗಾಗಿ, ತನ್ನೆಲ್ಲ ಇತಿಮಿತಿಗಳ ನಡುವೆಯೂ "ಸಂಪಾದಿಸಿದ ಗ್ರಂಥಕ್ಕೆ ವಿವರವಾಗಿ ಕವಿಕಾವ್ಯವಿಚಾರವನ್ನು ಬರೆಯಲು ಮತ್ತು ಕಥಾಸಾರ ವನ್ನು ಸಮೀಕ್ಷಿಸಲು ಮುಂದಿನ ಗ್ರಂಥಸಂಪಾದಕರಿಗೆ ಮೇಲ್ಪಂಕ್ತಿಯಾಗುವಂತಹ'' ರೀತಿಯಲ್ಲಿ ರೈಸ್ ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ ಎಂದು ತೀರ್ಮಾನಿಸಬಹುದು.

ಪಂಪಭಾರತ :

ಕನ್ನಡದ ಆದಿಕವಿ ಎನಿಸಿದ ಪಂಪನನ್ನು ಸಾಹಿತ್ಯಪ್ರಪಂಚಕ್ಕೆ ಮೊತ್ತಮೊದಲ ಬಾರಿ ಪರಿಚಯಿಸಿದ ಕೀರ್ತಿ ರೈಸರಿಗೆ ಸಲ್ಲುತ್ತದೆ. Journal of Royal Asiatic Society ಯ 1882ರ ಜನವರಿ ಸಂಚಿಕೆಯಲ್ಲಿ ಇವರು ಬರೆದ 'The poet Pampa' ಎಂಬ ಲೇಖನವೇ ಪಂಪನನ್ನು ಕುರಿತಾದ ಬರಹಗಳಲ್ಲಿ ಮೊತ್ತಮೊದಲನೆಯದು. ಈ ಲೇಖನದಲ್ಲಿ ಅವರು ಪಂಪನ ವಂಶಾವಳಿ, ಅವನು ಪಂಡಿತರ ಪ್ರಾರ್ಥನೆಯಂತೆ 'ಕತೆಯ ಮೆಯ್ಗಿಡಲೀಯದೆ'

---

1 ಪೂರ್ವೋಕ್ತ ಪು. 225.

2 ಭಾನುಮತಿ ವೈ.ಸಿ., ***ಗ್ರಂಥಸಂಪಾದನೆ : ಕೆಲವು ಅಧ್ಯಯನ***, ಪು.-52.

ಸಮಸ್ತ ಭಾರತವನ್ನು ಪುಲಿಗೆರೆಯ ತಿರುಳ್ಗನ್ನಡದಲ್ಲಿ ಬರೆದದ್ದು, ಪಂಪಭಾರತವನ್ನಲ್ಲದೆ ಆದಿಪುರಾಣವನ್ನೂ ಅವನು ರಚಿಸಿರುವುದು ಮುಂತಾದ ವಿವರಗಳಿವೆ. ಅನಂತರ ಪಂಪನ ಆಶ್ರಯದಾತನಾದ ಅರಿಕೇಸರಿಯ ಚಾಲುಕ್ಯ ವಂಶ, ಅದರ ವಂಶವೃಕ್ಷ, ಪಂಪಭಾರತದಲ್ಲಿ ಉಲ್ಲೇಖಿತವಾಗಿರುವ ಚಾರಿತ್ರಿಕ ಅಂಶಗಳಿಗೆ ಶಾಸನಾಧಾರಗಳಿರುವುದು - ಮೊದಲಾದ ಮಾಹಿತಿ ಇದೆ. ಅದಕ್ಕೂ ಮುನ್ನ 'ಪಂಪ' ಎಂದರೆ ಪರಿಚಯವಿದ್ದವನು 'ಅಭಿನವ ಪಂಪ' ನೆನಿಸಿದ ನಾಗಚಂದ್ರ ಮಾತ್ರ. ಹಳೆಗನ್ನಡ ಸಾಹಿತ್ಯಕೃತಿಗಳನ್ನು ಸಾಕಷ್ಟು ಅಭ್ಯಸಿಸಿದ್ದ ಕಿಟೆಲ್ಲರೂ ಈ ತಪ್ಪುಗ್ರಹಿಕೆಯಿಂದ ದೂರವಾಗಿರಲಿಲ್ಲ .

The Poet Pampa ಲೇಖನ ಮತ್ತು ಪಂಪಭಾರತಗಳ ಪ್ರಕಟಣೆಯ ಮೂಲಕ ಈ ಸಂದಿಗ್ಧವನ್ನು ರೈಸ್ ನಿವಾರಿಸಿದರು.

ಪಂಪಭಾರತವನ್ನು ರೈಸ್ ಒಂದೂವರೆ ಹಸ್ತಪ್ರತಿಗಳ ನೆರವಿನಿಂದ 1898ರಲ್ಲಿ ಬಿಬ್ಲಿಯಾಥೆಕಾ ಮಾಲೆಯಲ್ಲಿ ಸಮಗ್ರವಾಗಿ ಪ್ರಕಟಿಸಿದರು. (ಅದಕ್ಕೂ ಮುನ್ನ 1881ರಲ್ಲಿ ಪ್ರಕಟವಾದ ಅವರೇ ಸಂಪಾದಿಸಿದ 'ಪದ್ಯಸಾರ'ದ ಐದನೇ ಮುದ್ರಣದಲ್ಲಿ ಇದರ ಆಯ್ದ ಪದ್ಯಗಳು ಪ್ರಕಟವಾಗಿರುವುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ). ಹಸ್ತಪ್ರತಿಯ ಸಂಗ್ರಹಕ್ಕೆ ತಾವು ಎಷ್ಟು ಕಷ್ಟಪಡಬೇಕಾಯಿತು ಎಂಬುದನ್ನು ಅವರು ಕೃತಿಯ ಪೀಠಿಕೆಯಲ್ಲಿ ಹೀಗೆ ವಿವರಿಸಿದ್ದಾರೆ :

> *"ಈ ಕಾವ್ಯದ ಸಮಗ್ರ ಹಸ್ತಪ್ರತಿಗಳನ್ನು ದೊರಕಿಸಿಕೊಳ್ಳುವುದು ಬಹಳ ಕಷ್ಟಕರವಾಯಿತು ಎಂದು ತಿಳಿಸಲು ವಿಷಾದವೆನಿಸುತ್ತದೆ. ಮೂಲೆಮೂಲೆಗಳಲ್ಲಿ ಹುಡುಕಿದರೂ ಏನೂ ಪ್ರಯೋಜನವಾಗಲಿಲ್ಲ. ಆ ಸ್ಥಳದಲ್ಲಿದೆ, ಇಲ್ಲಿ ಸಿಕ್ಕಬಹುದು ಎಂಬ ವದಂತಿಗಳನ್ನೂ ಬೆನ್ನು ಹತ್ತಲಾಯಿತು. ಯಾವುದೂ ಸಫಲವಾಗಲಿಲ್ಲ. ಹಾಗಾಗಿ ಪ್ರಸ್ತುತ ಪರಿಷ್ಕರಣವನ್ನು ಸಿದ್ಧಗೊಳಿಸಲು ಈವರೆಗೆ ಕೇವಲ ಎರಡು ಹಸ್ತಪ್ರತಿಗಳನ್ನು ಬಳಸಿಕೊಳ್ಳಲು ಸಾಧ್ಯವಾಗಿದೆ. ಇವುಗಳಲ್ಲಿ ಒಂದನ್ನು ನಾನು ಸುಮಾರು 20ಕ್ಕಿಂತ ಹೆಚ್ಚು ವರ್ಷಗಳ ಹಿಂದೆಯೇ ಮುದ್ರಣದ ಸಲುವಾಗಿ ಪ್ರತಿಮಾಡಿಸಿಕೊಂಡಿದ್ದೆ. ಇದರಲ್ಲಿ ಮೊದಲನೆಯ ಆಶ್ವಾಸ ಲುಪ್ತವಾಗಿದೆ. ಈ ಪ್ರತಿ ಜೈನವಿದ್ವಾಂಸರಾದ ದಿವಂಗತ ಬ್ರಹ್ಮಸೂರಿ ಶಾಸ್ತ್ರಿಗಳಿಂದ ಎರವಲಾಗಿ ಬಂತು. ಇದನ್ನು ಅವರಿಂದ ಪುಣೆಯ ಡೆಕ್ಕನ್ ಕಾಲೇಜು ಕೊಂಡುಕೊಂಡಿತ್ತು. ಇನ್ನೊಮ್ಮೆ ಅದನ್ನು ಪರಿಶೀಲನೆಗೆ ಎರವಲು ನೀಡಿದ ಆ ಸಂಸ್ಥೆಗೆ ನಾನು ಋಣಿಯಾಗಿದ್ದೇನೆ. ಅನಂತರ ಶ್ರೀಮನ್ಮಹಾರಾಜರವರ ಮೈಸೂರಿನ ಅರಮನೆಯ ಸರಸ್ವತೀ ಭಂಡಾರದಲ್ಲಿ ಒಂದು ಸಮಗ್ರಪ್ರತಿ ಪತ್ತೆಯಾಯಿತು. ಅದನ್ನು ಬಳಸಿಕೊಳ್ಳಲು ದಯಮಾಡಿ ನೀಡಲಾಯಿತು."* [1]

1 **ಪಂಪಭಾರತ,** ಪು. 13.

ಇವಿಷ್ಟು ವಿಷಯಗಳನ್ನು ಬಿಟ್ಟರೆ ರೈಸ್ ತಮ್ಮ ಪೀಠಿಕೆಯಲ್ಲಿ ಹೆಚ್ಚಿನ ವಿವರಗಳೇನನ್ನೂ ನೀಡಿಲ್ಲ. ಹಾಗಾಗಿ ಮೇಲ್ನೋಟಕ್ಕೆ ಈ ಕೃತಿಯ ಪರಿಷ್ಕರಣ ಮತ್ತು ಮುದ್ರಣದ ಕಾರ್ಯ ಸರಳವಾಗಿ ನಡೆದಂತೆ ತೋರುತ್ತದೆ. ಆದರೆ ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಈ ಬಗ್ಗೆ ಇನ್ನೂ ಕೆಲವು ಹೆಚ್ಚಿನ ವಿವರಗಳು ಲಭ್ಯವಿದ್ದು 1887ರಷ್ಟು ಹಿಂದೆಯೇ ರೈಸ್ ಈ ಗ್ರಂಥದ ಮುದ್ರಣದ ಕಾರ್ಯವನ್ನು ಆರಂಭಿಸಿ ಮಧ್ಯದಲ್ಲಿ ಅದನ್ನು ನಿಲ್ಲಿಸಿದರೆಂದು ತಿಳಿದು ಬರುತ್ತದೆ. ಈ ಎಲ್ಲ ಮಾಹಿತಿಯನ್ನು ಹೀಗೆ ಕ್ರೋಢೀಕರಿಸಬಹುದು :

ಪಂಪಭಾರತದ ಮುದ್ರಿತ ಪ್ರತಿಗಳು ಹೊರಬಿದ್ದದ್ದು 1898ರಲ್ಲಿಯಾದರೂ 1886ರಲ್ಲಿಯೇ ಕರ್ಣಾಟಕ ಶಬ್ದಾನುಶಾಸನದ ಜೊತೆಜೊತೆಗೇ ಇದರ ಮುದ್ರಣ ಕಾರ್ಯ ಆರಂಭವಾಗಿತ್ತು ಎಂಬುದು 1887ರ ವರದಿಯಲ್ಲಿನ

> *"In literature, Bhatta Kalanka Deva's Karnataka Sabdanu - Sasanam with its two comentaries, and Pampa's Vikramarjuna Vijaya called the Pampa Bharata are being carried through the press"* [1]

ಎಂಬ ಒಕ್ಕಣೆಯಿಂದ ತಿಳಿದುಬರುತ್ತದೆ. 1892ರಲ್ಲಿ ಈ ಮುದ್ರಣ ಕಾರ್ಯ ಸಮಾಪ್ತಿಗೊಂಡಿದೆ.[2] ಆದರೆ 1893 ಮಾರ್ಚ್ 31ಕ್ಕೆ ಸಲ್ಲಿಸಲಾದ ವರದಿಯಲ್ಲಿ

> *"There are some hopes also of obtaining a complete copy of the Vikramarjuna Vijaya or Pampa Bharata, which needed and the printed work has therefore been held back for the present, in order to allow of further collection"*[3] ಎಂಬ ಮಾತುಗಳಿವೆ.

ಬಹುಶಃ ಇಲ್ಲಿ ಸೂಚಿತವಾಗಿರುವುದು ಅರಮನೆಯ ಪ್ರತಿ ಎಂದು ತೋರುತ್ತದೆ. 1894-95ರ ಸುಮಾರಿಗೆ ಸಮಗ್ರ ಹಸ್ತಪ್ರತಿಯು ರೈಸ್‌ರ ಕೈಸೇರಿ ಪರಿಷ್ಕರಣೆಯ ಕಾರ್ಯ ಭರದಿಂದ ಸಾಗಿರುವುದು ಆ ವರ್ಷದ ವರದಿಯಲ್ಲಿ ದಾಖಲಾಗಿದೆ.[4] 1896ರಲ್ಲಿ ಪಂಪಭಾರತದ ಮುದ್ರಣ ಕಾರ್ಯ ಮರು ಆರಂಭಗೊಂಡು 1898ರಲ್ಲಿ ಮುಕ್ತಾಯವಾಯಿತೆಂಬ ಉಲ್ಲೇಖ ಆಯಾವರ್ಷದ ವರದಿಗಳಲ್ಲಿವೆ.

ಸುಮಾರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಒಂದು ಪ್ರತಿಯನ್ನು ಕಾಯ್ದಿಟ್ಟುಕೊಂಡು, ನಿರಂತರವಾಗಿ ಇತರ ಪ್ರತಿಗಳಿಗಾಗಿ ಹುಡುಕಿ ಅದು ದೊರೆಯದಿದ್ದಾಗ ಲಭ್ಯವಿರುವ

---

1 ARAD – ಪು. 4.

2 ಅಲ್ಲೇ; ಪು. 27.

3 ಅಲ್ಲೇ; ಪು. 31.

4 ಅಲ್ಲೇ; ಪು. 38.

ಮಾಹಿತಿಯಾದರೂ ಸಾರಸ್ವತಲೋಕಕ್ಕೆ ಪರಿಚಯವಾಗಲಿ ಎಂಬ ಉದ್ದೇಶದಿಂದ ಮುದ್ರಿಸ ಹೊರಟು ನಡುವೆ ಆಕಸ್ಮಿಕವಾಗಿ ಸಮಗ್ರವೆನ್ನಬಹುದಾದ ಮತ್ತೊಂದು ಪ್ರತಿ ದೊರೆತಾಗ ಮುದ್ರಿತವಾಗಿದ್ದ ಪ್ರತಿಗಳನ್ನು ತಿರಸ್ಕರಿಸಿ ಮರುಪರಿಷ್ಕರಣ, ಮುದ್ರಣಗಳಂತಹ ಕೆಲಸದಲ್ಲಿ ತೊಡಗಿದ್ದು ಗ್ರಂಥಸಂಪಾದನೆಯ ವಿಷಯದಲ್ಲಿ ರೈಸರಿಗಿದ್ದ ಕಳಕಳಿಗೂ, ಕೈಗೊಂಡ ಕಾರ್ಯವು ಸಾಧ್ಯವಾದಷ್ಟೂ ಪರಿಪೂರ್ಣವಾಗಿರಬೇಕೆಂಬ ದೃಢ ಸಂಕಲ್ಪಕ್ಕೂ ದ್ಯೋತಕವಾಗಿದೆ.

ರೈಸ್ ಸಂಪಾದಿತ ಪಂಪಭಾರತದ ಆವೃತ್ತಿಯಲ್ಲಿ ಮೊದಲಿಗೆ 13 ಪುಟಗಳಷ್ಟು ವಿಸ್ತಾರವಾದ ಪೀಠಿಕೆಯು (Introduction) ಇಂಗ್ಲಿಷಿನಲ್ಲಿದೆ. ಇದರಲ್ಲಿ ಮೊದಲು ಪಂಪನ ಆಶ್ರಯದಾತನಾದ ಅರಿಕೇಸರಿಯ ವಿವರಗಳಿವೆ. ಪಂಪನು ತನ್ನ ಭಾರತದ ಮೊದಲ ಆಶ್ವಾಸದಲ್ಲಿ ನೀಡಿರುವ ಚಾಲುಕ್ಯ ವಂಶದ ಚರಿತ್ರೆ, ಅರಿಕೇಸರಿಯ ವೃತ್ತಾಂತ ಅವನ ಬಿರುದುಗಳು ಮುಂತಾದವುಗಳನ್ನು ರೈಸ್ ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ.

ಪಂಪನನ್ನು ಕುರಿತಾದ ತಮ್ಮ ಲೇಖನದಲ್ಲಿ ಹಿಂದೆ ಪ್ರಕಟಿಸಿದಾಗ ಈ ವಿವರಗಳನ್ನು ಅದಕ್ಕೆ ಪ್ರತಿಕ್ರಿಯೆಯಾಗಿ ವಿವಿಧ ವಿದ್ವಾಂಸರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳನ್ನೂ ಅವರು ಇಲ್ಲಿ ಅಳವಡಿಸಿಕೊಂಡಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಸೋಮದೇವ ಕವಿಯ 'ಯಶಸ್ತಿಲಕ' ಎಂಬ ಕೃತಿಯನ್ನು ಸಂಪಾದಿಸಿದ ಪೀಟರ್‌ಸನ್, Dynasties of the Kanarese Districts of Bombay Presidencyಯ ಕರ್ತೃ ಜೆ.ಎಫ್. ಫ್ಲೀಟ್ ಮತ್ತು ಹಿರಿಯ ವಿದ್ವಾಂಸ ಭಂಡಾರ್ಕರ್‌ರದು. ಪೀಟರ್‌ಸನ್ ಮತ್ತು ಭಂಡಾರ್ಕರ್ ಇಬ್ಬರೂ ಪಂಪನ ಕೃತಿಯನ್ನು ಆಧರಿಸಿ ತಾನು ನೀಡಿರುವ ಚಾಲುಕ್ಯ ವಂಶಾವಳಿಯನ್ನು ಯಶಸ್ತಿಲಕ ದಲ್ಲಿಯ ವಿವರಗಳೊಂದಿಗೆ ಹೋಲಿಸಿ ರೈಸರ ಸಿದ್ಧಾಂತವನ್ನು ಪುರಸ್ಕರಿಸಿರುವುದನ್ನೂ, ಫ್ಲೀಟರು ಮೊದಲಿಗೆ ಅವರ ಕೃತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ಒಪ್ಪಿರಲಿಲ್ಲವಾದರೂ ಎರಡನೆಯ ಮುದ್ರಣದಲ್ಲಿ ಅಭಿಪ್ರಾಯವನ್ನು ಬದಲಿಸಿಕೊಂಡಿರುವುದನ್ನೂ ರೈಸ್ ಇಲ್ಲಿ ದಾಖಲಿಸಿದ್ದಾರೆ.

ಮುಂದಿನ ಹಂತದಲ್ಲಿ ರೈಸ್ ಪಂಪಭಾರತದ ಸ್ವರೂಪವನ್ನು ಕುರಿತು ಸ್ವಲ್ಪ ವಿವರಣೆಯನ್ನು ಕೊಟ್ಟಿದ್ದಾರೆ. ಕವಿಯು ಪ್ರತಿ ಆಶ್ವಾಸಕ್ಕೆ ಯಾವುದೇ ಶೀರ್ಷಿಕೆಯನ್ನು ಕೊಟ್ಟಿಲ್ಲದಿರುವುದು, ಆದರೂ ಹದಿನಾಲ್ಕನೇ ಆಶ್ವಾಸದ 52ನೇ ಪದ್ಯದನಂತರದ ಗದ್ಯದಲ್ಲಿ ಪ್ರತಿ ಆಶ್ವಾಸದ ಸಾರಾಂಶವನ್ನು ಒಂದೊಂದು ಸಾಲಿನಲ್ಲಿ ಸೂಚಿಸಿರುವುದು, ಮುಂತಾದವುಗಳನ್ನು ಪ್ರಸ್ತಾಪಿಸಿದ್ದಾರೆ. 'ಸ್ತ್ರೀಪರ್ವ' ಎಂಬ ಒಂದೇ ಒಂದು ಸೂಚನೆ ಮಾತ್ರವೇ ಮೂಲಮಹಾಭಾರತದಾಗಿದ್ದು ಉಳಿದೆಲ್ಲವೂ ಪಂಪನೇ ಸ್ವತಂತ್ರವಾಗಿ ಕೊಟ್ಟುದುದಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಭಾಷಿಕ ಅಧ್ಯಯನದ ದೃಷ್ಟಿ ಯಿಂದಲೂ ಪಂಪಭಾರತ ಎಷ್ಟು ಮಹತ್ವದ ಕಾವ್ಯ ಎಂಬುದನ್ನು ಸೂಚಿಸಿ ಇಲ್ಲಿ ಬಳಕೆ ಯಾಗಿರುವ ಕನ್ನಡ ಮತ್ತು ಸಂಸ್ಕೃತ ಛಂದಸ್ಸುಗಳ ಪಟ್ಟಿಯನ್ನು ಕೊಟ್ಟಿದೆ. ಸಾಳ್ವನ ಸಾಳ್ವಭಾರತ, ಬ್ರಹ್ಮಕವಿಯ ಜಿನಭಾರತ, ರನ್ನನ ಸಾಹಸಭೀಮವಿಜಯ ಮುಂತಾದ

ಮಹಾಭಾರತಸಂಬಂಧೀ ಕಾವ್ಯಗಳು ಕನ್ನಡದಲ್ಲಿದ್ದರೂ ಮೂಲ ಮಹಾಭಾರತ 16ನೇ ಶತಮಾನದವರೆಗೆ ಅನುವಾದಿತವಾಗಿರಲಿಲ್ಲ ಎಂಬ ವಿವರಗಳನ್ನು ತುಲನಾತ್ಮಕತೆಯ ಉದ್ದೇಶದಿಂದ ಇಲ್ಲಿ ಪ್ರತಿಪಾದಿಸಲಾಗಿದೆ.

ಸಾಧಾರಣವಾಗಿ ಯಾವುದೇ ಕೃತಿಯನ್ನು ಪರಿಚಯಿಸುವಾಗ ಕವಿಯನ್ನು ಕುರಿತ ವಿವರಗಳನ್ನು ಮೊದಲಿಗೆ ಚರ್ಚಿಸುವುದು ಈಗಿನ ಪದ್ಧತಿ. ಆದರೆ ಪಂಪ ತನ್ನ ಕಾವ್ಯದ ಕಡೆಯ ಆಶ್ವಾಸದಲ್ಲಿ ತನ್ನ ವೈಯಕ್ತಿಕ ವಿವರಗಳನ್ನು ಹೇಳಿಕೊಂಡಿರುವುದರಿಂದ ರೈಸರು ಕವಿಪರಿಚಯದ ವಿವರಗಳನ್ನು ತಮ್ಮ ಪೀಠಿಕೆಯ ಕಡೆಯಲ್ಲಿ ಕೊಟ್ಟಿದ್ದಾರೆ. ಹದಿನಾಲ್ಕನೇ ಆಭ್ಯಾಸದ 18 ಪದ್ಯಗಳಲ್ಲಿ (40ರಿಂದ 57ನೇ ಪದ್ಯಗಳು) ಇರುವ ಪಂಪನ ವೃತ್ತಾಂತವನ್ನು ಮೊದಲಿಗೆ ಯಥಾವತ್ತಾಗಿ ಹಾಗೆಯೇ ಇಂಗ್ಲೀಷಿಗೆ ಅನುವಾದಿಸಿಕೊಟ್ಟು ಅನಂತರ ಆದರ ಸಾರಾಂಶವನ್ನು ತಮ್ಮದೇ ಮಾತುಗಳಲ್ಲಿ ಮತ್ತೆ ವಿವರಿಸಿರುವುದು ಇಲ್ಲಿಯ ವಿಧಾನ. ಮೇಲೆ ಉಲ್ಲೇಖಿಸಲಾದ ಹಸ್ತಪ್ರತಿಗಳಿಗೆ ಸಂಬಂಧಿಸಿದ ಮಾತುಗಳೊಂದಿಗೆ ಈ ಪೀಠಿಕೆಯು ಸಮಾಪ್ತಿಗೊಂಡಿದೆ.

ಪಂಪರಾಮಾಯಣದ ಮುದ್ರಣದಲ್ಲಿರುವಂತೆಯೇ ಇಲ್ಲಿಯೂ 'Analysis of the Poem' ಎಂಬ ಶೀರ್ಷಿಕೆಯ ಆಂಗ್ಲಅರ್ಥವಿಶ್ಲೇಷಣೆಯ ಭಾಗವನ್ನು ಮೂಲಪಾಠಕ್ಕೆ ಮೊದಲಲ್ಲಿ ಕೊಟ್ಟಿದೆ. ಆಶ್ವಾಸದ ಸಂಖ್ಯೆಯನ್ನು ಮೊದಲಿಗೆ ರೋಮನ್ ಸಂಖ್ಯೆಯಲ್ಲಿ ಸೂಚಿಸಿ ಅನಂತರ ದುಂಡು ಕಂಸಗಳಲ್ಲಿ ಪದ್ಯದ ಸಂಖ್ಯೆಯನ್ನು ನಮೂದಿಸಿ ಆದರ ಮುಂದೆ ಆಯಾ ಪದ್ಯದ ಸಾರಾಂಶವನ್ನು ಇಂಗ್ಲೀಷಿನಲ್ಲಿ ಸೂಚಿಸಿದೆ. (ಇಲ್ಲಿಯೂ ಗದ್ಯವನ್ನು ಸೂಚಿಸಲು P ಎಂಬ ಸಂಕೇತವನ್ನು ಬಳಸಿದೆ) ಇಲ್ಲಿಯೂ ಕೇವಲ ಪದ್ಯದ ಒಟ್ಟು ಅರ್ಥಕ್ಕೆ ಮಾತ್ರ ಗಮನಕೊಡಲಾಗಿದೆ. ಅಲ್ಲಿಯಂತೆಯೇ ಇಲ್ಲಿಯೂ ನಾಲ್ಕಾರು ಪದ್ಯ-ಗದ್ಯಭಾಗಗಳನ್ನು ಒಟ್ಟಿಗೆ ಸೇರಿಸಿ ಅವಕ್ಕೆ ಒಂದೆರಡು ಸಾಲುಗಳಲ್ಲಿ ಅರ್ಥಬರೆದಿರುವುದೂ ಇದೆ. ಹೀಗೆ ಮಾಡಿರುವುದರಿಂದ ಕನ್ನಡ ಬಾರದ ಓದುಗರಿಗೆ ಕಥಾಭಾಗದ ಕಲ್ಪನೆ ಬರುತ್ತದೆಯಾದರೂ ಕಾವ್ಯರಸಾಸ್ವಾದನೆಗೆ ಈ ಟಿಪ್ಪಣಿಗಳಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದು.

ಪ್ರಸ್ತುತ ಗ್ರಂಥವನ್ನು ರೈಸರು ಸಂಪಾದಿಸಿರುವ ರೀತಿಯನ್ನು ಹೀಗೆ ಪಟ್ಟಿಮಾಡಬಹುದು.

- ✦ ಪದ್ಯಗಳ ಮೊದಲಿಗೆ ಅವುಗಳ ಛಂದಸ್ಸನ್ನು ಸಂಕೇತಾಕ್ಷರಗಳಿಂದ ಸೂಚಿಸಿದೆ. ಉತ್ಪಲಮಾಲೆಗೆ 'ಉ', ಚಂಪಕಮಾಲೆಗೆ 'ಚಂ', ವಚನಕ್ಕೆ 'ವ' ಇತ್ಯಾದಿ ಆದರೆ ರಗಳೆ, ಮಲ್ಲಿಕಾ ಮಾಲೆ, ಶಿಖರಿಣಿ ಮುಂತಾದ ಅಪರೂಪದ ಛಂದಸ್ಸುಗಳನ್ನು ಪೂರ್ಣಹೆಸರಿನಿಂದಲೇ ಸೂಚಿಸಿದೆ.
- ✦ ವೃತ್ತ, ಕಂದ ಮುಂತಾದವುಗಳನ್ನು ನಾಲ್ಕು ಸಾಲುಗಳಲ್ಲಿಯೂ ಗದ್ಯಭಾಗ ವನ್ನು ಈಗಿನಂತೆ ನಿರಂತರವಾಗಿಯೂ ಮುದ್ರಿಸಿದೆ.
- ✦ ಗದ್ಯಭಾಗಗಳ ಅಗಲವು ಪದ್ಯಭಾಗಗಳಿಗಿಂತ ಹೆಚ್ಚಿರುವಂತೆಯೂ ಮತ್ತು ಪದ್ಯ-ಪದ್ಯಗಳ ನಡುವೆ ಸಾಕಷ್ಟು ಅಂತರವಿರುವಂತೆಯೂ ಪುಟದ ಜೋಡಣೆ ಮಾಡಿರುವುದರಿಂದ ಪುಸ್ತಕದ ಅಂದ ಹೆಚ್ಚಿದೆ.

- ದ್ವಿತೀಯಾಕ್ಷರ ಪ್ರಾಸ ಥಟ್ಟನೆ ಗಮನಕ್ಕೆ ಬರುವಂತೆ ಕಂದವೃತ್ತಗಳ ಎಲ್ಲ ಪಾದಗಳನ್ನೂ ಒಂದರ ಕೆಳಗೆ ಒಂದು ಬರುವಂತೆ ಜೋಡಿಸಿದೆ.
- ಗದ್ಯ-ಪದ್ಯಗಳಲ್ಲಿ ಪದ-ಪದಗಳ ನಡುವೆ ಯಾವುದೇ ಅಂತರವನ್ನು ತೋರಿಸಿದರೆ ಶಾಸನಗಳಲ್ಲಿ ಕಂಡುಬರುವ ರೀತಿಯಲ್ಲಿ ಮಣಿಗಳನ್ನು ಪೋಣಿಸಿದಂತೆ ಅಕ್ಷರಗಳನ್ನು ಜೋಡಿಸಲಾಗಿದೆ.

ರೈಸರು ಸಂಪಾದಿಸಿದ ಉಳಿದ ಎಲ್ಲ ಗ್ರಂಥಗಳಿಗಿಂತ ಈ ಕೃತಿಯಲ್ಲಿ ಗ್ರಂಥ ಸಂಪಾದನಾ ಸೂತ್ರಗಳು ಬಹಳ ಚೆನ್ನಾಗಿ ಅನ್ವಯವಾಗಿರುವುದು ಕೆಳಕಂಡ ಅಂಶಗಳಿಂದ ಸ್ಪಷ್ಟವಾಗುತ್ತದೆ.

- ತ್ರುಟಿತ ಭಾಗಗಳನ್ನು ಚುಕ್ಕೆಗಳಿಂದ ಸೂಚಿಸಿದೆ.

  ಉದಾ: ಪಾರವಾರಿಧಿಗಳ್ಕಲಂಕಿದುವುದ್ದಮಯ್ಯನುದಗ್ರ ...।
  . . . . ಸಿಡಿಲ್ದ .॥
  . . . . ।
  ತಾರೆಗಳ್ನಭದಿಂದುದಿರ್ದ್ದುವುಪೆಂಪಿದೆಂತೊವರಾಹನಾ॥

  (ಅಷ್ಟಮಾಶ್ವಸ, 15ನೇ ಪದ್ಯ, ಪು. 169)

- ಊಹಾಪಾಠವನ್ನು ಚೌಕಕಂಸದಲ್ಲಿ ತೋರಿಸಲಾಗಿದೆ.

  ಉದಾ: ಜರಾಸಂಧಂ[ಮುಂದಂ]ಮಡಿದೊಳೆನಿಷ್ಕಂಟಕಮದ।
  ಕ್ಕಿರಲ್ವೇಡಿಂನಾಲ್ಕುಂದೆಸೆಗೆಬೆಸಸಿಂನಿಮ್ಮನುಜರಂ॥
  ಭರಂಗೆಯ್ವಾಗಳ್ [ನೀಂ] ಪೆಸರ್ವೆಸರೊಳಾನಾಲ್ವರುಮನಾ।
  ದರಂ .. ನಾಲ್ಕುಂದೆಸೆಗೆ ... ಬೆಳ್ಕುಱುವಿನಂ॥

  (ಷಷ್ಠಾಶ್ವಾಸ 28ನೇ ಪದ್ಯ. ಪು-135)

- ಶಬ್ದಗಳಲ್ಲಿ ಶಕಟರೇಫ ಱಳಗಳನ್ನು ಸರಿಯಾಗಿ ಗುರುತಿಸಿದೆ.
- ಪಾಠಭೇದಗಳನ್ನು ಅಡಿಟಿಪ್ಪಣಿಯಲ್ಲಿ 'ಪಾ॥' ಎಂಬ ಸಂಜ್ಞೆಯೊಂದಿಗೆ ಸಾಮಾನ್ಯವಾಗಿ ನಕ್ಷತ್ರ ಚಿಹ್ನೆ (*) ಯಿಂದ ಒಂದೇ ಪುಟದಲ್ಲಿ ಒಂದಕ್ಕಿಂತ ಹೆಚ್ಚಿದ್ದಲ್ಲಿ ಕಠಾರಿಯ ಚಿಹ್ನೆ (†) ಯ ಸಂಕೇತಗಳೊಂದಿಗೆ ಸೂಚಿಸಿದೆ.

  ಉದಾ:

  ಳ್ನೆಗೞ್ದಸಂಗ್ರಾಮದೊಳ್ಸತ್ತುದುಮನೆಮನದೊಳ್ತುಳ್ದಿಕಾಯ್ವಾಗಲಾ *ಚೆ॥

  (ದ್ವಾದಶಾಸ್ವಾಸ, 18ನೇ ಪದ್ಯ, 2ನೇ ಸಾಲು)

  ಎಂದೊಂದಕ್ಷೋಹಿಣೀಬಲಂಪರಸುಪ್ರಳಯದ ಮಾರಿಯು †ಮಕಾಶದ ಕವಿ

  (ದ್ವಾದಶಾಸ್ವಾಸ, 19ನೇ ಪದ್ಯದನಂತರದ ವಚನದ ಮೊದಲ ಸಾಲು)

  ಅಡಿಟಿಪ್ಪಣಿ: *ಪಾ॥ ತಾಪಗಲಾ ।†ಪಾ॥ ಮಾರಿಯು.

- ✦ ಕೆಲವೊಮ್ಮೆ ಪಾಠವನ್ನು ಸಂಪಾದಕೀಯವಾಗಿ ತಿದ್ದಿ ಪ್ರತಿಯೊಳಗಿನ ಪಾಠವನ್ನು ಪಾಠಾಂತರವಾಗಿ ಸೂಚಿಸಿದೆ.

  ಉದಾ: ಕನಮಱೆದೆನ್ನಕೊಟ್ಟುದನೆಕೊಣ್ಡುಮನೋಮುದದಿಂದೆಬಾೞ್ದುದಂ।
  ತವರಿನರೆಲ್ಲರುಂಸಮನದಲ್ಲದೆಮಾರ್ಮಲೆದುರ್ಕ್ಕಿಸೊರ್ಕ್ಕಿ [ಪೂ॥
  ಣ್ದವರೊಳೆ*]ಗರ್ವ್ವದಿಂಪೊಣರಲಾರ್ಪಿರಗಾವಿಲರಿಂತಿರಯ್ವರುಂ।
  [ಜವ†] ಸುತನುಂಸುರೇಂದ್ರಸುತನುಂಪೊಸದೀಗಲೆಮುಕ್ಕಿ ತೋಱರೇ॥
  (ಚತುರ್ಥಾಶ್ವಾಸ, 7ನೇ ಪದ್ಯ)

  ಅಡಿಟಿಪ್ಪಣಿ: ಪಾ। *ಭೀಮನೊಳತಿ †ಪಾ।ಯಮ.

- ✦ ಕೆಲವೊಮ್ಮೆ ಅಪರೂಪವಾಗಿ ಚೌಕಕಂಸಗಳಿಗೆ ಬದಲಾಗಿ ದುಂಡುಕಂಸಗಳನ್ನು ಬಳಸಲಾಗಿದೆ.

  ಉದಾ: ಮತ್ತಮಲ್ಲಿಕಾಕೆಲವುಲತಾಗೃಹಂಗ(ಳೊ)ಳಧಾರಗೃಹಂಗಳೊಳಂ
  (ಪಂಚಮಾಶ್ವಾಸ 92ನೇ ಪದದ ನಂತರದ ವಚನ)

ಇದಕ್ಕೆ ಕಾರಣವೇನೆಂಬುದು ಸ್ಪಷ್ಟವಿಲ್ಲ. ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಪ್ರಕಾರ ಇದು ಅಸ್ಪಷ್ಟವಾಗಿ ತೋರುವ ಪ್ರತಿಯ ಪಾಠವನ್ನು ಗುರುತಿಸುವ ರೀತಿ.[1]

- ☆ ಅಡಿಟಿಪ್ಪಣಿ ಭಾಗವನ್ನು ಕೇವಲ ಪಾಠಾಂತರಗಳ ಸೂಚನೆಗಾಗಿ ಮಾತ್ರ ಬಳಸದೇ ಅನೇಕ ಸಂಪಾದಕೀಯ ಸೂಚನೆ-ಟಿಪ್ಪಣಿಗಳನ್ನು ನೀಡಲೂ ಉಪಯೋಗಿಸಿಕೊಳ್ಳಲಾಗಿದೆ.

ನಿದರ್ಶನಕ್ಕೆ:

- ➔ ಈ ಪದ್ಯವು ಮೂಲಪ್ರತಿಯನ್ನು ಅನುಸರಿಸಿ ಅಚ್ಚು ಹಾಕಲ್ಪಟ್ಟಿದೆ. 3 ಮತ್ತು 4ನೇ ಪಾದಗಳು ಸಂದರ್ಭಕ್ಕೆ ಹೊಂದಿಕೆಯಾಗಿಲ್ಲವು. (ಪು-19)
- ➔ ಈ ಪದ್ಯವು ಖಚರಪ್ಲುತ ವೃತ್ತದ ಲಕ್ಷಣಕ್ಕೆ ಸರಿಯಾಗಿಲ್ಲ (ಪು-160)
- ➔ ಈ ಪದ್ಯವು ತಿದ್ದಲು ಸಾಧ್ಯವಾಗಲಿಲ್ಲ (ಪು-162)
- ➔ ಈ ಪದ್ಯವು ಛಂದಸ್ಸಿಗೆ ಸರಿಮಾಡಲಾಗಲಿಲ್ಲ (ಪು-174)
- ➔ ಈ ಹೆಸರು ಬರುವ ಸ್ಥಳಗಳಲ್ಲಿ ಇದಕ್ಕೆ ಬದಲಾಗಿ ಕೃತ್ತಿಕೆಯೆಂದು ಕೆಲವು ಪುಸ್ತಕಗಳಲ್ಲಿ ಬರೆದಿರುತ್ತೆ (ಪು-176)
- ➔ ಈ ಪದ್ಯದಲ್ಲಿ ರಕಾರಕ್ಕೂ ಱಕಾರಕ್ಕೂ ಪ್ರಾಸಹೇಳಲ್ಪಟ್ಟಿದೆ, ತಿದ್ದಲ್ಯತ್ನವಿಲ್ಲ.
- ➔ ಈ ಪಾಠವು ಬಹಳ ಅಶುದ್ಧವಾಗಿದೆ. ಆದ್ದರಿಂದ (ಮುಗುಂಬರು ಮೇರು ಮುಟ್ಟುವರೆಗೆ ಮಜಾಂಡಂ) ಎಂದು ಮಾಡಿದರೆ ಸರಿಯಾಗಿರಬಹುದೆಂದು ತೋರುತ್ತೆ (ಪು-267) ಇತ್ಯಾದಿ.

1 ಪೂರ್ವೋಕ್ತ., – ಪು. 231.

ಪಂಪಭಾರತವು ಇಷ್ಟೆಲ್ಲಾ ವಿಚಕ್ಷಣೆಯಿಂದ ಪರಿಷ್ಕಾರಗೊಂಡು ಸಂಪಾದಿತ ವಾಗಿದೆಯಾದರೂ ಅದರಲ್ಲಿಯ ಪಾಠಕ್ಲೇಶಗಳ ಬಗೆಗಿನ ವಾದ-ವಿವಾದಗಳು ಇಂದಿಗೂ ಬಗೆಹರಿಯದಿರುವುದಕ್ಕೆ ಪ್ರಮುಖವಾಗಿ ಸಾಕಷ್ಟು ಸಂಖ್ಯೆಯಲ್ಲಿ ಹಸ್ತಪ್ರತಿಗಳು ಲಭ್ಯವಿಲ್ಲ ದಿರುವುದು ಕಾರಣ. ಪಂಪನಂತಹ ಪ್ರೌಢ, ಪ್ರಾಚೀನ ಕವಿಯ ಪ್ರಕಾಂಡ ಪಾಂಡಿತ್ಯದ ಸೃಷ್ಟಿಯಾದ ಈ ಕೃತಿಯನ್ನು ಕೇವಲ ಎರಡು ಅಸಮಗ್ರ ಪ್ರತಿಗಳನ್ನು ಇಟ್ಟುಕೊಂಡು ಸಂಪಾದಿಸುವುದು ಸಾಮಾನ್ಯ ಕೆಲಸವೇನೂ ಅಲ್ಲ.

ತಮಗಿರುವ ಸೀಮಿತ ಅವಕಾಶದಲ್ಲಿ ಕೆಲವೇ ಮಂದಿ ವಿದ್ವಾಂಸರ ನೆರವಿನಿಂದ ಪಂಪಭಾರತವನ್ನು ಪ್ರಕಟಿಸಲು ಯತ್ನಿಸಿದ್ದೇ ರೈಸರ ದೊಡ್ಡ ಸಾಧನೆ ಎನ್ನಬೇಕು. ಹಾಗಾಗಿಯೇ "... ಬೆಂಜಮಿನ್ ಲೂಯಿ ರೈಸರೆಂದರೆ ವಿಸ್ಮೃತಿಯ ಸಾಗರತಳದಿಂದ ಪಂಪನನ್ನು, ಪಂಪಕಾವ್ಯವಸುಂಧರೆಯನ್ನು ಎತ್ತಿತಂದ ವರಾಹಮೂರ್ತಿ, ಬೆಂಜಮಿನ್ ಲೂಯಿರೈಸೆಂದರೆ ಅಭಿನವ ಹನುಮಂತ - ಆತನು ಹೊತ್ತುತಂದ ಸಂಜೀವಿನಿ ಪರ್ವತ ದಲ್ಲಿ ಸಿಕ್ಕಿದ ಅನರ್ಘ್ಯ ಮಾಲಿಕೆ...." ಎಂಬ ಎಲ್. ಬಸವರಾಜುರವರ ಮಾತುಗಳು[1] ಆಲಂಕಾರಿಕವಾದರೂ ಯಥಾರ್ಥವಾದವು.

ರೈಸರು ಸಂಪಾದಿಸಿರುವ ಈ ನಾಲ್ಕೂಕೃತಿಗಳ ಅಧ್ಯಯನದಿಂದ ಹೊರಡುವ ತಾತ್ಪರ್ಯವೆಂದರೆ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸುವ ಕಾರ್ಯದ ಹಿನ್ನೆಲೆಯಲ್ಲಿ ರೈಸರಿಗಿದ್ದ ಉದ್ದೇಶ ಒಂದು ಕೃತಿಯನ್ನು ವಿದ್ವತ್‌ಪೂರ್ಣವಾಗಿ ಸಂಪಾದಿಸಬೇಕೆಂಬ ಬಯಕೆಯಲ್ಲ. ಬದಲಿಗೆ ಕನ್ನಡದ ಅತ್ಯಂತ ಮಹತ್ವದ ಪ್ರಾಚೀನ ಗ್ರಂಥಗಳು ಹಸ್ತಪ್ರತಿಗಳ ರೂಪದಲ್ಲಿ ನಷ್ಟವಾಗಲು ಬಿಡದೆ ಅದರ ಸಾಧ್ಯವಾದಷ್ಟು ಶುದ್ಧವಾದ ಪರಿಷ್ಕರಣವನ್ನು ಬೆಳಕಿಗೆ ತಂದು ಕೃತಿಯ ಮಹತ್ವವನ್ನು ತಿಳಿಸುವುದು, ಆ ಮೂಲಕ ಕನ್ನಡ ಸಾಹಿತ್ಯದ ಚರಿತ್ರೆಯ ಹಿರಿಮೆ-ಗರಿಮೆಗಳನ್ನು ಜಗತ್ತಿಗೆ ಪರಿಚಯಿಸುವುದು ಅವರ ಉದ್ದೇಶ.

ಒಂದು ನಿರ್ದಿಷ್ಟ ಕೃತಿಯ ನಾಲ್ಕಾರು ಹಸ್ತಪ್ರತಿಗಳನ್ನು ದೊರಕಿಸಿಕೊಂಡು ಅವು ಗಳಲ್ಲಿ ಶುದ್ಧವೆಂದು ತೋರುವ ಯಾವುದಾದರೊಂದು ಹಸ್ತಪ್ರತಿಯನ್ನು ಆಯ್ದುಕೊಳ್ಳು ವುದು; ತ್ರುಟಿತ ಅಥವಾ ಅನುಮಾನಾಸ್ಪದ ಭಾಗಗಳನ್ನು ಇತರ ಹಸ್ತಪ್ರತಿಗಳ ಸಹಾಯ ದಿಂದ ಪರಿಷ್ಕರಿಸುವುದು; ಲಭ್ಯವಿರುವ ಎಲ್ಲ ಪಾಠಗಳನ್ನು ಅಡಿಟಿಪ್ಪಣಿಯಲ್ಲಿ ಪಾಠಾಂತರ ಗಳಾಗಿ ನಮೂದಿಸುವುದರ ಬದಲಿಗೆ ತೀರಾ ಅಗತ್ಯವೆನಿಸಿದ ಪಾಠಾಂತರಗಳನ್ನು ಮತ್ತು ವಿಶೇಷಾಂಶಗಳನ್ನು ಅಡಿಟಿಪ್ಪಣಿಯಲ್ಲಿ ಅಲ್ಲೊಂದು ಇಲ್ಲೊಂದನ್ನು ಸೂಚಿಸುವ ಮೂಲಕ ಮೂಲಪಠ್ಯವನ್ನು ಸಿದ್ಧಪಡಿಸುವುದು; ಇದರೊಂದಿಗೆ ಪೀಠಿಕಾರೂಪದಲ್ಲಿ ಆ ಕೃತಿಯಿಂದ ಲಭ್ಯವಾಗುವ ಕವಿಯ ವಿವರಗಳು ಮತ್ತು ತತ್ಕಾಲೀನ ಇತರ ಕವಿ-ಕೃತಿಗಳನ್ನು ಪರಿಚಯಿಸುವ ಆಂಗ್ಲಭಾಷೆಯ ಪ್ರಬಂಧದ ಅಳವಡಿಕೆ, ಶಾಸ್ತ್ರಗ್ರಂಥವಾಗಿದ್ದಲ್ಲಿ ಅದರ ಸಂಪೂರ್ಣ ರೋಮನ್ ಅವತರಣಿಕೆಗೆ, ಕಾವ್ಯವಾಗಿದ್ದಲ್ಲಿ ಇಂಗ್ಲಿಷ್ ಸಾರಾಂಶವನ್ನು ಕೊಡುವುದು - ಇದು ರೈಸರು ಅನುಸರಿಸಿರುವ ವಿಧಾನ.

---

1 ಪೂರ್ವೋಕ್ತ, ಪು IV.

ಮೇಲ್ಕಂಡ ನಾಲ್ಕು ಕೃತಿಗಳಲ್ಲದೆ ಕೆ.ಬಿ. ಪಾಠಕರು ಸಂಪಾದಿಸಿದ ಕವಿರಾಜಮಾರ್ಗ (1898) ಹಾಗೂ ಆರ್. ನರಸಿಂಹಾಚಾರ್ಯರು ಪರಿಷ್ಕರಿಸಿದ ಕಾವ್ಯಾವಲೋಕನ ಮತ್ತು ಭಾಷಾಭೂಷಣಗಳ ಸಂಯುಕ್ತ ಆವೃತ್ತಿ (1903) ಮತ್ತು ಅವರೇ ಸಂಪಾದಿಸಿದ ಕರ್ಣಾಟಕ ಶಬ್ದಾನುಶಾಸನಂ (1923) ಇವು ಬಿಬ್ಲಿಯಾಥೆಕಾ ಮೂಲೆಯಲ್ಲಿ ಪ್ರಕಟವಾಗಿರುವ ಇತರ ಕೃತಿಗಳು. ಇವುಗಳಲ್ಲಿ ಮೊದಲ ಎರಡು 'Published under the direction of B. Lewis Rice, CIE., M.R.A.S' ಎಂಬ ಶೀರ್ಷಿಕೆಯೊಂದಿಗೆ ಹೊರಬಂದಿವೆ.

ಪರಿಮಿತಿಗಳು :

ತಮ್ಮ ಅತ್ಯಂತ ಮಹತ್ವಾಕಾಂಕ್ಷೆಯ ಯೋಜನೆಯಾದ ಈ ಸರಣಿಯಲ್ಲಿ ಕೇವಲ ನಾಲ್ಕು ಕೃತಿಗಳನ್ನು ಮಾತ್ರವೇ ರೈಸರು ಸಂಪಾದಿಸಿ ಸುಮ್ಮನಾದರೇಕೆ? ಎಂಬ ಪ್ರಶ್ನೆ ಚಿಂತನ ಯೋಗ್ಯವಾಗಿದೆ. ಏಕೆಂದರೆ ಇವರು ಸಂಪಾದಿಸಿದ ಪಂಪಭಾರತವು ಹೊರಬಂದಿದ್ದು 1898ರಲ್ಲಿ. 1906ರ ವರೆಗೆ ರೈಸ್ ಮೈಸೂರು ಸರ್ಕಾರದ ಸೇವೆಯಲ್ಲಿಯೇ ಇದ್ದರು. ಹಾಗಿದ್ದರೂ ಕೆ.ಬಿ. ಪಾಠಕ್ ಮತ್ತು ಆರ್. ನರಸಿಂಹಾಚಾರ್ಯರಿಗೆ ಕೆಲಸಗಳನ್ನು ವಹಿಸಿ ತಾವು ಸುಮ್ಮನಿರಲು ಕಾರಣವೇನು ಎಂದು ಚಿಂತಿಸಿದರೆ ತತ್‌ಕ್ಷಣಕ್ಕೆ ಹೊಳೆಯುವುದು ಅವರಿಗೆ ಇದ್ದ ಇತರ ಕೆಲಸಗಳ ಒತ್ತಡ ಎಂಬ ಉತ್ತರ. ಎಪಿಗ್ರಾಫಿಯ ಕರ್ನಾಟಿಕಾದ ಸಂಪುಟಗಳ ಸಿದ್ಧತೆ ಮತ್ತು ಮುದ್ರಣ ಭರದಿಂದ ಸಾಗುತ್ತಿದ್ದ ಕಾಲ ಅದು. ಜೊತೆಗೆ ಮೈಸೂರು ಗೆಜೆಟಿಯರ್‌ನ ಪರಿಷ್ಕೃತ ಆವೃತ್ತಿಯನ್ನು ಸಿದ್ಧಪಡಿಸುವ ಜವಾಬ್ದಾರಿಯೂ ರೈಸರ ಮೇಲಿತ್ತು. ಈ ಎರಡೂ ಕಾರಣಗಳಿಂದ ರೈಸ್ ಗ್ರಂಥಸಂಪಾದನೆಯ ಕೆಲಸದಿಂದ ಹಿಂದೆ ಸರಿದರು ಎನ್ನಬಹುದು. ಇದರೊಂದಿಗೆ ಆ ವೇಳೆಗೆ ಅರವತ್ತು ವರ್ಷಗಳನ್ನು ದಾಟಿದ್ದ ಅವರ ದೇಹವೂ ಗ್ರಂಥಸಂಪಾದನೆಯಂತಹ ಕಠಿಣ ಪರಿಶ್ರಮದ ಕೆಲಸಕ್ಕೆ ಸಹಕರಿಸುವ ಸ್ಥಿತಿಯಲ್ಲಿರಲಿಲ್ಲವೆಂದು ತೋರುತ್ತದೆ.

ಆದರೆ ಈ ಎಲ್ಲಕ್ಕಿಂತ ಪ್ರಮುಖವಾದುದೆಂದರೆ ತನಗಿಂತ ಹೆಚ್ಚು ಸಮರ್ಥರು ಕೆಲಸವನ್ನು ಕೈಗೆತ್ತಿಕೊಳ್ಳಲು ಸಿದ್ಧರಾದಾಗ ತಾನು ಸಹಜವಾಗಿ ಹಿಂದೆ ಸರಿದು ಅವರ ಪ್ರತಿಭೆಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂಬ ಅವರ ಮನೋಧರ್ಮವೇ ಈ ನಿರ್ಧಾರಕ್ಕೆ ಕಾರಣವೆಂಬುದನ್ನು ಮುಂದಿನ ವಿಶ್ಲೇಷಣೆಯಿಂದ ಸಿದ್ಧಗೊಳಿಸಬಹುದು :

ಶಾಸನಾಧ್ಯಯನದಂತೆಯೇ ಗ್ರಂಥಸಂಪಾದನೆಯೂ ರೈಸರಿಗೆ ಆರಂಭದಲ್ಲಿ ಒಂದು ಹವ್ಯಾಸ ಮಾತ್ರವಾಗಿತ್ತು. ಶಾಲಾಪರಿವೀಕ್ಷಣಾಧಿಕಾರಿಯಾಗಿದ್ದಾಗ ಸಂಸ್ಥಾನದಾದ್ಯಂತ ಸಂಚರಿಸುತ್ತಿದ್ದ ಕಾಲದಲ್ಲಿಯೇ ಅವರು ಅಪರೂಪವೆನಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸುತ್ತಿದ್ದರೆಂದು ತೋರುತ್ತದೆ. ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವ ಸಂದರ್ಭ ಬಂದಾಗ ಈ ಸಂಗ್ರಹದಿಂದ ಆಯ್ದ ಕೆಲವು ಪದ್ಯಗಳನ್ನು ಅವರು ಬಳಸಿಕೊಂಡಂತೆ ತೋರುತ್ತದೆ. ಅಲ್ಲದೆ 1884ರಲ್ಲಿ ಸಂಸ್ಕೃತ ಹಸ್ತಪ್ರತಿಗಳ ಸೂಚಿಯನ್ನು ಸಿದ್ಧಗೊಳಿಸಬೇಕಾಗಿಬಂದರೂ

ಅದರಿಂದ ವೈಯಕ್ತಿಕವಾಗಿ ಅನೇಕ ಪ್ರಾಚೀನ ಕನ್ನಡ ಜೈನ ಕೃತಿಗಳನ್ನು ನೋಡುವ ಅವಕಾಶ ವಾಯಿತೆಂದು ಆ ಗ್ರಂಥದ ಮುನ್ನುಡಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ.

ರಾಮಾಯಣ ಸಂಗ್ರಹ, ಅಮರಕೋಶಗಳಂತಹ ವಿದ್ಯಾರ್ಥಿಗಳಿಗೆ ಅನುಕೂಲ ವಾದ ಕೃತಿಗಳನ್ನು ಅವರು ಸಿದ್ಧಪಡಿಸಿದ್ದು ಇದೇ ಅವಧಿಯಲ್ಲಿ. 1875ರ ವೇಳೆಗೆ ಕಿಟೆಲ್ಲರ 'ನಾಗವರ್ಮನ ಕನ್ನಡ ಛಂದಸ್ಸು' ಕೃತಿಯ ಪರಿಷ್ಕರಣಕ್ಕೆ ಅಗತ್ಯವಾದ ನಾಲ್ಕು ಹಸ್ತಪ್ರತಿ ಗಳನ್ನು ಒದಗಿಸುವಷ್ಟರ ಮಟ್ಟಿಗೆ ಅವರ ಸಂಗ್ರಹ ಬೆಳೆದಿತ್ತು. 1882-83ರಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿಯ ಜರ್ನಲ್‌ನಲ್ಲಿ ಕನ್ನಡ ಕವಿಗಳು ಮತ್ತು ಕೃತಿಗಳ ಬಗೆಗೆ ವಿದ್ವತ್ಪ್ರಬಂಧಗಳು ಪ್ರಕಟವಾದವು. 1885ರಲ್ಲಿ ಪುರಾತತ್ತ್ವ ಇಲಾಖೆಯು ಆರಂಭ ವಾಗುವುದಕ್ಕೆ ಒಂದು ವರ್ಷ ಮೊದಲೇ ಕರ್ಣಾಟಕ ಭಾಷಾಭೂಷಣವನ್ನೂ ರೈಸರು ಪ್ರಕಟಿಸಿದ್ದರು.

ಇಲಾಖೆಯು ಆರಂಭವಾದ ಮೇಲಂತೂ ಹಸ್ತಪ್ರತಿಗಳ ಸಂಗ್ರಹಣ ಮತ್ತು ಪರಿಷ್ಕರಣಗಳು ಇಲಾಖೆಯ ಕೆಲಸಕಾರ್ಯಗಳ ಒಂದು ಭಾಗವೇ ಆಯಿತು. ವಿದ್ಯಾ ಇಲಾಖೆಯ ವರದಿಗಳಲ್ಲಿ ಹಸ್ತಪ್ರತಿ ಸಂಗ್ರಹ ಇತ್ಯಾದಿಗಳ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಪುರಾತತ್ತ್ವ ಇಲಾಖೆಯ ವರದಿಗಳಲ್ಲಿ ಸಾಕಷ್ಟು ವಿವರಗಳಿವೆ. ಉದಾ ಹರಣೆಗೆ 1887ರ ವರದಿಯಲ್ಲಿ "In the course of my tours several works of considerable merit were met with, hither to unknown and never published. Arrangments have been made to obtain copies of these ಎಂಬ ಮಾತುಗಳಿವೆ.[1]

1889ರಲ್ಲಿ ಕಬ್ಬಿಗರ ಕಾವ, ಮಿತ್ರವಿಂದಾಗೋವಿಂದ, ಹದಿಬದೆಯ ಧರ್ಮ, ಕವಿರಾಜಮಾರ್ಗ ಮುಂತಾದ ಕೃತಿಗಳು, 1901ರಲ್ಲಿ ಕವಿಕಂಠಹಾರ, 1903ರಲ್ಲಿ ಇಂದಿರಾಹೃದಯ ಮೊದಲಾದ ಅನೇಕ ಕೃತಿಗಳನ್ನು ಸಂಗ್ರಹಿಸಿದ ವಿವರಗಳು ಆಯಾ ವರ್ಷದ ವರದಿಗಳಲ್ಲಿವೆ. ಪಂಪನ ಆದಿಪುರಾಣದ ಹಸ್ತಪ್ರತಿಯೊಂದು 1882ರ ಸುಮಾರಿಗೇ ರೈಸರ ಕೈ ಸೇರಿತ್ತೆಂಬುದು ಅವರ "The poet Pompa" ಎಂಬ ಲೇಖನ ದಿಂದ ಸ್ಪಷ್ಟವಾಗುತ್ತದೆ.

ಇಷ್ಟೆಲ್ಲಾ ಹಸ್ತಪ್ರತಿಗಳು ಲಭ್ಯವಿದ್ದರೂ ಅವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪರಿಷ್ಕರಿಸಲು ಬೇಕಾದ ಪೂರ್ವಸಿದ್ಧತೆಗಳು ರೈಸರಿಗಿರಲಿಲ್ಲವೆಂದು ತೋರುತ್ತದೆ. ಕಿಟೆಲ್ಲರಂತೆ ಅವರೇನೂ ಗ್ರಂಥ ಸಂಪಾದನೆಯನ್ನು ಶಾಸ್ತ್ರೋಕ್ತವಾಗಿ ಶಾಲೆ-ಕಾಲೇಜು ಗಳಲ್ಲಿ ಕಲಿತವರಲ್ಲ. ಹಾಗಾಗಿ ಎಷ್ಟೋ ಅಂಶಗಳಲ್ಲಿ ಕಿಟೆಲ್ಲರಿಂದ ಸಂಪಾದಿತವಾದ ಕೃತಿಗಳು ರೈಸರದಕ್ಕಿಂತ ಹೆಚ್ಚು ಶಾಸ್ತ್ರೀಯವಾಗಿಯೂ, ಅಚ್ಚುಕಟ್ಟಾಗಿಯೂ ಸಂಪಾದಿತ ವಾಗಿರುವುದು ಕಂಡುಬರುತ್ತದೆ.

1 ARAD. P – 4.

ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ತಮ್ಮ ಪರಿಣತಿ ಎಷ್ಟು ಸೀಮಿತ ಎಂಬುದನ್ನು ರೈಸರೇ ಒಂದೆಡೆ ಹೀಗೆ ಸ್ಪಷ್ಟಪಡಿಸಿದ್ದಾರೆ:

> *"...ಇಂತಹುದೊಂದು ಉದ್ಗ್ರಂಥಕ್ಕೆ ಸರಿಯಾದ ನ್ಯಾಯವನ್ನು ಸಲ್ಲಿಸಲು (ಸರಿಯಾದ ರೀತಿಯಲ್ಲಿ ಸಂಪಾದಿಸಲು) ನಾನು ಸಂಪೂರ್ಣ ಸಮರ್ಥನಲ್ಲ ಎಂಬ ವಿಷಯ ಉಳಿದವರೆಲ್ಲರಿಗಿಂತ ಹೆಚ್ಚಾಗಿ ನನಗೇ ಗೊತ್ತಿದೆ. ತಪ್ಪುಗಳಿಲ್ಲದಿರಬೇಕೆಂದು ಎಷ್ಟೇ ಪ್ರಯತ್ನಪಟ್ಟರೂ ಈ ಕೃತಿಯಲ್ಲಿ ಅನೇಕ ನ್ಯೂನತೆಗಳಿವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ನಾನು ಅನೇಕ ವರ್ಷಗಳಿಂದ ಮೈಸೂರು ಸಂಸ್ಥಾನದಲ್ಲಿ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥನಾಗಿರುವುದರಿಂದ ಈ ವಿಶಿಷ್ಟ ಕೃತಿಯನ್ನು ಸಂಪಾದಿಸಿ ಸಾರ್ವಜನಿಕರ ಅವಗಾಹನೆಗೆ ತರುವ ಜವಾಬ್ದಾರಿ ನನ್ನದೇ ಆಗಿವೆ. ಮುದ್ರಣದ ಮೂಲಕ ಈ ಕೃತಿಗೆ ಶಾಶ್ವತತ್ವವನ್ನು ಪ್ರಾಪ್ತಗೊಳಿಸುವ ಈ ಒಂದು ಅವಕಾಶವನ್ನು ನಾನು ಸದುಪಯೋಗಪಡಿಸಿಕೊಳ್ಳದೆ ಹೋಗಿದ್ದರೆ ಗಮನಾರ್ಹವಾದ ಹಿಂದಿನ ಎಷ್ಟೋ ಕೃತಿಗಳು ಈಗ ಶಾಶ್ವತವಾಗಿ ಕಣ್ಮರೆಯಾಗಿರುವಂತೆ ಈ ಕೃತಿಯೂ ಸಂಪೂರ್ಣವಾಗಿ ಅಲಭ್ಯವಾಗುತ್ತಿತ್ತು. ಈಗ ಪ್ರಸ್ತುತ ಕೃತಿಯನ್ನು ಮುದ್ರಿತ ರೂಪದಲ್ಲಿ ನೋಡಿ ನಾನು ಸಂತೃಪ್ತನಾಗಿದ್ದೇನೆ ಮತ್ತು ಕನ್ನಡಿಗರ ಪೂರ್ವಾರ್ಜಿತ ಆಸ್ತಿಯನ್ನು ಮತ್ತೆ ಅವರಿಗೇ ಒಪ್ಪಿಸುತ್ತಿದ್ದೇನೆ. ಅವರ ಹಿಂದಿನ ಕವಿಗಳೇ ಹೇಳಿರುವಂತೆ ಕನ್ನಡವು ಸಾರಯುತವಾದ ಅಂತಃಸತ್ವವನ್ನು ಒಳಗೊಂಡದ್ದು (ತಿರುಳ್ಗನ್ನಡ). ಅದನ್ನು ಕುರಿತಾದ ಕನ್ನಡಿಗರ ಅಧ್ಯಯನ ಮತ್ತಷ್ಟು ಪ್ರೌಢವಾಗಲು ಈ ಕೃತಿಯು ಉತ್ತೇಜನವನ್ನು ನೀಡಲಿ ಎಂದು ಆಶಿಸುತ್ತೇನೆ".* [1]

ಕಿಟೆಲ್ಲರು ತಮ್ಮ ಕೃತಿಗಳಲ್ಲಿ ಪಾಠ ಪರಿಷ್ಕರಣೆಗೆ ಅವಶ್ಯಕವಾದ ಹಸ್ತಪ್ರತಿಗಳನ್ನು ಒದಗಿಸಿದ ವ್ಯಕ್ತಿಗಳನ್ನು ಹೊರತುಪಡಿಸಿ ತಮಗೆ ಗ್ರಂಥಸಂಪಾದನೆಯ ಕೆಲಸಗಳಲ್ಲಿ ಪ್ರತ್ಯಕ್ಷವಾಗಿ ನೆರವಾದ ಯಾರ ಹೆಸರನ್ನೂ ಎಲ್ಲಿಯೂ ಉಲ್ಲೇಖಿಸಿದಂತೆ ತೋರುವುದಿಲ್ಲ. ಆದರೆ ರೈಸ್ ಕೆಲವು ಕೃತಿಗಳಲ್ಲಿ ತಮಗೆ ನೆರವಾದ ಅನೇಕ ದೇಶೀಯ ವಿದ್ವಾಂಸರುಗಳನ್ನು ಹೆಸರಿಸಿದ್ದಾರೆ. ಬಿಡಿಬಿಡಿಯಾಗಿ ಕೃತಿಗಳನ್ನು ಗಮನಿಸಿದಾಗ ಇದರಲ್ಲಿ ಯಾವುದೇ ವಿಶೇಷವೂ ಕಂಡುಬರದಿದ್ದರೂ ರೈಸರ ಗ್ರಂಥಸಂಪಾದನೆಯ ಕಾರ್ಯದ ಸಮಗ್ರ ಸಂದರ್ಭವನ್ನು ಪರಿಗಣಿಸಿದಾಗ ದೇಶೀಯ ವಿದ್ವಾಂಸರ ನೆರವಿನ ಪ್ರಮಾಣದಲ್ಲಿ ಕ್ರಮೇಣ ಏರಿಕೆಯಾಗಿರುವುದು ಹೀಗೆ ಕಂಡುಬರುತ್ತದೆ.

---

1 ಮುನ್ನುಡಿಯಲ್ಲಿನ ಭಾಗದ ಅನುವಾದ. ಪುಟ : ಮುದ್ರಿಸಿಲ್ಲ.

ಮೊದಲಹಂತ : ಈ ಹಂತದಲ್ಲಿ ಯಾವ ದೇಶೀಯ ವಿದ್ವಾಂಸರ ನೆರವೂ ರೈಸರಿಗೆ ದೊರೆತ ಉಲ್ಲೇಖಗಳಿಲ್ಲ. ಉದಾಹರಣೆಗೆ ರಾಮಾಯಣ ಸಂಗ್ರಹ (1868), ಪದ್ಯಸಾರ (1868, 1881), ಭಾಷಾಭೂಷಣ (1884).

ಎರಡನೇ ಹಂತ : ಈ ಹಂತದಲ್ಲಿ ಗ್ರಂಥಸಂಪಾದನೆಯ ಕಾರ್ಯಕ್ಕೆ ದೇಶೀಯ ವಿದ್ವಾಂಸರ ಸಹಾಯ ದೊರಕದಿದ್ದರೂ ಉಳಿದ ಆನುಷಂಗಿಕ ಕೆಲಸಕಾರ್ಯಗಳಿಗೆ ಜನ ಸಹಾಯ ದೊರೆತಂತಿದೆ. ಉದಾಹರಣೆಗೆ ಅಮರಕೋಶದ ಪರಿಷ್ಕರಣ (1883). ಈ ಕೃತಿಯ ಪ್ರಕಟಣೆಯ ಸಂದರ್ಭದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಭಾಷಾಂತರಕಾರರಾದ ಎಂ. ರಾಮಸ್ವಾಮಿಶಾಸ್ತ್ರಿಗಳು ಅಕಾರಾದಿ ಸೂಚಿಯುನ್ನು ಸಿದ್ಧಮಾಡಿಕೊಟ್ಟಿದ್ದಾರೆ.[1]

ಮೂರನೇ ಹಂತ : ಈ ಹಂತದಲ್ಲಿ ರೈಸರೇ ಗ್ರಂಥ ಸಂಪಾದನೆಯ ಕಾರ್ಯವನ್ನು ಪ್ರಧಾನವಾಗಿ ನಿರ್ವಹಿಸಿದ್ದಾರೆ ಮತ್ತು ಅನೇಕ ದೇಶೀಯ ವಿದ್ವಾಂಸರು ಬೇರೆ ಬೇರೆ ಹಂತ ಗಳಲ್ಲಿ ಅದಕ್ಕೆ ನೆರವಾಗಿದ್ದಾರೆ. ನಿದರ್ಶನಕ್ಕೆ ಕರ್ಣಾಟಕ ಶಬ್ದಾನುಶಾಸನದ ಸಂಪಾದನೆಯ (1890) ಕಾರ್ಯದಲ್ಲಿ ಸಹಾಯಮಾಡಿದವರ ಬಗ್ಗೆ ರೈಸರಾಡಿರುವ ನುಡಿಗಳಿವು :-

> *"... ಕನ್ನಡ ಲಿಪಿಯ ಕರಡಚ್ಚಿನ ಪ್ರತಿಗಳನ್ನು ಪರಿಶೀಲಿಸಿದ ನನ್ನ ಕಛೇರಿಯ ಪಂಡಿತರುಗಳಾದ ಬುರುಡುಗುಂಟೆ ಶ್ರೀನಿವಾಸ ಅಯ್ಯಂಗಾರ್ ಮತ್ತು ಚಿಂಚೋಳಿ ವೆಂಕಣ್ಣಾಚಾರಿಯವರು; ಮೈಸೂರಿನ ಮಹಾರಾಜರವರ ಕನ್ನಡ ಶಾಲೆಯ ಮುಖ್ಯಸ್ಥರಾದ ಬೇಗೂರು ಮಲ್ಲಪ್ಪ; ಅರಮನೆಯ ಪಂಡಿತರಾದ ಅಯ್ಯಾಶಾಸ್ತ್ರಿ; ಮೈಸೂರಿನ ಧನ್ವಂತರಿ ಭೀಮಾಚಾರ್ಯ - ಇವರುಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಬಯಸುತ್ತೇನೆ. ಇವರುಗಳ ನೆರವಿಲ್ಲ ದಿದ್ದರೆ ಈ ಕಾರ್ಯವನ್ನು ನಾನು ಸಂಪೂರ್ಣಗೊಳಿಸಲಾಗುತ್ತಿರಲಿಲ್ಲ. ರೋಮನ್ ಲಿಪಿಗೆ ಲಿಪ್ಯಂತರವನ್ನು ಅನೇಕ ವರ್ಷಗಳ ಹಿಂದೆ ನನ್ನ ಕಛೇರಿಯ ಕೆ. ರಾಮರಾವ್‌ರವರು ಸಮರ್ಥವಾಗಿ ಮಾಡಿಕೊಟ್ಟರು..."* [2]

ನಾಲ್ಕನೆಯ ಹಂತ : ನಾಲ್ಕನೆಯ ಹಂತದಲ್ಲಿ ರೈಸರೇ ಗ್ರಂಥ ಸಂಪಾದನೆಯ ಕೆಲಸವನ್ನು ನಿರ್ವಹಿಸಿದ್ದರಾದರೂ ಅವರೊಂದಿಗೆ ಸಮಸಮನಾಗಿ ದೇಶೀಯ ವಿದ್ವಾಂಸರೂ ಕೈಜೋಡಿಸಿದ್ದಾರೆ. ಪಂಪ ರಾಮಾಯಣ (1892) ಮತ್ತು ಪಂಪಭಾರತ (1989)ದ ಪರಿಷ್ಕರಣೆಯ ಸಮಯದಲ್ಲಿ ರೈಸರಿಗೆ ದೊರೆತ ಸಹಕಾರ ಈ ಬಗೆಯದು. ಹಿಂದಿನ ಕೃತಿಗಳ ಪರಿಷ್ಕರಣದಲ್ಲಿ ಭಾಗಶಃವಷ್ಟೇ ಭಾಗವಹಿಸಿದ್ದ ದೇಶೀಯ ವಿದ್ವಾಂಸರಾದ ಬುರುಡುಗುಂಟೆ ಶ್ರೀನಿವಾಸ ಅಯ್ಯಂಗಾರ್‌ರವರು ಪಂಪರಾಮಾಯಣದ ಸಂಪಾದನೆಯಲ್ಲಿ ಎಷ್ಟು ಸಕ್ರಿಯ ವಾಗಿ ಪಾಲ್ಗೊಂಡಿದ್ದಾರೆಂದರೆ ರೈಸ್ ಅವರನ್ನು ತಮ್ಮ ಮುನ್ನುಡಿಯಲ್ಲಿ ಹೀಗೆ ಹೊಗಳಿದ್ದಾರೆ:

1 ಅಮರಕೋಶ, ಪುಟ ......

2 ಕರ್ಣಾಟಕ ಶಬ್ದಾನುಶಾಸನದ ಪೀಠಿಕೆಯ ಒಂದು ಭಾಗದ ಅನುವಾದ, 1890

> *"This revised edition has been very carefully corrected throughout by Burudugunte Srinivas Ayyangar, Senior pandit of my office, one of the best scholars in the kannada language that I have met with, and he may be considered as its editor".*[1]

'ಶ್ರೀನಿವಾಸ ಅಯ್ಯಂಗಾರ್‌ರನ್ನು ಈ ಕೃತಿಯ ಸಂಪಾದಕರೆಂದು ಪರಿಗಣಿಸಬಹುದು' ಎಂದು ರೈಸರೇ ಘೋಷಿಸುವಷ್ಟರಮಟ್ಟಿಗೆ ಅಯ್ಯಂಗಾರ್‌ರವರ ಸೇವೆ ಈ ಕೃತಿ ಪರಿಷ್ಕರಣದಲ್ಲಿ ಸಂದಿದೆ.

ಇಂತಹುದೇ ಮತ್ತೊಂದು ಸಂದರ್ಭವೆಂದರೆ ಪಂಪಭಾರತದ ಪರಿಷ್ಕರಣದ್ದು. ಇಲ್ಲಿಯೂ ಕೃತಿಯನ್ನು ಸಿದ್ಧಪಡಿಸಿದವರು ಬುರುಡುಗುಂಟೆ ಶ್ರೀನಿವಾಸ ಅಯ್ಯಂಗಾರ್‌ರವರೇ. ಕರಡನ್ನು ತಿದ್ದುವುದು ಮಾತ್ರವಲ್ಲದೆ ಬಿ. ಮಲ್ಲಪ್ಪನವರಲ್ಲಿದ್ದ ಪಂಪಭಾರತದ ಮತ್ತೊಂದು ಸಮಗ್ರ ಹಸ್ತಪ್ರತಿಯನ್ನು ಪಡೆದುಕೊಂಡು ಅದರೊಂದಿಗೆ ಕರಡಚ್ಚನ್ನು ತಾಳೆನೋಡಿದವರು ಆಗಿನ್ನೂ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಆರ್. ನರಸಿಂಹಾಚಾರ್ಯರು. ಕೃತಿ ವಿಶ್ಲೇಷಣೆಯ ಭಾಗವನ್ನು ಸಿದ್ಧಪಡಿಸಿದವರು ಮುಂಬೈ ಸರ್ಕಾರದ ಸೇವೆಯಿಂದ ಎರವಲಾಗಿ ಬಂದಿದ್ದ ಕೆ.ಬಿ. ಪಾಠಕರು. ಹಾಗಾಗಿ ಈ ಹಂತದ ವೇಳೆಗೆ ಬಹುಶಃ ಗ್ರಂಥಸಂಪಾದನೆಯ ಕೆಲಸದಲ್ಲಿ ರೈಸರ ಹೊಣೆಗಾರಿಕೆ ಗಣನೀಯವಾಗಿ ಇಳಿದು ದೇಶೀಯ ವಿದ್ವಾಂಸರ ಪಾತ್ರ ಹೆಚ್ಚಾಗಿರುವುದು ನಿಚ್ಚಳವಾಗಿ ತೋರುತ್ತದೆ.

ಐದನೆಯ ಹಂತ : ಈ ಅಂತಿಮ ಹಂತದಲ್ಲಿ ರೈಸರು ಗ್ರಂಥಸಂಪಾದನೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಮ್ಮ ದೇಶೀಯ ಸಹಾಯಕರಿಗೆ ವಹಿಸಿರುವುದು ಕಂಡುಬರುತ್ತದೆ. ಹಾಗಾಗಿ ಕೃತಿಯ ರಕ್ಷಾಪುಟದಲ್ಲಿ ಸಂಪಾದಕರ ಹೆಸರಿನ ಸ್ಥಳದಲ್ಲಿ ಕಂಡುಬರುವುದು ದೇಶೀಯ ವಿದ್ವಾಂಸರದು ಮಾತ್ರವೇ. ಎರಡನೇ ರಕ್ಷಾಪುಟದ ಮೇಲ್ಭಾಗದಲ್ಲಿ 'ಬಿಬ್ಲಿಯಾಥೆಕಾ ಕರ್ನಾಟಕ' ಎಂಬ ಹೆಸರಿನ ಕೆಳಗೆ "Published under the direction of B.L. Rice C.E., M.R.A.S." ಎಂಬ ಸೂಚನೆಯೊಂದಿಗೆ ಈ ಹಂತದಲ್ಲಿ ಕೃತಿಗಳು ಪ್ರಕಟವಾಗಿವೆ. ಕೆ.ಬಿ. ಪಾಠಕರು ಸಂಪಾದಿಸಿದ 'ಕವಿರಾಜಮಾರ್ಗ' (1898) ಇದಕ್ಕೆ ಅತ್ಯುತ್ತಮ ನಿದರ್ಶನ. ರೈಸರ ಜೀವನವೃತ್ತಾಂತದ ಭಾಗದಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ ತಮಗೆ ಸೂಕ್ತ ಸಹಾಯಕರೊಬ್ಬರನ್ನು ನೀಡುವಂತೆ ಕೋರಿ ರೈಸ್ ಪದೇ ಪದೇ ಸರ್ಕಾರಕ್ಕೆ ಸಲ್ಲಿಸಿದ ಮನವಿಯ ಫಲವಾಗಿ ಎರಡು ವರ್ಷಗಳ ಎರವಲು ಸೇವೆಯ ಮೇರೆಗೆ ಮುಂಬೈ ಅಧಿಪತ್ಯದ ಸೇವೆಯಲ್ಲಿದ್ದ ಪಾಠಕರು 1895ರ ಉತ್ತರಾರ್ಧದಿಂದ 1898ರ ಉತ್ತರಾರ್ಧದವರೆಗೆ ಲೂಯಿರೈಸರ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ಈ ಅವಧಿಯಲ್ಲಿ ಅವರು ಸಂಪಾದಿಸಿದ ಕೃತಿಯೇ ಕವಿರಾಜಮಾರ್ಗ.

1 ಪಂಪರಾಮಾಯಣದ ಪ್ರಸ್ತಾವನೆ, 1892. ಪು. 16.

ಈ ಕೃತಿಯ ಸಂಪಾದನೆ ಮತ್ತು ಪರಿಷ್ಕರಣೆಯ ಸಂಪೂರ್ಣ ಜವಾಬ್ದಾರಿ ಪಾಠಕರದೇ ಆಗಿತ್ತು ಎಂಬುದು ಕೃತಿಯಲ್ಲಿನ ಪ್ರಸ್ತಾವನೆಯಿಂದ ತಿಳಿದುಬರುತ್ತದೆ. ಇಲ್ಲಿ ಪಾಠಕರು 'ಪ್ರಸ್ತುತ ಕೃತಿಯನ್ನು ಸಂಪಾದಿಸುವ ಜವಾಬ್ದಾರಿಯನ್ನು ತಮಗೆ ವಹಿಸಿದ್ದಕ್ಕಾಗಿ' ರೈಸರಿಗೆ ಧನ್ಯವಾದಗಳನ್ನು ಸಮರ್ಪಿಸಿದ್ದಾರೆಯೇ ಹೊರತು ಮಾರ್ಗದರ್ಶನ, ಮೇಲ್ವಿಚಾರಣೆ ಮುಂತಾದ ಯಾವ ಶಬ್ದವನ್ನು ಬಳಸಿಲ್ಲ ಬುರುಡುಗುಂಟೆ ಶ್ರೀನಿವಾಸ ಅಯ್ಯಂಗಾರ್ ರವರು ಕೆ.ಬಿ. ಪಾಠಕರ ಕೆಲಸದಲ್ಲಿ ಸಹಕರಿಸಿದ್ದಾರೆ.

1903ರಲ್ಲಿ ಆರ್. ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ಹೊರಬಂದಿರುವ ನಾಗವರ್ಮನ 'ಕಾವ್ಯಾವಲೋಕನ ಮತ್ತು ಭಾಷಾಭೂಷಣಂ'ನ ಪರಿಷ್ಕೃತ ಸಂಯುಕ್ತ ಆವೃತ್ತಿಯಲ್ಲಿಯೂ ಮೇಲೆ ಹೇಳಿದ ಎಲ್ಲ ಅಂಶಗಳೂ ಪುನರಾವರ್ತನೆಯಾಗಿವೆ.

ಮೇಲಿನ ಐದೂ ಹಂತಗಳಲ್ಲಿ ದೇಶೀಯ ವಿದ್ವಾಂಸರ ನೆರವಿನ ಪ್ರಮಾಣ ಕ್ರಮ ಕ್ರಮವಾಗಿ ಏರಿಕೆಯಾಗಿದೆ. ಮಾತ್ರವಲ್ಲದೆ ರೈಸರು ಮಾತ್ರವೇ ಸಂಪಾದಿಸಿದ ಮೊದಮೊದಲಿನ ಕೃತಿಗಳಿಗಿಂತ ಆನಂತರದ ಕೃತಿಗಳು ಎಲ್ಲ ದೃಷ್ಟಿಯಿಂದಲೂ ಉತ್ತಮವಾಗಿವೆ. ಬಹುಶಃ ಈ ವಾಸ್ತವ ಸ್ಥಿತಿಯನ್ನು ಮನಗಂಡೇ ರೈಸರು ಕಾಲಕ್ರಮದಲ್ಲಿ ಗ್ರಂಥಸಂಪಾದನೆಯ ಜವಾಬ್ದಾರಿಯನ್ನು ತಮ್ಮ ದೇಶೀಯ ಸಹಾಯಕರಿಗೆ ವಹಿಸಿ ತಾವು ಗೆಜೆಟಿಯರ್‌ನ ರಚನೆ, ಎಪಿಗ್ರಾಫಿಯಾ ಸಂಪುಟಗಳ ಪ್ರಕಟಣೆ ಮುಂತಾದ ಇತರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡರೆಂದು ಸ್ಪಷ್ಟವಾಗುತ್ತದೆ.

ಪರಿಣಾಮ :

ರೈಸರು ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳು ಎರಡು ಬಗೆಯವು. ಕನ್ನಡದ ಪ್ರಾಚೀನ ಅಭಿಜಾತ ಕೃತಿಗಳಾದ ಭಾಷಾಭೂಷಣ, ಪಂಪಭಾರತ, ಪಂಪ ರಾಮಾಯಣ, ಶಬ್ದಾನುಶಾಸನ ಮೊದಲಾದವು ಓಲೆಗರಿಗಳಿಂದ ಹೊರಬಂದು ಜನಸಾಮಾನ್ಯರ ಕೈಗೆ ತಲುಪಿದ್ದು ಪ್ರತ್ಯಕ್ಷ ಕೊಡುಗೆಯಾದರೆ ಎಸ್.ಜೆ. ನರಸಿಂಹಾಚಾರ್, ಆರ್. ನರಸಿಂಹಾಚಾರ್, ಎಂ.ಎ. ರಾಮಾನುಜಯ್ಯಂಗಾರ್, ತೋಗೆರೆ ನಂಜುಂಡಶಾಸ್ತ್ರೀ, ಕಡಬದ ನಂಜುಂಡ ಶಾಸ್ತ್ರೀ, ಬಿ. ಮಲ್ಲಪ್ಪ ಮುಂತಾದ ಎರಡನೇ ಪೀಳಿಗೆಯ ಗ್ರಂಥ ಸಂಪಾದನಕಾರರನ್ನು ಸಿದ್ಧಗೊಳಿಸಿದ್ದು ಮತ್ತು ಮೈಸೂರಿನಲ್ಲಿ ಪ್ರಾಚ್ಯವಿದ್ಯಾಸಂಶೋಧನಾಲಯದ ಪ್ರಾರಂಭಕ್ಕೆ ಕಾರಣವಾದದ್ದು ಪರೋಕ್ಷವಾದ, ಆದರೆ ಗಮನಾರ್ಹವಾದ ಕೊಡುಗೆ.

ಈ ಮೊದಲೇ ಪ್ರಸ್ತಾಪಿಸಿದಂತೆ ಗ್ರಂಥಸಂಪಾದನೆಯ ಕಾರ್ಯವನ್ನು ರೈಸ್ ಕೈಗೆತ್ತಿ ಕೊಂಡುದರ ಉದ್ದೇಶ ಕನ್ನಡ ಭಾಷೆ, ಸಾಹಿತ್ಯಗಳ ಮೇಲಿನ ಪ್ರೇಮ. ತಾವು ಪತ್ತೆಹಚ್ಚಿದ ಹಸ್ತಪ್ರತಿಗಳನ್ನು ತಾವೇ ಸಂಪಾದಿಸಿ ಪ್ರಕಟಿಸಿ ಆ ಮೂಲಕ ವಿದ್ವತ್‌ವಲಯದಲ್ಲಿ ಕೀರ್ತಿ, ಶ್ಲಾಘನೆಗಳನ್ನು ಗಳಿಸಬೇಕೆಂಬುದು ಅವರ ಆಶಯವಾಗಿರಲಿಲ್ಲ. ಬದಲಿಗೆ ಕನ್ನಡ ಕೃತಿಗಳ ಪರಿಷ್ಕರಣೆ ದೊಡ್ಡ ಪ್ರಮಾಣದಲ್ಲಿ ನಡೆದು ಬೆಳಕು ಕಾಣದೆ ಅಜ್ಞಾತವಾಗಿರುವ ಪ್ರಾಚೀನ

ಕನ್ನಡ ಕೃತಿಗಳು ಪ್ರಕಾಶಗೊಳ್ಳಬೇಕು ಎಂಬುದು ಅವರ ಹಿರಿಯಾಸೆ. ಈ ಹಿನ್ನೆಲೆಯಲ್ಲಿಯೇ 1875ರಷ್ಟು ಹಿಂದೆಯೇ ಇನ್ನೂ ಕಮಿಷನರ ಆಡಳಿತಕಾಲದಲ್ಲಿಯೇ ಕಿಟೆಲ್ಲರ ಕನ್ನಡ-ಇಂಗ್ಲಿಷ್ ಕೋಶಕ್ಕೆ ಧನ ಸಹಾಯ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ಸರ್ಕಾರಕ್ಕೆ ಅವರು ಸಲ್ಲಿಸಿದ ವರದಿಯಲ್ಲಿ ಈ ಕೆಳಗಿನ ಮಾತುಗಳನ್ನಾಡಿದ್ದಾರೆ.

> *"...Canarese is the distinctive language of Mysore, the original karnataka country, and it seems therefore peculiarly [.....] on the Mysore Government to promote its cultivation. It is one of the most important, philologically considered of the South Indian Languages, and has an extensive literature of considerable value. But, from political circumstances, it has become little known in the world of letters; while being undersettled British government, Telugu and Tamil has had numerous students. My recom-mendation would be, not only in favour of the subvention by this Government for the Dictionary in quotion. But for a standing grant for the promotion of a knowledge of the language by the publication of a critical edition of Canarese classical works, many of which are now in danger of falling into obliving and which ofter the establishment of a native government may perhaps never again see the light..."*[1]

ಈ ಉದ್ದೇಶವನ್ನು ಸಫಲಗೊಳಿಸುವ ಉದ್ದೇಶದಿಂದ ಕನ್ನಡ ಸಾಹಿತ್ಯ ಕೃತಿಗಳನ್ನು ಯಾರು ಸಂಪಾದಿಸಿ ಪರಿಷ್ಕರಿಸಲು ಸಿದ್ಧರಿದ್ದರೂ ಅವರೆಲ್ಲರಿಗೂ ರೈಸರ ಸಹಾಯಹಸ್ತ ಸಹಕಾರ ಸದಾ ದೊರಕುತ್ತಿತ್ತು ಎನ್ನುವುದಕ್ಕೆ ಕೆಳಗಿನ ಅನೇಕ ನಿದರ್ಶನಗಳು ಸಾಕ್ಷಿ :

ನಾಗವರ್ಮನ ಕರ್ಣಾಟಕ ಕಾವ್ಯಾವಲೋಕನವು ಕನ್ನಡದ ಪ್ರಮುಖ ಅಲಂಕಾರ ಗ್ರಂಥಗಳಲ್ಲಿ ಒಂದು. ಈ ಕೃತಿಯ ಹಸ್ತಪ್ರತಿಯನ್ನು ರೈಸ್ ಸುಮಾರು 1870ರ ವೇಳೆಗೇ ಸಂಗ್ರಹಿಸಿದ್ದರು. ಇವರ ಸಂಪಾದನೆ, ಪರಿಷ್ಕರಣಗಳನ್ನು ತಾವೇ ಕೈಗೊಂಡು ವಿಶೇಷವಾದ ಕೀರ್ತಿಯನ್ನು ಗಳಿಸಬಹುದಾಗಿದ್ದ ಎಲ್ಲ ಅವಕಾಶಗಳೂ ಅವರಿಗಿದ್ದವು. ಆದರೆ ನಾಗ ವರ್ಮನ ಛಂದೋಂಬುಧಿಯನ್ನು ಕಿಟೆಲ್ಲರು ಸಂಪಾದಿಸಿದಾಗ ಅದರ ಜೊತೆಜೊತೆಗೇ ಅದೇ ಕವಿಯ ಮತ್ತೊಂದು ಕೃತಿಯನ್ನು ಅವರೇ ಸಂಪಾದಿಸಲಿ ಎಂಬ ಉದ್ದೇಶದಿಂದ ಕಾವ್ಯಾವಲೋಕನದ ಹಸ್ತಪ್ರತಿಗಳನ್ನು ಕಿಟೆಲ್ಲರಿಗೆ ಕಳುಹಿಸಿ ತಾವು ಭಾಷಾಭೂಷಣವನ್ನು

1 ICSA GM 31 of 1875 (1-30)

ಸಂಪಾದಿಸುವುದಾಗಿಯೂ, ಅದೇ ವೇಳೆಗೆ ಕಿಟೆಲರು ಕಾವ್ಯಾವಲೋಕನವನ್ನು ಸಂಪಾದಿಸ ಬೇಕೆಂದೂ ಮಾತನಾಡಿಕೊಂಡರು. ಆದರೆ ಕನ್ನಡ-ಇಂಗ್ಲಿಷ್ ಶಬ್ದಕೋಶದ ಕಡೆಯ ವೇಳೆಗೆ ಕಿಟೆಲರ ಆರೋಗ್ಯ ತೀರಾ ಹದಗೆಟ್ಟು ಅವರು ಸ್ವದೇಶಕ್ಕೆ ಮರಳಬೇಕಾದ್ದರಿಂದ ಕಾವ್ಯಾವಲೋಕನವನ್ನು ಅವರು ಪ್ರಕಟಿಸಲಾಗದೆ ಹಸ್ತಪ್ರತಿಯನ್ನು ರೈಸರಿಗೆ ಹಿಂದಿರುಗಿಸಿ ದರು. ಈ ಪ್ರತಿಗಳನ್ನು ಆಧರಿಸಿಯೇ ಮುಂದೆ ಆರ್. ನರಸಿಂಹಾಚಾರ್ಯರು 1903ರಲ್ಲಿ ಕಾವ್ಯಾವಲೋಕನವನ್ನು ಸಿದ್ಧಪಡಿಸಿದರು.[1]

ವೃತ್ತಿಜೀವನದ ಕಡೆಕಡೆಗೆ ಇತರ ಕಾರ್ಯಗಳ ಒತ್ತಡ ಹೆಚ್ಚಾಗಿ ಸರಿಯಾದ ಸಹಾಯಕ ರಾರೂ ದೊರಕದಿದ್ದಾಗ ರೈಸರಿಗೆ ಗ್ರಂಥಸಂಪಾದನೆಯ ಕಾರ್ಯದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳುವುದು ಕಷ್ಟವಾಯಿತು. ಇದೇ ಸಂದರ್ಭದಲ್ಲಿ ಆಗ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿದ್ದ ಎಸ್.ಜಿ. ನರಸಿಂಹಾಚಾರ್ಯರು ತಮ್ಮ ಬಂಧು ಗಳೂ, ಸಹೋದ್ಯೋಗಿಗಳೂ ಆಗಿದ್ದ ಎಂ.ಎ. ರಾಮಾನುಜ ಅಯ್ಯಂಗಾರ್ ಅವರೊಂದಿಗೆ ಸೇರಿ 1892ರಲ್ಲಿ 'ಕರ್ಣಾಟಕ ಕಾವ್ಯಮಂಜರಿ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದ್ದರು. ಅದರ ಉದ್ದೇಶ "ಪ್ರಾಚೀನ ಕವಿಶ್ರೇಷ್ಠರ ಅತ್ಯುತ್ತಮವಾದ ಚಂಪು, ಷಟ್ಪದಿ, ಗದ್ಯ ಅಲಂಕಾರ, ರಸ, ಛಂದಸ್ಸು, ನಿಘಂಟು, ವ್ಯಾಕರಣ, ಮತವಿಚಾರ, ಕೀರ್ತನೆ, ಮೊದಲಾದ ಗ್ರಂಥಗಳನ್ನು ಅತಿಶ್ಲಾಘ್ಯವಾದ ಕ್ರಮದಲ್ಲಿ ಮುದ್ರಿಸುವುದು".

ಈ ಮಾಸಪತ್ರಿಕೆಯನ್ನು ಆರಂಭಿಸುವುದರ ಹಿಂದೆ ಬಿ.ಎಲ್. ರೈಸರ ಬೆಂಬಲ ಸಾಕಷ್ಟು ಇತ್ತೆಂಬುದಕ್ಕೆ ಸಾಕಷ್ಟು ಆಂತರಿಕ ಸಾಕ್ಷ್ಯಗಳಿವೆ. ಏಕೆಂದರೆ ಪುರಾತತ್ತ್ವ ಇಲಾಖೆಯ 1891ರ ವರದಿಯಲ್ಲಿ

> *"...It is proposed to publish small critical editions of some of the shorter and most intereting old kannada works which may be regarded as classical and which are likely to be very popular. Such are Kabbigara Kavam of Andeya - (Andayya) expressly written in achcha-gannada or pure kannada, also a play called Mitravinda Govinda by Singararya"* ಎಂಬ ಮಾತುಗಳಿವೆ.[2]

ಆದರೆ ಈ ಕೃತಿಗಳಾವುವೂ ಬಿಬ್ಲಿಯಾಥೆಕ ಮಾಲೆಯಲ್ಲಿ ಪ್ರಕಟವಾಗಿಲ್ಲ. ಬದಲಿಗೆ ಈ ಎರಡೂ ಕೃತಿಗಳೂ ರೈಸರೇ ಪತ್ತೆಹಚ್ಚಿದ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮದೊಂದಿಗೆ 1893ರಲ್ಲಿ ಕಾವ್ಯಮಂಜರಿಯಲ್ಲಿ ಪ್ರಕಟವಾದವು.

---

1 ವಿವರಗಳಿಗೆ ನೋಡಿ: ARAD ಪು. 71

2 ಅಲ್ಲೇ, ಪು. 23

ಈ ಬಗ್ಗೆ ರೈಸರೇ "ಕರ್ಣಾಟಕ ಶಬ್ದಾನುಶಾಸನದ ಪೀಠಿಕೆಯಲ್ಲಿ ಉಲ್ಲೇಖಿಸಿರುಂತೆ ನಾನು ಪತ್ತೆ ಹಚ್ಚಿರುವ ಕನ್ನಡದ ಅನೇಕ ಪ್ರಾಚೀನ ಕೃತಿಗಳಲ್ಲಿ ಹಲವು ಮೈಸೂರಿನಿಂದ ಪ್ರತಿ ತಿಂಗಳೂ ಹೊರಡುವ 'ಕಾವ್ಯಮಂಜರಿ'ಯಲ್ಲಿ ಪ್ರಕಟವಾಗುತ್ತಲಿವೆ. ದುರದೃಷ್ಟವಶಾತ್ ಇದರ ಅಚ್ಚಿನ ಮೊಳೆಗಳು ಅಷ್ಟು ಚೆನ್ನಾಗಿಲ್ಲ...."[1]

"....ಕಾವ್ಯಮಂಜರಿಯು ನಾನು ಬೆಳಕಿಗೆ ತಂದ ಅನೇಕ ಕೃತಿಗಳ ಉತ್ತಮ ಭಾಗ ಗಳನ್ನು ಮುದ್ರಿಸುವುದನ್ನು ಮುಂದುವರೆಸಿದೆ..."[2] ಎಂದು ಪ್ರತಿಕ್ರಿಯೆ ತೋರಿಸಿದ್ದಿದೆ. 1894ರಲ್ಲಿ ಪ್ರಕಟವಾದ ಉದಯಾದಿತ್ಯಾಲಂಕಾರ, 1897ರಲ್ಲಿ ಮುದ್ರಿತವಾದ ಕರ್ಣಾಟಕ ಶಬ್ದಸಾರಂ, 1902 ಸೂರ್ಯ ಕವಿಯ ಕವಿಕಂಠಹಾರಂ ಮುಂತಾದವೂ ರೈಸರಿಂದಲೇ ಕೊಡಲ್ಪಟ್ಟವು. ಮಾಲೆಯ ಸಂಪಾದಕರೂ ರೈಸರ ನೆರವನ್ನು ಆಗಿಂದಾಗ್ಗೆ

> *"ಇದರ ಪ್ರತಿಯೊಂದನ್ನು ಮೇ॥ ರೈಸ್ ಸಾಹೇಬರವರು ದಯವಿಟ್ಟು ಕಳುಹಿಸಿಕೊಟ್ಟರು. ಮೇ॥ ಕಿಟಲ್ ಸಾಹೇಬರವರು ತಮ್ಮ ಡಿಕ್ಷನರಿಯಲ್ಲಿ ಈ ಗ್ರಂಥವನ್ನು ಅಲ್ಲಲ್ಲಿ ಅನುವಾದ ಮಾಡಿದ್ದಾರೆ. ..... ಪ್ರತಿಯನ್ನು ಕಳುಹಿಸಿ ಕೊಟ್ಟಿದುದಕ್ಕಾಗಿ ಮೇ॥ ರೈಸ್ ಸಾಹೇಬರಿಗೆ ಕೃತಜ್ಞರಾಗಿದ್ದೇವೆ....."* [3]

ಮುಂತಾಗಿ ಸ್ಮರಿಸಿದ್ದಿದೆ. ಪಂಪನ ಆದಿಪುರಾಣ, ರನ್ನನ ಗದಾಯುದ್ಧ, ಮುದ್ದಣನ ರಾಮಾಶ್ವಮೇಧ ಮುಂತಾದ ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿ ಪರಿಷ್ಕರಿಸಿದ ಕೀರ್ತಿ ಈ ಇಬ್ಬರೂ ಸಂಪಾದಕರಿಗೆ ಸಲ್ಲುತ್ತದೆ. ಇವರಿಬ್ಬರಿಗೂ ಬೆಂಬಲವಾಗಿ ನಿಲ್ಲುವ ಮೂಲಕ ರೈಸರೂ ಪರೋಕ್ಷವಾಗಿ ಇವುಗಳ ಪ್ರಕಟಣೆಗೆ ಕಾರಣರಾಗಿದ್ದಾರೆ.

ಆರ್. ನರಸಿಂಹಾಚಾರ್ಯ, ಎಸ್.ಜಿ. ನರಸಿಂಹಾಚಾರ್ಯ, ಎಂ.ಎ. ರಾಮಾನುಜ ಅಯ್ಯಂಗಾರ್, ಪರಿಷತ್ತಿನ ಪಂಪಭಾರತದ ಪರಿಷ್ಕರಣದಲ್ಲಿ ಸಹಕರಿಸಿದ ತೋಗೆರೆ ನಂಜುಂಡಶಾಸ್ತ್ರಿಗಳು, ಮುಂತಾದವರೆಲ್ಲ ರೈಸರ ನೇರವಾದ ಸಂಪರ್ಕದಿಂದ ಗ್ರಂಥ ಸಂಪಾದನೆಯ ದೀಕ್ಷೆಯನ್ನು ಪಡೆದವರು. ಇವರೆಲ್ಲರನ್ನೂ ಆದರ್ಶವಾಗಿರಿಸಿಕೊಂಡವರು ಮುಂದಿನ ಪೀಳಿಗೆಯ ವಿದ್ವಾಂಸರಾದ ಬೆಳ್ಳಾವೆ ವೆಂಕಟನಾರಾಯಣಪ್ಪ, ಟಿ.ಎಸ್. ವೆಂಕಣ್ಣಯ್ಯ ಎ.ಆರ್. ಕೃಷ್ಣಶಾಸ್ತ್ರೀ, ಡಿ.ಎಲ್. ನರಸಿಂಹಾಚಾರ್ಯ, ತೀ.ನಂ. ಶ್ರೀಕಂಠಯ್ಯ ಮುಂತಾ ದವರು ಇವರ ಶಿಷ್ಯ-ಪ್ರಶಿಷ್ಯರಾದ ಎಲ್. ಬಸವರಾಜು, ಜಿ. ವರದರಾಜರಾವ್, ಟಿ.ವಿ. ವೆಂಕಟಾಚಲಶಾಸ್ತ್ರೀ, ಬಿ.ಎಸ್. ಸಣ್ಣಯ್ಯ ಎಚ್. ದೇವೀರಪ್ಪ, ಎನ್. ಬಸವಾರಾಧ್ಯ ದೇಜಗೌ, ಮುಂತಾದ ವಿದ್ವಾಂಸರು ಈ ಪರಂಪರೆಯನ್ನು ಮುಂದುವರೆಸಿದ್ದಾರಲ್ಲದೆ

---

1 ಅಲ್ಲೇ, ಪು. 31ರಲ್ಲಿಯ ಭಾಗದ ಅನುವಾದ

2 ಅಲ್ಲೇ, ಪು. 34ರ ಭಾಗದ ಅನುವಾದ

3 ನರಸಿಂಹಾಚಾರ್ಯ ಎಸ್.ಜಿ. ಮತ್ತು ರಾಮಾನುಜಯ್ಯಂಗಾರ್ ಎಂ.ಎ. (ಸಂ) ಕರ್ಣಾಟಕ ಶಬ್ದಸಾರಂ ಪೀಠಿಕೆ, 1897 ಪುಟ: ನಮೂದಿಸಿಲ್ಲ

ಅನೇಕ ಯುವ ಗ್ರಂಥಸಂಪಾದನಕಾರರನ್ನು ಸಿದ್ಧಗೊಳಿಸಿದ್ದಾರೆ. ಹೀಗೆ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಗ್ರಂಥಸಂಪಾದನೆಯ ಕಾರ್ಯಕ್ಕೆ ರೈಸರು ಭದ್ರಬುನಾದಿಯನ್ನು ಹಾಕಿದ್ದಾರೆ.

ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ರೈಸರಿಂದ ಪರೋಕ್ಷವಾಗಿ ಸಂದಿರುವ ಮತ್ತೊಂದು ಕೊಡುಗೆಯೆಂದರೆ ಮೈಸೂರಿನಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ಸ್ಥಾಪನೆ. ಈ ಮೊದಲೇ ಪ್ರಸ್ತಾಪಿಸಿದಂತೆ ಸಂಸ್ಥಾನದಾದ್ಯಂತ ಹರಡಿ ಹಂಚಿಹೋಗಿರುವ ಅಮೂಲ್ಯ ಹಸ್ತಪ್ರತಿಗಳನ್ನು ಒಂದೆಡೆ ಸಂಗ್ರಹಿಸಿಡುವ ವ್ಯವಸ್ಥೆಯಾಗಬೇಕು ಎಂದು ರೈಸರು ಸರ್ಕಾರವನ್ನು ಆಗಿಂದಾಗ್ಗೆ ಒತ್ತಾಯಿಸುತ್ತಿದ್ದರು. ಮಹಾರಾಜರಿಂದ ಇದಕ್ಕೆ ಅನುಮೋದನೆ ದೊರೆತು ಕಟ್ಟಡಕ್ಕಾಗಿ ಹುಡುಕಾಟ ನಡೆದಿದ್ದಾಗ ಕನ್ನಡ ನಾಡಿನ ಶಾಸನ ಸಂಪತ್ತಿನ ಆಯ್ದಮಾದರಿಗಳನ್ನು ಪ್ರದರ್ಶಿಸುವ ಸಲುವಾಗಿ ನಿರ್ಮಿಸಲು ಉದ್ದೇಶಿಸಿದ್ದ 'ವಿಕ್ಟೋರಿಯಾ ಜ್ಯುಬಿಲಿ ಹಾಲಿನಲ್ಲಿಯೇ ಕನ್ನಡ ಮತ್ತು ಸಂಸ್ಕೃತ ಹಸ್ತಪ್ರತಿಗಳನ್ನು ಸಂಗ್ರಹಿಸಿಡುವ ಬಗ್ಗೆ ಅವರು ಇಲಾಖೆಯ 1888ರ ವಾರ್ಷಿಕ ವರದಿಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.

> *".... In the same building it is proposed to form a collection of manuscripts of sanskrit and kannada literature, which will be available for consultation by learned men. The special arrangement for carrying out this scheme have not yet been metured."*[1]

ಮುಂದೆ 1891ರಲ್ಲಿ ಇದೇ ಕಟ್ಟಡದಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯವು ಅರಂಭವಾಯಿತು. ಈ ಸಂಸ್ಥೆಗೆ ರೈಸರು ತಾವು ಪ್ರತಿಮಾಡಿಸಿ ಇರಿಸಿದ್ದ ಬಹುಸಂಖ್ಯೆಯ ಸಾಹಿತ್ಯ ಕೃತಿಗಳ ಪ್ರತಿಗಳನ್ನು ರಟ್ಟು ಕಟ್ಟಿಸಿ 'ಬಿಬ್ಲಿಯಾಥೆಕ ಕರ್ನಾಟಕ ಮಾಲೆಯ ಕೃತಿಗಳು' ಎಂಬ ಸೂಚನೆಯೊಂದಿಗೆ ಕಳುಹಿಸಿಕೊಟ್ಟಿರುವುದಾಗಿ 1893ರ ಇಲಾಖಾ ವರದಿ ತಿಳಿಸುತ್ತದೆ.[2] ಮುಂದೆ ಈ ಸಂಗ್ರಹಾಲಯವು ಎಷ್ಟು ಬೃಹತ್ತಾಗಿ ಬೆಳೆಯಿತೆಂದರೆ ಶಾಸನಗಳ ಪ್ರದರ್ಶನಕ್ಕೆ ಬದಲಾಗಿ ಇಡಿಯ ಕಟ್ಟಡವನ್ನು ಹಸ್ತಪ್ರತಿಗಳ ಸಂಗ್ರಹಣೆಗೆಂದೇ ಬಳಸಿಕೊಳ್ಳುವಂತಾಗಿದೆ.

ತನ್ನೆಲ್ಲಾ ಇತಿಮಿತಿಗಳ ನಡುವೆಯೂ ಸ್ವಪ್ರಯತ್ನದಿಂದ ಗ್ರಂಥಸಂಪಾದನೆಯಂತಹ ಕಠಿಣ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಲ್ಲದೆ ಯುವ ದೇಶೀಯ ವಿದ್ವಾಂಸರನ್ನೂ ಆ ಕಾರ್ಯಕ್ಕೆ ಆಕರ್ಷಿಸುವ ಮೂಲಕ ರೈಸರು ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ವಿಶೇಷವಾದ ಉಪಕಾರವನ್ನು ಮಾಡಿದ್ದಾರೆ ಎನ್ನುವುದು ಅತಿಶಯೋಕ್ತಿಯಲ್ಲ.

★ ✵ ★

7. ಗೆಜೆಟಿಯರ್ ಪ್ರವರ್ತಕ

'ಗೆಜೆಟಿಯರ್' ಎಂಬ ಆಂಗ್ಲ ಶಬ್ದದ ಮೂಲ ಅರ್ಥ 'ಭೂವಿವರಣ ಸೂಚಿ' ಎಂದಷ್ಟೇ.[1] ಆದರೆ ಇಂದು ಈ ಶಬ್ದವು ತನ್ನ ಅರ್ಥವ್ಯಾಪ್ತಿಯನ್ನು ಹೆಚ್ಚಿಸಿಕೊಂಡು 'ನಿರ್ದಿಷ್ಟ ಪ್ರದೇಶ ಒಂದರ ಭೌಗೋಳಿಕ ಪರಿಸರ, ಪ್ರಾಕೃತಿಕ ಸಂಪತ್ತು, ಪ್ರೇಕ್ಷಣೀಯ ಸ್ಥಳಗಳು; ಅಲ್ಲಿಯ ಜನರ ಮಾನವಶಾಸ್ತ್ರೀಯ ವಿವರಗಳು, ಚರಿತ್ರೆ, ಆಡಳಿತ ಪದ್ಧತಿ, ನ್ಯಾಯವಿಧಾನ, ಕಲೆ, ಸಂಸ್ಕೃತಿ, ಸಾಹಿತ್ಯ, ಜೀವನವಿಧಾನ, ಉದ್ಯಮ, ಆರ್ಥಿಕತೆ ಮುಂತಾದ ಸಮಸ್ತ ವಿವರಗಳನ್ನು ಒಳಗೊಂಡ ಕೋಶ' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಕೇವಲ ಸರ್ಕಾರಿ ವರದಿಗಳು ಹಾಗೂ ಅಂಕಿಅಂಶಗಳ ಕೋಷ್ಠಕಗಳಿಂದ ತುಂಬಿ ಶುಷ್ಕವಾಗಬಹುದಾಗಿದ್ದ ಈ ದಾಖಲೆಗಳು, ಅವುಗಳ ಸಂಪಾದಕರ ವೈಯಕ್ತಿಕ ಆಸಕ್ತಿ, ಶ್ರದ್ಧೆಗಳ ಕಾರಣದಿಂದಾಗಿ ಸಾರ್ವಕಾಲಿಕ ಅಧ್ಯಯನಯೋಗ್ಯ ಪರಾಮರ್ಶನ ಕೃತಿಗಳಾಗಿ ಬದಲಾಗಿರುವ ಉದಾಹರಣೆಗಳೂ ಇವೆ. ಅದಕ್ಕೆ ಶ್ರೇಷ್ಠ ನಿದರ್ಶನವೆಂದರೆ ಲೂಯಿರೈಸರು ೧೮೭೬ರಲ್ಲಿ ಮೊದಲು ಸಂಕಲಿಸಿ ಅನಂತರ ೧೮೯೭ರಲ್ಲಿ ಅವರೇ ಪರಿಷ್ಕರಿಸಿದ ಮೂರು ಭಾಗಗಳ 'ಮೈಸೂರು ಗೆಜೆಟಿಯರ್ ಸಂಪುಟಗಳು'.

ನಾಡಿನ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ, ಆಡಳಿತಾತ್ಮಕ, ಧಾರ್ಮಿಕ ಹಾಗೂ ಔದ್ಯಮಿಕ ವಿವರಗಳನ್ನು ಒಳಗೊಂಡಿರುವ ಈ ಸಂಪುಟಗಳು ಮೈಸೂರು ಸಂಸ್ಥಾನದ ಸಮಗ್ರ ಮಾಹಿತಿ ಕೋಶದಂತಿದೆ. ರೈಸರ ಈ ಕೃತಿಗಳನ್ನು ಆಧರಿಸಿಯೇ ಮುಂದಿನ ಹಲವಾರು ವಿದ್ವಾಂಸರು ತಮ್ಮ ಕೃತಿಗಳನ್ನು ರಚಿಸಿದ್ದಾರೆ.

ರೈಸ್‌ಪೂರ್ವದ ಮೈಸೂರು ಪ್ರಾಂತ್ಯದ ಗೆಜೆಟಿಯರ್‌ಗಳು :

ಮೈಸೂರು ಸಂಸ್ಥಾನದಲ್ಲಿ ಗೆಜೆಟಿಯರ್‌ಗಳ ರಚನೆಗೆ ಸಂಬಂಧಿಸಿದಂತೆ ಪ್ರಸ್ತುತ ದೊರೆಯುವ ಮೊತ್ತಮೊದಲ ದಾಖಲೆಯೆಂದರೆ ೧೮೬೭ರಲ್ಲಿ ಆಗಿನ ಪ್ರಭಾರಿ ಚೀಫ್ ಕಮೀಷನರ್ ಆಗಿದ್ದ ಸಿ.ಬಿ. ಸ್ಯಾಂಡರ್ಸ್ ನಂದಿದುರ್ಗ, ಅಷ್ಟಗ್ರಾಮ ಹಾಗೂ ನಗರ ಡಿವಿಷನ್‌ಗಳ ಸೂಪರಿಂಟೆಂಡೆಂಟರಿಗೆ ಕಳುಹಿಸಿದ್ದ ಸೂಚನೆಗಳು.[2] ಬ್ರಿಟಿಷ್ ಚಕ್ರಾಧಿಪತ್ಯದ ವಿದೇಶಾಂಗ ಖಾತೆಯ ಕಾರ್ಯದರ್ಶಿಯು ಅಕ್ಟೋಬರ್ ತಿಂಗಳ ೧೯ರಂದು ಬರೆದ ಪತ್ರದ (ಸಂಖ್ಯೆ ೧೭೫೮) ಉಲ್ಲೇಖವಿರುವ ಈ ದಾಖಲೆಯಲ್ಲಿ

1 A geographical index or dictionary – **Compact Oxford Dictionary**, P 372, 2005.

2 K.S.A. G.M. 4 of 1866, 1-3, Gen 1657/13.

> *'.... With reference to the orders therein conveyed to request that you will be good enough to take early measures with a view of carrying out the instructions previously.... (ಸ್ಪಷ್ಟವಿಲ್ಲ) for the compilation of the Gazetteer for each districts in your divisions in accordance with the plan adopted in the Central provinces....'*

ಎಂಬ ಸೂಚನೆ ಇದೆ. ರಿಚರ್ಡ್ ಟೆಂಪಲ್‌ನ ಆದೇಶದ ಮೇರೆಗೆ ೧೮೬೭ರಲ್ಲಿ ದೇಶದಾದ್ಯಂತ ಸರ್ವೇಕ್ಷಣೆ ಆರಂಭವಾದಾಗಲೇ ಮೈಸೂರು ಪ್ರಾಂತ್ಯದಲ್ಲಿಯೂ ಗೆಜೆಟಿಯರ್‌ನ ರಚನೆ ಆರಂಭವಾಯಿತು ಎಂಬುದನ್ನು ಈ ದಾಖಲೆ ಸ್ಪಷ್ಟಪಡಿಸುತ್ತದೆ. ಆದರೆ ಯೋಜನೆಯ ಪ್ರಕಾರ ಎಲ್ಲಾ ಎಂಟು ಜಿಲ್ಲೆಗಳ ಗೆಜೆಟಿಯರ್‌ಗಳು ಪ್ರಕಟವಾಗಬೇಕಿದ್ದರೂ ಕಾರಣಾಂತರಗಳಿಂದ ಕೇವಲ ಮೈಸೂರು ಹಾಗೂ ಕೋಲಾರ ಜಿಲ್ಲೆಗಳ ಗೆಜೆಟಿಯರ್‌ಗಳು ಮಾತ್ರ ಪ್ರಕಟವಾದವು.[1] ಬೆಂಗಳೂರು ಹಾಗೂ ಕಡೂರಿನ ಸಂಪುಟಗಳು ಪೂರ್ಣಗೊಳ್ಳಲೇ ಇಲ್ಲ. "ಕ್ಯಾಪ್ಟನ್ ಗೊರ್ಡಾನ್ ಕುಮ್ಮಿಂಗ್, ಮೇಜರ್ ಡಬ್ಲ್ಯೂ ಹಿಲ್, ಮೇಜರ್ ಸಿ. ಪಿಯರ್ಸ್ ಹಾಗೂ ಎನ್. ಕೃಷ್ಣರಾವ್ ಇವರುಗಳು ಕ್ರಮವಾಗಿ ಶಿವಮೊಗ್ಗ, ಹಾಸನ, ತುಮಕೂರು ಹಾಗೂ ಚಿತ್ರದುರ್ಗಗಳ ಗೆಜೆಟಿಯರ್‌ಗಳನ್ನು ಸಿದ್ಧಪಡಿಸಿದರಾದರೂ ಇವಾವುವೂ ಪ್ರಕಟವಾಗಲಿಲ್ಲ. ಮೇಜರ್ ಲಿಂಡ್ಸೆ ಸಲ್ಲಿಸಿದ ೧೮೭೧ರ ಜನಗಣತಿಯನ್ನು ಕುರಿತಾದ ವರದಿ ಈ ಬರಹಗಳಲ್ಲಿ ಇದ್ದ ಅಂಕಿಅಂಶಗಳನ್ನೆಲ್ಲ ಬದಲಿಸಿತು."[2]

ಪ್ರಸ್ತುತ ಲಭ್ಯವಿರುವ ಮೈಸೂರು ಹಾಗೂ ಕೋಲಾರ ಜಿಲ್ಲೆಯ ಸಂಪುಟಗಳನ್ನು ಅಧ್ಯಯನದಿಂದ ರೈಸರ ಪೂರ್ವದಲ್ಲಿ ಗೆಜೆಟಿಯರ್‌ನ ಸ್ವರೂಪ ಹೇಗಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಮೈಸೂರು ಜಿಲ್ಲೆಯ ಗೆಜೆಟಿಯರ್ (೧೮೬೯) :

ಒಟ್ಟು ೧೧೫ ಪುಟಗಳ, ಡೆಮಿ ೧/೮ ಆಕಾರದ ಈ ಕೃತಿಯು ೧೮೬೯ರಲ್ಲಿ ಬೆಂಗಳೂರು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿತವಾಗಿದ್ದು ಇದರಲ್ಲಿ General Description, Mountains, Rivers, Tanks, Channels, Minerals, Vegitable, Production, Animals – Domesticated, Animals–Wild, Agriculture, Manufacture, Commerce Education, Health, Forests, Roads ಎಂಬ ಅಧ್ಯಾಯಗಳೂ ಅನಂತರ ತಾಲ್ಲೂಕುವಾರು ವಿವರಗಳೂ ಇವೆ. ಅಧ್ಯಾಯವು ಆರಂಭವಾಗುವ ಪುಟದ

1 Hayavadana Rao C., **Gazetteer of Mysore**. Vol I, P V. 1927.

2 Rice, B.L., **Mysore Gazetteer**. Vol I, Page XII (preface to first edition) 1897, 2nd Edition.

ಸಂಖ್ಯೆಯನ್ನು ಗಮನಿಸಿದರೆ ಬಹುತೇಕ ಪ್ರತಿಯೊಂದು ಅಧ್ಯಾಯವೂ ನಾಲ್ಕಾರು ಪುಟಗಳಿಗಿಂತ ಹೆಚ್ಚು ವಿಸ್ತಾರವಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ. ಅಧ್ಯಾಯಗಳ ವಿಭಜನೆಯು ಬಹುಮಟ್ಟಿಗೆ ಶಾಸ್ತ್ರೀಯವಾಗಿದೆಯಾದರೂ General descriptions, Mountains ನಂತಹ ಪ್ರಮುಖ ವಿಷಯಗಳಿಗೂ ಕೇವಲ ಒಂದೆರಡು ಪ್ಯಾರಾಗಳಷ್ಟೇ ಸ್ಥಳ ದೊರೆತಿದೆ. ಈ ಅತೀ ಸಂಕ್ಷಿಪ್ತತೆಯ ಕಾರಣದಿಂದ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಪರಿಪೂರ್ಣವಾದ ಮಾಹಿತಿಯಾಗಲೀ, ಅದರ ವಿಶ್ಲೇಷಣಾತ್ಮಕ ವಿವರಣೆಯಾಗಲೀ ಕಾಣಸಿಗುವುದಿಲ್ಲ. ಕೇವಲ ತತ್ಕಾಲೀನ ಅಂಕಿಅಂಶಗಳನ್ನಷ್ಟೇ ಇಲ್ಲಿ ದಾಖಲಿಸಲಾಗಿದೆ.

ಈ ಕೃತಿಯ ಸವಿವರವಾದ ವಿಮರ್ಶೆಗೆ ಅವಕಾಶವಿಲ್ಲದಿರುವುದರಿಂದ ಕೇವಲ ಗುಣದೋಷಗಳನ್ನು ಹೀಗೆ ಪಟ್ಟಿಮಾಡಬಹುದು :

* ಯಾವುದೇ ಸ್ಥಳದ ಗೆಜ಼ೆಟಿಯರ್‌ನ ಆರಂಭದಲ್ಲಿ ಆ ಸ್ಥಳನಾಮದ ಮೂಲವನ್ನು ಕುರಿತು ಚರ್ಚಿಸುವುದು ಪದ್ಧತಿ. ಆದರೆ ಈ ಕೃತಿಯಲ್ಲಿ 'ಮೈಸೂರು' ಎಂಬ ಶಬ್ದದ ನಿಷ್ಪತ್ತಿಯ ಬಗೆಗೆ ಯಾವ ವಿವರಣೆಯೂ ಇಲ್ಲ.

* ಜನಸಂಖ್ಯೆಯನ್ನು ಸೂಚಿಸುವ ಕೋಷ್ಠಕವೊಂದನ್ನು ಕೃತಿಯ ಕಡೆಯಲ್ಲಿ ನೀಡಲಾಗಿದೆ ಯಾದರೂ ಜನಸಾಂದ್ರತೆ, ನಾಗರಿಕ ಹಾಗೂ ಗ್ರಾಮೀಣ ಜೀವನ, ವೈವಾಹಿಕ ಪದ್ಧತಿಗಳು, ಭಾಷೆ, ಧರ್ಮ, ಜಾತಿ, ಸಾಮಾಜಿಕ ಜೀವನ, ಶವಸಂಸ್ಕಾರ ಪದ್ಧತಿಗಳು, ಮನೆಗಳ ಮಾದರಿಗಳು, ಹಬ್ಬ-ಹರಿದಿನ ಗಳು, ಮುಂತಾದ ಯಾವ ಸಮಾಜಶಾಸ್ತ್ರೀಯ ಅಂಶಗಳ ಬಗೆಗೂ ಇಲ್ಲಿ ಮಾಹಿತಿ ಲಭ್ಯವಿಲ್ಲ.

* ಗೆಜ಼ೆಟಿಯರ್‌ಗಳ ನೇರ ಹಾಗೂ ಹೆಚ್ಚಿನ ಉಪಯೋಗವಿರುವುದು ಆಡಳಿತಗಾರರಿಗೆ. ಹಾಗಾಗಿ ಜಿಲ್ಲೆಯ ಆಡಳಿತ ಪದ್ಧತಿ, ಅದರ ಇತಿಹಾಸ, ಸ್ಥಳೀಯ ಸ್ವಯಂ ಆಡಳಿತ, ನ್ಯಾಯಾಂಗ ಪದ್ಧತಿ ಇತ್ಯಾದಿ ವಿಷಯಗಳ ಸಮಗ್ರವೂ ಸವಿಸ್ತಾರವೂ ಆದ ಮಾಹಿತಿ ಗೆಜ಼ೆಟಿಯರ್‌ಗಳಲ್ಲಿ ಇರಬೇಕಾದ್ದು ಅತ್ಯವಶ್ಯಕ. ಆದರೆ ಈ ಯಾವ ಅಂಶದ ಕಡೆಗೂ ಇಲ್ಲಿ ಒತ್ತನ್ನು ನೀಡಲಾಗಿಲ್ಲ.

* ರಸ್ತೆಗಳ ಬಗೆಗೆ ಮಾಹಿತಿ ಇದೆಯಾದರೂ ಸಂಚಾರ ವ್ಯವಸ್ಥೆಗೆ ಸಂಬಂಧಿಸಿದ ಯಾವ ವಿವರಗಳು ಇಲ್ಲ.

* ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯ ಬಗ್ಗೆ ಲಭ್ಯವಿದ್ದಷ್ಟು ಮಾಹಿತಿಯನ್ನು ಲೇಖಕರು ಅಲ್ಲಲ್ಲಿ ನೀಡಿದ್ದಾರೆ. ಉದಾಹರಣೆಗೆ ಮೈಸೂರು ನಗರದ ಇತಿಹಾಸ, ಅಲ್ಲಿಯ ಕೋಟೆ ಕೊತ್ತಲಗಳು, ಹಿಂದೂ ಶೈಲಿಯ ಅರಮನೆ, ದಂತದ ಸಿಂಹಾಸನ - ಅದು ಟಿಪ್ಪುವಿನ ಗೋದಾಮಿನಲ್ಲಿ ಬಿದ್ದಿದ್ದದ್ದು ಇತ್ಯಾದಿ. ಅಷ್ಟೇ ಅಲ್ಲದೆ ಪ್ರತಿ ತಾಲ್ಲೂಕಿನ ಪ್ರಮುಖ ಊರುಗಳ ಬಗ್ಗೆ ವಿವರಿಸುವಾಗ ಸಾಧ್ಯವಿದ್ದಲ್ಲಿ ಅದರ ಚರಿತ್ರೆಯನ್ನು ನಿರೂಪಿಸಿದ್ದಾರೆ. ರಾಮ

ಸಮುದ್ರದ ವಿವರಣೆಯ ಸಂದರ್ಭದಲ್ಲಿ ಅಲ್ಲಿನ ಆಂಜನೇಯ, ಜನಾರ್ದನ ಹಾಗೂ ವೀರಭದ್ರ ದೇವಾಲಯಗಳ ಮುಂದೆ ಎರಡು ಶಾಸನಗಳಿರುವುದನ್ನು ಪ್ರಸ್ತಾಪಿಸಿ 'ಅವುಗಳು ಬಹುಮಟ್ಟಿಗೆ ಅಳಿಸಿಹೋಗಿವೆ. ಇವುಗಳಲ್ಲಿ ಒಂದು ಕ್ರಿ.ಶ. ೧೪೩೭ರದ್ದು, ತೆರಕಣಾಂಬಿಯ ರಾಜ ದೇವರಾಯನದು' ಎಂದಿದ್ದಾರೆ.[1] ಆದರೆ ಈ ಮಾಹಿತಿ ಅವರಿಗೆ ಲಭ್ಯವಾದದ್ದು ಹೇಗೆ? ಶಾಸನವನ್ನು ಓದಿದವರು ಯಾರು? ಎಂಬ ಅಂಶಗಳನ್ನು ವಿವರಿಸಿಲ್ಲ. ಅದೇ ರೀತಿಯಲ್ಲಿ ಸೋಮನಾಥಪುರವನ್ನು ವಿವರಿಸುವಾಗ ಅಲ್ಲಿನ ಸಂಸ್ಕೃತ ಶಾಸನವೊಂದನ್ನು ಪ್ರಸ್ತಾಪಿಸಿದ್ದರಲ್ಲದೇ ಅಲ್ಲಿಯ ಶ್ಲೋಕಗಳ ಇಂಗ್ಲೀಷ್ ಅನುವಾದವನ್ನೂ ನೀಡಿದ್ದಾರೆ.[2] ಇದೆಲ್ಲದರಿಂದಾಗಿ ಸಾಧ್ಯವಾದಲ್ಲೆಲ್ಲಾ ಐತಿಹಾಸಿಕ ವಿವರಗಳನ್ನೂ ನೀಡಬೇಕೆಂಬ ಪ್ರಜ್ಞೆ ಲೇಖಕರಲ್ಲಿ ಜಾಗ್ರತವಾಗಿತ್ತೆಂಬುದು ತಿಳಿದುಬರುತ್ತದೆಯಾದರೂ ಇತಿಹಾಸದ ನಿರೂಪಣೆ ಒಂದು ಪ್ರತ್ಯೇಕವಾದ ಅಧ್ಯಾಯವಾಗಿ, ಸಮಗ್ರವಾಗಿ ಬರಬೇಕಿದ್ದುದರ ಅಗತ್ಯವನ್ನು ತಳ್ಳಿಹಾಕುವಂತಿಲ್ಲ.

* ಪೌರಾಣಿಕ ಸಂಗತಿಗಳ ಐತಿಹ್ಯಗಳ ಪ್ರಸ್ತಾಪ ಈ ಕೃತಿಯಲ್ಲಿ ಇಲ್ಲವೇ ಇಲ್ಲ ಅನ್ನುವಷ್ಟು ಕಡಿಮೆ. ಕಾವೇರಿ ನದಿಯ ಬಗ್ಗೆ ವಿವರಿಸುವಾಗ '....in the point of sanctity, the Kaveri is perhaps inferior only to the Ganges... In the eyes of the Brahmin, a bathe in the Kaveri is, to be purified from all Sin....' ಎಂದು ಹೇಳಿ ಅನಂತರ ಮೂರೇ ಸಾಲಿನಲ್ಲಿ ಕಾವೇರಿ ನದಿಯ ಉಗಮಕ್ಕೆ ಸಂಬಂಧಿಸಿದ ಕಥೆಯನ್ನು ಹೇಳಿ ಮುಗಿಸಿದ್ದಾರೆ.[3]

* ಸಸ್ಯ-ಪ್ರಾಣಿಗಳನ್ನು ವಿವರಿಸುವಾಗ ಅವುಗಳ ವೈಜ್ಞಾನಿಕ ದ್ವಿನಾಮಗಳನ್ನು (Scientific Binomial Name) ಬಳಸುವುದು ಹೆಚ್ಚು ರೂಢಿ. ಮೈಸೂರು ಗೆಜೆಟಿಯರ್‌ನಲ್ಲಿ ಭತ್ತ, ರಾಗಿ, ನವಣೆ, ಮುಂತಾದ ಕೆಲವು ಧಾನ್ಯಗಳ ವೈಜ್ಞಾನಿಕ ಹೆಸರುಗಳನ್ನು ನೀಡಲಾಗಿದೆಯಾದರೂ ಎಲ್ಲ ಸಸ್ಯಗಳಿಗೂ ಅಲ್ಲ. ಪ್ರಾಣಿಗಳಲ್ಲಿಯಂತೂ ಯಾವುದಕ್ಕೂ ವೈಜ್ಞಾನಿಕ ಹೆಸರು ನಮೂದಾಗಿಲ್ಲ. ಜಿಲ್ಲೆಯಲ್ಲಿನ ನದಿಗಳಲ್ಲಿ ಕಾಣಸಿಗುವ ಮೀನುಗಳ ವಿಧಗಳನ್ನು ವಿವರಿಸುವಾಗ 'The following are the Canarese names of the fish found in the rivers of the Mysore district' ಎಂದು ಹೇಳಿ, ಗೆಂಡೆ, ಬಾಳೆ, ಹಾವು ಮುಂತಾದ ೨೨ ವಿಧದ ಮೀನುಗಳನ್ನು ದಾಖಲಿಸಿದ್ದಾರಾದರೂ ಅವುಗಳ ಇಂಗ್ಲಿಷ್ ಸಾಮಾನ್ಯ ಹೆಸರು, ವೈಜ್ಞಾನಿಕ ಹೆಸರು ಇತ್ಯಾದಿ ಯಾವ ಮಾಹಿತಿಯೂ ಇಲ್ಲ.[4]

---

1 P 76.

2 P 100-107

3 P 4

4 P 6

* ಇಲ್ಲಿಯ ಅಧ್ಯಾಯಗಳ ವಿಂಗಡಣೆ ಬಹುಮಟ್ಟಿಗೆ ಆಧುನಿಕ ಗೆಜೆಟಿಯರುಗಳನ್ನೇ ಹೋಲುತ್ತದೆಯಾದರೂ ಅದರಲ್ಲಿನ ವಿಷಯ ಪ್ರತಿಪಾದನೆಯಲ್ಲಿ ವಿಚಿತ್ರವೆನಿಸುವಷ್ಟರ ಮಟ್ಟಿಗೆ ಅಸಂಗತಗಳಿವೆ. ಉದಾಹರಣೆಗೆ 'Vegetable productions' ಎಂಬ ಅಧ್ಯಾಯದಲ್ಲಿ ಆಲೂಗಡ್ಡೆ ಮತ್ತು ಕಲ್ಲಂಗಡಿ ಹಣ್ಣುಗಳನ್ನು ಬಿಟ್ಟರೆ ಬೇರೆಯಾದ ತರಕಾರಿಯ ಪ್ರಸ್ತಾಪವೂ ಇಲ್ಲ. ಇದಕ್ಕೆ ಬದಲಾಗಿ ಇಲ್ಲಿರುವುದು ಭತ್ತ, ರಾಗಿ, ನವಣೆ, ಬರಗು, ಸಾಮೆ, ಅವರೆ, ತೊಗರಿ, ಹತ್ತಿ, ಕಾಫಿ, ತಂಬಾಕು, ರೇಷ್ಮೆ ಮುಂತಾದವುಗಳ ವಿವರ. ವಿಚಿತ್ರವೆಂದರೆ 'Agriculture' ಎಂಬ ಪ್ರತ್ಯೇಕ ಅಧ್ಯಾಯವೂ ಇದೇ ಕೃತಿಯಲ್ಲಿದ್ದು ಇದರಲ್ಲಿ ಮೇಲೆ ನಮೂದಿಸಿದ ಎಲ್ಲ ವಸ್ತು, ಧಾನ್ಯಗಳನ್ನು ಬೆಳೆಸುವ ಪದ್ಧತಿಯನ್ನು ಇಲ್ಲಿ ವಿವರಿಸಲಾಗಿದೆ.[1] ಎಲ್ಲಕ್ಕಿಂತ ಅಚ್ಚರಿಯ ವಿಷಯವೆಂದರೆ ರೇಷ್ಮೆ ಹುಳುಗಳನ್ನು ಕುರಿತ ವಿವರಗಳನ್ನು 'Animals-wild' ಎಂಬ ಅಧ್ಯಾಯಕ್ಕೆ ಸೇರಿಸಿರುವುದು![2] ರೇಷ್ಮೆ ಹುಳುಗಳ ವಿಧಗಳು, ಅವುಗಳನ್ನು ಚಂದ್ರಿಕೆಗಳಲ್ಲಿ ಬೆಳೆಸುವ ವಿಧಾನ, ಇತ್ಯಾದಿ ಎಲ್ಲ ಮಾಹಿತಿಗಳೂ ಇದೇ ಅಧ್ಯಾಯದ ಅಡಿಯಲ್ಲಿ ಬಂದಿವೆ!!

* ಕೃತಿಯ ರಚನೆಗೆ ಮುನ್ನ ಲೇಖಕರು ಸಾಕಷ್ಟು ಪೂರ್ವಸಿದ್ಧತೆಯನ್ನು ಮಾಡಿಕೊಂಡಂತೆ ತೋರುವುದಿಲ್ಲ. ಏಕೆಂದರೆ ವಿಲ್ಕ್ಸ್‌ನ ಮೈಸೂರಿನ ಇತಿಹಾಸ, ಬುಕನನ್ ಬರೆದ ಪ್ರವಾಸದ ಕೃತಿ, 'Mysore Red Book' ಮುಂತಾದ ಕೆಲವೇ ಕೃತಿಗಳನ್ನು ಅಲ್ಲಲ್ಲಿ ಉಲ್ಲೇಖಿಸಿರುವುದನ್ನು ಬಿಟ್ಟರೆ ಇನ್ಯಾವುದೇ ಬಗೆಯ ಪೂರ್ವರಚಿತ ಸಾಹಿತ್ಯದ ಪ್ರಸ್ತಾಪವೂ ಇಲ್ಲಿಲ್ಲ. Education ಹಾಗೂ Forest – ಈ ಎರಡು ಅಧ್ಯಾಯಗಳನ್ನು ಬಿಟ್ಟರೆ ಉಳಿದ ಯಾವ ಅಧ್ಯಾಯದಲ್ಲಿಯೂ ಸರ್ಕಾರಿ ವರದಿಗಳನ್ನು ನೇರವಾಗಿ ಬಳಸಿಕೊಂಡಿಲ್ಲ.

* ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳ ಬಗೆಗೆ ಯಾವ ಮಾಹಿತಿಯೂ ಇಲ್ಲ.

* ಪ್ರಸ್ತುತ ಕೃತಿಯ ಸಂಪಾದನೆಗೆ ಸಂಬಂಧಪಟ್ಟ ಯಾವ ವಿವರಗಳೂ ಇಲ್ಲಿಲ್ಲ. ಕೃತಿಯನ್ನು ಸಂಪಾದಿಸಲು ಅನುಸರಿಸಲಾದ ವಿಧಿವಿಧಾನಗಳು, ಮಾಹಿತಿಯ ಆಕರಗಳು, ಅವುಗಳನ್ನು ಬಳಸಿಕೊಂಡಿರುವ ಬಗೆ, ಹಿಂದೆ ಈ ನಿಟ್ಟಿನಲ್ಲಿ ಆಗಿದ್ದ ಕಾರ್ಯ, ಇತ್ಯಾದಿ ವಿಷಯಗಳನ್ನು ಒಳಗೊಂಡ ಮುನ್ನುಡಿ ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ.

* ಇಡಿಯ ಕೃತಿಯಲ್ಲಿ ಎಲ್ಲಿಯೂ ಸಂಪಾದಕರ ಹೆಸರಿಲ್ಲ. ರೈಸರ ಹೇಳಿಕೆಯನ್ನು ಆಧರಿಸಿ ಹೇಳುವುದಾದರೆ ಇದು ಎಚ್. ವೆಲ್ಲೆಸ್ಲಿ ಎಂಬ ಆಂಗ್ಲ ಅಧಿಕಾರಿಯಿಂದ ಸಂಪಾದಿತವಾದ ಕೃತಿ.[3]

ಮೇಲ್ಕಂಡ ಎಲ್ಲ ಕಾರಣಗಳಿಂದಾಗಿ ಮೈಸೂರು ಜಿಲ್ಲೆಯನ್ನು ಕುರಿತಾದ ಈ ಗೆಜೆಟಿಯರ್ ಕೇವಲ ಪ್ರಾಥಮಿಕ ಸ್ವರೂಪದ್ದು ಎಂಬ ಅಂಶ ಸ್ಪಷ್ಟವಾಗುತ್ತದೆ. ಆದರೆ

1 P 33-34

2 P 32

3 ಪೂರ್ವೋಕ್ತ, ಪು. XII

ಇದು ಗೆಜೆಟಿಯರ್‌ನ ರಚನೆಯ ಪ್ರಕ್ರಿಯೆಯ ಆರಂಭದ ದಿನಗಳಲ್ಲಿ ಹೊರಬಂದ ಕೃತಿ ಎನ್ನುವುದನ್ನು ಮರೆಯುವಂತಿಲ್ಲ. ಇದೇ ವರ್ಷದಲ್ಲಿ ಪ್ರಕಟವಾದ ಕೋಲಾರ ಜಿಲ್ಲೆಯ ಗೆಜೆಟಿಯರ್ ವಸ್ತು ಮತ್ತು ವಿಷಯ ಪ್ರತಿಪಾದನೆಯ ದೃಷ್ಟಿಯಿಂದ ಸಾಕಷ್ಟು ಭಿನ್ನವಾಗಿದ್ದು ಅಭ್ಯಾಸಯೋಗ್ಯವಾಗಿದೆ.

ಕೋಲಾರ ಜಿಲ್ಲೆಯ ಗೆಜೆಟಿಯರ್ (೧೮೬೯) :

೭೯ ಪುಟಗಳ, ೧೨೯ ಪ್ಯಾರಾಗಳ ಈ ಕೃತಿಯಲ್ಲಿ ಒಟ್ಟು ೯ ಅಧ್ಯಾಯಗಳಿವೆ. ಅವೆಂದರೆ :

1. District : Subdivisions, area, population and revenue of each shape, position and dimensions.
2. Features : Rivers and streams, mountain and hills, forests, pasturelands, natural history.
3. Legendary Accounts.
4. History.
5. Population & Principle Castes Occupation and Trade, Manners and Customs, Costumes.
6. Manufactures.
7. Agriculture : Land tenure, nature of crops and modes of cultivation, rates of assessment, revenue for the last 10 years, village system.
8. Taxes : Sayer, Abkari and C.
9. Irrigation works : Communications, Archaeological remains, Civil and criminal justice, Police, Education, Forest department, Ecclesiastical, Chief towns.

ಭೌಗೋಳಿಕ ವಿವರಗಳು, ಸುಂಕ, ವಿವಿಧ ಇಲಾಖೆಗಳ ಮಾಹಿತಿಗಳು, ಬೆಳೆಗಳು, ದೊಡ್ಡಕೆರೆಗಳು, ಪ್ರಮುಖವಾದ ರಸ್ತೆಗಳು, ರೈಲು ದಾರಿಗಳ ಬಗೆಗಿನ ಮಾಹಿತಿ ಇಲ್ಲಿ ಯುಕ್ತಸ್ಥಾನವನ್ನು ಪಡೆದಿವೆ. ಆದರೆ ಈ ಮಾಹಿತಿಗಳ ಸಂಕಲನ ಅಷ್ಟೇನೂ ಕಷ್ಟಕರವಲ್ಲ. ಇವೆಲ್ಲಾ ಯಾವುದೇ ಇಲಾಖೆಯ ಆಡಳಿತ ವರದಿಗಳಲ್ಲಿ ದೊರಕಬಹುದಾದ ವಿವರಗಳು. ಹಾಗಾಗಿ ಇಲ್ಲಿ ಈ ಮಾಹಿತಿಯ ವಿಶ್ಲೇಷಣೆಯ ಅವಶ್ಯಕತೆಯಿಲ್ಲ. ವಿಶ್ಲೇಷಣೆಗೆ ಅವಕಾಶವಿರುವುದು ಇತಿಹಾಸದ ವಿವರಗಳನ್ನು ನಿರೂಪಿಸುವಾಗ. ಹಾಗಾಗಿ ಪ್ರಸ್ತುತ ಕೃತಿಯಲ್ಲಿ ಗಮನಸೆಳೆಯುವ ಭಾಗವೆಂದರೆ ೩ ಮತ್ತು ೪ನೇ ಅಧ್ಯಾಯಗಳು. Legendary Accounts ಎಂಬ ಶೀರ್ಷಿಕೆಯ ಮೂರನೆಯ ಅಧ್ಯಾಯದಲ್ಲಿ ಕೋಲಾರದ ಬೆಟ್ಟದಲ್ಲಿ ಮುಚುಕುಂದ ಋಷಿ ಇದ್ದದ್ದು, ಅಲ್ಲಿ ಗಂಗೆ ಪ್ರತ್ಯಕ್ಷವಾಗಿದ್ದು, ಜಮದಗ್ನಿಯ ಪ್ರಸ್ತಾಪ,

ರೇಣುಕೆಯ ಹತ್ಯೆ, ಅವಳ ಮರುಹುಟ್ಟು, ಕಾರ್ತವೀರ್ಯಾರ್ಜುನನನ್ನು ಪರಶುರಾಮ ಕೊಂದದ್ದರಿಂದ ಸಂತೋಷಿತರಾದ ದೇವತೆಗಳು ಬಂದು ಈ ಬೆಟ್ಟದಲ್ಲಿ ಕೋಲಾಹಲ ಮಾಡಿದ್ದರಿಂದ ಕೋಲಾಹಲದ ಬೆಟ್ಟ ಎಂದು ಹೆಸರಾದದ್ದು, ಕುರುಡುಮಲೆಯಲ್ಲಿ ಕೌಂಡಿನ್ಯ ಋಷಿ ಇದ್ದದ್ದು, ಆವನಿಯಲ್ಲಿ ರಾಮಲಕ್ಷ್ಮಣರು ಇದ್ದದ್ದು, ಕೋಲನೆಂಬ ರೈತನಿಗೆ ನಿಧಿ ಸಿಕ್ಕಿದ್ದರಿಂದ ಅವನು ಈ ಪ್ರಾ ತ್ಯದ ದೊರೆಯಾದದ್ದು - ಇತ್ಯಾದಿ ಕಥೆಗಳಿವೆ.

ಗೆಜ಼ೆಟಿಯರ್‌ನಂತಹ ಅಧಿಕೃತ ಮಾಹಿತಿಯ ಆಕರಗ್ರಂಥವೊಂದರಲ್ಲಿ ಈ ಬಾಹುಳ್ಯದ ದಂತಕಥೆಗಳಿಗೆ ಅವಕಾಶವಿರಬೇಕೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ಭಾಗಕ್ಕೆ 'ಐತಿಹ್ಯಗಳು' ಎಂಬ ಶೀರ್ಷಿಕೆ ಇರುವುದರಿಂದ ಇದು ಕ್ಷಮ್ಯವೆಂದು ಭಾವಿಸಿದರೂ, History ಎಂಬ ಅಧ್ಯಾಯದಲ್ಲಿರುವ ಐತಿಹಾಸಿಕ ವಿವರಗಳೂ, ಐತಿಹ್ಯ, ಆಖ್ಯಾಯಿಕೆಗಳ ಮಿಶ್ರಣದಂತೆಯೇ ಇರುವುದು ಒಳ್ಳೆಯ ಲಕ್ಷಣವಲ್ಲ. ಉದಾಹರಣೆಗೆ ಈ ಜಿಲ್ಲೆಯಲ್ಲಿ ಕೋಲನಿಂದ ಆಡಳಿತ ಆರಂಭವಾಯಿತೆಂದು ಎನ್ನುತ್ತಾರೆ.[1] ಅನಂತರ ಚೋಳರ ಕೈಗೆ ಬಂತು.[2] ವಿಜಯನಗರದ ಅರಸರು ಜೈನರು ಎಂಬ ಆಶ್ಚರ್ಯಕರವಾದ ಹೇಳಿಕೆ ಇಲ್ಲಿದೆ. ಮುಂದೆ 'About the beginning of the 17th century, a party of Maranders from the low country appears to have invaded Kolar, and occupied it for sometime but the Mahrattas drone them out and ruled well for several years' ಎಂದು ಬರೆದಿದ್ದಾರೆ.[3] ಆದರೆ ಈ ಮಾತಿಗೆ ಆಧಾರಗಳೇನೋ ತಿಳಿಯುವುದಿಲ್ಲ.

ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳು ಕೇವಲ ಒಂದೂವರೆ ಪುಟಗಳಲ್ಲಿ, ಆರು ಪ್ಯಾರಾಗಳಲ್ಲಿ ಅಡಕವಾಗಿದೆ ಎಂಬ ಅಂಶ ಈಗ್ಗೆ ಸಂಪಾದಕರಿಗೆ ಲಭ್ಯವಿದ್ದ ಮಾಹಿತಿ ಎಷ್ಟು ಅಲ್ಪ ಎಂಬುದನ್ನು ಸೂಚಿಸುತ್ತದೆ. Manufacturers ಎಂಬ ಅಧ್ಯಾಯದಲ್ಲಿ 'A little gold is made at Urigam, a village some ten miles from Kolar Main Road Station, but so meager is the return that it doesn't pay each man his hire for the day' ಎಂದಿದ್ದಾರೆ.[4] ಆದರೆ ಟಿಪ್ಪೂ ಸುಲ್ತಾನನ ಕಾಲದಿಂದಲೂ ಈ ಪ್ರದೇಶದಲ್ಲಿ ಚಿನ್ನದ ಗಣಿಗಾರಿಕೆ ನಡೆಯುತ್ತಿತ್ತೆಂಬುದನ್ನು ಸಂಪಾದಕರು ಗಮನಿಸಿಲ್ಲ. ಮಾತ್ರವಲ್ಲದೆ ೧೮೦೪ರ ಏಷಿಯಾಟಿಕ್ ಜರ್ನಲ್ ಪತ್ರಿಕೆಯಲ್ಲಿ

1 P 15

2 The Tamil Inscriptions in the temples of the town, testing to the fact of this Tamil Dynasty having held sway as far as the Kolar, the country subsequently passed into the hands of Bela'l or Jain Kings of Bijanaggur; and from then to the Nagaratti kings – A Kshatriya race – whose capital was Vzanagaram, P-15.

3 P 15

4 P 25

ಬ್ರಿಟಿಷ್ ಸೈನ್ಯದ ೩೩ನೇ ತುಕಡಿಯ ದಂಡನಾಯಕನಾಗಿದ್ದ ಜಾನ್ ವಾರೆನ್ ಎಂಬಾತ ಕೋಲಾರದ ಬಳಿ ಚಿನ್ನ ಸಿಕ್ಕುವುದೆಂದು ನೀಡಿರುವ ವರದಿಯ ಆಧಾರದ ಮೇಲೆ ಬೆಂಗಳೂರಿನ ಕೆಲವು ಬ್ರಿಟಿಷ್ ಸೈನ್ಯಾಧಿಕಾರಿಗಳು ಅಲ್ಪಸ್ವಲ್ಪ ಬಂಡವಾಳದಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಿ ಗಣಿಗಾರಿಕೆಯನ್ನು ಆರಂಭಿಸಿದರು. ೧೮೬೦ರಲ್ಲಿ ಅದೇ ಸೇನಾ ತುಕಡಿಯ ಮತ್ತೊಬ್ಬ ಅಧಿಕಾರಿಯಾಗಿದ್ದು ನ್ಯೂಜಿಲ್ಯಾಂಡಿನಲ್ಲಿ ಚಿನ್ನದ ಗಣಿಗಾರಿಕೆಯ ಬಗ್ಗೆ ವಿಶೇಷವಾದ ಅಧ್ಯಯನವನ್ನು ನಡೆಸಿದ್ದ ಮೈಕೆಲ್ ಎಫ್. ಲೆವೆಲೆ ಎಂಬಾತ ಈ ಪ್ರದೇಶವನ್ನು ಪರಿಶೀಲಿಸಿ ಇಲ್ಲಿ ಚಿನ್ನದ ನಿಕ್ಷೇಪವಿರುವುದನ್ನು ದೃಢಪಡಿಸಿದ. ಈ ಯಾವ ಮಾಹಿತಿಯೂ ಇಲ್ಲಿಲ್ಲ.

ವೆಲ್ಲೆಸ್ಲಿ ಸಂಪಾದಿಸಿದ ಮೈಸೂರು ಜಿಲ್ಲೆಯ ಗೆಜೆಟಿಯರ್‌ನಂತೆಯೆ ಇಲ್ಲಿಯೂ ಮುನ್ನುಡಿ, ಪ್ರಸ್ತಾವನೆ ಮುಂತಾದ ಯಾವ ವಿವರಗಳೂ ಇಲ್ಲ. ಸಂಪಾದಕರ ಹೆಸರೂ ನಮೂದಾಗಿಲ್ಲ. 'ಬಹುಶಃ ಇದು ಬಿ. ಕೃಷ್ಣಯ್ಯಂಗಾರ್‌ರವರಿಂದ ಸಂಪಾದಿತವಾದ ಕೃತಿ' ಎಂದು ರೈಸ್ ಊಹಿಸಿದ್ದಾರೆ.[1]

ಮೇಲಿನ ಎರಡು ಜಿಲ್ಲೆಗಳ ಗೆಜೆಟಿಯರ್‌ಗಳ ಅಧ್ಯಯನದಿಂದ ಮೈಸೂರು ಸಂಸ್ಥಾನದಲ್ಲಿ ಗೆಜೆಟಿಯರ್‌ನ ರಚನೆಯ ಪ್ರಾರಂಭಿಕ ಪ್ರಯತ್ನಗಳು ಎಷ್ಟು ಪ್ರಾಥಮಿಕ ಮಟ್ಟದ್ದಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಸಂಪುಟಗಳು ಪ್ರಕಟವಾದ ಕೇವಲ ಏಳು ವರ್ಷಗಳ ನಂತರದಲ್ಲಿ ರೈಸರು ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ ಸಮಸ್ತ ಸಮಗ್ರವೆನ್ನಿಸುವ ಮಾಹಿತಿಯನ್ನು ಒಳಗೊಂಡ, ಆ ಕಾಲಕ್ಕೆ ಪರಿಪೂರ್ಣವೆಂದೇ ಹೇಳಬಹುದಾಗಿದ್ದ ಮೂರು ಬೃಹತ್ ಸಂಪುಟಗಳನ್ನು ಹೊರತಂದದ್ದು ನಿಜಕ್ಕೂ ಅಗಾಧವಾದ ಸಾಧನೆ. ಈ ಸಂಪುಟಗಳನ್ನು ಸಿದ್ಧಪಡಿಸಲು ಅವರು ಮಾಡಿಕೊಂಡ ಪೂರ್ವ ಸಿದ್ಧತೆ, ನಡೆಸಿದ ಪರಿವೀಕ್ಷಣೆ, ಗಮನಿಸಿದ ಕೃತಿಗಳು ಇತ್ಯಾದಿಗಳ ವ್ಯಾಪಕವಾದ ಅಧ್ಯಯನ ಈ ನಿಟ್ಟಿನಲ್ಲಿ ಅವಶ್ಯಕ.

ರೈಸ್ ಸಂಪುಟಗಳು :

ಯೋಜನೆ : ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿ ರೈಸರ ಸಂಪಾದಕತ್ವದ ಗೆಜೆಟಿಯರ್‌ಗಳಿಗೆ ಸಂಬಂಧಿಸಿದಂತೆ ನಮಗೆ ಕಾಣಸಿಗುವ ಮೊತ್ತಮೊದಲ ದಾಖಲೆ ಯೆಂದರೆ ದಿನಾಂಕ ೩.೨.೧೮೭೩ರಂದು ಚೀಫ್ ಕಮೀಷನರ್‌ರು ಲೂಯಿರೈಸರಿಗೆ ಬರೆದ ಪತ್ರ.[2] ಇದರಲ್ಲಿಯ ಎರಡು ಪ್ರಮುಖ ಅಂಶಗಳೆಂದರೆ :

---

1 ಪೂರ್ವೋಕ್ತ, ಪು. XII

2 GM 7 of 1872 (1–5) ಆದರೆ ರೈಸರನ್ನು ಸಂಪಾದಕರನ್ನಾಗಿ ನೇಮಿಸಿದನಂತರದ ಪತ್ರ ಇದಾದುದರಿಂದ ಇದಕ್ಕೂ ಹಿಂದಿನ ಪತ್ರ, ಒಂದು ಇದಿರಬೇಕು.

೧. ಈ ಗೆಜ಼ೆಟಿಯರ್ ಮೈಸೂರು ಹಾಗೂ ಕೊಡಗು ಪ್ರಾಂತ್ಯಗಳೆರಡರ ವಿವರಗಳನ್ನೂ ಒಳಗೊಂಡಿರತಕ್ಕದ್ದು.

೨. ಇಡಿಯ ಯೋಜನೆಯನ್ನು ಎರಡು ವರ್ಷಗಳ ಒಳಗೆ ಸರ್ಕಾರಕ್ಕೆ ತೃಪ್ತಿಕರವಾಗುವ ರೀತಿಯಲ್ಲಿ ಮುಗಿಸತಕ್ಕದ್ದು.

ಇದಕ್ಕೆ ಉತ್ತರವಾಗಿ ೧೮೭೩ರ ಫೆಬ್ರವರಿ ೭ರಂದು ರೈಸರು ಕಮೀಷನರ್‌ರಿಗೆ ಬರೆದ ಪತ್ರದಲ್ಲಿ 'My best efforts shall be used to complete the work within the time appointed and I perform it in a manner worthy of the administratory and satisfaction to Government' ಎಂಬ ಆಶ್ವಾಸನೆಯನ್ನು ನೀಡಿದ್ದಾರಲ್ಲದೆ ಕೆಳಕಂಡ ಮಾಹಿತಿಯನ್ನೂ ಕೋರಿದ್ದಾರೆ :

೧. ಈವರೆಗೆ ಸಿದ್ಧವಾಗಿರುವ ಹಾಗೂ ಪರಿಷ್ಕೃತವಾಗಿರುವ ಎಲ್ಲಾ ಜಿಲ್ಲಾ ಗೆಜ಼ೆಟಿಯರ್‌ಗಳನ್ನು ಹಾಗೂ ರಿಕ್ಟರ್‌ನ 'Mannal of Coorg'ನ ಪ್ರತಿಯೊಂದನ್ನು ಒದಗಿಸಬೇಕು. ಅಲ್ಲದೆ ಸಂಸ್ಥಾನಕ್ಕೆ ಸಂಬಂಧಿಸಿದಂತೆ ಕರ್ನಲ್ ಮೆಕೆಂಜ಼ಿಯ ಹಸ್ತಪ್ರತಿಗಳಲ್ಲಿರುವ ದಾಖಲೆಗಳನ್ನು ಪರಿಶೀಲನೆಗಾಗಿ ನೀಡಬೇಕು.

೨. ವಿಭಾಗೀಯ ಹಾಗೂ ಜಿಲ್ಲಾ ಕಮೀಷನರ್‌ಗಳಿಗೆ ನೀಡಿರುವ ಆದೇಶದಂತೆಯೇ ಚೀಫ್ ಇಂಜಿನಿಯರ್, ನೀರಾವರಿ ಇಲಾಖೆಯ ಸೂಪರಿಂಟೆಂಡಿಂಗ್ ಇಂಜಿನಿಯರ್, ಕಂದಾಯ ಸರ್ವೆ ಇಲಾಖೆ, ಮುಖ್ಯ ಅರಣ್ಯಾಧಿಕಾರಿಗಳು, ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಹಾಸ್ಪಿಟಲ್ಸ್ ಮುಂತಾದ ಇಲಾಖಾ ಮುಖ್ಯಸ್ಥರುಗಳಿಗೂ ತಾವು ಕೋರುವ ಮಾಹಿತಿಯನ್ನು ಕೂಡಲೇ ತಲುಪಿಸುವಂತೆ ಆದೇಶಿಸುವುದು ಹಾಗೂ ಈ ಬಗ್ಗೆ ಸರ್ಕಾರದ ಗೆಜ಼ೆಟ್‌ನಲ್ಲಿ ಪ್ರಕಟಣೆಯೊಂದನ್ನು ಹೊರಡಿಸುವುದು.

೩. ಕಳೆದ ಬಾರಿಯ ಜನಗಣತಿಯ ವರದಿಯ ಪ್ರತಿಗಳು, ಸರ್ವೆ ಇಲಾಖೆಯವರು ಸಿದ್ಧಪಡಿಸಿರುವ ಜಿಲ್ಲೆಗಳ ಅಥವಾ ತಾಲ್ಲೂಕುಗಳ ನಕಾಶೆಗಳು ಹಾಗೂ ಭಾರತ-ಸರ್ಕಾರ ಸಾಂಖ್ಯಿಕ ಇಲಾಖೆಯ ವಾರ್ಷಿಕ ವರದಿಗಳನ್ನು ಪರಿಶೀಲನೆಯ ಸಲುವಾಗಿ ನೀಡುವುದು.[1]

ಗೆಜ಼ೆಟಿಯರ್‌ನ ಸಂಪಾದನೆಯ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮುನ್ನ ರೈಸರು ಮಾಡಿಕೊಂಡ ಪೂರ್ವಸಿದ್ಧತೆಗಳ ಬಗ್ಗೆ ಮೇಲಿನ ಪತ್ರ ಸಾಕಷ್ಟು ಬೆಳಕನ್ನು ಚೆಲ್ಲುತ್ತದೆ. 'ನೀವು ನೀಡಿರುವ ಪ್ರಸ್ತಾವನೆಯ ಎಲ್ಲ ಅಂಶಗಳಿಗೆ ಸೂಕ್ತವಾದ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳಲಾಗುವುದು' ಎಂಬ ಹಿಂಬರಹದೊಂದಿಗೆ ಸರ್ಕಾರ ೧೮೭೩ರ ಫೆಬ್ರವರಿ ೧೮ರಂದು ಗೆಜ಼ೆಟಿಯರ್‌ನ ಮಾಹಿತಿ ಸಂಗ್ರಹಣೆಯ ಕಾರ್ಯಕ್ಕೆ ಅಧಿಕೃತವಾದ ಅನುಮತಿಯನ್ನು ನೀಡಿತು.[2]

1 GM 7 of 1872, Sl. No. 3

2 ಅದೇ, Sl. No. 4

ಗೆಜೆಟಿಯರ್‌ನ ಸಂಪಾದನೆಯ ಕಾರ್ಯಕ್ಕೆಂದು ಸರ್ಕಾರ ರೈಸರಿಗೆ ನೀಡಿದ ಸಿಬ್ಬಂದಿ ಮತ್ತು ಕಛೇರಿಯ ವ್ಯವಸ್ಥೆ ನಿಜಕ್ಕೂ ಆಶ್ಚರ್ಯಗೊಳ್ಳುವಷ್ಟು ಕಡಮೆ. ಕೇವಲ ಒಬ್ಬ ಲಿಪಿಕಾರ (Writer) ಆತನಿಗೆ ಒಂದು ಕುರ್ಚಿ, ಮೇಜು, ಕಾಗದ ಪತ್ರಗಳನ್ನು ಇಟ್ಟುಕೊಳ್ಳಲು ಒಂದು ಪೆಟ್ಟಿಗೆ ಹಾಗೂ ಬರವಣಿಗೆಗಾಗಿ ಸ್ವಲ್ಪ ಕಾಗದ - ಇವಿಷ್ಟೇ ಅವರಿಗೆ ಒದಗಿಸಲಾಗಿದ್ದ ಸೌಕರ್ಯ.[1]

ಈ ಯೋಜನೆಗೆ ಒಟ್ಟು ನಿಗದಿಪಡಿಸಲಾಗಿದ್ದ ಹಣಕಾಸಿನ ವಿವರಗಳು ಈ ರೀತಿಯಾಗಿದೆ :

ರೈಸರಿಗೆ ಗೌರವಧನ :	೨೫೦೦.೦೦
ಲಿಪಿಕಾರನಿಗೆ ತಿಂಗಳಿಗೆ ೫೦ ರೂ.ನಂತೆ ೨ ವರ್ಷ :	೧೨೦೦.೦೦
	೩೭೦೦.೦೦

ಈ ಹಣವನ್ನು ಕೆಳಕಂಡ ಮೂಲಗಳಿಗೆ ಮರಳಿ ಪಡೆಯಬೇಕೆಂದೂ ಸೂಚಿಸಲಾಗಿದೆ:

ಮೈಸೂರು ಸರ್ಕಾರದ ಉತ್ಪತ್ತಿಯಿಂದ :	೩೫೭೫.೦೦
ಬ್ರಿಟಿಷ್ ಚಕ್ರಾಧಿಪತ್ಯದ ಉತ್ಪತ್ತಿಯಿಂದ :	೧೨೫.೦೦
	೩೭೦೦.೦೦

ಕ್ರಿ.ಶ. ೧೮೭೩ರಲ್ಲಿ ಆರಂಭವಾಗಿ ೧೮೭೫ರಲ್ಲಿ ಮುಗಿಯಬೇಕಿದ್ದ ಈ ಯೋಜನೆ ವಾಸ್ತವವಾಗಿ ಸಂಪೂರ್ಣವಾಗಿದ್ದು ೧೮೭೭ರಲ್ಲಿ. ಈ ವಿಳಂಬಕ್ಕೆ ನಿಶ್ಚಿತವಾದ ಕಾರಣಗಳೇನು ಎಂಬುದು ದಾಖಲೆಗಳಲ್ಲಿ ಸ್ಪಷ್ಟವಾಗಿಲ್ಲ. ಆದರೆ ೧೮೭೫ರ ಸೆಪ್ಟೆಂಬರ್ ೧೩ರಂದು ರೈಸರು ಚೀಫ್‌ಕಮೀಷನರ್‌ರಿಗೆ ಬರೆದ ಪತ್ರದಲ್ಲಿ

> *'.... you are aware that the work is going through the press, though much more slowly than I could wish, it is needless to say that I give all the time that can be spared from other duties to the compilation. The M.S. of one vilume is ready and a good part of the other. I expect to complete 'Mysore' this year if no extraordinary demand upon my time should arise...'*

ಎಂದು ಹೇಳಿಕೊಂಡಿದ್ದಾರೆ. ಈ ಪತ್ರವನ್ನು ಆಧರಿಸಿ ಹೇಳುವುದಾದರೆ ಅನೇಕ ಜವಾಬ್ದಾರಿಗಳನ್ನು ಏಕಕಾಲಕ್ಕೆ ನಿರ್ವಹಿಸಬೇಕಾಗಿ ಬಂದದ್ದೇ ಈ ವಿಳಂಬಕ್ಕೆ ಪ್ರಮುಖವಾದ ಕಾರಣವೆನ್ನಬಹುದು.

---

1 ಅಲ್ಲೇ.

ಏಕೆಂದರೆ ಗೆಜೆಟಿಯರ್ ಸಂಪಾದನೆಯ ಜವಾಬ್ದಾರಿಯನ್ನು ವಹಿಸಿಕೊಂಡ ಒಂದೇ ವರ್ಷದನಂತರ ಅವರು ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿಯೂ ನೇಮಕಗೊಂಡರು (೨೧ ಜೂನ್ ೧೮೭೪). ಇದರೊಂದಿಗೆ ಮೇಜರ್ ಡಿಕ್ಸನ್ ತೆಗೆದ ಶಾಸನಗಳ ಛಾಯಾಚಿತ್ರಗಳನ್ನು ಓದಿ ಅರ್ಥೈಸುವ ಕೆಲಸ ಕೊನೆಯ ಹಂತದಲ್ಲಿತ್ತು (ಪ್ರಕಟಣೆ - ೧೮೭೮). ಅಷ್ಟೇ ಅಲ್ಲದೆ ಇದೇ ಅವಧಿಯಲ್ಲಿ ಅವರು ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಷಯದ ಪರಿವೀಕ್ಷಕರಾಗಿ ಹಾಗೂ ಮದ್ರಾಸಿನ ಯು.ಸಿ.ಎಸ್. ಪರೀಕ್ಷೆಗಳ ಸಾಮಾನ್ಯ ಹಾಗೂ ವಿಶೇಷ ಅಧ್ಯಯನ ವಿಷಯಗಳ ಪರಿವೀಕ್ಷಕರಾಗಿ, ಮೈಸೂರು ಸಂಸ್ಥಾನದ ಅಧಿಕಾರಿಗಳಿಗೆ ನಡೆಸುವ ದೇಶಭಾಷಾ ಪರೀಕ್ಷೆಗಳ ಆಯೋಜನ ಸಮಿತಿಯ ಅಧ್ಯಕ್ಷರಾಗಿ ಮತ್ತು ವಸ್ತು ಪ್ರದರ್ಶನ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ ಉಲ್ಲೇಖಗಳಿವೆ.

ಅಧಿಕೃತ ಜವಾಬ್ದಾರಿಗಳ ಹೆಚ್ಚಳದ ಜೊತೆಗೆ ರೈಸ್‌ರೇ ತಮ್ಮ ಪತ್ರದಲ್ಲಿ ಸೂಚಿಸಿರುವಂತೆ ಮುದ್ರಣಾಲಯದ ಭಾಗದಲ್ಲಿ ಆದ ವಿಳಂಬದಿಂದಾಗಿ ಗೆಜೆಟಿಯರ್‌ಗಳು ಹೊರಬರುವುದು - ಸಾಕಷ್ಟು ತಡವಾಯಿತು. ಸರ್ಕಾರಿ ಮುದ್ರಣಾಲಯದ ಸೂಪರಿಂಟೆಂಡರು ೧೮೭೫ರ ಸೆಪ್ಟೆಂಬರ್ ೨೩ರಂದು ಚೀಫ್ ಕಮೀಷನರ್‌ರಿಗೆ ಪತ್ರವೊಂದನ್ನು ಬರೆದು ಗೆಜೆಟಿಯರ್‌ನ ಮುದ್ರಣಕ್ಕೆಂದೇ ಆರು ಜನ ಕಂಪೋಸಿಟರ್‌ಗಳು ಹಾಗೂ ಒಬ್ಬ ಪ್ರೂಫ್ ರೀಡರ್‌ನನ್ನು ಒಂದು ವರ್ಷ ಕಾಲ ನೇಮಿಸಿಕೊಳ್ಳಲು ಅನುಮತಿಯನ್ನು ಕೋರಿದ್ದಾರೆ.

'ಪ್ರಸ್ತುತ ಈಗಿರುವ ಕೆಲಸಗಾರರ ಲಭ್ಯತೆಯಲ್ಲಿ ವಾರಕ್ಕೆ ಕೇವಲ ಎಂಟು ಪುಟಗಳನ್ನು ಮಾತ್ರ ಮುದ್ರಿಸಲು ಸಾಧ್ಯವಾಗುತ್ತಿದೆ. ಮೇಲೆ ನಮೂದಿಸಿರುವ ಸಂಖ್ಯೆಯು ಕೆಲಸಗಾರರು ದೊರೆತಲ್ಲಿ ವಾರಕ್ಕೆ ೩೨ ಪುಟಗಳನ್ನು ಮುದ್ರಿಸಬಹುದು' ಎಂದು ಈ ಪತ್ರದಲ್ಲಿ ನಮೂದಿಸಿದ್ದಾರೆ.

ಗೆಜೆಟಿಯರ್‌ಗಳ ಪ್ರಕಟಣೆಯಲ್ಲಿನ ವಿಳಂಬಕ್ಕೆ ಮತ್ತೊಂದು ಕಾರಣವೆಂದರೆ ಪ್ರತಿಹಂತದಲ್ಲಿಯೂ ಮುದ್ರಿತ ಹಾಳೆಗಳ ಕರಡಚ್ಚನ್ನು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸಲ್ಲಿಸಿ ಅಲ್ಲಿಂದ ಒಪ್ಪಿಗೆ ದೊರೆತನಂತರವೇ ಮುದ್ರಣಕಾರ್ಯವನ್ನು ಮುಂದುವರೆಸಬೇಕಿದ್ದುದು. 'ಇದರಿಂದ ಕಾಲವ್ಯಯವಾಗುತ್ತದೆ. ಆದ್ದರಿಂದ ಈ ಪದ್ಧತಿಯನ್ನು ಬಿಡೋಣ' ಎಂಬ ರೈಸರ ಸಲಹೆಗೆ ಮಾನ್ಯತೆ ದೊರೆಯಲಿಲ್ಲವಾದ್ದರಿಂದ ಮುದ್ರಣ ಸಾಕಷ್ಟು ತಡವಾಯಿತು.

ಅಂತೂ ೧೮೭೭ರಲ್ಲಿ ಮೊದಲ ಸಂಪುಟ ಹೊರಬರುವುದರೊಂದಿಗೆ (ಎರಡನೇ ಸಂಪುಟ ೧೮೭೭ರಲ್ಲಿಯೇ ಪ್ರಕಟವಾಗಿತ್ತು) ಗೆಜೆಟಿಯರ್‌ನ ರಚನೆಯ ಕಾರ್ಯ ಮುಕ್ತಾಯವಾಯಿತು.

ಗೆಜೆಟಿಯರ್‌ನ ರಚನೆಯ ಕಾರ್ಯ ೧೮೭೫ರ ವೇಳೆಗೇ ಮುಗಿಯಬೇಕಿತ್ತಾದರೂ ವಾಸ್ತವವಾಗಿ ಅದು ಮುಗಿದದ್ದು ೧೮೭೮ರ ಆದಿಭಾಗದಲ್ಲಿ. ಅಂತಿಮವಾಗಿ ಈ ಯೋಜನೆಗೆ ಆದ ಒಟ್ಟು ಖರ್ಚು ಹೀಗಿತ್ತು :

	ರೂ-ಆ-ಪೈ
ರೈಸರಿಗೆ ಗೌರವಧನ :	೫೦೦೦-೦೦-೦೦
ಲಿಪಿಕಾರನಿಗೆ :	೨೪೭೦-೧೫-೦೬
ಮುದ್ರಣದ ವ್ಯವಸ್ಥೆಗಾಗಿ :	೧೯೧೬-೦೯-೧೧
ಇತರೆ ವೆಚ್ಚ :	೬೯-೦೦-೦೦
ಒಟ್ಟು	೯೪೦೬-೦೯-೦೫

ಗೆಜೆಟಿಯರ್ ಸಂಪುಟಗಳ ಪುನರ್ ಪರಿಷ್ಕರಣೆ :

೧೮೭೬-೭೭ರಲ್ಲಿ ಪ್ರಕಟವಾದ ಮೂರು ಸಂಪುಟಗಳ ಮೈಸೂರು ಗೆಜೆಟಿಯರ್‌ಗಳು ಸಾಕಷ್ಟು ಪ್ರಖ್ಯಾತಿಯನ್ನು ಪಡೆದವು. ಆದರೂ ೧೮೮೧ ಮತ್ತು ೧೮೯೧ರಲ್ಲಿ ನಡೆಸಲಾದ ಜನಗಣತಿಗಳಿಂದ ಲಭ್ಯವಾದ ಅಂಕಿಅಂಶಗಳ ಹಿನ್ನೆಲೆಯಲ್ಲಿ ಅವುಗಳನ್ನು ಪುನಃ ಪರಿಷ್ಕರಿಸುವುದು ಅಗತ್ಯವೆಂದು ಬ್ರಿಟಿಷ್ ಚಕ್ರಾಧಿಪತ್ಯ ಭಾವಿಸಿತು. ಮೊದಲ ಸಂಪುಟಗಳ ಸಂಪಾದಕರಾಗಿದ್ದ ರೈಸರನ್ನೇ ಈ ಕೆಲಸಕ್ಕೆ ಸರ್ಕಾರ ಮರುನಿಯೋಜಿಸಿತು ಮತ್ತು ಜನಗಣತಿಯ ವರದಿಯ ತಯಾರಿಕೆಯಲ್ಲಿ ರೈಸರಿಗೆ ಸಹಾಯಕರಾಗಿದ್ದ ವಿ.ಎನ್. ನರಸಿಂಹ ಅಯ್ಯಂಗಾರ್‌ರವರನ್ನೇ ಈ ಕೆಲಸಕ್ಕೂ ಸಹಾಯಕರನ್ನಾಗಿ ನೇಮಿಸಿತು. ಈ ಕಾರ್ಯಕ್ಕೆ ನಿಯೋಜಿತವಾದ ಒಟ್ಟು ಸಿಬ್ಬಂದಿ ಎಂದರೆ,

ಸಂಪಾದಕ - ೧ ಗೌರವಧನ ೫೦೦೦ ರೂ.

ಸಹಾಯಕ - ೧

ರೈಟರುಗಳು - ೪ (ರೂ. ೬೦, ೫೦, ೩೦ ಮತ್ತು ೨೫ ರೂ. ಸಂಬಳದ ಮೇಲೆ)

ಸಹಾಯಕನ ಸಿಬ್ಬಂದಿ :

ದಫೇದಾರ - ೧ ೧೦ ರೂ. ಸಂಬಳಕ್ಕೆ

ಆಳುಗಳು - ೨ ೭ ರೂ. ಸಂಬಳಕ್ಕೆ

ಆಳುಗಳು - ೨ ೬ ರೂ. ಸಂಬಳಕ್ಕೆ

ಮುಚ್ಚಿ - ೧ ೬ ರೂ. ಸಂಬಳಕ್ಕೆ[1]

೧೮೯೨ರ ಮಧ್ಯಭಾಗದ ವೇಳೆಗೆ ಪರಿಷ್ಕರಣೆಯ ಕಾರ್ಯ ಆರಂಭವಾಯಿತೆಂದು ಸರ್ಕಾರಿ ದಾಖಲೆಗಳು ಸೂಚಿಸುತ್ತವೆ. ಪರಿಷ್ಕರಣದ ಕಾರ್ಯದಲ್ಲಿ ರೈಸ್ ಅಳವಡಿಸಿಕೊಂಡಿರುವ ವಿಧಾನ ಈ ಕೆಳಗಿನದು :

1 K.S.A. G.M 57 of 1891. Sl. No. 47

೧. ಬದಲಾವಣೆ ಅಗತ್ಯವಿಲ್ಲದ ಪಠ್ಯಭಾಗವನ್ನು ಹಾಗೆಯೇ ಉಳಿಸಿಕೊಳ್ಳುವುದು :

ಉದಾಹರಣೆಗೆ ಮೊದಲ ಸಂಪುಟದ ಆಡಳಿತಕ್ಕೆ ಸಂಬಂಧಿಸಿದ ಅಧ್ಯಾಯದಲ್ಲಿ (ಪುಟ ೫೭೨) ಮೊದಲ ಎರಡು ಮೂರು ಪ್ಯಾರಾಗಳನ್ನು ಹೊರತುಪಡಿಸಿದರೆ ಇಡಿಯ ಅಧ್ಯಾಯದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ.

೨. ಹಿಂದೆ ಉಲ್ಲೇಖಿಸಲಾದ ತಜ್ಞರ ವರದಿಗಿಂತ ಉತ್ತಮವಾದ ವರದಿ ಲಭ್ಯ ವಿದ್ದಲ್ಲಿ ಹಳೆಯದನ್ನು ತೆಗೆದು ಹೊಸದನ್ನು ಅಳವಡಿಸುವುದು, ವೈಜ್ಞಾನಿಕ ಮಾಹಿತಿಯನ್ನು ಹೊಸ ಮಾಹಿತಿಗಳ ಬೆಳಕಿನಲ್ಲಿ ಪರಿಷ್ಕರಿಸುವುದು :

ಭೂವಿಜ್ಞಾನಕ್ಕೆ ಸಂಬಂಧಿಸಿದ ಡಾ॥ ಹೈನೆಯ ಟಿಪ್ಪಣಿಗಳನ್ನು ತೆಗೆದು ಆ ಜಾಗದಲ್ಲಿ ಬ್ರೂಸ್‌ಫೂಟರ ಟಿಪ್ಪಣಿಗಳನ್ನು ಸೇರಿಸಿದೆ. (ಮೊದಲ ಸಂಪುಟದ ಪುಟ ೩೬) ಸಸ್ಯ ಸಂಪತ್ತನ್ನು ಕುರಿತಾದ ಅಧ್ಯಾಯದಲ್ಲಿ ಚೌಬೀನೆ ಮರಗಳನ್ನು ಸಸ್ಯಶಾಸ್ತ್ರೀಯವಾಗಿ ವರ್ಗೀಕರಿಸಲಾಗಿದೆ (ಮೊದಲ ಸಂಪುಟದ ಪುಟ ೭೮), ಪುಟ ೧೭೬ರಲ್ಲಿದ್ದ ಪ್ರಾಣಿವರ್ಗದ ವಿವರಗಳನ್ನು, ಪುಟ ೧೮೧ರಲ್ಲಿದ್ದ ಪಕ್ಷಿಗಳ ವಿವರಗಳನ್ನು ಪುನಃ ವರ್ಗೀಕರಿಸಲಾಗಿದೆ.

೩. ಹೊಸ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೆಲವು ಪ್ಯಾರಾಗಳನ್ನು ತೆಗೆದುಹಾಕು ವುದು:

ಮೊದಲ ಸಂಪುಟದ ಪುಟ ೧೬೧ರಲ್ಲಿದ್ದ ಅಫೀಮಿಗೆ ಸಂಬಂಧಿಸಿದ ವಿವರಗಳನ್ನು ಹಾಗೂ ಪುಟ ೨೨೮ರಲ್ಲಿದ್ದ ರಾಚೆವಾರ್ ಜನಾಂಗಕ್ಕೆ ಸಂಬಂಧಿಸಿದ ಕೆಲವು ಪ್ಯಾರಾಗಳನ್ನು ತೆಗೆದುಹಾಕಿದೆ.

೪. ಹೊಸ ವಿವರಗಳನ್ನು ಸೇರಿಸುವುದು :

ಮೊದಲ ಸಂಪುಟದ ಪುಟ ೧೭೭ರಲ್ಲಿ ಅರಣ್ಯ ಪ್ರಾಣಿಗಳ ಸಂರಕ್ಷಣಾ ಕಾಯಿದೆಯ ಬಗೆಗಿನ ಮಾಹಿತಿ, ಸಸ್ಯಸಂಪತ್ತಿನ ವಿಭಾಗದಲ್ಲಿ ಕ್ಯಾಶುರೀನಾ (ಸರ್ವೆ), ಸಿಂಕೋನಾ, ರಿಯಾ ಮುಂತಾದ ಸಸ್ಯಗಳ ವಿವರಗಳು, ಪುಟ ೫೦೯ರಲ್ಲಿ ಕುಶಲಕಲೆಗಳನ್ನು ಕುರಿತಾದ ಮಾಹಿತಿಗಳು, ಪುಟ ೫೨೪ ರಿಂದ ೫೨೯ರಲ್ಲಿರುವ ಚಿನ್ನದ ಗಣಿಗಾರಿಕೆಯ ವಿವರಗಳು ಇವೆಲ್ಲವೂ ಸಂಪೂರ್ಣವಾಗಿ ಹೊಸದಾಗಿ ಸೇರ್ಪಡೆಯಾಗಿರುವ ಭಾಗಗಳು.

೫. ಕೇವಲ ಅಂಕಿ ಅಂಶಗಳನ್ನು ಬದಲಿಸುವುದರ ಮೂಲಕ ಬರೆಹವನ್ನು ಉತ್ತಮ ಗೊಳಿಸುವುದು:

ಮೊದಲ ಸಂಪುಟದ ಜನಾಂಗೀಯ ವಿವರಗಳ ಅಧ್ಯಾಯದಲ್ಲಿ ಪುಟ ೨೧೭ರಲ್ಲಿನ ಜನಗಣತಿಯ ಅಂಕಿ ಅಂಶಗಳನ್ನು ಮತ್ತು ಎರಡನೇ ಸಂಪುಟದಲ್ಲಿ ಪ್ರತಿ ಜಿಲ್ಲೆಯ ಜನಸಂಖ್ಯೆ, ವಸತಿ ಪ್ರದೇಶ, ನಗರ, ಹಳ್ಳಿಯಲ್ಲಿನ ಜನವಸತಿ ಮೊದಲಾದವುಗಳ ಅಂಕಿ ಅಂಶಗಳನ್ನು ಬದಲಿಸಿದೆ.

೬. ಅಗತ್ಯವಿದ್ದಲ್ಲಿ ಸಂಪೂರ್ಣ ಭಾಗವನ್ನು ಪುನಾರಚಿಸುವುದು :

ಮೊದಲ ಸಂಪುಟದ ಪುಟ ೨೧೦ ರಿಂದ ೨೧೪ರಲ್ಲಿರುವ ಜನಾಂಗೀಯ ವಿವರಗಳ ಪುಟಗಳನ್ನು ಮತ್ತು ಪುಟ ೪೯೬ರಲ್ಲಿರುವ ಕನ್ನಡ ಕವಿಗಳನ್ನು ಕುರಿತಾದ ಅಂಶಗಳನ್ನು ಸಂಪೂರ್ಣವಾಗಿ ಪುನಾರಚಿಸಲಾಗಿದೆ.

ಪರಿಷ್ಕೃತಗೊಂಡ ಸಂಪುಟಗಳನ್ನು ಮುದ್ರಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಧ್ಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಲಂಡನ್ನಿನ ಪ್ರಸಿದ್ಧ ಆರ್ಕಿಬಾಲ್ಡ್ ಕಾನ್ಸ್‌ಟೇಬಲ್ ಮತ್ತು ಕಂಪನಿಯು ಸುಮಾರು ೯೬೦ ಪೌಂಡ್‌ಗಳ ಮೊತ್ತದಲ್ಲಿ ಎರಡೂ ಸಂಪುಟಗಳ ಒಟ್ಟು ೨೦೦೦ ಪ್ರತಿಗಳನ್ನು ಮುದ್ರಿಸಲು ಸಿದ್ಧವಿತ್ತು. ಸರ್ಕಾರಿ ಮುದ್ರಣಾಲಯದ ಅಧಿಕಾರಿಗಳ ಪ್ರಕಾರ ಇದಕ್ಕೆ ತಗಲುತ್ತಿದ್ದ ವೆಚ್ಚ ಸುಮಾರು ೨೦,೦೦೦ ರೂಪಾಯಿಗಳು ಅಥವಾ ೧೨೫೦ ಪೌಂಡುಗಳು. ಹಾಗಾಗಿ ಲಂಡನ್ನಿನ ಮುದ್ರಣ ಸಂಸ್ಥೆಗೆ ಮುದ್ರಣದ ಜವಾಬ್ದಾರಿಯನ್ನು ವಹಿಸಲಾಯಿತು. ೧೮೯೮ರ ಜೂನ್ ೧ರ ವೇಳೆಗೆ ೫೦೦ ಅರೆಚರ್ಮದ (Half leather) ಮತ್ತು ೧೫೦೦ ಬಟ್ಟೆಯ ಹೊದಿಕೆಯಿದ್ದ ಪ್ರತಿಗಳು ರವಾನೆಗೆ ಸಿದ್ಧವಾಗಿದ್ದವು. ಅಂತಿಮವಾಗಿ ಸಂಪುಟಗಳ ಪ್ರಕಟಣೆ ವೆಚ್ಚವಾದ ಹಣದ ಮೊತ್ತವೆಂದರೆ ೧೬೪೯ ಪೌಂಡುಗಳು, ೧೧ ಶಿಲ್ಲಿಂಗ್ ಮತ್ತು ೯ ಪೆನ್ನಿ[1] ಈ ಕಾರ್ಯವನ್ನು ಕೈಗೊಂಡುದಕ್ಕೆ ರೈಸರಿಗೆ ಸಂದ ಸಂಭಾವನೆ ೫೦೦೦ ರೂ.ಗಳು.[2]

ಒಟ್ಟು ಯೋಜನೆಗೆ ಸಂಬಂಧಿಸಿದಂತೆ ಆದ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ಕೌನ್ಸಿಲ್‌ನ ಸದಸ್ಯ ವಿ.ಪಿ. ಮಾಧವರಾವ್ ಮತ್ತು ದಿವಾನರಾದ ಶೇಷಾದ್ರಿ ಅಯ್ಯರ್‌ರವರ ನಡುವೆ ಸಾಕಷ್ಟು ಚರ್ಚೆ ನಡೆದಿದ್ದುದರ ಬಗ್ಗೆ ಪತ್ರಾಗಾರದಲ್ಲಿ ಕೆಲವು ದಾಖಲೆಗಳಿದ್ದು ಪರಿಶೀಲನೆಗೆ ಅರ್ಹವಾಗಿವೆ. ಮಾಧವರಾಯರು ಎತ್ತಿರುವ ಆಕ್ಷೇಪಣೆಗಳೆಂದರೆ :

೧. ೧೮೯೨ರಲ್ಲಿಯಷ್ಟೇ ರೈಸರ ಸಂಬಳವನ್ನು ೧೩೫೦ ರಿಂದ ೧೫೦೦ ರೂ.ಗಳಿಗೆ ಏರಿಸಿರುವಾಗ ಮತ್ತೆ ೫೦೦೦ ರೂ.ಗಳನ್ನು ಕೊಡುವ ಅವಶ್ಯಕತೆ ಏನು?

೨. ಎರಡನೆಯ ಮುದ್ರಣವು ಮೊದಲನೆಯದಕ್ಕಿಂತ ಹೆಚ್ಚೇನೂ ವಿಸ್ತಾರವಾಗಿಲ್ಲ.

೩. ಇದು ಸರ್ಕಾರದ ಅಧಿಕಾರಿಯೊಬ್ಬ ಬರೆದ ಬರಹದಂತಿಲ್ಲ.[3]

ಈ ಎಲ್ಲ ಪ್ರಶ್ನೆಗಳಿಗೆ ಪ್ರತಿಯಾಗಿ ದಿವಾನ್ ಶೇಷಾದ್ರಿ ಅಯ್ಯರ್‌ರವರು ಕೊಟ್ಟಿರುವ ಉತ್ತರಗಳಿವು:

೧. That no promise had been made.

---

1 ಅಲ್ಲೇ..

2 ಸರ್ಕಾರಿ ಆದೇಶ ಸಂಖ್ಯೆ ೪೬೪೮/DC ದಿನಾಂಕ ೯ ಏಪ್ರಿಲ್ ೧೮೯೯

3 ಅಲ್ಲೇ.. ಕ್ರ.ಸಂ. ೫

೨. That Mr. Rice makes no claim in any sense of the term.

೩. That the government (following the precendent for the 1st edition) never the less think that Mr. Rice's labour in getting up the second edition should be specially remunerated.

೪. That Mr. Rice done the work of re-editing in a generally satisfactory manner within the acknowledged limits of a gazetteer writer's liberty of speech and opinion.

೫. That though the work of getting up the edition was very much less than that of writing the original edition, government deem a bonus for the 2nd edition of Rs. 5000 is not extravagant as compared with Rs. 5000 sanctioned by Govt. of India in 1877 for the first edition, because of the great fall in the value of money generally and of Rupee. Money in particular during the past 22 years.[1]

ಮೇಲಿನ ಪತ್ರ ವ್ಯವಹಾರವು ಆ ಕಾಲದ ಸರ್ಕಾರದ ಮುಖ್ಯಸ್ಥರ ಮಿತವ್ಯಯದ ಧೋರಣೆಗೂ ಅದೇ ವೇಳೆಗೆ ರೈಸರಂತಹ ನಿಷ್ಠಾವಂತ ಅಧಿಕಾರಿಗಳ ಬಗೆಗೆ ಶೇಷಾದ್ರಿ ಅಯ್ಯರರು ಇಟ್ಟಿದ್ದ ಅಭಿಮಾನಕ್ಕೂ ದ್ಯೋತಕವಾಗಿದೆ.

೧೯೦೦ರ ನವೆಂಬರ್ ೨೦ರಲ್ಲಿ ಬ್ರಿಟಿಷ್ ಅಧಿಪತ್ಯದ ಕಾರ್ಯದರ್ಶಿಯಾಗಿದ್ದ ಜೆ.ಪಿ. ಹೆವಿಟ್‌ನು ಮೈಸೂರಿನ ರೆಸಿಡೆಂಟರಿಗೆ ಕಾಗದ ಬರೆದು 'ಇತ್ತೀಚೆಗೆ ನಡೆದಿರುವ ಜನಗಣತಿಗಳ ಹಿನ್ನೆಲೆಯಲ್ಲಿ ಇಂಪಿರಿಯಲ್ ಗೆಜೆಟಿಯರ್‌ನಲ್ಲಿನ ಎಲ್ಲ ಲೇಖನಗಳನ್ನು ಪುನಃ ಬರೆಸಬೇಕೆಂದು ನಿರ್ಧರಿಸಲಾಗಿದೆ' ಎಂದು ತಿಳಿಸಿ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ ಲೇಖನಗಳನ್ನು ಸೆನ್ಸಸ್ ಸೂಪರಿಂಟೆಂಡೆಂಟರ ಕಡೆಯಿಂದ ಪರಿಷ್ಕರಿಸಿ ಕಳುಹಿಸಬೇಕೆಂದು ಸೂಚಿಸಿದನು. ಆದರೆ ಮೈಸೂರು ಸರ್ಕಾರ ಈ ಕಾರ್ಯವನ್ನು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಖಾಸಗಿ ಶಿಕ್ಷಕರಾಗಿದ್ದ ಕರ್ನಲ್ ಫ್ರೇಜ಼ರ್‌ರಿಗೆ ಒಪ್ಪಿಸಲು ಯೋಜಿಸಿತು. ಆದರೆ ಫ್ರೇಜ಼ರ್ ಈ ಕಾರ್ಯವನ್ನು ಮಾಡಲು ಒಪ್ಪದಿದ್ದುದರಿಂದ ಆ ಜವಾಬ್ದಾರಿಯನ್ನು ರೈಸರಿಗೇ ವಹಿಸಿ ೧೨೦೦ ರೂ.ಗಳ ಸಂಭಾವನೆಯನ್ನು ನೀಡಲಾಯಿತು.[2] ಸರ್ಕಾರವೇನೋ ಮೈಸೂರು ಗೆಜೆಟಿಯರ್‌ನ ಮೂರನೇ ಆವೃತ್ತಿಯನ್ನೂ ಆಗಲೇ ಹೊರತರಲು ಸೂಚಿಸಿತ್ತಾದರೂ ದಿವಾನರಾದ ಟಿ. ಆನಂದರಾಯರು ಅದರ ಅವಶ್ಯಕತೆ ಇಲ್ಲವೆಂದು ಬಲವಾಗಿ ಪ್ರತಿಪಾದಿಸಿದ್ದರಿಂದ ಆ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ.

1 ಅಲ್ಲೇ., ಕ್ರ.ಸಂ. ೨೦

2 ಆದೇಶ ಸಂಖ್ಯೆ ೧೩೦೭-೪೦/MIS ದಿನಾಂಕ ೨೨ ಜುಲೈ ೧೯೦೨

ಸಂಪುಟಗಳ ವಸ್ತು ವಿಶ್ಲೇಷಣೆ :

ರೈಸ್ ಗೆಜೆಟಿಯರ್ ಸಂಪುಟಗಳು ಗುಣ ಮತ್ತು ಗಾತ್ರ ಎರಡರಲ್ಲೂ ದೊಡ್ಡವು. ೧೮೭೬-೭೭ರಲ್ಲಿ ಪ್ರಕಟವಾದ ಮೊದಲ ಆವೃತ್ತಿಯಲ್ಲಿ ಒಟ್ಟು ೧೬೪೪ ಪುಟಗಳಿವೆ. (ಮೊದಲ ಸಂಪುಟ - ೬೭೦, ಎರಡನೆಯ ಸಂಪುಟ - ೫೦೪ ಮತ್ತು ಮೂರನೆಯ ಸಂಪುಟ - ೪೭೦ ಪುಟಗಳು). ಎರಡನೆಯ ಆವೃತ್ತಿಯಲ್ಲಿ ಮೂರನೆಯ ಸಂಪುಟವನ್ನು ಬಿಟ್ಟರೂ ಒಟ್ಟು ೧೩೫೨ ಪುಟಗಳಿವೆ. (ಮೊದಲನೆಯ ಸಂಪುಟ - ೮೧೩ ಮತ್ತು ಎರಡನೆಯ ಸಂಪುಟ - ೫೩೯).

ಇಷ್ಟು ಬೃಹತ್ ಗಾತ್ರದ ಸಂಪುಟಗಳನ್ನು ಒಂದೇ ಬಾರಿಗೆ ಸಮಗ್ರವಾಗಿ ವಿಶ್ಲೇಷಿಸುವುದು ಸಾಧ್ಯವಿಲ್ಲವಾದ್ದರಿಂದ ಮೊದಲಿಗೆ ಪ್ರತ್ಯೇಕವಾಗಿ ಪ್ರತಿಯೊಂದು ಅಧ್ಯಾಯವನ್ನು ಪರಾಮರ್ಶಿಸಿ ಅನಂತರ ಒಟ್ಟು ನೋಟವನ್ನು ನೀಡಲು ಯತ್ನಿಸಲಾಗಿದೆ. ಪ್ರಸ್ತುತ ಮೊದಲ ಮುದ್ರಣದ ಪ್ರತಿಗಳು ನೋಡಲು ದುರ್ಲಭವಾದ್ದರಿಂದ ವಿಷಯ ವಿಶ್ಲೇಷಣೆಗೆ ಎರಡನೆಯ ಆವೃತ್ತಿಯನ್ನು ಬಳಸಿದೆಯಾದರೂ ಅಲ್ಲಲ್ಲಿ ಮೊದಲ ಆವೃತ್ತಿಯ ವಿವರಗಳನ್ನು ಆನುಷಂಗಿಕ ಆಕರಗಳ ನೆರವಿನಿಂದ ತೌಲನಿಕವಾಗಿ ಗಮನಿಸಿದೆ.

ಮೊದಲನೆಯ ಸಂಪುಟ

ಅಧ್ಯಾಯ - ೧: Physical Geography (ಭೌಗೋಳಿಕ ಸಂಪತ್ತು) :

ಒಟ್ಟು ೬೭ ಪುಟಗಳಿರುವ ಈ ಅಧ್ಯಾಯವು ಸಂಸ್ಥಾನದ ಪ್ರಾಕೃತಿಕ ಹಾಗೂ ಭೌಗೋಳಿಕ ಪರಿಸರದ ವಿವರಗಳನ್ನು ಒಳಗೊಂಡಿದೆ. ಇಡಿಯ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವೆಂದರೆ:

೧. Physical Features (ಪ್ರಾಕೃತಿಕ ವಿವರಗಳು)

೨. Geology (ಭೂವೈಜ್ಞಾನಿಕ ವಿವರಗಳು)

೩. Meteorology (ಹವಾಮಾನ).

ಪ್ರಾಕೃತಿಕ ವಿವರಗಳನ್ನು ನೀಡುವಾಗ ಮೊದಲಿಗೆ ಮೈಸೂರು ಸಂಸ್ಥಾನವು ದೇಶದ ಭೂಪಟದಲ್ಲಿ ಕಂಡುಬರುವ ಸ್ಥಳವನ್ನು ಸೂಚಿಸಿ ಮೇರೆಗಳನ್ನು ನಿರ್ದೇಶಿಸಲಾಗಿದೆ. ಭೌಗೋಳಿಕ ವಿವರಗಳನ್ನು ನೀಡುವಾಗ ಮೊದಲಿಗೆ ಆ ಸ್ಥಳದ ಹೆಸರಿನ ನಿಷ್ಪತ್ತಿಯನ್ನು ಕುರಿತು ಪ್ರಮುಖವಾಗಿ ಚರ್ಚಿಸುವುದು ವಾಡಿಕೆ. ಆದರೆ ರೈಸರು ಈ ಎಲ್ಲ ವಿವರಗಳನ್ನು ಅಡಿಟಿಪ್ಪಣಿಯ ಗಾತ್ರಕ್ಕೆ ಕುಗ್ಗಿಸಿಕೊಂಡಿದ್ದಾರೆ. ಆದರೂ ಯಾವ ಮಾಹಿತಿಯನ್ನೂ ಬಿಡದೆ 'ಮಹಾವಂಶೊ' ಎಂಬ ಬೌದ್ಧ ಕೃತಿಯಲ್ಲಿ 'ಮಹಿಷ ಮಂಡಲ' ಎಂಬ ಹೆಸರಿರುವುದನ್ನು ಉಲ್ಲೇಖಿಸಿ ಅನಂತರ ಹೇಗೆ 'ಕರ್ನಾಟಕ' ಹಾಗೂ 'ಕನ್ನಡ' ಎಂಬ ಶಬ್ದಗಳು ಇಂಗ್ಲಿಷರ

ಬಾಯಲ್ಲಿ Carnatic, Canara ಎಂದೆಲ್ಲಾ ಬದಲಾಗಿದೆ ಎಂಬುದನ್ನು ದಾಖಲಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಮಲೆನಾಡು ಮತ್ತು ಮೈದಾನ ಪ್ರದೇಶಗಳೆಂಬ ಎರಡು ಸ್ವಾಭಾವಿಕ ವಿಭಾಗಗಳಿವೆ ಎಂಬುದನ್ನು ಪ್ರಸ್ತಾಪಿಸಿ ಅವುಗಳ ಲಕ್ಷಣಗಳನ್ನು ವಿವರಿಸಲಾಗಿದೆ. ಪ್ರಮುಖ ನದಿಗಳಾದ ತುಂಗ-ಭದ್ರ, ಹೇಮಾವತಿ, ಲಕ್ಷಣತೀರ್ಥ, ಕಾವೇರಿ, ಶರಾವತಿ, ದಕ್ಷಿಣ ಮತ್ತು ಉತ್ತರ ಪಿನಾಕಿನಿ ನದಿಗಳ ಸಂಸ್ಥಾನದೊಳಗಿನ ಉದ್ದಗಲಗಳು, ಅವು ನೀರುಣಿಸುವ ಪ್ರದೇಶದ ವಿಸ್ತೀರ್ಣ, ಇತ್ಯಾದಿ ವಿವರಗಳನ್ನು ಸ್ಥೂಲವಾಗಿ ನೀಡಲಾಗಿದೆ.

"owing to either rocky or shallow beds, none of the Mysore rivers is navigatable"[1] ಎಂದು ಹೇಳಿದರೂ ಸ್ಥಳೀಯ ಬಳಕೆಗಾಗಿ ತೆಪ್ಪ, ಹರಿಗೋಲು, ದೋಣಿ, ಸಾಂಗ್ಡ ಮುಂತಾದ ವಾಹನಗಳನ್ನು ಬಳಸುತ್ತಾರೆಂದು ಉಲ್ಲೇಖಿಸಿದ್ದಾರಲ್ಲದೆ ಅವುಗಳ ಸ್ವರೂಪ, ನಿರ್ಮಾಣದ ರೀತಿ, ಬಳಕೆಯ ವಿಧಾನ ಇತ್ಯಾದಿ ವಿವರಗಳನ್ನೂ ನೀಡಿದ್ದಾರೆ. 'ಸಾಂಗ್ಡ' ಎಂಬ ಒಂದು ಬಗೆಯ ದೋಣಿಯನ್ನು ಕುರಿತು ಹೇಳುವಾಗ ಅಡಿ ಟಿಪ್ಪಣಿಯಲ್ಲಿ ಪ್ರಾಚೀನ ರೋಮನ್ ಸಾಮ್ರಾಜ್ಯದ ಆಡಳಿತದ ಕಾಲದಲ್ಲಿ ರಚಿತವಾದ 'ಪೆರಿಪ್ಲಸ್' ಎಂಬ ಸಾಗರಯಾನಕ್ಕೆ ಸಂಬಂಧಿಸಿದ ಕೃತಿಯಲ್ಲಿ ಈ ಸಾಂಗ್ಡದ ಪ್ರಸ್ತಾಪವಿದೆ ಎಂಬ ಮಾಹಿತಿಯನ್ನೂ ನೀಡಿರುವುದು ವಿಶೇಷ. ಸಂಸ್ಥಾನದ ಪ್ರಮುಖ ಕೆರೆಗಳು, ಅವುಗಳ ವಿಸ್ತಾರ, ಇತ್ಯಾದಿ ಮಾಹಿತಿಗಳನ್ನು ದಾಖಲಿಸಿರುವರಲ್ಲದೆ 'ತಲಪರಿಗೆ'ಗಳು ಎಂಬ ಹೆಸರಿನ ವಿಶಿಷ್ಟ ಮಾದರಿಯ ನೀರಿನ ಊಟೆಗಳನ್ನು ಕೊರಟಗೆರೆ - ಹಿರಿಯೂರು - ಮೊಳಕಾಲ್ಮೂರು ಸಾಲಿನಲ್ಲಿ ಹಾಗೂ ಪಾವಗಡದ ಸಮೀಪದಲ್ಲಿ ಕಾಣಬಹುದಾಗಿದ್ದು ಕೃಷಿ ಕಾರ್ಯಗಳಿಗೆ ಇದು ಉಪಯುಕ್ತವಾಗಿದೆ ಎಂಬ ವಿವರವನ್ನು ನೀಡಿದ್ದಾರೆ.[2]

ಇಲ್ಲಿಯ ಬೆಟ್ಟಗಳ ಬಗ್ಗೆ ಸವಿವರವಾದ ಮಾಹಿತಿ ಇದ್ದು ಇದರೊಂದಿಗೆ ಸಂಸ್ಥಾನ ದಲ್ಲಿನ ಎಲ್ಲ ಪ್ರಮುಖ ಬೆಟ್ಟಗಳ ಎತ್ತರವನ್ನು ಅವುಗಳ ಅಕ್ಷಾಂಶ ರೇಖಾಂಶಗಳ ಸಹಿತ ತೌಲನಿಕವಾಗಿ ತೋರಿಸುವಂತಹ ವಿಶೇಷ ರೀತಿಯ ಪಟ್ಟಿಕೆಯೊಂದನ್ನು ನೀಡಲಾಗಿದೆ.[3]

Geology ವಿಭಾಗದಲ್ಲಿ ಸಂಸ್ಥಾನದಲ್ಲಿ ಕಂಡುಬರುವ ರೂಪಾಂತರ ಶಿಲೆಗಳು (Metamorphic rocks), ಪ್ಲುಟಾನಿಕ್ ಶಿಲೆಗಳು (Plutonic rocks), ಜ್ವಾಲಾಮುಖಿ ಜನ್ಯ ಶಿಲೆಗಳು (Volcanic rocks), ಜಲಜ ಶಿಲೆಗಳು (Aqueous rocks), ಇವೇ ಮೊದಲಾದ ವಿವಿಧ ಬಗೆಯ ಶಿಲೆಗಳನ್ನು ಹಾಗೂ ಆಯಾ ಗುಂಪಿಗೆ ಸೇರುವ ಉಪಜಾತಿಯ ಶಿಲೆಗಳ ವಿವರಗಳನ್ನೂ ನೀಡಲಾಗಿದೆ. ಇದರೊಂದಿಗೆ ಕ್ಯಾಪ್ಟನ್ ನ್ಯೂಬೋಲ್ಡ್ ಹಾಗೂ ಆರ್. ಬ್ರೂಸ್‌ಫೂಟ್ ಎಂಬ ಇಬ್ಬರು ಭೂವಿಜ್ಞಾನಿಗಳು ಪ್ರತ್ಯೇಕವಾಗಿ ಸಂಸ್ಥಾನದಾದ್ಯಂತ

---

1 Vol. I. P 5

2 Vol. I. P 7

3 ಈ ಪಟ್ಟಿಕೆಯನ್ನು ಹಯವದನರಾಯರು ತಮ್ಮ ಗೆಜೆಟಿಯರ್‌ನಲ್ಲಿ ಯಥಾವತ್ತಾಗಿ ಪುನರ್ಮುದ್ರಿಸಿದ್ದಾರೆ. Vol. I. P 14–15, 1927, New Edition.

ಸಂಚರಿಸಿ ದಾಖಲು ಮಾಡಿಕೊಂಡಿರುವ ಭೂವೈಜ್ಞಾನಿಕ ವಿವರಗಳನ್ನು ಯಥಾವತ್ತಾಗಿ ನೀಡಲಾಗಿದೆ. ಇವರಲ್ಲಿ ಕ್ಯಾಪ್ಟನ್ ನ್ಯೂಬೋಲ್ಡ್ ೧೮೪೪ ರಿಂದ ೧೮೫೦ರ ಅವಧಿಯಲ್ಲಿ ದಕ್ಷಿಣಭಾರತದಾದ್ಯಂತ ಸಂಚರಿಸಿ ಇಲ್ಲಿನ ಭೂವೈಜ್ಞಾನಿಕ ವಿವರಗಳನ್ನು ದಾಖಲು ಮಾಡಿದವ. ಈತ ಬಿಸಿಲೆಘಟ್ಟದಿಂದ ಬೇತಮಂಗಲದವರೆಗೆ, ಶ್ರೀರಂಗಪಟ್ಟಣದಿಂದ ಕೊಡಗಿನವರೆಗೆ ಹಾಗೂ ಗೇರುಸೊಪ್ಪೆಯಲ್ಲಿ ಗಮನಿಸಿರುವ ಭೂವೈಜ್ಞಾನಿಕ ವಿವರಗಳನ್ನು ರೈಸ್ ಆಯ್ದು ಪುನರ್‌ಮುದ್ರಿಸಿದ್ದಾರೆ. ಇದೇ ರೀತಿಯಲ್ಲಿ ೧೮೮೧ರಲ್ಲಿ ಬ್ರೂಸ್‌ಫೂಟ್ ಎಂಬಾತ ಜೋಲಾರಪೇಟೆಯಿಂದ ಶಿಕಾರಿಪುರದವರೆಗೆ ನಡೆಸಿರುವ ವಿಸ್ತೃತವಾದ ಭೂವೈಜ್ಞಾನಿಕ ಸರ್ವೇಕ್ಷಣಾ ಅಧ್ಯಯನದ ವರದಿಯನ್ನು ಬಹುಮಟ್ಟಿಗೆ ಯಥಾವತ್ತಾಗಿ ನೀಡಿದ್ದಾರೆ. ಸಂಸ್ಥಾನದಲ್ಲಿ ಕಂಡುಬರುವ ವಿವಿಧ ಬಗೆಯ ಶಿಲಾ ಪದರಗಳನ್ನು ಬ್ರೂಸ್‌ಫೂಟ್ ಮೊತ್ತಮೊದಲಬಾರಿಗೆ 'ಧಾರವಾರ್-ಶಿವಮೊಗ್ಗ ಶಿಷ್ಟ್ ಶಿಲಾಸ್ತೋಮ, ದಂಬಳ-ಚಿಕ್ಕನಾಯಕನಹಳ್ಳಿ ಶಿಷ್ಟ್ ಶಿಲಾಸ್ತೋಮ, ಕೋಲಾರ ಚಿನ್ನದ ಗಣಿ ಶಿಷ್ಟ್ ಶಿಲಾಸ್ತೋಮ ಹಾಗೂ ಗ್ರಾನೈಟ್ ನೈಸ್ ಎಂದು ವರ್ಗೀಕರಿಸಿದ್ದು ಈ ಎಲ್ಲಾ ವಿವರಗಳನ್ನು ರೈಸ್ ಬಳಸಿಕೊಂಡಿದ್ದಾರೆ.

ಹವಾಮಾನ ವಿವರಗಳನ್ನು ಕುರಿತಾದ ಮೂರನೇ ಭಾಗದಲ್ಲಿ ಆರು ಹಿಂದೂ ಋತುಗಳ ವಿವರಗಳು, ಸಂಸ್ಥಾನದಲ್ಲಿ ಬೀಳುವ ಮಳೆಯ ಬಗೆಗಳು ಹಾಗೂ ಅವುಗಳ ಸರಾಸರಿ ಪ್ರಮಾಣ ಇತ್ಯಾದಿಗಳನ್ನು ವಿವರಿಸಲಾಗಿದೆ. ಭೂಕಂಪಗಳ ಬಗ್ಗೆ ಚರ್ಚಿಸುವಾಗ 'ಕ್ರಿ.ಶ. ೧೫೦೭ರ ಜುಲೈ ತಿಂಗಳಲ್ಲಿ ಭೂಕಂಪವೊಂದು ಸಂಭವಿಸಿರುವ ಸಾಧ್ಯತೆಯನ್ನು ನೆಲಮಂಗಲದ ಶಾಸನವೊಂದು ಸೂಚಿಸುತ್ತದೆ' ಎಂದಿರುವುದು[1] ಶಾಸನಾಧಾರಿತ ಮಾಹಿತಿಗಳನ್ನು ರೈಸ್ ಹೇಗೆ ವೈಜ್ಞಾನಿಕ ವಿಷಯಗಳ ವಿವರಣೆಗೂ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ಅಧ್ಯಾಯ ೨ : Flora (ಸಸ್ಯ ಸಂಪತ್ತು)

ಸಾಧಾರಣವಾಗಿ ಒಂದು ಪ್ರದೇಶದಲ್ಲಿನ ಸಸ್ಯ ಹಾಗೂ ಪ್ರಾಣಿಸಂಪತ್ತಿನ ಬಗೆಗಿನ ವಿವರಗಳನ್ನು ಪ್ರಾಕೃತಿಕ ಸಂಪತ್ತನ್ನು ಕುರಿತಾದ ಮೊದಲನೆಯ ಅಧ್ಯಾಯದಲ್ಲಿಯೇ ಚರ್ಚಿಸುವುದು ಹಾಗೂ ಕೃಷಿ, ನೀರಾವರಿ ಹಾಗೂ ಕೃಷಿ ಸಂಬಂಧೀ ವೃತ್ತಿಗಳ ಬಗೆಗೆ ಪ್ರತ್ಯೇಕವಾದ ಅಧ್ಯಾಯವನ್ನೇ ರೂಪಿಸುವುದು ವಾಡಿಕೆ.[2] ಆದರೆ ರೈಸರು Flora ಎಂಬ ಸುಮಾರು ೧೦೫ ಪುಟಗಳ ಎರಡನೇ ಅಧ್ಯಾಯವನ್ನೇ ಎರಡು ಭಾಗಗಳನ್ನಾಗಿ ವಿಂಗಡಿಸಿ

---

1 Vol. I. P 66.

2 ಉದಾಹರಣೆಗೆ ನೋಡಿ : ಹಂಟರ್‌ನ **Indian Empire** (1892). ಸೂರ್ಯನಾಥ ಕಾಮತರ **Karnataka State Gazetteer** (1982). ಇತ್ಯಾದಿ.

ಮೊದಲನೆಯ ಭಾಗದಲ್ಲಿ ಅರಣ್ಯವೃಕ್ಷಗಳ ಬಗೆಗಳನ್ನೂ ಎರಡನೆಯ ಭಾಗದಲ್ಲಿ ಬೆಳೆಗಳು ಹಾಗೂ ಅವುಗಳ ಕೃಷಿ ವಿಭಾಗಗಳನ್ನು ಕುರಿತೂ ಚರ್ಚಿಸಿದ್ದಾರೆ.

ಸಂಸ್ಥಾನದಲ್ಲಿರುವ ಅರಣ್ಯ ಪ್ರದೇಶವನ್ನು Evergreen belt, Dry belt ಹಾಗೂ Mixed belt ಎಂದು ಮೂರು ವಿಭಾಗಗಳಾಗಿ ಮಾಡಿಕೊಂಡು ರೈಸ್ ಅವುಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.[1] ಹಲಸು, ಎಬೋನಿ, ದೇವದಾರು, ಚಂದನ, ಧೂಪ, ತೇಗ, ಬಿಲ್ವ, ಬೂರುಗ, ಬೀಟೆ, ನಂದಿ, ಸಂಪಿಗೆ, ನೆಲ್ಲಿ, ಹೊನ್ನೆ, ಅಳಲೆ, ಮತ್ತಿ, ಕರಿಜಾಲಿ, ಬಿಳಿಜಾಲಿ, ಮುತ್ತುಗ, ನೇರಳೆ, ಬೇಲ, ಆಲ, ಅತ್ತಿ, ಅರಳೆ, ಮಾವು, ಹುಣಿಸೆ ಮುಂತಾದ ಪರಿಚಿತ ವೃಕ್ಷಗಳ ಬಗ್ಗೆ ಮಾತ್ರವಲ್ಲದೆ ಬಹುಶಃ ಕೇವಲ ತಜ್ಞರು ಮಾತ್ರವೇ ಗುರುತಿಸಬಲ್ಲ ಕುವೆ, ಕಣ್ಕುಟಿಕೆ, ಚಲ್ಲ, ಬಾಗಿ, ದಿಂಡಿಗ, ಹರುಗಲು, ಪಚಾರಿ, ಬಿರಿಡಿ, ಕೋಲ್‌ತೇಗ, ಕೂಲಿ, ತಡಸಲು, ತಪಸಿ, ಕುಂಕುಮ, ಮೊದಲಾದ ಮರಗಳ ಸ್ಥೂಲ ವಿವರಣೆಯನ್ನೂ ಇಲ್ಲಿ ಕಾಣಬಹುದು. ಪ್ರತಿಮರದ ಸಸ್ಯಶಾಸ್ತ್ರೀಯ ಹೆಸರನ್ನು ಮೊದಲು ನಮೂದಿಸಿ, ಅನಂತರ ಇಂಗ್ಲೀಷ್ ಸಾಮಾನ್ಯ ಹೆಸರು ಹಾಗೂ ಕೊನೆಗೆ ಸ್ಥಳೀಯ ಹೆಸರನ್ನು ನೀಡುವುದು, ಅದರ ಅಡಿಯಲ್ಲಿ ನಾಲ್ಕಾರು ಸಾಲುಗಳ ವಿವರಣೆಯನ್ನು ನೀಡುವುದು - ಇದು ರೈಸರು ಅನುಸರಿಸಿರುವ ಕ್ರಮ. ವಿವರಣೆಯ ಭಾಗ ಹ್ರಸ್ವವಾಗಿಯೇ ಇದೆಯಾದರೂ ಮರದ ಸ್ವರೂಪ, ಗಾತ್ರ, ಸಾಗುವಾನಿಯಾಗಿ ಅದರ ಬಳಕೆ ಹಾಗೂ ಅದರ ಔಷಧೀಯ ಗುಣ ಮುಂತಾದ ಪ್ರಧಾನ ವಿವರಗಳನ್ನು ಕೈಬಿಡದಿರುವುದರಿಂದ ಮಾಹಿತಿ ಅಪೂರ್ಣವಾಗಿದೆ ಎನ್ನುವಂತಿಲ್ಲ. ಉದಾಹರಣೆಗೆ ಬೇವಿನ ಮರದ ವಿವರಗಳನ್ನು ಎಷ್ಟು ಅಡಕವಾಗಿ ನೀಡಲಾಗಿದೆ ಎನ್ನುವುದನ್ನು ನೋಡಬಹುದು :

Melia azadirachta...... Neem, Margosa...... Bevu

Every part medicinal. Heartwood used for making idols. The wood is not affected by insects, is hard, durable and beautifully mottled. Weight about 50 lbs per cubic foot. Suitable for cabinet work and carpentry. Neem oil, obtained from the seed is used for killing insects. Leaves antiseptic and in the native treatment of small pox are placed under and around the patient at certain stages of the disease. The tree is considered sacred and

1 ಶಾಸ್ತ್ರೀಯವಾಗಿ ಮೈಸೂರು ಸಂಸ್ಥಾನದ ಕಾಡುಗಳನ್ನು (೧) ನಿತ್ಯಹರಿದ್ವರ್ಣದ ಕಾಡುಗಳು, (೨) ಉಷ್ಣವಲಯದ ಆಂಶಿಕ ನಿತ್ಯಹರಿದ್ವರ್ಣದ ಕಾಡುಗಳು, (೩) ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಕಾಡುಗಳು, (೪) ಮೈದಾನ ಪ್ರದೇಶದ ಒಣಕಾಡು, (೫) ಕುರುಚಲು ಕಾಡು ಎಂದು ಐದು ವಿಭಾಗಗಳಾಗಿ ಪ್ರಸ್ತುತ ವಿಂಗಡಿಸಲಾಗಿದೆ.

planted with the peepul at the entrance of villages, the two being married with due ceremonies, the latter representing the female and former the male.[1]

ಈ ಭಾಗದ ಬರವಣಿಗೆಗೆ ಹಾಗೂ ರೈಸರು ಕೆಮರಾನ್ ಸಂಪಾದಿಸಿದ 'Forest Trees of Mysore and Coorg' ಮುಂತಾದ ಒಂದೆರಡು ಕೃತಿಗಳನ್ನು ಆಧರಿಸಿದ್ದಾರಾದರೂ ಅಲ್ಲಿನ ಎಲ್ಲ ವಿವರಗಳನ್ನೂ ಯಥಾವತ್ತಾಗಿ ಪುನರಾವರ್ತಿಸಲು ಹೋಗದೆ ಪ್ರಮುಖ ಅಂಶಗಳನ್ನು ಮಾತ್ರ ಹೆಕ್ಕಿ ಆಯ್ದುಕೊಂಡಿದ್ದಾರೆ. ಇದು ಅವರ ಸಂಪಾದನಾ ಕೌಶಲಕ್ಕೆ ಉತ್ತಮ ನಿದರ್ಶನವಾಗಿದೆ.

ಕೃಷಿ ಮತ್ತು ತೋಟಗಾರಿಕೆಗೆ ಸಂಬಂಧಿಸಿದ ಮಾಹಿತಿಯನ್ನು ವಿವಿಧ ಗ್ರಂಥಗಳಿಂದ ಹೆಕ್ಕಿ ನಿರೂಪಿಸುವುದು ಒಂದು ರೀತಿಯಲ್ಲಿ ಸುಲಭದ ಕೆಲಸ. ಆದರೆ ಸ್ಥಳೀಯವಾದ ವಿವರಗಳನ್ನು ಅದಕ್ಕೆ ಪೂರಕವಾಗಿ ಅಲ್ಲಲ್ಲಿಯೇ ಜೋಡಿಸುವುದರ ಮೂಲಕ ಗೆಜೆಟಿಯರ್ ಕೇವಲ ಪಠ್ಯಪುಸ್ತಕದಂತೆ ಮಾತ್ರ ಉಪಯೋಗವಾಗದೆ ಸ್ಥಳೀಯ ಪರಿಸರವನ್ನು ಕುರಿತಾದ ಕೈಪಿಡಿಯೂ ಆಗಿ ಕಾರ್ಯ ನಿರ್ವಹಿಸುವಂತೆ ಮಾಡುವುದು ನಿಜಕ್ಕೂ ಕಷ್ಟದ ಕೆಲಸ. ಈ ನಿಟ್ಟಿನಲ್ಲಿ ರೈಸ್ ಗೆಜೆಟಿಯರ್ ಸಂಪುಟದಲ್ಲಿನ ಈ ಅಧ್ಯಾಯವು ಆಡಳಿತಗಾರರು ಹಾಗೂ ಅಭ್ಯಾಸಿಗಳಿಬ್ಬರಿಗೂ ಸಮಾನವಾದ ರೀತಿಯಲ್ಲಿ ಉಪಯುಕ್ತವಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಗ್ರಂಥಸ್ಥ ಮಾಹಿತಿಗಿಂತ ಸ್ಥಳೀಯ ವಿವರಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಮಳೆನಕ್ಷತ್ರಗಳ ಪಟ್ಟಿಯನ್ನೂ ಹಾಗೂ ಅದಕ್ಕೆ ಸಂವಾದಿಯಾದ ಹಿಂದೂ ಮಾಸಗಳು ಹಾಗೂ ಇಂಗ್ಲಿಷ್ ತಿಂಗಳುಗಳ ವಿವರಗಳನ್ನೂ ಪಟ್ಟಿಕೆಯ ರೂಪದಲ್ಲಿ ನೀಡಲಾಗಿದೆ. ಯಾವ ಯಾವ ಮಳೆಯ ಕಾಲದಲ್ಲಿ ರೈತರು ಯಾವಯಾವ ಕೃಷಿಯ ಚಟುವಟಿಕೆಗಳಲ್ಲಿ ತೊಡಗುತ್ತಾರೆ ಎಂಬುದನ್ನು ಬಹಳ ಹ್ರಸ್ವವಾಗಿ, ಆದರೆ ಸೂಕ್ತವಾಗಿ ಹೀಗೆ ವಿವರಿಸಲಾಗಿದೆ :

> '.... Bharani rain is considered to prognosticate good season throughout the yearl. This is expressed in the Telugu proverb *'Bharani vaste dharani pandudu'* If Bharani come, the earth will bring forth. The rains from Mrigashira and Aslesha are the sowing time, for food grains in the earlier part, and horse gram in the later. Svati and Visaka rain marks the close of the rainy season. Anuradha to Mula is the reaping time.

1 Vol. I. P 80.

when only dew falls. At this season the future rains are supposed to be engendered in the womb of clouds. Sugarcane is planted in Purvabhadra and Uttarabhadra.'[1]

ಆಹಾರ ಧಾನ್ಯಗಳನ್ನು ಬೆಳೆಯುವ ವಿಧಾನವನ್ನು ವಿವರಿಸುವಾಗ ಮೊದಲಿಗೆ ಅವುಗಳನ್ನು Dry crops, Wet crops ಹಾಗೂ Garden crops ಎಂದು ವಿಭಜಿಸಿ ಪಟ್ಟಿಮಾಡಲಾಗಿದೆ. ಅನಂತರ ಒಂದೊಂದಾಗಿ ರಾಗಿ, ಅವರೆ, ತೊಗರಿ, ಜೋಳ, ಸಾವೆ, ನವಣೆ, ಬರುಗು, ಹರಕ, ಹಲಸಂದೆ, ಹುರುಳಿ, ಉದ್ದು, ಹೆಸರು, ಎಳ್ಳು, ಹರಳು, ಸೆಣಬು, ಹತ್ತಿ, ತಂಬಾಕು, ಸಾಸಿವೆ, ಕಡಲೆ, ಗೋಧಿ, ಭತ್ತ, ಕಬ್ಬು ಮುಂತಾದವುಗಳ ಕೃಷಿಯ ವಿಧಾನವನ್ನು ವಿಸ್ತೃತವಾಗಿ ವಿವರಿಸಲಾಗಿದೆ. ಪ್ರತಿ ಧಾನ್ಯದಲ್ಲಿ ಕಂಡುಬರುವ ಬೇರೆಬೇರೆ ವಿಧಗಳು (ಉದಾಹರಣೆಗೆ ರಾಗಿಯಲ್ಲಿ - ಕರಿರಾಗಿ, ಕೆಂಪುರಾಗಿ, ಹುಲ್ಲುಪರೆ, ತೋಟದ ರಾಗಿ, ಗಿಡ್ಡರಾಗಿ, ದೊಡ್ಡರಾಗಿ, ಬಿಳಿಮೊದ್ಗಲ, ಕರಿಮೊದ್ಗಲ, ಇತ್ಯಾದಿ), ಅದರ ಬೆಳವಣಿಗೆಗೆ ಅಗತ್ಯವಾದ ಮಣ್ಣು, ನೀರು, ಗೊಬ್ಬರ, ಇತ್ಯಾದಿಗಳು, ಕಳೆ ಬೆಳೆಯುವ ಕಾಲ, ಅದನ್ನು ನಿವಾರಿಸುವ ಬಗೆ, ಇತ್ಯಾದಿಗಳನ್ನು ಸವಿವರವಾಗಿ ಚರ್ಚಿಸಲಾಗಿದೆಯಲ್ಲದೆ ಆಯಾ ಧಾನ್ಯ ವನ್ನು ಬೆಳೆಯುವಲ್ಲಿ ಬಳಸಲಾಗುವ ವಿಜಾರಿ, ಸುಡಕೆ, ಕೊರಿಗೆ, ಹಲಿವೆ ಮುಂತಾದ ಕೃಷಿ ಉಪಕರಣಗಳನ್ನು ಕುರಿತಾದ ಮಾಹಿತಿಯನ್ನೂ ನೀಡಲಾಗಿದೆ. ಒಂದೇ ಆಹಾರ ಧಾನ್ಯವನ್ನು ಸಂಸ್ಥಾನದ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಕೃಷಿವಿಧಾನಗಳಿಂದ ಬೆಳೆಯುವ ಪದ್ಧತಿಯು ರೂಢಿಯಲ್ಲಿ ಇದ್ದಲ್ಲಿ ಆ ಎಲ್ಲವುಗಳ ಬಗ್ಗೆಯೂ ಪ್ರತ್ಯೇಕವಾದ ವಿವರಣೆ ಇಲ್ಲಿದೆ.[2]

ಈ ಎಲ್ಲಾ ಸ್ಥಳೀಯ ಮಾಹಿತಿಯ ಜೊತೆಜೊತೆಗೇ ಪ್ರೊ. ಚರ್ಚ್ ಎಂಬಾತ ಬರೆದಿರುವ 'Food grains in India' ಎಂಬ ಕೃತಿಯಲ್ಲಿರುವ ರಾಗಿ, ಜೋಳ, ನವಣೆ, ಹಲಸಂದೆ ಮುಂತಾದ ಆಹಾರ ಧಾನ್ಯಗಳಲ್ಲಿರುವ ಶರ್ಕರ ಪಿಷ್ಟ, ತೈಲಗುಣ, ನೀರಿನ ಅಂಶ ಮುಂತಾದ ಪೌಷ್ಟಿಕಾಂಶಗಳ ಪಟ್ಟಿಯನ್ನೂ ರೈಸರು ಸೂಕ್ತವಾದ ಸ್ಥಳಗಳಲ್ಲಿ ಅಳವಡಿಸುವುದರ ಮೂಲಕ ಮಾಹಿತಿಯನ್ನು ಸಮಗ್ರವಾಗಿಸಲು ಶ್ರಮಿಸಿದ್ದಾರೆ.

ತೋಟಗಾರಿಕೆಗೆ ಸಂಬಂಧಿಸಿದಂತೆ ರೈಸರು ಈ ಸಂಪುಟದಲ್ಲಿ ನೀಡಿರುವ ವಿವರ ಗಳು ಸಸ್ಯಶಾಸ್ತ್ರೀಯವಾಗಿ ಹಾಗೂ ಚಾರಿತ್ರಿಕವಾಗಿ ಅತ್ಯಂತ ಮಹತ್ವದ್ದು. ಏಕೆಂದರೆ ಈ ಸಂಪುಟಗಳು ಸಿದ್ಧವಾಗುವ ವೇಳೆಯಲ್ಲಿ ಆಗಷ್ಟೇ ಲಾಲ್‌ಬಾಗ್‌ನ ಸಸ್ಯತೋಟದಲ್ಲಿ ಜೆ. ಕೆಮರಾನ್ ಎಂಬ ವಿಜ್ಞಾನಿ ಪ್ರಪಂಚದ ಬೇರೆಬೇರೆ ಕಡೆಗಳಿಂದ ಆಮದು ಮಾಡಿ ಕೊಳ್ಳಲಾಗಿದ್ದ ವಿವಿಧ ಪ್ರಭೇದಗಳ ಗಿಡಮರಗಳನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿದ್ದರು. ಆ ಯೋಜನೆಯಲ್ಲಿ ಅವರೆಗೆ ಬೆಳಸಲಾಗಿದ್ದ ಪ್ರತಿ ಗಿಡ ಅಥವಾ ಬಳ್ಳಿಯ ಸಸ್ಯಶಾಸ್ತ್ರೀಯ

1 Vol. I. P 102.

2 ಉದಾಹರಣೆಗೆ ರಾಗಿಯನ್ನು ಬೆಳೆಯುವಲ್ಲಿ ಶ್ರೀರಂಗಪಟ್ಟಣ, ಕೋಲಾರ, ಪಿರಿಯಾಪಟ್ಟಣ ಹಾಗೂ ಶಿವಮೊಗ್ಗ ಪ್ರದೇಶಗಳಲ್ಲಿ ಬಳಸಲಾಗುವ ವಿಭಿನ್ನ ಪದ್ಧತಿಗಳ ವಿವರಗಳನ್ನು ಪುಟ ೧೦೮-೧೦೯ರಲ್ಲಿ ಕಾಣಬಹುದು.

ವಿವರಗಳು ಹಾಗೂ ಬೆಳೆಸಲಾದ ಸಸಿಗಳ ಸಂಖ್ಯೆಯನ್ನು ಒಳಗೊಂಡ ಎಲ್ಲ ವಿವರಗಳನ್ನು ರೈಸ್ ಇಲ್ಲಿ ಪಟ್ಟಿಮಾಡಿದ್ದಾರೆ.

ಸುಮಾರು ೧೫ ಪುಟಗಳಷ್ಟು ದೀರ್ಘವಾಗಿರುವ ಈ ಪಟ್ಟಿಯು ಚಾರಿತ್ರಿಕವಾಗಿ ಬಹಳ ಮಹತ್ವದ್ದು. ಏಕೆಂದರೆ ೧೮೫೦ರಷ್ಟು ಹಿಂದಿನಿಂದಲೇ ವಿಶ್ವದ ವಿವಿಧ ಹವಾಗುಣ ಗಳಲ್ಲಿ ಬೆಳೆಯುವ ಬೇರೆಬೇರೆ ಜಾತಿಯ ಗಿಡಮರಗಳನ್ನು ಪ್ರಾಯೋಗಿಕವಾಗಿ ಲಾಲ್‌ಬಾಗ್‌ನ ಸಸ್ಯ ತೋಟದಲ್ಲಿ ಬೆಳೆಸುವ ಪ್ರಯತ್ನ ನಿರಂತರವಾಗಿ ಜಾರಿಯಲ್ಲಿತ್ತು. ೧೮೯೦ರ ಸುಮಾರಿಗೆ ಜಾನ್ ಕ್ಯಾಮರಾನ್‌ನ ನೇತೃತ್ವದಲ್ಲಿ ಈ ಕಾರ್ಯ ಸಾಕಷ್ಟು ಭರದಿಂದ ಮುಂದುವರೆಯಿತು. ಆದರೆ ಸ್ವಾತಂತ್ರ್ಯಾನಂತರದಲ್ಲಿ ಸೂಕ್ತವಾದ ಮೇಲ್ವಿಚಾರಣೆಯ ಕೊರತೆಯಿಂದಾಗಿ ಹಾಗೂ ಅನೇಕ ಪ್ರಾಕೃತಿಕ ಕಾರಣಗಳಿಂದಾಗಿ ಆ ಕಾಲದಲ್ಲಿ ನೆಟ್ಟ ಅನೇಕ ಗಿಡಮರಗಳು ಇಂದು ನಾಶವಾಗಿವೆ. ಈ ರೀತಿಯಾಗಿ ಹಿಂದೆ ಇದ್ದು ಇಂದು ಉಳಿದಿಲ್ಲದಿರುವ ತಳಿಗಳ ಬಗೆಗಿನ ಮಾಹಿತಿಗೆ ರೈಸ್ ಸಂಪುಟಕ್ಕೆ ಮೊರೆಹೋಗುವುದು ಅನಿವಾರ್ಯವಾಗಿದೆ.

ಇದೇ ಮಾತನ್ನು ರೈಸರು ನೀಡಿರುವ ಬಾಳೆ, ಸೊಪ್ಪುಗಳು, ಮಾವು, ಹುಲ್ಲುಗಳು ಮುಂತಾದ ಬೆಳೆಗಳ ದೇಸಿ ತಳಿಗಳ ಹೆಸರಿನ ಪಟ್ಟಿಗೂ ಅನ್ವಯಿಸಬಹುದು. ಏಕೆಂದರೆ ಈ ಪಟ್ಟಿಯಲ್ಲಿ ಇರುವ ಅನೇಕ ಜಾತಿಯ ತಳಿಗಳು ಈಗಾಗಲೇ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದರೆ ಮತ್ತೆ ಕೆಲವು ವಿನಾಶದ ಹಾದಿಯಲ್ಲಿವೆ.[1]

ಕೃಷಿಗೆ ನೀಡುವಷ್ಟೇ ಪ್ರಾಮುಖ್ಯವನ್ನು ಈ ಅಧ್ಯಾಯದಲ್ಲಿ ತೋಟಗಾರಿಕೆಗೂ ನೀಡ ಲಾಗಿದೆ. ಸಸ್ಯ ಶಾಸ್ತ್ರೀಯವಾಗಿ ತೋಟಗಳನ್ನು ವರ್ಗೀಕರಿಸುವ ಕ್ರಮ ಬೇರೆಯ ರೀತಿಯದೇ ಆಗಿದ್ದರೂ ರೈಸ್ ಸ್ಥಳೀಯವಾಗಿ, ಸಾಂಪ್ರದಾಯಿಕವಾಗಿ ಬಳಸುವ (೧) ತರಕಾರಿ ತೋಟ, (೨) ತೆಂಗು ಅಥವಾ ಅಡಿಕೆ ತೋಟ, (೩) ಎಲೆ ತೋಟ ಹಾಗೂ ಹೂವಿನ ತೋಟ ಎಂಬ ವಿಭಾಗ ಕ್ರಮವನ್ನೇ ಬಳಸಿದ್ದಾರೆ. ತೆಂಗು, ಏಲಕ್ಕಿ, ಅಡಿಕೆ, ವೀಳ್ಯೇದೆಲೆ ಮುಂತಾದ ಪಾರಂಪರಿಕ ತೋಟದ ಬೆಳೆಗಳ ಕೃಷಿಯ ಜೊತೆಗೆ ಕಾಫಿ, ಸಿಂಕೋನಾ, ಸರ್ವೆ, ಕೊಕೋ ಮುಂತಾದ ಹೊಸ ಬೆಳೆಗಳ ಅಭಿವೃದ್ಧಿಯ ಬಗೆಗೂ ಹೆಚ್ಚಿನ ವಿವರಗಳಿವೆ. ಎಲ್ಲಕ್ಕಿಂತ ವಿಶೇಷ ವೆಂದರೆ ಬೆಂಗಳೂರು ಪ್ರದೇಶದಲ್ಲಿ ವೆನಿಲ್ಲಾವನ್ನು ಬೆಳೆಯಲು ಸಾಧ್ಯವೆಂಬ ವಿಷಯವನ್ನು ಸುದೀರ್ಘವಾಗಿ ಪ್ರಸ್ತಾಪಿಸುವುದು. ಮೂಲತಃ ದಕ್ಷಿಣ ಅಮೇರಿಕಾದ ಸ್ವಾಭಾವಿಕ ಬೆಳೆ ಯಾದ ವೆನಿಲ್ಲಾವನ್ನು ಹಳೆಯ ಮಾವಿನ ತೋಪುಗಳಲ್ಲಿ ತೆಂಗಿನನಾರಿನ ಪುಡಿಯನ್ನು ಬಳಸಿ ಬೆಳೆಸಬಹುದೆಂಬ ಕ್ಯಾಮರಾನ್‌ನ ಟಿಪ್ಪಣಿಯನ್ನು ರೈಸ್ ಇಲ್ಲಿ ದಾಖಲಿಸಿದ್ದಾರೆ.[2]

---

1 ಉದಾಹರಣೆಗೆ ಬಾಳೆಯ ಹಣ್ಣುಗಳ ತಳಿಗಳಲ್ಲಿ - ರಾಜರಸಬಾಳೆ, ಮಧುರಂಗ, ಗುಜ್ಜ, ಚಿನ್ನ, ಗೂಳೂರು ಬಾಳೆ, ಜೇನು ಬಾಳೆ, ರಾಜ ಬಾಳೆ, ಸಕಲಾತಿ ಬಾಳೆ, ಹಾವು ಬಾಳೆ, ಅರಿಸಿನ ಬಾಳೆ, ಆನೆ ಬಾಳೆ, ಕಲ್ಯಾಣ ಬಾಳೆ, ಕಾಡು ಬಾಳೆ, ಇತ್ಯಾದಿ (ಪು. ೮೩). ಸೊಪ್ಪುಗಳಲ್ಲಿ - ದಗ್ಗಲಿಸೊಪ್ಪು, ಬಿಲ್ತರ್ಗ, ಗುಂಡು ತಗಸಿ, ನರೋಚಿಡ(?), ತುಪ್ಪಿಸೊಪ್ಪು, ಕೊಟ್ಟೆ ಗೊರಜಿ, ಚಿಟ್ಟೆಜಿನ ಸೊಪ್ಪು, ಪರ್ಪಾತಕ ಸೊಪ್ಪು, ಹುಳಿ ಬಚ್ಚೇಲಿ ಸೊಪ್ಪು, ಸುಚ್ಚು ಗೋವಿ, ಇತ್ಯಾದಿ (ಪು. ೮೪). ಹುಲ್ಲುಗಳಲ್ಲಿ - ಗುಂಜಲು ಗರಿಕೆ, ಕರ್ಡಾ, ಖಾರ ಅಥವಾ ಮೊಸೆ, ಉಪ್ಪಳ, ಶುಂಠಿ, ಸೋಳಲಿ, ಇತ್ಯಾದಿ (ಪು. ೧೦೦).

2 Vol. I. P–176.

ಅಧ್ಯಾಯ - ೩ : Fauna (ಪ್ರಾಣಿಸಂಪತ್ತು)

೩೩ ಪುಟಗಳ ಈ ಚಿಕ್ಕ ಅಧ್ಯಾಯದಲ್ಲಿ ಮೈಸೂರು ಸಂಸ್ಥಾನದಲ್ಲಿರುವ ಪ್ರಾಣಿ ಸಂಪತ್ತನ್ನು ಪರಿಚಯಿಸಲಾಗಿದೆ. ಕಾಡುಪ್ರಾಣಿಗಳನ್ನು Mammalia, Insectivora, Chiroptera, Codentia, Ungulta, Edentata ಇತ್ಯಾದಿಯಾಗಿ ಶಾಸ್ತ್ರೀಯವಾಗಿ ವಿಂಗಡಿಸಿ ಅವುಗಳ ಉಪವಿಭಾಗಗಳನ್ನೂ ಸೂಚಿಸಲಾಗಿದೆ. ಈ ಅಧ್ಯಾಯದ ರಚನೆಗೆ ಡಬ್ಲ್ಯೂ.ಟಿ. ಬ್ಲಾನ್‌ಫೋರ್ಡ್‌ರ 'Fauna of British India' ಎಂಬ ಕೃತಿಯನ್ನೇ ಪ್ರಧಾನವಾಗಿ ಬಳಸಲಾಗಿದೆಯಾದರೂ ಅದರಲ್ಲಿ ಇರದ ಅನೇಕ ಹೆಚ್ಚುವರಿ ಅಂಶಗಳನ್ನೂ ಸೇರಿಸಲಾಗಿದೆ. ಈ ರೀತಿ ಸೇರ್ಪಡೆಯಾಗಿರುವ ಅಂಶಗಳಲ್ಲಿ ಪ್ರಮುಖವಾದುದೆಂದರೆ ಪ್ರಾಣಿಗಳ ಸ್ಥಳೀಯ ಕನ್ನಡ ಹೆಸರುಗಳು. ಬ್ಲಾನ್‌ಫೋರ್ಡ್‌ರ ಕೃತಿಯ ಮಾಹಿತಿಯನ್ನು ಯಥಾವತ್ತಾಗಿ ಬಳಸಲಾಗಿದ್ದರೂ ಅನುಮಾನ ಬಂದಕಡೆ ಅಡಿಟಿಪ್ಪಣಿಗಳಲ್ಲಿ ಅದನ್ನು ಸೂಚಿಸಲಾಗಿದೆ. ಉದಾಹರಣೆಗೆ ಕಾಡಆಡು (ibex) ಹಾಗೂ ಕಾಡುಕುದುರೆ (nilgai) ಗಳನ್ನು ಪ್ರಸ್ತಾಪಿಸಿದನಂತರ ಅಡಿಟಿಪ್ಪಣಿಯಲ್ಲಿ "There is some doubt whether ibex and nilgai are actually found in Mysore, but they are met with on the borders" ಎಂಬ ಸೂಚನೆ ಇದೆ.[1] ಪ್ರತಿಯೊಂದು ಲಬ್ಧ ಮಾಹಿತಿಯನ್ನೂ ಸೂಕ್ಷ್ಮವಾಗಿ ಪರಿಶೀಲಿಸುವ ಹಾಗೂ ದೃಢವಾದ ಸಾಕ್ಷ್ಯಾಧಾರಗಳಿಲ್ಲದ ಯಾವ ವಿವರಗಳನ್ನೂ ಸಾರಾ ಸಗಟಾಗಿ ಸ್ವೀಕರಿಸದ ರೈಸರ ಮನೋಧರ್ಮಕ್ಕೆ ಈ ಪ್ರಸಂಗವು ಒಂದು ನಿದರ್ಶನವಾಗಿದೆ.

ಚಾರಿತ್ರಿಕವಾಗಿ ಮಹತ್ವದ ಅಂಶವೆಂದರೆ ಆಕಾಲದಲ್ಲಿ ಕಾಡುಪ್ರಾಣಿಗಳಿಂದ ಆಗುತ್ತಿದ್ದ ಉಪಟಳ ಹಾಗೂ ಅವುಗಳ ನಿವಾರಣೆಗಾಗಿ ಸರ್ಕಾರವು ಕೈಗೊಂಡ ನಿವಾರಣೋಪಾಯಗಳ ದಾಖಲೀಕರಣ. ಹುಲಿ, ಚಿರತೆ, ತೋಳ ಮುಂತಾದ ಪ್ರಾಣಿಗಳು ಊರಿನ ಜನ-ದನಗಳ ಮೇಲೆ ನಡೆಸಿ ಮಾಡಿದ ಹಾನಿಯ ವಿವರಗಳು ಇಲ್ಲಿವೆ. ಈ ಹಿಂಸ್ರಪಶುಗಳನ್ನು ಕೊಲ್ಲುವ ಬೇಟೆಗಾರರಿಗೆ ಸರ್ಕಾರ ಬಹುಮಾನವನ್ನೂ ನೀಡುವ ಪರಿಪಾಠವನ್ನು ಇಟ್ಟುಕೊಂಡಿತ್ತು ಎನ್ನುವ ವಿವರಗಳೂ ಇಲ್ಲಿದ್ದು ೧೮೭೦ ರಿಂದ ೧೮೭೬ ರವರೆಗೆ ಈ ರೀತಿ ವಿತರಿಸಲಾದ ಹಣದ ಮಾಹಿತಿಯೂ ದಾಖಲಾಗಿದೆ.

ಗೆಜೆಟಿಯರ್‌ನ ಮೊದಲ ಆವೃತ್ತಿಯ ಕಾಲದಲ್ಲಿ ಕೇವಲ ದುಷ್ಟಪ್ರಾಣಿಗಳನ್ನು ಕೊಲ್ಲುವ ವಿವರಗಳನ್ನಷ್ಟೇ ನೀಡಿದ್ದ ರೈಸರು ಎರಡನೇ ಆವೃತ್ತಿಯಲ್ಲಿ ಅರಣ್ಯಪ್ರಾಣಿಗಳ ಸಂರಕ್ಷಣಾ ಕಾಯಿದೆಯ (game law) ಬಗೆಗೂ ಒತ್ತುಕೊಟ್ಟಿದ್ದಾರೆ.[2] ತಾರತಮ್ಯವಿಲ್ಲದೆ ಎಲ್ಲ ಪ್ರಭೇದಗಳ ಪ್ರಾಣಿಗಳನ್ನೂ ಕೊಲ್ಲುವ ಪ್ರವೃತ್ತಿಯನ್ನು ತಡೆಯಲು ಆಗಷ್ಟೇ ಸಿದ್ಧವಾಗುತ್ತಿದ್ದು ಕರಡು ಹಂತದಲ್ಲಿದ್ದ ಕಾಯಿದೆಯ ವಿವರಗಳನ್ನೂ ಅವರು ನೀಡಿದ್ದಾರೆ.

1 Vol. I, P 171.

2 Vol. I. P 177

ಖೆಡ್ಡಾ ಕಾರ್ಯಾಚರಣೆಯ ಬಗೆಗಿನ ಇಲ್ಲಿಯ ಮಾಹಿತಿಯೂ ವಿಸ್ತೃತವಾಗಿಯೇ ಇದೆ. ಅಚ್ಚರಿಯ ವಿಷಯವೆಂದರೆ ವೆಲ್ಲೆಸ್ಲಿಯಂತೆ ರೈಸರೂ ರೇಷ್ಮೆಹುಳುಗಳ ಸಾಕಣೆಯನ್ನು ಕಾಡು ಪ್ರಾಣಿಗಳ ವಿಭಾಗಕ್ಕೇ ಸೇರಿಸಿರುವುದು.

ಸಾಕುಪ್ರಾಣಿಗಳ ವಿಭಾಗದಲ್ಲಿ ಕುದುರೆ, ಹಸು, ಕುರಿ, ಆಡು ಮುಂತಾದ ಮಾಮೂಲಿ ಸಾಕುಪ್ರಾಣಿಗಳ ವಿವರಗಳಲ್ಲದೆ ಮೈಸೂರು ಸಂಸ್ಥಾನದಲ್ಲಿ ಮಾತ್ರವೇ ವಿಶಿಷ್ಟವಾಗಿ ಕಂಡು ಬರುವ, ಸೈನ್ಯೋಪಯೋಗಿಯಾದ ಜಾನುವಾರುಗಳ ತಳಿಗಳಿಗಳ ಅಭಿವೃದ್ಧಿಗೆಂದೇ ಆರಂಭಿಸಲಾದ ಅಮೃತ ಮಹಲ್ ಎಂಬ ಇಲಾಖೆಯ ವಿವರಗಳನ್ನು ೫ ಪುಟಗಳ ಸವಿವರವಾಗಿ ನೀಡಲಾಗಿದೆ.[1] ಕುದುರೆಗಳ ಬಗ್ಗೆ ವಿವರಿಸುವಾಗ "ಕೋಲಾರವು ಒಂದು ನಿರ್ದಿಷ್ಟ ತಳಿಯ ಕೆಟ್ಟಚಾಳಿಯ ಕುದುರೆಗಳಿಗೆ ಪ್ರಸಿದ್ಧವಾಗಿದ್ದು ಇಡಿಯ ಪರ್ಯಾಯ ದ್ವೀಪದಲ್ಲಿ ಯಾವುದೇ ಕುದುರೆ ದುಷ್ಟವಾದರೆ ಅದನ್ನು 'colarie' ಎಂದು ಕರೆಯುವುದೇ ಪದ್ಧತಿ" ಎಂದು ಕರ್ನಲ್ ವೆಲ್ಷ್ ಎಂಬಾತ ೧೮೦೩ರಲ್ಲಿ ಬರೆದಿರುವುದನ್ನು ಉಲ್ಲೇಖಿಸಿರು ವುದು ಸ್ವಾರಸ್ಯಕರವಾಗಿದೆ.[2]

ಅಧ್ಯಾಯ - ೪ : Ethnology (ಜನಾಂಗೀಯ ವಿವರಗಳು)

ಮೈಸೂರು ಸಂಸ್ಥಾನದ ವಿವಿಧ ಜಾತಿ, ಜನಾಂಗಗಳ ಜನರು, ಅವರ ಜನಸಂಖ್ಯೆ, ಅವರ ರೀತಿ-ನೀತಿಗಳನ್ನು ಕುರಿತಾದ ಸುಮಾರು ಅರವತ್ತು ಪುಟಗಳ ಈ ಅಧ್ಯಾಯವು ಈ ಸಂಪುಟಗಳ ಇತರ ಎಲ್ಲ ಅಧ್ಯಾಯಗಳಿಗಿಂತ ಅತಿವಿಶಿಷ್ಟವೂ ಸ್ವಯಂಪರಿಪೂರ್ಣವೂ ಆಗಿದೆ. ಏಕೆಂದರೆ ಇತರೆ ಅಧ್ಯಾಯಗಳಂತೆ ಇಲ್ಲಿಯ ಮಾಹಿತಿಗಾಗಿ ರೈಸರು ಬೇರೆ ಯಾರ ಬರಹ-ವರದಿಗಳನ್ನೂ ರೈಸರು ಆಧರಿಸಿಲ್ಲ. ಬದಲಿಗೆ ೧೮೭೧ ರಿಂದ ೧೮೯೧ರ ವರೆಗಿನ ಮೂರು ಜನಗಣತಿಯ ವರದಿಗಳನ್ನು ಆಧಾರವಾಗಿಟ್ಟುಕೊಂಡು ಸ್ವತಂತ್ರವಾಗಿ ಈ ಅಧ್ಯಾಯವನ್ನು ರಚಿಸಿದ್ದಾರೆ.

ಅಧ್ಯಾಯದ ಮೊದಲಿಗೆ "The oboriginal inhabitants of Mysore cannot probably be now traced with any degree of certainity though remaining of prehistoric races abound in stone monuments of different kinds" ಎಂದು ಹೇಳಿ ಅನಂತರ ಖಂಡಾಂತರ ಚಲನೆ ಯನ್ನು ಪ್ರಮುಖವಾಗಿ ಆಧರಿಸಿದ ಲೆಮೂರಿಯಾ ಸಿದ್ಧಾಂತ, ಅದರ ಪ್ರಕಾರ ವಿಶ್ವದ ನಾನಾಭಾಗಗಳಿಗೆ ಹಂಚಿ ಹೋದ ವಿವಿಧ ಜನಾಂಗಗಳ ವಿವರ - ಮುಂತಾದವನ್ನು ಸ್ಥೂಲವಾಗಿ ಅವರು ಪ್ರಸ್ತಾಪಿಸಿದ್ದಾರೆ.

1 Vol. I, P 199–204

2 Vol. I, P 198.

ಆದರೆ ರೈಸರು ಕೇವಲ ಈ ವೈಜ್ಞಾನಿಕ ವಿವರಗಳಿಗೆ ಮಾತ್ರವೇ ಸೀಮಿತಗೊಳ್ಳದೆ ವಾಯು, ಮತ್ಸ್ಯ, ಅಗ್ನಿ, ಬ್ರಹ್ಮ ವಿಷ್ಣು ಪುರಾಣಗಳು ಹಾಗೂ ಹರಿವಂಶಗಳಂತಹ ಸಾಂಪ್ರದಾಯಿಕ ಕೃತಿಗಳಲ್ಲಿ ಉಲ್ಲೇಖಿತವಾಗಿರುವ ಆರ್ಯ-ದ್ರಾವಿಡ ಜನಾಂಗಗಳ ಉತ್ಪತ್ತಿಯನ್ನು ಕುರಿತಾದ ಅಖ್ಯಾಯಿಕೆಗಳನ್ನೂ ಪ್ರಸ್ತಾಪಿಸಿ ಅದರಲ್ಲಿಯ ತುರ್ವಸುವಿನ ಐತಿಹ್ಯವನ್ನು ಅಕ್ಕಾಡಿಯನ್, ಜೆಂಡ್ ಟ್ಯುರೇನಿಯನ್, ಟೈರ್ರೆನಿಯನ್, ಗ್ರೀಕ್, ಈಜಿಪ್ಟ್ ಮುಂತಾದ ವಿಶ್ವದ ಇತರ ಪ್ರಾಚೀನ ಜನಾಂಗಗಳಲ್ಲಿಯ ಇದೇ ಬಗೆಯ ಅಖ್ಯಾಯಿಕೆಗಳೊಂದಿಗೆ ತೌಲನಿಕವಾಗಿ ಪರೀಕ್ಷಿಸಿ ನೋಡಬೇಕಿರುವುದರ ಅಗತ್ಯವನ್ನು ನಮೂದಿಸಿರುವುದು ಇಲ್ಲಿಯ ವಿಶೇಷ.[1]

ಸಂಸ್ಥಾನದಲ್ಲಿ ವಾಸವಾಗಿರುವ ಜನಾಂಗಗಳ ಪೈಕಿ ತೋಡರು, ಹಳೆಪೈಕದವರು, ಬಡಗು, ಕಾಡುಕುರುಬರು, ಇರುಳಿಗಳು, ಹಸುಳರು, ಮಲೆಯ, ಕೊರಚ, ಕೊರಮ, ಹೊಲೆಯ ಮುಂತಾದವರನ್ನು ಈ ನೆಲದ ಮೂಲನಿವಾಸಿಗಳೆಂದು ರೈಸ್ ಪರಿಗಣಿಸಿದ್ದಾರೆ. ಹಾಗಾಗಿ ಇವರ ಜೀವನವಿಧಾನ, ಇವರಲ್ಲಿಯ ಒಳಪಂಗಡಗಳು, ಇತ್ಯಾದಿಗಳನ್ನು ಕುರಿತು ಸವಿವರವಾಗಿ ಚರ್ಚಿಸಿದ್ದಾರೆ.

೧೮೯೧ರ ಜನಗಣತಿಯ ಪ್ರಕಾರ ಸಂಸ್ಥಾನದಲ್ಲಿ ಒಟ್ಟು ೧೧೨ ಜಾತಿಗಳ ಹಾಗೂ ೩೮೨ ಉಪಜಾತಿಗಳ ಜನರಿದ್ದರು. ಇಷ್ಟು ದೊಡ್ಡಮಟ್ಟದ ವೈವಿಧ್ಯಕ್ಕೆ ಕಾರಣವೇನು? ಎಂಬ ಪ್ರಶ್ನೆಗೆ ರೈಸರು ತಮ್ಮ ಶಾಸನಗಳ ಅಧ್ಯಯನದ ಹಿನ್ನೆಲೆಯಲ್ಲಿ ಉತ್ತರಿಸಲು ಯತ್ನಿಸಿದ್ದಾರೆ. ''ಜೈನ, ಬ್ರಾಹ್ಮಣ ಪಂಗಡಗಳು ಉಜ್ಜಯಿನಿ, ಅಹಿಚ್ಛತ್ರ ಮುಂತಾದ ಉತ್ತರ ಭಾರತದ ಪ್ರದೇಶಗಳಿಂದ ಇತಿಹಾಸದ ಬೇರೆಬೇರೆ ಕಾಲಘಟ್ಟಗಳಲ್ಲಿ ಈ ಪ್ರಾಂತ್ಯಕ್ಕೆ ವಲಸೆ ಬಂದಿರುವುದು ಚಾರಿತ್ರಿಕ ಸತ್ಯ. ಕದಂಬ, ಚೋಳ, ಮೌರ್ಯ, ಪಲ್ಲವ ಮುಂತಾದವರ ಕಾಲದಲ್ಲಿ ಹೊರ ಪ್ರಾಂತ್ಯಗಳಿಂದ ಈ ರೀತಿಯಲ್ಲಿ ಅನೇಕ ಪಂಗಡಗಳ ಜನರು ಇಲ್ಲಿಗೆ ಬಂದರು. ಇದೇ ರೀತಿಯಲ್ಲಿ ಹತ್ತನೇ ಶತಮಾನದಲ್ಲಿದ್ದ ಎರಡು ಪ್ರಮುಖ ಪ್ರಾಂತ್ಯಗಳಾದ ಗಂಗವಾಡಿ ಮತ್ತು ನೊಳಂಬವಾಡಿಯ ಜನರ ವಂಶೀಕರನ್ನು ಇಂದಿಗೂ ಕಾಣಬಹುದು. ಮಹಮ್ಮದೀಯರ ಹಾಗೂ ಯೂರೋಪಿಯನ್ನರ ಆಗಮನವೂ ಇದೇ ರೀತಿಯ ಬದಲಾವಣೆಗೆ ಕಾರಣವಾಗಿದೆ'' ಎಂಬ ಅವರ ವಾದವನ್ನು[2] ತಳ್ಳಿಹಾಕುವುದು ಕಷ್ಟ.

ಈ ಅಧ್ಯಾಯದಲ್ಲಿ 'population' ಎಂಬ ಉಪವಿಭಾಗ ಒಂದಿದ್ದು ಅದರಲ್ಲಿ ೧೮೦೧ ರಿಂದ ೧೮೭೦ರ ವರೆಗಿನ ಒಟ್ಟು ಜನಸಂಖ್ಯೆ, ಜಿಲ್ಲಾವಾರು ಮಾಹಿತಿ, ಗಂಡಸರು-ಹೆಂಗಸರ ವಿವರ, ಜಾತಿವಾರು ಅಂಕಿಸಂಖ್ಯೆಗಳು ಮುಂತಾದ ಅಂಶಗಳನ್ನು ಒಳಗೊಂಡ ಬೇರೆಬೇರೆ ಕೋಷ್ಟಕಗಳಿವೆ. ೧೮೦೧ರ ಸುಮಾರಿನ ಜನಸಂಖ್ಯಾ ವಿವರಗಳಲ್ಲಿ ನ್ಯೂನತೆ

1 Vol. I, P 209.

2 Vol. I, P 217.

ಗಳಿರುವುದು ಸಾಧ್ಯ ಎಂಬ ಅಂಶವನ್ನು ರೈಸ್ ಪ್ರಾಂಜಲವಾಗಿ ಒಪ್ಪಿಕೊಂಡಿದ್ದಾರೆ. "ಹೈದರ್-ಟಿಪ್ಪು ಕಾಲದಲ್ಲಿ ಆದ ಮರಾಠರ ಆಕ್ರಮಣ, ಯುದ್ಧಗಳ ಭೀತಿಯಿಂದ ಜನ ವಲಸೆಹೋಗಬೇಕಾಗಿ ಬಂದದ್ದು ಮುಂತಾದ ಕಾರಣಗಳಿಂದಾಗಿ ಮೈಸೂರು ಸಂಸ್ಥಾನದ ಜನಸಂಖ್ಯೆಯಲ್ಲಿ ಸಾಕಷ್ಟು ಏರುಪೇರುಗಳಾಗಿವೆ" ಎಂಬ ವಿಲ್ಕ್ಸ್‌ನ ಮಾತನ್ನು ಈ ಹಿನ್ನೆಲೆಯಲ್ಲಿ ಉದ್ಧರಿಸಿದ್ದಾರೆ.

ಮುಂದಿನ 'castes' ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಪ್ರತಿಜಾತಿಯ ಪ್ರಮುಖ ಲಕ್ಷಣಗಳು; ಅದರ ಒಳಜಾತಿಗಳು; ಅವುಗಳಲ್ಲಿನ ಸಾಮ್ಯ-ವೈಷಮ್ಯಗಳು; ಆಯಾ ಜಾತಿಯ ಜನರ ಜೀವನ ವಿಧಾನ, ಉಡುಗೆ-ತೊಡುಗೆಗಳು, ಇತ್ಯಾದಿ ವಿವರ ಗಳಿವೆ. ವರ್ಷದಿಂದ ವರ್ಷಕ್ಕೆ ಜಾತಿ-ಉಪಜಾತಿಗಳ ಸಂಖ್ಯೆ ಹೆಚ್ಚಾಗುತ್ತಿರುವ ವಿಚಿತ್ರ ವಿದ್ಯಮಾನವನ್ನು ರೈಸ್ ಗುರುತಿಸಿದ್ದಾರಲ್ಲದೆ ಅದಕ್ಕೆ ಕಾರಣವನ್ನೂ ಹೀಗೆ ತರ್ಕಿಸಿದ್ದಾರೆ:

> *"ಮೈಸೂರು ಸಂಸ್ಥಾನದಲ್ಲಿ ಭಾರತದ ಇತರೆ ಯಾವುದೇ ಈ ಗಾತ್ರದ ಪ್ರಾಂತ್ಯ ದಲ್ಲಿರುವಷ್ಟೇ ಸಂಖ್ಯೆಯ ಜಾತಿಗಳಿವೆ. ಇಲ್ಲಿಯ ಸ್ಥಳೀಯರು ಜಾತಿಗಳ ಒಟ್ಟು ಸಂಖ್ಯೆಯನ್ನು ೧೦೧ಕ್ಕೆ ಸೀಮಿತಗೊಳಿಸುತ್ತಾರಾದರೂ ಇತ್ತೀಚೆಗೆ ಜನಗಣತಿಯನ್ನು ನಡೆಸಿದ ಅಧಿಕಾರಿಗಳ ದಾಖಲೆಗಳ ಪ್ರಕಾರ ಪ್ರಸ್ತುತ ಈ ಸಂಖ್ಯೆ ೮೬೪ನ್ನು ಮುಟ್ಟಿದೆ. ಇದು ೧೮೭೧ರ ಜನಗಣತಿಯ ಎರಡರಷ್ಟು. ಇವುಗಳಲ್ಲಿ ಕೆಲವನ್ನು ಒಂದೊಂದು ಭಾಗದಲ್ಲಿ ಒಂದೊಂದು ಹೆಸರಿನಿಂದ ಕರೆಯಲಾದವು ಎಂದು ಭಾವಿಸಿದರೂ ಮೂಲತಃ ಇವೆಲ್ಲಾ ಒಂದೇ ಗುಂಪಿಗೆ ಸೇರಿದವು. ಕೆಲವು ಕುಟುಂಬಗಳು ಅಥವಾ ವ್ಯಕ್ತಿಗಳು ತಮ್ಮ ಮೂಲಗುಂಪಿನಿಂದ ಬೇರಾಗಿ ಮತ್ತೊಂದು ಪ್ರದೇಶಕ್ಕೆ ವಲಸೆ ಹೋದರೂ ತಮ್ಮದೇ ಆದ ಪ್ರತ್ಯೇಕ ಹೆಸರೊಂದನ್ನು ಕೊಟ್ಟುಕೊಳ್ಳುತ್ತಾರೆ ಅಥವಾ ಅವರ ನೆರೆಹೊರೆಯವರು ಹೊಸ ಹೆಸರಿನಿಂದ ಅವರನ್ನು ಕರೆಯುತ್ತಾರೆ. ಹಾಗಾಗಿಯೇ ಇಂದಿಗೂ ಜಾತಿಗಳ ಸಂಖ್ಯೆ ನಿರಂತರವಾಗಿ ಏರುತ್ತಲೇ ಇದೆ. ಜಗಳ-ಕದನಗಳ ಕಾರಣದಿಂದಾಗಿಯೂ ಜಾತಿಗಳು ಒಡೆದು ಅನೇಕ ಹೋಳುಗಳಾಗುತ್ತವೆ. ಒಂದು ಗುಂಪಿನ ಪ್ರಾಬಲ್ಯವನ್ನು ಒಲ್ಲದ ಪ್ರಭಾವ ಶಾಲಿ ಸದಸ್ಯರು ತಮ್ಮದೇ ಆದ ಪ್ರತ್ಯೇಕ ಪಂಗಡಗಳನ್ನು ರಚಿಸಿಕೊಳ್ಳುತ್ತಾರೆ. ಸ್ವಲ್ಪ ದಿವಸಗಳ ಅವಧಿಯಲ್ಲಿಯೇ ಯಾವುದಾದರೊಂದು ಕಾರಣಕ್ಕಾಗಿ ಈ ಗುಂಪುಗಳು ಮತ್ತೆ ಒಂದಾಗದಿದ್ದಲ್ಲಿ ಮುಂದೆ ಅವು ಪ್ರತ್ಯೇಕ ಪಂಗಡ ಗಳಾಗಿಯೇ ಉಳಿದುಬಿಡುತ್ತವೆ.*[1]

---

1 Vol I, P 222 ರಲ್ಲಿಯ ಭಾಗದ ಅನುವಾದ

ಅಧ್ಯಯನದ ಅನುಕೂಲದ ದೃಷ್ಟಿಯಿಂದ ಹಿಂದೂ ಜನಾಂಗವನ್ನು ರೈಸ್ ಅವರ ವೃತ್ತಿಯ ಆಧಾರದ ಮೇಲೆ ಐದು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ.

೧. **ಕೃಷಿಕರು :**

ಇವರಲ್ಲಿ ಕ್ಷತ್ರಿಯರು, ಮರಾಠರು ಹಾಗೂ ರಾಚೆವಾರ್ ಎನ್ನುವ ಮೂರು ಜಾತಿ ಗಳನ್ನು ಅವರು ಒಂದು ಉಪವಿಭಾಗ ಮಾಡಿ ಅವರನ್ನು 'Military and dominant' ಎಂಬ ಗುಂಪಿಗೆ ಸೇರಿಸಲಾಗಿದೆ. ಒಕ್ಕಲಿಗ, ತಿಗಳ ಹಾಗೂ ಲಿಂಗಾಯಿತರನ್ನು 'cultivators' ಎಂದು ಪರಿಗಣಿಸಲಾಗಿದೆ. ಕಾಡು ಮತ್ತು ಬೆಟ್ಟಗಳಲ್ಲಿ ವಾಸಿಸುವ ಲಂಬಾಣಿ, ಕೊರಚ, ಕೊರಮ, ಕಾಡುಕುರುಬ ಹಾಗೂ ಇರುಳಿಗರನ್ನು ಪ್ರತ್ಯೇಕವಾದ ಗುಂಪೆಂದು ಪರಿಗಣಿಸಲಾಗಿದೆ.

೨. **ಉದ್ಯೋಗಸ್ಥರು :**

ಈ ಗುಂಪಿಗೆ ರೈಸ್ ಬ್ರಾಹ್ಮಣರು, ಸಾತಾನಿಗಳು ಹಾಗೂ ಜೈನರನ್ನು ಸೇರಿಸಿದ್ದಾರೆ. ಲಿಂಗಾಯಿತರಲ್ಲಿ ಕೆಲವರು ಕೃಷಿಕರಾಗಿದ್ದರೆ ಮತ್ತೆ ಕೆಲವರು ಉದ್ಯೋಗಾವಲಂಬಿಗಳು ಇರುವುದನ್ನು ಪರಿಗಣಿಸಿ ಅವರನ್ನು ಈ ವಿಭಾಗದಲ್ಲಿಯೂ ಸೇರಿಸಿರುವುದು ಗಮನಾರ್ಹ. ದಾಸರಿ, ಸನ್ಯಾಸಿ, ಗೋಸಾಯಿ, ಬೈರಾಗಿ, ಒಡೆಯರು, ಕರಣಿಕರು, ಭಟ್ರಾಜುಗಳು, ನಟುವರುಗಳು ಹಾಗೂ ಚಿತ್ರಗಾರರ ಬಗ್ಗೆಯೂ ಈ ವಿಭಾಗ ದಲ್ಲಿಯೇ ಚರ್ಚಿಸಲಾಗಿದೆ.

೩. **ವ್ಯಾಪಾರಸ್ಥರು :**

ಪ್ರಮುಖ ವ್ಯಾಪಾರಿ ಜನಾಂಗಗಳಾದ ಶೆಟ್ಟರು, ನಗರ್ತರು, ಮೊದಲಿಯಾರರು ಹಾಗೂ ಬಣಜಿಗರನ್ನು ಕುರಿತಾದ ವಿವರಗಳು ಇಲ್ಲಿವೆ. ಜೈನರು ಮತ್ತು ಲಿಂಗಾಯಿತ ರಲ್ಲಿಯೂ ವ್ಯಾಪಾರಿ ವರ್ಗಗಳಿರುವುದರಿಂದ ಅವರ ಪ್ರಸ್ತಾಪ ಮತ್ತೆ ಇಲ್ಲಿಯೂ ಬಂದಿದೆ.

೪. **ಗ್ರಾಮೀಣ ಕುಶಲ ಕರ್ಮಿಗಳು ಹಾಗೂ ಕಾರ್ಮಿಕರು :**

ಈ ಗುಂಪಿಗೆ ದರ್ಜಿ, ನೇಕಾರ, ಅಗಸ, ಗೊಲ್ಲ, ಕುರುಬ, ಗಾಣಿಗ, ಕುಂಬಾರ, ಬೆಸ್ತ, ತಳವಾರ, ತೋಟಿ, ಈಡಿಗ, ಚಮ್ಮಾರ, ಉಪ್ಪಾರ, ಪಾಂಚಾಲ ಹಾಗೂ ನಾಯಿಂದ ರನ್ನು ಸೇರಿಸಲಾಗಿದೆ. ತಳವಾರಿಕೆಯನ್ನು ಮಾಡುವ ಹೊಲೆಯರು ಹಾಗೂ ತೋಟಿಗಳಾದ ಮಾದಿಗರ ಬಗ್ಗೆ ವಿಶೇಷವಾದ ಪ್ರಸ್ತಾಪವಿದ್ದು ಇವರನ್ನು ಮೇಲ್ವರ್ಗದ ಜನ ಹೇಗೆ ನಡೆಸಿಕೊಳ್ಳುತ್ತಿದ್ದರೆಂಬ ಬಗ್ಗೆ ವಿವರಗಳಿವೆ. ಆದರೆ ಕಾಲ ಕಳೆದಂತೆ ಈ ವರ್ಗದ ಜನರ ಜೀವನಮಟ್ಟವೂ ಸುಧಾರಿಸುತ್ತಿದೆ. ಸಾಮಾಜಿಕ ನ್ಯಾಯ ಲಭಿಸುತ್ತಿದೆ ಎಂಬುದನ್ನು ರೈಸ್ ಹೀಗೆ ನಿರೂಪಿಸಿದ್ದಾರೆ :

> *".... there is no restriction in Mysore state on the acquisition of land or property by Holeyas and under*

the various blending influences of the times – educational, missionary and others – members of this class and rising in importance and acquiring wealth. So much so that in the cities and large towns their social disabilities are, to a great extent, being overcome, and in public matters especially their complete ostracism can hardly by maintained...."[1]

೫. ಅಲೆಮಾರಿಗಳು ಹಾಗೂ ಪ್ರದರ್ಶಕರು ಹಾಗೂ ಇತರ ಅಲ್ಪಸಂಖ್ಯಾತ ಕಾರ್ಮಿಕರು:

ಈ ಗುಂಪಿಗೆ ಸೇರುವವರೆಂದರೆ ಒಡ್ಡರು, ಮೇದರು, ಬೇಡರು, ಜೋಗಿ, ಬುಡುಬುಡಿಕೆಯವರು, ದೊಂಬರು, ಜಟ್ಟಿಗಳು ಮುಂತಾದವರು.

ಹಿಂದೂಗಳನ್ನು ಬಿಟ್ಟು ಉಳಿದವರಾದ ಮುಸಲ್ಮಾನರು, ಪಾರ್ಸಿಗಳು, ಲಬ್ಬೆ, ಪಿಂಜರಿ, ಪಿಂಡಾರಿ, ಮಾಪಿಳ್ಳೆ, ಕ್ರೈಸ್ತ ಮುಂತಾದ ಸ್ಥಳೀಯ ಅನ್ಯಧರ್ಮೀಯರು ಹಾಗೂ ಇಂಗ್ಲೀಷ್, ಸ್ಕಾಟ್, ಐರಿಷ್ ಮುಂತಾದ ಅನ್ಯದೇಶಿಯರ ವಿವರಗಳನ್ನು ಅಧ್ಯಾಯದ ಕಡೆಯಲ್ಲಿ ಚರ್ಚಿಸಲಾಗಿದೆ.

ಪ್ರತಿ ಜಾತಿಯ ಅಥವಾ ಜನಾಂಗದ ಬಗ್ಗೆ ವಿವರಿಸುವಾಗಲೂ ಆ ಜಾತಿಗೇ ವಿಶಿಷ್ಟವಾದ ಗುಣಲಕ್ಷಣಗಳನ್ನು ಪಟ್ಟಿಮಾಡುವುದು, ಉಪಜಾತಿ ಅಥವಾ ಉಪಪಂಗಡಗಳ ವಿವರಗಳು ಅವರ ಜನ ಸಂಖ್ಯೆಯನ್ನು ನಮೂದಿಸುವುದು ಹಾಗೂ ಈ ಜನರ ಸಾಂದ್ರತೆ ಹೆಚ್ಚಾಗಿರುವ ಪ್ರದೇಶಗಳನ್ನು ಸೂಚಿಸುವುದು - ಇದು ರೈಸರು ಅನುಸರಿಸಿರುವ ಕ್ರಮ. ಉದಾಹರಣೆಗೆ ಅಲ್ಪಸಂಖ್ಯಾತ ಗುಂಪುಗಳಲ್ಲಿ ಒಂದಾದ ಬುಡುಬುಡಿಕೆಯವರ ವಿವರಗಳು ಹೀಗಿದೆ :

"... The Budubudike (1,092) are gypsy beggars and fortune tellers from the Mahratta country one section being called Busare. They pretend to consult birds and reptailes and through them predict future events. They use a small double headed drum, which is sounded by whisking it about so as to be struck by knotted ends of a string attached to each side. The others of this group of beggars are Sudugadu Sidda (46), Gondaliga (29), Pandaram and Valluvar (15), Karma (7) and Samiyar (3). The first one all in Shimoga district and the last three in the civil and military section of Bangalore..."[2]

---

1 Vol. I, P 253.

2 Vol. I. P 256.

ಉಪಜಾತಿ - ಉಪಪಂಗಡಗಳನ್ನು ಕುರಿತಾದ ಪ್ರತಿಯೊಂದು ವಿವರವನ್ನೂ ಪಟ್ಟಿ ಮಾಡಿರುವುದು ಈ ಸಂಪುಟದ ವಿಶೇಷ. ಒಕ್ಕಲಿಗರ ೨೮ ಪಂಗಡಗಳು ಹಾಗೂ ೭೯ ಒಳಪಂಗಡಗಳ ಉಲ್ಲೇಖ;[1] ಬ್ರಾಹ್ಮಣದಲ್ಲಿ ಸ್ಮಾರ್ತ, ಮಾಧ್ವ, ಶ್ರೀವೈಷ್ಣವ ಎಂಬ ಶಾಖೆಗಳು, ಅದರಲ್ಲಿಯ ಅರವತ್ತು ಒಕ್ಕಲು, ಸೀರ ನಾಡು, ಹೊಯ್ಸಳ ಕರ್ನಾಟಕ, ಹತ್ಯಕ ಮುಂತಾದ ೭೦ಕ್ಕೂ ಹೆಚ್ಚು ಉಪಪಂಗಡಗಳು,[2] ೭೯ ಗೋತ್ರಗಳು, ಗೊಲ್ಲರಲ್ಲಿರುವ ಒಳಪಂಗಡಗಳ ಪಟ್ಟಿ[3] - ಇತ್ಯಾದಿಗಳು ಗಮನಾರ್ಹವಾದವು.

ಈ ಅಧ್ಯಾಯದಲ್ಲಿ character, dress, etc. ಎಂಬ ಉಪವಿಭಾಗ ಒಂದಿದ್ದು ಅದರಲ್ಲಿ ಹಳ್ಳಿಗಳ ಲಕ್ಷಣ, ವಾಸದ ಮನೆಗಳ ಸ್ವರೂಪ, ರಸ್ತೆಗಳ ವಿಂಗಡಣೆ, ವಿವಿಧ ಜಾತಿ ಹಾಗೂ ವರ್ಗಗಳ ಜನರ ವಸ್ತ್ರವಿನ್ಯಾಸ, ಒಡವೆಗಳು, ಕೇಶ ವಿನ್ಯಾಸ ಇತ್ಯಾದಿ ಅನೇಕ ಕುತೂಹಲಕರವಾದ ವಿಷಯಗಳ ಪ್ರಸ್ತಾಪವಿದೆ.

ರೈಸರು ಈ ಸಂಪುಟಗಳಲ್ಲಿ ನೀಡಿರುವ ಜನಾಂಗೀಯ ವಿವರಗಳಿಗೆ ಚಾರಿತ್ರಿಕವಾಗಿ ಬಹಳ ಮಹತ್ವವಿದೆ. ಏಕೆಂದರೆ ಈ ಸಂಪುಟಗಳು ಪ್ರಕಟವಾಗುವ ವೇಳೆಗೆ ಭಾರತದಲ್ಲಿನ ಜನಾಂಗಗಳನ್ನು ಕುರಿತಾದ ಶಾಸ್ತ್ರೀಯ ಅಧ್ಯಯನ ತೀವ್ರ ಸ್ವರೂಪದಲ್ಲಿ ನಡೆದಿರಲಿಲ್ಲ ಎಂಬುದು ಗಮನಾರ್ಹವಾದ ಅಂಶ. ಬಹುಶಃ ೧೮೬೮ರಲ್ಲಿ ಪ್ರಕಟವಾದ ಜಾರ್ಜ್ ಕ್ಯಾಂಬೆಲ್‌ನ 'ethnology' ಎಂಬ ಕೃತಿಯೊಂದೇ ಈ ಮಾತಿಗೆ ಅಪವಾದ.[4] ಕಾಲ್ಡ್ವೆಲ್‌ನ 'A comparative grammer of Dravidian or South Indian family languages' ನ ಮುನ್ನುಡಿಯಲ್ಲಿಯಾಗಲೀ ಅಥವಾ ನೀಲಗಿರಿಯ ತೋಡರಿಗೆ ಸಂಬಂಧಿಸಿದಂತೆ ಗ್ರಿಗ್ಸ್, ಬ್ರೀಕ್ಸ್, ಡಾ॥ ಪೋಪ್‌ರು ಬರೆದ ಕೃತಿಗಳಲ್ಲಿಯಾಗಲೀ ದೊರಕುವ ವಿವರಗಳು ಆಂಶಿಕವೇ ಹೊರತೂ ಪರಿಪೂರ್ಣವಲ್ಲ. ಇವೆಲ್ಲಕ್ಕಿಂತ ಮೊದಲಿನ ಅಬ್ಬೆ ದೂಬಾಯ್ ಬರೆದ 'Hindu manners, customs and ceremonies (1816)' ರಲ್ಲಿಯೂ ಇದೇ ಪರಿಸ್ಥಿತಿ. ದಕ್ಷಿಣ ಭಾರತದ ಜಾತಿ-ಜನಾಂಗಗಳನ್ನು ಕುರಿತಾದ ಎಡ್ಗರ್ ಥರ್ಸ್ಟನ್‌ನ ಏಳು ಸಂಪುಟಗಳ ಬೃಹತ್‌ಕೃತಿ 'Castes and tribes of Southern India' ಪ್ರಕಟವಾದದ್ದು ೧೯೦೯ರಲ್ಲಿ, ರೈಸ್ ಸಂಪುಟಗಳು ಪ್ರಕಟವಾದ ೧೨ ವರ್ಷಗಳನಂತರ.

---

1 Vol. I, P 231.

2 Vol. I, P 234–240.

3 Vol. I, P 251.

4 ಕರ್ನಲ್ ಡಾಲ್ಟನ್ ಎಂಬಾತ ೧೮೭೨ರಲ್ಲಿ 'Descriptive Ethnology of Bengal' ಎಂಬ ಕೃತಿಯನ್ನು ಪ್ರಕಟಿಸಿದ್ದಾನೆ ಎಂದು ಐ.ಮಾ. ಮುತ್ತಣ್ಣ ಹೇಳುತ್ತಾರೆ. (ಪಾ.ವಿ.ಕ.ಸೇ. ಪು - ೧೩೦) ಆದರೆ ಇದು ಕೇವಲ ಬಂಗಾಳ ಪ್ರಾಂತ್ಯಕ್ಕೆ ಮಾತ್ರ ಸೀಮಿತವಾಗಿದೆ ಎಂಬುದು ಸ್ಪಷ್ಟವಾಗಿಯೇ ತೋರುತ್ತದೆ.

ಈ ಎಲ್ಲ ವಿವರಗಳಿಂದ ಮೈಸೂರು ಸಂಸ್ಥಾನದ ಜನಾಂಗೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ರೈಸರಿಗೆ ಮಾರ್ಗದರ್ಶಕವೆನಿಸಬಹುದಾದ ಯಾವೊಂದು ಕೃತಿಯೂ ಗೆಜೆಟಿಯರ್‌ಗಳ ಸಂಪಾದನೆಯ ಕಾಲಕ್ಕೆ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. (ಸ್ವಲ್ಪ ಮಟ್ಟಿಗೆ ಬುಕನನ್‌ನ ಕೃತಿ ಸಹಕಾರಿಯಾಗಿರಬಹುದು). ಆದರೂ ಇತಿಹಾಸ, ಸಾಹಿತ್ಯ ಮುಂತಾದ ಕ್ಷೇತ್ರಗಳಂತೆ ಇಲ್ಲಿಯೂ ರೈಸರು ಸ್ವತಂತ್ರವಾಗಿ ಆಲೋಚಿಸಿ ಜನಗಣತಿಯ ಮಾಹಿತಿಯನ್ನೇ ಮೂಲದ್ರವ್ಯವನ್ನಾಗಿರಿಸಿಕೊಂಡು ಸಂಸ್ಥಾನದ ಎಲ್ಲ ಜಾತಿ- ಜನಾಂಗಗಳ ಬಗೆಗಿನ ಸಾಧ್ಯವಾದಷ್ಟೂ ಮಾಹಿತಿಯನ್ನು ಒಟ್ಟುಗೂಡಿಸಲು ಯತ್ನಿಸಿದ್ದಾರೆ. ಹಾಗೆಂದ ಮಾತ್ರಕ್ಕೆ ಇದರಲ್ಲಿ ಅರೆ-ಕೊರೆಗಳಿಲ್ಲ ಎಂದಲ್ಲ. ವಿವಿಧ ಜನಾಂಗಗಳ ಊಟ-ಉಪಚಾರಗಳು, ವಿವಾಹ ಸಂಪ್ರದಾಯಗಳು ಅಥವಾ ಶವಸಂಸ್ಕಾರ ಪದ್ಧತಿಗಳ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲ. ಎಲ್ಲಕ್ಕಿಂತ ಪ್ರಮುಖವಾಗಿ ತತ್ಕಾಲೀನ ಸಮಾಜದ ಮೂಲಾಧಾರವಾಗಿದ್ದ ಜನಪದೀಯ ಸಂಸ್ಕೃತಿ, ನಂಬಿಕೆಗಳು, ಆಚರಣೆಗಳು ದೇಸಿ ವೈದ್ಯ ಮುಂತಾದವುಗಳ ಬಗ್ಗೆ ಅಧಿಕೃತ, ಪರಿಪೂರ್ಣ ಮಾಹಿತಿ ಇಲ್ಲಿ ಲಭ್ಯವಿಲ್ಲ.[1] ಆದರೆ ಈ ಅಂಶಗಳೂ ದಾಖಲು ಮಾಡಲು ಯೋಗ್ಯವಾದವು ಎಂಬ ಪ್ರಜ್ಞೆ ನಮ್ಮ ಇತಿಹಾಸಕಾರರಲ್ಲಿ ಮೂಡಿದ್ದೆ ೨೦ನೇ ಶತಮಾನದ ಆದಿಭಾಗದನಂತರ ಎನ್ನುವುದನ್ನು ಮರೆಯುವಂತಿಲ್ಲ.

ಅಧ್ಯಾಯ - ೩ : History (ಚರಿತ್ರೆ)

ರೈಸರಿಗೆ ಅತ್ಯಂತ ಪ್ರೀತಿಯ ಕ್ಷೇತ್ರವಾದ ಇತಿಹಾಸವು ಸಹಜವಾಗಿಯೇ ಈ ಸಂಪುಟದಲ್ಲಿ ಎರಡನೆಯ ಅತಿ ದೊಡ್ಡ ಅಧ್ಯಾಯವಾಗಿದೆ (೧೮೩ ಪುಟಗಳು). ಕೃಷ್ಣಯ್ಯಂಗಾರ್‌ರಂತೆ ರೈಸರೂ ಪುರಾಣಕಾಲವನ್ನು ಈ ಅಧ್ಯಾಯದ ಮೊದಲ ಭಾಗವಾಗಿ ಪರಿಗಣಿಸಿದ್ದಾರೆ.

> *"ಅಗಾಧ ಗಾತ್ರದ ವೃಕ್ಷಗಳಿಂದ ಜಟಿಲವಾದ ಬಿಳಲುಗಳಿಂದ ಸಮಸ್ತ ಭೂ ಪ್ರದೇಶವನ್ನು ವ್ಯಾಪಿಸಿರುವ ದಂಡಕಾರಣ್ಯವೆಂದೇ ಹೆಸರಾದ ದಟ್ಟವಾದ ಕಾಡು; ಅದರೊಳಗೆ ಹರಿಯುವ ಪವಿತ್ರ ನದಿಗಳ ದಡದ ಮೇಲೆ ಅಲ್ಲಲ್ಲಿ ಕಾಣಸಿಗುವ ಕಠೋರ ತಪಸ್ಸಿನಲ್ಲಿ ಮಗ್ನರಾದ ತಪಸ್ವಿಗಳ ಆಶ್ರಮಗಳು; ಕಾಡಿನಾಳದಲ್ಲಿ ಎಲ್ಲೋ ಅಜ್ಞಾತ ಸ್ಥಳಗಳಲ್ಲಿ ಕಾಡನ್ನು ಕಡಿದು ಸಮಮಾಡಿಕೊಂಡ ಎಡೆಗಳಲ್ಲೋ ಅಥವಾ ಗುಡ್ಡಬೆಟ್ಟಗಳಲ್ಲಿನ ಗವಿಪೊದೆಗಳ ಮರೆಯಲ್ಲೋ ಬದುಕುವ ರೀತಿ ನೀತಿಗಳನ್ನು ಅರಿಯದ ಕಾಡುಜನಗಳು; ಅವರುಗಳಿಗಿಂತ ಕ್ರೂರವಾದ ಅಸುರರು ಅಥವಾ ರಾಕ್ಷಸರು - ಇದು ಹಿಂದೂ ದಾಖಲೆಗಳು ನಮ್ಮ ಮುಂದೆ ಕಟ್ಟಿಕೊಡುವ ಪ್ರಾಚೀನವಾದ ದಕ್ಷಿಣಭಾರತದ ಚಿತ್ರ"*

---

1 ಹಾಗೆಂದ ಮಾತ್ರಕ್ಕೆ ರೈಸರಿಗೆ ಜನಪದ ಜನಜೀವನ, ಸಾಹಿತ್ಯಗಳ ಬಗೆಗೆ ಆಸಕ್ತಿ ಇರಲಿಲ್ಲವೆಂದಲ್ಲ. ಫ್ಲೀಟರಂತೆಯೇ ಅವರೂ ಅನೇಕ ಲಾವಣಿಗಳನ್ನು ಸಂಗ್ರಹಿಸಿದ್ದರು. 'ಆದರೆ ಅವುಗಳನ್ನು ಅಭ್ಯಸಿಸುವುದಕ್ಕೆ ಸಾಕಷ್ಟು ಸಮಯ ನನಗಿರಲಿಲ್ಲ' ಎಂದು ಅವರು ಪುರಾತತ್ತ್ವ ಇಲಾಖೆಯ ಮೊತ್ತಮೊದಲ ವಾರ್ಷಿಕ ವರದಿಯಲ್ಲಿಯೇ (೧೮೮೭) ನಮೂದಿಸಿದ್ದಾರೆ (ಪು - ೨).

ಎಂಬ ಕಣ್ಣಿಗೆ ಕಟ್ಟುವ ವರ್ಣನೆಯೊಂದಿಗೆ ಈ ಅಧ್ಯಾಯ ಆರಂಭವಾಗುತ್ತದೆ. ಅನಂತರ ವೇದಕಾಲೀನ ಋಷಿಗಳಾದ ಅಗಸ್ತ್ಯ, ಗೌತಮ, ಕಣ್ವ, ವಿಭಾಂಡಕ, ಮಾರ್ಕಂಡ ಮುಂತಾದವರು ಉತ್ತರ ದೇಶದಿಂದ ಮೈಸೂರು ಪ್ರಾಂತ್ಯಕ್ಕೆ ಬಂದು ನೆಲೆಸಿದರೆಂಬ ವಿವರಗಳಿವೆ. ಹೈಹಯರು ಮುಂತಾದವರ ಆಳ್ವಿಕೆ, ಪರಶುರಾಮನ ಪ್ರಸ್ತಾಪ; ರಾಮನ ಆಳ್ವಿಕೆ; ಕಿಷ್ಕಿಂದೆಯಲ್ಲಿ ಸಗರ ಮತ್ತು ಅವನ ವಂಶೀಕರು ಹಾಗೂ ವಾಲಿ-ಸುಗ್ರೀವರ ಆಳ್ವಿಕೆ; ಪಾಂಡವರ ರಾಜ್ಯಭಾರ ಜನಮೇಜಯನ ಆಳ್ವಿಕೆ ಮುಂತಾದವುಗಳ ಸುದೀರ್ಘವಾದ ವಿವರಣೆ ಇದೆ. ಈ ಭಾಗವನ್ನು ರಚಿಸಲು ರೈಸರು ಆಧರಿಸಿರುವ ಆಕರಗಳು ವೈವಿಧ್ಯಪೂರ್ಣವಾದವು.

ವಿಲ್ಸನ್ನನ Vishnu Purana, Uttara Ramacharita, ಟಾಡ್‌ನ Annals of Rajasthan, ಟಾಲ್ಬಾಯ್ಸ್ ವೀಲರನ History of India ಮುಂತಾದ ಪ್ರಮುಖ ಕೃತಿಯೊಂದಿಗೆ ಜೈಮಿನಿ ಭಾರತ, ಪಂಪರಾಮಾಯಣಗಳಂತಹ ಸ್ಥಳೀಯ ಸಾಹಿತ್ಯಕೃತಿಗಳನ್ನೂ ರೈಸ್ ಇಲ್ಲಿ ಬಳಸಿಕೊಂಡಿದ್ದಾರೆ. ಎಲ್ಲಕ್ಕಿಂತ ವಿಶೇಷವೆಂದರೆ ಈ ಪ್ರಾಂತ್ಯದಲ್ಲಿ ಪಾರಂಪರಿಕವಾಗಿ ಜನರು ನಂಬಿಕೊಂಡುಬಂದಿರುವ ಸೊರಬವು ಜಮದಗ್ನಿಯ ಸುರಭಿ; ಚಂದ್ರಗುತ್ತಿಯಲ್ಲಿರುವವಳು ರೇಣುಕೆ; ಹಿರೇಮಗಳೂರು ಪರಶುರಾಮನ ಕ್ಷೇತ್ರ; ಅಲ್ಲಿಯೇ ಜನಮೇಜಯ ಯಜ್ಞವನ್ನು ಮಾಡಿದ ಮುಂತಾದ ಐತಿಹ್ಯಗಳನ್ನು ಅವರು ಅಧಿಕೃತವಾದ ಮಾಹಿತಿ ಎಂಬಂತೆಯೇ ಪರಿಗಣಿಸಿರುವುದು! ಎಷ್ಟರಮಟ್ಟಿಗೆ ಪೌರಾಣಿಕ ಸಂಗತಿಗಳನ್ನು ಬಲವಾಗಿ ಪರಿಗಣಿಸಿದ್ದಾರೆ ಎಂದರೆ ಜೈಮಿನಿ ಭಾರತದಲ್ಲಿ ಉಲ್ಲೇಖಿತವಾಗಿರುವ ಅಶ್ವಮೇಧದ ಕುದುರೆಯೊಂದಿಗೆ ಅರ್ಜುನನು ಪ್ರವೇಶಿಸಿದ ಎನ್ನಲಾದ ಮಣಿಪುರವು ವೀಲರನು ತನ್ನ History of India ದಲ್ಲಿ ಹೇಳಿರುವಂತೆ ಪೂರ್ವ ಬಂಗಾಳದಲ್ಲಿಲ್ಲ. ಬದಲಿಗೆ ಅದು ಚಾಮರಾಜನಗರ ಬಳಿಯಲ್ಲಿದೆ ಎಂಬುದನ್ನು ಅನೇಕ ಅಂಶಗಳನ್ನು ಆಧರಿಸಿ ಬಲವಾಗಿ ಪ್ರತಿಪಾದಿಸಿದ್ದಾರೆ!! ಅಂತೆಯೇ ಚಂದ್ರಹಾಸನ ಕುಂತಲವೂ ಶಿವಮೊಗ್ಗ ಜಿಲ್ಲೆಯ ಕುಬಟೂರು ಎಂಬುದನ್ನು ಎಷ್ಟು ತೀವ್ರವಾಗಿ ಪ್ರತಿಪಾದಿಸಿದ್ದಾರೆಂದರೆ ಆ ಸಲುವಾಗಿ ಚಂದ್ರಹಾಸನ ಇಡಿಯ ಕಥೆಯನ್ನು ಒಂದುಪುಟ ಪೂರ್ತಿಯಾಗಿ ವಿವರಿಸುವುದಕ್ಕೂ ಅವರು ಹಿಂಜರಿದಿಲ್ಲ.[1]

"ಭಾರತೀಯರು ಭಾವುಕರು, ಇತಿಹಾಸ ಪ್ರಜ್ಞೆ ಇಲ್ಲದವರು, ಪುರಾಣ-ಇತಿಹಾಸಗಳ ಭೇದ ಅರಿಯದೆ ಎಲ್ಲವನ್ನೂ ಒಂದೇ ಎನ್ನುವಂತೆ ಪರಿಗಣಿಸುವವರು" ಎಂಬ ಅಭಿಪ್ರಾಯ

1 Vol I, P–284. ಹಾಗೆಂದ ಮಾತ್ರಕ್ಕೆ ಪೌರಾಣಿಕ ಪ್ರಸಂಗಗಳಲ್ಲಿ ಬರುವ ಎಲ್ಲ ಅತಿರಂಜಿತ ಅಂಶಗಳನ್ನೂ ಕಣ್ಣುಮುಚ್ಚಿ ಒಪ್ಪಿದ್ದಾರೆ ಎಂದಲ್ಲ. ಉದಾಹರಣೆಗೆ ವಾನರರ ಸ್ವರೂಪ : ವಾಲಿ, ಸುಗ್ರೀವ, ಹನುಮಂತ ಮುಂತಾದ ವಾನರರೆಲ್ಲ ನಿಜವಾಗಿಯೂ ಕಪಿಗಳು ಎನ್ನುವುದು ಪಾರಂಪರಿಕವಾದ ನಂಬಿಕೆ. ಆದರೆ ರೈಸರು ಇದನ್ನೇ ಮೊದಲು ಪುನರುಚ್ಚರಿಸಿದರೂ ಅನಂತರ ಪಂಪರಾಮಾಯಣವನ್ನು ಉಲ್ಲೇಖಿಸಿ "ಇವರಾರೂ ಕಪಿಗಳಲ್ಲ, ಬದಲಿಗೆ ಕಪಿಧ್ವಜರು. ಆದರೆ ಅವರ ಈ ಲಾಂಛನದ ಅಂಶವೇ ಪ್ರಧಾನವಾಗಿ ಬಿಂಬಿತವಾದ್ದರಿಂದ ಕಥೆಗೆ ಈಗಿರುವ ಅತಿರಂಜಕತೆ ಪ್ರಾಪ್ತವಾಗಿದೆ" ಎಂಬ ನಿರ್ಣಯಕ್ಕೆ ಬಂದಿದ್ದಾರೆ. (Vol I, P–277).

ಅನೇಕರಲ್ಲಿದೆ. ಆದರೆ ರೈಸರಂತಹ ನುರಿತ ಇತಿಹಾಸಕಾರರೂ ಈ ವಿಷಯದಲ್ಲಿ ಮೈಮರೆತು ಭಾವಪರವಶರಾಗಿರುವುದಕ್ಕೆ ಕನ್ನಡನಾಡಿನ ಬಗ್ಗೆ ಅವರಿಗಿದ್ದ ಅಭಿಮಾನ ಪರಾಕಾಷ್ಠೆಯೇ ಕಾರಣ ಎಂದು ಊಹಿಸಬಹುದು. "ಪೌರಾಣಿಕ ಘಟನೆಗಳ ಕಾಲವನ್ನು ಗಣಿಸುವಲ್ಲಿ ಅಗತ್ಯವಾದ 'ಕಲಿಯುಗ' ಮುಂತಾದ ಕಾಲಗಣನೆಯನ್ನು ನನಗಾಗಿ ಸ್ಥಳೀಯ ಜ್ಯೋತಿಶ್ಶಾಸ್ತ್ರಜ್ಞರಾದ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಮಾಡಿಕೊಟ್ಟಿದ್ದಾರೆ" ಎಂಬ ರೈಸ್ ಹೇಳಿಕೆ ಇತರರು 'ಗೊಡ್ಡುಪುರಾಣ'ವೆಂದು ಪರಿಗಣಿಸಬಹುದಾದ ಅಂಶವನ್ನೂ ಅವರು ಎಷ್ಟು ಕೂಲಂಕಷವಾಗಿ ಹಾಗೂ ಗಂಭೀರವಾಗಿ ಪರಿಗಣಿಸುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ಮೌರ್ಯರ ದೊರೆಯಾದ ಚಂದ್ರಗುಪ್ತನು ತನ್ನ ಗುರುವಾದ ಭದ್ರಬಾಹುವಿನೊಂದಿಗೆ ಶ್ರವಣಬೆಳಗೊಳಕ್ಕೆ ಬಂದ ಸಂಗತಿಯೊಂದಿಗೆ (ಕ್ರಿ.ಪೂ. ೩ನೇ ಶತಮಾನ) ರೈಸರು 'ಐತಿಹಾಸಿಕ ಕಾಲ' ಎಂಬ ವಿಭಾಗದ ವಿವರಣೆಯನ್ನು ಆರಂಭಿಸಿದ್ದಾರೆ. ೧೮೯೪ರಲ್ಲಿ ಚಾಮರಾಜ ಒಡೆಯರ್‌ರವರ ನಿಧನದವರೆಗೆ ಈ ವಿಭಾಗವು ವ್ಯಾಪಿಸಿದೆ. ಈ ನಡುವಣ ಕಾಲಘಟ್ಟದಲ್ಲಿ ಮೈಸೂರನ್ನು ಆಳಿದ ಮೌರ್ಯ, ಶಾತವಾಹನ, ಕದಂಬ, ಬಾಣ, ಪಲ್ಲವ, ನೊಳಂಬ, ಗಂಗ, ಚಾಲುಕ್ಯ, ಕಳಚೂರ್ಯ, ಚೋಳ, ಹೊಯ್ಸಳ, ವಿಜಯನಗರ, ಪಾಳ್ಳೇಗಾರ, ಮುಘಲ್, ಮೈಸೂರಿನ ಒಡೆಯರ್‌ಗಳು, ಹೈದರ್, ಟಿಪ್ಪು, ಒಡೆಯರರ ಪುನಃಪ್ರತಿಷ್ಠಾಪನೆಯ ವರೆಗಿನ ವಿವರಗಳನ್ನು ಇಲ್ಲಿ ನೀಡಲಾಗಿದೆ. (ಕ್ರಿ.ಶ. ೧೮೩೧ರಿಂದ ೧೮೮೧ರವರೆಗಿನ ಕಮೀಷನರುಗಳ ಕಾಲದ ಆಡಳಿತದ ವಿವರಗಳನ್ನು ಪ್ರತ್ಯೇಕ ಅಧ್ಯಾಯವಾಗಿಯೇ ಪರಿಗಣಿಸಿರುವುದರಿಂದ ಆ ವಿವರಗಳು ಇಲ್ಲಿಲ್ಲ.)

ಯಾವುದೇ ಒಂದು ರಾಜವಂಶವನ್ನು ಕುರಿತು ವಿವರಿಸುವಾಗ ಮೊದಲಿಗೆ ಅದರ ಬಗ್ಗೆ ಪ್ರಾಸ್ತಾವಿಕವಾಗಿ ಹೆಸರಿನ ಪೂರ್ವೋತ್ತರ, ಆಳ್ವಿಕೆಯ ಕಾಲ, ಸ್ಥಳ ಮುಂತಾದವುಗಳ ಪ್ರಾಸ್ತಾವಿಕವಾಗಿ ಒಂದೆರಡು ವಾಕ್ಯಗಳನ್ನಾಡುವುದು; ಮೊತ್ತಮೊದಲಿಗೆ ಆ ನಿರ್ದಿಷ್ಟ ರಾಜವಂಶದ ಹೆಸರು ಪ್ರಸ್ತಾಪವಾಗಿರುವ ಶಾಸನವನ್ನು ಉಲ್ಲೇಖಿಸಿರುವುದು; ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಆ ರಾಜವಂಶದ ವಂಶವೃಕ್ಷವನ್ನು ನೀಡಿ ಅನಂತರ ಆ ರಾಜವಂಶದ ಒಟ್ಟು ಶಾಸನಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವ ಪ್ರಸಿದ್ಧ ವ್ಯಕ್ತಿಗಳು; ಅದರ ಸಾಧನೆಗಳು; ಘಟಿಸಿದ ಯುದ್ಧಗಳು; ಅವುಗಳ ಪರಿಣಾಮ; ರಾಜ್ಯದ ಉನ್ನತಿ-ಅವನತಿಗಳ ರೀತಿ; ಅದು ಮುಂದಿನ ರಾಜವಂಶಕ್ಕೆ ದಾರಿಮಾಡಿಕೊಟ್ಟ ಬಗೆ ಮುಂತಾದ ಐತಿಹಾಸಿಕ ವಿವರಗಳನ್ನು ಎಳೆಎಳೆಯಾಗಿ ವಿವರಿಸಿರುವುದು - ಇದು ರೈಸರು ಅನುಸರಿಸಿರುವ ವಿಧಾನ.

ಈ ವಿಭಾಗದ ಬರವಣಿಗೆಯು ಬಹ್ವಂಶ ಶಾಸನಾಧ್ಯಯನದ ಹಿನ್ನೆಲೆಯಾಗಿದ್ದು ಹೈದರ್-ಟಿಪ್ಪೂರಿಗೆ ಸಂಬಂಧಿಸಿದ ಅಂಶಗಳಿಗಷ್ಟೇ ಬಖೈರು, ನಾಮಾದಂತಹ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ತಾವೇ ಸ್ವತಃ ಉತ್ತಮ ಶಾಸನಾಭ್ಯಾಸಿಯಾಗಿದ್ದರೂ

ತನ್ನ ಸಂಶೋಧನೆಯ ಫಲಿತಗಳನ್ನಷ್ಟೇ ರೈಸರು ಬಳಸಿಕೊಂಡಿಲ್ಲ. ಬದಲಿಗೆ ಫ್ಲೀಟ್, ಹುಲ್ಷ್, ಭಂಡಾರ್ಕರ್, ಬ್ಯೂಲರ್, ವಾಲ್ಟೇರ್ ಎಲಿಯಟ್ ಮುಂತಾದ ಇತರ ವಿದ್ವಾಂಸರ ಬರವಣಿಗೆಗಳನ್ನೂ ತಮ್ಮ ನಿರೂಪಣೆಯಲ್ಲಿ ಉಪಯೋಗಿಸಿಕೊಂಡಿದ್ದಾರೆ. ಹೆಚ್ಚುಹೆಚ್ಚು ವಿದ್ವಾಂಸರನ್ನು ಉಲ್ಲೇಖಿಸಿದಷ್ಟೂ ಅಭಿಪ್ರಾಯಭೇದಗಳ ಸಂಖ್ಯೆಯೂ ಹೆಚ್ಚುವುದು ಸ್ವಾಭಾವಿಕ. ಆದರೆ ರೈಸ್ ಇಲ್ಲಿ ವಿದ್ವತ್ ವಾದ-ವಿವಾದಗಳನ್ನು ಪ್ರಸ್ತಾಪಿಸದೆ ಸರ್ವಮಾನ್ಯ ವೆನ್ನಬಹುದಾದ ಅಭಿಪ್ರಾಯಗಳನ್ನೇ ಉದ್ದಕ್ಕೂ ಪ್ರತಿಪಾದಿಸುತ್ತಾ ಹೋಗಿದ್ದಾರೆ. ಇಲ್ಲಿಯ ವಿವರಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ವಿಷಯಗಳಲ್ಲಿ ಅರೆ-ಕೊರೆಗಳಿಲ್ಲವೆಂದಲ್ಲ. ಆದರೆ ಮೈಸೂರು ಸಂಸ್ಥಾನದ ಚರಿತ್ರೆ ಇಷ್ಟು ಸುದೀರ್ಘವಾಗಿ ಮತ್ತು ಇಷ್ಟು ಮಾಹಿತಿ ಪೂರ್ಣವಾಗಿ ಹಿಂದೆಂದೂ ಪ್ರಕಟವಾಗಿರಲಿಲ್ಲ ಎಂಬ ಅಂಶವನ್ನು ಪರಿಗಣಿಸಿದಾಗ ರೈಸರ ಪ್ರಯತ್ನದ ಮಹತ್ವ ಅರಿವಾಗುತ್ತದೆ.

ಚಾರಿತ್ರಿಕ ಸಂಗತಿಗಳನ್ನು ನಿರೂಪಿಸುವಾಗ ರಾಗದ್ವೇಷಗಳೆರಡನ್ನೂ ಬಿಟ್ಟು ಸಾಧ್ಯ ವಾದಷ್ಟೂ ಮಟ್ಟಿಗೆ ಬರವಣಿಗೆಯಲ್ಲಿ ರೈಸ್ ಸಮತೂಕವನ್ನು ಕಾಯ್ದುಕೊಂಡಿದ್ದಾರೆ ಎನ್ನುವುದು ಇಡಿಯ ಅಧ್ಯಾಯದಲ್ಲಿ ಕಂಡುಬರುವ ಅಂಶ. ಪ್ರಾಚೀನ ರಾಜವಂಶಗಳಿಗೆ ಸಂಬಂಧಿಸಿದಂತೆ ಈ ಕಾರ್ಯ ಹೆಚ್ಚು ತ್ರಾಸದಾಯಕವಲ್ಲ ನಿಜ. ಆದರೆ ಹೈದರ್, ಟಿಪ್ಪೂ ಮುಂತಾದವರನ್ನು ಕುರಿತಾದ ಸಂದರ್ಭದಲ್ಲಿಯೂ ಇದೇ ಮನಃಸ್ಥಿತಿಯನ್ನು ಕಾಯ್ದು ಕೊಂಡಿರುವುದು ವಿಶೇಷ. ಹೈದರ್ ಮತ್ತು ಟಿಪ್ಪೂರ ನಡವಳಿಕೆ, ಆಡಳಿತ ವಿಧಾನ, ಇತರ ಧರ್ಮೀಯರ ಬಗ್ಗೆ ಅವರು ನಡೆದುಕೊಂಡ ರೀತಿ ಮುಂತಾದವುಗಳ ಬಗೆಗೆ ಆಧುನಿಕ ವಿದ್ವಾಂಸರಲ್ಲಿಯೇ ಎರಡು ವಿರುದ್ಧ ದೃಷ್ಟಿಕೋನದ ಬಣಗಳಿರುವಾಗ ಆಜನ್ಮಪರ್ಯಂತ ತಮ್ಮ ಜನಾಂಗವನ್ನು ದ್ವೇಷಿಸಿದವರ ಬಗೆಗೆ ಜನ್ಮತಃ ಆಂಗ್ಲರಾದ ರೈಸರಿಗೆ ಪೂರ್ವಾಗ್ರಹ ವಿದ್ದಿದ್ದರೆ ಅದು ಅಸ್ವಾಭಾವಿಕವೇನಲ್ಲ. ಆದರೂ ಬ್ರಿಟಿಷ್ ಸೈನ್ಯಾಧಿಕಾರಿಗಳು ಮತ್ತು ಮಿರ್ಜಾ ಇಕ್ಬಾಲ್ ಹಾಗೂ ಕಿರ್ಮಾನಿ ಮೊದಲಾದ ಮುಸ್ಲಿಂ ಚರಿತ್ರಕಾರರು ಇಬ್ಬರೂ ನೀಡಿರುವ ವಿವರಣೆಗಳನ್ನೂ ಸಮಾನವಾಗಿ ಬಳಸಿಕೊಳ್ಳುವುದರ ಮೂಲಕ ಹೈದರ್-ಟಿಪ್ಪೂರ ಗುಣ-ದೋಷಗಳೆರಡನ್ನೂ ಸಮಾನವಾಗಿ ನಿರೂಪಿಸಿದ್ದಾರೆ.

ಟಿಪ್ಪೂಸುಲ್ತಾನನ ಆಳ್ವಿಕೆಯ ವಿವರಗಳನ್ನು ರೈಸ್ ಸುಮಾರು ೧೮ ಪುಟಗಳಷ್ಟು ವಿಸ್ತಾರವಾಗಿ ನೀಡಿದ್ದಾರೆ. ಇದರಲ್ಲಿ ರಾಜ್ಯಾಡಳಿತದಲ್ಲಿ ಆತ ತಂದ ಸುಧಾರಣೆಗಳು; ಫ್ರೆಂಚರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಯತ್ನಿಸಿದ್ದು; ಇಂಗ್ಲೀಷರೊಂದಿಗೆ ಆತ ನಡೆಸಿದ ಯುದ್ಧಗಳು; ಮಕ್ಕಳನ್ನು ಒತ್ತೆಯಾಗಿ ಇರಿಸಿದ್ದು ನಾಲ್ಕನೇ ಮೈಸೂರು ಯುದ್ಧದಲ್ಲಿ ಆತನ ಮರಣ - ಇತ್ಯಾದಿ ಎಲ್ಲ ವಿವರಗಳಿವೆ.

ಚಾರಿತ್ರಿಕ ವಿಷಯಗಳ ನಿರೂಪಣೆಯಲ್ಲಿ ತೋರಿಸಬಹುದಾದ ರಾಗ-ದ್ವೇಷರಹಿತ ಸ್ಥಿತಿಯನ್ನು ವರ್ತಮಾನದ ಸಂಗತಿಗಳನ್ನು ಕುರಿತು ಬರೆಯುವಾಗಲೂ ಕಾಯ್ದುಕೊಳ್ಳುವುದು

ಕಷ್ಟ. ಅದರಲ್ಲೂ ತನ್ನನ್ನು ಸಾಕಿ, ಸಲಹಿ, ಅನ್ನವಿತ್ತ ಧಣಿಯನ್ನು ಕುರಿತು ಬರೆಯುವಾಗ ಎಂತಹವರ ಮನಸ್ಸೂ ಆರ್ದ್ರವಾಗುತ್ತದೆ. ಚಾಮರಾಜ ಒಡೆಯರ್‌ರ ನಿಧನಾನಂತರ ಅವರನ್ನು ಕುರಿತಂತೆ ರೈಸರು ಕಟ್ಟಿಕೊಟ್ಟಿರುವ ವ್ಯಕ್ತಿ ಚಿತ್ರ ಇದಕ್ಕೊಂದು ಉತ್ತಮ ನಿದರ್ಶನ:

> *"ಅವರ ನಡತೆ ಒಬ್ಬ ಇಂಗ್ಲಿಷ್ ಸಂಭಾವಿತನಷ್ಟೇ ಗೌರವಾನ್ವಿತ ಮತ್ತು ಸರಳ. ಕುದುರೆ ಸವಾರಿಯಲ್ಲಿ ಕುಶಲತೆ, ಆಟೋಟಗಳ ಬಗ್ಗೆ ಒಲವು, ಕುದುರೆ ಓಟದ ಪಂದ್ಯಗಳಿಗೆ ನೆರವು ನೀಡುವುದರಲ್ಲಿನ ಧಾರಾಳತನ, ಅತಿಥಿಸತ್ಕಾರದಲ್ಲಿ ಎಣೆಇರದ ಆಸ್ಥೆ, ಅದರೊಂದಿಗೇ ಹಿಂದೂಧರ್ಮದ ನೀತಿ-ನಿಯಮಗಳ ಕಟ್ಟುನಿಟ್ಟಾದ ಪಾಲನೆ - ಇವೆಲ್ಲಗಳಿಂದಾಗಿ ಅವರು ಸ್ಥಳೀಯರು ಮತ್ತು ಯೂರೋಪಿಯನ್ನರಿಬ್ಬರಿಗೂ ಪ್ರಿಯರಾಗಿದ್ದರು. ಅವರ ಅರಮನೆ ಎಲ್ಲ ಬಗೆಯ ಕ್ಷುದ್ರ, ಕ್ಷುಲ್ಲಕ ವ್ಯಕ್ತಿ-ಶಕ್ತಿಗಳಿಂದ ಮುಕ್ತವಾಗಿತ್ತು ಮತ್ತು ಇಂಗ್ಲೆಂಡಿನ ರಾಣಿಯ ಆಸ್ಥಾನದಷ್ಟೇ ಗತಿಸಿದ ಮಹಾರಾಜರವರ ಆಸ್ಥಾನವೂ ಪರಿಶುದ್ಧ ವಾಗಿತ್ತು. ಆತ ಕುಟುಂಬವತ್ಸಲರಾಗಿದ್ದರು. ಸುಸಂಸ್ಕೃತವಾದ ಮತ್ತು ಸಂಸ್ಕಾರ ಯುತವಾದ ಅಭಿರುಚಿಯಿಂದ ಅವರು ಪಾಶ್ಚಾತ್ಯ ಸಂಗೀತ ಮತ್ತು ಚಿತ್ರಕಲೆ ಗಳನ್ನು ಆಸ್ವಾದಿಸುತ್ತಿದ್ದರು. ಅವರೊಬ್ಬ ನಿಪುಣ ವ್ಯವಹಾರವಿದ ಕೂಡಾ. ಮಳೆಗಾಲದ ಕೆಲವು ದಿನಗಳನ್ನು ಆತ ಬೆಂಗಳೂರಿನಲ್ಲಿಯೂ ಮತ್ತೆ ಕೆಲವು ದಿನಗಳನ್ನು ಮೈಸೂರಿನಲ್ಲಿಯೂ ಕಳೆಯುತ್ತಿದ್ದರು. ಚಳಿಗಾಲ ದೇಶದ ಬೇರೆಡೆ ಗಳ ಪ್ರವಾಸದಲ್ಲಿಯೂ, ಬೇಸಿಗೆಕಾಲವು ಉದಕಮಂಡಲದಲ್ಲಿಯೂ ಕಳೆಯು ತ್ತಿದ್ದರು. ಹಾಗಾಗಿ ದೇಶದ ಎಲ್ಲ ಗಣ್ಯವ್ಯಕ್ತಿಗಳ ಪರಿಚಯವೂ ಅವರಿಗಿತ್ತು. ಅವರೆಲ್ಲ ಈತನ ಉನ್ನತ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರು."* [1]

ಕೇವಲ ದೇಶೀಯ ಮಾದರಿಯ ರಾಜ್ಯಾಡಳಿತ ವಿಧಾನದ ಅನುಷ್ಠಾನಕ್ಕೆ ಬದಲಾಗಿ ಅದರೊಂದಿಗೆ ಪಾಶ್ಚಾತ್ಯ ಶೈಲಿಯನ್ನೂ ಅಳವಡಿಸಿಕೊಂಡಾಗ ಸಂಸ್ಥಾನದ ಭವಿಷ್ಯ ಹೆಚ್ಚು ಉಜ್ವಲವಾಗುತ್ತದೆ ಎಂಬುದು ರೈಸರ ನಂಬಿಕೆಯಾಗಿತ್ತು. ತಮ್ಮ ಅಭಿಪ್ರಾಯವನ್ನು ಈ ಕೆಳಗಿನ ಮಾತುಗಳಲ್ಲಿ ವ್ಯಕ್ತಪಡಿಸಿ ಅವರು ಇತಿಹಾಸವನ್ನು ಕುರಿತಾದ ಅಧ್ಯಾಯವನ್ನು ಸಮಾಪ್ತಿಗೊಳಿಸಿದ್ದಾರೆ. ".... Here this history, so eventful and full of incident, now ends, Mysore has played no inconspicuous part in the past, and a great future doubtless yet lies before it. In the century now closing it has been an example of the complete failure of purely native administration conducted without reference to

1 Vol. I, P–449 ರಲ್ಲಿಯ ಭಾಗದ ಅನುವಾದ.

European advise, and of the conspicuous success of administration on Western lines by Europeans and natives combined. As history tends to repeat itself, these lessons should be pondered" ಈ ಮಾತುಗಳಲ್ಲಿ[1] ಯೂರೋಪಿಯನ್ನರನ್ನು ಕುರಿತಾದ ಪ್ರಶಂಸೆ ಸ್ವಲ್ಪ ಹೆಚ್ಚಾಯಿತು ನಿಜ. ಆದರೆ ಕಮೀಷನರುಗಳ ಆಡಳಿತದ ಕಾಲದಿಂದಲೇ ಸಂಸ್ಥಾನವು ತೀವ್ರಗತಿಯಲ್ಲಿ ಅಭಿವೃದಿಗೊಳ್ಳ ತೊಡಗಿತು ಎಂಬ ಅಂಶವನ್ನು ಪರಿಗಣಿಸಿದಾಗ ರೈಸರ ಅಭಿಪ್ರಾಯ ವಾಸ್ತವ ಸ್ಥಿತಿಗಿಂತ ತೀರಾ ಭಿನ್ನವೇನಲ್ಲ ಎಂದು ತೋರುತ್ತದೆ.

ಅಧ್ಯಾಯ - ೬ : Religion (ಧರ್ಮ)

೩೪ ಪುಟಗಳ ಈ ಚಿಕ್ಕ ಅಧ್ಯಾಯದಲ್ಲಿ ನಾಗಾರಾಧನೆ, ವೃಕ್ಷಾರಾಧನೆ ಮುಂತಾದ ಪ್ರಕೃತಿಯ ಆರಾಧನೆಯಿಂದ ಮೊದಲುಗೊಂಡು ಬ್ರಾಹ್ಮಣ, ಜೈನ, ಬೌದ್ಧ, ಲಿಂಗಾಯಿತ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮಗಳ ಬಗ್ಗೆ ಸಂಕ್ಷಿಪ್ತವಾದ ವಿವರಗಳಿವೆ. ವಿಶೇಷವೆಂದರೆ ಬ್ರಾಹ್ಮಣ ಮತ್ತು ಹಿಂದೂ ಧರ್ಮಗಳು ಬೇರೆಬೇರೆ ಎಂದು ಪರಿಗಣಿಸಿರುವುದು. ಹಿಂದೂ ಧರ್ಮ ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ಶಂಕರ, ರಾಮಾನುಜ, ಮಧ್ವ, ಬಸವ ಮುಂತಾದ ಧಾರ್ಮಿಕ ನಾಯಕರನ್ನು ಕುರಿತಾದ ಮಾಹಿತಿ; ಶೃಂಗೇರಿ ಮಠದ ಇತಿಹಾಸ, ಗುರುಪರಂಪರೆ; ದ್ವೈತ, ಅದ್ವೈತ, ವಿಶಿಷ್ಟಾದ್ವೈತ ದರ್ಶನಗಳ ಸ್ಥೂಲಪರಿಚಯ, ಇತ್ಯಾದಿ ವಿವರಗಳಿವೆ. ಅವೈದಿಕ ಮತಗಳಾದ ಬೌದ್ಧ, ಜೈನ ಮತಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಅವುಗಳ ಪರಿಚಯವನ್ನು ನೀಡಲಾಗಿದೆಯಲ್ಲದೆ ಭೂತಾರಾಧನೆ, ಮಾತೃದೇವತಾಪೂಜೆಯಂತಹ ಆದಿಮ ಸಂಸ್ಕೃತಿಯ ವಿವರಗಳನ್ನೂ ದಾಖಲಿಸಲಾಗಿದೆ. ಕಡೆಯಲ್ಲಿ ಈ ಪ್ರಾಂತ್ಯಕ್ಕೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಆಗಮನದ ಇತಿಹಾಸ, ಅವುಗಳಲ್ಲಿಯ ಉಪಪಂಗಡಗಳು ಮುಂತಾದ ಸಂಗತಿಗಳ ಪ್ರಸ್ತಾಪಿಸಲ್ಪಟ್ಟಿವೆ.

ಬಹುಮಟ್ಟಿಗೆ ಸಂಪ್ರದಾಯವಾದ, ಹೆಚ್ಚಿನ ಸಂಶೋಧನೆಗಾಗಲೀ ಅಥವಾ ವಿಶ್ಲೇಷಣೆಗಾಗಲೀ ಅವಕಾಶವಿರದ ಈ ಅಧ್ಯಾಯದಲ್ಲಿಯೂ ರೈಸರು ಸ್ವಂತಿಕೆಯನ್ನು ಉಳಿಸಿಕೊಳ್ಳಲು ಯತ್ನಿಸಿದ್ದಾರೆ. ಸಾಧ್ಯವಿರುವ ಕಡೆ ಚಿಂತನೆಗೆ ಗ್ರಾಸ ಒದಗಿಸುವಂತಹ ಪ್ರಶ್ನೆಗಳನ್ನು ಎತ್ತಿದ್ದಾರೆ. ಉದಾಹರಣೆಗೆ ವೃಕ್ಷಾರಾಧನೆಯನ್ನು ಕುರಿತು ಬರೆಯುವಾಗ " 'ತೋಪು' ಎಂಬ ಶಬ್ದಕ್ಕೆ ಉತ್ತರಭಾರತದಲ್ಲಿ ಬೌದ್ಧಸ್ತೂಪ ಎಂಬ ಅರ್ಥವೂ, ದಕ್ಷಿಣಭಾರತದಲ್ಲಿ ಮರಗಳ ಗುಂಪು ಎಂಬ ಅರ್ಥವೂ ಇದೆ. ಇಲ್ಲಿಯ ತೋಪುಗಳಿಗೂ ಬೌದ್ಧಧರ್ಮಕ್ಕೂ ಏನಾದರೂ ಸಂಬಂಧವಿದೆಯೇ ಎಂಬ ಅಂಶ ಸ್ಪಷ್ಟವಿಲ್ಲ" ಎಂಬ ಅವರ ಹೇಳಿಕೆ.[2]

1 ಅಲ್ಲೇ.,

2 Vol I. P 455

ಇತರ ಅಧ್ಯಾಯಗಳಂತೆ ಈ ಅಧ್ಯಾಯದಲ್ಲಿಯೂ ಸ್ಥಳೀಯ ಮಾಹಿತಿಯನ್ನು ಸಾಧ್ಯವಾದಲ್ಲೆಲ್ಲಾ ಸೇರಿಸಲು ರೈಸ್ ಯತ್ನಿಸಿದ್ದಾರೆ - ಶೃಂಗೇರಿ ಮಠದ ಇತಿಹಾಸ, ಬಹು ಪಾಲು ಶೈವ ದೇವಾಲಯಗಳಲ್ಲಿ ಬ್ರಾಹ್ಮಣರ ಬದಲಿಗೆ ಶಿವದ್ವಿಜರು ಎನ್ನುವ ಪಂಗಡ ದವರು ಪೂಜೆ ನಡೆಸುವುದು; ಶ್ರವಣಬೆಳಗೊಳ, ಮಲೆಯೂರು, ಹುಂಚ ಮುಂತಾದ ಕ್ಷೇತ್ರಗಳಲ್ಲಿ ಜೈನಧರ್ಮ ಬೆಳೆದುನಿಂತ ಬಗೆ - ಇತ್ಯಾದಿ. ಇದರೊಂದಿಗೆ ಚುಂಚನಕಟ್ಟೆಯ ಸುಬ್ರಹ್ಮಣ್ಯನ ಪೂಜೆ, ಆವನಿ ಹಾಗೂ ನಂದಿಗಳಲ್ಲಿನ ದನಗಳ ಚರಿತ್ರೆ, ಶೃಂಗೇರಿಯ ನವರಾತ್ರಿ, ಮೇಲುಕೋಟೆಯ ವೈರಮುಡಿ ಉತ್ಸವ, ನಾಯಕನಹಟ್ಟಿಯ ತಿಪ್ಪೇರುದ್ರ ಸ್ವಾಮಿಯ ತೇರು ಮುಂತಾದವುಗಳನ್ನೂ ಉಲ್ಲೇಖಿಸಿ ಹೆಚ್ಚಿನ ವಿವರಗಳನ್ನು ಆಯಾ ಜಿಲ್ಲೆಯ ವಿಭಾಗದಲ್ಲಿ ಕಾಣಬಹುದು ಎಂದಿದ್ದಾರೆ.

ಅಧ್ಯಾಯ - ೭ : Language - Literature (ಭಾಷೆ-ಸಾಹಿತ್ಯ)

ಈ ಅಧ್ಯಾಯದಲ್ಲಿ ಕನ್ನಡ ಭಾಷೆಯ ಹಾಗೂ ಕನ್ನಡ ಸಾಹಿತ್ಯದ ಚರಿತ್ರೆಗಳನ್ನು ಕುರಿತಾದ ಪಕ್ಷಿನೋಟವು ಕಾಣಸಿಗುತ್ತದೆ. ಮೊದಲಿಗೆ 'ಕನ್ನಡ' ಹಾಗೂ 'ಕರ್ನಾಟಕ' ಎಂಬ ಶಬ್ದಗಳ ಬಗ್ಗೆ ಕಿಟೆಲ್, ಕಾಲ್ಡ್‌ವೆಲ್ ಮುಂತಾದ ಭಾಷಾಶಾಸ್ತ್ರಜ್ಞಗಳು ಸೂಚಿಸಿರುವ ನಿಷ್ಪತ್ತಿಗಳನ್ನು ಪ್ರಸ್ತಾಪಿಸಲಾಗಿದೆ. ಅನಂತರ ಕನ್ನಡವನ್ನು ಆಡುವ ಜನರು ಹರಡಿರುವ ದಕ್ಷಿಣದ ಭೂಭಾಗಗಳು ಯಾವುದೆಂಬುದನ್ನು ವಿವರಿಸುತ್ತಾ ವಿಲ್ಕ್ಸ್‌ನ ಮಾತನ್ನು ಉಲ್ಲೇಖಿಸಿ "ಉತ್ತರದಲ್ಲಿ ಬೀದರ್‌ನವರೆಗೆ, ಪೂರ್ವದಲ್ಲಿ ಅನಂತಪುರ-ಅದೋನಿಗಳವರೆಗೆ, ದಕ್ಷಿಣ ದಲ್ಲಿ ಪಾಲ್ಘಾಟ್ - ಕೊಯಮತ್ತೂರು - ಪೊಲ್ಲಾಚಿಗಳವರೆಗೆ ಹಾಗೂ ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳನ್ನು ದಾಟಿ ಮಂಗಳೂರಿನವರೆಗೆ ಕನ್ನಡವನ್ನಾಡುವ ಜನರಿದ್ದಾರೆ" ಎಂದಿದ್ದಾರೆ.[1] ಕೆಲವು ಪ್ರಾಂತ್ಯಗಳನ್ನು ಬಿಟ್ಟರೆ ಈ ಮೇರೆಗಳೇ ಇಂದಿನ ಏಕೀಕೃತ ಕರ್ನಾಟಕದ ಮೇರೆಗಳೂ ಆಗಿರುವುದು ವಿಲ್ಕ್ಸ್ ಹಾಗೂ ರೈಸರ ದೂರದೃಷ್ಟಿತ್ವಕ್ಕೆ ಸಾಕ್ಷಿಯಾಗಿದೆ.

ಕನ್ನಡಭಾಷೆಯ ಮೂಲದ ಬಗ್ಗೆ ಕಾಲ್ಡ್‌ವೆಲ್, ಡಾ॥ ಪೋಪ್, ಮಾಕ್ಸ್‌ಮುಲ್ಲರ್, ವಿಟ್ನೆ ಮುಂತಾದವರು ಪ್ರತಿಪಾದಿಸಿರುವ ಬಗೆಬಗೆಯ ಸಿದ್ಧಾಂತಗಳ ಸಾರವನ್ನು ರೈಸ್ ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಕೇವಲ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳನ್ನು ಮಾತ್ರ ಸೂಚಿಸದೆ ನಾಗವರ್ಮ ಮುಂತಾದ ಪ್ರಾಚೀನ ವ್ಯಾಕರಣಕಾರರು ಕನ್ನಡದ ಉತ್ಪತ್ತಿಯ ಬಗೆಗೆ ಹೇಳಿರುವ 'ಎಲ್ಲ ಭಾರತೀಯ ಭಾಷೆಗಳೂ ಸಂಸ್ಕೃತ, ಪ್ರಾಕೃತ ಅಪಭ್ರಂಶ ಹಾಗೂ ಪೈಶಾಚಿಕ ಎಂಬ ಮೂರೂವರೆ ಭಾಷೆಗಳಿಂದ ಜನಿಸಿದವು' ಎಂಬ ಅಂಶವನ್ನೂ ಪ್ರಸ್ತಾಪಿಸಿರುವುದು ಗಮನಾರ್ಹ. ಕನ್ನಡ ಲಿಪಿಯು ಬ್ರಾಹ್ಮಿ ಲಿಪಿಯಿಂದ ವಿಕಾಸ ಗೊಂಡಿದ್ದು ಎಂಬ **ಅಂಶ**ವನ್ನು ಪ್ರಸ್ತಾಪಿಸಿ ಅದರೊಂದಿಗೆ ಸಂಸ್ಕೃತ ವರ್ಣಮಾಲೆಯನ್ನೇ

1 Vol I. P 489

ಆಧಾರವಾಗಿಟ್ಟುಕೊಂಡರೂ ಕನ್ನಡವು ಕೆಲವು ಅಕ್ಷರಗಳನ್ನು ಬಿಡುವ ಹಾಗೂ ಮತ್ತು ಕೆಲವು ಅಕ್ಷರಗಳನ್ನು ಸೇರಿಸಿಕೊಳ್ಳುವ ಮೂಲಕ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ ಎಂಬುದನ್ನು ಸರಳವಾಗಿ ವಿವರಿಸಲಾಗಿದೆ.[1]

ಮುಂದಿನ ೯ ಪುಟಗಳಲ್ಲಿ ರೈಸ್ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಕನ್ನಡವನ್ನು ಪೂರ್ವದ ಹಳೆಗನ್ನಡ, ಹಳೆಗನ್ನಡ ಮತ್ತು ಹೊಸಗನ್ನಡಗಳಿಂದ ವಿಭಾಗಿಸಬಹುದು ಎಂದು ಹೇಳಿ ಅವುಗಳ ಲಕ್ಷಣಗಳ ವಿವರಣೆಗೆ ಕಿಟೆಲ್ಲರು ತಮ್ಮ ಶಬ್ದಕೋಶದ ಮುನ್ನುಡಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಬಳಸಿಕೊಂಡಿದ್ದಾರೆ.[2] ಅನಂತರ ಸಿಂಹನಂದಿ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ ಮುಂತಾದ ಪ್ರಾಚೀನತಮ ಕವಿಗಳಿಂದ ಆರಂಭಿಸಿ ಬಸವಪ್ಪಶಾಸ್ತ್ರಿಗಳವರೆಗೆ ಎಲ್ಲ ದೊಡ್ಡ-ಚಿಕ್ಕ ಕವಿಗಳ ಬಗೆಗೆ ಲಭ್ಯವಿರುವ ಎಲ್ಲ ವಿವರಗಳನ್ನು ಸಂಕ್ಷಿಪ್ತವಾಗಿ ನೀಡಿದ್ದಾರೆ. ಅಂತಿಮವಾಗಿ ಓಲೆ, ಕಡತ ಮುಂತಾದ ಲೇಖನ ಸಾಮಗ್ರಿಗಳು; ಮೈಸೂರು ಸಂಸ್ಥಾನದ ಶಾಸನ ಸಂಪತ್ತು, ಅದನ್ನು ಪ್ರಕಾಶಪಡಿಸಲು ತಾವು ಕೈಗೊಂಡಿರುವ ಕಾರ್ಯ ಹಾಗೂ ಇತರ ಪಾಶ್ಚಾತ್ಯ ವಿದ್ವಾಂಸರು ಕೈಗೊಂಡ ಕನ್ನಡದ ಕಾರ್ಯಗಳ ಸ್ಥೂಲ ಪರಿಚಯದೊಂದಿಗೆ ಈ ಅಧ್ಯಾಯ ಮುಕ್ತಾಯವಾಗುತ್ತದೆ.

ಈ ಅಧ್ಯಾಯವನ್ನು ಬರೆಯುವುದಕ್ಕೆ ರೈಸರಿಗಿದ್ದ ಮೂಲ ಸಾಮಗ್ರಿ ಎಂದರೆ 'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲೆಗಾಗಿ ತಾವೇ ಸ್ವತಃ ಸಂಶೋಧಿಸಿದ್ದ ಅಸಂಖ್ಯಾತ ಹಸ್ತಪ್ರತಿಗಳು. ಅವರ ಸಂಶೋಧನೆಗೆ ಪೂರಕವಾಗಿದ್ದದ್ದು ಆಗಿನ್ನೂ ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಆರ್. ನರಸಿಂಹಾಚಾರ್ಯರು ಒದಗಿಸಿದ ಟಿಪ್ಪಣಿಗಳು.[3]

ಆದರೂ ಇತರೆಡೆಗಳಂತೆ ಇಲ್ಲಿಯೂ ರೈಸ್ ಸಂಪೂರ್ಣವಾಗಿ ಬೇರೆಯವರ ಅಭಿಪ್ರಾಯದ ಮೇಲೆ ಅವಲಂಬಿತರಾಗಿಲ್ಲ. ನಿದರ್ಶನಕ್ಕೆ ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಉಲ್ಲೇಖಿತವಾಗಿರುವ ಚೂಡಾಮಣಿ ಎಂಬ ಕೃತಿಯನ್ನು ಬರೆದವನು ಶ್ರೀವರ್ಧದೇವ.

---

1 Vol I, P 491-92

2 ರೈಸರು ಪ್ರಸ್ತಾಪಿಸಿರುವ 'ಪೂರ್ವದ ಹಳೆಗನ್ನಡ' ಎಂಬ ಅವಸ್ಥಾಭೇದವು ಸಾಕಷ್ಟು ಚರ್ಚೆಗೆ ಎಡೆಮಾಡಿಕೊಟ್ಟಿತು. ಇದರ ವಿವರಗಳನ್ನು ಗ್ರಂಥಸಂಪಾದನೆಯನ್ನು ಕುರಿತಾದ ಅಧ್ಯಾಯದಲ್ಲಿ ವಿಸ್ತೃತವಾಗಿ ನೋಡಬಹುದು.

3 ಈ ಬಗ್ಗೆ ರೈಸ್ ಹೀಗೆ ಹೇಳಿದ್ದಾರೆ : "ಇತ್ತೀಚಿನ ವರ್ಷಗಳಲ್ಲಿ ನಾನು ಕೈಗೊಂಡ ಸಂಶೋಧನೆಯಿಂದಾಗಿ ಅನೇಕ ಪ್ರಾಚೀನ ಹಸ್ತಪ್ರತಿಗಳು ದೊರೆತಿದ್ದು ಕನ್ನಡ ಸಾಹಿತ್ಯ ಚರಿತ್ರೆಯ ಮೇಲೆ ಹೊಸ ಬೆಳಕು ಬಿದ್ದಿದೆ. ಇದನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ಭಾಷಾಂತರಕಾರರಾಗಿರುವ ಶ್ರೀ ಆರ್. ನರಸಿಂಹಾಚಾರಿಯವರು ಮುಂದುವರೆಸಿ ಇನ್ನಷ್ಟು ಹೊಸಮಾಹಿತಿಯನ್ನು ಸೇರಿಸಿಕೊಟ್ಟಿದ್ದಾರೆ. ಹಾಗಾಗಿ ಕಳೆದ ವರ್ಷ 'ಕರ್ನಾಟಕ ಶಬ್ದಾನುಶಾಸನ'ದ ಪೀಠಿಕೆಯಲ್ಲಿ ನಾನು ಪ್ರಸ್ತಾಪಿಸಿದ ಕೆಲವು ಅಂಶಗಳಿಗೆ ಹೆಚ್ಚಿನ ವಿವರಗಳನ್ನು ಸೇರಿಸಲು ಸಾಧ್ಯವಾಗಿರುವುದು ನನಗೆ ಸಂತೋಷವನ್ನು ಉಂಟುಮಾಡಿದೆ" Vol I, P 405-406, ಅಡಿಟಿಪ್ಪಣಿ.

ಈತನೇ ತುಂಬುಲುರಾಚಾರ್ಯ ಎಂದು ರೈಸ್ ಶ್ರವಣಬೆಳಗೊಳದ ೫೪ನೇ ನಂಬರಿನ ಶಾಸನದ ಪಾಠವನ್ನು ಆಧರಿಸಿ ತೀರ್ಮಾನಿಸಿದರಲ್ಲದೆ ದಂಡಿಯಿಂದ ಕೀರ್ತಿತನಾಗಿರುವ ಶ್ರೀವರ್ಧನು ಇವನೇ ಎಂದು ಅಭಿಪ್ರಾಯಪಟ್ಟಿದ್ದಾರೆ.[1] ಆದರೆ ಆರ್. ನರಸಿಂಹಾಚಾರ್ಯರ ಪ್ರಕಾರ "ಚೂಡಾಮಣಿ ವ್ಯಾಖ್ಯಾನವನ್ನು ಬರೆದ ತುಂಬುಲೂಚಾರ್ಯನಿಗೂ ಚೂಡಾಮಣಿ ಕಾವ್ಯವನ್ನು ಬರೆದ ಶ್ರೀವರ್ಧದೇವನಿಗೂ ಏನೂ ಸಂಬಂಧವಿಲ್ಲವೆಂದು ತೋರುತ್ತದೆ. ತಮಿಳಿನಲ್ಲಿ ಚೂಡಾಮಣಿ ಎಂಬ ಒಂದು ಹಳೆಯ ಜೈನಕಾವ್ಯವಿದೆ. ಇದನ್ನು ಬರೆದವನು ಶ್ರೀವರ್ಧದೇವ ಎಂಬ ನಾಮಾಂತರವುಳ್ಳ ತೋಲಾಮೊಳಿದೇವ ಎಂಬುವನು. ಇವನೇ ದಂಡಿಯಿಂದ ಸ್ತುತನಾದವನು ಎಂದು ತೋರುತ್ತದೆ."[2]

ಇಂತಹುದೇ ಇನ್ನೊಂದು ಉದಾಹರಣೆಯೆಂದರೆ 'ಕಬ್ಬಿಗರ ಕೈಪಿಡಿ'ಯದು. ರೈಸರ ಪ್ರಕಾರ ಇದರ ಕರ್ತೃ ಲಿಂಗ ಎಂಬ ವೀರಶೈವಮತೀಯ.[3] ಆದರೆ ನರಸಿಂಹಾಚಾರ್ಯರು ಈ ಕೃತಿಯ ಹೆಸರನ್ನು 'ಕವಿಗಳು ಗೊತ್ತಿಲ್ಲದ ಕೆಲವು ಗ್ರಂಥಗಳು' ಎಂಬ ಪಟ್ಟಿಗೆ ಸೇರಿಸಿದ್ದಾರೆ.[4]

ಕನ್ನಡ ಭಾಷೆ-ಸಾಹಿತ್ಯಗಳ ಬಗ್ಗೆ ರೈಸರಿಗಿದ್ದ ಅಭಿಮಾನ ಈ ಅಧ್ಯಾಯದಲ್ಲಿ ಅಲ್ಲಲ್ಲಿ ಮಿಂಚಿ ಮಾಯವಾಗುವುದನ್ನು ಕಾಣಬಹುದು. ಇತರ ಭಾಷೆಗಳಿಂದ ಮಿಶ್ರಿತವಲ್ಲದ ಅಚ್ಚ ಕನ್ನಡದ ಬಗ್ಗೆ ಅವರ ಒಲವು. ಹಾಗೆಂದೇ ಹಳೆಗನ್ನಡದಲ್ಲಿ ಕಂಡುಬರುವ ಕನ್ನಡ-ಸಂಸ್ಕೃತದ ಮಿಶ್ರಣವನ್ನು ಕುರಿತು ಪ್ರಸ್ತಾಪಿಸುವಾಗ ನೃಪತುಂಗ, ನಯಸೇನ, ನಾಗವರ್ಮ ಮುಂತಾದವರು ಈ ಬಗ್ಗೆ ಆಡಿರುವ ಮಾತುಗಳನ್ನು ಪ್ರಸ್ತಾಪಿಸಿದ್ದಾರೆ.[5] ಇವೆಲ್ಲಾ ಕೇವಲ ಸಾಂಪ್ರದಾಯಿಕ ಹೇಳಿಕೆಗಳು - ರೈಸರ ಸ್ವಂತ ಅಭಿಪ್ರಾಯವಲ್ಲ ಎನಿಸಬಹುದು. ಆದರೆ ೧೯ನೇ ಶತಮಾನದಲ್ಲಿ ಅನೇಕ ನಾಟಕಕಾರರು ಷೇಕ್ಸ್‌ಪಿಯರ್‌ನ ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿ ಪ್ರದರ್ಶಿಸುತ್ತಿರುವುದನ್ನು ಕುರಿತು ಪ್ರಸ್ತಾಪಿಸುವಾಗಲೂ ಅವರ ಅಭಿಪ್ರಾಯ ಇದೇ ಆಗಿದೆ :

> *".... a number of Shakespeare's plays have also been made the foundation of Kannada dramas with Hindu names. Praiseworthy as these efforts are, however, they can never have that hold on the national mind, or tend to so much*

---

1 Vol. I, P 497

2 ಕರ್ಣಾಟಕ ಕವಿಚರಿತ್ರೆ, ಸಂಪುಟ - ೧, ಪು. ೧೦., ೧೯೭೨ (ಪ.ಮು.)

3 Vol. I, P 500

4 ಪೂರ್ವೋಕ್ತ, ಪು. - ೫೩೭

5 ಜರದ್ವಧೂ ಸುರತರಸಿಕತೆ, ಬೆರೆಸಲ್ಕೆ ತಕ್ಕುಮೇ ಘೃತಮುಂ ತೈಲಮುಮಂ. ಮುತ್ತುಂ ಮೆಣಸಂ ಕೋದಂತಿರೆ ಇತ್ಯಾದಿ.

> *to the revival of Kannada learning, as a careful study of the ancient spontaneously - produced original works of the country recently brought to light..."* [1]

ಕನ್ನಡಕ್ಕೆ ಅದರದೇ ಆದ ಸ್ವಂತಿಕೆ ಇದೆ, ಜಾಯಮಾನವಿದೆ. ಸಂಸ್ಕೃತದಿಂದಾಗಲೀ ಅಥವಾ ಇಂಗ್ಲೀಷಿನ ಆಸರೆಯಿಂದಾಗಲೀ ಅದು ನಿಲ್ಲಬೇಕಿಲ್ಲ ಎನ್ನುವುದು ಅವರ ಖಚಿತ ನಿಲುವಾಗಿತ್ತು.

ಕನ್ನಡದ ಬಗೆಗಿನ ರೈಸರ ಅಭಿಮಾನ ಎಷ್ಟು ತೀವ್ರವಾಗಿತ್ತೆಂದರೆ "ದಕ್ಷಿಣ ಭಾರತದ ಎಲ್ಲ ಭಾಷೆಗಳಲ್ಲಿ ಕನ್ನಡದಲ್ಲಿಯೇ ಪ್ರಪ್ರಥಮವಾಗಿ ಸಾಹಿತ್ಯ ಕೃಷಿ ನಡೆಯಿತು ಎಂದು ನಂಬಲು ಸಾಕಷ್ಟು ಸಾಕ್ಷ್ಯಾಧಾರಗಳಿವೆ" ಎಂದ ಅವರು ಒಂದೆಡೆ ಅಭಿಪ್ರಾಯಪಟ್ಟಿದ್ದಾರೆ.[2] ಹಾಗೆಯೇ "ಕಿಸುವೊಳಲು, ಕೊಪಳ, ಪುಲಿಗೆರೆ ಹಾಗೂ ಒಕ್ಕುಂದಗಳ ನಡುವಣ ಪ್ರದೇಶವೇ ನಿಜವಾಗಿ ಕನ್ನಡನಾಡಿನ ತಿರುಳು" ಎಂಬ ಕವಿರಾಜಮಾರ್ಗದ ಮಾತನ್ನು ಉಲ್ಲೇಖಿಸಿದರೂ ಮೈಸೂರು ಸಂಸ್ಥಾನದ ಹೊರಗೆ ಎಲ್ಲೋ ಶುದ್ಧಕನ್ನಡದ ಪ್ರದೇಶ ಇತ್ತು ಎಂಬುದನ್ನು ಸಂಪೂರ್ಣವಾಗಿ ಅಂಗೀಕರಿಸಲು ಒಪ್ಪದೆ ".... the region indicated, owing to the numerous vicissitudes through which it has passed is far from being regarded at the present day as the seat of the purest kannada, which is more probably to be found in Mysore...." ಎಂಬ ತಮ್ಮ ಸ್ವಂತ ಅನಿಸಿಕೆಯನ್ನೂ ದಾಖಲಿಸಿದ್ದಾರೆ.[3]

ಈ ಅಧ್ಯಾಯದಲ್ಲಿ ಪ್ರಸ್ತಾಪಿತವಾದ ಅನೇಕ ಕವಿ, ಕೃತಿಗಳ ಬಗ್ಗೆ ರೈಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಅವರ ಸಮಕಾಲೀನ ಹಾಗೂ ಅನಂತರದ ವಿದ್ವಾಂಸರು ಬಹುಮಟ್ಟಿಗೆ ಮಾನ್ಯಮಾಡಿದ್ದಾರೆ. ಆದರೂ ಅಲ್ಲಿ-ಇಲ್ಲಿ ಒಂದೆರಡು ತಪ್ಪುಗಳು ನುಸುಳಿವೆ. ಉದಾಹರಣೆಗೆ "ರೆವರೆಂಡ್ ಮೊಗ್ಲಿಂಗ್‌ರ 'ಬಿಬ್ಲಿಯಾಥೆಕಾ ಕರ್ನಾಟಿಕಾ' ಸರಣಿಗೆ ಹಣಕಾಸಿನ ನೆರವನ್ನು ನೀಡಿದವನು ಮೈಸೂರು ಸಂಸ್ಥಾನದಲ್ಲಿ ಹಿಂದೆ ರೆಸಿಡೆಂಟನಾಗಿದ್ದ ಕೆಸಮೇಜರ್ ಎಂಬಾತ" ಎಂದು ರೈಸ್ ಉಲ್ಲೇಖಿಸಿದ್ದಾರೆ.[4] ಆದರೆ ವಾಸ್ತವವಾಗಿ ಮೊಗ್ಲಿಂಗರಿಗೆ ನೆರವಾದ ಕೆಸಮೇಜರನೂ ಮೈಸೂರಿನ ರೆಸಿಡೆಂಟನಾಗಿದ್ದ ಕೆಸಮೇಜರನೂ ಬೇರೆಬೇರೆ ವ್ಯಕ್ತಿಗಳು. ಮೊಗ್ಲಿಂಗನಿಗೆ ನೆರವಾದ ಕೆಸಮೇಜರನ ಪೂರ್ಣಹೆಸರು ಜಾರ್ಜ್ ಕೆಸಮೇಜರ್. ಈತ ಮದ್ರಾಸಿನ ಉಚ್ಚನ್ಯಾಯಾಧೀಶನಾಗಿದ್ದವನು. ನಿವೃತ್ತಿಯನಂತರ ಉದಕಮಂಡಲದ

1 Vol. I, P 502

2 Vol. I, P 496

3 Vol. I, P 497

4 Vol. I, P 504

ಬಳಿಯ ಕೇಟಿ ಎಂಬಲ್ಲಿ ನೆಲೆಸಿ ಕ್ರೈಸ್ತಧರ್ಮ ಪ್ರಚಾರ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದ. ಈತ ಸುಮಾರು ೧೭೯೩ರಲ್ಲಿ ಜನಿಸಿ ೧೮೪೫ರಲ್ಲಿ ನಿಧನನಾದ. ಆದರೆ ರೆಸಿಡೆಂಟನಾಗಿದ್ದ ಕೆಸಮೇಜರನ ಪೂರ್ಣಹೆಸರು ಜೇಮ್ಸ್ ಆರ್ಕಿಬಾಲ್ಡ್ ಕೆಸಮೇಜರ್ ಎಂದು. ಈತ ೧೮೦೨ರಲ್ಲಿ ರೈಟರನಾಗಿ ಈಸ್ಟ್ ಇಂಡಿಯಾ ಕಂಪನಿಯ ಸೇವೆಗೆ ಸೇರಿ ಬೇರೆಬೇರೆ ಹುದ್ದೆಗಳನ್ನು ನಿರ್ವಹಿಸಿ ೧೮೬೩ರಲ್ಲಿ ನಿಧನನಾದ.

ಕೆಸಮೇಜರ್ ಎಂಬುದು ಒಂದು ಕುಟುಂಬನಾಮ ಎಂದು ಪರಿಗಣಿಸದೆ ಅಂಕಿತ ನಾಮ ಎಂದು ಭಾವಿಸಿದ್ದೇ ಈ ತಪ್ಪುನಿರ್ಣಯಕ್ಕೆ ಕಾರಣವಾಗಿದೆ.[1]

ಅಧ್ಯಾಯ - ೮ : Art and Industry (ಕಲೆ ಮತ್ತು ಉದ್ಯಮ) :

ಕೈಗಾರಿಕೆಗಳು ಮತ್ತು ಉದ್ಯಮಗಳನ್ನು ಕುರಿತಾದ ಮಾಹಿತಿ ಯಾವುದೇ ಒಂದು ಗೆಜ಼ೆಟಿಯರ್‌ನ ಪ್ರಮುಖ ಅಂಗ. ಆದರೆ ರೈಸರು ಅದರೊಂದಿಗೆ 'ಕುಶಲ ಕಲೆಗಳು' ಎಂಬ ವಿಭಾಗವನ್ನೂ ಸೇರ್ಪಡಿಸಿಕೊಳ್ಳುವುದರ ಮೂಲಕ ಸಂಸ್ಥಾನದ ಕರಕುಶಲ ಕಲೆಗಳನ್ನು ಕುರಿತಾದ ಸಮಗ್ರ ಚಿತ್ರಣವನ್ನು ನೀಡಲು ಯತ್ನಿಸಿದ್ದಾರೆ. 'Fine Arts' ಎಂಬ ಶೀರ್ಷಿಕೆಯ ಈ ಉಪವಿಭಾಗದಲ್ಲಿ Stone monuments, Architecture, Engraving ಮತ್ತು Music ಎಂಬ ಭಾಗಗಳಿವೆ. ಶಿಲಾಸ್ಮಾರಕಗಳ ಭಾಗದಲ್ಲಿ 'ಪಾಂಡವರಮನೆ', ಮೋರ್‍ಯರಮನೆ ಎಂದೆಲ್ಲಾ ಕರೆಯಲಾಗುವ ಡಾಲ್ಮನ್, ಕ್ರೊಮೊಲಿತ್, ಕಿಸ್ಟವಿಯನ್ ಮುಂತಾದ ಶಿಲಾಯುಗದ ರಚನೆಗಳು; ಮಾಸ್ತಿಕಲ್ಲು - ವೀರಗಲ್ಲುಗಳು; ಎಲ್ಲೆಕಲ್ಲು ಮುಂತಾದವುಗಳ ಸ್ವರೂಪವನ್ನು ವಿವರಿಸಲಾಗಿದೆ. ಶಿಲ್ಪಕಲೆಯ ವಿಭಾಗದಲ್ಲಿ ಗೊಮ್ಮಟ ಶಿಲ್ಪದ ಬಗ್ಗೆ ಫರ್ಗುಸನ್ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಉಲ್ಲೇಖಿಸಿರುವುದಲ್ಲದೆ 'ಈ ವಿಗ್ರಹದ ಶಿಲ್ಪಿ ಬಹುಶಃ ಅರಿಷ್ಟನೇಮಿ' ಎಂದು ಊಹಿಸಿದ್ದಾರೆ. ಕುತೂಹಲದ ಸಂಗತಿಯೆಂದರೆ ಹೊಯ್ಸಳ ದೇವಾಲಯಗಳ ಮೇಲೆ ಸಾಮಾನ್ಯವಾಗಿ ಕಂಡುಬರುವ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪಗಳನ್ನು ರೈಸ್ 'ಶಿಲ್ಪಕಲೆಯ ಅತ್ಯಂತ ಉತ್ಕೃಷ್ಟ ಮಾದರಿ' ಎಂದು ಪರಿಗಣಿಸಿರುವುದು! ಬಹುಶಃ ರಾಮಾಯಣ, ಮಹಾಭಾರತ ಮುಂತಾದ ಯಾವುದೇ ಕೃತಿಯನ್ನು ಆಧರಿಸಿದ ಶಿಲ್ಪವಾಗಿರದೆ ಸ್ವತಂತ್ರವಾದ ಶೈಲಿಯದಾಗಿದ್ದೇ ರೈಸರ ಈ ಅಭಿಪ್ರಾಯಕ್ಕೆ ಕಾರಣ ಎಂದು ಊಹಿಸಬಹುದು.

ವಾಸ್ತುಶಿಲ್ಪದ ವಿವರಗಳಿರುವ ಭಾಗದಲ್ಲಿ ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ಪ್ರಸಿದ್ಧ ಸ್ಥಳಗಳಲ್ಲಿನ ಶಿಲ್ಪಸೌಂದರ್ಯದ ವಿಸ್ತಾರವಾದ ವಿವರಣೆ ಇದೆ. ಈ ವಿವರಣೆಯ ಬಹುಭಾಗ ಫರ್ಗುಸನ್ನನ 'History of India Architecture'

---

1 ಈ ಇಬ್ಬರು ಕೆಸಮೇಜರುಗಳನ್ನು ಕುರಿತಾದ ಹೆಚ್ಚಿನ ಮಾಹಿತಿಗೆ ನೋಡಿ - *'ಮೊಗ್ಲಿಂಗನಿಗೆ ನೆರವಾದ ಕೆಸಮೇಜರ್ ಯಾರು?'* ಶ್ರೀನಿವಾಸಮೂರ್ತಿ ಎಸ್.ಎಲ್., **ಇತಿಹಾಸ ದರ್ಶನ**, ಸಂ. - ೧೭, ಪು. ೩೩೪-೩೩೬, ೨೦೦೨.

ಕೃತಿಯಿಂದ ಆಯ್ದುಕೊಂಡದ್ದು. ಇದರೊಂದಿಗೆ ಚಾಲುಕ್ಯ ಶೈಲಿಯ ಈ ದೇವಾಲಯಗಳೊಂದಿಗೆ ಶ್ರೀರಂಗಪಟ್ಟಣ, ಹಲಸೂರು, ಮೇಲುಕೋಟೆ, ತಲಕಾಡು ಮುಂತಾದ ಕಡೆ ಕಂಡುಬರುವ ದ್ರಾವಿಡ ಶೈಲಿಯ ದೇವಾಲಯಗಳ ಸ್ವರೂಪವನ್ನು ಹಾಗೂ ಶ್ರವಣಬೆಳಗೊಳದಲ್ಲಿ ಪ್ರಧಾನವಾಗಿ ಕಾಣಸಿಗುವ ಜೈನ ಬಸದಿಗಳ ಸ್ವರೂಪವನ್ನು ರೈಸ್ ವಿವರಿಸಿದ್ದಾರೆ. ಮುಘಲರ ಕಾರಣದಿಂದಾಗಿ ಆರಂಭವಾದ ಸಾರ್ಸನಿಕ್ ಶೈಲಿಯ ರಚನೆಗಳು ಮೊದಲಿಗೆ ಬಿಜಾಪುರ ಪ್ರಾಂತ್ಯದಲ್ಲಿ ಪರಿಚಿತವಾದದ್ದನ್ನು ಪ್ರಸ್ತಾಪಿಸಿ ಅನಂತರ ಈ ಶೈಲಿಯು ಸಿರಾ, ಗೌರಿಬಿದನೂರು, ಶ್ರೀರಂಗಪಟ್ಟಣ ಮುಂತಾದ ಕಡೆ ವಿಸ್ತರಿಸಿದ್ದನ್ನು ದಾಖಲಿಸಿದ್ದಾರೆ.

ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದಲ್ಲಿ ವ್ಯಕ್ತಪಡಿಸಿರುವ ಕೆಲವು ವೈಯಕ್ತಿಕ ಅಭಿಪ್ರಾಯಗಳು ಕುತೂಹಲಕಾರಿಯೂ, ಆಶ್ಚರ್ಯಕಾರವೂ ಆಗಿವೆ. ನಿದರ್ಶನಕ್ಕೆ 'ಲಿಂಗಾಯತ ಜನಾಂಗ ದವರು ತಮ್ಮ ಮಠ, ಸಮಾಧಿ ಮುಂತಾದ ರಚನೆಗಳಲ್ಲಿ ಹಿಂದೂ-ಸಾರ್ಸನಿಕ್ ಶೈಲಿಗಳೆರಡರ ಅಂಶಗಳನ್ನೂ ಒಳಗೊಂಡ ಮಿಶ್ರಸ್ವರೂಪದ ವಿಭಿನ್ನ ಶೈಲಿಯನ್ನು ಬಳಸಿದ್ದಾರೆ' ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ತಮ್ಮ ಮಾತಿಗೆ ಸಮರ್ಥನೆಯಾಗಿ ಅವರು ಮಡಿಕೇರಿಯಲ್ಲಿರುವ ಕೊಡಗಿನ ಅರಸರ ಸಮಾಧಿಗಳನ್ನು, ನಗರ, ಚಿತ್ರದುರ್ಗ, ನಾಯಕನಹಟ್ಟಿ ಮುಂತಾದ ಸ್ಥಳಗಳಲ್ಲಿನ ಇತರ ಕಟ್ಟಡಗಳನ್ನೂ ಉದಾಹರಿಸಿದ್ದಾರೆ. ಆದರೆ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿಯೇ ಹಿಂದೂ-ಮುಸ್ಲಿಂ ಮಿಶ್ರ ಶೈಲಿಯ ಕಟ್ಟಡಗಳು ನಿರ್ಮಾಣವಾಗಿರುವ ಉದಾಹರಣೆಗಳಿವೆ. (ಕಮಲ ಮಹಲ್, ರಾಣಿಯರ ಸ್ನಾನಗೃಹ, ಅಷ್ಟಕೋನಾಕಾರದ ಮಂಟಪ ಮುಂತಾದವು, ಕನ್ನಡ ವಿಷಯ ವಿಶ್ವಕೋಶ, ಪು. ೧೩೩೨, ೧೯೭೮) ಅನಂತರ ಕೆಳದಿ, ಕೊಡಗು, ಶ್ರೀರಂಗಪಟ್ಟಣ ಮುಂತಾದ ಪ್ರಾಂತ್ಯಗಳ ಪಾಳೆಯಗಾರರು ಅಥವಾ ರಾಜರು ಈ ಶೈಲಿಯನ್ನು ಬಳಸಿಕೊಂಡಿದ್ದಾರೆ. ಆದ್ದರಿಂದ 'ಈ ಶೈಲಿಯು ನಿರ್ದಿಷ್ಟವಾಗಿ ಒಂದು ಜನಾಂಗದಿಂದಲೇ ಬಳಸಲ್ಪಡುವ ಪದ್ಧತಿ' ಎಂದು ಸಾರ್ವತ್ರಿಕವಾಗಿ ನಿರ್ಧರಿಸಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುತ್ತದೆ. ಆದರೂ ಮೇಲೆ ಉದಾಹರಿಸಿರುವ ಪ್ರದೇಶಗಳಲ್ಲಿರುವ ರಚನೆಗಳು ಕಾಕತಾಳೀಯವಾಗಿ ವೀರಶೈವ ಅರಸರ ಕಾಲದ್ದೇ ಆಗಿರುವುದರಿಂದ ರೈಸರು ಈ ನಿರ್ಧಾರಕ್ಕೆ ಬಂದಿರಬಹುದೆಂದು ಊಹಿಸಬಹುದು.

ಇಂತಹುದೇ ಮತ್ತೊಂದು ಹೇಳಿಕೆ ಆಂಗ್ಲೋ-ಇಂಡಿಯನ್ ಎಂದು ರೈಸರು ಹೆಸರಿಸಿರುವ, ಇಂದು ಇಂಡೋ-ಯೂರೋಪಿಯನ್ ಎಂದು ಕರೆಯಲ್ಪಡುವ ರಚನೆಗಳಿಗೆ ಸಂಬಂಧಿಸಿದ್ದು. "of Anglo-Indian architeture perhaps the less said the better" ಎಂಬ ಕುತೂಹಲಕಾರಿ ಹೇಳಿಕೆಯೊಂದಿಗೇ ಈ ಶೈಲಿಯು ವಿವರಣೆಗೆ ತೊಡಗಿರುವ ಅವರು ಮುಂದೆ ಒಂದೆರಡು ಪ್ರಮುಖ ಕಟ್ಟಡಗಳನ್ನು ಹೆಸರಿಸಿದರೂ "... it is perhaps not too much to say that in public, no less than

in private, buildings erected under European direction all pretensions to architecture were too long ignored as being totally unconnected with engineering..." ಎಂದು ಕಟುವಾಗಿ ಟೀಕಿಸಿದ್ದಾರೆ. (Vol I, P 522) "ಚೀಫ್ ಇಂಜಿನಿಯರ್ ಆಗಿ ಬಂದ ಕರ್ನಲ್ ಸ್ಯಾಂಕಿ ಮತ್ತು ಆತನ ಮುಂದಿನವರು ಮಾತ್ರವೇ ಹೆಚ್ಚಿನ ಗಮನಹರಿಸಿ ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಉತ್ತಮವಾದ ಕಟ್ಟಡಗಳನ್ನು ನಿರ್ಮಿಸಿದ್ದಾರೆ" ಎನ್ನುವುದು ಅವರ ಅಭಿಪ್ರಾಯ. ಸ್ಯಾಂಕಿಯ ಆಡಳಿತಾವಧಿಯಲ್ಲಿ (೧೮೬೪-೭೭) ಅಠಾರಾ ಕಛೇರಿ (೧೮೬೯), ವಸ್ತು ಸಂಗ್ರಹಾಲಯ (೧೮೭೯) ಮುಂತಾದ ಕಟ್ಟಡಗಳು ನಿರ್ಮಾಣವಾದದ್ದು ನಿಜವಾದರೂ ಅದಕ್ಕೂ ಮುಂಚೆಯೇ ಮಾರ್ಕ್ ಕಬ್ಬನ್ನರ ಕಾಲದಲ್ಲಿ ಬೆಂಗಳೂರಿನ ಡಿಸ್ಟ್ರಿಕ್ಟ್ ಕಛೇರಿ (೧೮೫೬), ಸೆಂಟ್ರಲ್ ಜೈಲ್ (೧೮೬೩) ಮುಂತಾದ ಕೆಲವಾದರೂ ಉತ್ತಮವಾದ ಕಟ್ಟಡಗಳ ನಿರ್ಮಾಣ ಆಗಿದ್ದದ್ದನ್ನು ಮರೆಯುವಂತಿಲ್ಲ.

Industrial Arts ಎಂಬ ವಿಭಾಗ ಸುಮಾರು ೪೬ ಪುಟಗಳಷ್ಟು ವಿಸ್ತಾರವಾದದ್ದು. ಈ ವಿಭಾಗದಲ್ಲಿ ಲೋಹಶಾಸ್ತ್ರ, ಕುಂಬಾರಿಕೆ, ಮರಗೆಲಸ, ಚರ್ಮ ಸಂಸ್ಕರಣ, ಗಾಜು ತಯಾರಿಕೆ, ವಸ್ತ್ರೋದ್ಯಮ, ಹಗ್ಗ ತಯಾರಿಕೆ, ವಿವಿಧ ಬಣ್ಣಗಳ ಹೊರತೆಗೆಯುವಿಕೆ ಮುಂತಾದ ಉದ್ಯಮಗಳನ್ನು ಕುರಿತಾದ ವಿವರಗಳಿವೆ. ಸಹಜವಾಗಿಯೇ ಕೋಲಾರ ಜಿಲ್ಲೆಯಲ್ಲಿರುವ ಚಿನ್ನದ ನಿಕ್ಷೇಪದ ವಿವರಗಳು, ಅದರ ಗಣಿಗಾರಿಕೆಗಾಗಿ ಹಿಂದೆ ಮಾಡಿದ ಯತ್ನ, ಜಾನ್ ಟೇಲರ್ ಕಂಪನಿಯವರ ಸಫಲತೆ, ೧೮೮೬ ರಿಂದ ೧೮೯೫ರವರೆಗೆ ಹೊರತೆಗೆಯಲಾದ ಒಟ್ಟು ಚಿನ್ನದ ಪ್ರಮಾಣ, ಅದರಿಂದಾಗಿ ದೊರೆತಿರುವ ಆದಾಯ, ಇತ್ಯಾದಿಗಳ ಬಗ್ಗೆ ಸವಿವರವಾದ ಮಾಹಿತಿಯಿದೆ. ಇವಿಷ್ಟೂ ಆಡಳಿತಾತ್ಮಕವಾಗಿ ಅತ್ಯವಶ್ಯಕವಾದ ಮಾಹಿತಿ ನಿಜ. ಆದರೆ ಚಿನ್ನಕ್ಕೆ ಕೇವಲ ಮಾರಾಟದ ಮೌಲ್ಯವಲ್ಲದೆ ಸಾಂಸ್ಕೃತಿಕ ಮೌಲ್ಯವೂ ಇದೆ ಎಂಬುದನ್ನು ರೈಸ್ ಮರೆತಿಲ್ಲ. ಹಾಗಾಗಿಯೇ ಈ ಅಧಿಕೃತ ಮಾಹಿತಿಯ ಜೊತೆಜೊತೆಗೇ ಚಿನ್ನ, ಬೆಳ್ಳಿಗಳಿಂದ ತಯಾರಿಸಲಾಗುವ ರಾಗಟೆ, ಕೇದಿಗೆ, ಜಡೆಬಿಲ್ಲೆ, ಚೌರಿಕುಪ್ಪೆ, ಬಾವಲಿ, ಓಲೆ, ಪಿಲ್ಲಿ, ಡಾಬು, ರುಳಿ, ಗೆಜ್ಜೆ, ಉಡುದಾರ, ಕರಡಿಗೆ, ತಾಯಿತಿ ಮುಂತಾದ ಆಭರಣಗಳ ಪಟ್ಟಿ ಹಾಗೂ ಅದರ ವಿವರಣೆಯನ್ನೂ ನೀಡಿದ್ದಾರೆ. ಇಂತಹುದೇ ಅಪರೂಪದ ವಿವರವೆಂದರೆ ಶ್ರೀರಂಗಪಟ್ಟಣದ ದರಿಯಾದೌಲತ್ ಮುಂತಾದ ಸ್ಥಳಗಳಲ್ಲಿನ ಒಳಾಂಗಣ ಅಲಂಕರಣಕ್ಕೆ ಬಳಕೆಯಾಗಿರುವ ಚಿನ್ನದ ರೇಕಿನ ತಯಾರಿಕೆಯ ರೀತಿಯದು.

ಪ್ರತಿಯೊಂದು ಕೈಗಾರಿಕೆಯನ್ನು ಕುರಿತು ವಿವರಿಸುವಾಗಲೂ ಮೊದಲಿಗೆ ಆ ಉದ್ಯಮದಲ್ಲಿ ಬಳಕೆಯಾಗುವ ಮೂಲವಸ್ತುಗಳ ವಿವರ, ಅನಂತರ ಕ್ರಮವಾಗಿ ಅವು ಸಂಸ್ಥಾನದಲ್ಲಿ ಎಲ್ಲೆಲ್ಲಿ ದೊರೆಯುತ್ತವೆ ಎಂಬುದರ ಮಾಹಿತಿ, ಅನಂತರ ತಯಾರಿಕೆಯ ವಿವಿಧ ಹಂತಗಳ ವಿಸ್ತೃತವಾದ ವಿವರಣೆ, ಸಾಧ್ಯವಿದ್ದಲ್ಲಿ ಸಿದ್ಧವಸ್ತುವಿನ ಬಗ್ಗೆ ತಜ್ಞರು ವ್ಯಕ್ತಪಡಿಸಿರುವ ಅಭಿಪ್ರಾಯ, ಉದ್ದಿಮೆಯು ಯಾವಯಾವ ಸ್ಥಳದಲ್ಲಿ ನಡೆಯುತ್ತಿದೆ ಹಾಗೂ ಅದರಿಂದ ಬರುತ್ತಿರುವ ಉತ್ಪತ್ತಿ ಎಷ್ಟು ಎನ್ನುವ ಅಂಕಿಅಂಶಗಳು ನೀಡುವುದು - ಇದು

ರೈಸರು ಅನುಸರಿಸಿರುವ ಕ್ರಮ. ಇದರೊಂದಿಗೆ ಯಾವ ಊರು ಯಾವ ಉದ್ಯಮದಿಂದಾಗಿ ಹೆಸರುವಾಸಿಯಾಗಿತ್ತು ಎಂಬ ಐತಿಹಾಸಿಕ ವಿವರಗಳೂ ದೊರೆಯುತ್ತವೆ. ನಿದರ್ಶನಕ್ಕೆ ಕಂಬಳಿ ತಯಾರಿಕೆಗೆ ಕೋಲಾರ ಮತ್ತು ಚಿತ್ರದುರ್ಗಗಳು; ಬೆಂಗಳೂರಿನ ಜಮಖಾನಗಳು ವಿದೇಶಗಳಲ್ಲಿಯೂ ಪ್ರಸಿದ್ಧಿಯಾಗಿರುವುದು; ತಂತೀವಾದ್ಯಗಳಿಗೆ ಬೇಕಾಗುವ ತಂತಿಗಳ ತಯಾರಿಕೆಗೆ ಚನ್ನಪಟ್ಟಣವು ಇಡೀ ದಕ್ಷಿಣ ಭಾರತದಲ್ಲಿಯೇ ಹೆಸರಾಗಿದ್ದದ್ದು ಇತ್ಯಾದಿ. ಆದರೆ ದೇಸೀ ಉಪ್ಪಿನ (Earth Salt) ತಯಾರಿಕೆಯ ಸಂದರ್ಭದಲ್ಲಿ ಮಾತ್ರ "ಆಮದಾದ ವಸ್ತುಗಳ ಮೇಲಿನ ಅವಲಂಬನೆಯನ್ನು ತಪ್ಪಿಸುವ ಸಲುವಾಗಿ ಟಿಪ್ಪು ಈ ಉದ್ಯಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದ" ಎಂಬ ಅಂಶವನ್ನು ಉಲ್ಲೇಖಿಸದಿರುವುದು ಆಶ್ಚರ್ಯದ ವಿಷಯುವಾಗಿದೆ. (ವೆಲ್ಲೆಸ್ಲಿ ಸಂಪಾದಿಸಿದ ಮೈಸೂರು ಗೆಜೆಟಿಯರ್‌ನಲ್ಲಿ ಈ ಅಂಶ ಸ್ಪಷ್ಟವಾಗಿ ದಾಖಲಾಗಿದೆ : ಪು - ೧೮).

Trade and Commerce ಎಂಬುದೂ ಈ ಅಧ್ಯಾಯದ ಒಂದು ಉಪವಿಭಾಗ ವಾಗಿದ್ದು ಇದರಲ್ಲಿ ೧೮೮೧-೮೨ ರಿಂದ ೧೮೯೦-೯೧ರವರೆಗಿನ ಹತ್ತು ವರ್ಷಗಳಲ್ಲಿ ಅಡಿಕೆ, ಕರ್ಪೂರ, ಏಲಕ್ಕಿ, ಮೆಣಸಿನಕಾಯಿ, ಜೋಳ, ಲವಂಗ, ಬಟ್ಟೆ, ದಾರ, ಚಿನ್ನ, ಬೆಳ್ಳಿ, ಧಾನ್ಯಗಳು, ಬೆಲ್ಲ, ಎಣ್ಣೆ, ಮೆಣಸು, ರೇಷ್ಮೆ ಹುಣಿಸೆ, ಗೋಧಿ, ಸಕ್ಕರೆ ಮುಂತಾದ ವಸ್ತುಗಳ ಆಮದು ಮತ್ತು ರಫ್ತಿನ ವಿವರಗಳಿವೆ. Wages and prices ಎಂಬ ವಿಭಾಗವು ೧೮೮೧-೮೨ ರಿಂದ ೧೮೯೦-೯೧ರವರೆಗಿನ ಪ್ರತಿವರ್ಷದ ಹವಾಮಾನ ಪರಿಸ್ಥಿತಿ, ಅದರಿಂದಾಗಿ ಕೃಷಿಯಲ್ಲಿ ಆದ ಏರುಪೇರು, ಇದು ಪದಾರ್ಥಗಳ ಬೆಲೆಗಳ ಮೇಲೆ ಹಾಗೂ ಕೃಷಿ ಮತ್ತು ಕೂಲಿಕಾರ್ಮಿಕರ ವೇತನದ ಮೇಲೆ ಉಂಟುಮಾಡಿದ ಪರಿಣಾಮ ಇತ್ಯಾದಿಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ - ೯ : Administration (ಆಡಳಿತ) :

ಈ ವಿಭಾಗವು ಸಂಪುಟದ ಅತ್ಯಂತ ದೊಡ್ಡ ಅಧ್ಯಾಯವಾಗಿದ್ದು ಸುಮಾರು ೨೨೦ ಪುಟಗಳನ್ನು ಎರಡು ಭಾಗಗಳಲ್ಲಿ ವ್ಯಾಪಿಸಿದೆ. 'Under the early rulers' ಎಂಬ ಮೊದಲ ಭಾಗವು ಕಿರಿದಾಗಿದ್ದು ಇದರಲ್ಲಿ ಅಶೋಕ ಮುಂತಾದ ಪ್ರಾಚೀನ ರಾಜರು, ಕದಂಬರು, ವಿಜಯನಗರದ ಅರಸರು, ವಿಜಾಪುರದ ಸುಲ್ತಾನರು, ಮೈಸೂರು ಒಡೆಯರು ಗಳು, ಬಿದನೂರಿನ ನಾಯಕರು ಹೈದರ್ ಮತ್ತು ಟಿಪ್ಪೂ, ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಆಡಳಿತ ಪದ್ಧತಿಯ ವಿವರಗಳಿವೆ. ೧೬೦ ಪುಟಗಳ ಮತ್ತೊಂದು ಭಾಗದಲ್ಲಿ ಕಮೀಷನರುಗಳ ಕಾಲದ ಆಡಳಿತ ವಿವರಗಳನ್ನು ನೀಡಲಾಗಿದೆ.

ಮೂಲತಃ ಆಡಳಿತಗಾರರ ಅನುಕೂಲಕ್ಕೆಂದೇ ಗೆಜೆಟಿಯರ್‌ಗಳನ್ನು ರಚಿಸಲಾಗು ತ್ತಿದ್ದುದರಿಂದ ಪ್ರಾಚೀನ ಕಾಲದಿಂದ ಈ ದೇಶ, ಪ್ರಾಂತ್ಯದಲ್ಲಿ ಉಳಿದು-ಬೆಳೆದು

ಬಂದಿರುವ ಆಡಳಿತ ಸ್ವರೂಪ, ಅದರಲ್ಲಿಯ ಶ್ರೇಣಿಗಳು, ಆಯಾ ಹಂತದ ಅಧಿಕಾರಿಗಳ ವ್ಯಾಪ್ತಿ, ಅಂತಿಮವಾಗಿ ಪ್ರಜೆಗಳ ಹಕ್ಕು ಮತ್ತು ಕರ್ತವ್ಯಗಳು; ಆಡಳಿತದಲ್ಲಿ ಅವರ ಪಾಲ್ಗೊಳ್ಳುವಿಕೆಯ ಸ್ವರೂಪ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಕಂದಾಯದ ರೂಪದಲ್ಲಿ ಸಂಗ್ರಹವಾಗಬೇಕಿರುವ ಧನ ಅಥವಾ ವಸ್ತುಗಳ ಪ್ರಮಾಣ, ವಿವಿಧ ರಾಜವಂಶಗಳ ಆಳ್ವಿಕೆಯ ಕಾಲದಲ್ಲಿ ಈ ಎಲ್ಲ ಅಂಶಗಳಲ್ಲಿ ಆಗಿರುವ ಬದಲಾವಣೆಗಳು ಮುಂತಾದವುಗಳ ಸ್ಪಷ್ಟ ಚಿತ್ರಣವನ್ನು ಈ ಅಧ್ಯಾಯದಲ್ಲಿ ನೀಡಬೇಕಾದ್ದು ಅತ್ಯವಶ್ಯ. ರೈಸರ ಕಾಲದಲ್ಲಿ ಈ ಎಲ್ಲ ವಿವರಗಳೂ ಒಂದೇ ಕಡೆ ಲಭ್ಯವಿರಲಿಲ್ಲ. ಏಕೆಂದರೆ ಆ ಮೊದಲು ಈ ಮಾಹಿತಿಯನ್ನೆಲ್ಲವನ್ನೂ ಯಾರೂ ಸಮಗ್ರವಾಗಿ ದಾಖಲಿಸಿರಲಿಲ್ಲ. ಆದರೆ ಶಾಸನಕ್ಷೇತ್ರದಲ್ಲಿ ತಮಗಿದ್ದ ಅನುಭವ ಮತ್ತು ಪರಿಣಿತಿಯಿಂದ ರೈಸರು ಈ ಕೊರತೆಯನ್ನು ತುಂಬಿಕೊಂಡಿದ್ದಾರೆ. ವಿವಿಧ ರಾಜವಂಶಗಳ ಶಾಸನಗಳಲ್ಲಿ ಅಲ್ಲಲ್ಲಿ ಪ್ರಸ್ತಾಪವಾಗುವ ಆಡಳಿತಾತ್ಮಕ ವಿವರಗಳನ್ನೆಲ್ಲ ಒಟ್ಟುಗೂಡಿಸಿ ಅವರು ಈ ಅಧ್ಯಾಯವನ್ನು ರಚಿಸಿದ್ದಾರೆ. ರೈಸರ ಈ ಪ್ರಯತ್ನವು ಚಾರಿತ್ರಿಕವಾಗಿ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಭಾರತೀಯ ಆಡಳಿತ ಪದ್ಧತಿಯ ಸ್ವರೂಪವನ್ನು ಸ್ಪಷ್ಟವಾಗಿ ನಿರೂಪಿಸುವ ಕೃತಿಯಾದ ಕೌಟಿಲ್ಯನ ಅರ್ಥಶಾಸ್ತ್ರವು ಮೊತ್ತ ಮೊದಲಿಗೆ ಪ್ರಕಟವಾದದ್ದು ೧೯೦೯ರಲ್ಲಿ. ಆ ಗ್ರಂಥವನ್ನು ನೋಡಿರದಿದ್ದರೂ ಅದರಲ್ಲಿಯ ಬಹುಪಾಲು ವಿವರಗಳನ್ನು ಶಾಸನಗಳ ಮೂಲಕ ಸಂಗ್ರಹಿಸಿದ ಗರಿಮೆ ರೈಸರದಾಗಿದೆ.

ಅಶೋಕನ ಕಾಲದಲ್ಲಿ ರಾಜಕುಮಾರರು ಬೇರೆ ಬೇರೆ ಪ್ರಾಂತ್ಯಗಳಲ್ಲಿ ರಾಜ್ಯಪಾಲರಂತೆ ಕಾರ್ಯ ನಿರ್ವಹಿಸುತ್ತಿದ್ದರು. ಅವರ ನೆರವಿಗೆ ಮಹಾಮಾತ್ರರೆಂಬ ಮೇಲ್ವಿಚಾರಣಾಧಿಕಾರಿಗಳು ಇರುತ್ತಿದ್ದು ಅವರು ಅರಸನ ಆದೇಶವನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಹೊರಬೇಕಿತ್ತು ಎಂಬ ಅಂಶವನ್ನು ರೈಸ್ ಶಾಸನಗಳನ್ನು ಆಧರಿಸಿ ಉಲ್ಲೇಖಿಸಿದ್ದಾರೆ.[1] ಶಾತಕರ್ಣಿಗಳ ಮತ್ತು ಅನಂತರದ ಕಾಲದಲ್ಲಿ ಮಹಾಪ್ರಧಾನ, ಸರ್ವಾಧಿಕಾರಿ ಎಂಬ ಪ್ರಧಾನಮಂತ್ರಿ, ಮಂತ್ರಿ, ಮಹಾಮಂಡಲೇಶ್ವರ, ದಂಡನಾಯಕ, ಸಾಮಂತ, ಮಹಾಸಾಮಂತಾಧಿಪತಿ ಮುಂತಾದ ಆಡಳಿತ ಮತ್ತು ಸೈನ್ಯದ ಅಧಿಕಾರಿಗಳು; ರಜ್ಜುಕ, ಕರಣ, ವಡ್ಡವ್ಯವಹಾರಿ ಮುಂತಾದ ಕಂದಾಯಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಪ್ರಸ್ತಾಪವು ಶಾಸನಗಳಲ್ಲಿರುವುದನ್ನು ಅವರು ಗುರುತಿಸಿದ್ದಾರೆ.

ರಾಜ್ಯವೊಂದನ್ನು ಅನೇಕ ದೊಡ್ಡ ವಿಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದರ ಹೆಸರಿನ ಜೊತೆಗೆ ಒಂದು ಸಂಖ್ಯೆಯನ್ನು ಜೋಡಿಸುವ ಪರಿಪಾಠ ಪ್ರಾಚೀನರಲ್ಲಿದೆ. ಉದಾಹರಣೆಗೆ ಬನವಾಸಿ ಇಪ್ಪತ್ತು ಸಾವಿರ, ನೊಳಂಬವಾಡಿ ಮುವ್ವತ್ತೆರಡು ಸಾವಿರ, ಗಂಗವಾಡಿ ತೊಂಬತ್ತಾರು ಸಾವಿರ, ಪುನ್ನಾಡು ಹತ್ತು ಸಾವಿರ ಇತ್ಯಾದಿ. ಕೆಲವೊಮ್ಮೆ ಪ್ರಾಂತ್ಯದ

1 Vol. I. P – 572

ಹೆಸರನ್ನು ಹೆಸರಿಸದೆ ಕೇವಲ ಸಂಖ್ಯೆಯನ್ನು ಮಾತ್ರ ಸೂಚಿಸಿದ್ದಿದೆ. ರೈಸರ ಪ್ರಕಾರ ಈ ಸಂಖ್ಯೆಗಳು ಆಯಾ ಪ್ರದೇಶದಿಂದ ಒಟ್ಟು ಸಂದಾಯವಾಗಬೇಕಿದ್ದ ಕಂದಾಯದ ಮೊತ್ತವನ್ನು ಸೂಚಿಸುತ್ತವೆ.[1]

ಹಳ್ಳಿಗಳ ಆಡಳಿತವು ಗೌಡ, ಪಟೇಲ, ಶಾನುಭೋಗ, ತಳವಾರ, ತೋಟಿ, ನೀರಗಂಟಿ, ಜ್ಯೋತಿಷಿ, ಬಡಗಿ, ಕುಂಬಾರ, ಅಗಸ, ನಾಯಿಂದ ಮತ್ತು ಅಕ್ಕಸಾಲಿ ಎಂಬ ಹನ್ನೆರಡು ಜನ ಆಯಗಾರರೆಂಬ ಪ್ರತಿನಿಧಿಗಳಿಂದ ನಡೆಯುತ್ತಿತ್ತು. ಬಹುಮಟ್ಟಿಗೆ ಸ್ವಯಂಪರಿಪೂರ್ಣವಾಗಿದ್ದ ಗ್ರಾಮಾಡಳಿತವು, ಪ್ರಾಚೀನ ಭಾರತದಲ್ಲಿ ಎಷ್ಟು ಶಕ್ತವಾಗಿತ್ತು ಎನ್ನುವುದನ್ನು ರೈಸ್ ಹೀಗೆ ವರ್ಣಿಸಿದ್ದಾರೆ :

> *".... ನಾವು ಗಮನಿಸುತ್ತಿರುವ ಈ ಪುಟ್ಟ ಹಳ್ಳಿಗಳು ಸೀಜ಼ರನಂತಹ ಮಹಾ ಪರಾಕ್ರಮಿಯನ್ನು ರೂಪಿಸಿದವು ಎಂದೇನೂ ಅಲ್ಲ; ಇಲ್ಲಿಯ ರೈತರ ಹಕ್ಕು, ಸ್ವತ್ತುಗಳನ್ನು ಕಿತ್ತುಕೊಳ್ಳಲು ಆ ಹಳ್ಳಿಯ ಪಟೇಲ, ಅಂತಹ ಇಪ್ಪತ್ತು ಹಳ್ಳಿಗಳ ಒಡೆಯನಾದ ಪಾಳೆಯಗಾರ, ಇನ್ನೂರು ಹಳ್ಳಿಗಳ ಒಡೆಯನಾದ ಕಲೆಕ್ಟರ್ ಅಥವಾ ಇಪ್ಪತ್ತುಸಾವಿರ ಪಟ್ಟಣಗಳ ಅಧಿಪತಿಯಾದ ರಾಜ - ಯಾರಾದರೂ ಅಥವಾ ಇವರೆಲ್ಲರೂ ಪ್ರಯತ್ನಿಸಿರಬಹುದು, ಸಫಲರಾಗಿರಬಹುದು ಅಥವಾ ವಿಫಲರೂ ಆಗಿರಬಹುದು. ಆದರೆ ಆಕ್ರಮಣಗಳು, ಅತಿಯಾದ ಕಂದಾಯ ವಸೂಲಿ, ಕ್ರಾಂತಿ ಮುಂತಾದ ಯಾವುದೂ ಹಳ್ಳಿಗಳ ಜೀವನ ಕ್ರಮದ ಮೇಲೆ ತಮ್ಮ ಪರಿಣಾಮವನ್ನು ಬೀರುತ್ತಿರಲಿಲ್ಲ. ಇಲ್ಲಿ ಗೆದ್ದವರು ಯಾರೇ ಆದರೂ ಆತ ನೇರವಾಗಿಯೋ ಅಥವಾ ತನ್ನ ಪ್ರತಿನಿಧಿಗಳ ಮೂಲಕವೋ ಈ ಹನ್ನೆರಡು ಜನರ ಮೂಲಕವೇ ಆಡಳಿತ ನಡೆಸಬೇಕಿತ್ತು. ಹಾಗಾಗಿ ಒಳಾಡಳಿತ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಆಗುತ್ತಿರಲಿಲ್ಲ. ಆದ್ದರಿಂದ ಭಾರತದ ಪ್ರತಿಯೊಂದು ರಾಜ್ಯವೂ ಇಂತಹ ಅನೇಕ ಸಣ್ಣ ಸಣ್ಣ ಗಣರಾಜ್ಯಗಳ ಸಮುಚ್ಚಯ ಎಂಬುದನ್ನು ಮರೆಯುವಂತಿಲ್ಲ...."*[2]

---

1 ಸ್ಥಳನಾಮಗಳ ಮುಂದಿರುವ ಸಂಖ್ಯೆಗಳು ಏನನ್ನು ಸೂಚಿಸುತ್ತವೆ ಎನ್ನುವ ವಿಷಯದಲ್ಲಿ ವಿದ್ವಾಂಸರ ನಡುವೆ ಭಿನ್ನಾಭಿಪ್ರಾಯಗಳಿವೆ. ಫ್ಲೀಟರ ಪ್ರಕಾರ ಕೆಲವು ಹತ್ತು ಅಥವಾ ನೂರುಗಳು ಆ ಪ್ರಾಂತ್ಯಗಳು ಒಳಗೊಂಡಿರುವ ಹಳ್ಳಿ ಅಥವಾ ಪಟ್ಟಣಗಳನ್ನು ಸೂಚಿಸುತ್ತವೆ. ಆದರೆ ಸಾವಿರ ಅಥವಾ ಲಕ್ಷಗಳಿಗೆ ಈ ನಿಯಮವನ್ನು ಅನ್ವಯಿಸಲಾಗದು. (ವಿವರಗಳಿಗೆ ನೋಡಿ : Dikshit, G.S., **Local Self Government in Medieval Karnataka**, Dharwar, 1964 P. 24-28).

2 Vol. I, P 576

ರೈಸರು ಈ ಅಧ್ಯಾಯದಲ್ಲಿ ಕದಂಬರ ಕಾಲದಿಂದ ಬ್ರಿಟಿಷ್ ಕಮಿಷನರರವರೆಗೆ ರಾಜ್ಯಾಡಳಿತವು ಹಂತಹಂತವಾಗಿ ಹೇಗೆ ಬದಲಾಗುತ್ತಾ ಬಂದಿತು ಎಂಬುದನ್ನು ಎಳೆಎಳೆಯಾಗಿ ಹೀಗೆ ಬಿಡಿಸಿ ತೋರಿಸಿದ್ದಾರೆ :

ಕದಂಬರ ಆಳ್ವಿಕೆಯ ಕಾಲದಲ್ಲಿ ಕದಂಬ ರಾಜನು ಗೋಪಮಂತ್ರಿ ಮತ್ತು ನಾಗದೇವ ಕರಣಿಕನೊಡಗೂಡಿ ನಾಗರಖಂಡ ಮತ್ತು ವರದಾಖಂಡಗಳ ನಡುವಣ ಎಲ್ಲ ಕೃಷಿಯೋಗ್ಯವಾದ ಭೂಮಿಯನ್ನು ಬಾಹು ಎಂಬ ಅಳತೆಯಲ್ಲಿ ಅಳೆದದ್ದು, ಕ್ರಿ.ಶ. ೧೬೬೮? ರಲ್ಲಿ ಗೋಪಮಂತ್ರಿಯು ನಿರ್ಧರಿಸಿದ ಧಾನ್ಯಗಳ ಅಳತೆ; ಖುಷ್ಕಿ ಮತ್ತು ನೀರಾವರಿ ಪ್ರದೇಶಗಳಿಗೆ ಬೇರೆ ಬೇರೆ ಅಳತೆ ಮತ್ತು ಕಂದಾಯಗಳ ಪ್ರಮಾಣ; ಅಡಿಕೆ, ತೆಂಗು, ಬಾಳೆ ಮುಂತಾದ ತೋಟಗಳನ್ನು ಅಳೆಯಲು ೧೮ ಅಡಿ ಉದ್ದದ 'ಮಾನದಂಡ' ಎಂಬ ಅಳತೆಗೋಲನ್ನು ಬಳಸಲು ಆರಂಭಿಸಿದರು.

ಮುಂದೆ ಹೊಯ್ಸಳರ ಕಾಲದಲ್ಲಿ ಪ್ರತಿಯೊಬ್ಬ ರೈತನೂ ಒಂದು ಕಬ್ಬಿಣದ ಕುಳವನ್ನು ಅರಸನಿಗೆ ನೀಡಬೇಕಿತ್ತು. ಇದನ್ನು ಹುಂಚದ ಪದ್ಮಾವತಿಯಕ್ಷಿಯ ದೇವಾಲಯದಲ್ಲಿರುವ ಪಾದರಸದ ಭಾವಿಯಲ್ಲಿ ಅದ್ದಿದಾಗ ಅದು ಚಿನ್ನವಾಗಿ ಪರಿವರ್ತಿತವಾಗುತ್ತಿತ್ತು. ಇದೇ ಆತ ತೆರಿಗೆಯಾಗಿ ನೀಡುತ್ತಿದ್ದ 'ಕುಳವಣ' ಎಂಬ ಶಾಸನಾಧಾರಿತ ಮಾಹಿತಿಯನ್ನು ಕೊಟ್ಟು ಬಹುಶಃ ಇದು ಚಿನ್ನದ ಗಣಿಗಾರಿಕೆಯನ್ನು ರಾಜಮನೆತನದವರು ಗುಟ್ಟಾಗಿ ನಡೆಸುತ್ತಿದ್ದುದರ ಸಂಕೇತವಿರಬಹುದು ಎಂದು ಊಹಿಸಿದ್ದಾರೆ.[1]

ವಿಜಯನಗರದ ಅರಸರು ಯುದ್ಧಗಳ ಮೂಲಕ ಅನೇಕ ಪ್ರಾಂತ್ಯಗಳನ್ನು ಗೆದ್ದುಗೊಂಡರಾದರೂ ಬಹುಮಟ್ಟಿಗೆ ಆಯಾ ಪ್ರಾಂತ್ಯಗಳನ್ನು ಹಿಂದೆ ಆಳುತ್ತಿದ್ದವರನ್ನೇ ತಮ್ಮ ಪ್ರತಿನಿಧಿಗಳನ್ನಾಗಿ ನೇಮಿಸಿದರು. ಅದರೊಂದಿಗೆ ಅನೇಕ ಜನ ಗುಲಾಮರನ್ನು ಮತ್ತು ಸೇವಕರನ್ನು ಬಳಸಿಕೊಂಡು ಕಾಡುಗಳನ್ನು ಕಡಿದು ಅದನ್ನು ಕೃಷಿಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸಿ ಆ ಮೂಲಕ ರಾಜ್ಯದ ಆದಾಯವನ್ನು ಹೆಚ್ಚಿಸಿಕೊಂಡರು ಇವೇ ಪಾಳೆಯಪಟ್ಟುಗಳು ಎಂಬ ವಿವರಣೆಯೊಂದಿಗೆ ಸೀಮೆ, ಗಡಿ, ಹೋಬಳಿ ಮುಂತಾದ ಶಬ್ದಗಳು ಮುಸ್ಲಿಮ್ ದೊರೆಗಳ ಆಡಳಿತದಲ್ಲಿ ಮುಲ್ಕ್, ತಾಲ್ಲೂಕ್, ತರಫ್ ಎಂದೆಲ್ಲಾ ಬದಲಾಗಿರುವುದನ್ನು ಕೋಷ್ಟಕದ ರೂಪದಲ್ಲಿ ಕೊಟ್ಟು ಅವುಗಳ ಅರ್ಥವನ್ನು ವಿವರಿಸಿದ್ದಾರೆ. ಅನಂತರ ವಿಜಯನಗರದ ಕಾಲದಲ್ಲಿ ೧೨ ಜನ ಆಯಗಾರರು ಅಥವಾ ಬಾರಾಬಲೂತಿಯವರು ನಿರ್ವಹಿಸಬೇಕಿದ್ದ ಕೆಲಸ ಕಾರ್ಯಗಳನ್ನು ಸವಿಸ್ತಾರವಾಗಿ ಕೊಟ್ಟಿದೆ.

ವಿಜಯನಗರದ ಅರಸರ ಕಾಲದಲ್ಲಿ ಸಂಗ್ರಹಿಸಲಾಗುತ್ತಿದ್ದ ವಿವಿಧ ಬಗೆಯ ಕಂದಾಯಗಳ ವಿವರಗಳು ಇಲ್ಲಿ ದಾಖಲಾಗಿವೆ. ಉದಾಹರಣೆಗೆ ಭೂಮಿಯನ್ನು ಉಳಲು

1 Vol. I. P 577 & 339

ಕೊಡಬೇಕಾಗಿರುವ 'ನೆಲಗಂದಾಯ', ಕೆರೆಯಿಂದ ನೀರನ್ನು ಪಡೆದು ಭತ್ತ ಬೆಳೆದರೆ ಕೊಡುವ 'ಸೊಂಗರು' ಅಥವಾ 'ಮೂಗುರು', ಬೇಚಿರಾಕ್ ಭೂಮಿಯನ್ನು ಕೃಷಿಗೆ ಬಳಸಿ ಕೊಳ್ಳಲು ನೀಡುವ 'ಭೂಮುಲಗುಟ್ಟ' ಅಥವಾ 'ಕೊಲಗುಟ್ಟ'; ಮನೆಗಳ ಮೇಲೆ ವಿಧಿಸುವ 'ಮನೆಗುಟ್ಟ'; ಅಂಗಡಿಗಳ ಮೇಲಿನ 'ಅಂಗಡಿಗುಟ್ಟ'; ಸಾರಾಯಿಯನ್ನು ಮಾರಲು ತೆರುವ 'ಕಲ್ಲಳಿ'; ಸರಕು ಸಾಗಣೆಯ ಸಮಯದಲ್ಲಿ ವಸೂಲು ಮಾಡುವ 'ಮಾರ್ಗಾದಾಯಂ', ಕಟುಕರು ನೀಡಬೇಕಿದ್ದ 'ಕಸಾಯಿಗುಟ್ಟ'; ಅಗಸರ 'ಉಬ್ಬೆಗುಟ್ಟ', ಗಣೆಗಾರಿಕೆಗಾಗಿ 'ಹೊಮ್ಲಗುಟ್ಟ' ಇತ್ಯಾದಿ. ಕೇವಲ ವಿಜಯನಗರದ ಅರಸರುಗಳ ಕಾಲದ ಆಡಳಿತವನ್ನು ಮಾತ್ರವೇ ಗಮನಿಸದೇ ಅದೇ ಕಾಲದಲ್ಲಿ ಬಿಜಾಪುರ ಮುಂತಾದ ಪ್ರಾಂತ್ಯಗಳನ್ನು ಆಳುತ್ತಿದ್ದ ಅದಿಲ್‌ಶಾಹಿ ಆಡಳಿತ ವಿವರಗಳನ್ನೂ ರೈಸರು ಇಲ್ಲಿ ದಾಖಲಿಸಿದ್ದಾರೆ.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಸ್ಥಾನದ ಆಳ್ವಿಕೆಯ ಪದ್ಧತಿ ಯಲ್ಲಾದ ಗಮನಾರ್ಹ ಬದಲಾವಣೆಗಳನ್ನು ರೈಸರು ವಿವರಿಸಿದ್ದಾರೆ. ಆ ಕಾಲದಲ್ಲಿ ಆರಂಭ ವಾದ ನಿರೂಪದ ಚಾವಡಿ, ಎಕ್ಕದ ಚಾವಡಿ, ಸೀಮೆ ಕಂದಾಚಾರ, ಸುಂಕದ ಚಾವಡಿ, ಪಟ್ಟದ ಚಾವಡಿ ಮುಂತಾದ ೧೮ ಇಲಾಖೆಗಳು ಮತ್ತು ಅವುಗಳ ಆಡಳಿತದ ವಿಧಾನದ ವಿವರಗಳು ಇಲ್ಲಿವೆ. ಅಷ್ಟೇ ಅಲ್ಲದೆ ಆ ಕಾಲದಲ್ಲಿ ವಿಧಿಸಲಾಗುತ್ತಿದ್ದ ಹುಲ್ಲು ಹಣ, ಏರು ಸುಂಕ, ಜಟ್ಟಿಮಾನ್ಯ, ಮದಿವೆ ತೆರಿಗೆ, ಕಾವಡಿ ತೆರಿಗೆ ಮೊದಲಾದ ೨೦ ಬಗೆಯ ಸುಂಕಗಳ ಮಾಹಿತಿಯೂ ಇಲ್ಲಿದೆ. ಅನಂತರ ರಾಜ್ಯಾಡಳಿತದ ವಿಷಯದಲ್ಲಿ ಬಿದನೂರಿನ ಶಿವಪ್ಪ ನಾಯಕನು ಹೊರಡಿಸಿದ್ದ ಶಿಸ್ತು, ಚಿಕ್ಕ ದೇವರಾಜ ಒಡೆಯರ ಪದ್ಧತಿಯನ್ನು ಹೈದರ್ ಮುಂದುವರೆಸಿಕೊಂಡು ಹೋದದ್ದು, ಟಿಪ್ಪೂ ಇದನ್ನೆಲ್ಲ ಹದಗೆಡಿಸಿದ್ದು, ಮುಂದೆ ಪೂರ್ಣಯ್ಯ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಾದ ಬದಲಾವಣೆಗಳ ಬಗೆಗೆ ಸಾಕಷ್ಟು ಮಾಹಿತಿ ಇದೆ.

ಈ ಎಲ್ಲ ಅಂಶಗಳನ್ನು ವಿವರಿಸುವಾಗ ಕೇವಲ ಆಡಳಿತಾತ್ಮಕ ವಿವರಗಳಿಗೆ ಮಾತ್ರ ರೈಸರು ಗಮನ ಕೊಟ್ಟಿಲ್ಲ. ಬದಲಿಗೆ ಆಯಾ ಸಂದರ್ಭದಲ್ಲಿ ಸರ್ಕಾರಿ ಯಂತ್ರವನ್ನು ದುರುಪಯೋಗಪಡಿಸಿ ಕೊಂಡಿರುವುದರ ಬಗೆಗೂ ಅವರ ದೃಷ್ಟಿ ಹರಿದಿದೆ. ನಿದರ್ಶನಕ್ಕೆ ಹಳ್ಳಿಯ ಮುಖ್ಯಸ್ಥರಾದ ಗೌಡ ಮತ್ತು ಶಾನುಭೋಗರು ರೈತರನ್ನು ಹೇಗೆ ಶೋಷಿಸುತ್ತಾ ರೆಂಬುದರ ಬಗ್ಗೆ ಅವರು ನೀಡಿರುವ ವಿವರಗಳಿವು :

> *"…. ಜಮಾಬಂದಿಯ ಕಾಲದಲ್ಲಿ ನಿಗದಿಯಾದ ಕಂದಾಯಕ್ಕೆ ತಕ್ಕಷ್ಟು ಬೆಳೆ ಯನ್ನು ರೈತರು ಬೆಳೆಯುತ್ತಾರೆಯೇ ಇಲ್ಲವೇ ಎಂಬುದನ್ನು ಗಮನಿಸುವುದು, ಹಳ್ಳಿಯಲ್ಲಿ ಸಂದಾಯವಾಗುವ ಎಲ್ಲ ಬಗೆಯ ಕಂದಾಯಗಳನ್ನು ಒಟ್ಟು ಗೂಡಿಸಿ ಸರ್ಕಾರಕ್ಕೆ ಜಮಾ ಮಾಡುವುದು, ವರ್ಷದ ಕೊನೆಯಲ್ಲಿ ಇವುಗಳ*

ಲೆಕ್ಕಾಚಾರವನ್ನು ಫೈಸಲ್ ಮಾಡಿ, ಮುಂದಿನ ವರ್ಷದ ಕಂದಾಯವನ್ನು ಅಮಲ್ದಾರರು ನಿರ್ಧರಿಸಲು ಸಹಕರಿಸುವುದು - ಇವೆಲ್ಲವೂ ಹಳ್ಳಿಯ ಗೌಡನ ಜವಾಬ್ದಾರಿಗಳು. ಆದರೆ ರೈತರು ಕಟ್ಟಿದ ಕಂದಾಯದ ಹಣದಲ್ಲಿ ಸಾಕಷ್ಟು ಪಾಲು ಸರ್ಕಾರದ ಖಜಾನೆಗೆ ಜಮೆಯಾಗದೆ ಗುಟ್ಟಾಗಿ ಗೌಡ ಮತ್ತು ಶಾನುಭೋಗದಲ್ಲಿ ಹಂಚಿಕೆಯಾಗುತ್ತದೆ. ಇವರುಗಳ ಅಧಿಕಾರವು ವಂಶಪಾರಂಪರ್ಯವಾಗಿ ಮುಂದುವರೆಯುವುದರಿಂದ ಸ್ವಭಾವತಃ ಭೀರುಗಳಾದ ರೈತರು ಇಂತಹ ಬಲಾಢ್ಯರನ್ನು ಎದುರಿಸಲು ಅಂಜಿ ತಗ್ಗಿ ಬಗ್ಗಿ ನಡೆಯುತ್ತಾರೆ. ಏಕೆಂದರೆ ಹಳ್ಳಿಯ ಕಂದಾಯವನ್ನು ಒಟ್ಟು ಮಾಡುವ ಜವಾಬ್ದಾರಿಯು ಸಂಪೂರ್ಣವಾಗಿ ಗೌಡನದಾಗಿದ್ದು ಬಹುತೇಕ ಸಂದರ್ಭಗಳಲ್ಲಿ ರೈತರು ಸಕಾಲಕ್ಕೆ ಹಣವನ್ನು ಪಾವತಿಸಲಾಗದೆ ಹೆಚ್ಚಿನ ಕಾಲಾವಕಾಶವನ್ನು ಕೋರಲು ಅವನಲ್ಲಿಗೆ ಹೋಗಬೇಕಾಗುತ್ತದೆ. ಗೌಡನನ್ನು ಯಾರಾದರೂ ಎದುರು ಹಾಕಿಕೊಂಡಲ್ಲಿ ಅಂತಹ ರೈತನ ಕಂದಾಯದ ಪ್ರಮಾಣ ಇದ್ದಕ್ಕಿದ್ದಂತೆ ಹೆಚ್ಚುತ್ತದೆ, ಅವನ ಮನೆಮಠ, ದನಕರುಗಳು ಅತಿ ಕಡಿಮೆ ಬೆಲೆಗೆ ಹರಾಜಾಗಿ ಅವನು ಸಂಪೂರ್ಣವಾಗಿ ಅದನ್ನು ಕಟ್ಟಲಾಗದಾಗ ನಿರ್ನಾಮವಾಗುತ್ತಾನೆ. ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾದಷ್ಟೂ ಗೌಡ, ಶಾನುಭೋಗ ಮುಂತಾದ ಅಧಿಕಾರಿಗಳು ಕೆಂಗಣ್ಣಿಗೆ ಸಿಲುಕದಂತೆ ಬದುಕಲು ಯತ್ನಿಸುತ್ತಾರೆ..." [1]

ಆಡಳಿತದಲ್ಲಿ ದಕ್ಷತೆ ಇಲ್ಲದಿದ್ದಲ್ಲಿ ಸರ್ಕಾರಿ ಯಂತ್ರ ಹೇಗೆ ಕುಸಿಯುತ್ತದೆ ಎಂಬುದಕ್ಕೆ ನಿದರ್ಶನ ವನ್ನು ಮುಮ್ಮಡಿಯವರ ಆಡಳಿತದ ಸಂದರ್ಭದಿಂದ ಹೀಗೆ ನಿರೂಪಿಸಲಾಗಿದೆ.

"…. ಮಹಾರಾಜರ ಆಡಳಿತದ ಕೊನೆಯ ದಿನಗಳಲ್ಲಿ ಸರ್ಕಾರದ ಬಹುಮಟ್ಟಿನ ಅಧಿಕಾರವು ಮಹಾರಾಜರ ಆಪ್ತರ ಹಾಗೂ ಅಧಿಕಾರಿಗಳ ಪಾಲಾಯಿತು. ಬಹುತೇಕ ಸಂದರ್ಭಗಳಲ್ಲಿ ಅದು ಬಳಕೆಯಾದದ್ದು ಜನರನ್ನು ಶೋಷಿಸಲು ಅಥವಾ ತಮಗಾಗದವರ ವಿರುದ್ಧ ಸೇಡು ತೀರಿಸಿಕೊಳ್ಳಲು. ಅನೇಕ ಕೆಟ್ಟ ಕೆಲಸಗಳು ಮಾಡಿ ಕುಪ್ರಸಿದ್ಧರಾಗಿರುವ ಅಪರಾಧಿಗಳು ಲಂಚ ಕೊಟ್ಟು ಜೈಲಿನಿಂದ ಹೊರಬರುವುದು ಮತ್ತು ಏನೂ ಅರಿಯದ ಅಮಾಯಕರು ಜೈಲು ಸೇರುವುದಂತೂ ಎಲ್ಲ ಕಡೆ ಮನೆ ಮಾತಾಗಿತ್ತು. ಬ್ರಿಟಿಷ್ ಕಮಿಷನ್ನಿನ ನೇಮಕವಾದ ಮೇಲೆ ನಡೆಸಿದ

---

1 ಪುಟ ೫೮೦ರಲ್ಲಿಯ ಅಡಿಟಿಪ್ಪಣಿಯ ಅನುವಾದ

ವಿಚಾರಣೆಯಲ್ಲಿ ಜೈಲುಗಳಲ್ಲಿ ಎಲ್ಲ ಬಗೆಯ ಆರೋಪಿಗಳನ್ನೂ ಒಟ್ಟಿಗೆ ತುಂಬಲಾಗಿದದ್ದು ಕಂಡುಬಂತು. ಅವರಲ್ಲಿ ಎಷ್ಟೋ ಮಂದಿ ಯಾವ ತಪ್ಪನ್ನೂ ಮಾಡಿರದಿದ್ದರೂ ಕೇವಲ ಅನುಮಾನದ ಮೇಲೆ ಅವರನ್ನು ಜೈಲಿಗೆ ತುಂಬಲಾಗಿತ್ತು. ಮತ್ತೆ ಕೆಲವರನ್ನು ಒಮ್ಮೆಯೂ ವಿಚಾರಣೆ ನಡೆಸದೆ ಹತ್ತಾರು ವರ್ಷಗಳ ಕಾಲ ಜೈಲಿನಲ್ಲಿ ಕೂಡಿ ಹಾಕಲಾಗಿತ್ತು...." [1]

ಈ ಅಧ್ಯಾಯದ ಎರಡನೆಯ ಭಾಗವು ಕಮಿಷನರುಗಳ ಆಡಳಿತಕ್ಕೆ ಸಂಬಂಧಿಸಿದ್ದು. ೧೮೩೧ ರಿಂದ ೧೮೫೫ರವರೆಗಿನ 'ನಿಯಮ ರಹಿತ ಸ್ಥಿತಿ' (Non-regulation System) ಮತ್ತು ೧೮೫೬ ರಿಂದ ೧೮೬೨ರವರೆಗಿನ ಹಂಗಾಮಿ ಅವಧಿಗಳಲ್ಲಿ ಕಂದಾಯವ್ಯವಸ್ಥೆಯಲ್ಲಿ ಮಾಡಲಾದ ಬದಲಾವಣೆಗಳು, ಆಡಳಿತ ವಿಭಾಗಗಳ ಪುನರ್ವಿಂಗಡಣೆ, ನ್ಯಾಯಾಂಗ ಪದ್ಧತಿಯಲ್ಲಿನ ಮಾರ್ಪಾಟುಗಳು ಮುಂತಾದವುಗಳ ವಿವರಗಳನ್ನು ಇಲ್ಲಿ ಕಾಣಬಹುದು. ೧೮೬೩ರಿಂದ ೧೮೮೧ರವರೆಗೆ ಕಾರ್ಯ ನಿರ್ವಹಿಸಿದ ಕಂದಾಯ, ಅರಣ್ಯ, ಅಬ್ಕಾರಿ, ಕಾನೂನು, ಪೋಲಿಸು, ಲೋಕೋಪಯೋಗಿ, ಸಾರ್ವಜನಿಕ ಶಿಕ್ಷಣ, ವೈದ್ಯಕೀಯ, ಹಣಕಾಸು, ರೈಲ್ವೆ ಮುಂತಾದ ಪ್ರತಿಯೊಂದು ಇಲಾಖೆಯ ಕಾರ್ಯವೈಖರಿಯನ್ನು ಪ್ರತ್ಯೇಕವಾಗಿ ಇಲ್ಲಿ ವಿವರಿಸಲಾಗಿದೆ. ಅಧ್ಯಾಯದ ಕಡೆಯಲ್ಲಿ ಚಾಮರಾಜ ಒಡೆಯರ್‌ರವರಿಗೆ ೧೮೮೧ರಲ್ಲಿ ಸಂಸ್ಥಾನವನ್ನು ಹಸ್ತಾಂತರಿಸಿದನಂತರದ ಪರಿಸ್ಥಿತಿಗಳನ್ನು ಸ್ಥೂಲವಾಗಿ ದಾಖಲಿಸಲಾಗಿದೆ. ಈ ಎಲ್ಲ ವಿವರಗಳೂ ಆಯಾ ಇಲಾಖೆಗಳ ಸರ್ಕಾರಿ ದಪ್ತರುಗಳಲ್ಲಿ ಮತ್ತು ಇಲಾಖಾ ವರದಿಗಳಲ್ಲಿ ಕಾಣಸಿಗುತ್ತಿದ್ದುದರಿಂದ ಇವನ್ನು ಹೆಚ್ಚಾಗಿ ವಿಶ್ಲೇಷಿಸಲು ರೈಸರು ಯತ್ನಿಸಿಲ್ಲ.

ಎರಡನೆಯ ಸಂಪುಟ

ಈ ಸಂಪುಟದಲ್ಲಿ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಗಳಾದ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಹಾಸನ, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗಗಳ ಜಿಲ್ಲಾವಾರು ಮಾಹಿತಿ ಇದೆ. ಪ್ರತಿ ಜಿಲ್ಲೆಯ ವಿವರಗಳನ್ನೂ ತಲಾ ಏಳು ಅಧ್ಯಾಯಗಳಲ್ಲಿ ವರ್ಗೀಕರಿಸಲಾಗಿದ್ದು ಅವುಗಳಲ್ಲಿ ಅನೇಕ ಉಪವಿಭಾಗಗಳಿವೆ :

ಅವುಗಳೆಂದರೆ :

೧. GENERAL DESCRIPTION : Physical features; Rocks and Soils; Climate; vegetation; arboriculture; crops; horticulture; wild animals; domestic animals.

೨. HISTORY : Early legends, Gangas, Pallavas, Rastrakutas, Cholas, Hoysalas, Yadavas, Vijayanagar, etc.

---

1 ಪುಟ ೬೩೦ರಲ್ಲಿಯ ಭಾಗದ ಅನುವಾದ

೩. POPULATION : Distribution, Increases; Classes; Stock and Dwellings; Towns and Villages; Festivals and Fairs; Vital statistics diseases.

೪. TRADE : Manufactures; Arts; marts.

೫. REVENUE

೬. COMMUNICATIONS : Railways; Roads, traveller's Bunglows.

೭. GAZETTEER OF PRINCIPAL PLACES.

ಮೇಲ್ಕಂಡ ಮಾಹಿತಿಗಳನ್ನು ವಿವರಿಸುವಾಗ ಸಾಧ್ಯವಾದಷ್ಟೂ ಮಟ್ಟಿಗೆ ಮೊದಲ ಸಂಪುಟದಲ್ಲಿಯ ವಿವರಗಳು ಪುನರಾವರ್ತನೆಯಾಗದಂತೆ ಗಮನಿಸಿರುವುದು ಇಲ್ಲಿಯ ವಿಶೇಷ. ಪ್ರತಿ ಜಿಲ್ಲೆಯ ವಿವರಣೆಯ ಮೊದಲಿಗೆ ಆಯಾ ಜಿಲ್ಲೆಯ ನಕಾಶೆಯನ್ನು ಕೊಟ್ಟಿದೆ. ಅನಂತರ ಪ್ರತಿಯೊಂದು ಕ್ಷೇತ್ರದಲ್ಲಿ ಆ ಜಿಲ್ಲೆಗೇ ವಿಶಿಷ್ಟವಾದ ಮಾಹಿತಿಗಳು, ಅಂಕಿಅಂಶ ಗಳು, ಐತಿಹ್ಯಗಳು, ಜಾತ್ರೆ-ಉತ್ಸವಗಳು ಮೊದಲಾದವುಗಳನ್ನು ದಾಖಲಿಸಲಾಗಿದೆ. ಚರಿತ್ರೆಯ ವಿಭಾಗದಲ್ಲಿ ಆಯಾ ಜಿಲ್ಲೆಗಳನ್ನು ಆಳಿದ ರಾಜಮನೆತನಗಳ, ಆಡಳಿತಗಾರರ ಬಗೆಗೆ ಹೆಚ್ಚಿನ ವಿವರಗಳಿವೆ. ಉದಾಹರಣೆಗೆ ಬೆಂಗಳೂರು ಜಿಲ್ಲೆಯಲ್ಲಿ ಕೆಂಪೇಗೌಡ ಮತ್ತು ಅವನ ವಂಶಸ್ಥರು; ಕೋಲಾರ ಜಿಲ್ಲೆಯಲ್ಲಿ ಮಹಾವಲಿಗಳು, ವೈದುಂಬರು; ತುಮಕೂರು ಜಿಲ್ಲೆಯಲ್ಲಿ ಚಾಲುಕ್ಯರು, ಬಿಜಾಪುರದ ಅರಸರು, ಮೊಘಲರು, ಸಿರಾದ ಸುಬೇದಾರರು; ಮೈಸೂರು ಜಿಲ್ಲೆಯಲ್ಲಿ ಒಡೆಯರು; ಹಾಸನ ಮತ್ತು ಕಡೂರುಗಳಲ್ಲಿ ಕದಂಬರು; ಶಿವಮೊಗ್ಗದಲ್ಲಿ ಮೌರ್ಯರು, ಗುಪ್ತರು, ಶಾತವಾಹನರು, ಕದಂಬರು, ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರು, ಶಾತವಾಹನರು, ಚಿತ್ರದುರ್ಗ ಮತ್ತು ನಿಗುಗಲ್ಲಿನ ಪಾಳ್ಳೇಗಾರರು - ಇತ್ಯಾದಿ.

ವಿಷಯ ನಿರೂಪಣೆ, ವಿಶ್ಲೇಷಣೆ ಮುಂತಾದ ಸಂದರ್ಭಗಳಲ್ಲಿ ಈ ಸಂಪುಟವು ಮೊದಲನೆಯ ಸಂಪುಟವನ್ನೇ ಹೋಲುತ್ತದೆಯಾದರೂ ಕೆಲವು ಅಧ್ಯಾಯಗಳನ್ನು ಕೈಬಿಡುವ ಮೂಲಕ ಹಾಗೂ ಮತ್ತೆ ಕೆಲವು ಅಧ್ಯಾಯಗಳನ್ನು ಸೇರಿಸಿಕೊಳ್ಳುವ ಮೂಲಕ ತನ್ನದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದೆ. ಆ ರೀತಿಯಾಗಿ ಸಂಪೂರ್ಣವಾಗಿ ಕೈಬಿಡಲಾದ ಅಧ್ಯಾಯ ಗಳೆಂದರೆ Ethnography, religion, language and literature ಮತ್ತು Administration. ಈ ವಿವರಗಳನ್ನು ಸಾಮಾನ್ಯ ಸ್ವರೂಪದ್ದಾಗಿದ್ದು ಜಿಲ್ಲೆಯಿಂದ ಜಿಲ್ಲೆಗೆ ಬದಲಾಗುವುದಂತಹುವಾದ್ದರಿಂದ ಅವುಗಳನ್ನು ಪ್ರಸ್ತಾಪಿಸದೆ ಬಿಟ್ಟಿದೆ ಎಂದು ತೋರುತ್ತದೆ.[1]

1 ಆದರೂ ಇತ್ತೀಚಿನ ಜಿಲ್ಲಾ ಗೆಜೆಟಿಯರ್ ಸಂಪುಟಗಳಲ್ಲಿ ಮಾಹಿತಿಗಳನ್ನು ಸ್ವಲ್ಪ ಪ್ರಮಾಣದಲ್ಲಿಯಾದರೂ ನೀಡುವ ಪರಿಪಾಠವಿದೆ.

ಆದರೆ ಇದರಲ್ಲಿ ಹೊಸದಾಗಿ ಸೇರಿಸಲಾದ ಮೊದಲನೆಯ ಪ್ರಮುಖ ವಿಭಾಗವೆಂದರೆ Gazetter of Principal places & C., ಎಂಬುದು. ಇದರಲ್ಲಿ ಸಂಸ್ಥಾನದ ಕೆಲವು ಪ್ರಮುಖ ಸ್ಥಳಗಳಾದ ಬೆಟ್ಟೂರು, ಚಳ್ಳಕೆರೆ ಚಿತ್ರದುರ್ಗ, ದಾವಣಗೆರೆ, ದೊಡ್ಡೇರಿ, ಹರಿಹರ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಜಗಳೂರು, ಮತ್ತೋಡು, ಮೊಳಕಾಲ್ಮೂರು, ನಾಯಕನ ಹಟ್ಟಿ ಮತ್ತು ನೀರಗುಂದಗಳ ಬಗೆಗೆ ಹಾಗೂ ವೇದವತಿ ಹಗ್ಗರಿ ನದಿಗಳು, ಮಾರಿಕಣಿವೆಗಳ ಬಗೆಗೂ ವಿವರಗಳಿವೆ. ಆಯ್ದುಕೊಂಡ ಸ್ಥಳವು ಜಿಲ್ಲೆಯ ಅಥವಾ ತಾಲ್ಲೂಕಿನ ಕೇಂದ್ರ ಸ್ಥಳವಾದರೆ ಮೊದಲಿಗೆ ಆ ಒಟ್ಟು ಪ್ರಾಂತ್ಯದ ವಿವರಗಳನ್ನು ಮೊದಲಿಗೆ ಕೊಟ್ಟು ಅನಂತರ ಅದೇ ಹೆಸರಿನ ಆ ಊರಿನ ಮಾಹಿತಿಯನ್ನು ಕೊಟ್ಟಿದೆ. ಉದಾಹರಣೆಗೆ: ದಾವಣಗೆರೆ ತಾಲ್ಲೂಕು ಮತ್ತು ದಾವಣಗೆರೆ ಪಟ್ಟಣ, ಚಿತ್ರದುರ್ಗ ಮತ್ತು ಚಿತ್ರದುರ್ಗ ಊರು. ಹೀಗೆ ತಾಲ್ಲೂಕು ಅಥವಾ ಜಿಲ್ಲೆಗಳ ವಿವರವನ್ನು ಕೊಡುವಾಗಲೂ ಮೊದಲಿಗೆ ಆಯಾ ಸ್ಥಳದ ಅಕ್ಷಾಂಶ ರೇಖಾಂಶ, ಮುಖ್ಯಸ್ಥಳ ಅಥವಾ ರಸ್ತೆಯಿಂದ ದೂರ, ಜನಸಂಖ್ಯೆ ಮತ್ತು ಸಂಕ್ಷಿಪ್ತ ಇತಿಹಾಸ ಕಂದಾಯದ ವಿವರಗಳು, ಮಳೆಯ ಪ್ರಮಾಣ ಇತ್ಯಾದಿಗಳನ್ನು ನೀಡಲಾಗಿದೆ. ಚಿಕ್ಕಊರಿನ ಬಗೆಗಾದರೆ ಅದರ ತಾಲ್ಲೂಕು ಕೇಂದ್ರ, ಸಮೀಪದ ದೊಡ್ಡ ಪಟ್ಟಣಗಳನ್ನು, ಹಾಗೂ ಜನಸಂಖ್ಯೆಯನ್ನು ಮೊದಲಿಗೆ ನಮೂದಿಸಿ ಅನಂತರ ಅಲ್ಲಿಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುವುದು ರೈಸರು ಅನುಸರಿಸಿದ ಕ್ರಮ. ಉದಾಹರಣೆಗೆ: Betar or Beture : A village in Davanagere taluq. 2 miles north of Karba population, 1, 183. It appear to have been the old capital of principality. At the end of the 13th century it was taken by the Devagiri general and made the seat of government during the ascendancy of yadeva kings of devagiri over the northern parts of the Hoysala dominions.[1]

ರೈಸರು ರೂಪಿಸಿರುವ ಈ ಮಾದರಿಯನ್ನೇ ಈಗಿನ ಗೆಜೆಟಿಯರುಗಳಲ್ಲಿಯೂ ಯಥಾವತ್ತಾಗಿ ಅನುಸರಿಸಲಾಗುತ್ತಿರುವುದು ಅವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ.

ಮೊದಲನೆಯ ಸಂಪುಟದಲ್ಲಿ ಇರದಿರುವ, ಕೇವಲ ಎರಡನೆಯ ಸಂಪುಟದಲ್ಲಿರುವ ಮತ್ತೊಂದು ಅನುಬಂಧವೆಂದರೆ Glossary of Judicial and Revenue Terms ಎಂಬ ಶೀರ್ಷಿಕೆಯ ಕಾನೂನು ಮತ್ತು ಕಂದಾಯ ವಿಭಾಗಗಳ ಪಾರಿಭಾಷಿಕ ಶಬ್ದಗಳ ಅರ್ಥಕೋಶ. ಇದರಲ್ಲಿ ಆ ಕಾಲದಲ್ಲಿ ಬಳಕೆಯಲ್ಲಿದ್ದು ಈಗ ಜನಬಳಕೆಯಿಂದ ಲುಪ್ತ ವಾಗಿರುವ ಆಬಾದ್, ಐನ್‌ಜಮಾ, ಐವಾಜ್, ಆಕಾರ್‌ಬಂದ್, ಅಲಾವಿ, ಅಮರ್, ಅಮರಾಯಿ, ಅರೆ, ಬಾರಿಕ ಮುಂತಾದ ಅನೇಕ ಶಬ್ದಗಳ ಅರ್ಥವನ್ನು ನೀಡಲಾಗಿದೆ.

1 Vol II, P 512

ನಿದರ್ಶನಕ್ಕೆ Hankalu – a reaped field,

Halbannitakkta – Statement showing the grazing purchased by each individual ಇತ್ಯಾದಿ.

ಮೈಸೂರು ಅರಸರ ಕಾಲದಿಂದ ಬಳಕೆಯಲ್ಲಿದ್ದ ಅನೇಕ ಶಬ್ದಗಳ ಜೊತೆಗೆ ಮೊಘಲ್ ಮತ್ತು ಹೈದರ್ - ಟಿಪ್ಪೂರ ಆಳ್ವಿಕೆಯ ಕಾಲದಲ್ಲಿ ಸೇರ್ಪಡೆಯಾದ ಅನೇಕ ಪರ್ಶಿಯನ್ ಮತ್ತು ಅರಾಬಿಕ್ ಶಬ್ದಗಳು ಆಗಿನ ಆಡಳಿತದಲ್ಲಿ ಬಳಕೆಯಾಗುತ್ತಿದ್ದು ಈಗ ಅದು ನಿಂತು ಹೋಗಿದೆ. ಆದರೂ ತತ್ಕಾಲೀನ ದಾಖಲೆಗಳನ್ನು ಅಭ್ಯಸಿಸಲು ರೈಸರು ನೀಡಿರುವ ಈ ಪಟ್ಟಿ ಬಹಳ ಉಪಯುಕ್ತವಾಗಿದೆ.

ತನ್ನದೇ ಆದ ಕೆಲವು ವೈಶಿಷ್ಟ್ಯಗಳ ಕಾರಣದಿಂದಾಗಿ ಎರಡನೆಯ ಸಂಪುಟವು ಮೊದಲ ಸಂಪುಟದ ಮರುಪ್ರತಿಯಾಗದೇ ತನ್ನದೇ ಆದ ಸ್ವಂತಿಕೆಯನ್ನು ಉಳಿಸಿಕೊಂಡಿದೆ.

ಮೂರನೆಯ ಸಂಪುಟ

ಈ ಸಂಪುಟವು ಕೊಡಗು ಪ್ರಾಂತ್ಯದ ವಿವರಗಳನ್ನು ಒಳಗೊಂಡಿದೆ. ೧೮೭೮ರ ವೇಳೆಗೆ ಮೊದಲ ಬಾರಿಗೆ ಗೆಜೆಟಿಯರ್ ಸಂಪುಟಗಳನ್ನು ಆಯೋಜಿಸುವಾಗ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳೆರಡೂ ಬ್ರಿಟಿಷ್ ಕಮಿಷನರುಗಳ ಆಳ್ವಿಕೆಯ ಅಡಿಯಲ್ಲಿಯೇ ಇದ್ದುದರಿಂದ ಈ ಎರಡೂ ಪ್ರಾಂತ್ಯಗಳ ಮಾಹಿತಿಯೆಲ್ಲವನ್ನೂ ಮೂರು ಸಂಪುಟಗಳಲ್ಲಿ ಅಡಕಗೊಳಿಸಲು ಆಯೋಜಿಸಿ ಅದರಂತೆ ಮೂರನೆಯ ಅಧ್ಯಾಯವನ್ನು ಕೊಡಗಿಗೆ ಮೀಸಲಿಡಲಾಯಿತು. ಆದರೆ ೧೮೯೭ರಲ್ಲಿ ಸಂಪುಟಗಳನ್ನು ಪರಿಷ್ಕರಿಸುವ ವೇಳೆಗೆ ಮೈಸೂರು ಸಂಸ್ಥಾನವು ಮೈಸೂರು ಅರಸರ ಆಳ್ವಿಕೆಯಲ್ಲಿಯೂ, ಕೊಡಗು ಮದ್ರಾಸ್ ಪ್ರಾಂತ್ಯದ ಅಧೀನದಲ್ಲಿಯೂ ಇದ್ದುದರಿಂದ ಈ ಭಾಗವನ್ನು ಪುನಃ ಮುದ್ರಿಸಲಿಲ್ಲ.[1]

ವಿಷಯ ವಿಶ್ಲೇಷಣೆ :

ಪ್ರಸ್ತುತ ಸಂಪುಟದಲ್ಲಿಯ ಅಧ್ಯಾಯಗಳ ವಿಂಗಡಣೆಯು ಬಹುಮಟ್ಟಿಗೆ ಮೊದಲನೆಯ ಸಂಪುಟದಂತೆಯೇ ಇದ್ದರೂ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿದೆ. ಅವೆಂದರೆ ಮೊದಲ ಸಂಪುಟದಲ್ಲಿರುವಂತೆ Ethnology ಎಂಬ ಶೀರ್ಷಿಕೆಯ ಅಧ್ಯಾಯವಿಲ್ಲ. ಬದಲಿಗೆ ಬಹುಮಟ್ಟಿಗೆ ಅದೇ ವಿವರಗಳನ್ನು ಒಳಗೊಳ್ಳುವ Inhabitants ಎಂಬ ಅಧ್ಯಾಯವನ್ನು ಸೇರಿಸಲಾಗಿದೆ. ಹಾಗೂ ಸಂಪುಟದ ಕೊನೆಯಲ್ಲಿ ಮೈಸೂರಿನ ಎರಡನೆಯ ಸಂಪುಟ

1 ಹಾಗಾಗಿ ಈ ಸಂಪುಟದ ಪ್ರತಿಗಳು ದೊರೆಯುವುದು ಅತ್ಯಂತ ದುಷ್ಕರವಾಗಿತ್ತು. ಇತ್ತೀಚೆಗೆ ಕರ್ನಾಟಕ ಸರ್ಕಾರದ ಗೆಜೆಟಿಯರ್ ಇಲಾಖೆಯು ಇದರ ಪ್ರತಿಯೊಂದನ್ನು ಪುಣೆಯ ಡೆಕ್ಕನ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಿಂದ ಪಡೆದುಕೊಂಡು ಪುನರ್ಮುದ್ರಿಸಿದ್ದಾರೆ (೨೦೦೪).

ದಲ್ಲಿರುವಂತೆಯೇ Gazetteer of principal places ಎಂಬ ಭಾಗವನ್ನೂ ಈ ಸಂಪುಟ ದಲ್ಲಿಯೇ ಸೇರಿಸಲಾಗಿದೆ.

ಒಂದು ಪ್ರಮುಖವಾದ ಅಂಶವೆಂದರೆ ಈ ಕೃತಿಯ ಬಹುಮಟ್ಟಿನ ಬರವಣಿಗೆಯು ರೆವರೆಂಡ್ ಜಿ. ರಿಕ್ಟರ್ ಎಂಬ ಪಾದ್ರಿಯು ರಚಿಸಿ ೧೮೭೦ರಲ್ಲಿ ಪ್ರಕಟವಾಗಿರುವ Mannual of Coorg (A gazetteer of Natural features of the country and the social and the political condition of its inhabitants) ಎಂಬ ಕೃತಿಯ ಪರಿಷ್ಕರಣೆಯಾಗಿದೆ. ರಿಕ್ಟರನ ಕೃತಿಯ ಅನೇಕ ಭಾಗಗಳನ್ನು ಯಥಾವತ್ತಾಗಿ ರೈಸರು ಬಳಸಿಕೊಂಡರೂ ಸಾಕಷ್ಟು ಬದಲಾವಣೆಗಳನ್ನು ಮಾಡಿರುವುದರಿಂದ ಅದು ಅವರದೇ ಕೃತಿ ಎನ್ನುವಂತಿದೆ. ಈ ವಿಧಾನವನ್ನೇ ಮುಂದಿನ ಗೆಜ಼ೆಟಿಯರ್‌ಗಳ ಸಂಪಾದಕರೂ ಬಳಸಿದ್ದಾರೆ. ತಮ್ಮ ಹೆಸರಿನಲ್ಲಿ ಪ್ರಕಟಿಸಿರುವುದರಿಂದ ಇದು ಕೃತಿಚೌರ್ಯವಲ್ಲವೇ ಎಂಬ ಪ್ರಶ್ನೆ ಮೊದಲಿಗೆ ಮೂಡುತ್ತದೆ.

ರೈಸ್ ಗೆಜ಼ೆಟಿಯರ್ ಸಂಪುಟಗಳ ಒಟ್ಟು ಸ್ವರೂಪ

ಸುಮಾರು ೧೭೦೦ ಪುಟಗಳಿಗೂ ಹೆಚ್ಚಿನ ಈ ಮೂರು ಸಂಪುಟಗಳನ್ನು ವಿವರವಾಗಿ ಪರಿಶೀಲಿಸಿದನಂತರ ಕಂಡುಬರುವ ಕೆಲವು ಅಂಶಗಳನ್ನು ಹೀಗೆ ವಿಶ್ಲೇಷಿಸಬಹುದು :

- ಗೆಜ಼ೆಟಿಯರ್‌ನ ರಚನೆ ಇನ್ನೂ ಒಂದು ಸಂಪೂರ್ಣ ಶಾಸ್ತ್ರವಾಗಿ ಬೆಳೆಯದಿದ್ದ ಕಾಲ ಅದು. ಈ ಮೊದಲೇ ಗಮನಿಸಿದಂತೆ ಒಂದೊಂದು ಪ್ರಾಂತ್ಯದಲ್ಲಿ ಒಬ್ಬೊಬ್ಬ ಅಧಿಕಾರಿ ಒಂದೊಂದು ರೀತಿಯಲ್ಲಿ ಅವುಗಳನ್ನು ಸಂಪಾದಿಸಿದ್ದಾರೆ. ಪರಿಸ್ಥಿತಿ ಹೀಗಿದ್ದಾಗ ಗೆಜ಼ೆಟಿಯರ್ ಸಂಪಾದನೆಯ ಯಾವ ಪೂರ್ವಾನುಭವವೂ ಇರದ ರೈಸರು ಈ ಕಾರ್ಯವನ್ನು ಇಷ್ಟು ಅಚ್ಚುಕಟ್ಟಾಗಿ ಮಾಡಿದ್ದು ಹೇಗೆ! ಎಂಬ ಪ್ರಶ್ನೆ ಮೂಡುತ್ತದೆ. ಬಹುಶಃ ಅದಕ್ಕೆ ಉತ್ತರ ಈ ಕೆಲಸದಲ್ಲಿ ಅವರಿಗಿದ್ದ ಶ್ರದ್ಧೆ - ಆಸಕ್ತಿಗಳು. ಕೈಗೊಳ್ಳಬೇಕಿರುವ ಕಾರ್ಯದ ರೂಪುರೇಷೆಗಳನ್ನು ಮೊದಲಿಗೆ ಸಿದ್ಧಪಡಿಸಿಕೊಳ್ಳುವುದು, ಅದಕ್ಕೆ ಸಿದ್ಧ ಮಾದರಿ ಈಗಾಗಲೇ ಲಭ್ಯವಿದ್ದಲ್ಲಿ ಅದನ್ನು ಯಥಾವತ್ತಾಗಿ ಬಳಸಿಕೊಂಡರೂ ತಮ್ಮ ಸ್ವಂತ ಸಂಶೋಧನೆಯ ಅಥವಾ ಪರಾಮರ್ಶೆಯ ನೆರವಿನಿಂದ ಉತ್ತಮಗೊಳಿಸಿಕೊಳ್ಳುವುದು, ಸಿದ್ಧಮಾದರಿ ಲಭ್ಯವಿಲ್ಲದಿದ್ದಲ್ಲಿ ಸ್ಥೂಲವಾದ ಚಿತ್ರಣವನ್ನು ನೀಡಬಲ್ಲ ಮಾದರಿಯನ್ನು ಗಮನಿಸಿ ಅದನ್ನು ಆಧರಿಸಿ ತಮ್ಮ ಆವಶ್ಯಕತೆಗೆ ತಕ್ಕ ಚೌಕಟ್ಟನ್ನು ತಾನೇ ನಿರ್ಮಿಸಿಕೊಳ್ಳುವುದು - ಇದು ರೈಸರು ಅನುಸರಿಸಿರುವ ಮಾರ್ಗವೆಂದು ತೋರುತ್ತದೆ.
- ಗೆಜ಼ೆಟಿಯರ್‌ನ ರಚನೆಗೆ ಅವರು ಬಳಸಿಕೊಂಡ ಪೂರ್ವ ಮಾದರಿಗಳು ಬಹುಶಃ ಡಬ್ಲ್ಯೂ. ಡಬ್ಲ್ಯೂ. ಹಂಟರನಿಂದ ರಚಿತವಾದ Annals of Rural Bengal

ಎಂಬ ೨೦ ಸಂಪುಟಗಳ ಕೃತಿ, ಇದರ ಮುಂದುವರೆದ ಭಾಗವಾದ Orissa or the vicis-situdes of an Indian province under Native and British Rule ಮತ್ತು ೧೮೭೫ರ 'A statistical account of Bengal' ಎಂಬ ೨ ಸಂಪುಟಗಳ ಗ್ರಂಥ. ಈ ಮೂರೂ ಕೃತಿಗಳಲ್ಲಿ ಗೆಜ಼ೆಟಿಯರ್‌ಗಳಲ್ಲಿ ಸಾಧಾರಣವಾಗಿ ಕಂಡುಬರುವ ಭೌಗೋಳಿಕ ವಿವರ, ನದಿಗಳು, ಚರಿತ್ರೆ, ಜನಸಂಖ್ಯೆ, ಜನಗಳ ವೃತ್ತಿಗಳು, ಹೊರ ಮತ್ತು ಒಳ ವಲಸೆ, ಧರ್ಮ, ಜಾತ್ರೆ ಮತ್ತು ಹಬ್ಬಗಳು, ಊರುಗಳು ಮತ್ತು ಗ್ರಾಮಗಳು, ಜನರ ವೈವಾಹಿಕ ಸ್ಥಿತಿ, ಆಹಾರ, ವಸತಿ ಇತ್ಯಾದಿ ಅಧ್ಯಾಯಗಳಿವೆ. ಆದರೆ ಇವುಗಳಲ್ಲಿ ಅಂಕಿ ಅಂಶಗಳ ಪ್ರಮಾಣವೇ ಹೆಚ್ಚಾಗಿದ್ದು ವಿವರಣೆಯ ಭಾಗ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಬಹುಶಃ ಈ ಮಾದರಿಗಳನ್ನು ಅನುಸರಿಸಿ ರೈಸ್ ತಮ್ಮ ಸಂಪುಟಗಳನ್ನು ರೂಪಿಸಿಕೊಂಡಿದ್ದಾರೆ. ಆದರೆ ಅಂಕಿ ಅಂಶಗಳ ಭಾಗವನ್ನು ಹೆಚ್ಚಿಸದೆ ವಿವರಣೆಗೆ ಪ್ರಾಮುಖ್ಯವನ್ನು ಕೊಟ್ಟಿರುವುದರಿಂದ ಈ ಸಂಪುಟಗಳು 'ಗೆಜ಼ೆಟಿಯರ್'ಗಳು ಎನ್ನುವುದಕ್ಕಿಂತ 'ವಿಶ್ವಕೋಶ' ಎಂದು ಕರೆಯಬಹುದಾದಷ್ಟು ವಿಸ್ತಾರವಾಗಿವೆ.

- ಸಾಮಾನ್ಯವಾಗಿ ಗೆಜ಼ೆಟಿಯರುಗಳ ರಚನೆಗೆ ಹಿಂದಿನ ಗೆಜ಼ೆಟಿಯರ್ ಸಂಪುಟಗಳನ್ನು ಮತ್ತು ಸರ್ಕಾರಿ ವರದಿಗಳನ್ನು ಪ್ರಧಾನವಾಗಿ ಆಧರಿಸುವುದು ಪದ್ಧತಿ. ಆದರೆ ರೈಸರು ಗೆಜ಼ೆಟಿಯರ್‌ಗಳನ್ನು ಸಂಪಾದಿಸುವ ವೇಳೆಗೆ ಈ ಎರಡೂ ಆಕರಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿರಲಿಲ್ಲ. ಏಕೆಂದರೆ ಅಂದಿನ ಗೆಜ಼ೆಟಿಯರ್‌ಗಳಲ್ಲಿ ಹೆಚ್ಚಿನ ಮಾಹಿತಿ ಏನೇನೂ ಇರಲಿಲ್ಲ ಮತ್ತು ಸರ್ಕಾರಿ ದಾಖಲೆಗಳು ೧೮೦೦ರನಂತರ ಮಾತ್ರವೇ ಲಭ್ಯವಿದ್ದವು. ಹಾಗಾಗಿ ಅವರು ಈ ಕೊರತೆಯನ್ನು ನೀಗಿಕೊಳ್ಳಲು ಎರಡು ವಿಧಾನಗಳನ್ನು ಅನುಸರಿಸಬೇಕಾಯಿತು. ಮೊದಲನೆಯದು ಬುಕನನ್, ಬ್ರೂಸ್‌ಫೂಟ್, ಕೆಮರಾನ್ ಮುಂತಾದ ತಜ್ಞರ ಬರಹಗಳಿಗೆ ಮೊರೆ ಹೋಗುವುದು ಮತ್ತು ಸತತವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದು. ತಜ್ಞರ ಬರಹಗಳನ್ನು ಗಮನಿಸಬೇಕಾದರೆ ಅವು ಪ್ರಕಟವಾಗುವ ವಿದ್ವತ್ ಪತ್ರಿಕೆಗಳನ್ನು ಹಾಗೂ ಗ್ರಂಥಗಳನ್ನು ನಿಯತವಾಗಿ ಓದಿರಬೇಕು. ಗೆಜ಼ೆಟಿಯರ್ ಸಂಪುಟಗಳನ್ನು ಸಿದ್ಧಗೊಳಿಸಲು ರೈಸರು ಪರಾಮರ್ಶಿಸಿರುವ ಗ್ರಂಥಗಳ ಸುದೀರ್ಘವಾದ ಪಟ್ಟಿಯೊಂದನ್ನು ಅನುಬಂಧದ ರೂಪದಲ್ಲಿ ಕೊಟ್ಟಿದೆ. ಇಷ್ಟೆಲ್ಲಾ ಕೃತಿಗಳನ್ನು ರೈಸ್ ಯಾವಾಗ ಓದಿದ್ದರು? ಯಾರೊಬ್ಬರ ಸಹಾಯವೂ ಇಲ್ಲದೆ ಹೇಗೆ ಟಿಪ್ಪಣಿ ಇತ್ಯಾದಿಗಳನ್ನು ಮಾಡಿಕೊಂಡಿದ್ದರು ಎನ್ನುವುದು ಕುತೂಹಲದ, ಆದರೆ ಸದ್ಯಕ್ಕೆ

ಉತ್ತರಿಸಲು ಅಸಾಧ್ಯವಾದ ಪ್ರಶ್ನೆಯಾಗಿದೆ. ಆದರೆ ಮಾಹಿತಿಯ ಸಂಗ್ರಹಣೆಗಾಗಿ ರೈಸರು ಎಷ್ಟು ಶ್ರಮಿಸುತ್ತಿದ್ದರೆಂಬುದನ್ನು ಅವರ ಸಂಪುಟಗಳಿಂದಲೇ ಹೆಕ್ಕಿ ತೋರಿಸಬಹುದು:

ಉದಾಹರಣೆಗೆ -

೧. ಬಾಬಾಬುಡನ್ ಗಿರಿಯ ಬಗ್ಗೆ.

"........ ಬಾಬಾ ಬುಡನ್ ಗಿರಿಯ ಇತಿಹಾಸವನ್ನು ಕುರಿತಂತೆ ಬಿಜಾಪುರದ ಅರಸರ ಕಾಲದಲ್ಲಿ ರಚಿತವಾದ ಪರ್ಶಿಯನ್ ಭಾಷೆಯ ಕೃತಿಯೊಂದಿದೆ ಎಂದು ಹೇಳಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಅದನ್ನು ಯಾರೋ ಒಬ್ಬ ಅಧಿಕಾರಿ ಅದನ್ನು ಪಡೆದುಕೊಂಡು ಹೋಗಿದ್ದನಂತೆ. ಆದರೆ ಆತ ನಿಧನ ಹೊಂದಿದ್ದರಿಂದ ಈ ಕೃತಿಯನ್ನೂ ಸೇರಿದಂತೆ ಆತನ ಎಲ್ಲ ವಸ್ತುಗಳೂ ಹರಾಜಿನಲ್ಲಿ ಮಾರಾಟವಾದವು. ಈಗ ಅದು ಮಂಗಳೂರಿನಲ್ಲಿದೆ ಎಂದು ನಂಬಲಾಗಿದ್ದರೂ ನಾನು ಅದನ್ನು ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ..." [1]

೨. ಮೈಸೂರು ಸಂಸ್ಥಾನದ ಮೊತ್ತ ಮೊದಲ ಕಮೀಶನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್‌ನ ನಿವೃತ್ತಿ ಜೀವನದ ಬಗ್ಗೆ.

"...ಕಮೀಶನರ್‌ನಂತಹ ಪ್ರಮುಖವಾದ ಹುದ್ದೆಯನ್ನು ಇಷ್ಟು ಸುದೀರ್ಘವಾದ ಕಾಲ ಯಶಸ್ವಿಯಾಗಿ ನಿಭಾಯಿಸಿದ ಇಂತಹ ದೊಡ್ಡ ಅಧಿಕಾರಿಯ ಬಗೆಗೆ ಹೆಚ್ಚಿನ ಯಾವ ಮಾಹಿತಿಯನ್ನೂ ಕೊಡಲು ಸಾಧ್ಯವಾಗದ್ದಕ್ಕೆ ನಾನು ವಿಷಾದಿಸುತ್ತೇನೆ. ಐಲ್ ಆಫ್ ಮ್ಯಾನ್ ದ್ವೀಪದಿಂದ ಹಾಗೂ ಕಬ್ಬನ್ನರ ಉಳಿದ ಸ್ನೇಹಿತರಿಂದ ಮಾಹಿತಿಯನ್ನು ಸಂಗ್ರಹಿಸಲು ನಾನು ಯತ್ನಿಸಿದ ಪ್ರಯತ್ನ ವಿಫಲವಾಯಿತು. ಮತ್ತು ಅಧಿಕೃತವಾಗಿ ಬಲ್ಲವರ ಪ್ರಕಾರ ಭಾರತವನ್ನು ಬಿಟ್ಟುಹೊರಡುವ ಮುನ್ನ ತನ್ನೆಲ್ಲ ಸ್ನೇಹಿತರ ವಿರೋಧದ ನಡುವೆಯೂ ಸರ್‌ಮಾರ್ಕ್ ಉದ್ದೇಶಪೂರ್ವಕವಾಗಿ ತನ್ನಲ್ಲಿದ್ದ ಎಲ್ಲ ದಾಖಲೆಗಳನ್ನು ನಾಶಗೊಳಿಸಿದರಂತೆ..." [2]

---

1 Vol II, P 390ನೆಯ ಅಡಿಟಿಪ್ಪಣಿಯ ಅನುವಾದ

2 Vol I, P 432ನೆಯ ಅಡಿಟಿಪ್ಪಣಿಯ ಅನುವಾದ

೩. ಕೇವಲ ಪರಿಚಿತರಿಂದ ಮಾತ್ರವಲ್ಲದೆ ಅಪರಿಚಿತರೂ ರೈಸರಿಗೆ ಮಾಹಿತಿಯನ್ನು ನೀಡುತ್ತಿದ್ದರು ಎಂಬುದಕ್ಕೆ ನಿದರ್ಶನ ಕೆಳದಿ ದೊರೆಗಳ ಬಗ್ಗೆ ಅವರಿಗೆ ದೊರೆತ ಮಾಹಿತಿ.

"... ಕೆಳದಿ, ಇಕ್ಕೇರಿ ಮತ್ತು ಬಿದನೂರುಗಳಲ್ಲಿ ಇತಿಹಾಸಕ್ಕೆ ಸಂಬಂಧಿಸಿದಂತೆ ಇಲ್ಲಿ ಪ್ರಕಟಿಸಿರುವ ಕೆಲವು ಭಾಗಗಳನ್ನು ನನಗೆ ಸಂಪೂರ್ಣವಾಗಿ ಅಪರಿಚಿತರಾಗಿರುವ ಮಂಗಳೂರಿನ ಶ್ರೀ ಎಫ್. ಎಂ. ಮ್ಯಾಸ್ಕರೇನಸ್ ಎಂಬ ಮಹನೀಯರು ಕಳುಹಿಸಿಕೊಟ್ಟಿರುವ ಹಸ್ತಪ್ರತಿಯ ಒಂದು ಭಾಗದಿಂದ ಉದ್ಧರಿಸಿದ್ದೇನೆ ಮತ್ತು ಅದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಅವರು ಕೆನರಾ ಪ್ರಾಂತ್ಯದ ಇತಿಹಾಸ ಮತ್ತು ಕುತೂಹಲಕರವಾದ ಆ ಪ್ರಾಂತ್ಯದ ಇತರ ವಿವರಗಳನ್ನು ಬರೆದು ಕಳುಹಿಸಿದ್ದಾರೆ. ಅವರು ಕಳುಹಿಸಿದ ಈ ಬಗೆಗಿನ ಸೂಚನೆ ನನಗೆ ತಡವಾಗಿ ತಲುಪಿದ್ದರಿಂದ ಅದನ್ನು ಮೊದಲ ಆವೃತ್ತಿಯ ಮೂರನೆ ಸಂಪುಟದಲ್ಲಿ ಅನುಬಂಧವಾಗಿ ಸೇರಿಸಿದ್ದೇನೆ. ಈ ಬರಹದ ರಚನೆಗೆ ನಾನು ಎರಡು ಕನ್ನಡ ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದು ಅವುಗಳಲ್ಲಿ ಒಂದು ಬಿದನೂರಿನಿಂದಲೂ, ಇನ್ನೊಂದು ಕುಂದಾಪುರದಲ್ಲಿಯೂ ದೊರೆತದ್ದಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ...." [1]

೪. ಸರ್ಕಾರದ ಮಟ್ಟದಲ್ಲಿಯೇ ಮಾಹಿತಿ ದೊರೆಯದಿದ್ದಾಗ ಅವನ್ನು ಇತರ ಮೂಲಗಳಿಂದ ರೈಸ್ ಹುಡುಕಿ ತೆಗೆದದ್ದೂ ಇದೆ. ಉದಾಹರಣೆಗೆ

"...ಮೊದಲ ಆವೃತ್ತಿಯ ತಯಾರಿಕೆಯ ಕಾಲಕ್ಕೆ ನಾನು ಮೈಸೂರಿನ ಭೂ ವೈಜ್ಞಾನಿಕ ವಿವರಗಳನ್ನೂ ಕಳುಹಿಸುವಂತೆ ಭಾರತೀಯ ಭೂ ವೈಜ್ಞಾನಿಕ ಸರ್ವೇಕ್ಷಣ ಇಲಾಖೆಗೆ ಕೋರಿದಾಗ ಇನ್ನೂ ಸಂಸ್ಥಾನವನ್ನು ಸರ್ವೆ ಮಾಡಿಲ್ಲವಾದ್ದರಿಂದ ಮಾಹಿತಿ ನಮಗೆ ತಿಳಿದಿಲ್ಲ ಎಂಬ ಉತ್ತರ ಬಂದಿತು. ಹಾಗಾಗಿ ನಾನು ನನ್ನ ಮೂಲಗಳನ್ನೇ ಶೋಧಿಸಿ ಡಬ್ಲ್ಯೂ. ಓ. ಬ್ಲಾನ್‌ಫೋರ್ಡರು ಬರೆದ ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಲೇಖನಗಳನ್ನು ಪತ್ತೆ ಹಚ್ಚಿದೆ. ಬಳಿಕ ಅವುಗಳ ಮಹತ್ವ ಇಲಾಖೆಯ ಗಮನಕ್ಕೆ ಬಂದಿತು ಎಂದು ಅವರು ಹೇಳಿಕೊಂಡಿದ್ದಾರೆ..." [2]

---

1 Vol II, P 432ನೆಯ ಅಡಿಟಿಪ್ಪಣಿಯ ಅನುವಾದ

2 Vol I, P 12ನೆಯ ಅಡಿಟಿಪ್ಪಣಿಯ ಅನುವಾದ

- ಅಧಿಕೃತತೆ ರೈಸರ ಸಂಪುಟಗಳಲ್ಲಿ ಎದ್ದು ಕಾಣುವಂತಹ ಅಂಶ. ವಿಷಯ ಯಾವುದೇ ಆದರೂ ಹಾರಿಕೆಯ ಹೇಳಿಕೆಗಳನ್ನು ನೀಡದೆ ಸಾಧ್ಯವಾದಷ್ಟೂ ಸತ್ಯನಿಷ್ಠವಾಗುವಂತೆ, ಸಮತೂಕದಲ್ಲಿರುವಂತೆ ಬರವಣಿಗೆಯನ್ನು ಎಚ್ಚರಿಕೆಯಿಂದ ಅವರು ನಡೆಸಿದ್ದಾರೆ. ದಾಖಲು ಮಾಡಿದ ಪ್ರತಿ ಹೇಳಿಕೆಗೂ ಸೂಕ್ತ ಸಾಕ್ಷ್ಯಾಧಾರಗಳಿರಬೇಕು ಎಂಬ ಸ್ವಯಂ ಶಿಸ್ತನ್ನು ಅವರು ಬಹಳ ಕಟ್ಟುನಿಟ್ಟಾಗಿ ಪಾಲಿಸಿದ್ದಾರೆ. ಹಾಗಾಗಿಯೇ ರಿಕ್ಸರನ ಕೃತಿಗಿಂತಲೂ ಈ ಸಂಪುಟಗಳಲ್ಲಿ ಅಡಿಟಿಪ್ಪಣಿ ಹೆಚ್ಚು.

- ಮಾಹಿತಿಯ ಅಧಿಕೃತತೆಯ ಜೊತೆ ಜೊತೆಗೆ ರೈಸರು ರೂಢಿಸಿಕೊಂಡಿರುವ ಮತ್ತೊಂದು ಪ್ರಮುಖ ಶಿಸ್ತೆಂದರೆ ಭಾಷೆಯ ನಿರಾಡಂಬರತೆ. ಗೆಜೆಟಿಯರನಂತಹ ಕೃತಿಗಳಲ್ಲಿ ವಿಷಯದ ನಿರೂಪಣೆ ಪ್ರಮುಖವೇ ಹೊರತೂ ಆಲಂಕಾರಿಕವಾದ ಭಾಷೆಯಾಗಲೀ ಸ್ವಂತ ಅಭಿಪ್ರಾಯದ ಪ್ರಕಟಣೆಯಾಗಲೀ ಅಲ್ಲ. ಹಾಗಾಗಿ ಬಹುಮಟ್ಟಿಗೆ ರೈಸರ ಬರವಣಿಗೆಯಲ್ಲಿ ಸ್ಪಷ್ಟತೆಗೆ ಮೊದಲ ಆದ್ಯತೆ ಇರುವುದು ಕಂಡುಬರುತ್ತದೆ. ನಿದರ್ಶನಕ್ಕೆ ಮೆಥಾಡಿಸ್ಟ್ ಚರ್ಚಿಗೆ ಸಂಬಂಧಿಸಿದಂತೆ ಅವರು ಬರೆದಿರುವ ಮಾತುಗಳಿವು :

  > *".... Methodist Episcopal Church : Since 1880 two American Methodist Episcopal churches have been established in Bangalore, Chiefly for the Anglo-Indian and European population and the Baldwin schools for boys and girls are important institutions maintained by this mission. There is also an orphanage at Kolar..."* [1]

  ಹಾಗೆಂದ ಮಾತ್ರಕ್ಕೆ ಅಲಂಕಾರಿಕ, ಕಾವ್ಯಮಯವಾದ ಭಾಷೆ ರೈಸರಿಗೆ ಬರುತ್ತಿರಲಿಲ್ಲವೆಂದಲ್ಲ. ಅದರ ನಿದರ್ಶನಗಳನ್ನು ಮೊದಲ ಸಂಪುಟ ಪು. ೬೩ ರಲ್ಲಿನ ಋತುಗಳ ವರ್ಣನೆಯಲ್ಲಿ, ಪುಟ ೨೭೧ರಲ್ಲಿನ ದಂಡಕಾರಣ್ಯದ ವರ್ಣನೆಯಲ್ಲಿ ನೋಡಬಹುದು.

- ಈ ಗೆಜೆಟಿಯರ್‌ನ ರಚನೆಯ ಉದ್ದೇಶ ಮೈಸೂರು ಸಂಸ್ಥಾನದ ವಿವರಗಳನ್ನು ದಾಖಲಿಸುವುದಾಗಿದ್ದರೂ ರೈಸ್ ಈ ಭೌಗೋಳಿಕ ಎಲ್ಲೆಯನ್ನು ಮೀರಿದ ಮಾಹಿತಿಯನ್ನೂ ಇಲ್ಲಿ ಪ್ರಾಸಂಗಿಕವಾಗಿ ಸಂಗ್ರಹಿಸಿದ್ದಾರೆ. ಉದಾಹರಣೆಗೆ ಬಿಜಾಪುರದ

1 Vol I, P 487.

ಅರಸರ ವಿವರಗಳು, ಅವರ ಆಳ್ವಿಕೆಯ ಕಾಲದಲ್ಲಿ ಮೈಸೂರಿನಲ್ಲಾದ ವಾಸ್ತುಶಿಲ್ಪದಲ್ಲಿನ ಬದಲಾವಣೆಗಳು, ಪಲ್ಲವ, ಚೋಳ ಮುಂತಾದ ಹೊರರಾಜ್ಯದ ರಾಜಮನೆತನಗಳ ವಿವರಗಳು ಮುಂತಾದವು. ಕನ್ನಡ ಸಾಹಿತ್ಯದ ಚಾರಿತ್ರೆಯನ್ನು ವಿವರಿಸುವಾಗ ಕೇವಲ ಮೈಸೂರಿನ ಕವಿಗಳಿಗಷ್ಟೇ ಸೀಮಿತವಾಗದೆ ಸಮಸ್ತ ಕರ್ನಾಟಕ ಕವಿಗಳೆಲ್ಲರನ್ನೂ ಪರಿಗಣಿಸಿರುವುದು ಪ್ರಮುಖವಾದ ಅಂಶ.

- ವಿಷಯಗಳ ಸ್ಪಷ್ಟ ನಿರೂಪಣೆಗಾಗಿ ನಕಾಶೆಗಳನ್ನು ಮತ್ತು ರೇಖಾಚಿತ್ರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡಿರುವುದು ರೈಸರ ಹೆಗ್ಗಳಿಕೆಯಾಗಿದೆ. ಮೊದಲ ಸಂಪುಟದಲ್ಲಿ ಎಂಟು ಭೂಪಟಗಳಿವೆ. ಅದರಲ್ಲಿ ಕೇವಲ ೧೯ನೇ ಶತಮಾನದ ಭೌಗೋಳಿಕ ಚಿತ್ರಣ ನೀಡುವ ಭೂಪಟಗಳಲ್ಲದೆ ಕ್ರಿ.ಶ. ೪೫೦ರ, ೭೦೫೦(?), ೧೦೫೦ ಮತ್ತು ೧೬೨೫ರಷ್ಟು ಪ್ರಾಚೀನವಾದ ಈ ಪ್ರದೇಶಗಳ ಚಿತ್ರಣವನ್ನೂ ನೀಡಿರುವುದು ವಿಶೇಷ. ಬಣ್ಣದ ಮುದ್ರಣವಿರದಿದ್ದ ಆಕಾಲದಲ್ಲಿ ಕೈಗಳಿಂದಲೇ ಜಲವರ್ಣದಲ್ಲಿ ಭೂಪಟಗಳಲ್ಲಿ ಬಣ್ಣವನ್ನು ತುಂಬಿರುವುದು ಕಂಡುಬರುತ್ತದೆ! ಎರಡನೆಯ ಸಂಪುಟದಲ್ಲಿ ಎಂಟು ಭೂಪಟಗಳೂ, ಮೈಸೂರು ಮುಂತಾದ ಪ್ರಮುಖ ನಗರಗಳ ನಾಲ್ಕು ನಕ್ಷೆಗಳೂ ಇವೆ. ಇಷ್ಟೇ ಅಲ್ಲದೆ ಮೊದಲ ಸಂಪುಟದಲ್ಲಿ ಮೈಸೂರು ನಾಣ್ಯದ ಮಾದರಿಗಳ ಛಾಯಾಚಿತ್ರಗಳೂ, ಮೂರನೆಯ ಸಂಪುಟದಲ್ಲಿ ಕೀಟಗಳ ರೇಖಾಚಿತ್ರಗಳೂ ಇರುವುದು ವಿಶೇಷ.

- ಗೆಜೆಟಿಯರ್‌ಗಳ ರಚನೆಯ ಹಿಂದೆ ರೈಸರ ಮನೋಧರ್ಮ ಏನಿತ್ತು ಎಂಬ ಪ್ರಶ್ನೆ ಪರೀಕ್ಷಾರ್ಹ. ಏಕೆಂದರೆ ಕೇವಲ ಸರ್ಕಾರ ಅಥವಾ ಅಧಿಕಾರಿಗಳನ್ನು ತೃಪ್ತಿಪಡಿಸುವಂತೆ ಇದ್ದಲ್ಲಿ ಕೃತಿ ಇಷ್ಟು ನಿಷ್ಪಕ್ಷಪಾತವಾಗಿರುತ್ತಿರಲಿಲ್ಲ. ಹಿಂದಿನ ಆಡಳಿತಗಾರರಾದ ಹೈದರ್-ಟಿಪ್ಪೂ, ಅನಂತರದ ಕಮಿಷನರರು, ಕೃತಿ ರಚನೆಯ ಕಾಲದಲ್ಲಿ ಆಳ್ವಿಕೆ ನಡೆಸುತ್ತಿದ್ದ ರಾಜ ಮನೆತನದವರು ಮೂವರು ಬಗೆಗೂ ಇಲ್ಲಿ ಸಮತೂಕದ ವಿಷಯ ವಿಶ್ಲೇಷಣೆ, ನಿರೂಪಣೆಗಳಿವೆ. ಹಾಗಾಗಿಯೇ ಹಿಂದೆ ಪ್ರಸ್ತಾಪಿಸಿದಂತೆ ಫಸ್ಟ್ ಕೌನ್ಸಿಲರ್ ಆದ ವಿ.ಪಿ. ಮಾಧವರಾಯರು 'ಗೆಜೆಟಿಯರ್‌ನ ಬರವಣಿಗೆ ಒಬ್ಬ ಸರ್ಕಾರಿ ಅಧಿಕಾರಿ ಬರೆದ ಬರಹದಂತಿಲ್ಲ'ವೆಂದು ಆಪಾದಿಸಿದ್ದೂ ಇದೆ. ಬಹುಶಃ ಸರ್ಕಾರದ ಧ್ಯೇಯ ಧೋರಣೆಗಳನ್ನು ಇನ್ನಷ್ಟು ಹೆಚ್ಚು ಒತ್ತುಕೊಟ್ಟು ಬರೆಯುವ ಅಗತ್ಯವಿತ್ತು ಎಂದು ಅವರು ಭಾವಿಸಿದ್ದರೆಂದು ತೋರುತ್ತದೆ. ಆದರೆ ಈ ಮೂರೂ ಸಂಪುಟಗಳನ್ನು ಅಭ್ಯಸಿಸಿದನಂತರ ಸ್ಪಷ್ಟವಾಗುವ ಅಂಶವೆಂದರೆ ರೈಸರ ನಿಷ್ಠೆ ಇದ್ದದ್ದು ಒಂದು ನಿರ್ದಿಷ್ಟ ರಾಜವಂಶ, ಅಥವಾ ನಿರ್ದಿಷ್ಟ ಅಧಿಕಾರಿಯ ಬಗೆಗಲ್ಲ. ಬದಲಿಗೆ

ಮೈಸೂರು ಸಂಸ್ಥಾನ ಮತ್ತು ಅದರ ಜನತೆಯ ಕಡೆಗೆ. ಹಾಗಾಗಿಯೇ ಮೊದಲ ಸಂಪುಟದ ಉದ್ಯಮಗಳನ್ನು ಕುರಿತಾದ ಅಧ್ಯಾಯದಲ್ಲಿ ಕೋಲಾರದ ಚಿನ್ನದ ಗಣಿಯ ಉತ್ಪತ್ತಿ ಇತ್ಯಾದಿಗಳನ್ನು ವಿವರಿಸಿದನಂತರ

> *"....ಮೇಲಿನ ಅಂಕಿ ಸಂಖ್ಯೆಗಳು ಸಾಕಷ್ಟು ಕುತೂಹಲವನ್ನು ಹುಟ್ಟಿಸುತ್ತವೆ ನಿಜ. ಆದರೆ ಈ ಗಣಿಗಳಿಂದ ಸಂಸ್ಥಾನಕ್ಕೆ ಸ್ವಾಭಾವಿಕವಾಗಿ ಅನುಕೂಲವಾಗಿದೆಯಾದರೂ ಪ್ರಮುಖವಾದ ವ್ಯವಹಾರಗಳೆಲ್ಲವೂ ನಡೆಯುವುದು ಇಂಗ್ಲೆಂಡಿನಲ್ಲಿ, ಅಲ್ಲಿಯೇ ಗಣಿಗಾರಿಕೆಗೆ ಬೇಕಾದ ಹಣ ವನ್ನು ಸಂಗ್ರಹಿಸಲಾಗುತ್ತದೆ ಮತ್ತು ಇಲ್ಲಿನ ಚಿನ್ನವೆಲ್ಲವೂ ಅಲ್ಲಿಗೇ ತಲುಪುತ್ತದೆ. ಇಲ್ಲಿಯ ಷೇರುಗಳ ವ್ಯವಹಾರವೂ ಕೂಡಾ ಲಂಡನ್ನಿನ ಷೇರು ಮಾರುಕಟ್ಟೆಯಲ್ಲಿಯೇ ನಡೆಯುತ್ತದೆ ಮತ್ತು ಬಹುಶಃ ಮೈಸೂರು ಸರ್ಕಾರದ ಭಾಗವನ್ನು ಬಿಟ್ಟರೆ ಬಹಳ ಅಲ್ಪಪ್ರಮಾಣದ ಷೇರುಗಳು ಸ್ಥಳೀಯರಲ್ಲಿವೆ. ಇಲ್ಲಿಯ ಕ್ಯಾಪ್ಟನ್ನರು, ಮತ್ತಿತರ ಅಧಿಕಾರಿ ಗಳೆಲ್ಲರೂ ಇಂಗ್ಲೀಷರು ಮತ್ತು ಕೂಲಿಗಾಳುಗಳಲ್ಲಿ ಹೆಚ್ಚಿನವರು ಇಟಾಲಿಯನ್ನರು. ಒಂದು ಕಾಲದಲ್ಲಿ ಪಶ್ಚಿಮ ಕರಾವಳಿಯ ಕಡೆಯಿಂದ ಬಂದ ಮಾಪಿಳ್ಳೆಗಳು ಸ್ಥಳೀಯ ಕೂಲಿಕಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ರಾದರೂ ಈಗ ಪರಿಸ್ಥಿತಿ ಹಾಗಿಲ್ಲ...."* [1]

ಎಂದು ಹೇಳುವ ಮೂಲಕ ಪರೋಕ್ಷವಾಗಿ ಬ್ರಿಟಿಷ್ ಮತ್ತು ಮೈಸೂರು ಸರ್ಕಾರಗಳು ಜಂಟಿಯಾಗಿ ಇಲ್ಲಿನ ಸ್ವಾಭಾವಿಕ ಸಂಪತ್ತನ್ನು ಇಲ್ಲಿಯ ಜನರಿಗೆ ಬಳಸಲು ನೀಡದೆ ವಿದೇಶಗಳಿಗೆ ಸಾಗಿಸಿ ಹಣಗಳಿಸುತ್ತಿವೆ, ಹಾಗಾಗಿ ಸ್ಥಳೀಯ ರಿಗೆ ಇದರಿಂದ ಏನೂ ಲಾಭವಾಗುತ್ತಿಲ್ಲ ಎಂದು ಸೂಚಿಸುವ ದಿಟ್ಟತನವನ್ನು ತೋರಿದ್ದಾರೆ.

ಪ್ರತಿಕ್ರಿಯೆ

ರೈಸ್ ಸಂಪಾದಿತ ಗೆಜೆಟಿಯರ್ ಸಂಪುಟಗಳು ನಾಡಿನದ್ಯಂತ ವಿದ್ವಾಂಸರ ಮತ್ತು ಆಡಳಿತಗಾರರ ಮೆಚ್ಚುಗೆಗೆ ಪಾತ್ರವಾದವು. ಇಂಪೀರಿಯಲ್ ಗೆಜೆಟಿಯರ್ ಸರಣಿಯ ಪ್ರಧಾನ ಸಂಪಾದಕನಾದ ಡಬ್ಲ್ಯೂ. ಡಬ್ಲ್ಯೂ. ಹಂಟರನಂತೂ ರೈಸ್ ಕಾರ್ಯದಕ್ಷತೆಯಿಂದ ಅತ್ಯಂತ ಸುಪ್ರೀತನಾಗಿದ್ದ. ೧೮೭೪ರಲ್ಲಿ ಮೊದಲ ಬಾರಿಗೆ ಆತ ಬೆಂಗಳೂರಿಗೆ ಭೇಟಿನೀಡಿ ದ್ದಾಗ ರೈಸ್ ಆತನಿಗೆ ಗೆಜೆಟಿಯರ್‌ನ ರಚನೆಗಾಗಿ ತಾವು ಮಾಡಿಕೊಂಡಿದ್ದ ಸಿದ್ಧತೆಗಳನ್ನು

---

1 Vol I, P 528

ವಿವರಿಸಿದ್ದರು. ೧೮೭೭ರಲ್ಲಿ ಮತ್ತು ಆತ ಬೆಂಗಳೂರಿಗೆ ಬರುವ ವೇಳೆಗೆ ಬಹುಮಟ್ಟಿಗೆ ಮುದ್ರಣದ ಕಾರ್ಯ ಮುಗಿದಿತ್ತು. ಇದರಿಂದ ಸಂತುಷ್ಟನಾದ ಆತ ಗೌರ್ನರ್ ಜನರಲ್ ಇನ್ ಕೌನ್ಸಿಲ್‌ರಿಗೆ ಸಲ್ಲಿಸಿದ ವರದಿಯಲ್ಲಿ ಹೀಗೆ ಬರೆದಿದ್ದಾನೆ :

> *".... Although the population of Mysore is not very great, the imperfect means of communication have rendered the task of collecting and personally checking the district materials a laborious one. Mr. L. Rice, the provincial compiler, and now also Director of Public Instruction, has done this difficult work with a methodical industry deserving of the highest prize. On each of my tours of inspection I had occasions to comment on the excellence of his system. His now almost completed volumes have been produced at a minimum cost to government, and combine careful personal research with ample administrative details....."* [1]

ಹಂಟರನ ಈ ಅಭಿಪ್ರಾಯದಿಂದ ಪ್ರಭಾವಿತನಾದ ಆಗಿನ ಪ್ರಭಾರಿ ರೆಸಿಡೆಂಟ ಪಿಂದನಾಗಿದ್ದ ಡಾಲಿಯು ರೈಸರಿಗೆ ನಿಗದಿಪಡಿಸಿದ್ದ ೨೫೦೦ ರೂ.ಗಳ ಗೌರವಧನವನ್ನು ೫ ಸಾವಿರ ರೂ.ಗಳಿಗೆ ಹೆಚ್ಚಿಸಿದ.[2]

ಮೊದಲ ಆವೃತ್ತಿಯ ಸಂಪುಟಗಳು ಹೊರಬಂದಾಗಲೇ ಪತ್ರಿಕೆಗಳಲ್ಲಿ ಉತ್ತೇಜಕವಾದ ಪ್ರತಿಕ್ರಿಯೆಗಳು ಪ್ರಕಟವಾದವು.

ಅವುಗಳಲ್ಲಿ ಕೆಲವೆಂದರೆ :

"... Mr. Rice has done his work well. He combines a comprehensive grasp of his entire subject with the faculty of lucid expression and also a careful attention to details..." – *Academy*

"... A mine of information about the country. Evidently written Conamore, it shows great care and research, great knowledge of the language and literature of the country and a through appreciation of the subject in hand..." – *Culcutta Review*

---

1 K.S.A. G.M. 57 of 1891

2 ಈ ಸಂಬಂಧದ ಹಂಟರನ ಮೂಲಪತ್ರವನ್ನು ಅನುಬಂಧದಲ್ಲಿ ಕಾಣಬಹುದು.

"...Mr. Rice's Gazetteers and Mysore and Coorg and other works – writings and collections – are solid production of inestimable value, already regarded as standards, and sure to be regarded as such for generations to come..." – *Bangalore Spectator*

ಎರಡನೇ ಆವೃತ್ತಿಯು ಹೊರಬಂದಾಗಲೂ ಇಂತಹವೇ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ನಿದರ್ಶನಕ್ಕೆ

"...A second edition of Mr. Rice's admirable Gazetteer. The first edition was published more than twenty years ago, and the immense. Progress made by the state in the interval fully justifies bringing the work up to date..." – *Pioneer*

"...Complete without being defuse and accurate without being dry..." – *Madras Mail*

"...The name of the author is sufficient guarantee for its excellence and accuracy..." – *Athenaeum*

ಇಷ್ಟೇ ಅಲ್ಲದೆ ಲಂಡನ್ನಿನ ಟೈಮ್ಸ್, ಸ್ಪೆಕ್ಟೇಟರ್ ಮುಂತಾದ ಪತ್ರಿಕೆಗಳು ಮತ್ತು ಶೇಷಾದ್ರಿ ಅಯ್ಯರ್, ಫಾದರ್ ಟಿಬಾರ್ಡ್ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್, ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಮುಂತಾದ ಅಧಿಕಾರಿಗಳು ಈ ಸಂಪುಟಗಳ ಹಿರಿಮೆಯನ್ನು ಶ್ಲಾಘಿಸಿದ್ದಾರೆ.[1]

ಪರಿಣಾಮ

ರೈಸ್ ಸಂಪುಟಗಳು ಮುಂದಿನ ಗೆಜೆಟಿಯರ್ ಸಂಪಾದಕರುಗಳ ಮೇಲೆ ಮತ್ತು ಚರಿತ್ರಕಾರರ ಮೇಲೆ ಬೀರಿರುವ ಪ್ರಭಾವ ಅಪಾರ. ರೈಸರು ರೂಪಿಸಿರುವ ಮಾದರಿಯಲ್ಲಿಯೇ ಮುಂದೆ ೧೯೨೦ರ ದಶಕದಲ್ಲಿ ಸಿ. ಹಯವದನರಾಯರು, ಮೈಸೂರು ಗೆಜೆಟಿಯರ್‌ನ ಐದು ಸಂಪುಟಗಳ ಬೃಹತ್ ಸರಣಿಯನ್ನು ಹೊರತಂದರು. ಈ ಸಂಪುಟಗಳನ್ನು ಸಿದ್ಧಪಡಿಸುವ ಕಾಲಕ್ಕೆ ರೈಸರು ಇಂಗ್ಲೆಂಡಿನಲ್ಲಿದ್ದರಾದರೂ ಅನೇಕ ಚಾರಿತ್ರಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಟಿಪ್ಪಣಿಗಳನ್ನು ಅಲ್ಲಿಂದಲೇ ಬರೆದು ಕಳುಹಿಸುವ ಮೂಲಕ ತಮ್ಮ ಪ್ರೀತಿಯನ್ನು ತೋರಿದ್ದಾರೆ ಎಂದು ಹಯವದನರಾಯರು ತಮ್ಮ ಮೊದಲ ಸಂಪುಟದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.[2] ಮುಂದೆ ಸ್ವಾತಂತ್ರ್ಯಾನಂತರ ಅಲ್ಪ ಸ್ವಲ್ಪ

1 ಮೇಲಿನ ಎಲ್ಲ ಪತ್ರಿಕಾ ಹೇಳಿಕೆಗಳನ್ನು 'work by B. Lewis Rice and Extracts from opinions theorem' ಎಂಬ ಖಾಸಗಿ ಪ್ರಸರಣದ ಪುಸ್ತಿಕೆಯಿಂದ ಪಡೆಯಲಾಗಿದೆ.

2 Hayavadana Rao, C., **Mysore Gazetter**, Vol. I., P. VI. 1927

ಮಾರ್ಪಾಡುಗಳೊಂದಿಗೆ ಇದೇ ಮಾದರಿಯಲ್ಲಿ ೧೯೬೦ರ ದಶಕದಲ್ಲಿ ಕೆ. ಅಭಿಶಂಕರ್ ರವರು ಮತ್ತು ೧೯೮೦ರ ದಶಕದಲ್ಲಿ ಸೂರ್ಯನಾಥ ಯು. ಕಾಮತ್‌ರವರೂ ಗೆಜ಼ೆಟಿಯರ್ ಸಂಪುಟಗಳನ್ನು ಸಿದ್ಧಪಡಿಸಿದ್ದು ಈಗಲೂ ಇದೇ ಪದ್ಧತಿ ಮುಂದುವರೆಯುತ್ತಿದೆ. (ಕರ್ನಾಟಕ ಸರ್ಕಾರದ ಗೆಜ಼ೆಟಿಯರ್ ಇಲಾಖೆಯು ೧೯೯೬ರ ಜೂನ್ ೨೭ರಂದು ರೈಸರ ಜನ್ಮದಿನವನ್ನು ಗೆಜ಼ೆಟಿಯರ್ ದಿನ ಎಂಬ ಹೆಸರಿನಿಂದ ಆಚರಿಸಿತು) ಅಷ್ಟೇ ಅಲ್ಲದೆ ಎಂ. ಶಾಮರಾಯರ 'Modern Mysore' ನ ಸಂಪುಟಗಳು, ೧೯೭೦ರಲ್ಲಿ ಮೈಸೂರು ಸರ್ಕಾರವು ಪ್ರಕಟಿಸಿದ 'Karnataka through the ages' ಸಂಪುಟಗಳೂ ಇದೇ ಮಾದರಿಯಲ್ಲಿ ಸಿದ್ಧಗೊಂಡವಾಗಿವೆ. ಅನೇಕ ಜನ ಇತಿಹಾಸಕಾರರು ಈ ಸಂಪುಟ ಗಳಲ್ಲಿಯ ವಿವಿಧ ವಿಷಯಗಳನ್ನು ಆರಿಸಿಕೊಂಡು ಸ್ವತಂತ್ರವಾದ ಕೃತಿ-ಲೇಖನಗಳನ್ನು ರಚಿಸಿದ್ದಾರೆ. ರೈಸ್ ಸಂಪುಟಗಳು ಚರಿತ್ರಕಾರರಿಗೆ, ಅಭ್ಯಾಸಿಗಳಿಗೆ ಮತ್ತು ಆಡಳಿತಗಾರರಿಗೆ ಅತ್ಯಂತ ಅಗತ್ಯವಾಗಿ ಬೇಕಾದ ಆಕರ ಸಾಮಗ್ರಿಯಾಗಿದೆ ಎನ್ನುವುದಕ್ಕೆ ೨೦೦೧ನೇ ಇಸವಿ ಯಲ್ಲಿ ದೆಹಲಿಯ ಏಷ್ಯನ್ ಎಜುಕೇಷನ್ ಸರ್ವಿಸ್‌ನಿಂದ ಮತ್ತು ೨೦೦೫ರಲ್ಲಿ ಕರ್ನಾಟಕ ಸರ್ಕಾರದ ಗೆಜ಼ೆಟಿಯರ್ ಇಲಾಖೆಯಿಂದ ಮರುಮುದ್ರಿತವಾಗಿರುವುದೇ ಸಾಕ್ಷಿಯಾಗಿದೆ.

★ ☆ ★

8. ಇತರ ಬರಹಗಳು

ಎಪಿಗ್ರಾಫಿಯ ಕರ್ನಾಟಿಕ ಮತ್ತು ಬಿಬ್ಲಿಯಾಥೆಕ ಕರ್ನಾಟಿಕ ಮಾಲೆಗಳ ಕೃತಿಗಳನ್ನಲ್ಲದೆ ಇನ್ನಿತರ ಕೆಲವು ಗ್ರಂಥಗಳನ್ನು ಮತ್ತು ವಿವಿಧ ವಿದ್ವತ್ ಪತ್ರಿಕೆಗಳಲ್ಲಿ ಹಲವು ಲೇಖನಗಳನ್ನು ರೈಸ್ ಪ್ರಕಟಿಸಿದ್ದಾರೆ. ಅವುಗಳ ಸ್ಥೂಲವಾದ ಸಮೀಕ್ಷೆ ಇಲ್ಲಿದೆ.

ಕೃತಿಗಳು :

Report on the Mysore Census of 1881 :

1894ರಲ್ಲಿ ಮೈಸೂರು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿತವಾಗಿರುವ ಈ ವರದಿಯು 1881ರಲ್ಲಿ ಸಂಸ್ಥಾನದಲ್ಲಿ ನಡೆದ ಜನಗಣತಿಯ ವಿವರಗಳನ್ನು ಒಳಗೊಂಡಿದೆ. ಮೈಸೂರು ಸಂಸ್ಥಾನದಲ್ಲಿ 1841ರಷ್ಟು ಹಿಂದೆಯೇ ಜನಗಣತಿಯ ಕಾರ್ಯ ಆರಂಭವಾಯಿತು. ಮುಂದೆ 1851ರಲ್ಲಿಯೂ ಜನಗಣತಿಯು ನಡೆಯಿತಾದರೂ ಇವೆರಡೂ ನೈಜ ಜನಗಣತಿಗಳಾಗಿರಲಿಲ್ಲ. ಬದಲಿಗೆ ಅವೆಲ್ಲಾ ಸಂಸ್ಥಾನದಲ್ಲಿದ್ದ ಕುಟುಂಬಗಳ ಸಂಖ್ಯೆಯನ್ನು ಒಂದು ಕುಟುಂಬದಲ್ಲಿ ಇರಬಹುದಾದ ಸದಸ್ಯರ ಸರಾಸರಿ ಸಂಖ್ಯೆಯಿಂದ ಗುಣಿಸಿದ್ದರಿಂದ ಬರುವ 'ಖಾನೇಷುಮಾರಿ' ಅಂದಾಜಿನಿಂದ ಹೊರಡುವ ಜನಗಣತಿಯ ವಿವರಗಳು ಮಾತ್ರ. "1862 ಮತ್ತು 1872ರಲ್ಲಿ ನಡೆಸಲಾದ ಜನಗಣತಿಗಳು ಈಗಿನಂತೆಯೇ ವೈಜ್ಞಾನಿಕ ವಿಧಿವಿಧಾನಗಳನ್ನು ಅನುಸರಿಸಿ ನಡೆದವಾದರೂ ರಾಷ್ಟ್ರದಾದ್ಯಂತ ಏಕಕಾಲಕ್ಕೆ ನಡೆದವಾಗಿರಲಿಲ್ಲ. 1872ರಲ್ಲಿ ನಡೆಸಲಾದ ಜನಗಣತಿಯ ಪ್ರಯತ್ನವು ಅತ್ಯಂತ ಉಚ್ಚಮಟ್ಟದಲ್ಲಿದ್ದುದರಿಂದ ಅದನ್ನು 'ಭಾರತದಲ್ಲಿ ನಡೆಸಲಾದ ಮೊತ್ತಮೊದಲ ವೈಜ್ಞಾನಿಕ ಮಾದರಿಯ ಜನಗಣತಿ ಎಂದು ಪರಿಗಣಿಸಲಾಗಿದೆ'. ಆದರೂ ಇಡಿಯ ದೇಶದಲ್ಲಿ ಸಮಗ್ರವಾಗಿ ಮತ್ತು ಏಕಕಾಲದಲ್ಲಿ ಜನಗಣತಿ ನಡೆದದ್ದು ಮೊತ್ತಮೊದಲಿಗೆ 1881ರಲ್ಲಿಯೇ."[1] ಹಾಗಾಗಿ ರೈಸರು ಬರೆದಿರುವ 1881ರ ಜನಗಣತಿಯ ವರದಿಗೆ ಚಾರಿತ್ರಿಕ ಮಹತ್ವವಿದೆ.

ಜನಗಣತಿಯ ವರದಿಗಳೆಂದರೆ ಕೇವಲ ಕೋಷ್ಟಕಗಳು, ಅಂಕಿಅಂಶಗಳಿಂದ ತುಂಬಿದ ಶುಷ್ಕ ಕೃತಿಗಳು ಎಂಬುದು ಸಾಧಾರಣವಾದ ತಿಳುವಳಿಕೆ. ಆದರೆ ರೈಸರು ಈ ವರದಿಯ ಮೊದಲ 95 ಪುಟಗಳಲ್ಲಿ 1881ರ ಜನಗಣತಿಯ ಮಹತ್ವ, ಅದರ ವಿಶೇಷತೆಗಳು, ಅದಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳು, ಜನಗಣತಿ ನಡೆದ ಬಗೆ, ಚಾರಿತ್ರಿಕಾಂಶಗಳು, ಈ ಮೊದಲು ಸಂಸ್ಥಾನದಲ್ಲಿ ಘಟಿಸಿದ್ದ ನೈಸರ್ಗಿಕ ಪ್ರಕೋಪಗಳು, ಜನಸಂಖ್ಯೆಯ ವಿವಿಧ ವಿವರಗಳಿಂದ ನಿರ್ಧರಿಸಬಹುದಾದ ಅಂಶಗಳು ಮುಂತಾದ ವಿವರಗಳನ್ನು ನೀಡುವುದರ ಮೂಲಕ ಈ ಭಾಗವನ್ನು ಆಕರ್ಷಕವನ್ನಾಗಿ ಮಾಡಿದ್ದಾರೆ.

1 Jayant Kumar Banthia, **Census of India 2001**, provisional population tables, Govt. of India, Delhi 2001. P – 3.

1878ರಲ್ಲಿ ನಡೆಸಲಾದ ಪ್ರಾಯೋಗಿಕ ಜನಗಣತಿಯ ವಿಧಾನ ಮತ್ತು ಅದರ ರೂಪುರೇಷೆಗಳನ್ನು ಮೊದಲಿಗೆ ವಿಸ್ತಾರವಾಗಿ ವಿವರಿಸಲಾಗಿದೆ. ಅನಂತರ 1881ರ ಫೆಬ್ರವರಿ 17ರಂದು ರಾತ್ರಿ ನಡೆಸಲಾದ ಮುಖ್ಯ ಜನಗಣತಿಯ ವಿವರಗಳಿವೆ. ಆ ಸಂದರ್ಭದಲ್ಲಿ ಗಣತಿಯನ್ನು ನಡೆಸುವ ಎನ್ಯೂಮರೇಟರುಗಳಿಗೆ ನೀಡಲಾದ ಸೂಚನೆಗಳು, ಮಾಹಿತಿಯನ್ನು ದಾಖಲಿಸಲು ಬಳಸಲಾದ ನಮೂನೆಯ ವಿವರಗಳು, ರೈಲುಗಳಲ್ಲಿ ನಡೆಸಲಾದ ಗಣತಿಯ ಮಾಹಿತಿ, ಗಣತಿಯ ಕಾರ್ಯ ಮುಗಿದನಂತರ ನಡೆಸಲಾದ ಮಾಹಿತಿಯ ಕ್ರೋಢೀಕರಣ ಮೊದಲಾದ ಪ್ರಕ್ರಿಯೆಯ ಬಗೆಗಿನ ವಿವರಗಳು ಇಲ್ಲಿವೆ.

ಈ ಕೃತಿಯ ಆಸಕ್ತಿಕರ ಭಾಗವೆಂದರೆ Historical Notes ಎಂಬ ವಿಭಾಗ. ಇದರಲ್ಲಿ ಈ ಪ್ರಾಂತ್ಯದಲ್ಲಿ ಹಿಂದೆ ನಡೆಸಲಾದ ಜನಗಣತಿಯ ವಿವರಗಳು ಮತ್ತು 1824, 1833, 1866 ಮತ್ತು 1877ರಲ್ಲಿ ಈ ಪ್ರದೇಶವನ್ನು ಬಾಧಿಸಿದ ಕ್ಷಾಮದ ಸವಿವರವಾದ ದಾಖಲೆ ಇದೆ. ಅನಂತರ ಇಲ್ಲಿಯ ಕೃಷಿ ವಿಧಾನ, ಜನಗಳ ವಲಸೆಯ ವಿವರ, ಆಹಾರ ಧಾನ್ಯಗಳ ಬೆಲೆ ಮುಂತಾದ ಸಾಮಾಜಿಕ ಅಂಶಗಳ ವಿವರಗಳಿವೆ.

ಮುಂದಿನ ಭಾಗದಲ್ಲಿ ಜನಸಂಖ್ಯೆಯ ಸಾಂದ್ರತೆಯನ್ನು ಸಾಮಾಜಿಕ ಪರಿಸ್ಥಿತಿ, ವಿವಾಹದ ವಯೋಮಾನ, ವೈಧವ್ಯದ ವಯಸ್ಸು, ಜಾತಿವಾರು ಮಾಹಿತಿ ಮತ್ತು ಪ್ರತಿಜಾತಿಯಲ್ಲಿನ ಉಪಪಂಗಡಗಳು, ವಿದ್ಯಾಭ್ಯಾಸ, ಮುಂತಾದ ಅಂಶಗಳನ್ನು ಆಧರಿಸಿ ಪುನರ್ವಿಂಗಡಿಸಿ ಜೋಡಿಸಲಾಗಿದೆ.

1881ರ ಈ ಜನಗಣತಿಯ ವರದಿಯನ್ನು ಸಂಕಲಿಸಿದ್ದರಿಂದಾಗಿ ರೈಸರಿಗೆ ಮುಂದೆ ಮೈಸೂರಿನ ಗೆಜೆಟಿಯರ್ ಸಂಪುಟಗಳನ್ನು ಸಿದ್ಧಪಡಿಸುವುದು ಸುಲಭವಾಯಿತು.

Edicts of Asoka in Mysore :

1892ರಲ್ಲಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ರೈಸರು ಕಂಡುಹಿಡಿದ ಅಶೋಕನ ಮೂರುಶಾಸನಗಳ ವಿವರಗಳನ್ನು ಒಂಬತ್ತು ಪುಟಗಳ ಈ ಚಿಕ್ಕ ವರದಿಯು ಒಳಗೊಂಡಿದೆ. ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ಪತ್ತೆಮಾಡಲಾದ ಈ ಶಾಸನಗಳ ಸ್ಥಳೀಯ ವಿವರಗಳು; ಶಾಸನಗಳ ಬರಹಗಳ ತದ್ವತ್ ರೂಪ, ಲಿಪ್ಯಂತರ ಮತ್ತು ಭಾಷಾಂತರಗಳನ್ನು ಇಲ್ಲಿ ನೀಡಲಾಗಿದೆ. ದಕ್ಷಿಣಭಾರತದಲ್ಲಿ ಕಂಡುಬಂದ ಅಶೋಕನ ಶಾಸನಗಳಲ್ಲಿ ಇವೇ ಮೊದಲು ಪತ್ತೆಯಾದದವು. ಆದ್ದರಿಂದ ಚಿಕ್ಕದಾದರೂ ಈ ಕೃತಿಗೆ ಚಾರಿತ್ರಿಕವಾದ ಮಹತ್ವವಿದೆ. ಈ ವರದಿಯ ವಿವರಗಳು ಮತ್ತೆ ಚಿತ್ರದುರ್ಗದ ಶಾಸನ ಸಂಪುಟದಲ್ಲಿ ಮರುಬಳಕೆಯಾಗಿವೆ.

Catalogue of Sanskrit Manuscripts in Mysore and Coorg:

1884ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಆ ಕಾಲದಲ್ಲಿ ಲಭ್ಯವಿದ್ದ ಸಂಸ್ಕೃತ ಹಸ್ತಪ್ರತಿಗಳ ವಿವರಗಳಿವೆ. ತಾವು ಈ ಯೋಜನೆ

ಯನ್ನು ಕೈಗೊಳ್ಳಬೇಕಾದ ಹಿನ್ನೆಲೆಯನ್ನು ರೈಸ್ ಕೃತಿಯ ಮುನ್ನುಡಿಯಲ್ಲಿ ಸಂಕ್ಷಿಪ್ತವಾಗಿ ಹೀಗೆ ವಿವರಿಸಿದ್ದಾರೆ :[1]

ಭಾರತದಲ್ಲಿ ಸಂಸ್ಕೃತ ಹಸ್ತಪ್ರತಿಗಳ ಸಂಗ್ರಹಣೆಯ ಕಾರ್ಯ 1868ರಲ್ಲಿ ಮೊತ್ತ ಮೊದಲ ಬಾರಿಗೆ ಆರಂಭವಾಯಿತು. ಪಂಡಿತ ರಾಧಾಕೃಷ್ಣ ಎಂಬ ಲಾಹೋರಿನ ದರ್ಬಾರಿನ ಪ್ರಮುಖ ವಿದ್ವಾಂಸರು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸಲ್ಲಿಸಿದ ಮನವಿಗೆ ಪ್ರತಿಯಾಗಿ ಸರ್ಕಾರವು 1868ರ ನವೆಂಬರ್ 3ರಂದು ಆದೇಶ ಒಂದನ್ನು ಹೊರಡಿಸಿ ಭಾರತದಾದ್ಯಂತ ಸಂಘ ಸಂಸ್ಥೆಗಳಲ್ಲಿ ಮತ್ತು ಖಾಸಗಿ ವ್ಯಕ್ತಿಗಳ ವಶದಲ್ಲಿರುವ ಸಂಸ್ಕೃತ ಹಸ್ತಪ್ರತಿಗಳ ಯಾದಿಯೊಂದನ್ನು ಸಿದ್ಧಪಡಿಸುವಂತೆ ಪ್ರಾಂತೀಯ ಸರ್ಕಾರಗಳಿಗೆ ಆದೇಶಿಸಿತು. ಮದ್ರಾಸು, ಮೈಸೂರು ಮತ್ತು ಕೊಡಗನ್ನು ಒಂದು ಘಟಕವೆಂದು ಪರಿಗಣಿಸಿ ಈ ಪ್ರದೇಶಗಳ ಹಸ್ತಪ್ರತಿಗಳ ಪಟ್ಟಿಯನ್ನು ತಯಾರಿಸುವ ಜವಾಬ್ದಾರಿಯನ್ನು ಸರ್ಕಾರ ಖ್ಯಾತ ವಿದ್ವಾಂಸರಾದ ಬರ್ನೆಲರಿಗೆ 1870ರಲ್ಲಿ ವಹಿಸಿತು.

ಇದೇ ಸುಮಾರಿಗೆ ಮೈಸೂರಿನ ಮಹಾರಾಜರಾದ ಚಾಮರಾಜ ಒಡೆಯರ ಬಾಲ್ಯದ ಪೋಷಕರಾಗಿದ್ದ ಕರ್ನಲ್ ಜೆ.ಬಿ. ಮ್ಯಾಲೆಸನ್‌ರ ಮಾರ್ಗದರ್ಶನದಲ್ಲಿ ಮೈಸೂರಿನ ಮಹಾರಾಜರ ಅರಮನೆಯ ಸರಸ್ವತಿ ಭಂಡಾರದಲ್ಲಿದ್ದ 608 ಸಂಸ್ಕೃತ ಕೃತಿಗಳ ಪಟ್ಟಿಯೊಂದನ್ನು ತಯಾರಿಸಿ ಚೀಫ್‌ಕಮಿಷನರ್ ಆಗಿದ್ದ ಎಲ್. ಬೌರಿಂಗರು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಕಳುಹಿಸಿದರು. ಬ್ರಿಟಿಷ್ ಸರ್ಕಾರವು ಮುಂಬೈ ಸರ್ಕಾರದ ಮೂಲಕ ಆ ಮಾಹಿತಿಯನ್ನು ಪುಣೆಯಲ್ಲಿದ್ದ ಪ್ರೊ|| ಕೀಲ್‌ಹಾರ್ನ್ ಎಂಬ ವಿದ್ವಾಂಸರಿಗೆ ತಲುಪಿಸಿ ವರದಿಯನ್ನು ನೀಡಲು ಕೋರಿತು. ಕೀಲ್‌ಹಾರ್ನರು 1874ರಲ್ಲಿ ಪ್ರಕಟಿಸಿದ ಸಂಸ್ಕೃತ ಕೃತಿಗಳ ಪೂರಕಯಾದಿ (Suplimentary Catalogue)ಯಲ್ಲಿ ಈ ಸಂಗ್ರಹದ 270 ಕೃತಿಗಳನ್ನೂ ಸೇರಿಸಿದ್ದರು. ಇದೇ ವೇಳೆಗೆ ಮದ್ರಾಸಿನಲ್ಲಿನ ಹಸ್ತಪ್ರತಿಗಳ ಸೂಚಿ (1880)ಯನ್ನು ಪ್ರಕಟಿಸಿದ ಡಾ. ಜಿ. ಒಪೆರ್ಟ್‌ರೂ ಮೈಸೂರಿನ ಆಸ್ಥಾನವಿದ್ವಾಂಸರಲ್ಲಿದ್ದ 139 ಕೃತಿಗಳನ್ನು ತಮ್ಮ ಯಾದಿಯಲ್ಲಿ ಸೇರಿಸಿಕೊಂಡುಬಿಟ್ಟಿದ್ದರು.

1878ರ ಫೆಬ್ರವರಿ ತಿಂಗಳಿನಲ್ಲಿ ಬ್ರಿಟಿಷ್ ಸರ್ಕಾರವು ಒಟ್ಟು ಯೋಜನೆಯ ಪರಿಸ್ಥಿತಿಯನ್ನು ಕುರಿತು ಪರಿಶೀಲನೆ ನಡೆಸಿದಾಗ ಈ ಎಲ್ಲ ಅಂಶಗಳೂ ಹೊರಬಂದುದರಿಂದ ಸ್ಥಳೀಯ ಸರ್ಕಾರವು ಮತ್ತೊಬ್ಬ ವ್ಯಕ್ತಿಯನ್ನು ನೇಮಿಸಿ ಹಸ್ತಪ್ರತಿಗಳನ್ನು ಪುನರ್ವರ್ಗೀಕರಿಸಬೇಕೆಂದು ಬ್ರಿಟಿಷ್ ಸರ್ಕಾರವು ಆದೇಶಿಸಿತು. ಆ ರೀತಿಯಲ್ಲಿ ಈ ಕಾರ್ಯಕ್ಕೆ ನಿಯುಕ್ತರಾದವರೇ ರೈಸರು.

1880ರ ಜುಲೈ ತಿಂಗಳಿನಿಂದ 1881ರ ಡಿಸೆಂಬರ್ ತಿಂಗಳವರೆಗೆ ಸುಮಾರು ಒಂದೂವರೆ ವರ್ಷಗಳ ಕಾಲ ಮೈಸೂರು ಮತ್ತು ಕೊಡಗು ಪ್ರಾಂತ್ಯದಾದ್ಯಂತ ಮಾಹಿತಿಯನ್ನು ಸಂಗ್ರಹಿಸಲಾಯಿತೆಂದು ಅವರು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಅಗತ್ಯ

1 ರೈಸರು ಇಲ್ಲಿ ನೀಡಿರುವ ವಿವರಗಳು ಬಹಳ ಸಂಕ್ಷಿಪ್ತವಾಗಿದ್ದು ಹೆಚ್ಚಿನ ಮಾಹಿತಿಯು Archibald Edward Gough ಸಂಪಾದಿಸಿರುವ 'Papers Relating to the Collection and preservation of the Records of Ancient Sanskrit Literature in India' (Calcutta, 1878) ಕೃತಿಯಲ್ಲಿದೆ.

ವಿರುವ ಎಲ್ಲ ಮಾಹಿತಿಗಳನ್ನೂ ತುಂಬಿಸಲು ಅವಕಾಶವಿರುವ ಅಚ್ಚಾದ ಹಾಳೆಗಳನ್ನು ಪ್ರತಿಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಆ ಮೂಲಕ ವಿವರಗಳನ್ನು ಸಂಗ್ರಹಿಸಲಾಗಿದೆ ಎಂದು ತಿಳಿದುಬರುತ್ತದೆ. "ಈ ಯೋಜನೆಯ ಕಾಲದಲ್ಲಿ ಬಹುಮಟ್ಟಿಗೆ ನಾನು ಶಿಕ್ಷಣ ಆಯೋಗದ ಕಾರ್ಯದರ್ಶಿಯಾಗಿ ಕಲ್ಕತ್ತೆಯಲ್ಲಿ ಇರಬೇಕಾಗಿ ಬಂದುದರಿಂದ ವೈಯಕ್ತಿಕವಾಗಿ ಹಸ್ತಪ್ರತಿಗಳನ್ನು ಪರಿಶೀಲಿಸಿ ಅವುಗಳ ಕಾಲ ಇತ್ಯಾದಿಗಳನ್ನು ಕುರಿತಾದ ಹೆಚ್ಚಿನ ಮಾಹಿತಿ ಗಳನ್ನು ಕೊಡಲು ಸಾಧ್ಯವಾಗದೆ ಕೇವಲ ಸ್ಥಳೀಯ ಅಧಿಕಾರಿಗಳು ನೀಡಿರುವ ವಿವರಗಳಿಗೆ ತೃಪ್ತಿಪಟ್ಟುಕೊಳ್ಳಬೇಕಿದೆ" ಎಂದು ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ.[1]

ಒಟ್ಟು 324 ಪುಟಗಳ ಈ ಸೂಚಿಯಲ್ಲಿ ಒಟ್ಟು 2944 ಹಸ್ತಪ್ರತಿಗಳ ವಿವರಗಳಿವೆ. ಸಮಗ್ರವಾದ ಸಂಸ್ಕೃತ ಸಾಹಿತ್ಯ ರಾಶಿಯನ್ನು ವೇದ, ದರ್ಶನ, ವೈದ್ಯಶಾಸ್ತ್ರ ಮುಂತಾದ ಹದಿನಾರು ಮುಖ್ಯ ವಿಭಾಗಗಳನ್ನಾಗಿ ಮತ್ತು ಸಂಹಿತಾ, ವೇದಾಂತ, ಪೂಜಾಕಲ್ಪ ಮೊದಲಾದ ನಲವತ್ತು ಉಪವಿಭಾಗಗಳನ್ನಾಗಿಯೂ ವಿಂಗಡಿಸಲಾಗಿದೆ. ಅವುಗಳೆಂದರೆ:

ಈ ಎಲ್ಲ ಮಾಹಿತಿಯನ್ನೂ ಕೋಷ್ಠಕದ ರೂಪದಲ್ಲಿ ಪ್ರಕಟಿಸಲಾಗಿದೆ. ಅದರಲ್ಲಿ ಮೊದಲಿಗೆ ಕ್ರಮಸಂಖ್ಯೆ ಅನಂತರ ಕ್ರಮವಾಗಿ ದೇವನಾಗರಿಯಲ್ಲಿ ಹಸ್ತಪ್ರತಿಯ ಹೆಸರು, ರೋಮನ್ ಲಿಪಿಯಲ್ಲಿ ಹಸ್ತಪ್ರತಿಯ ಹೆಸರು, ಲೇಖಕನ ಹೆಸರು, ವಿಷಯ, ಒಟ್ಟು ಗ್ರಂಥಗಳ ಸಂಖ್ಯೆ[2] ಯಾವ ಲಿಪಿಯಲ್ಲಿ ಬರೆಯಲಾಗಿದೆ, ಯಾವುದರ ಮೇಲೆ ಬರೆಯ ಲಾಗಿದೆ, ಯಾರ ಬಳಿಯಲ್ಲಿದೆ ಮತ್ತು ಷರಾ ಎಂಬ ಹತ್ತು ಭಾಗಗಳಿವೆ.

ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾದ ಮಾಹಿತಿಯನ್ನು ಒಂದೆಡೆ ಕ್ರೋಢಿ ಕರಿಸಿರುವುದಷ್ಟೇ ಇಲ್ಲಿಯ ಕೆಲಸವಾಗಿರುವುದರಿಂದ ರೈಸರ ಪ್ರತಿಭೆ-ಪಾಂಡಿತ್ಯಗಳೇನೂ ಕಂಡುಬರುವುದಿಲ್ಲ. ಆದರೆ ಕೆಲಸವನ್ನು ಕೈಗೆತ್ತಿಕೊಂಡಿದ್ದರಿಂದ ರೈಸರಿಗಾದ ಪರೋಕ್ಷ ಉಪಕಾರವೆಂದರೆ ಅವರೇ ಹೇಳಿಕೊಂಡಿರುವಂತೆ[3] ಜೈನಧರ್ಮಕ್ಕೆ ಸಂಬಂಧಿಸಿದ ಹಳೆಗನ್ನಡದ ಹಸ್ತಪ್ರತಿಗಳನ್ನು ನೋಡಲು ಸಾಧ್ಯವಾದದ್ದು. ಈ ಸಂದರ್ಭದಲ್ಲಿ ದೊರೆತ ಕನ್ನಡ ಕೃತಿಗಳನ್ನು ಕುರಿತಾದ ಮಾಹಿತಿಯೆಲ್ಲವನ್ನೂ ತಾನು ಲಂಡನ್ನಿನ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆಗೆ ಬರೆದು ತಿಳಿಸಿರುವುದಾಗಿ ಅವರು ದಾಖಲಿಸಿದ್ದಾರೆ. ಈ ಮಾಹಿತಿಯೇ ಮುಂದೆ ಗ್ರಂಥಸಂಪಾದನ ಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಲು ರೈಸರಿಗೆ ಪ್ರೇರಕವಾದ್ದರಿಂದ ಪ್ರತ್ಯಕ್ಷವಾಗಿ ಕನ್ನಡ ಸಾಹಿತ್ಯಕ್ಕೆ ಈ ಕೃತಿಯಿಂದ ಆದ ಉಪಕಾರಕ್ಕಿಂತಲೂ ಪರೋಕ್ಷವಾಗಿ ಆಗಿರುವ ಸಹಾಯ ಗಣನೀಯವೆನ್ನಬಹುದು.

List of European Tombs and Monuments in Mysore :

ಭಾರತದಲ್ಲಿ ನಿಧನರಾದ ಯುರೋಪಿಯನ್ ಜನರ ಸಮಾಧಿ ಮತ್ತು ಸ್ಮಾರಕಗಳ ವಿವರಗಳನ್ನು ದಾಖಲಿಸುವಂತಹ 'Indian Monumental Inscriptions Series'

1 P – 2.
2 'ಗ್ರಂಥ' ಎಂದರೆ 32 ಅಕ್ಷರಗಳ ಒಂದು ಗುಂಪು.
3 P – 2.

ಎಂಬ ಸರಣಿಯ ಒಂದು ಭಾಗವಾಗಿ ಈ ಕೃತಿಯು 1906ರಲ್ಲಿ ಹೊರಬಂದಿದೆ. ಬಹುಶಃ ಇದೇ ಭಾರತದಲ್ಲಿ ರೈಸರು ಸಂಪಾದಿಸಿದ ಕಟ್ಟಕಡೆಯ ಸಂಕಲನ. ಮದ್ರಾಸ್ ಪ್ರಾಂತ್ಯದ ಇದೇ ಮಾದರಿಯ ವಿವರಗಳನ್ನು ಸಂಗ್ರಹಿಸಿ ಪ್ರಕಟಿಸಿದ ಜೆ.ಜೆ. ಕಾಟನ್ ಎನ್ನುವನ ಸಂಕಲನದ ರೀತಿಯಲ್ಲಿಯೇ ಇದನ್ನೂ ಸಂಪಾದಿಸಬೇಕೆಂಬ ಮೈಸೂರಿನ ಪ್ರಭಾರಿ ರೆಸಿಡೆಂಟನಾಗಿದ್ದ ಎ. ವಿಲಿಯಮ್ಸ್ ಎಂಬಾತನ ಆಶಯದ ಮೇರೆಗೆ 1905ರಲ್ಲಿ ತಾವು ಈ ಕಾರ್ಯವನ್ನು ಕೈಗೆತ್ತಿಕೊಂಡುದುದಾಗಿ ಅವರು ಮುನ್ನುಡಿಯಲ್ಲಿ ಹೇಳಿದ್ದಾರೆ.

ಮೈಸೂರು ಪ್ರಾಂತ್ಯದಲ್ಲಿ ದೊರೆತಿರುವ ಒಟ್ಟು 776 ಸಮಾಧಿಗಳ ಮೇಲಿನ ಬರಹಗಳನ್ನು ಇಲ್ಲಿ ಜಿಲ್ಲೆ ಮತ್ತು ತಾಲ್ಲೂಕುವಾರಾಗಿ ಜೋಡಿಸಲಾಗಿದೆ. ಇದರಲ್ಲಿ ಅತ್ಯಂತ ಪ್ರಾಚೀನವಾದದ್ದು ಕ್ರಿ.ಶ. 1782ರದ್ದಾದರೆ ಹೊಸದು 1905ರದು. ಯೂರೋಪಿಯನ್ನರು ಪ್ರಧಾನವಾಗಿ ನೆಲೆಸಿದ್ದ ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್, ಹರಿಹರ, ಕೆ.ಜಿ.ಎಫ್. ಮುಂತಾದ ಕಡೆಗಳಲ್ಲಿ ಹೆಚ್ಚಿನ ವಿವರಗಳು ದೊರೆತಿದೆ. ಆದರೆ ಬೆಂಗಳೂರಿನ ದಂಡು ಪ್ರದೇಶವು ಮೈಸೂರು ಸರ್ಕಾರದ ಆಳ್ವಿಕೆಯಲ್ಲಿ ಇರದೆ ನೇರವಾಗಿ ಬ್ರಿಟಿಷ್ ಅಧಿಪತ್ಯದಲ್ಲಿದ್ದುದರಿಂದ ಅಲ್ಲಿಯ ವಿವರಗಳು ಈ 47 ಪುಟಗಳಲ್ಲಿ ಕಾಣಸಿಗುವುದಿಲ್ಲ. ಅವುಗಳ ಪ್ರತ್ಯೇಕವಾದ ಪುರವಣಿಯೊಂದನ್ನು ಬೇರೆಯವರು ಸಿದ್ಧಪಡಿಸಲಿದ್ದಾರೆ ಎಂದು ರೈಸ್ ಸೂಚಿಸಿದ್ದಾರೆ.

ಸಮಾಧಿಗಳ ವಿವರಗಳನ್ನು ಕೋಷ್ಠಕದ ರೂಪದಲ್ಲಿ ಜೋಡಿಸಲಾಗಿದೆ. ಇದರಲ್ಲಿ ನಾಲ್ಕು ಉದ್ದನೆಯ ಸಾಲುಗಳಿದ್ದು ಮೊದಲನೆಯದರಲ್ಲಿ ಕ್ರಮಸಂಖ್ಯೆ, ಎರಡನೆಯದರಲ್ಲಿ ನಿಧನದ ವರ್ಷ, ಮೂರನೆಯದಾಗಿ ವ್ಯಕ್ತಿಯ ಹೆಸರು ಮತ್ತು ನಾಲ್ಕನೆಯದರಲ್ಲಿ ಸಮಾಧಿ ಶಾಸನದ ಬರಹದ ವಿವರಗಳಿರುತ್ತವೆ. ಒಂದೇ ಪ್ರದೇಶದಲ್ಲಿ ಅನೇಕ ಜನರ ಸ್ಮಾರಕಗಳಿದ್ದರೆ ವೈಯಕ್ತಿಕ ವಿವರಗಳನ್ನು ನೀಡುವ ಮೊದಲಿಗೆ ಅವುಗಳು ಲಭ್ಯವಿರುವ ಸ್ಥಳವನ್ನು ನಿರ್ದೇಶಿಸಿದೆ.

18 ರಿಂದ 20ನೇ ಶತಮಾನದ ಆದಿಭಾಗದವರೆಗೆ ಮೈಸೂರು ಪ್ರಾಂತ್ಯದಲ್ಲಿ ನೆಲೆಸಿದ್ದ ಯೂರೋಪಿಯನ್ನರ ಬಗೆಗೆ ತಿಳಿಯಲು ಈ ಕೃತಿಯು ಪ್ರಮುಖ ಆಕರವಾಗಿದೆ.

ಲೇಖನಗಳು :

ಮೇಲೆ ಪ್ರಸ್ತಾಪಿಸಿದ ಕೃತಿಗಳನ್ನಲ್ಲದೆ ವಿವಿಧ ವಿದ್ವತ್ ಪತ್ರಿಕೆಗಳಲ್ಲಿ ರೈಸರು ಬರೆದಿರುವ 39 ಸಂಪ್ರಬಂಧಗಳು ಪ್ರಸ್ತುತ ನೋಡಲು ಸಿಕ್ಕಿವೆ. ಇವುಗಳಲ್ಲಿ ಬಹುಪಾಲು ಲೇಖನಗಳು ಶಾಸನಗಳ ಪ್ರಕಟಣೆಗೆ ಸಂಬಂಧಿಸಿದ್ದಾಗಿದ್ದು ಅವುಗಳ ವಿವರಗಳು ಶಾಸನ ಸಂಪುಟಗಳಲ್ಲಿ ಪುನಃ ದಾಖಲಾಗಿವೆ. ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಕೆಲವು ಲೇಖನಗಳನ್ನು ಗ್ರಂಥ ಸಂಪಾದನೆಯ ಭಾಗದಲ್ಲಿ ಈಗಾಗಲೇ ಗಮನಿಸಲಾಗಿದೆ. ಹಾಗಾಗಿ ಇವುಗಳನ್ನು ವಿವಕ್ಷಿಸುವ ಕಾರ್ಯಕ್ಕೆ ಕೈಹಾಕದೆ ಪ್ರತ್ಯೇಕವಾದ ವಿಷಯಗಳಿಗೆ ಸಂಬಂಧಿಸಿದ ಕೆಲವು ಲೇಖನಗಳನ್ನಷ್ಟನ್ನೇ ಇಲ್ಲಿ ಪರಿಚಯಿಸಲಾಗಿದೆ.

I. Lada Lippee (Ind. Ant. Vol. IV, P–61, 1875) :

ಈ ಪುಟ್ಟ 'ವಿಚಾರಣೆ'ಯಲ್ಲಿ ರೈಸರು 'ಲಾಡಲಿಪ್ಪಿ' ಅಥವಾ 'ಲಾಡಲಿಪಿ' ಎಂದರೆ ಏನೆಂದು ತಿಳಿಯಬಯಸಿದ್ದಾರೆ.

18ನೇ ಶತಮಾನದ ಆರಂಭದಲ್ಲಿ ಮೈಸೂರು ಪ್ರಾಂತ್ಯವನ್ನು ಮೋಜಣಿ ಮಾಡಲು ನಿಯುಕ್ತರಾಗಿದ್ದ ಆಂಗ್ಲ ಅಧಿಕಾರಿಗಳಲ್ಲಿ ಒಬ್ಬನಾಗಿದ್ದ ಡಾ॥ ಜಾನ್ ಲೈಡೆನ್ ಎಂಬ ಶಸ್ತ್ರ ಚಿಕಿತ್ಸಕ[1] ಈ ಲಿಪಿಯನ್ನೂ ಓದಿ ಅರ್ಥೈಸಲು ಶಕ್ತನಾಗಿದ್ದ ಎಂಬ ಹೇಳಿಕೆಯನ್ನು ರೈಸರು ಇಲ್ಲಿ ಉಲ್ಲೇಖಿಸಿದ್ದಾರೆ.

ಲಾಡಲಿಪ್ಪೀ (Lada Lippee) ಅಥವಾ ವೆರ್‍ರಗ್ಗ್ಯೆಯ (Verraggia) ಎಂದು ಕರೆಯಲಾಗುತ್ತಿದ್ದ ಈ ಲಿಪಿಯಲ್ಲಿ ಬರೆದ ತಮಿಳಿನ ಉಪಭಾಷೆಗಳ ಶಾಸನಗಳನ್ನು ಯೂರೋಪಿಯನ್ನರಾಗಲೀ, ಅಥವಾ ಅತ್ಯಂತ ದೊಡ್ಡ ದೇಶೀಯ ವಿದ್ವಾಂಸರಾಗಲೀ ಓದಲು ಸಾಧ್ಯವಾಗಿರಲಿಲ್ಲ. ಆದರೆ ಲೈಡೆನ್ ಅನೇಕ ಶಾಸನಗಳಲ್ಲಿನ ಕೆಲವಾರು ಅಕ್ಷರ ಗಳನ್ನು ಹೋಲಿಸಿ ನೋಡಿ ಈ ಲಿಪಿಯನ್ನು ಓದಲು ಶಕ್ತನಾಗಿದ್ದ ಎಂದು ತಮಗೆ ತಿಳಿದು ಬಂದ ಮಾಹಿತಿಯನ್ನು ಮೊದಲಿಗೆ ನೀಡಿ ಅನಂತರ ರೈಸ್ 'ತಾವಾಗಲೀ ಅಥವಾ ತಮ್ಮ ಓದುಗರಲ್ಲಿ ಯಾರಾದರೂ ಆಗಲೀ, ಇಲ್ಲಿ ಸೂಚಿತವಾಗಿರುವ ಲಿಪಿ ಯಾವುದು ಹಾಗೂ ಈ ಲಿಪಿಯಲ್ಲಿ ಬರೆದ ಶಾಸನಗಳು ಎಲ್ಲಿ ಕಾಣ ಸಿಗುತ್ತವೆ ತಿಳಿಸುವಿರಾ?' ಎಂದು ಸಂಪಾದಕರನ್ನು ಕೋರಿದ್ದಾರೆ.

ಇದಕ್ಕೆ ಪ್ರತಿಯಾಗಿ ಪತ್ರಿಕೆಯ ಸಂಪಾದಕರಾದ ಬರ್ಗೆಸ್ ಬಹುಶಃ ಈ ಲಿಪಿಯು ಇದೇ ಪತ್ರಿಕೆಯ ಮೊದಲನೇ ಸಂಪುಟದ ಪು. 229 ಹಾಗೂ 3ನೇ ಸಂಪುಟದ ಪು. 333 ರಲ್ಲಿ ಚರ್ಚಿತವಾಗಿರುವ 'ವಟ್ಟೆಳತ್ತು' (Vatteluttu) ಇರಬಹುದು ಎಂದು ಉತ್ತರಿಸಿದ್ದಾರೆ.

'ವಟ್ಟೆಳುತ್ತು'ವಿನ ಬಗ್ಗೆ ಇಷ್ಟೆಲ್ಲಾ ಆಸಕ್ತಿವಹಿಸಿದ ರೈಸರು ಡಿಕ್ಸನ್‌ನ ವರದಿಯಲ್ಲಿ ಸೂಚಿತವಾದ 'ರಾವಣ ಕನ್ನಡ' ಎಂಬುದರ ಬಗ್ಗೆ ಪ್ರತ್ಯೇಕ ಲೇಖನದಲ್ಲಿಯಾಗಲೀ, ಅಥವಾ ತಮ್ಮ ಶಾಸನ ಸಂಪುಟಗಳಲ್ಲಿಯಾಗಲೀ ಎಲ್ಲಿಯೂ ಚರ್ಚಿಸದಿರುವುದಕ್ಕೆ ಕಾರಣವೇನೋ ತಿಳಿದುಬಂದಿಲ್ಲ. ಹಾಗೂ ಮತ್ತೊಂದು ಪ್ರಮುಖ ಲೋಪವೆಂದರೆ ಲೈಡನ್‌ನನ್ನು ಕುರಿತಾದ ವಾಕ್ಯವೃಂದದ ಮೂಲ ಆಕರವನ್ನು ಗೆ಼ಜೆಟಿಯರ್‌ನಲ್ಲಿಯಾಗಲೀ ಅಥವಾ ಈ ಲೇಖನದಲ್ಲಿ ಯಾಗಲೀ ಎಲ್ಲಿಯೂ ಸೂಚಿಸದಿರುವುದು. ಇದರಿಂದಾಗಿ ಆದ ದೊಡ್ಡ ನಷ್ಟವೆಂದರೆ ಡಾ॥ ಲೈಡೆನ್‌ರನ್ನು ಕುರಿತಾದ ಯಾವ ಹೆಚ್ಚಿನ ಮಾಹಿತಿಯೂ ಇಂದು ಲಭ್ಯವಿಲ್ಲ.[2]

1 ಈತನ ಅಸಾಧಾರಣ ವ್ಯಕ್ತಿತ್ವ, ಬುದ್ಧಿಮತ್ತೆಗಳನ್ನು ರೈಸ್ ತಮ್ಮ ಗೆ಼ಜೆಟಿಯರ್‌ನ ಮೊದಲ ಮುದ್ರಣದ ಪ್ರಸ್ತಾವನೆ (preface) ಯಲ್ಲಿ ವಿಶೇಷವಾಗಿ ಶ್ಲಾಘಿಸಿದ್ದಾರೆ; ರಾಬರ್ಟ್ ಸದೆ, ಸರ್‌ವಾಲ್ಟೇರ್ ಸ್ಕಾಟ್, ಸರ್ ಜಾನ್ ಮಾಲ್ಕಂ ಮುಂತಾದವರ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ (ಪು. X–XI).

2 ತಾನು ಇವುಗಳನ್ನು ಹುಡುಕಲು ಯತ್ನಿಸಿ ವಿಫಲಗೊಂಡಿರುವುದಾಗಿ ರೈಸ್ ಗೆ಼ಜೆಟಿಯರ್‌ನ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. (ಪು. XI).

ತಮಗೆ ಲಭ್ಯವಿದ್ದ ಅಲ್ಪಸ್ವಲ್ಪ ಮಾಹಿತಿಗಳ ಮೂಲವನ್ನಾದರೂ ಅವರು ದಾಖಲಿಸಿದ್ದಲ್ಲಿ ಮುಂದಿನ ಸಂಶೋಧಕರಿಗೆ ಹೆಚ್ಚಿನ ನೆರವಾಗುತ್ತಿತ್ತು. ಬುಖನನ್‌ನಂತಹ ಮತ್ತೊಬ್ಬ ಪ್ರಮುಖ ಸರ್ವೇಕ್ಷಕನ ಪರಿಚಯ ನಾಡಿಗೆ ಆಗುತ್ತಿತ್ತು ಎಂದು ಭಾವಿಸಬಹುದು.

II. **On a folklore story** (Ind. Ant Vol. X 1881 P–288) :

ಇಂಡಿಯನ್ ಆಂಟಿಕ್ವೈರಿಯ 1881ರ ಜುಲೈ ಸಂಚಿಕೆಯ ಪು. 190-191ರಲ್ಲಿ ಪ್ರಕಟವಾಗಿರುವ ಸಿ.ಎಚ್. ಟಾನಿ (Tawney) ಎಂಬುವರ 'A Folk parabell' ಎಂಬ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಈ ಪತ್ರವನ್ನು ರೈಸ್ ಬರೆದಿದ್ದಾರೆ.

ಟಾನಿಯವರು ಪ್ರೊ|| ನೀಲಮಣಿ ಮುಖ್ಯೋಪಧ್ಯಾಯ ಎಂಬುವರು ಪ್ರಕಟಿಸಿರುವ ಒಂದು ಸಂಪುಟದಲ್ಲಿನ 'Tenderness to animals' ಎಂಬ ಕಥೆಯು ಡಾಸೆಂಟ್‌ನ Norse Tales ಎಂಬ ಕೃತಿಯಲ್ಲಿನ 'Rich peter the pedlar' ಎಂಬ ಕಥೆಯನ್ನು ಹೋಲುತ್ತದೆ ಎಂದು ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಈ ಕಥೆಯಲ್ಲಿ ಸಾಗರಗುಪ್ತ ಎಂಬ ಶ್ರೇಷ್ಠ ಬಡವನೊಬ್ಬನಿಗೆ ಸಂಪತ್ತು ದೊರೆಯುತ್ತದೆಂದು ತಿಳಿದು ಅವನನ್ನು ಕೊಲ್ಲಿಸಲು ಯತ್ನಿಸುವುದು - ಕಟುಕರು ಅವನನ್ನು ಕೊಲ್ಲದೆ ಬೆರಳನ್ನು ಕತ್ತರಿಸಿ ತಂದುಕೊಡುವುದು ಬದುಕಿ ಉಳಿದ ಆತ ಕೆಲಕಾಲ ತಲೆಮರೆಸಿಕೊಂಡಿದ್ದು ಮತ್ತೆ ಶೆಟ್ಟಿಯ ಕಣ್ಣಿಗೆ ಬೀಳುವುದು- ಆತ ತನ್ನ ಮಗನಿಗೆ ಕೊಡೆಂದು ಬರೆದ ಪತ್ರವನ್ನು ತೆಗೆದುಕೊಂಡು ಹೋಗುತ್ತಾ ದಾರಿ ಯಲ್ಲಿ ದೇವಾಲಯದ ಬಳಿ ಮಲಗಿದ್ದಾಗ ಶೆಟ್ಟಿಯ ಮಗಳು ವಿಷಾ ಬಂದು ಪತ್ರವನ್ನು ನೋಡಿ ಅದನ್ನು ತಿದ್ದಿ ಅವನನ್ನು ಮದುವೆಯಾಗುವುದು - ಈ ವಿವರಗಳನ್ನು ಕೊಟ್ಟಿದ್ದಾರೆ. ರೈಸರು ತಮ್ಮ ಬರಹದಲ್ಲಿ ಈ ಎಲ್ಲ ವಿವರಗಳನ್ನು ಗಮನಿಸಿ ಅನಂತರ 'ಇದು ಜೈಮಿನಿ ಭಾರತದಲ್ಲಿರುವ ಚಂದ್ರಹಾಸನ ಕಥೆಯನ್ನು ಹೋಲುತ್ತದೆ, ಆತ ಕುಂತಲದವನು. ಅದು ಈಗ ಮೈಸೂರು ಸಂಸ್ಥಾನದ ಭಾಗವಾಗಿದ್ದು ಕುಬಟ್ಟೂರು ಎಂಬ ಹೆಸರನ್ನು ಹೊಂದಿದೆ' ಎಂಬ ಮಾಹಿತಿಯನ್ನು ನೀಡಿದ್ದಾರೆ.

III. **Akhanna and Madanna** (Ind. Ant. Vol-XI, 1882 P. 236) :

ಇಂಡಿಯನ್ ಆಂಟಿಕ್ವೈರಿಯ 1882ರ ಮಾರ್ಚಿ ಸಂಚಿಕೆಯಲ್ಲಿ ಎಲ್ಫಿನ್‌ಸ್ಟೋನ್ ಎಂಬ ವಿದ್ವಾಂಸ "ಗೋಲ್ಕೊಂಡಾವನ್ನು ಕ್ರಿ.ಶ. 1670ರಲ್ಲಿ ಆಳುತ್ತಿದ್ದ ಕುತುಬಶಾಹಿ ವಂಶದ ಕಡೆಯ ದೊರೆಯಾದ 'ಸುಲ್ತಾನ್ ಅಬ್ದುಲ್ ಹಸನ್'ನನು ತನ್ನ ರಾಜ್ಯಭಾರದ ಜವಾಬ್ದಾರಿ ಯನ್ನು ಅಕ್ಕಣ್ಣ ಮತ್ತು ಮಾದಣ್ಣ ಎಂಬ ಇಬ್ಬರು ಬ್ರಾಹ್ಮಣರಿಗೆ ವಹಿಸಿಕೊಟ್ಟನು'' ಎಂದು ನೀಡಿದ ಹೇಳಿಕೆಗೆ ಪ್ರತಿಯಾಗಿ ರೈಸರ ಈ ಬರಹ ಪ್ರಕಟವಾಗಿದೆ.

ಅಕ್ಕಣ್ಣ ಮಾದಣ್ಣ ಎಂಬುವರು ಅಬ್ದುಲ್‌ಹಸನ್ನನಿಗೆ 250 ವರ್ಷಗಳ ಹಿಂದೆ, ಎಂದರೆ ಕ್ರಿ.ಶ. 1431ರಲ್ಲಿ ಎರಡನೇ ದೇವರಾಯರಲ್ಲಿ ಕೆಲಸ ಮಾಡುತ್ತಿದ್ದರು ಎಂಬ ಮಾಹಿತಿಯನ್ನು ರೈಸ್ ಮುಳಬಾಗಿಲಿನ ಶಾಸನ ಒಂದರಿಂದ ಹೆಕ್ಕಿ ಈ ಪುಟ್ಟ ಪತ್ರದಲ್ಲಿ ವಿವರಿಸಿದ್ದಾರೆ. ಇನ್ನೊಂದು ಶಾಸನವು ಇವರಿಬ್ಬರನ್ನು ಅಕ್ಕಣ್ಣ ಒಡೆಯರ್ ಮತ್ತು ಮಾದಣ್ಣ ಒಡೆಯರ್ ಎಂದು ಕರೆದಿದೆ ಎಂದು ಹೇಳಿ ಟೇಕಲ್ ಪ್ರಾಂತ್ಯವನ್ನು ಆಳುತ್ತಿದ್ದ ಗೋಪಣ್ಣನು ಮಾದಣ್ಣನ ಸೋದರಳಿಯ ಎಂಬ ವಿವರವನ್ನು ಅವರು ಇಲ್ಲಿ ಕೊಟ್ಟಿದ್ದಾರೆ.

IV. Vaddavara (Ind. Ant. Vol. XXIII, 1894, P. 167, 168) :

ಶಾಸನ ಸಾಹಿತ್ಯದಲ್ಲಿ ಅಲ್ಲಲ್ಲಿ ಕಂಡುಬರುವ 'ವಡ್ಡವಾರ' ಎಂಬ ಶಬ್ದದ ಅರ್ಥವನ್ನು ವಿಶ್ಲೇಷಿಸಲು ರೈಸರು ಇಲ್ಲಿ ಯತ್ನಿಸಿದ್ದಾರೆ. ತಮ್ಮ ಸಹಾಯಕರಾದ ಬಿ.ಶ್ರೀನಿವಾಸ ಅಯ್ಯಂಗಾರ್‌ರವರು ನೀಡಿರುವ ಮಾಹಿತಿಯ ಆಧಾರದ ಮೇಲೆ ರನ್ನನ ಸಾಹಸ ಭೀಮ ವಿಜಯದ ಮೂರನೇ ಆಶ್ವಾಸದ 26ನೇ ಪದ್ಯದಲ್ಲಿ ಈ ಪದದ ಬಳಕೆಯಾಗಿರುವುದನ್ನು ಓದುಗರ ಗಮನಕ್ಕೆ ತಂದಿದ್ದಾರೆ. ದ್ರೋಣನನ್ನು ಕೊಲ್ಲಿಸಿದ ಕ್ರೂರಿಯನ್ನು ಧರ್ಮರಾಜನೆಂದು ಕರೆಯುವುದು ಅಮಂಗಳವಾದ ದಿನವನ್ನು ಮಂಗಳವಾರ, ವಡ್ಡವಾರವೆಂದು ಕರೆದಂತೆ' ಎಂಬ ಅರ್ಥದ ಈ ಪದ್ಯದ ಆಧಾರದಿಂದ 'ವಡ್ಡ' ಎನ್ನುವುದು ಸಂಸ್ಕೃತದ 'ವೃದ್ಧ' ಎಂಬುದರ ತದ್ಭವವಾಗಿದ್ದು ಏಳಿಗೆಯನ್ನು ಸೂಚಿಸುತ್ತದೆ. ಅದಕ್ಕೆ ವ್ಯತಿರಿಕ್ತವಾದದ್ದು ಶನಿಯ ಪ್ರಭಾವ. ಹಾಗಾಗಿ ಶನಿವಾರವನ್ನೇ ಹಿಂದಿನ ಕಾಲದ ಬರಹದಲ್ಲಿ ವಡ್ಡವಾರವೆಂದು ಸೂಚಿಸಲಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮುಂದಿನ ಬಹುಪಾಲು ಎಲ್ಲ ವಿದ್ವಾಂಸರು ಈ ನಿರ್ಣಯವನ್ನು ಒಪ್ಪಿದ್ದು ಸಾಹಿತ್ಯ ಪರಿಷತ್ತಿನ ಬೃಹತ್ ನಿಘಂಟೂ ಇದೇ ಅರ್ಥವನ್ನು ಸ್ವೀಕರಿಸಿದೆ.

V. A Kannda English Dictionary (JRAS, London; 1895 P. 232-235):

ಇದು ಕಿಟೆಲ್ಲರ ಪ್ರಖ್ಯಾತ ಕನ್ನಡ ಇಂಗ್ಲಿಷ್ ಶಬ್ದಕೋಶವನ್ನು ಕುರಿತಾದ ವಿಮರ್ಶೆಯಾಗಿದ್ದು ಈ ಲೇಖನವನ್ನು ಎಂ. ಮರಿಯಪ್ಪ ಭಟ್ಟರು ಕಿಟೆಲ್ ಕೋಶದ ಪರಿಷ್ಕೃತ ಮುದ್ರಣವನ್ನು ಸಿದ್ಧಪಡಿಸುವಾಗ, (1968) ಮೊದಲ ಸಂಪುಟದಲ್ಲಿ ಅನುಬಂಧವಾಗಿ (ಪು. XV-XVII)ಪ್ರಕಟಿಸಿದ್ದಾರೆ.

ಕಿಟೆಲರು ಈ ಕೋಶವನ್ನು ರಚಿಸಲು ಆರಂಭಿಸಿದ ಕಾಲದಿಂದಲೂ ಇದರ ವಿದ್ಯಮಾನಗಳನ್ನು ರೈಸ್ ಚೆನ್ನಾಗಿ ಬಲ್ಲವರಾಗಿದ್ದರಿಂದ ಇವರ ಗುಣ ಮತ್ತು ದೋಷಗಳ ಬಗ್ಗೆ ಅಧಿಕೃತವಾಗಿ ಮಾತನಾಡಿದ್ದಾರೆ. 'ದಕ್ಷಿಣ ಭಾರತೀಯ ಭಾಷಾ ವಿದ್ಯಾರ್ಥಿಗಳೆಲ್ಲರೂ ಈ ಕೋಶವನ್ನು ಸ್ವಾಗತಿಸಲು ಸಂತಸಪಡುತ್ತಾರೆ. ಏಕೆಂದರೆ ಈಗ ಕನ್ನಡ ಭಾಷೆ ಮತ್ತು

ಸಾಹಿತ್ಯಗಳನ್ನು ಕುರಿತಾದ ಅಧ್ಯಯನವು ವಿಶೇಷವಾಗಿ ತೀವ್ರಗತಿಯಲ್ಲಿದ್ದು ಇಂತಹುದೊಂದು ನಿಘಂಟಿನ ಅವಶ್ಯಕತೆ ಇತ್ತು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ರೀವ್ ಮತ್ತು ಸ್ಯಾಂಡರ್‌ಸನ್ ಇಬ್ಬರೂ ಕ್ರಮವಾಗಿ 1832 ಮತ್ತು 1858ರಲ್ಲಿ ಸಿದ್ಧಪಡಿಸಿದ ಕನ್ನಡ-ಇಂಗ್ಲಿಷ್ ನಿಘಂಟುಗಳೊಂದಿಗೆ ಕಿಟೆಲ್ ಕೋಶವನ್ನು ರೈಸ್ ತೌಲನಿಕವಾಗಿ ಗಮನಿಸಿ 'ಕಿಟೆಲ್ ಕೋಶವು ಪ್ರಾಚೀನ ಕನ್ನಡ ಗ್ರಂಥಗಳ ಅನೇಕ ಶಬ್ದಗಳನ್ನು ತೆಗೆದುಕೊಂಡಿದೆಯಲ್ಲದೆ ಅವುಗಳ ಬಳಕೆಯ ರೀತಿಯನ್ನು ವಿವರಿಸಲು ಅನೇಕ ಉದಾಹರಣೆಗಳನ್ನು ನೀಡಿದೆ. ಹಾಗಾಗಿ ಮೊದಲ ಎರಡು ನಿಘಂಟುಗಳಿಗಿಂತ ಇದು ಮೇಲ್ಮಟ್ಟದ್ದಾಗಿದೆ'' ಎಂದಿದ್ದಾರೆ.

ಈ ಕೋಶವನ್ನು ಉತ್ತಮಗೊಳಿಸಬಹುದಾದ ಸಾಧ್ಯತೆಗಳನ್ನು ಅವರು ಇಲ್ಲಿ ಸೂಚಿಸಿದ್ದಾರೆ. 'ಗುಣವರ್ಮ, ಪೊನ್ನ, ರನ್ನ, ನೃಪತುಂಗ ಮುಂತಾದವರ ಕೃತಿಗಳಿಂದ ಮತ್ತು ಪ್ರಾಚೀನ ನಿಘಂಟುಗಳಿಂದ ಶಬ್ದಗಳನ್ನು ಆಯ್ದುಕೊಳ್ಳಬೇಕು ಮತ್ತು ಇಂತಹ ಪದಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಾಮಾನ್ಯ ಸಂಸ್ಕೃತ ಶಬ್ದಗಳಾದ 'ದೀರ್ಘಕಾಲ' ಮೊದಲಾದವುಗಳನ್ನು ಕೈಬಿಡಬೇಕು' ಎಂಬ ಎರಡು ಸಲಹೆಗಳನ್ನು ಅವರು ನೀಡಿದ್ದಾರೆ.

ಕಿಟೆಲ್ಲರು ಕನ್ನಡ ಎಂಬ ಶಬ್ದವನ್ನು ಆಗಿನ ಕಾಲದ ಪಾಶ್ಚಾತ್ಯರ ಪದ್ಧತಿಯಲ್ಲಿ 'Canarese', 'Kanarese' ಅಥವಾ 'Canariyas' ಎಂದು ಉಚ್ಚರಿಸದೆ 'ಕನ್ನಡ' ಎಂದೇ ಉಚ್ಚರಿಸಿರುವುದಕ್ಕಾಗಿ ರೈಸರು ಬಹಳ ಸಂತೋಷವನ್ನು ಲೇಖನದ ಕೊನೆಯಲ್ಲಿ ವ್ಯಕ್ತಪಡಿಸಿದ್ದಾರೆ. ''ತೆಲುಗು, ಮಲಯಾಳಂ, ತಮಿಳುಗಳಂತಹ ಇತರ ಭಾರತೀಯ ಭಾಷೆಗಳನ್ನು ಅವುಗಳ ಸರಿಯಾದ ರೂಪದಲ್ಲಿಯೇ ಬಳಸುತ್ತಿದ್ದಾಗ ಕನ್ನಡಕ್ಕೆ ಮಾತ್ರ ಈ ಗತಿ ಬರಬಾರದು. ಪ್ರಸ್ತುತ ಕನ್ನಡ ನಾಡು-ನುಡಿ, ಇವುಗಳ ಬಗ್ಗೆ ಜಾಗೃತಿ ಹೆಚ್ಚಾಗುತ್ತಿದ್ದು ಈ ಸಮಯದಲ್ಲಿ 'ಕನ್ನಡ' ಎಂಬ ಶಬ್ದವನ್ನು ಪುನಃ ಜಾರಿಗೆ ತರುವುದು ಯೋಗ್ಯವಾಗಿದೆ'' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

VI. **Kollipaka** (Ind. Ant. Vol. XLIV 1915. P. 213-214) :

ಚೋಳರು ಮತ್ತು ಪಶ್ಚಿಮ ಚಾಲುಕ್ಯರ ನಡುವೆ 12ನೇ ಶತಮಾನದಲ್ಲಿ ನಡೆದ ಯುದ್ಧಗಳನ್ನು ವಿವರಗಳನ್ನು ನೀಡುವ ಅನೇಕ ಶಾಸನಗಳಲ್ಲಿ ಉಕ್ತವಾಗಿರುವ 'ಕೊಲ್ಲಿಪಾಕ' ಎಂಬ ಊರು ಎಲ್ಲಿದೆ ಎಂಬ ಅಂಶವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ತಂಜಾವೂರು, ನಂದಿಗುಂಡು, ಟಿ.ನರಸೀಪುರ, ತಡಿ ಮಾಲಿಂಗಿ, ತಿರುಮಲ, ಭೈರನಹಟ್ಟಿ, ಬಳ್ಳಿಗಾವೆ ಮುಂತಾದ ಅನೇಕ ಸ್ಥಳಗಳಲ್ಲಿರುವ ಶಾಸನಗಳಲ್ಲಿ ಈ ಊರಿನ ಹೆಸರು ಉಕ್ತವಾಗಿದ್ದರೂ ಅದರ ಪತ್ತೆ ತಮಗೆ ಸಿಕ್ಕಿರಲಿಲ್ಲವೆಂದು ರೈಸ್ ಒಪ್ಪಿಕೊಂಡಿದ್ದಾರೆ. ಆದರೆ 1915ರ ಏಪ್ರಿಲ್ 14ರಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ

'Kollipak-the Benaras of the South' ಎಂಬ ಲೇಖನವನ್ನು ಓದಿದ ಮೇಲೆ ಈ ಸ್ಥಳವು ಸಿಕಂದರಾಬಾದಿನಿಂದ 42 ಮೈಲಿಗಳ ದೂರವಿದೆ ಎಂದು ಅವರಿಗೆ ತಿಳಿದು ಬಂದಿತು. ಅನಂತರ ಅವರಿಗೆ ಲಭ್ಯವಾದ ಆ ಸ್ಥಳದ ಇತರ ವಿವರಗಳನ್ನು ಹಾಗೂ ಆ ಊರಿನಲ್ಲಿ ಒಂದು ದೇವಾಲಯದಲ್ಲಿ ದರ್ಜಿಗಳು ವಿಶೇಷವಾಗಿ ಪೂಜಿಸುವ ಪ್ರತಿಮೆಯನ್ನು ಅವರು ದಾಖಲಿಸಿದ್ದಾರೆ.

VII. Mullur (Ind Ant. Vol. XLV 1916. P-141-142) :

ಮುಳ್ಳೂರು ಎಂಬುದು ಕೊಡಗು ಪ್ರಾಂತ್ಯದ ಉತ್ತರ ಭಾಗದಲ್ಲಿರುವ ಒಂದು ಸಣ್ಣ ಹಳ್ಳಿಯಾಗಿದ್ದು ಪ್ರಾಚೀನ ಜೈನ ಬಸದಿಗಳಿಂದಾಗಿ ಪ್ರಸಿದ್ಧವಾಗಿದೆ. ಜೈನಧರ್ಮೀಯರಾದ ಕೊಂಗಾಳ್ವರ ಆಳ್ವಿಕೆಯ ಕಾಲದಲ್ಲಿ ಈ ಸ್ಥಳ ಪ್ರವರ್ಧಮಾನಕ್ಕೆ ಬಂದಿತು. ಆ ಸಮಯದಲ್ಲಿ ರಾಜಗುರುವಾಗಿದ್ದಾತ ದ್ರವಿಳಗಣ, ನಂದಿಸಂಘ ಮತ್ತು ಅರುಮಂಗಳ ಅನ್ವಯಕ್ಕೆ ಸೇರಿದ ಪುಷ್ಪಸೇನನ ಅನುಯಾಯಿಯಾದ ಗುಣಸೇನ.

ರಾಜಾಧಿರಾಜ ಕೊಂಗಾಳ್ವನ ತಾಯಿಯಾದ ಪೋಚಬ್ಬರಸಿಯು ಈ ಊರಿನಲ್ಲಿ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ್ದಾಳೆ. ಆಕೆಯ ಗುರುವಾದ ಗುಣಸೇನನು ಕ್ರಿ.ಶ. 1064ರಲ್ಲಿ 'ಮೋಕ್ಷಲಕ್ಷ್ಮಿಯನ್ನು ಹೊಂದಿದ'ನೆಂದು ಇಲ್ಲಿನ ಶಾಸನ ತಿಳಿಸುತ್ತದೆ ಎಂದು ರೈಸರು ಈ ಸ್ಥಳದ ವಿವರಣೆಯನ್ನು ಕೊಟ್ಟಿದ್ದಾರೆ.

VIII. Mahishamandala (JRAS. July 1911 Jan 1912) :

ನರ್ಮದಾ ನದಿಯ ಬಳಿ ಇರುವ ಮಾಹಿಷ್ಮತಿಯು ಮಹಿಷಮಂಡಲದ ರಾಜಧಾನಿ ಎಂಬ ಅರ್ಥಬರುವ ಲೇಖನವೊಂದು 1910ರಲ್ಲಿ ರಾಯಲ್ ಏಷಿಯಾಟಿಕ್ ಸೊಸೈಟಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಗಮನಿಸಿ ರೈಸರು ಈ ಬರಹವನ್ನು ಅದೇ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಮಾಹಿಷ್ಮತಿಗೂ ಮಹಿಷಮಂಡಲಕ್ಕೂ ಹೆಸರಿನ ಮೊದಲರ್ಧದಲ್ಲಿ ಸಾಕಷ್ಟು ಸಾಮ್ಯತೆ ಇದೆಯಾದರೂ ಎರಡೂ ವಿಭಿನ್ನವಾದವು ಎಂಬುದನ್ನು ಅವರು ಇಲ್ಲಿ ತೋರಿಸಿಕೊಟ್ಟಿದ್ದಾರೆ. ಮಹಿಷ ಮಂಡಲವು 3ನೇ ಶತಮಾನದಲ್ಲಿ ಬೌದ್ಧ ಧರ್ಮಪ್ರಚಾರಕನನ್ನು ಅಶೋಕನು ಕಳುಹಿಸಿದ ಪ್ರಾಂತ್ಯಗಳಲ್ಲಿ ಒಂದು ಎಂದು ಅವರು ಹೇಳಿ ಈಗಿನ ಮೈಸೂರು ಸಾಮ್ರಾಜ್ಯವನ್ನು ಒಳಗೊಂಡಿದ್ದ ಭೂಪ್ರದೇಶವನ್ನೇ ಆಗ ಮಹಿಷಮಂಡಲವೆಂದು ಕರೆಯಲಾಗುತ್ತಿತ್ತೆಂದು ಪ್ರತಿಪಾದಿಸಿದ್ದಾರೆ. ತಮಿಳಿನ ಅತ್ಯಂತ ಪ್ರಾಚೀನ ಕೃತಿಗಳಲ್ಲಿ ಈ ಪ್ರಾಂತ್ಯವನ್ನು ಎರುಮೈನಾಡು, ಎರುಮೈಯೂರು ಮುಂತಾಗಿ ನಿರ್ದೇಶಿಸಿದ್ದನ್ನು ಅವರು ಗಮನಿಸಿದ್ದಾರೆ. ಈ ಎರುಮೈನಾಡು ಮಹಿಷಮಂಡಲವೆಂಬ ಪ್ರಾಂತ್ಯವೆಂದೂ, ಎರುಮೈಯೂರು ಅದರ

ಪ್ರಮುಖ ಸ್ಥಳವಾಗಿದ್ದ ಮೈಸೂರೆಂದು ಅವರು ಚಾರಿತ್ರಿಕ ಆಧಾರಗಳನ್ನು ಬಳಸಿ ನಿರ್ಧರಿಸಿದ್ದಾರೆ.

ರೈಸರ ಈ ಲೇಖನಕ್ಕೆ ಪ್ರತಿಯಾಗಿ ಅದೇ ಪತ್ರಿಕೆಯಲ್ಲಿ ಫ್ಲೀಟರು ಪ್ರತಿಕ್ರಿಯೆಯ ರೂಪದ ಲೇಖನವನ್ನು ಬರೆದು 'ರೈಸ್ ಶ್ರವಣಬೆಳಗೊಳದ ಭದ್ರಬಾಹುವಿನ ಶಾಸನವನ್ನು ಆಧರಿಸಿ ಈ ಎಲ್ಲ ವಿವರಗಳನ್ನು ಹೇಳಿದ್ದಾರೆ. ಜೊತೆಗೆ ಬ್ರಹ್ಮಗಿರಿ ಮುಂತಾದ ಪ್ರದೇಶಗಳಲ್ಲಿ ದೊರೆತಿರುವ ಅಶೋಕನ ಶಾಸನಗಳ ಆಧಾರದ ಮೇಲೆ ಮೌರ್ಯ ಸಾಮ್ರಾಜ್ಯವು ಇಲ್ಲಿಯವರೆಗೂ ಹಬ್ಬಿತ್ತೆಂದು ಅವರು ಭಾವಿಸಿದ್ದಾರೆ. ಆದರೆ ಆ ಶಾಸನಗಳು ರಾಜಾಜ್ಞೆಗಳಲ್ಲ. ಬದಲಿಗೆ ಯಾವ ಪ್ರಾಂತ್ಯದಲ್ಲಿಯಾದರೂ ಯಾರಾದರೂ ಹಾಕಿಸಲು ಒಪ್ಪಬಹುದಾದ ನೈತಿಕತೆಯನ್ನು ಸಾರುವ ಬರಹಗಳು. ಹಾಗಾಗಿ 11ನೇ ಶತಮಾನಕ್ಕಿಂತ ಮುಂಚೆ ಮಹಿಷ ಮಂಡಲ ಅಥವಾ ಮೈಸೂರು ಎಂದು ಈ ಪ್ರಾಂತ್ಯವನ್ನು ಕರೆಯಲು ಯಾವ ದಾಖಲೆಗಳೂ ಇಲ್ಲ. ಹಾಗಾಗಿ ತಮಿಳು ಕಾವ್ಯಗಳಲ್ಲಿ ಬರುವ ಎರುಮೈನಾಡು ತಮಿಳುನಾಡಿನ ಯಾವುದೋ ಒಂದು ಚಿಕ್ಕ ಪ್ರದೇಶವಿರಬೇಕು. ಆದ್ದರಿಂದ ಮಹಿಷಮಂಡಲವನ್ನು ಈಗಿನ ಮೈಸೂರು ಪ್ರಾಂತ್ಯದೊಂದಿಗೆ ಸಮೀಕರಿಸಲು ಯಾವುದೇ ಆಧಾರಗಳಿಲ್ಲ' ಎಂದಿದ್ದಾರೆ.[1]

ಫ್ಲೀಟರ ಈ ಅಭಿಪ್ರಾಯವು ರೈಸರು ಇದೇ ಹೆಸರಿನ ಇನ್ನೊಂದು ಲೇಖನವನ್ನು 1912ರ ಜನವರಿ ಸಂಚಿಕೆಯಲ್ಲಿ ಬರೆಯಲು ಕಾರಣವಾಯಿತು. (ಪುಟ 241-244). ಇದಕ್ಕೆ ಮತ್ತೆ ಫ್ಲೀಟರು ಉತ್ತರಿಸಿ ಬೌದ್ಧ ಸಾಹಿತ್ಯದಲ್ಲಿ ದಾಖಲಾಗಿರುವ ಮಹಿಷಮಂಡಲವು ನರ್ಮದೆಯ ಬಳಿಯಿರುವ ಈಗಿನ ಮಾಂಧಾತವೇ ಎಂದು ಮತ್ತೆ ತಮ್ಮ ವಾದವನ್ನು ಪುನರುಚ್ಚರಿಸಿದ್ದಾರೆ. 'ಈ ವಿವಾದವನ್ನು ಇಲ್ಲಿಗೆ ಸಮಾಪ್ತಿಗೊಳಿಸಲಾಗಿದೆ' ಎಂಬ ಸಂಪಾದಕರ ಟಿಪ್ಪಣಿಯೊಂದಿಗೆ ಈ ಲೇಖನ ಮುಕ್ತಾಯವಾಗಿದ್ದರೂ ಮೈಸೂರು ಪ್ರಾಂತ್ಯದಲ್ಲಿಯೇ ಮಹಿಷಮಂಡಲವಿತ್ತೆಂದು ಈಗಿನ ಎಲ್ಲ ವಿದ್ವಾಂಸರೂ ನಿರ್ವಿವಾದವಾಗಿ ಒಪ್ಪಿಕೊಂಡಿದ್ದಾರೆ.

IX. John Faithfull Fleet (E. I. Vol. XIII 1982, P. IX-XI) :

ಖ್ಯಾತ ಶಾಸನತಜ್ಞ, ತಮ್ಮ ಆಪ್ತಗೆಳೆಯ ಮತ್ತು ಟೀಕಾಕಾರರಾಗಿದ್ದ ಜೆ.ಎಫ್. ಫ್ಲೀಟರ ನಿಧನಾನಂತರ ರೈಸರು ಬರೆದಿರುವ ಶ್ರದ್ಧಾಂಜಲಿಯ ಬರಹವಿದು. ಈ ಲೇಖನದಲ್ಲಿ ರೈಸರು ಫ್ಲೀಟರ ಜೀವನ ಚರಿತ್ರೆ, ಅವರ ವಿದ್ಯಾಭ್ಯಾಸ-ನೌಕರಿಯ ವಿವರಗಳು; ಅವರು ಸಂಪಾದಿಸಿದ ಮತ್ತು ರಚಿಸಿದ ಕೃತಿಗಳು ಪ್ರಾಚೀನ ರಾಜವಂಶಗಳ ಕಾಲಗಣನೆಯ ವಿಷಯದಲ್ಲಿ ಅವರು ಗಳಿಸಿದ್ದ ಪಾಂಡಿತ್ಯ ಮುಂತಾದವುಗಳನ್ನು ವಿವರವಾಗಿ ಪ್ರಸ್ತಾಪಿಸಿದ್ದಾರೆ. 1912ರಲ್ಲಿ ಫ್ಲೀಟರಿಗೆ ರಾಯಲ್ ಏಷಿಯಾಟಿಕ್ ಸೊಸೈಟಿಯ ಸುವರ್ಣಪದಕ

---

1 IRAS July 1911, P. 817–819.

ಲಭ್ಯವಾದದ್ದನ್ನು ಉಲ್ಲೇಖಿಸುತ್ತಾ 'ಕೀಲ್‌ಹಾರ್ನ್ ಒಬ್ಬರನ್ನು ಶಾಸನ ಮತ್ತು ಕಾಲಗಣನಾ ಶಾಸ್ತ್ರಕ್ಕೆ ಕರೆತಂದ ಏಕೈಕ ಕಾರಣಕ್ಕೇ ಬೇಕಿದ್ದರೆ ಅವರಿಗೆ ಈ ಪದಕವನ್ನು ನೀಡಬಹುದು' ಎಂದು ಅಭಿಪ್ರಾಯಪಟ್ಟಿದ್ದಾರೆ. 'ಅನೇಕ ಭಾರತೀಯ ವಿದ್ವಾಂಸರನ್ನು ಶಾಸ್ತ್ರದಲ್ಲಿ ನಿಪುಣ ರನ್ನಾಗಿ ಮಾಡಿದವರು ಅವರು' ಎಂದು ಶ್ಲಾಘಿಸಿದ್ದಾರೆ.

> *"Dr. Fleet has a claim to be hold in honourable rememberance as in the front rank of the devoted band of eminent Bombay Scholars who have distinguished themselves in antiquirian research"* ಎಂಬ ವಾಕ್ಯದೊಂದಿಗೆ ಲೇಖನವನ್ನು ಅವರು ಸಮಾಪ್ತಿಗೊಳಿಸಿದ್ದಾರೆ.

X. Gangavadi :

ಈ ಲೇಖನವು 1917ರಲ್ಲಿ ಪ್ರಕಟವಾದ ಖ್ಯಾತ ಸಂಸ್ಕೃತ ವಿದ್ವಾಂಸರಾದ ಆರ್.ಜಿ. ಭಂಡಾರ್ಕರ್‌ರವರ ಸ್ಮರಣಗ್ರಂಥದಲ್ಲಿ ಸೇರ್ಪಡೆಯಾಗಿದೆ (ಪು. 238-247). ದಕ್ಷಿಣಭಾರತದಲ್ಲಿ ಕ್ರಿ.ಶ. ಮೊದಲಶತಮಾನದಲ್ಲಿ ದಕ್ಷಿಣಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದ ಜೈನ ಸಾಮ್ರಾಜ್ಯಗಳಲ್ಲಿ ಒಂದಾದ ಗಂಗವಾಡಿಯನ್ನು ಪರಿಚಯಿಸುವುದು ಇಲ್ಲಿಯ ಉದ್ದೇಶ. 'ಈ ಹೆಸರು ಮೊದಲಿಗೆ ಈ ಪ್ರಾಂತ್ಯವನ್ನು ಆಳುತ್ತಿದ್ದ ಗಂಗರೆಂಬ ರಾಜಮನೆತನ ದಿಂದಾಗಿ ಬಂದಿದ್ದು ಈಗಿನ ಮೈಸೂರು ಸಂಸ್ಥಾನದ ಬಹುಭಾಗವು ಗಂಗವಾಡಿಗೆ ಸೇರಿತ್ತು. ಆ ಪ್ರಾಂತ್ಯದ ನಾಗರೀಕರು ಇಂದಿಗೂ 'ಗಂಗಡಿಕಾರ'ರೆಂಬ ಕೃಷಿಕ ಸಮುದಾಯಕ್ಕೆ ಸೇರಿದ್ದು ಅವರ ಮೂಲಹೆಸರು 'ಗಂಗವಾಡಿಕಾರ' ಎನ್ನುವುದಾಗಿದೆ ಎಂದು ರೈಸ್ ವಿವರಿಸಿದ್ದಾರೆ.

ಮೈಸೂರು ಪ್ರಾಂತ್ಯಕ್ಕೆ ಗಂಗವಾಡಿ ಎಂಬ ಹೆಸರು ಬರುವುದಕ್ಕಿಂತಲೂ ಮುಂಚಿನ ಇತಿಹಾಸವನ್ನು ನಿರೂಪಿಸಲು ರೈಸ್ ಯತ್ನಿಸಿದ್ದಾರೆ. ಶ್ರವಣಬೆಳಗೊಳದ ಕ್ರಿ.ಪೂ. ಮೂರನೇ ಶತಮಾನದ ಭದ್ರಬಾಹುವಿನ ಶಾಸನವನ್ನು ಅವರು ಉಲ್ಲೇಖಿಸಿ ಆ ಕಾಲದಿಂದಲೂ ಈ ಪ್ರಾಂತ್ಯಪ್ರಸಿದ್ಧವಾಗಿದ್ದು ತಿಳಿದುಬರುತ್ತದೆ. ಭದ್ರಬಾಹುವಿನ ಶಿಷ್ಯನಾದ ಚಂದ್ರಗುಪ್ತನ ಮೊಮ್ಮಗ ಅಶೋಕನ ಕಾಲದಲ್ಲಿ ಬೌದ್ಧಧರ್ಮ ಪ್ರಚಾರಕರು ಇಲ್ಲಿಗೆ ಬರಲಾರಂಭಿಸಿದರು ಎಂದು ವಿವರಿಸಿದ್ದಾರೆ.

ಶಾತವಾಹನರ ಅವನತಿಯ ಕಾಲವಾದ ಕ್ರಿ.ಶ. 2ನೇ ಶತಮಾನದ ವೇಳೆಗೆ ಗಂಗವಾಡಿಯ ಉಗಮವಾಗಿರಬಹುದೆಂದು ಅವರು ಊಹಿಸಿದ್ದಾರೆ. ಶಾತವಾಹನರ ನಂತರ ಕದಂಬರು ಈ ಮಾಡನ್ನು ಆಳಿದರಾದರೂ ಬಹುಭಾಗ ಗಂಗರಿಗೆ ಸೇರಿತ್ತು. ಅದೇ ಗಂಗವಾಡಿ = ಗಂಗಪಾಡಿ = ಗಂಗಪಾತಿ. ಮೂರನೇ ಶತಮಾನದಲ್ಲಿ ಪಲ್ಲವರು ಗಂಗರ ಮೊದಮೊದಲಿನ ದೊರೆಗಳ ಪಟ್ಟಬಂಧದಲ್ಲಿ ಪಾಲ್ಗೊಂಡಿದ್ದರು ಎಂಬ ವಿವರಗಳನ್ನು ಅವರು ಶಾಸನಗಳನ್ನು ಆಧರಿಸಿ ನೀಡಿದ್ದಾರೆ.

ಸ್ಥಳನಾಮಗಳ ಮುಂದೆ ಕೆಲವು ಸಂಖ್ಯೆಗಳಿರುವುದರ ಔಚಿತ್ಯವೇನು ಎನ್ನುವುದನ್ನು ಕುರಿತು ರೈಸರು ಇಲ್ಲಿ ವಿವೇಚಿಸಿದ್ದಾರೆ. ಗಂಗವಾಡಿಯು 96,000 ನಾಡಾಗಿದ್ದು ಮೈಸೂರಿನ ಉಳಿದ ಭಾಗವು ನೊಳಂಬವಾಡಿ 32,000, ಬನವಾಸಿ 12,000 ಮತ್ತು ಪುನ್ನಾಡು 6,000ಗಳಿಂದ ಆವೃತ್ತವಾಗಿದ್ದವು. ಈ ಸಂಖ್ಯೆಗಳು ನಿಷ್ಕ ಅಥವಾ ವರಹವೆಂದು ಕರೆಯಲ್ಪಡುತ್ತಿದ್ದ ನಾಣ್ಯದಿಂದ ಒಟ್ಟು ಮಾಡಬೇಕಿದ್ದ ಕಂದಾಯದ ಮೊತ್ತದ ಸೂಚಕಗಳಿರಬೇಕೆಂದು ಅವರು ಭಾವಿಸಿದ್ದಾರೆ.

ಗಂಗರಾಜ್ಯದ ಸೀಮೆ; ಕೋಲಾರವು ಅವರ ಮೊದಲ ರಾಜಧಾನಿಯಾಗಿದ್ದು; ಗಂಗವಾಡಿಯ ಜೀವನದಿಯಾದ ಕಾವೇರಿಯ ಪೌರಾಣಿಕ ಹಿನ್ನೆಲೆ; ಅದು ಹರಿಯುವ ಮಾರ್ಗ; ಇಲ್ಲಿಯ ಪರ್ವತಗಳು; ಇತರ ರಾಜವಂಶಗಳವರೊಂದಿಗೆ ಗಂಗರ ರಾಜಕೀಯ ಸಂಬಂಧ ಇತ್ಯಾದಿಗಳನ್ನು ವಿವರಿಸಿ ಕೊನೆಗೆ ಕ್ರಿ.ಶ. 1004ರಲ್ಲಿ ರಾಜೇಂದ್ರ ಚೋಳನು ಗಂಗರನ್ನು ಸೋಲಿಸಿ 'ಗಂಗೈಕೊಂಡ ಚೋಳ' ಎಂಬ ಬಿರುದನ್ನು ಪಡೆದಾಗ ಗಂಡವಾಡಿಯ ಸಮಾಪ್ತಿಯಾಯಿತು ಎಂದು ಲೇಖನವನ್ನು ಮುಗಿಸಿದ್ದಾರೆ.

ಮೈಸೂರಿನ ಪ್ರಸಿದ್ಧರಾಜವಂಶವಾದ ಗಂಗರ ಬಗೆಗೆ ಮೊದಲಿನಿಂದಲೂ ಆಸಕ್ತ ತಳೆದಿದ್ದ ರೈಸರು ಈ ವಿಷಯವನ್ನು ಆಯ್ದುಕೊಂಡಿರುವುದು ಬಹಳ ಸ್ವಾಭಾವಿಕವಾಗಿದೆ.

XI. Mysore State :

ಜೇಮ್ಸ್ ಹೇಸ್ಟಿಂಗ್ಸ್ ಸಂಪಾದಿಸಿ 1917ರಲ್ಲಿ ಪ್ರಕಟವಾಗಿರುವ 'Encyclopedia of Religion and Ethics' ಕೃತಿಯಲ್ಲಿ ಈ ಲೇಖನವು ಪ್ರಕಟವಾಗಿದೆ. (ಸಂಪುಟ X, ಪು. 64-70) ಸುಮಾರು ಐದುಪುಟಗಳ ಈ ಲೇಖನದಲ್ಲಿ ರೈಸರು ಮೈಸೂರು ಸಂಸ್ಥಾನವನ್ನು ಕುರಿತಾದ ಎಲ್ಲ ಪ್ರಾಥಮಿಕ ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಅದರ ಚರಿತ್ರೆ, ಮೈಸೂರು ಎಂಬ ಹೆಸರು ಬರಲು ಕಾರಣ ಮುಂತಾದವುಗಳನ್ನು ಮೊದಲಿಗೆ ನಿರೂಪಿಸಿದ್ದಾರೆ. ಈ ವಿಶ್ವಕೋಶವು ಪ್ರಧಾನವಾಗಿ ಧರ್ಮಕ್ಕೆ ಸಂಬಂಧಿಸಿರುವುದರಿಂದ ಮುಂದೆ ನಾಗಾರಾಧನೆ, ಮಾತೃಆರಾಧನೆ, ಭೂತಾರಾಧನೆಯಂತಹ ಪ್ರಾಚೀನ ಪದ್ಧತಿಗಳು; ಜೈನ, ಶೈವ, ವೈಷ್ಣವ, ವೀರಶೈವ, ಬ್ರಾಹ್ಮಣ, ಮುಸಲ್ಮಾನ ಮತ್ತು ಕ್ರೈಸ್ತ ಮತಗಳ ಬಗೆಗೆ ಹೆಚ್ಚಿನ ವಿವರಗಳಿವೆ. ಶಾಲೆಗಳಲ್ಲಿ ನೀತಿಪಾಠಗಳ ಮತ್ತು ಪ್ರಾರ್ಥನೆಗಳನ್ನು ನಡೆಸುವ ಮೂಲಕ ಸರ್ಕಾರವು ಧಾರ್ಮಿಕ ಸಾಮರಸ್ಯವನ್ನು ಹೇಗೆ ಕಾಯ್ದುಕೊಂಡು ಬಂದಿದೆ ಎಂಬ ಮಾಹಿತಿಯೊಂದಿಗೆ ಈ ಲೇಖನ ಸಮಾಪ್ತವಾಗಿದೆ.

XII. Smarthas :

ಜೇಮ್ಸ್ ಹೇಸ್ಟಿಂಗ್ ಸಂಪಾದಿಸಿ, ಟಿ.ಅಂಡ್.ಟಿ. ಕ್ಲಾರ್ಕ್ ಸಂಸ್ಥೆಯವರು ಪ್ರಕಟಿಸಿರುವ 'Encylopedia of Religion and Ethics'ನ ಹನ್ನೊಂದನೇ ಸಂಪುಟದಲ್ಲಿ ಈ ಲೇಖನ ಅಚ್ಚಾಗಿದೆ (ಪು. 631-632) ಶಂಕರಾಚಾರ್ಯರನ್ನು ಗುರುಗಳೆಂದು ಪರಿಗಣಿಸಿ ಅದ್ವೈತ ಸಿದ್ಧಾಂತವನ್ನು ಅನುಸರಿಸುವ ಬ್ರಾಹ್ಮಣ ಪಂಗಡವೇ ಸ್ಮಾರ್ತರು.

ಕೇವಲ ಒಂದು ಪುಟದಷ್ಟೇ ಇರುವ ಈ ಪುಟ್ಟಲೇಖನದಲ್ಲಿ ರೈಸರು 'ಸ್ಮಾರ್ತ' ಶಬ್ದದ ವ್ಯುತ್ಪತ್ತಿ; ಅದ್ವೈತ ಸಿದ್ಧಾಂತದ ಮೂಲತತ್ವಗಳು; ಸ್ಮಾರ್ತರ ಮುಖ್ಯ ಸ್ಥಳವಾದ ಶೃಂಗೇರಿಯ ವಿವರಗಳು; ಅಲ್ಲಿಯ ಮಠದ ಸ್ಥೂಲ ಚರಿತ್ರೆ; ಈ ಮಠದ ಯತಿಗಳಲ್ಲಿ ಒಬ್ಬರಾದ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಲ್ಲಿ ವಹಿಸಿದ ಪಾತ್ರ; ಇತರೆಡೆಗಳಲ್ಲಿರುವ ಮಠಗಳು-ಇತ್ಯಾದಿಗಳನ್ನು ವಿವರಿಸಿದ್ದಾರೆ.

ಸ್ಮಾರ್ತ ಎಂಬ ಶಬ್ದಕ್ಕೆ 'ಸ್ಮೃತಿ'ಯನ್ನು ಆಧರಿಸಿದವರು ಎಂಬ ಅರ್ಥವನ್ನು ನೀಡುತ್ತಾ ರೈಸರು ಇವರು 'ಶ್ರುತಿ'ಯನ್ನು ನಂಬಿದವರಿಗಿಂತ ಭಿನ್ನ ಎಂಬುದನ್ನು ಮನುಸ್ಮೃತಿಯನ್ನು ಉಲ್ಲೇಖಿಸಿ ವಿವರಿಸಿದ್ದಾರೆ. 'ಸ್ಮಾರ್ತರು ತ್ರಿಮೂರ್ತಿಗಳನ್ನೂ ಪೂಜಿಸುತ್ತಾರಾದರೂ ಇವರ ಪ್ರಧಾನ ದೈವ ಶಿವ. ಜೀವಾತ್ಮ- ಪರಮಾತ್ಮಗಳು ಒಂದೇ ಎಂಬ ಅದ್ವೈತ ವೇದಾಂತವನ್ನು ನಂಬುವುದರಿಂದ ಎಲ್ಲ ಹಿಂದೂ ದೇವತೆಗಳನ್ನು ಇವರು ಪೂಜಿಸುತ್ತಾರೆ. ಗಂಧದ ಅಥವಾ ಸಗಣಿಯನ್ನು ಸುಟ್ಟು ಮಾಡಿರುವ ಭಸ್ಮದ ಮೂರು ಗೆರೆಗಳನ್ನು ಹಣೆಯ ಮೇಲೆ ಮೂಡಿಸಿ ಕೊಂಡು ಹಣೆಯ ಮಧ್ಯದಲ್ಲಿ ಕುಂಕುಮದ ಬೊಟ್ಟನ್ನು ಇಟ್ಟುಕೊಂಡಿರುವುದು ಸ್ಮಾರ್ತ ಬ್ರಾಹ್ಮಣನ ಲಕ್ಷಣಗಳಾಗಿವೆ' ಎಂದು ರೈಸ್ ವಿವರಿಸಿದ್ದಾರೆ.

ಈ ಲೇಖನದ ಪ್ರಮುಖವಾದ ಭಾಗವೆಂದರೆ ಸ್ಮಾರ್ತರಲ್ಲಿರುವ ಉಪಪಂಗಡಗಳ ವಿವರಣೆ. ಬಡಗನಾಡು, ದೇಶಸ್ಥ, ಬಬ್ಬೂರುಕಮ್ಮೆ ಉಲುಚಕಮ್ಮೆ ಮುಲಕನಾಡು, ಹೊಯ್ಸಣಿಗ, ಆರವೇಲು, ಚಿತ್ಪವನ, ಹವ್ಯಕ, ಕಂದಾವರ, ಕವರ್ಗ, ಕೋಟ, ಕೋಟೇಶ್ವರ, ಕುಶಸ್ಥಳ, ಶಿಶುವರ್ಗ, ಕರಾಡೆ, ಕೊಂಕಣಸ್ಥ, ನಂದವೈದಿಕ, ಪ್ರಥಮಶಾಖೆ, ಸಹವಾಸಿ, ಸಂಕೇತಿ, ಸೀರನಾಡು, ವೆಂಗಿಪುರಂ ಮತ್ತು ವೆಲನಾಡು ಎಂಬ ಒಟ್ಟು ಇಪ್ಪತ್ನಾಲ್ಕು ಒಳಪಂಗಡಗಳನ್ನು ರೈಸ್ ಇಲ್ಲಿ ದಾಖಲಿಸಿದ್ದಾರೆ. ಮಾತ್ರವಲ್ಲದೆ ಆಯಾ ಉಪಪಂಗಡದ ಮೂಲ ಸ್ಥಳ, ಅವರು ಆಡುವ ಭಾಷೆ, ವಿಶಿಷ್ಟವಾದ ಉದ್ಯೋಗವನ್ನು ಕೈಗೊಂಡಿದ್ದರೆ ಅದರ ವಿವರಗಳು (ಉದಾ: ಹವ್ಯಕರು-ಅಡಕೆ ಬೆಳೆಯುವ ಬಗ್ಗೆ, ಶಿವಳ್ಳಿ ಬ್ರಾಹ್ಮಣರು ಉದ್ಯಮಗಳಲ್ಲಿ ತೊಡಗಿರುವ ಬಗ್ಗೆ ಇತ್ಯಾದಿ), ಉಪಪಂಗಡಗಳಲ್ಲಿನ ಮರುವಿಭಾಗಗಳು (ಕೌಶಿಕ ಸಂಕೇತಿ, ಬೆಟ್ಟದಪುರದ ಸಂಕೇತಿ ಇತ್ಯಾದಿ) ಮುಂತಾದವುಗಳನ್ನು ಇಲ್ಲಿ ವಿವರಿಸ ಲಾಗಿದೆ.

'The Kamme Country Seems to have been to the east of the Kolar District' ಊಹೆಯನ್ನು ಅವರಿಲ್ಲಿ ಮಾಡಿದ್ದಾರಾದರೂ ಈ ಮಾತಿಗೆ ಆಧಾರ ವೇನೆಂಬುದನ್ನು ಹೇಳಿಲ್ಲ. ಲೇಖನದ ಮೂರನೆಯ ಭಾಗವು ಸ್ಮಾರ್ತರ ಪ್ರಮುಖ ಧಾರ್ಮಿಕ ಕೇಂದ್ರವಾದ ಶೃಂಗೇರಿಯ ಏಳುಬೀಳುಗಳನ್ನು ಸ್ಥೂಲವಾಗಿ ವಿವರಿಸುತ್ತದೆ. ಈ ನೆಲವು ಹೊಯ್ಸಳ ಮತ್ತು ವಿಜಯನಗರ ಸಾಮ್ರಾಜ್ಯಗಳೆರಡರ ಜನ್ಮಭೂಮಿ ಎಂಬುದನ್ನು ಪ್ರಸ್ತಾಪಿಸಿ ಹೊಯ್ಸಳರ ಪತನಾನಂತರದ ಪರಿಸ್ಥಿತಿಯ ಲಾಭ ಪಡೆದು ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆಂದು ಹೇಳಿದ್ದಾರೆ. ವಿಜಯನಗರ ಸಾಮ್ರಾಜ್ಯದ ಅವನತಿಯನಂತರ ಕೆಳದಿಯ ಅರಸರು ಶೃಂಗೇರಿ ಪ್ರಾಂತ್ಯವನ್ನು ಆಳತೊಡಗಿದಾಗ ಅವರು ವೈಯುಕ್ತಿಕವಾಗಿ ವೀರಶೈವರಾದರೂ ಮಠಕ್ಕೆ ಸುಭದ್ರತೆಯನ್ನು ಒದಗಿಸಿದರು ಎಂಬ ಅಂಶವನ್ನು ದಾಖಲಿಸಿದ್ದಾರೆ. ಆದರೆ ಹೈದರ್ ಮತ್ತು ಟಿಪ್ಪು ಇವರು ಶೃಂಗೇರಿ ಮಠಕ್ಕೆ ನೀಡಿರುವ ಅನೇಕ ದತ್ತಿ, ದಾನಗಳ ಬಗ್ಗೆ ಏನನ್ನೂ ಉಲ್ಲೇಖಿಸದೆ 'Sicne the Keladi or Bednur - kingdom was subdued, has been liberally maintained by the Raja's of Mysore' ಎಂದಷ್ಟೇ ಹೇಳಿ ಸುಮ್ಮನಾಗಿದ್ದಾರೆ. ಬದರಿ, ದ್ವಾರಕ, ಜಗನ್ನಾಥ ಮತ್ತು ಕುಂಭಕೋಣಂಗಳಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ್ದ ಇತರ ಮಠಗಳಿವೆ ಎಂಬ ಮಾಹಿತಿಯೊಂದಿಗೆ ಈ ಲೇಖನ ಮುಕ್ತಾಯವಾಗಿದೆ.

XIII. Earliest Annals of Mysore (JRAS. Centinary suppliment 1924, P. 199–205) :

ಪ್ರಸ್ತುತ ಲೇಖನದಲ್ಲಿ ರೈಸರು ಮೈಸೂರು ಸಂಸ್ಥಾನದ ಪ್ರಾಚೀನತೆಯನ್ನು ದಾಖಲಿಸುವ ಪ್ರಯತ್ನವನ್ನು ನೆಡೆಸಿದ್ದಾರೆ. ಇದಕ್ಕೆ ಆಧಾರವಾಗಿ ಅವರು ಶ್ರವಣ ಬೆಳಗೊಳದ ಪ್ರಖ್ಯಾತವಾದ ಭದ್ರಬಾಹು-ಚಂದ್ರಗುಪ್ತರ ಶಾಸನವನ್ನು ಬಳಸಿಕೊಂಡಿ ದ್ದಾರೆ. ಅವರ ಅಭಿಪ್ರಾಯದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಅಶೋಕನ ಶಾಸನಗಳು ಲಭ್ಯ ವಿರುವುದು ಮೌರ್ಯರ ಆಡಳಿತವು ಇಲ್ಲಿಯವರೆಗೂ ವ್ಯಾಪಿಸಿತ್ತು ಎಂಬುದರ ದ್ಯೋತಕ. ಜೈನರಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಥಗಳು ಮೂಡುವುದಕ್ಕೆ ಭದ್ರಬಾಹುವೇ ಕಾರಣ ಎಂದು ಪ್ರತಿಪಾದಿಸಿರುವ ಅವರು ಮಹಿಷಮಂಡಲ ಮತ್ತು ಪುನ್ನಾಟಗಳಲ್ಲಿ ಜೈನ ಧರ್ಮದ ಬೆಳವಣಿಗೆಗೆ ಸೂಕ್ತ ವಾತಾವರಣ ಕಲ್ಪಿತವಾದುದರಿಂದ ಈ ಪ್ರಾಂತ್ಯದಲ್ಲಿ ಅದು ಭದ್ರವಾಗಿ ನೆಲೆನಿಂತಿತು. ಮುಂದೆ ಗಂಗರ ಕಾಲದಲ್ಲಿ ಗುಪ್ತರ ಮತ್ತು ಗಂಗರ ನಡುವೆ ಸಾಮರಸ್ಯ ಏರ್ಪಟ್ಟಿತು ಎಂದು ಅವರು ವಿವರಿಸಿದ್ದಾರೆ. ರೈಸರು ಬರೆದಿರುವ ಉಪಲಬ್ಧ ಲೇಖನಗಳಲ್ಲಿ ಇದು ಕಟ್ಟಕಡೆಯದಾಗಿದೆ.

☆ ☆ ☆

9. ಉಪಸಂಹಾರ

ರೈಸರ ಜೀವನ ಮತ್ತು ಸಾಧನೆಗಳನ್ನು ಸಮೀಕ್ಷಿಸಲೆಂದು ಕೈಗೊಂಡ ಈ ಸಂಶೋಧನೆಯು ವ್ಯಾಪಕವಾದ ಕ್ಷೇತ್ರಕಾರ್ಯ ಮತ್ತು ಅಪಾರವಾದ ದಾಖಲೆಗಳ ಅಧ್ಯಯನದ ಫಲವಾಗಿದೆ. ಆದರೆ ಹಾಗೆಂದಮಾತ್ರಕ್ಕೆ ಈ ವ್ಯಾಸಂಗ ಇಲ್ಲಿಗೆ ಸಮಾಪ್ತವಾಯಿತೆಂದಲ್ಲ. ಇಷ್ಟೆಲ್ಲಾ ಹುಡುಕಾಟದ ನಂತರವೂ ಅನೇಕ ಪ್ರಶ್ನೆಗಳು ಪರಿಹಾರಕಾಣದೆ ಉಳಿದುಕೊಂಡಿವೆ. ಉದಾಹರಣೆಗೆ :

1. ರೈಸರು ಬರೆದಿರುವ ಎಲ್ಲ ಗ್ರಂಥ-ಲೇಖನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹುಡುಕಿ ಅಭ್ಯಸಿಸಲಾಗಿದೆ. ಅ. ಸುಂದರ ಅವರು ತಾವು ಸಂಪಾದಿಸಿರುವ ರೈಸರ ಕಾಲದ ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಯ ಪ್ರಸ್ತಾವನೆಯಲ್ಲಿ ರೈಸ್ ವಿರಚಿತ ಲೇಖನಗಳೆಂದು ಇಪ್ಪತ್ತೆಂಟು ಲೇಖನಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಂಶೋಧನೆಯಲ್ಲಿ ಈ ಇಪ್ಪತ್ತೆಂಟಲ್ಲದೆ ಹೆಚ್ಚುವರಿಯಾಗಿ ಇನ್ನೂ ಹನ್ನೊಂದು ಲೇಖನಗಳು ಪತ್ತೆಯಾಗಿವೆ. ಆದರೂ ಈ ಪಟ್ಟಿ ಪರಿಪೂರ್ಣವೆಂದು ಹೇಳಲಾಗದು. ಏಕೆಂದರೆ ರೈಸರು ತಾವು ಲೇಖನಗಳನ್ನು ಬರೆದಿರುವುದಾಗಿ ಹೆಸರಿಸುವ ಒಂದೆರಡು ಪತ್ರಿಕೆಗಳು ಇಂದು ನೋಡಲು ಲಭ್ಯವಿಲ್ಲ. ಇಂಗ್ಲಿಷ್ ಅಲ್ಲದೆ ಇತರ ಭಾಷೆಗಳಲ್ಲಿ ಅವರ ಬರಹಗಳೇನಾದರೂ ಪ್ರಕಟವಾಗಿದ್ದರೆ ತಿಳಿಯದು.
2. ಇಷ್ಟು ವಿಸ್ತೃತವಾದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಎಷ್ಟೇ ಪ್ರಯತ್ನಪೂರ್ವಕವಾಗಿ ಹುಡುಕಿದರೂ ರೈಸರ ಕನ್ನಡ ಕೈಬರಹದ ಒಂದೇ ಒಂದು ಪುಟವನ್ನೂ ಪತ್ತೆಹಚ್ಚಲಾಗಿಲ್ಲ.[1]
3. ರೈಸರ ಪ್ರತಿಯೊಂದು ಕೃತಿಯ ಒಂದೊಂದು ಪುಟದಲ್ಲಿಯೂ ಅವರ ವ್ಯಾಪಕವಾದ ಓದಿಗೆ ಆಧಾರಗಳು ಸಿಗುತ್ತವೆ. ದೇಶವಿದೇಶಗಳಲ್ಲಿ ಪ್ರಕಟವಾದ ವಿವಿಧಭಾಷೆಯ ವಿದ್ವತ್ ಪತ್ರಿಕೆಗಳು, ಬೃಹತ್ ಗ್ರಂಥಗಳು, ವರದಿಗಳು, ಪ್ರವಾಸ ಕಥನಗಳು ಮುಂತಾದ ಹಲವು ಹತ್ತು ಬಗೆಯ ಮಾಹಿತಿಗಳ ಆಗರವನ್ನೇ ಅವರು ಬಳಸಿಕೊಂಡಿದ್ದಾರೆ. ಇವೆಲ್ಲವೂ ಅವರಲ್ಲಿ ಹೇಗೆ ಬಂದವು? ಸರ್ಕಾರ ಅವರಿಗೆ ಕೊಡುತ್ತಿದ್ದ ಸಂಬಳ ನಿಜಕ್ಕೂ ಇಷ್ಟೆಲ್ಲಾ ಕೃತಿಗಳನ್ನು ಕೊಂಡುಕೊಳ್ಳುವಷ್ಟು ಹೆಚ್ಚಿನದಾಗಿರಲಿಲ್ಲ. ಇವೆಲ್ಲವೂ ಸರ್ಕಾರಕ್ಕೇ ಸೇರಿದ ಕೃತಿಗಳು ಎನ್ನುವುದಾದರೆ ಅವೆಲ್ಲಾ ಈಗ ಎಲ್ಲಿವೆ ಎಂಬಿತ್ಯಾದಿಯಾದ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ.

---

1 ಶ್ರೀನಿವಾಸಹಾವನೂರರು ತಮ್ಮ 'ಶಾಸನ ಪಿತಾಮಹ ಬಿ.ಎಲ್. ರೈಸ್' ಕೃತಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಮಿಶ್ರಿತ ಪತ್ರ ಒಂದನ್ನು ಪ್ರಕಟಿಸಿದ್ದಾರಾದರೂ ಅದು ಲೂಯಿರೈಸ್ ಕೈಬರಹಕ್ಕಿಂತ ಅವರ ತಮ್ಮ ಇ.ಪಿ. ರೈಸರ ಕೈಬರಹದಂತೆ ತೋರುತ್ತದೆ.

4. ಇಷ್ಟೆಲ್ಲಾ ಕೃತಿಗಳನ್ನು ಯಾವಾಗ ಓದಿಕೊಂಡರು? ಹೇಗೆ ಟಿಪ್ಪಣಿಗಳನ್ನು ಮಾಡಿಕೊಂಡರು? ಆ ಟಿಪ್ಪಣಿಗಳೆಲ್ಲಾ ಏನಾದವು? ಅವರ ಮಾಹಿತಿ ಸಂಗ್ರಹಣೆಯ ಮತ್ತು ಅದರ ಬಳಕೆಯ ವಿಧಾನ ಹೇಗಿತ್ತು? ಎಂಬುದರ ಬಗ್ಗೆ ಇಂದು ಯಾವ ಮಾಹಿತಿಯೂ ಉಳಿದಿಲ್ಲ.

5. ಸುಮಾರು 60 ವರ್ಷಗಳಿಗೂ ಹೆಚ್ಚುಕಾಲ ಸಂಶೋಧನೆ, ಕೃತಿ ರಚನೆ ಮತ್ತು ಗ್ರಂಥ ಪ್ರಕಟಣೆಗಳ ಕಾರ್ಯದಲ್ಲಿ ತೊಡಗಿದ್ದ ರೈಸರ ಬಳಿ ಚಿಕ್ಕದಾದರೂ ಸುಸಜ್ಜಿತ ವಾದ ಒಂದು ಗ್ರಂಥಭಂಡಾರವಿದ್ದಿರಲೇಬೇಕು. ಅವರ ನಿಧನಾನಂತರ ಅದರ ಸ್ಥಿತಿ ಏನಾಯಿತು? ಆ ಭಂಡಾರದಲ್ಲಿದ್ದ ಕೃತಿಗಳೆಲ್ಲವೂ ಈಗ ಎಲ್ಲಿವೆ? ಎಂಬ ಪ್ರಶ್ನೆಗೆ ಸದ್ಯ ಜೀವಂತವಿರುವ ಅವರ ಕುಟುಂಬ ವರ್ಗದವರಾರೂ ಉತ್ತರಿಸುವ ಸ್ಥಿತಿಯಲ್ಲಿಲ್ಲ. ಹಾಗಾಗಿ ಈ ಬಗೆಗಿನ ಮಾಹಿತಿಯೂ ಅಲಭ್ಯವೇ ಆಗಿದೆ.

ಬಹುಶಃ ಇಂತಹ ಅನೇಕ ಪ್ರಶ್ನೆಗಳ ಉತ್ತರಗಳು ಕಾಲಗರ್ಭದಲ್ಲಿ ಅಡಗಿ ಹೋಗಿರುವುದರಿಂದ ದೊರೆತಷ್ಟು ಮಾಹಿತಿಗೇ ನಾವು ತೃಪ್ತಿಪಟ್ಟುಕೊಳ್ಳಬೇಕಿದೆ.

ಇವುಗಳೆಲ್ಲವನ್ನೂ ಬಿಟ್ಟರೂ ಸಂಶೋಧನೆಯ ಕ್ಷೇತ್ರದಲ್ಲಿ ರೈಸರ ಸಾಧನೆಗಳನ್ನು ಇನ್ನಷ್ಟು ಸ್ಪಷ್ಟವಾಗಿ ಗುರುತಿಸುವ ನಿಟ್ಟಿನಿಂದ ಅವರು ಸಂಪಾದಿಸಿದ ಎಪಿಗ್ರಾಫಿಯ ಕರ್ನಾಟಕ ದಲ್ಲಿನ ಶಾಸನಗಳ ನಾಣ್ಯತೆ, ಪಾಠಶುದ್ಧಿ, ಅನುವಾದ ಮತ್ತು ಲಿಪ್ಯಂತರಗಳ ಪ್ರಾಮಾಣಿಕತೆ ಮುಂತಾದವುಗಳನ್ನು ಕುರಿತೇ ಅಧ್ಯಯನವನ್ನು ನಡೆಸಬಹುದಾದ ಮಾರ್ಗವನ್ನೂ ಮುಂದಿನ ಸಂಶೋಧಕರಿಗೆ ತೆರೆದೇ ಇದೆ. ಅಂತಹುದೊಂದು ಯೋಗ ರೈಸರ ಸಂಪುಟಗಳಿಗೆ ಒದಗಲಿ ಎಂಬ ಸದಾಶಯದೊಂದಿಗೆ ಪ್ರಸ್ತುತ ಅಧ್ಯಯನವನ್ನು ಸಮಾಪ್ತಿಗೊಳಿಸಬಹುದು.

★ ★ ★ ★ ★

ಅನಿರ್ವೇದಮಸಿದ್ಧೇಷು
ಸಾಧಿತೇಷ್ವನಂ ಕೃತಿಮ್।
ಅನಾಲಸ್ಯಂ ಚ ಸಾಧ್ಯೇಷು
ಕೃತ್ಯೇಷ್ವನುಗೃಹಾಣ ನಃ॥

- *ರಾಳ್ಳಪಲ್ಲಿ ಅನಂತಶರ್ಮಾ*
('ನ್ಯಾಸ ಕಲಾನಿಧಿಸ್ತವಃ' ದಲ್ಲಿ)


(ನನ್ನಿಂದ ಸಾಧಿಸಲಾಗದುದರ ಬಗ್ಗೆ ಬೇಸರ ಇರದಂತೆಯೂ ಸಾಧಿಸಿದ್ದುದರ ಬಗ್ಗೆ ಅಹಂಕಾರವಿರ ದಂತೆಯೂ, ಯಾವುದನ್ನು ಸಾಧಿಸಬಲ್ಲೆನೋ ಅದರ ಬಗ್ಗೆ ಆಲಸ್ಯವಿರದಂತೆಯೂ ಅನುಗ್ರಹಿಸು.)

★ ★ ★



ಯುವ ಸಂಶೋಧಕ ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ಅವರ ಮಹಾಪ್ರಬಂಧ 'ಪುರಾತತ್ವ ಪಿತಾಮಹ' ಬಿ.ಎಲ್.ರೈಸ್. ಜೀವನ-ಸಾಧನೆ' ಒಂದು ಅಪೂರ್ವ ಕೃತಿಯಾಗಿದೆ. ಕನ್ನಡ ನಾಡಿನ ಶಾಸನ ಕ್ಷೇತ್ರದ ಪಿತಾಮಹರೆಂದೇ ಪ್ರಸಿದ್ಧರಾದ ಬಿ.ಎಲ್.ರೈಸ್‌ರವರು ಕನ್ನಡಿಗರಿಗೆ ಪ್ರಾತಃಸ್ಮರಣೀಯರಾಗಿದ್ದಾರೆ. ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಬಿ.ಎಲ್.ರೈಸ್‌ರವರು ನೀಡಿರುವ ಕೊಡುಗೆಯನ್ನು ಲೇಖಕರು ಬಹಳ ಗಂಭೀರವಾಗಿ ಚರ್ಚಿಸಿದ್ದಾರೆ. ಅವರ ಜೀವನದ ಮೇಲ್ಪದರಗಳನ್ನಷ್ಟೇ ಚಿತ್ರಿಸದೆ, ಪ್ರಕಟಿತ ಅಪ್ರಕಟಿತ ದಾಖಲೆಗಳನ್ನು ಸಂಗ್ರಹಿಸಿ ತಮ್ಮ ಕೃತಿಯಲ್ಲಿ ಸಮರ್ಥವಾಗಿ ಬಳಸಿಕೊಂಡಿರುವುದು ಅಭಿನಂದನಾರ್ಹ. ಈ ಕೃತಿಯನ್ನು ರಚಿಸುವ ಸಂದರ್ಭದಲ್ಲಿ ಬಹಳ ಕಷ್ಟಪಟ್ಟು ಅಪ್ರಕಟಿತ ಮೂಲ ಆಕರಗಳನ್ನು ಪರಿಶೀಲಿಸಿದ್ದಾರೆ. ಇಂಗ್ಲೆಂಡ್‌ಗೆ ಹೋಗಿ ರೈಸ್‌ರವರ ವಂಶಜರನ್ನು ಭೇಟಿಯಾಗಿ ಅವರಿಂದ ಅನೇಕ ಮಾಹಿತಿ, ಫೋಟೋಗಳನ್ನು ಪಡೆದುಕೊಂಡು ಸಮರ್ಥವಾಗಿ ಬಳಸಿರುವುದು ಕೃತಿಯ ಅಧಿಕೃತತೆಯನ್ನು ಹೆಚ್ಚು ಮಾಡಿದೆ.

ಡಾ.ಸಿದ್ಧಲಿಂಗಯ್ಯ
ಅಧ್ಯಕ್ಷರು



ಕನ್ನಡ ಪುಸ್ತಕ ಪ್ರಾಧಿಕಾರ

₹.೧೫೦/-